ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ-೩

ಮೂರನೆಯ ಅಧ್ಯಾಯ
ಸಾಧನಾಧ್ಯಾಯ

ಪ್ರೊ|| ಎಸ್. ವೆಂಕಟೇಶಮೂರ್ತಿ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಸಂಪುಟ - 3

ಮೂರನೆಯ ಅಧ್ಯಾಯ (ಸಾಧನಾಧ್ಯಾಯ)

ಶ್ರೀಮಜ್ಜಯತೀರ್ಥರ ಶ್ರೀಮನ್ನ್ಯಾಯಸುಧಾನುಸಾರಿ

ಕನ್ನಡದಲ್ಲಿ ಅರ್ಥ ಮತ್ತು ವಿವರಣೆ ಸಹಿತ

ರಾಯದುರ್ಗದ ಮಠದ ಕೃಷ್ಣಾಚಾರ್
ಬಳ್ಳಾರಿ

ಲೇಖಕರು

ಪ್ರೊ|| ಎಸ್. ವೆಂಕಟೇಶ ಮೂರ್ತಿ, ಎಂ. ಎಸ್ಸಿ

ಪ್ರಕಾಶಕರು

ಪವನಜ ಪ್ರಕಾಶನ

ನಂ. 1625, 5 ನೇ 'ಬ' ಕ್ರಾಸ್, 17 ನೇ ಮುಖ್ಯ ರಸ್ತೆ,

ಎರಡನೆಯ ಬ್ಲಾಕ್,ಬನಶಂಕರಿ ಮೊದಲನೆಯ ಸ್ಟೇಜ್, ಬೆಂಗಳೂರು 560050

Sri Madhvacharya's
Śrīmadanuvyākhyānam
Part - 3

Rendered in Kannada by:
Prof. S. Venkatesha Murthy, M. Sc.
Published by:
Pavanaja Prakashana,
#1625, 5th 'B' Cross,17th Main, Second Block,
Banashankari First Stage, Bangalore 560050
Phone: 6600932

First Edition: 2003
Pages:14 + 266

Price : Rs. 90/-

ಶ್ರೀಮನ್ಮಧ್ವಾಚಾರ್ಯ ವಿರಚಿತ

ಶ್ರೀಮದನುವ್ಯಾಖ್ಯಾನಮ್: ಸಂಪುಟ - 3

ಮೊದಲನೆಯ ಮುದ್ರಣ : 2003

ಪುಟಗಳು : 14 + 266

ಬೆಲೆ : ರೂ. 90/–

ಮುದ್ರಕರು :
ಪರಿಮಳ ಮುದ್ರಣಾಲಯ,
ಹನುಮಂತನಗರ, ಬೆಂಗಳೂರು 560019

ಉಪೋದ್ಘಾತ

ಶ್ರೀಮದಾಚಾರ್ಯರು, ಟೀಕಾಚಾರ್ಯರು ಹಾಗೂ ಪರಿಮಳಾಚಾರ್ಯರ ಅನಗ್ರಹದಿಂದ ಶ್ರೀಮದನುವ್ಯಾಖ್ಯಾನದ ಮೂರನೆಯ ಸಾಧನಾಧ್ಯಾಯದ ಅರ್ಥ ಹಾಗೂ ವಿವರಣೆಗಳಿಂದ ಕೂಡಿದ ಮೂರನೆಯ ಸಂಪುಟವು ಈಗ ಜಿಜ್ಞಾಸುಗಳ ಮುಂದಿದೆ. ಮೊದಲೆರಡು ಅಧ್ಯಾಯಗಳಿಗೆ ಸಹೃದಯ ಜಿಜ್ಞಾಸುಗಳಿಂದ ಹಾಗೂ ಪಂಡಿತರಿಂದ ಉತ್ತಮ ಅಭಿಪ್ರಾಯ ವ್ಯಕ್ತವಾಗಿರುವುದಲ್ಲದೆ ಒಳ್ಳೆಯ ಪ್ರೋತ್ಸಾಹ ಲಭಿಸಿದೆ. ಇದು ನನಗೆ ಹೆಚ್ಚಿನ ಉತ್ಸಾಹ ನೀಡಿದೆ. ಪ್ರಸ್ತುತ ಮೂರನೆಯ ಸಂಪುಟವನ್ನೂ ಸಹೃದಯರು ವಿಶ್ವಾಸದಿಂದ ಸ್ವೀಕರಿಸಿ ಪ್ರೋತ್ಸಾಹಿಸುವರೆಂದು ನಂಬಿದ್ದೇನೆ. ಶ್ರೀಮದನುವ್ಯಾಖ್ಯಾನದ ಮೂರನೇ ಅಧ್ಯಾಯದಲ್ಲಿ ಪ್ರಸ್ತಾಪಿತವಾದ ವಿಷಯಗಳ ಒಂದು ಸ್ಥೂಲ ಪರಿಚಯವನ್ನು ಈ ಉಪೋದ್ಘಾತದಲ್ಲಿ ಮಾಡಿಕೊಡಲಾಗಿದೆ. ಸಾಧನಾಧ್ಯಾಯದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಮುಂದಿನ ಪುಟಗಳಲ್ಲಿ ಪ್ರಸ್ತಾಪಿತವಾಗಿರುವ ಕನ್ನಡಾನುವಾದಸಹಿತ ಮೂಲ ಗ್ರಂಥದ ಅವಲೋಕನದಿಂದ ಪಡೆದುಕೊಳ್ಳಬಹುದು.

ಪರಬ್ರಹ್ಮನ ಗುಣಪೂರ್ಣತ್ವವನ್ನು ನಿರ್ಣಯಿಸುವುದಕ್ಕಾಗಿ ಸಕಲ ಶಬ್ದಗಳ ಸಮನ್ವಯವನ್ನು ಸಾಧಿಸಿ, ಶ್ರುತಿ ಸ್ಮೃತಿ ಯುಕ್ತ್ಯಾದಿಗಳಿಂದ ಅದಕ್ಕೆ ಬರಬಹುದಾದ ಎಲ್ಲ ವಿರೋಧಗಳನ್ನು ಪರಿಹರಿಸಿ, ಅವನಲ್ಲಿ ಯಾವ ದೋಷಗಳೂ ಇಲ್ಲವೆಂದು ದೃಢಪಡಿಸಿ, ಗುಣಪೂರ್ಣನೂ ನಿರ್ದೋಷನೂ ಆದ ಭಗವಂತನ ಸ್ವರೂಪವನ್ನು ಮೊದಲ ಎರಡು ಅಧ್ಯಾಯಗಳಿಂದ ನಿರ್ಣಯಿಸಿದರು. ಇಂಥಹ ಪರಬ್ರಹ್ಮನ ಅನುಗ್ರಹದಿಂದ ನಮ್ಮ ಎಲ್ಲ ದೋಷಗಳನ್ನೂ ಕಳೆದುಕೊಂಡು ಕೊನೆಯಲ್ಲಿ ಅವನನ್ನೇ ಹೊಂದಿ ಚಿದಾನಂದಸ್ವರೂಪವನ್ನು ಗಳಿಸಿ ಸ್ವರೂಪಾನಂದವನ್ನು ಅವರವರ ಯೋಗ್ಯತೆಗೆ ಅನುಗುಣವಾಗಿ ಸಂಪೂರ್ಣವಾಗಿ ಅನುಭವಿಸುವಂಥ ಮೋಕ್ಷದ ಗಳಿಕೆಯೇ ಎಲ್ಲ ಜಿಜ್ಞಾಸು ಸಾಧಕರ ಪರಮ ಗುರಿ. ಈ ಗುರಿಯನ್ನು ಮುಟ್ಟಲು ಮಾಡಬೇಕಾದ ಸಾಧನೆಯ ಸ್ವರೂಪವೇನು ಎಂದು ತಿಳಿಸುವುದೇ ಸಾಧನಾಧ್ಯಾಯದ ಉದ್ದೇಶ. ಈ ಸಾಧನೆಯಲ್ಲಿ ನಾಲ್ಕು ಹಂತಗಳಿವೆ. ವೈರಾಗ್ಯ, ಭಕ್ತಿ, ಉಪಾಸನೆ ಮತ್ತು ಸಾಕ್ಷಾತ್ಕಾರವೇ ಈ ನಾಲ್ಕು ಹಂತಗಳು. ಬ್ರಹ್ಮಸೂತ್ರದ ಮೂರನೆಯ ಅಧ್ಯಾಯದಲ್ಲಿ ಸಾಧನೆಯ ಈ ನಾಲ್ಕು ಹಂತಗಳ ನಿರೂಪಣೆ ಮಾಡಲಾಗಿದೆ. ಇವುಗಳನ್ನು ಕ್ರಮವಾಗಿ ನಾಲ್ಕು ಪಾದಗಳಲ್ಲಿ ಪರಿಚಯ ಮಾಡಿಕೊಡಲಾಗಿದೆ.

ಮೊದಲನೆಯ ಪಾದದಲ್ಲಿ ವೈರಾಗ್ಯವು ಹುಟ್ಟಲು ಅನುಕೂಲವಾಗುವಂತೆ ಮರಣಾನಂತರ ಜೀವನ ಗತಿಯ ನಿರೂಪಣೆಯಿದೆ. ಮರಣವೇ ಮೋಕ್ಷವಲ್ಲ.

ಭೂತಸಂಬಂಧ ಕಡಿದುಕೊಳ್ಳುವುದು ಮೋಕ್ಷ. ಮರಣದ ನಂತರ ಜೀವರುಗಳ ಪರ ಲೋಕ ಗಮನ, ಮತ್ತೆ ಅಲ್ಲಿಂದ ತಿರುಗಿ ಭೂಲೋಕಕ್ಕೆ ಆಗಮನವಾಗುವ ಕಾಲದಲ್ಲಿ ಅನುಭವಿಸುವ ಸಂಕಟ, ನರಕವಾಸ ಮುಂತಾದುವನ್ನು ಚಿತ್ರಿಸಿ, ಮರಳಿ ಸಂಸಾರಕ್ಕೆ ಬರುವುದು ಬೇಡ ಎಂದು ಅವರಲ್ಲಿ ಸಂಸಾರದ ಬಗ್ಗೆ ವೈರಾಗ್ಯ ಹುಟ್ಟಿಸುವುದಕ್ಕಾಗಿ ಮೊದಲನೆಯ ವೈರಾಗ್ಯ ಪಾದವು ಹೊರಟಿದೆ. ಶ್ರೀಮದಾಚಾರ್ಯರು ಸೂತ್ರಬಾಷ್ಯ ದಲ್ಲಿ ಇದರ ನಿರೂಪಣೆಯನ್ನು ಸ್ಪಷ್ಟವಾಗಿಯೇ ನೀಡಿರುವುದರಿಂದ, ಇಲ್ಲಿ ಅನು ವ್ಯಾಖ್ಯಾನದಲ್ಲಿ ಅದನ್ನು ಮತ್ತೆ ವಿವರಿಸುವುದಕ್ಕೆ ಹೊರಟಿಲ್ಲ. ಈ ಪಾದದ ಎಲ್ಲ ಅಧಿಕರಣಗಳ ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳನ್ನು ಮಾತ್ರ ಸಂಗ್ರಹವಾಗಿ ತಿಳಿಸುತ್ತಾರೆ. ಕೊನೆಯದಾದ ಯೋನ್ಯಧಿಕರಣಕ್ಕೆ ಮಾತ್ರ ಸ್ವಲ್ಪ ವಿವರಣೆಯ ಅಗತ್ಯವಿದ್ದುದರಿಂದ ಅದನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

ಎರಡನೆಯ ಪಾದದಲ್ಲಿ ಸಾಧನೆಯ ಎರಡನೆಯ ಹಂತವೆನಿಸಿದ ಭಕ್ತಿಯ ಪ್ರಾಪ್ತಿಗಾಗಿ ಭಗವನ್ಮಹಿಮೆಯನ್ನು ನಿರೂಪಿಸಿದ್ದಾರೆ. ಮಹಿಮೆಯ ಜ್ಞಾನದಿಂದ ಭಗವಂತನಲ್ಲಿ ಮೂಡುವ ಪ್ರೇಮಾತಿಶಯವೇ ಭಕ್ತಿಯೆನಿಸುತ್ತದೆ. ಮಹಿಮೆಯ ಬಗ್ಗೆ ಹೆಚ್ಚುಹೆಚ್ಚು ತಿಳಿದಂತೆ ಭಕ್ತಿಯೂ ಹೆಚ್ಚುತ್ತ ಹೋಗುತ್ತದೆ. ನಿಖಿಲ ಜೀವರುಗಳ ಎಲ್ಲ ಕಾಲದಲ್ಲಿಯ ಸ್ವಪ್ನಾದಿ ಎಲ್ಲ ಅವಸ್ಥೆಗಳೂ ಪರಮಾತ್ಮನ ಅಧೀನವಾಗಿದೆ. ಜೀವರ ವಾಸನೆಗಳನ್ನು ಉಪಾದಾನ ಮಾಡಿಕೊಂಡು ಸ್ವಪ್ನವನ್ನು ಸೃಷ್ಟಿಸುವುದು ಪರಮಾತ್ಮನೇ. ಆದುದರಿಂದ ಸ್ವಪ್ನವು ಸತ್ಯ. ಸ್ವಪ್ನ ತಿರೋಧಾನವೂ ಪರಮಾತ್ಮನ ಅಧೀನ. ಜಾಗ್ರತನಾದವನು ಸುಪ್ತನಾಗುವುದೂ, ಮತ್ತೆ ಸುಪ್ತಾವಸ್ಥೆಯಿಂದ ಎಚ್ಚರ ಗೊಳ್ಳುವುದೂ ಪರಮಾತ್ಮನಿಂದಲೇ. ಪರಮಾತ್ಮನು ಜೀವರ ಕಣ್ಣು, ಕಂಠ ಮುಂತಾದ ವಿಭಿನ್ನಸ್ಥಾನಗಳಲ್ಲಿದ್ದರೂ ಅವನ ರೂಪರೂಪಗಳಿಗೆ ಭೇದವಿಲ್ಲ. ಎಲ್ಲವೂ ನಿರ್ದೋಷ ಹಾಗೂ ಗುಣಪೂರ್ಣವಾದವುಗಳೇ. ಅವನ ರೂಪಗಳು ಅಪ್ರಾಕೃತವೂ ಜ್ಞಾನಾನಂದಾತ್ಮಕವೂ ಆಗಿವೆ. ಜೀವನಿಗೂ ಪರಮಾತ್ಮನಿಗೂ ಅಭೇದವಾಗಲೀ ಭೇದಾಭೇದವಾಗಲೀ ಎಂದಿಗೂ ಇಲ್ಲ. ಜೀವರುಗಳು ಪರಮಾತ್ಮನಿಂದ ಸದಾ ಭಿನ್ನರೇ ಆಗಿರುವರು. ಜೀವರು ಪರಮಾತ್ಮನ ಪ್ರತಿಬಿಂಬ ಸ್ವರೂಪರು. ಜೀವರು ಚೇತನತ್ವ ಆನಂದಾದಿಗಳಿಂದ ಪರಮಾತ್ಮನಿಗೆ ಕಿಂಚಿತ್ ಸದೃಶರು ಹಾಗೂ ಸದಾ ಅವನ ಅಧೀನರು. ಬಿಂಬನಾದ ಪರಮಾತ್ಮನಿಗೂ ಪ್ರತಿಬಿಂಬರಾದ ಜೀವರಿಗೂ ಅಭೇದವು ಯಾವರೀತಿಯಿಂದಲೂ ಕೂಡುವುದಿಲ್ಲ. ಪ್ರಾಕೃತ ರೂಪರಹಿತನಾದ ಪರಮಾತ್ಮನು ಅವ್ಯಕ್ತನಾಗಿದ್ದರೂ ಭಕ್ತಿಯಿಂದ ಅಭಿವ್ಯಕ್ತನಾಗುವನು. ಎಲ್ಲರ ಭಕ್ತಿಯೂ ಏಕಪ್ರಕಾರವಿರುವುದಿಲ್ಲ. ಭಕ್ತಿಯ ತಾರತಮ್ಯದಿಂದ ಆನಂದಾದಿ ಫಲ ದಲ್ಲಿಯೂ ತಾರತಮ್ಯವಿರುವುದು. ಭಗವಂತನ ಎಲ್ಲ ಗುಣಗಳೂ ಅವನಿಂದ ಬೇರೆಯಲ್ಲ. ಆದರೂ ವಿಶೇಷದಿಂದ ಭಗವಂತನಲ್ಲಿ ಗುಣಗಳು ಇವೆಯೆಂಬುದಾಗಿ ಭೇದವತ್ ವ್ಯವಹಾರವು. ಹೀಗೆ ಭಗವಂತನ ಮಹಾಮಹಿಮೆಯನ್ನು ಅರಿತರೆ ಅವನಲ್ಲಿ ಭಕ್ತಿಯು ಉದಯಿಸುವುದು ಮತ್ತು ದೃಢವಾಗುವುದು. ಈ ಪ್ರಕಾರವಾಗಿ

ಎರಡನೆಯ ಪಾದವು ಸಾಧಕನಲ್ಲಿ ಭಕ್ತಿಯ ಜಾಗೃತಿಯನ್ನು ಉಂಟುಮಾಡುವುದು.

ಮೊದಲ ಎರಡು ಪಾದಗಳ ಮನನದಿಂದ ಸಂಸಾರದ ಬಗ್ಗೆ ವೈರಾಗ್ಯ ಮೂಡಿ, ಭಗವಂತನಲ್ಲಿ ಭಕ್ತಿಯು ಉದಯಿಸಿತು. ಮುಂದೇನು ಎಂದರೆ ಅದಕ್ಕೆ ಮೂರನೆಯ ಪಾದವು ಹೊರಟಿದೆ. ಭಕ್ತಿಯ ಮುಂದಿನ ಹಂತವೇ ಭಗವದುಪಾಸನೆ. ಮೂರನೆಯ ಪಾದವು ಉಪಾಸನಾ ಕ್ರಮವನ್ನು ನಿರೂಪಿಸುತ್ತದೆ. ಭಕ್ತಿವೈರಾಗ್ಯ ಸಂಪನ್ನನೇ ಉಪಾಸನೆಗೆ ಅರ್ಹತೆ ಗಳಿಸುವನು. ಶಾಸ್ತ್ರವಿಮರ್ಶೆ ಮತ್ತು ಧ್ಯಾನ ಇವು ಉಪಾಸನೆಯ ಎರಡು ಪ್ರಕಾರಗಳು. ಸಕಲ ವೇದಗಳೂ ಪರಮಾತ್ಮನ ಮಹಿಮೆಗಳನ್ನು ಪ್ರತಿಪಾದಿಸುತ್ತವೆ ಎಂದು ಅರಿಯಬೇಕು. ವೇದಕ್ಕೆ ವಿರೋಧವಾದ ಯುಕ್ತಿ ಮತ್ತು ದರ್ಶನಗಳನ್ನು ವಿಮರ್ಶಿಸಿ, ಅವುಗಳ ದೋಷಗಳನ್ನು ಗುರುತಿಸಿ ವೇದಪ್ರತಿಪಾದ್ಯತ್ವವನ್ನು ತಿಳಿದುಕೊಳ್ಳಬೇಕು. ವೇದವಾಕ್ಯಗಳಲ್ಲಿ ಪರಸ್ಪರ ವಿರೋಧ ಕಂಡುಬಂದರೆ ಅದನ್ನು ಪರಿಹರಿಸಿಕೊಳ್ಳಬೇಕು. ಸಾಧಕರು ಅವರವರ ಯೋಗ್ಯತಾನುಸಾರ ಎಲ್ಲ ಗುಣಗಳನ್ನು ಉಪಸಂಹಾರಮಾಡಿಕೊಂಡು ಉಪಾಸನೆ ಮಾಡಬೇಕು. ಸರ್ವಗುಣೋಪಸಂಹಾರವು ಎಲ್ಲರಿಗೂ ಇಲ್ಲ. ಎಲ್ಲ ಮುಮುಕ್ಷುಗಳೂ ಆನಂದ, ಜ್ಞಾನ, ನಿರ್ದೋಷತ್ವ ಮತ್ತು ಸ್ವಾಮಿತ್ವ ಎಂಬ ನಾಲ್ಕು ಗುಣಗಳನ್ನು ಉಪಸಂಹಾರ ಮಾಡಬೇಕು. ದೇವತೆಗಳು ಇನ್ನೂ ಹೆಚ್ಚಿನ ಗುಣಗಳನ್ನು ಅವರವರ ಯೋಗ್ಯತಾನುಸಾರವಾಗಿ ಉಪಸಂಹಾರ ಮಾಡಬೇಕು. ಅಧಿಕಾರಿಗಳ ಯೋಗ್ಯತಾನುಸಾರ ಗುಣೋಪಸಂಹಾರದಲ್ಲಿ ತಾರತಮ್ಯವಿರುವುದು. ಉಪಾಸನೆಗೆ ತಕ್ಕಂತೆ ಫಲದಲ್ಲಿಯೂ ತಾರತಮ್ಯವುಂಟು. ಮುಖ್ಯಪ್ರಾಣನೇ ಅಧಿಕಾರಿಗಳಿಗೆ ಅವಧಿ. ಲಕ್ಷ್ಮೀ ದೇವಿಯು ನಿತ್ಯಮುಕ್ತಳಾದ್ದರಿಂದ ಅಧಿಕಾರಿ ವರ್ಗದಲ್ಲಿ ಸೇರುವುದಿಲ್ಲ. ತಾರತಮ್ಯ ಜ್ಞಾನದ ಮಹತ್ವವನ್ನು ಸಾಧಕನಿಗೆ ಮನದಟ್ಟು ಮಾಡಲು ಶ್ರೀಮದಾಚಾರ್ಯರು ಇಲ್ಲಿ ಅಧಿಕಾರಿಗಳ ತಾರತಮ್ಯದ ಬಗ್ಗೆ ಶ್ರುತಿ ಸ್ಮೃತಿಗಳ ಆಧಾರದಿಂದ ಬಹಳ ವಿವರವಾಗಿ ತಿಳಿಸುತ್ತಾರೆ. ಸಮ್ಯಕ್ ಗುರುಪ್ರಸಾದವಿಲ್ಲದೆ ಮೋಕ್ಷಸಾಧಕ ಜ್ಞಾನದ ಪ್ರಾಪ್ತಿಯಿಲ್ಲ. ಇದನ್ನು ತಿಳಿಸುವುದಕ್ಕಾಗಿ ಗುರು ಸ್ವೀಕಾರ ಕ್ರಮ ಹಾಗೂ ಗುರು ಸ್ವರೂಪಾದಿಗಳ ನಿರೂಪಣೆ ಮಾಡಲಾಗಿದೆ. ಸ್ವೋತ್ತಮರೆಲ್ಲರೂ ಗುರುಗಳೇ ಎಂದು ತಿಳಿದು ಅವರಲ್ಲಿ ತಾರತಮ್ಯಾನುಸಾರ ಭಕ್ತಿಯನ್ನು ಮಾಡಬೇಕು. ಭಗವಂತನ ದ್ವೇಷಿಗಳಿಗೆ ಎಂದಿಗೂ ಮುಕ್ತಿಯಿಲ್ಲ. ಮೋಕ್ಷಸಾಧನವಾದ ಜ್ಞಾನಾದಿಗಳಲ್ಲಿ ಭಕ್ತಿಗೇ ಪ್ರಾಧಾನ್ಯವೆಂಬುದನ್ನು ಮೂರನೆಯ ಪಾದದಲ್ಲಿ ಬಹಳ ಚೆನ್ನಾಗಿ ನಿರೂಪಿಸಲಾಗಿದೆ.

ನಾಲ್ಕನೆಯ ಪಾದದಲ್ಲಿ ಜ್ಞಾನದ ಮಹಿಮೆಯನ್ನು ವರ್ಣಿಸಲಾಗಿದೆ. ಜ್ಞಾನವು ಎಲ್ಲ ಪುರುಷಾರ್ಥಗಳಿಗೂ ಸಾಧನವು. ಕರ್ಮದಿಂದ ಫಲದಲ್ಲಿ ಅತಿಶಯವು. ಜ್ಞಾನಾಧಿಕಾರದಲ್ಲಿಯೂ ತಾರತಮ್ಯವಿದೆ. ಎಲ್ಲರಿಗೂ ಏಕಪ್ರಕಾರದ ಅಧಿಕಾರವಿಲ್ಲ. ಅಪರೋಕ್ಷಜ್ಞಾನಿಗಳಿಗೆ ದೋಷಗಳ ಲೇಪವಿಲ್ಲ. ದೇವತಾ ಪದಗಳ ಪ್ರಾಪ್ತಿಯು ಆಯಾ ಪದಗಳಿಗೆ ಯೋಗ್ಯರಾದವರಿಗೆ ಮಾತ್ರ. ವಿದ್ಯೋಪದೇಶವು ಅಯೋಗ್ಯರಿಗೆ

ದೊರೆಯದಂತೆ ಅನಾವಿಷ್ಕೃತವಾಗಿ ಮಾಡಬೇಕು. ಪ್ರಾರಬ್ಧದ ಪ್ರತಿಬಂಧವಿಲ್ಲದಿದ್ದರೆ ಜ್ಞಾನ ಬಂದ ಜನ್ಮದಲ್ಲೇ ಮುಕ್ತಿ. ಮುಕ್ತರಲ್ಲಿ ದೋಷವಿಲ್ಲದ ಕಾರಣ ತಾರತಮ್ಯ ವಿದ್ದರೂ ಮುಕ್ತಿಯಲ್ಲಿ ದ್ವೇಷಾಸೂಯಾದಿಗಳಿಲ್ಲ. ಹೀಗೆ ವೈರಾಗ್ಯ ಭಕ್ತಿ ಉಪಾಸನೆ ಜ್ಞಾನಗಳ ವಿಷಯವಾಗಿ ವಿಶೇಷವಾಗಿ ತಿಳಿವಳಿಕೆ ನೀಡುವ ನಾಲ್ಕನೇ ಅಧ್ಯಾಯವು ಸಾಧಕನನ್ನು ಮುಕ್ತಿಮಾರ್ಗದಲ್ಲಿ ಪ್ರಚೋದಿಸುತ್ತದೆ.

ಶ್ರೀಹರಿವಾಯುಗುರುಗಳು ನನ್ನ ಮೇಲೆ ಪರಮಾನುಗ್ರಹ ಮಾಡಿ ನನ್ನನ್ನು ಉಪಕರಣ ಮಾಡಿಕೊಂಡು ಪ್ರಕಾಶಿಸಿದ ಮಹದ್ಗ್ರಂಥವಾದ ಶ್ರೀಮದನು ವ್ಯಾಖ್ಯಾನದ ಮೂರನೆಯ ಅಧ್ಯಾಯದ ಅರ್ಥ ವಿವರಣೆಗಳನ್ನೊಳಗೊಂಡ ಈ ಸಂಪುಟವು ಜಿಜ್ಞಾಸುಗಳಿಗೆ ಸಾಧನೆಯ ಬಗ್ಗೆ ಯಥಾರ್ಥವಾದ ಅರಿವನ್ನು ಮೂಡಿಸಿದಲ್ಲಿ ನನ್ನ ಈ ಪ್ರಯತ್ನ ಹರಿವಾಯುಗಳ ಪ್ರೀತಿಗೆ ಕಾರಣವಾಗುವುದೆಂದು ನಂಬುತ್ತೇನೆ. ಸಜ್ಜನರ ಯೋಗ್ಯವಾದ ಸಲಹೆಗಳಿಗೆ ಸದಾ ಸ್ವಾಗತ. ಈ ಗ್ರಂಥವನ್ನು ಬಹಳ ಮುತುವರ್ಜಿಯಿಂದ ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಪರಿಮಳ ಮುದ್ರಣಾಲಯದ ಶ್ರೀಯುತ ಪ್ರಭಾಕರ್ ಅವರಿಗೆ ಕೃತಜ್ಞತೆಗಳು. ಯಾವಾಗಲೂ ನಮ್ಮ ಪ್ರಕಾಶನ ಕಾರ್ಯದಲ್ಲಿ ಎಲ್ಲ ರೀತಿಯಿಂದಲೂ ಸಹಕರಿಸುತ್ತ ಬಂದಿರುವ ನಮ್ಮ ಕುಟುಂಬದವರಿಗೂ ಹಾಗೂ ನನ್ನ ಎಲ್ಲ ಹಿತೈಷಿಗಳಿಗೂ ಶ್ರೀಹರಿವಾಯು ಗಳು ಉತ್ತರೋತ್ತರ ಅಭಿವೃದ್ಧಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಈ ಪ್ರಕಟಣೆಯ ಸಮರ್ಪಣೆಯಿಂದ ಅಸ್ಮದ್ಗುರ್ವಂತರ್ಗತ ಶ್ರೀಭಾರತೀರಮಣಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀವೆಂಕಟೇಶನು ಪ್ರೀತನಾಗಲಿ.

ಇಂತಿ ಸಜ್ಜನವಿಧೇಯ

ಎಸ್. ವೆಂಕಟೇಶಮೂರ್ತಿ

॥ ಶ್ರೀಕೃಷ್ಣಾರ್ಪಣಮಸ್ತು ॥

ವಿಷಯಾನುಕ್ರಮಣಿಕೆ

ಮೊದಲನೆಯ ಪಾದ	**೧ – ೧೧**
ಪೂರ್ವಪಕ್ಷ ಮತ್ತು ಸಿದ್ಧಾಂತಯುಕ್ತಿಗಳ ಸಂಗ್ರಹ	೨
ಪೂರ್ವಪಕ್ಷ ಮತ್ತು ಸಿದ್ಧಾಂತಯುಕ್ತಿಗಳ ವಿವರಣೆ	೩
ಯೋನ್ಯಧಿಕರಣ	**೧೦**
ಎರಡನೆಯ ಪಾದ	**೧೨ – ೧೦೦**
ಪೂರ್ವಪಕ್ಷ ಮತ್ತು ಸಿದ್ಧಾಂತಯುಕ್ತಿಗಳ ಸಂಗ್ರಹ	೧೨
ಪೂರ್ವಪಕ್ಷ ಮತ್ತು ಸಿದ್ಧಾಂತಯುಕ್ತಿಗಳ ವಿವರಣೆ	೧೩
ಸಂಧ್ಯಾಧಿಕರಣ	**೨೦**
ಭಗವಂತನ ಸ್ವಪ್ನಾವಸ್ಥಾದಿ ಪ್ರೇರಕತ್ವ ಮಹಿಮೆ	೨೧
ಸ್ವಾಪ್ನ ಪದಾರ್ಥಗಳಿಗೆ ವಾಸನೋಪಾದಾನಕತ್ವ ಸಮರ್ಥನೆ	೨೩
ಸ್ವಪ್ನವು ಅನಿರ್ವಚನೀಯವಲ್ಲ	೨೪
ತತ್ವನಿರ್ಣಯಕ್ಕೆ ವಿರೋಧಿಯಾದ ಪ್ರಶ್ನದೋಷಗಳು	೨೪
ನೈಯಾಯಿಕ ಮತದಲ್ಲಿ ಆಶ್ರಯಾಸಿದ್ಧ್ಯಾದಿಗಳಿಗೆ ದೋಷತ್ವ	೨೫
ನ್ಯಾಯಗಳಿಗೆ ಪ್ರತ್ಯಕ್ಷಾಗಮ ಮೂಲಕತ್ವ	೨೬
ಸ್ವತಂತ್ರನ್ಯಾಯವು ನ್ಯಾಯಾಭಾಸವು	೨೭
ಪ್ರಮಾಣಬಾಧವಿದ್ದರೆ ಅದೃಷ್ಟವ್ಯಭಿಚಾರವು ಕೂಡುವುದಿಲ್ಲ	೨೭
ಎಲ್ಲ ಜ್ಞಾನಗಳಿಗೆ ಸಾಕ್ಷಿಯಿಂದಲೇ ಪ್ರಮಾಣತ್ವ	೨೭
ಸೋಪಾಧಿಕ ವ್ಯಭಿಚಾರಕ್ಕೆ ಪ್ರಾಮಾಣ್ಯ	೨೮
ವ್ಯಾಪ್ತಿಯಿದ್ದರೆ ವ್ಯಧಿಕರಣಾಸಿದ್ಧಿಯು ಹೇತು ದೂಷಣವಾಗದು	೨೯
ಅಪ್ರಸಿದ್ಧವಿಶೇಷಣತ್ವವೂ ದೂಷಣವಲ್ಲ	೨೯
ಅನುಮಾನದ ಪ್ರಾಮಾಣ್ಯಕ್ಕೆ ಪಂಚಾವಯವತ್ವ ನಿಯಮವಿಲ್ಲ	೩೧
ವಾದಕಥೆಯಲ್ಲಿ ಸಿದ್ಧಸಾಧನಕ್ಕೆ ನಿಗ್ರಹಸ್ಥಾನ	೩೨
ಅವ್ಯಾಪ್ತಿ ಮತ್ತು ಹೇತ್ವಸಿದ್ಧಿಗಳು ದೂಷಣವೇ ಆಗಿವೆ	೩೨
ದೃಷ್ಟಾಂತದೋಷಗಳಿಗೆ ಹೇತುದೋಷಗಳಲ್ಲಿಯೇ ಅಂತರ್ಭಾವ	೩೨
ಅರ್ಥಾಪತ್ತಿ ಉಪಮಾನಗಳು ಅನುಮಾನದಲ್ಲಿಯೇ ಅಂತರ್ಭಾವ	೩೩
ಉಪಕ್ರಮಾದಿಗಳು ಅನುಮಾನದ ಪ್ರಭೇದಗಳೇ ಆಗಿವೆ	೩೪

ತರ್ಕಕ್ಕೆ ದೂಷಣಾನುಮಾನದಲ್ಲಿ ಅಂತರ್ಭಾವ ೩೪

ಛಲ ಜಾತಿಗಳ ಲಕ್ಷಣ ೩೬

ಸ್ವಪ್ನವು ಅನಿರ್ವಾಚ್ಯವಲ್ಲ ೩೬

ಬ್ರಹ್ಮನು ನಿರ್ಧರ್ಮಕನಲ್ಲ ೩೭

ವಿಶ್ವಮಿಥ್ಯಾತ್ವ ಸಾಧಕಾನುಮಾನಕ್ಕೆ ಅಪ್ರಮಾಣ್ಯವು ೩೯

ಜಗತ್ಸತ್ಯತ್ವವು ಭ್ರಾಂತಿಮೂಲವಲ್ಲ ೪೦

ಎಲ್ಲ ಪ್ರಮಾಣಗಳ ಪ್ರಾಮಾಣ್ಯವು ಸಾಕ್ಷಿವೇದ್ಯವು ೪೨

ಸಾಕ್ಷಿಯು ಸ್ವಪ್ರಕಾಶವಾದ್ದರಿಂದ ಅನವಸ್ಥೆಯಿಲ್ಲ ೪೨

ಐಕ್ಯಾಗಮವು ಪ್ರತ್ಯಕ್ಷದಿಂದ ಬಾಧ್ಯವು ೪೨

ಪ್ರತ್ಯಕ್ಷಕ್ಕೆ ಪ್ರಾಮಾಣ್ಯವು ತಾತ್ಕಾಲಿಕವೆಂದರೆ ಸ್ವವ್ಯಾಹತಿ ೪೩

ಅದ್ವೈತ ಮೋಕ್ಷವೆಂಬುದು ಸರ್ವಥಾ ಕೂಡುವುದಿಲ್ಲ ೪೪

ಪ್ರತ್ಯಕ್ಷಸಿದ್ಧವಾದುದಕ್ಕೆ ಅನುಮಾನಾಗಮಗಳಿಂದ ಬಾಧವಿಲ್ಲ ೪೫

ಜೀವನಿಗೆ ದೇಹ ಆತ್ಮಗಳು ಭಿನ್ನವೆಂಬ ಪ್ರತೀತಿಯುಂಟು ೪೬

ದೇಹ ಆತ್ಮಗಳಿಗೆ ಭೇದವಿದ್ದರೂ ಅಭಿನ್ನದೃಶ್ಯೆ ವ್ಯವಹಾರ ೪೮

ಪ್ರತ್ಯಕ್ಷಸಿದ್ಧವಾದುದಕ್ಕೆ ಯಾವುದರಿಂದಲೂ ಬಾಧವಿಲ್ಲ ೪೮

ಸಾಕ್ಷಿಪ್ರತ್ಯಕ್ಷಕ್ಕೆ ಕಾಲತ್ರಯಗಳಲ್ಲಿ ಅಬಾಧ್ಯತ್ವವು ೪೯

ಮೀಮಾಂಸಕ ಮತ ನಿರಾಸೆ ೫೦

ಪದಾರ್ಥಗಳಲ್ಲಿ ಪರಸ್ಪರ ಏಕಧರ್ಮತ್ವವಿಲ್ಲ ೫೨

ಮಾನಸಪ್ರತ್ಯಕ್ಷಕ್ಕೆ ಅತೀತಾರ್ಥಗೋಚರತ್ವ ೫೩

ಸ್ಮೃತಿಪ್ರಾಮಾಣ್ಯಕ್ಕೆ ಬಾಧವಿಲ್ಲ ೫೩

ಪ್ರತ್ಯಭಿಜ್ಞೆಯೂ ಪ್ರಮಾಣ ೫೩

ಸ್ವಾಪ್ನಪದಾರ್ಥಕ್ಕೆ ಬಾಧವಿಲ್ಲ ೫೫

ಸ್ವಪ್ನವು ಮಿಥ್ಯೆಯಲ್ಲ, ಜಾಗ್ರತ್ತತ್ವ ಪ್ರತೀತಿಯೇ ಭ್ರಾಂತಿಯು ೫೫

ಮಾಯಿಗಳ ಮತವು ಅಶೇಷದೋಷದುಷ್ಟವಾದ್ದರಿಂದ ಹೇಯವು ೫೭

ಮಾಯಾಮಾತ್ರ ಶಬ್ದಾರ್ಥ ವಿವರಣೆ ೫೮

ಪರಾಭಿಧ್ಯಾನಾಧಿಕರಣ ೫೯

ತದಭಾವಾಧಿಕರಣ ೬೦

ಕರ್ಮಾನುಸ್ಮೃತ್ಯಧಿಕರಣ ೬೦
ನ ಸ್ಥಾನತೋಪ್ಯಧಿಕರಣ ೬೧
ಸ್ವಪ್ನಾದಿಗಳಿಗೆ ಈಶ್ವರನೇ ಕರ್ತನು, ಬೇರೊಬ್ಬನಿಲ್ಲ ೬೧
ಸ್ಥಾನಭೇದವಿದ್ದರೂ ಪರಮಾತ್ಮನ ರೂಪರೂಪಗಳಿಗೆ ಭೇದವಿಲ್ಲ ೬೧
ಶಾಸ್ತ್ರಗಳ ಮಹಾತಾತ್ಪರ್ಯಕ್ಕೆ ವಿರುದ್ಧವಾದುದು ಪ್ರಮಾಣವೇ ಅಲ್ಲ ೬೨
ಗುಣೋತ್ಕರ್ಷಜ್ಞಾನದಿಂದಲೇ ಭಗವತ್ಪ್ರಸಾದರೂಪವಾದ ಮೋಕ್ಷ ೬೨
ಭಗವತ್ಪ್ರಸಾದದಿಂದ ಮೋಕ್ಷ ಎಂಬುದಕ್ಕೆ ಆಗಮ ಪ್ರಮಾಣ ೬೩
ಉಕ್ತಾರ್ಥದಲ್ಲಿ ಅನುಮಾನದಿಂದ ಸಮರ್ಥನೆ ೬೩
ಗುಣೋತ್ಕರ್ಷವೇ ಸಕಲ ಶಾಸ್ತ್ರಗಳ ಮಹಾತಾತ್ಪರ್ಯ ೬೪
ಉಪಮಾಧಿಕರಣ ೬೪
ಭೇದಾಭೇದ ಮತ ನಿರಾಸೆ ೬೪
ಜೀವನಿಗೆ ಪರಮಾತ್ಮನ ಪ್ರತಿಬಿಂಬತ್ವ ಸಮರ್ಥನೆ ೬೫
ಪರಂಪರೆಯಿಂದ ಪ್ರತಿಬಿಂಬತ್ವವು, ಸಾಕ್ಷಾತ್ತಾಗಿ ಅಲ್ಲ ೬೬
ಸಮುದಾಯ ಐಕ್ಯ ಹೇಳುವ ಮತದ ನಿರಾಕರಣೆ ೬೭
ಶ್ರೀಹರಿಗೆ ಉಪಾಧಿನಿಮಿತ್ತಕ ದೋಷವಿಲ್ಲ ೭೧
ಪರಮಾತ್ಮನ ಸರ್ವಜ್ಞತ್ವಕ್ಕೆ ಹಾನಿಯಿಲ್ಲ ೭೩
ಪರಮಾತ್ಮನ ರೂಪರೂಪಗಳಿಗೆ ಭೇದವಿಲ್ಲ ೭೩
ಇಂದ್ರ ಅರ್ಜುನಾದಿ ಅಂಶಗಳಲ್ಲಿ ಅನುಸಂಧಾನ ಪ್ರಕಾರ ೭೪
ಪರಮಾತ್ಮನಿಗೆ ಅಘಟಿತಘಟನಾಶಕ್ತಿಯ ಸಮರ್ಥನೆ ೭೫
ಅನೀಶನಿಗೆ ಈಶತ್ವ ಹೇಳುವುದು ಪ್ರಮಾಣವಿರುದ್ಧ ೭೬
ಅರೂಪಾಧಿಕರಣ ೭೭
ಪರಮಾತ್ಮನು ಅಪ್ರಾಕೃತರೂಪನಾದ್ದರಿಂದ ಅರೂಪನು ೭೮
ವೃದ್ಧಿಹ್ರಾಸಾಧಿಕರಣ ೭೮
ಭಕ್ತಿಯಲ್ಲಿ ತಾರತಮ್ಯವನ್ನು ಅಂಗೀಕರಿಸಲೇ ಬೇಕು ೭೯
ಸ್ಥಾನವಿಶೇಷಾಧಿಕರಣ ೭೯
ಪ್ರತಿಬಿಂಬಗಳಾದ ಬ್ರಹ್ಮಾದಿಗಳಲ್ಲಿ ವೈಚಿತ್ರವಿದೆ ೭೯
ಪ್ರಕೃತೈತಾವತ್ತ್ವಾಧಿಕರಣ ೮೦

ಪರಮಾತ್ಮನಿಗೆ ಸ್ಥಿತಿಕರ್ತೃತ್ವ ಸಮರ್ಥನೆ	೮೦
ಅವ್ಯಕ್ತಾಧಿಕರಣ	**೮೧**
ಪರಮಾತ್ಮನು ಅವ್ಯಕ್ತನಾದರೂ ವ್ಯಕ್ತತ್ವವು ಕೂಡುವುದು	೮೧
ಅಹಿಕುಂಡಲಾಧಿಕರಣ	**೮೧**
ಬ್ರಹ್ಮನಿಗೂ ಅವನ ಧರ್ಮಗಳಿಗೂ ಸವಿಶೇಷಾತ್ಯಂತಾಭೇದ	೮೨
ಬ್ರಹ್ಮನಿಂದ ಅಭಿನ್ನವಾದ ವಿಶೇಷವು ಸ್ವನಿರ್ವಾಹಕ	೮೨
ಸವಿಶೇಷಾಭೇದದ ಸಮರ್ಥನೆ	೮೩
ಅಭೇದವಾದಿಯೂ ವಿಶೇಷವನ್ನು ಒಪ್ಪಲೇಬೇಕು	**೮೭**
ಭೇದಾಭೇದವಾದಿಯಿಂದಲೂ ವಿಶೇಷವು ಅಂಗೀಕಾರ್ಯವು	**೮೯**
ಅಭಿಹಿತಾನ್ವಯ ವಾದದ ನಿರಾಸೆ	**೯೦**
ಅನ್ವಿತಾಭಿಧಾನ ವಾದದ ಸಮರ್ಥನೆ	೯೦
ಅಭಿಹಿತಾನ್ವಯವು ಅನುಭವವಿರುದ್ಧವು	೯೧
ಸ್ಫೋಟದಿಂದ ಅನ್ವಯವೆಂಬುದು ಅಪ್ರಮಾಣಿಕ	೯೩
ಪರಮತಾಧಿಕರಣ	**೯೬**
ಭಗವಂತನ ಆನಂದಾದಿಗಳು ಲೌಕಿಕದಿಂದ ವಿಲಕ್ಷಣ	೯೬
ಉಕ್ತಾರ್ಥದಲ್ಲಿ ಶ್ರುತಿ ಪ್ರಮಾಣ	೯೭
ಫಲಾಧಿಕರಣ	**೯೮**
ಸ್ವತಂತ್ರನಾದ ಈಶ್ವರನೇ ಫಲದಾತೃವು	೯೯
ಭಗವಂತನ ಮಾಹಾತ್ಮ್ಯಜ್ಞಾನಕ್ಕಾಗಿ ಕರ್ಮಸ್ವರೂಪ ವಿವರಣೆ	೯೯
ಮೂರನೆಯ ಪಾದ	**೧೦೧ – ೧೪೩**
ತೃತೀಯಾಧ್ಯಾಯದಲ್ಲಿನ ಪಾದಗಳ ಸಂಗತಿ ನಿರೂಪಣೆ	೧೦೧
ಪ್ರಥಮ ಸೂತ್ರಾರ್ಥ ಅನುವಾದ	೧೦೧
ದ್ವಿತೀಯ ಸೂತ್ರಕ್ಕೆ ಸಂಗತಿ ಸಹಿತ ವ್ಯಾಖ್ಯಾನ	೧೦೩
ತೃತೀಯ ಸೂತ್ರಕ್ಕೆ ಸಂಗತಿ ಸಹಿತ ವ್ಯಾಖ್ಯಾನ	೧೦೪
ಸಮನ್ವಯ ಸೂತ್ರಾರ್ಥ	೧೦೫
ಗತಿಸಾಮಾನ್ಯ ಸೂತ್ರಕ್ಕೆ ಸಂಗತಿ	೧೦೭
ಪ್ರಥಮ ಪಾದಗತ ವಿಷಯಗಳ ಸಂಗ್ರಹ	೧೧೦

ದ್ವಿತೀಯ ಪಾದಕ್ಕೆ ಸಂಗತಿ ನಿರೂಪಣೆ ೧೧೨
ತೃತೀಯ ಪಾದಕ್ಕೆ ಸಂಗತಿ ನಿರೂಪಣೆ ೧೧೨
ನಾಲ್ಕನೆಯ ಪಾದಕ್ಕೆ ಸಂಗತಿ ನಿರೂಪಣೆ ೧೧೪
ದ್ವಿತೀಯಾಧ್ಯಾಯಕ್ಕೆ ಸಂಗತಿ ನಿರೂಪಣೆ ೧೧೫
ತೃತೀಯಾಧ್ಯಾಯಕ್ಕೆ ಸಂಗತಿ ನಿರೂಪಣೆ ೧೧೬
ಪೂರ್ವಪಕ್ಷ ಮತ್ತು ಸಿದ್ಧಾಂತ ಯುಕ್ತಿಗಳ ಸಂಗ್ರಹ ೧೧೮
ಪೂರ್ವಪಕ್ಷ ಮತ್ತು ಸಿದ್ಧಾಂತ ಯುಕ್ತಿಗಳ ವಿವರಣೆ ೧೨೦
ಸರ್ವವೇದಾಧಿಕರಣ **೧೩೫**
ಯಥಾಶಕ್ತಿ ವೇದಜ್ಞಾನವೇ ಉಪಾಸನೆಗೆ ಅಂಗವು ೧೩೫
ಸ್ವಾಧ್ಯಾಯಸ್ಯ ತಥಾತ್ವೇನ ಎಂಬ ಸೂತ್ರದ ತಾತ್ಪರ್ಯ ೧೩೭
ವಾಚನಿಕ ಪರ ಸತ್ಸಿದ್ಧಾಂತದ ನಿರೂಪಣೆ ೧೪೦
ಆನುಷಂಗಿಕ ಪರ ಸತ್ಸಿದ್ಧಾಂತದ ನಿರೂಪಣೆ ೧೪೦
ಅಪರ ಸತ್ಸಿದ್ಧಾಂತದ ನಿರೂಪಣೆ ೧೪೨
ಸತ್ಸಿದ್ಧಾಂತದ ಪರಿತ್ಯಾಗದಿಂದ ಅಂಧಂತಮಸ್ಸು ೧೪೨
ಸತ್ಸಿದ್ಧಾಂತಕ್ಕೆ ಪ್ರಾಮಾಣಿಕತ್ವ ಸಮರ್ಥನೆ ೧೪೨
ಸಮ್ಯಕ್ ಜ್ಞಾನದಿಂದ ಸುಖ, ವಿಷಮಜ್ಞಾನದಿಂದ ದುಃಖ ೧೪೪
ಉಪಸಂಹಾರಾಧಿಕರಣ **೧೪೪**
ಯಥಾಶಕ್ತಿ ಗುಣೋಪಸಂಹಾರದಿಂದಲೇ ಉಪಾಸನೆ ೧೪೪
ಅನುಬಂಧಾದ್ಯಧಿಕರಣ **೧೪೫**
ಯಮನಿಯಮಾದಿಗಳಿಗೆ ಉಪಾಸನಾಂಗತ್ವ ೧೪೬
ವಿಷ್ಣುವಿನಲ್ಲಿ ನಿರತಿಶಯ ಹಾಗೂ ಸ್ವೋತ್ತಮರಲ್ಲಿ ಕ್ರಮದಿಂದ ಭಕ್ತಿ ೧೪೭
ಸ್ವಸಮರಲ್ಲಿ ಸ್ನೇಹ ಹಾಗೂ ಅಧಮರಲ್ಲಿ ದಯೆ ೧೪೮
ವಿಪರೀತಜ್ಞಾನದಿಂದ ಅನರ್ಥ ೧೪೮
ಭಗವಂತನ ದ್ವೇಷಿಗಳಿಗೆ ಮುಕ್ತಿಯಿಲ್ಲ ೧೪೯
ವಿದ್ಯಾಧಿಕರಣ **೧೫೨**
ಚಾರ್ವಾಕ ಮತ ನಿರಾಸೆ ೧೫೨
ಜೈನೋಕ್ತ ಮೋಕ್ಷಸಾಧನತ್ವ ನಿರಾಸೆ ೧೫೭

ಶೂನ್ಯವಾದಿಗಳ ಮತ (ಬೌದ್ಧ ಮತ) ನಿರಾಸೆ	೧೬೪
ವಿಜ್ಞಾನವಾದಿಗಳ ಮತ ನಿರಾಸೆ	೧೬೫
ವೈಭಾಷಿಕ ಸೌತ್ರಾಂತಿಕ ಮತ ನಿರಾಸೆ	೧೬೬
ಸಾಂಖ್ಯಮತ ನಿರಾಸೆ	೧೬೬
ವೈಶೇಷಿಕಾದಿಗಳ ಮತ ನಿರಾಸೆ	೧೬೭
ಈಶ್ವರನ ಪ್ರಸಾದದಿಂದಲೇ ಮೋಕ್ಷ	೧೬೮
ಪಾಶುಪತಾದಿ ಮತಗಳ ನಿರಾಸೆ	೧೬೮
ಪುರುಷಸೂಕ್ತಾರ್ಥ ನಿರೂಪಣೆ	೧೭೦
ಭಾಟ್ಟೋಕ್ತ ಮೋಕ್ಷಸಾಧನತ್ವ ನಿರಾಸೆ	೧೭೨
ಸಮುಚ್ಚಯ ವಾದ ನಿರಾಸೆ	೧೭೩
ಏಕತ್ವ ವಿಜ್ಞಾನದಿಂದ ಮೋಕ್ಷವಿಲ್ಲ	೧೭೩
ಅನ್ಯಥೋಪಾಸನೆಯಿಂದ ಅನರ್ಥ	೧೭೩
ಅಧಿಕರಣಾರ್ಥ ಉಪಸಂಹಾರ	೧೭೪
ಯಾವದಧಿಕಾರಾಧಿಕರಣ	೧೭೪
ಸಂಸಾರ ಮೋಕ್ಷಗಳಲ್ಲಿ ಭಕ್ತಿಜ್ಞಾನಾದಿ ವಿಶೇಷ	೧೭೫
ತಾರತಮ್ಯವಿದ್ದರೂ ಮುಕ್ತರಲ್ಲಿ ಪರಸ್ಪರ ದ್ವೇಷವಿಲ್ಲ	೧೭೫
ಮಾಯಾವಾದಿ ವ್ಯಾಖ್ಯಾನದ ನಿರಾಸೆ	೧೭೬
ಇಯದಾಮನನಾಧಿಕರಣ	೧೭೬
ಅಧಿಕಾರಿ ತಾರತಮ್ಯ ನಿರೂಪಣೆ	೧೭೭
ರಮಾದೇವಿಯು ಅಧಿಕಾರಿ ವರ್ಗದಲ್ಲಿ ಸೇರಿಲ್ಲ	೧೭೯
ಶ್ರೀಹರಿಯೇ ಸರ್ವೋತ್ತಮನು	೧೭೯
ಪ್ರಜ್ಞಾಂತರಾಧಿಕರಣ	೧೮೦
ಯೋಗ್ಯತಾನುಸಾರ ಅಪರೋಕ್ಷಜ್ಞಾನ	೧೮೦
ಪ್ರದಾನಾಧಿಕರಣ	೧೮೦
ಲಿಂಗಭೂಯಸ್ತ್ವಾಧಿಕರಣ	೧೮೦
ಪ್ರಸಾದಪೂರ್ವಕ ವಿದ್ಯಾದಾನದಿಂದ ಅಪರೋಕ್ಷಜ್ಞಾನ	೧೮೦
ಪೂರ್ವವಿಕಲ್ಪಾಧಿಕರಣ	೧೮೧

ಗುರು ಸ್ವೀಕಾರಕ್ರಮ, ಗುರುಸ್ವರೂಪಾದಿ ನಿರೂಪಣೆ	೧೮೨
ಪರೇಣಾಧಿಕರಣ	**೧೮೩**
ಮೋಕ್ಷಸಾಧನವಾದ ಜ್ಞಾನಾದಿಗಳಲ್ಲಿ ಭಕ್ತಿಗೇ ಪ್ರಾಧಾನ್ಯವು	೧೮೩
ಪಾದಾರ್ಥ ಉಪಸಂಹಾರ	೧೮೩
ನಾಲ್ಕನೆಯ ಪಾದ	**೧೮೪ – ೨೬೬**
ಪುರುಷಾರ್ಥಾಧಿಕರಣ	**೧೮೪**
ದೇವತೆಗಳಿಗೆ ಯೋಗ್ಯತಾನುಸಾರ ಫಲ	೧೮೪
ಸ್ತುತ್ಯಧಿಕರಣ	**೧೮೫**
ಜ್ಞಾನಿಗಳ ಸದಸತ್ ಪ್ರವೃತ್ತಿಗಳಲ್ಲಿ ವಿಶೇಷ	೧೮೫
ಪುನರುಕ್ತಿದೋಷ ಪರಿಹಾರ	೧೮೭
ಉಕ್ತಾರ್ಥದಲ್ಲಿ ಸ್ಮೃತಿ ಶ್ರುತಿಗಳು	೧೮೯
ಮುಕ್ತಿಯಲ್ಲಿ ಆನಂದತಾರತಮ್ಯ ಸಮರ್ಥನೆಗೆ ಯುಕ್ತಿಯು	೧೯೭
ಉಕ್ತಾರ್ಥದಲ್ಲಿ ಶ್ರುತಿ ಸ್ಮೃತಿಗಳು	೧೯೯
ಸಾಧನ ತಾರತಮ್ಯಕ್ಕೆ ಪ್ರಾಮಾಣ್ಯ ನಿರೂಪಣೆ	೨೦೧
ಸಾಧನಕ್ಕೆ ತಕ್ಕಂತೆ ಸಾಧ್ಯ ವೈಚಿತ್ರ್ಯ	೨೧೦
ಸಾಧ್ಯಸಾಧನಗಳಿಗೆ ವೈರೂಪ್ಯ ಕಲ್ಪಿಸಿದರೆ ದೋಷ	೨೧೨
ಮುಕ್ತರಲ್ಲಿ ತಾರತಮ್ಯವಿದ್ದರೂ ದ್ವೇಷಾದಿಗಳಿಲ್ಲ	೨೧೨
ಮುಕ್ತರಲ್ಲಿ ಸಾಮ್ಯವಿಲ್ಲ	೨೧೫
ಚೇತನತ್ವ ಹೇತುವಿನಿಂದ ಮುಕ್ತರಲ್ಲಿ ತಾರತಮ್ಯಸಾಧನೆ	೨೧೫
ಮುಕ್ತನಿಗೆ ನಿರ್ದುಃಖತ್ವಾದಿ ಪ್ರತಿಪಾದಕ ಶ್ರುತಿಗಳು	೨೧೫
ಉಭಯಲಿಂಗಾಧಿಕರಣ	**೨೧೭**
ಆಧಿಕಾರಿಕಾಧಿಕರಣ	**೨೧೭**
ಯೋಗ್ಯತೆಗೆ ಅನಾದಿತ್ವ ಅವಧಿತ್ವ ಸಮರ್ಥನೆ	೨೧೭
ಭಗವಂತನಿಗೆ ನಿರ್ದೋಷತ್ವ ಸಮರ್ಥನೆ	೨೨೬
ಪರೀಕ್ಷಿತವಾದುದಕ್ಕೇ ಪ್ರಾಮಾಣ್ಯ	೨೨೯
ಪ್ರತ್ಯಕ್ಷಾಗಮಗಳಿಂದ ಉಪಜೀವ್ಯತ್ವ ವಿವೇಕ	೨೩೩
ವೇದಕ್ಕೆ ವಿರುದ್ಧವಾದುದು ಪ್ರಮಾಣವಲ್ಲ	೨೩೫

ಅಪರೀಕ್ಷಿತವಾದುದು ಅಪ್ರಮಾಣ ೨೩೫
ಉಪಜೀವ್ಯವಿರೋಧವು ಉಪಜೀವಕಕ್ಕೆ ಬಾಧಕ ೨೩೫
ಚಿನ್ಮಾತ್ರತ್ವಾದಿಗಳಿಂದ ಬ್ರಹ್ಮನಿಗೆ ಉಪಜೀವ್ಯತ್ವವಿಲ್ಲ ೨೩೯
ಸ್ವರೂಪಮಾತ್ರವು ಉಪಜೀವ್ಯವಲ್ಲ ೨೩೯
ಜ್ಞಾತೃ ಜ್ಞೇಯ ವಿಹೀನವಾದ ಜ್ಞಾನವಿಲ್ಲ ೨೪೧
ಪ್ರಪಂಚಮಿಥ್ಯಾತ್ವವು ಅಪ್ರಾಮಾಣಿಕ ೨೪೨
ಉಪಕ್ರಮಾದಿಗಳಲ್ಲಿ ಉಪಪತ್ತಿಗೇ ಪ್ರಾಬಲ್ಯ ೨೪೩
ಸರ್ವಮಿಥ್ಯಾತ್ವ ಕಲ್ಪನೆಯು ಅಯುಕ್ತ ೨೪೪
ಮುಕ್ತರಲ್ಲಿ ತಾರತಮ್ಯ ಸಮರ್ಥನೆ ೨೪೫
ದ್ವೇಷಕ್ಕೆ ಮುಕ್ತಿಸಾಧನತ್ವವಿಲ್ಲ ೨೫೦
ಭಕ್ತಿಯಿಂದಲೇ ಪರಮಪುರುಷಾರ್ಥ ೨೫೪
ದ್ವೇಷದಿಂದ ಭಗವತ್ಪ್ರಸಾದ ಸಾಧ್ಯವಿಲ್ಲ ೨೫೬
ರಮಾದಿಗಳಲ್ಲಿ ಕ್ರಮದಿಂದಲೇ ಭಕ್ತಿ ಮಾಡತಕ್ಕದ್ದು ೨೫೭
ರಮಾದಿಗಳಲ್ಲಿ ಮಾಡುವ ಭಕ್ತಿಯೂ ಭಗವದ್ಭಕ್ತಿಯೇ ೨೫೭
ಉಕ್ತಾರ್ಥದಲ್ಲಿ ಆಗಮ ಪ್ರಮಾಣ ೨೫೮
ಉಕ್ತಾರ್ಥದಲ್ಲಿ ಯುಕ್ತಿಯು ೨೫೯
ಫಲಶ್ರುತ್ಯಧಿಕರಣ ೨೬೦
ಶುಭಕರ್ಮಗಳ ಫಲವು ದೇವತೆಗಳಿಗೆ ೨೬೦
ಅಶುಭಕರ್ಮಗಳ ಫಲವು ಅಸುರರಿಗೆ ೨೬೩
ಜೀವನಿಗೆ ಶುಭಾಶುಭಕರ್ಮಗಳ ಫಲ ೨೬೩
ಅನಾವಿಷ್ಕಾರಾಧಿಕರಣ ೨೬೪
ಗುರುಗಳಿಗೆ ತಾರತಮ್ಯಾನುಸಾರ ಫಲ ೨೬೪
ಐಹಿಕಾಧಿಕರಣ ೨೬೬
ಮುಕ್ತಿಫಲಾಧಿಕರಣ ೨೬೬
ಪ್ರತಿಬಂಧವಿಲ್ಲದಿದ್ದರೆ ಜ್ಞಾನಪ್ರಾಪ್ತವಾದ ಜನ್ಮದಲ್ಲೇ ಮುಕ್ತಿ ೨೬೬
ಮೂರನೆಯ ಅಧ್ಯಾಯದ ಮುಕ್ತಾಯ ೨೬೬

* * *

ಶ್ರೀಮದ್ಧನುಮಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ ಶ್ರೀಲಕ್ಷ್ಮೀಹಯಗ್ರೀವಾಯ ನಮಃ

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತಮ್

ಶ್ರೀಮದನುವ್ಯಾಖ್ಯಾನಮ್

ಮೂರನೆಯ ಅಧ್ಯಾಯ (ಸಾಧನಾಧ್ಯಾಯ)

ಮೊದಲನೆಯ ಪಾದ

ಕುಪಿತಾಹಿಫಣಚ್ಛಾಯಾಸಮೀಕೃತ್ಯಾಪರಂ ಸುಖಮ್ ।

ಸೇವಂತೇ ಯತ್ಪದಂ ಧೀರಾಸ್ತಂ ಭಜೇ ವಲ್ಲಭಂ ಶ್ರಿಯಃ ।।

ಜ್ಞಾನಿಗಳು ವಿಷಯಜನ್ಯವಾದ ಸುಖವನ್ನು ಕೋಪಗೊಂಡ ಹಾವಿನ ಹೆಡೆಯ ನೆರಳಿಗೆ ಸಮವೆಂದು ತಿಳಿದು ಅದನ್ನು ತುಚ್ಛೀಕರಿಸಿ, ಯಾವ ಶ್ರೀಹರಿಯ ಸ್ವರೂಪವನ್ನು ಭಕ್ತಿಜ್ಞಾನಾದಿಗಳಿಂದ ಸೇವಿಸುವರೋ, ಅಂಥ ಲಕ್ಷ್ಮೀಪತಿಯಾದ ಶ್ರೀಹರಿಯನ್ನು ನಾನು ಸೇವಿಸುತ್ತೇನೆ.

ಈ ಅಧ್ಯಾಯದಲ್ಲಿ ಸಾಧನ ವಿಚಾರವು ಮಾಡಲ್ಪಡುತ್ತದೆ. ಸಾಧಕನಲ್ಲಿ ವೈರಾಗ್ಯವನ್ನು ಹುಟ್ಟಿಸುವುದಕ್ಕಾಗಿ ಮೂರನೆಯ ಅಧ್ಯಾಯದ ಮೊದಲನೆಯ ಪಾದದಲ್ಲಿ ಗತ್ಯಾದಿಗಳ ನಿರೂಪಣೆಯು ಮಾಡಲ್ಪಟ್ಟಿದೆ ಎಂಬ ವಿಷಯವು ಭಾಷ್ಯದಿಂದಲೇ ಸ್ಪಷ್ಟವಾಗಿ ತಿಳಿದುಬರುವುದು. ಈ ವ್ಯಾಖ್ಯಾನದಲ್ಲಿ ಮೊದಲಿಗೆ ಈ ಪಾದದ ಅಧಿಕರಣಗಳ ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳನ್ನು ಸಂಗ್ರಹವಾಗಿ ಹೇಳುತ್ತಾರೆ.

ಸ್ವಾಭಾವಿಕಾನ್ಯಥಾನಾಮಸಹಭಾವಾನ್ಯಥೋಕ್ತಯಃ ।

ಅವಿಶೇಷವಿಶೇಷೌ ಚ ಸಹಭಾವೋ ವಿಮಿಶ್ರಿತಾ ।।೧।।

ವಿರುದ್ಧೋಕ್ತಿಃ ಸಹಸ್ಥಾನಂ ವೈಯರ್ಥ್ಯಂ ಚಾನ್ಯಥಾಗತಿಃ ।

ಯುಕ್ತಯಃ ಪೂರ್ವಪಕ್ಷಸ್ಯ ಗುಣಾಧಿಕ್ಯಾರ್ಥತೋ ಭವೌ ।।೨।।

ಉಪಪತ್ತಿರ್ದ್ವಿರೂಪತ್ವಮಾಧಿಕ್ಯಮನುರೂಪತಾ ।

ಯೋಗ್ಯತಾ ಬಲವತ್ತ್ವಂ ಚ ವಿಭಾಗಃ ಕಾರಣಾಭವಃ ।।

ಕ್ಲೃಪ್ತಿರನ್ಯಾಗತಿಶ್ಚೈವ ಸಿದ್ಧಾಂತಸ್ಯೈವ ಸಾಧಕಾಃ ।।೩।।

ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳ ಸಂಗ್ರಹ

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
೧. ಅಂತರಾಧಿಕರಣ	ಸ್ವಾಭಾವಿಕತ್ವ	ಗುಣಾಧಿಕ್ಯ
೨. ತ್ರ್ಯಾತ್ಮಕತ್ವಾಧಿಕರಣ	ಅನ್ಯಥಾನಾಮ	ಅರ್ಥತಃ ಪ್ರಾಪ್ತಿ
೩. ಪ್ರಾಣಗತ್ಯಧಿಕರಣ	ಸಹಭಾವ	ಉಪಪತ್ತಿ
೪. ಅಗ್ನ್ಯಾಧಿಕರಣ	ಅನ್ಯಥೋಕ್ತಿ	ದ್ವಿರೂಪತ್ವ
೫. ಪ್ರಥಮಶ್ರವಣಾಧಿಕರಣ	ಅವಿಶೇಷ	ಆಧಿಕ್ಯ
೬. ಅಶ್ರುತತ್ವಾಧಿಕರಣ	ಅವಿಶೇಷ	ಅನುರೂಪತಾ
೭. ಭಾಕ್ತಾಧಿಕರಣ	ವಿಶೇಷ	ಯೋಗ್ಯತಾ
೮. ಕೃತಾತ್ಯಯಾಧಿಕರಣ	ಸಹಭಾವ	ಯೋಗ್ಯತಾ
೯. ಯಥೇತಾಧಿಕರಣ	ಸಹಭಾವ	ಯೋಗ್ಯತಾ
೧೦. ಚರಣಾಧಿಕರಣ	ಸಹಭಾವ	ಯೋಗ್ಯತಾ
೧೧. ಅನಿಷ್ಟಾಧಿಕರಣ	ವಿಮಿಶ್ರಿತಾ	ಬಲವತ್ತ್ವ
೧೨. ಅಪಿಸಪ್ತಾಧಿಕರಣ	ವಿರುದ್ಧೋಕ್ತಿ	ವಿಭಾಗ
೧೩. ತತ್ರಾಪ್ಯಧಿಕರಣ	ಸಹಸ್ಥಾನ	ಕಾರಣಾಭವ
೧೪. ವಿದ್ಯಾಧಿಕರಣ	ಸಹಸ್ಥಾನ	ಕಾರಣಾಭವ
೧೫. ನತೃತೀಯಾಧಿಕರಣ	ಸಹಸ್ಥಾನ	ಕಾರಣಾಭಾವ
೧೬. ತತ್ಸ್ವಭಾವ್ಯಾಧಿಕರಣ	ಸಹಸ್ಥಾನ	ಕಾರಣಾಭಾವ
೧೭. ನಾತಿಚಿರೇಣಾಧಿಕರಣ	ಸಹಸ್ಥಾನ	ಕಾರಣಾಭಾವ
೧೮. ಅನ್ಯಾಧಿಕರಣ	ಸಹಸ್ಥಾನ	ಕಾರಣಾಭಾವ
೧೯. ರೇತೋಧಿಕರಣ	ವೈಯರ್ಥ್ಯ	ಈಶಕ್ಲೃಪ್ತಿ
೨೦. ಯೋನ್ಯಧಿಕರಣ	ಅನ್ಯಥಾಗತಿ	ಅನ್ಯಾಗತಿ

ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳ ವಿವರಣೆ

೧. ತದಂತರಾಧಿಕರಣ: ಓಂ ತದಂತರಪ್ರತಿಪತ್ತೌ ರಂಹತಿ ಸಂಪರಿಷ್ವಕ್ತಃ ಪ್ರಶ್ನ ನಿರೂಪಣಾಭ್ಯಾಂ ಓಂ

ಸ್ವಾಭಾವಿಕ ಎನ್ನುವುದು ಪೂರ್ವಪಕ್ಷಯುಕ್ತಿ. "ಭೂತಬಂಧಸ್ತು ಸಂಸಾರೋ ಮುಕ್ತಿಸ್ತೇಭ್ಯೋ ವಿಮೋಚನಂ" ಎಂಬ ವಚನದ ಪ್ರಕಾರ ಸ್ವಾಭಾವಿಕ ಮರಣವೇ ಮುಕ್ತಿಯು. ಆದಕಾರಣ ಅದಕ್ಕಾಗಿ ವೈರಾಗ್ಯಾದಿ ಸಾಧನೆ ಬೇಕಾಗಿಲ್ಲ ಎಂದು ಪೂರ್ವಪಕ್ಷ.

ಗುಣಾಧಿಕ್ಯ ಎನ್ನುವುದು ಸಿದ್ಧಾಂತಯುಕ್ತಿ. "ತಮೇವ ವಿದ್ವಾನ್ ಅಮೃತ ಇಹ ಭವತಿ" ಎಂಬ ಶ್ರುತಿಯ ಪ್ರಕಾರ ಜ್ಞಾನವೆಂಬ ಗುಣವೇ ಮೋಕ್ಷ ಸಾಧನಗಳಲ್ಲಿ ಅಧಿಕ ಅಂದರೆ ಶ್ರೇಷ್ಠವೆಂದು ತಿಳಿದುಬರುವುದು. ಸ್ವಾಭಾವಿಕ ಮರಣದಲ್ಲಿ ಭೂತ ವಿಯೋಗವು ಸಂಪೂರ್ಣವಾಗಿ ಆಗುವುದಿಲ್ಲ. ಜ್ಞಾನವಿಲ್ಲದೇ ಮೋಕ್ಷವಿಲ್ಲ. ಆದ್ದರಿಂದ ಜ್ಞಾನ ವೈರಾಗ್ಯಾದಿಗಳನ್ನು ಸಂಪಾದಿಸಲೇಬೇಕು ಎಂದು ಸಿದ್ಧಾಂತ.

೨. ತ್ರ್ಯಾತ್ಮಕತ್ವಾಧಿಕರಣ: ಓಂ ತ್ರ್ಯಾತ್ಮಕತ್ವಾತ್ತು ಭೂಯಸ್ತ್ವಾತ್ ಓಂ

ಅನ್ಯಥಾ ನಾಮ ಎನ್ನುವುದು ಪೂರ್ವಪಕ್ಷಯುಕ್ತಿ. "ಇತಿ ತು ಪಂಚಮ್ಯಾ ಮಾಹು ತಾವಾಪಃ ಪುರುಷವಚಸೋ ಭವಂತಿ" ಎಂಬ ಶ್ರುತಿಯಲ್ಲಿ ಜೀವನಿಗೆ ಸ್ತ್ರೀಗರ್ಭಪ್ರವೇಶವನ್ನು ಹೇಳುವಾಗ ಪಂಚಭೂತಗಳ ನಾಮವನ್ನು ಹೇಳದೆ ಅನ್ಯಥಾ ನಾಮ ಅಂದರೆ ಆಪಃ ಎಂದು ಜಲದ ನಾಮವನ್ನು ಮಾತ್ರ ಹೇಳಿದ್ದಾರೆ. ಆದಕಾರಣ ಮರಣ ಹೊಂದಿದ ಜೀವನಿಗೆ ಪಂಚಭೂತಗಳೊಂದಿಗೆ ಸಹಗಮನವಿಲ್ಲ ಎಂದು ಪೂರ್ವಪಕ್ಷ.

ಅರ್ಥತೋ ಭವಃ ಎನ್ನುವುದು ಸಿದ್ಧಾಂತಯುಕ್ತಿ. ಶ್ರುತಿಯಲ್ಲಿ ಜಲವನ್ನು ಮಾತ್ರ ಹೇಳಿದ್ದರೂ ಅದರಲ್ಲಿಯೇ ಇತರ ಭೂತಗಳೂ ಸೇರಿವೆ. ಆದಕಾರಣ ಜಲ ಎಂಬ ನಾಮದಿಂದ ಲಕ್ಷಣಾವೃತ್ತಿಯಿಂದ ಎಲ್ಲ ಭೂತಗಳು ಎಂದು ಅರ್ಥ ಮಾಡಬೇಕು. ಆದ್ದರಿಂದ ಜೀವನು ಪಂಚಭೂತಗಳ ಜೊತೆಗೇ ಗರ್ಭಪ್ರವೇಶ ಮಾಡುತ್ತಾನೆ ಎಂದು ಸಿದ್ಧಾಂತ.

೩. ಪ್ರಾಣಗತ್ಯಧಿಕರಣ: ಓಂ ಪ್ರಾಣಗತೇಶ್ಚ ಓಂ

ಸಹಭಾವ ಎನ್ನುವುದು ಪೂರ್ವಪಕ್ಷಯುಕ್ತಿ. ಜೀವನಿಗೆ ಭೂತಸಂಬಂಧದ ವಿಷಯದಲ್ಲಿ ವಿಶೇಷ ಪ್ರಮಾಣವಿಲ್ಲ. 'ಭೂತಾನಿ ಗಚ್ಛಂತಿ' ಎಂದು ಸಹಭಾವವನ್ನೂ ಹೇಳಿಲ್ಲ. ಆದಪ್ರಯುಕ್ತ ಮರಣದ ನಂತರ ಜೀವನೊಂದಿಗೆ ಸಕಲ ಭೂತಗಳ ಸಹಗಮನವಿಲ್ಲ ಎಂದು ಪೂರ್ವಪಕ್ಷ.

ಉಪಪತ್ತಿ ಎನ್ನುವುದು ಸಿದ್ಧಾಂತಯುಕ್ತಿ. ಮರಣದ ನಂತರ ಜೀವನೊಂದಿಗೆ ಇಂದ್ರಿಯಗಳೂ ಹೋಗುತ್ತವೆ. 'ಯತ್ರ ವಾವ ಭೂತಾನಿ ತತ್ರ ಕರಣಾನಿ' ಎನ್ನುವ ಶ್ರುತಿಯಿಂದ ಇಂದ್ರಿಯಗಳಿಗೂ ಭೂತಗಳಿಗೂ ಅವಿನಾಭಾವರೂಪ ಸಂಬಂಧವಿದೆ ಯೆಂದು ತಿಳಿದುಬರುವುದು. ಆದಕಾರಣ ಇಂದ್ರಿಯಗಳೊಂದಿಗೆ ಭೂತಗಳಿಗೂ ಸಹಗಮನ ಕೂಡುವುದು ಎಂದು ಸಿದ್ಧಾಂತ.

೪. ಅಗ್ನ್ಯಧಿಕರಣ: ಓಂ ಅಗ್ನ್ಯಾದಿಗತಿಶ್ರುತೇರಿತಿ ಚೇನ್ನ ಭಾಕ್ತತ್ವಾತ್ ಓಂ

ಅನ್ಯಥೋಕ್ತಿ ಎನ್ನುವುದು ಪೂರ್ವಪಕ್ಷಯುಕ್ತಿ. "ಅಗ್ನಿಂ ವಾಗಪ್ಯೇತಿ" ಇತ್ಯಾದಿ ಶ್ರುತಿಯಲ್ಲಿ ವಾಗಿಂದ್ರಿಯವು ಅಗ್ನಿಯಲ್ಲಿ ಹೋಗಿ ಸೇರುತ್ತದೆ ಎಂದು ಜೀವನೊಂದಿಗೆ ಗಮನಕ್ಕಿಂತ ಬೇರೆಯಾಗಿ ಹೇಳಿರುವುದರಿಂದ, ಇಂದ್ರಿಯಗಳಿಗೆ ಜೀವನೊಂದಿಗೆ ಗಮನವಿಲ್ಲ ಎಂದು ಪೂರ್ವಪಕ್ಷ.

ದ್ವಿರೂಪತ್ವ ಎನ್ನುವುದು ಸಿದ್ಧಾಂತಯುಕ್ತಿ. "ಪುರುಷಸ್ಯ ಮೃತೌ ಬ್ರಹ್ಮನ್ ಪ್ರಾಣಾ ಭಾಗತ ಏವ ತು ಅಧಿದೈವಂ ಪ್ರಾಪ್ನುವಂತಿ ಭಾಗತೋ ಅನುವ್ರಜಂತಿ ತಂ" ಎನ್ನುವ ಪ್ರಮಾಣವು ಇಂದ್ರಿಯಗಳಿಗೆ ದ್ವಿರೂಪತ್ವ ವನ್ನು ಹೇಳುತ್ತದೆ. ಆದಕಾರಣ ಇಂದ್ರಿಯಗಳು ಒಂದು ರೂಪದಿಂದ ಜೀವನ ಜೊತೆ ಹೊಗುವುದಲ್ಲದೆ ಮತ್ತೊಂದು ರೂಪದಿಂದ ಅಗ್ನ್ಯಾದಿಗಳಲ್ಲಿ ಸೇರುತ್ತವೆ ಎಂದು ಸಿದ್ಧಾಂತ.

೫. ಪ್ರಥಮೇಶ್ರವಣಾಧಿಕರಣ: ಓಂ ಪ್ರಥಮೇ ಶ್ರವಣಾದಿತಿ ಚೇನ್ನ ತಾ ಏವ ಹ್ಯುಪಪತ್ತೇಃ ಓಂ

ಅವಿಶೇಷ ಎನ್ನುವುದು ಪೂರ್ವಪಕ್ಷಯುಕ್ತಿ. "ಅಗ್ನೌ ದೇವಾಃ ಶ್ರದ್ಧಾಂ ಜುಹ್ವತಿ" ಎಂದು ಉಪಕ್ರಮ ವಾಕ್ಯದಲ್ಲಿ "ಭೂತಾನಿ ಜುಹ್ವತಿ" ಎಂಬ ವಿಶೇಷ ವಚನದ ಅಭಾವ (ಅವಿಶೇಷ) ದಿಂದ ಜೀವನಿಗೆ ಭೂತಸಂಬಂಧವಿಲ್ಲ ಎಂದು ಪೂರ್ವಪಕ್ಷ.

ಆಧಿಕ್ಯವು ಸಿದ್ಧಾಂತಯುಕ್ತಿ. "ಇತಿ ತು ಪಂಚಮ್ಯಾಮಾಹುತಾವಾಪಃ ಪುರುಷ ವಚಸೋ ಭವಂತಿ" ಎನ್ನುವ ಉಪಸಂಹಾರ ವಾಕ್ಯವು ಉಪಕ್ರಮಕ್ಕಿಂತ ಪ್ರಬಲವು. ಆದುದರಿಂದ (ಆಧಿಕ್ಯದ ನಿಮಿತ್ತದಿಂದ) ಉಪಕ್ರಮದಲ್ಲಿನ ಶ್ರದ್ಧಾ ಪದದಿಂದ ಎಲ್ಲ ಭೂತಗಳನ್ನೂ ಗ್ರಹಿಸಬೇಕು. ಆದಕಾರಣ ಜೀವನೊಂದಿಗೆ ಭೂತ ಸಂಬಂಧವು ಸಿದ್ಧವಾಗುವುದು ಎಂದು ಸಿದ್ಧಾಂತ.

೬. ಅಶ್ರುತತ್ವಾಧಿಕರಣ: ಓಂ ಅಶ್ರುತತ್ವಾದಿತಿ ಚೇನ್ನೇಷ್ಟಾಧಿಕಾರಿಣಾಂ ಪ್ರತೀತೇಃ ಓಂ

ಅವಿಶೇಷ ಎನ್ನುವುದು ಪೂರ್ವಪಕ್ಷಯುಕ್ತಿ. ಛಾಂದೋಗ್ಯದಲ್ಲಿರುವ ಜೀವ ಪ್ರಕರಣದಲ್ಲಿ ಒಂದು ಕಡೆಯಲ್ಲಿಯೂ 'ಭೂತಾನಿ ಗಚ್ಛಂತಿ' ಎಂದು ವಿಶೇಷ ವಚನವು ಶ್ರುತವಾಗಿಲ್ಲವಾದ್ದರಿಂದ ಜೀವನೊಂದಿಗೆ ಭೂತಗಳ ಗಮನವಿಲ್ಲ ಎಂದು ಪೂರ್ವಪಕ್ಷ.

ಅನುರೂಪತಾ ಎನ್ನುವುದು ಸಿದ್ಧಾಂತಯುಕ್ತಿ. 'ಅಥೈನಂ ಯಜಮಾನಂ ಕಿಂ ನ ಜಹಾತಿ ಭೂತಾನ್ಯೇವ ಭೂತೈಃ ಸಹ ಗಚ್ಛತಿ' ಎಂದು ಕೌಂತರವ್ಯಶ್ರುತಿಯಲ್ಲಿ ಸ್ಪಷ್ಟವಾಗಿ ಭೂತಗಳಿಗೆ ಜೀವನೊಂದಿಗೆ ಗಮನವನ್ನು ಹೇಳಿದೆ. ಅದು ಇಲ್ಲಿಯ ಪ್ರಸಂಗಕ್ಕೆ ಅನುರೂಪವಾಗಿದ್ದು ಸಮಾಖ್ಯಾ ರೂಪದಿಂದ ಪ್ರಕರಣದ ಅರ್ಥಕ್ಕೆ

ನಿರ್ಣಾಯಕವಾಗಿದೆ. ಆದಕಾರಣ ಭೂತಗಳಿಗೆ ಸಹಗಮನವಿದೆ ಎಂದು ಸಿದ್ಧಾಂತ.

೭. ಭಾಕ್ತಾಧಿಕರಣ: ಓಂ ಭಾಕ್ತಂ ವಾ ಅನಾತ್ಮವಿತ್ವಾತ್ ತಥಾ ಹಿ ದರ್ಶಯತಿ ಓಂ

ವಿಶೇಷವು ಪೂರ್ವಪಕ್ಷಯುಕ್ತಿ. "ಅಪಾಮ ಸೋಮಮಮೃತಾ ಅಭೂಮ" ಎಂದು ಸೋಮರಸ ಪಾನವೆಂಬ ಕರ್ಮದಿಂದ ಮುಕ್ತಿಯನ್ನು ಹೇಳುವ ವಿಶೇಷ ವಚನವಿರುವುದರಿಂದ ಕರ್ಮದಿಂದಲೇ ಮೋಕ್ಷ ಎಂದು ಪೂರ್ವಪಕ್ಷ.

ಯೋಗ್ಯತಾ ಎನ್ನುವುದು ಸಿದ್ಧಾಂತ ಯುಕ್ತಿ. "ನಾನ್ಯಃ ಪಂಥಾ ಅಯನಾಯ ವಿದ್ಯತೇ" ಎಂಬ ಶ್ರುತಿಯು ಮುಕ್ತಿಗೆ ಜ್ಞಾನಾತಿರಿಕ್ತ ಸಾಧನವನ್ನು ನಿರಾಕರಿಸಿದೆ. "ಯಾವದ್ ಇಂದ್ರೋ ಯಾವನ್ಮನುಃ" ಇತ್ಯಾದಿ ಶ್ರುತಿಯು ಕರ್ಮದಿಂದ ಬರುವ ಅಮೃತತ್ವಕ್ಕೆ ಕಾಲದ ಮಿತಿಯನ್ನೂ ಹೇಳುತ್ತದೆ. ಆದ್ದರಿಂದ ಇಲ್ಲಿ ಅಮೃತತ್ವ ಎನ್ನುವುದರಿಂದ ಕರ್ಮಕ್ಕೆ ಯೋಗ್ಯವಾದ ಬಹುಕಾಲ ಇರುವ ಸ್ಥಾಯಿತ್ವವನ್ನೇ ಗ್ರಹಿಸಬೇಕು ಹೊರತು ಮುಖ್ಯಮುಕ್ತಿಯನ್ನಲ್ಲ ಎಂದು ಸಿದ್ಧಾಂತ.

೮.ಕೃತಾತ್ಯಯಾಧಿಕರಣ: ಓಂ ಕೃತಾತ್ಯಯೇಽನುಶಯವಾನ್ ದೃಷ್ಟಸ್ಮೃತಿಭ್ಯಾಂ ಓಂ

ಸಹಭಾವವು ಪೂರ್ವಪಕ್ಷಯುಕ್ತಿ. ಜೀವನು ಸ್ವರ್ಗಕ್ಕೆ ಹೋಗುವಾಗ ಕರ್ಮ ಶೇಷವೂ ಜೊತೆಯಲ್ಲಿಯೇ ಇದ್ದು ಅಲ್ಲಿ ಅದರ ಫಲವನ್ನು ಭೋಗಿಸುವುದರಿಂದ ಕರ್ಮಕ್ಷಯವು ಆಗುವುದು. ಅಲ್ಲಿ ಕರ್ಮಕ್ಕೆ ಬೀಜವಾದ ಸಂಸಾರವು ಇಲ್ಲದಿರುವ ಪ್ರಯುಕ್ತ ಮಕ್ತಿಯು ತನ್ನಷ್ಟಕ್ಕೇ ಆಗುತ್ತದೆ ಎಂದು ಪೂರ್ವಪಕ್ಷ.

ಯೋಗ್ಯತಾ ಎನ್ನುವುದು ಸಿದ್ಧಾಂತಯುಕ್ತಿ. "ಭುಕ್ತಶೇಷಾನುಶಯವಾನ್ ಇಮಂ ಪ್ರಾಪ್ಯ ಭುವಂ" ಎಂಬ ಸ್ಮೃತಿಯಲ್ಲಿ ಜೀವನು ಕರ್ಮಫಲವನ್ನು ಅನುಭವಿಸಿ ಕರ್ಮಶೇಷದೊಂದಿಗೆ ಭೂಮಿಗೆ ಬರುತ್ತಾನೆ ಎಂದು ಹೇಳಿರುವುದರಿಂದ ಯಥಾ ಯೋಗ್ಯವಾಗಿ ಕರ್ಮಕ್ಷಯವು. ಎಲ್ಲ ಕರ್ಮಗಳೂ ತನ್ನಷ್ಟಕ್ಕೇ ಕ್ಷಯಿಸುವುದಿಲ್ಲ ಎಂದು ಸಿದ್ಧಾಂತ.

೯. ಯಥೇತಾಧಿಕರಣ: ಓಂ ಯಥೇತಮನೇವಂ ಚ ಓಂ

ಸಹಭಾವವು ಪೂರ್ವಪಕ್ಷಯುಕ್ತಿ. ಸ್ವರ್ಗದಿಂದ ಮರಳಿ ಭೂಮಿಗೆ ಬರುವ ಜೀವನು ಹೋದ ಮಾರ್ಗದಲ್ಲಿಯೇ ಬರುತ್ತಾನೆ. ಆ ಮಾರ್ಗದ ಸಂಸ್ಕಾರವು ಮನಸ್ಸಿನಲ್ಲಿಯೇ ಇರುವುದರಿಂದ ತತ್ಸಂಬಂಧಿಯಾದ ಕ್ಲೇಶವು ಆಗುವುದಿಲ್ಲ. ಆದಕಾರಣ ಸ್ವರ್ಗಸಾಧನವಾದ ಕರ್ಮದಲ್ಲಿ ವೈರಾಗ್ಯಾದಿಗಳು ಏಕೆ ಎಂದು ಪೂರ್ವಪಕ್ಷ.

ಯೋಗ್ಯತಾವು ಸಿದ್ಧಾಂತಯುಕ್ತಿ. 'ಧೂಮಾದಭ್ರಂ' ಎನ್ನುವ ಶ್ರುತಿಯು ಆಕಾಶದವರೆಗೆ ಮಾತ್ರ ಹೋದ ಮಾರ್ಗದಲ್ಲಿ ಆಗಮನವನ್ನು ಹೇಳುತ್ತದೆ. ಅಲ್ಲಿಂದ ಕೆಳಗೆ ಬರುವಾಗ ಮಾರ್ಗವು ಯಥಾಯೋಗ್ಯವಾಗಿ ಬೇರೆಯಾಗುವದಿರಿಂದ ಕ್ಲೇಶವು

ಇದ್ದೇ ಇರುವುದು. ಆದ್ದರಿಂದ ವೈರಾಗ್ಯಾದಿ ಸಾಧನವು ಅವಶ್ಯಕವೆಂದು ಸಿದ್ಧಾಂತ.

೧೦. ಚರಣಾಧಿಕರಣ: ಓಂ ಚರಣಾದಿತಿ ಚೇನ್ನ ತದುಪಲಕ್ಷಣಾರ್ಥೇತಿ ಕಾರ್ಷ್ಣಾಜಿನಿಃ ಓಂ

ಸಹಭಾವವು ಪೂರ್ವಪಕ್ಷಯುಕ್ತಿ. "ರಮಣೀಯ ಚರಣಾಃ ರಮಣೀಯ ಯೋನಿಮಾಪದ್ಯಂತೇ" ಎಂಬ ಶ್ರುತಿಯ ಪ್ರಕಾರ ಗಮನಾಗಮನವು ಆಚಾರದ ಫಲವೇ ಹೊರತು ಯಜ್ಞಾದಿ ಕರ್ಮಫಲವಲ್ಲ. ಕರ್ಮಕ್ಕೂ ಆಚಾರಕ್ಕೂ ಸಹಭಾವ ವಿರುವುದರಿಂದ ಆಚಾರದ ಫಲವೇ ಆದ ಗಮನಾಗಮನವು ಕರ್ಮದ ಫಲವೆಂದು ಭ್ರಮಿಸಲ್ಪಟ್ಟಿದೆ ಎಂದು ಪೂರ್ವಪಕ್ಷ.

ಯೋಗ್ಯತಾ ಎನ್ನುವುದು ಸಿದ್ಧಾಂತಯುಕ್ತಿ. 'ನಾನ್ಯ ಪಂಥಾಃ' ಎಂದು ಶ್ರುತಿಯು ಮೋಕ್ಷಕ್ಕೆ ಜ್ಞಾನಾತಿರಿಕ್ತ ಮಾರ್ಗವನ್ನು ನಿರಾಕರಿಸುವುದರಿಂದ, ರಮಣೀಯ ಚರಣಾಃ ಎನ್ನುವಲ್ಲಿ ಚರಣ ಎಂಬ ಪದದಿಂದ ಆಚಾರ ಮತ್ತು ಕರ್ಮ ಎರಡನ್ನೂ ಗ್ರಹಿಸುವುದೇ ಯೋಗ್ಯವು. ಆಚಾರ–ಕರ್ಮಗಳೆರಡೂ ಪುನರಾವೃತ್ತಿರೂಪ ಫಲಕ್ಕೆ ಕಾರಣವಾದ್ದರಿಂದ, ಕರ್ಮದಲ್ಲಿ ವೈರಾಗ್ಯವನ್ನು ಹೊಂದಬೇಕೆಂದು ಸಿದ್ಧಾಂತ.

೧೧. ಅನಿಷ್ಟಾಧಿಕರಣ: ಓಂ ಅನಿಷ್ಟಾಧಿಕಾರಿಣಾಮಪಿ ಚ ಶ್ರುತಮ್ ಓಂ

ವಿಮಿಶ್ರತಾ ಎನ್ನುವುದು ಪೂರ್ವಪಕ್ಷಯುಕ್ತಿ. ಯಾಗಾದಿ ಪುಣ್ಯಕರ್ಮವನ್ನು ಮಾಡುವವರ ಬುದ್ಧಿಯು ದೋಷಾದಿಗಳ ಭಯ, ಫಲೇಚ್ಛೆ ಇವುಗಳಿಂದ ವಿಮಿಶ್ರಿತವಾಗಿರುತ್ತದೆ. "ಬಿಭ್ಯತ್ ಪತತಿ ಪಾದಪಾತ್" ಎಂಬ ಯುಕ್ತಿಯಂತೆ ಭಯಾದಿಗಳು ಸಂಸಾರಕ್ಕೆ ಕಾರಣವಾಗುತ್ತವೆ. ಆದರೆ ಪಾಪಕರ್ಮವನ್ನು ಮಾಡುವ ಅಜ್ಞಾನಿಗಳಿಗೆ ಪಾಪದ ಭಯ, ಪಾಪಫಲವನ್ನು ಭೋಗಿಸಬೇಕೆಂಬ ಇಚ್ಛೆ ಇತ್ಯಾದಿ ವಿಮಿಶ್ರವಾದ ಬುದ್ಧಿಯ ಅಭಾವದಿಂದಾಗಿ ಅವರಿಗೆ ಸಂಸಾರವಿಲ್ಲ. ಆದಕಾರಣ ವೈರಾಗ್ಯಾದಿ ಸಾಧನೆ ಅವಶ್ಯವಿಲ್ಲ ಎಂದು ಪೂರ್ವಪಕ್ಷ.

ಬಲವತ್ತ್ವವು ಸಿದ್ಧಾಂತಯುಕ್ತಿ. ಪಾಪಮಾಡಿದವನಿಗೆ "ಸರ್ವೇ ವಾ ಏತೇ ಅಶುಭ ಕೃತಃ ಸಂಯಮನೇ ಪ್ರಪತಂತಿ" ಎಂಬ ಶ್ರುತಿಯಲ್ಲಿ ಪಾಪಿಗಳು ನರಕದಲ್ಲಿ ಬೀಳುತ್ತಾರೆ ಎಂಬ ಪ್ರಬಲವಾದ ಅನರ್ಥವು ಹೇಳಿರುವುದರಿಂದ ವೈರಾಗ್ಯಾದಿಗಳು ಅವಶ್ಯಕ ಎಂದು ಸಿದ್ಧಾಂತ.

೧೨. ಅಪಿ ಸಪ್ತಾಧಿಕರಣ: ಓಂ ಅಪಿ ಸಪ್ತ ಓಂ

ವಿರುದ್ಧೋಕ್ತಿಯು ಪೂರ್ವಪಕ್ಷ. "ಯಾವದಿಂದ್ರಾಶ್ಚತುರ್ದಶ ಚಕಾರ ನರಕಂ ಶೂನ್ಯಂ" ಇತ್ಯಾದಿ ಶ್ರುತಿಯಲ್ಲಿ ನರಕಕ್ಕೆ ಅನಿತ್ಯತ್ವವು ಉಕ್ತವಾಗಿದೆ. "ತಾಮಿಸ್ರಶ್ಚ ಅಂಧತಾಮಿಸ್ರಃ ದ್ವೌ ನಿತ್ಯೌ" ಎಂಬುದು ವಿರುದ್ಧೋಕ್ತಿಯು. ನಿತ್ಯನರಕವೇ ಇಲ್ಲವಾದ್ದರಿಂದ ವೈರಾಗ್ಯಾದಿ ಸಾಧನೆ ಅವಶ್ಯವಿಲ್ಲ ಎಂದು ಪೂರ್ವಪಕ್ಷ.

ವಿಭಾಗಃ ಎನ್ನುವುದು ಸಿದ್ಧಾಂತಯುಕ್ತಿ. "ರೌರವೋಽಥ ಮಹಾಂಶ್ಚೈವ ವಹ್ನಿ

ವೈತರಣೀ ತಥಾ। ಕುಂಭೀಪಾಕ ಇತಿ ಪ್ರೋಕ್ತಾನ್ಯನಿತ್ಯ ನರಕಾಣಿ ತು। ತಾಮಿಸ್ರ ಶ್ಚಾಂಧತಾಮಿಸ್ರಃ ದ್ವೌ ನಿತ್ಯೌ ಸಂಪ್ರಕೀರ್ತಿತೌ'' ಎಂಬ ಶ್ರುತಿಯಲ್ಲಿ ನರಕಗಳನ್ನು ನಿತ್ಯ ಅನಿತ್ಯಗಳೆಂದು ವಿಭಾಗ ಮಾಡಿರುವುದರಿಂದ ನಿತ್ಯನರಕವನ್ನು ಒಪ್ಪಲು ವಿರೋಧವಿಲ್ಲ. ಆದ್ದರಿಂದ ನಿತ್ಯನರಕದಿಂದ ತಪ್ಪಿಸಿಕೊಳ್ಳಲು ವೈರಾಗ್ಯಾದಿ ಸಾಧನೆ ಅವಶ್ಯಕ ಎಂದು ಸಿದ್ಧಾಂತ.

೧೩. ತತ್ರಾಪ್ಯಧಿಕರಣ: ಓಂ ತತ್ರಾಪಿ ಚ ತದ್ವ್ಯಾಪಾರಾದವಿರೋಧಃ ಓಂ

ಸಹಸ್ಥಾನವು ಪೂರ್ವಪಕ್ಷಯುಕ್ತಿ. "ಸರ್ವಂ ನಿಯಮಯತಿ" ಎಂಬ ಶ್ರುತಿಯ ಬಲದಿಂದ ನರಕದಲ್ಲಿನ ಜೀವರನ್ನು ನಿಯಮನ ಮಾಡುವುದಕ್ಕಾಗಿ ಈಶ್ವರನೂ ನರಕದಲ್ಲಿ ಇರಬೇಕಾಗುವುದು. ಆದಕಾರಣ ಅವನಿಗೂ ನರಕದಲ್ಲಿನ ದುಃಖಾದಿ ಭೋಗವು ಆಗಬೇಕಾಗುವುದು. ಆದ್ದರಿಂದ ನರಕದಲ್ಲಿ ಕೇವಲ ದುಃಖದ ಸಾಕ್ಷಾತ್ಕಾರವೇ ಹೊರತು ತತ್ಪರಿಣಾಮ ನೀಚತ್ವಾದಿಗಳ ಪ್ರಾಪ್ತಿಯಿರುವುದಿಲ್ಲ. ಆದ್ದರಿಂದ ಪಾಪಕರ್ಮಗಳಲ್ಲಿ ವೈರಾಗ್ಯವನ್ನು ಹೊಂದಬೇಕಿಲ್ಲ ಎಂದು ಪೂರ್ವಪಕ್ಷ.

ಕಾರಣಾಭವವು ಸಿದ್ಧಾಂತಯುಕ್ತಿ. ನರಕದಲ್ಲಿ ಜೀವನೊಂದಿಗೇ ಈಶ್ವರನು ಇದ್ದರೂ, ಅವನು ಸ್ವತಂತ್ರನಾದ ಪ್ರಯುಕ್ತ ನೀಚತ್ವಾದಿಗಳಿಗೆ ಕಾರಣವಾದ ಪಾಪಾದಿಗಳು ಅವನಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಅವನಿಗೆ ನೀಚತ್ವ ರೂಪವಾದ ದುಃಖಾದಿ ಭೋಗವು ಇಲ್ಲ. ಜೀವನು ಅಸ್ವತಂತ್ರನಾದ ಪ್ರಯುಕ್ತ ಪಾಪಕರ್ಮ ನಿಮಿತ್ತಕವಾದ ನೀಚತ್ವರೂಪವಾದ ಭೋಗವು ಇರುವುದು. ಆದಕಾರಣ ವೈರಾಗ್ಯಾದಿಗಳು ಅವಶ್ಯಕ ಎಂದು ಸಿದ್ಧಾಂತ.

೧೪. ವಿದ್ಯಾಧಿಕರಣ: ಓಂ ವಿದ್ಯಾಕರ್ಮಣೋರಿತಿ ತು ಪ್ರಕೃತತ್ವಾತ್ ಓಂ

ಸಹಸ್ಥಾನವು ಪೂರ್ವಪಕ್ಷಯುಕ್ತಿ. 'ತದ್ಯ ಇತ್ಥಂ ವಿದುಃ..... ತೇಽರ್ಚಿಷಮಭಿ ಸಂಭವಂತಿ। ಅಥ ಯ ಇಮೇ ಗ್ರಾಮೇ ಇಷ್ಟಾಪೂರ್ತೇ ದತ್ತಮಿತ್ಯುಪಾಸತೇ ತೇ ಧೂಮಮಭಿಸಂಭವಂತಿ.....। ಅಥ ಏತಯೋಃ ಪಥೋರ್ನ ಕತರೇಣ ಚ ತಾನೀಮಾನಿ ಕ್ಷುದ್ರಮಿಶ್ರಾಣಿ ಅಸಕೃದಾವರ್ತೀನಿ ಭೂತಾನಿ ಭವಂತಿ' ಇತ್ಯಾದಿ ಶ್ರುತಿಯಲ್ಲಿ ಯಾರು ವಿದ್ಯಾರೂಪ ಸಾಧನದಲ್ಲಿ ತೊಡಗುತ್ತಾರೋ ಅವರು ಅರ್ಚಿರಾದಿ ಮಾರ್ಗದಿಂದ ಮುಕ್ತಿಯನ್ನು ಹೊಂದುತ್ತಾರೆ. ಯಾರು ಯಜ್ಞ ಯಾಗಾದಿ ಕಾಮ್ಯಕರ್ಮದಲ್ಲಿ ತೊಡಗುತ್ತಾರೋ ಅವರು ಚಂದ್ರಲೋಕಕ್ಕೆ ಹೋಗಿ ಹಿಂದಿರುಗುತ್ತಾರೆ. ಯಾರು ಈ ಎರಡು ಮಾರ್ಗದಲ್ಲಿಯೂ ಹೋಗುವುದಿಲ್ಲವೋ ಅವರು ದುಃಖಿಗಳಾಗಿ ಮತ್ತೆ ಮತ್ತೆ ಹುಟ್ಟುಸಾವುಗಳನ್ನು ಪಡೆಯುತ್ತಾರೆ. ಹೀಗೆ ಶ್ರುತಿಯಲ್ಲಿ ಸಾಧನದ ಜೊತೆಯಲ್ಲಿಯೇ ಫಲವನ್ನು ನಿರ್ದೇಶ ಮಾಡಿರುವುದರಿಂದ ಸಾಧನದಲ್ಲಿದ್ದಂತೆಯೇ ಫಲದಲ್ಲಿಯೂ ಸ್ವಾತಂತ್ರ್ಯವನ್ನು ಒಪ್ಪಬೇಕು. ಆದಕಾರಣ ಕಾಮ್ಯಕರ್ಮದಲ್ಲಿ ವೈರಾಗ್ಯರೂಪ ಸಾಧನದ ಅವಶ್ಯಕತೆಯಿಲ್ಲ ಎಂದು ಪೂರ್ವಪಕ್ಷ.

ಕಾರಣಾಭವವು ಸಿದ್ಧಾಂತಯುಕ್ತಿ. ವಿದ್ಯಾ ಮತ್ತು ಕರ್ಮಗಳಲ್ಲಿ 'ಆತ್ಮಾನಮು ಪಾಸೀತ' 'ಜ್ಯೋತಿಷ್ಟೋಮೇನ ಯಜೇತ' ಇತ್ಯಾದಿ ವಿಧಿರೂಪವಾದ ಕಾರಣವು ಇರುವುದರಿಂದ ವಿದ್ಯಾ ಕರ್ಮರೂಪವಾದ ಸಾಧನದಲ್ಲಿ ಭಗವದತ್ತವಾದ ಸ್ವಾತಂತ್ರವಿದೆ. ಆದರೆ ಫಲದಲ್ಲಿ ವಿಧಿರೂಪವಾದ ಕಾರಣವಿಲ್ಲವಾದ್ದರಿಂದ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಕಾಮ್ಯಕರ್ಮಗಳಲ್ಲಿ ವೈರಾಗ್ಯವು ಅವಶ್ಯಕವೆಂದು ಸಿದ್ಧಾಂತ.

೧೫. ನ ತೃತೀಯಾಧಿಕರಣ: ಓಂ ನ ತೃತೀಯೇ ತಥೋಪಲಬ್ಧೇಃ ಓಂ

ಸಹಸ್ಥಾನವು ಪೂರ್ವಪಕ್ಷಯುಕ್ತಿ. "ಯತ್ರ ದುಃಖಂ ಸುಖಂ ತತ್ರ" ಎಂಬ ಸ್ಮೃತಿಯ ಪ್ರಕಾರ ಸುಖದುಃಖಗಳಿಗೆ ಸಹಭಾವವಿರುವುದರಿಂದ ಅಂಧಂತಮಸ್ಸಿ. ನಲ್ಲಿಯೂ ಸುಖವು ಕೂಡುವುದು. ಆದ್ದರಿಂದ ವೈರಾಗ್ಯವು ಬೇಕಾಗಿಲ್ಲ ಎಂದು ಪೂರ್ವಪಕ್ಷ.

ಕಾರಣಾಭಾವವು ಸಿದ್ಧಾಂತಯುಕ್ತಿ. ಅಂಧಂತಮಸ್ಸಿನಲ್ಲಿ ಬಿದ್ದವನು ಭಗವಂತನಿಗೆ ಸರ್ವಥಾ ಅಪ್ರಿಯನಾದ್ದರಿಂದ ಅವನಿಗೆ ಭಗವಂತನು ಸುಖವನ್ನು ನೀಡುವುದಿಲ್ಲ. ಆದ್ದರಿಂದ ತಮಸ್ಸಿಗೆ ಸಾಧನವಾದ ದ್ವೇಷಾದಿಗಳಲ್ಲಿ ವೈರಾಗ್ಯವು ಅವಶ್ಯಕ ಎಂದು ಸಿದ್ಧಾಂತ.

೧೬. ತತ್ಸ್ವಭಾವ್ಯಾಧಿಕರಣ: ಓಂ ತತ್ಸ್ವಭಾವ್ಯಾಪತ್ತಿರುಪಪತ್ತೇಃ ಓಂ

ಸಹಸ್ಥಾನವು ಪೂರ್ವಪಕ್ಷಯುಕ್ತಿ. "ಧೂಮೋ ಭೂತ್ವಾ" ಇತ್ಯಾದಿ ಶ್ರುತಿಯು ಚಂದ್ರಲೋಕದಿಂದ ವಾಪಸ್ಸು ಬಂದ ಕಾಮ್ಯಕರ್ಮಿಯಾದ ಜೀವನಿಗೂ ಧೂಮಾದಿ ದೇವತೆಗಳಿಗೂ ಸಹಾವಸ್ಥಾನ ಹೇಳಿರುವುದರಿಂದ, ಆ ದೇವತೆಗಳು ಸ್ನೇಹದಿಂದ ತಮ್ಮ ಪದವನ್ನು ಅವನಿಗೆ ನೀಡುತ್ತಾರೆ. ಹೀಗೆ ಕಾಮ್ಯಕರ್ಮಿಗೂ ದೇವತಾಪದ ಪ್ರಾಪ್ತಿಯು ಇರುವುದು. ಅದು ಸುಖಹೇತುವಾದ್ದರಿಂದ ವೈರಾಗ್ಯದ ಅವಶ್ಯಕತೆಯಿಲ್ಲ ಎಂದು ಪೂರ್ವಪಕ್ಷ.

ಕಾರಣಾಭಾವವು ಸಿದ್ಧಾಂತಯುಕ್ತಿ. ದೇವತಾಪದ ಪ್ರಾಪ್ತಿಯು ನಿಯತವಾದ ಅಧಿಕಾರಿಗಳಿಗೆ ಮಾತ್ರ. ಅದಕ್ಕೆ ಅವರ ವಿದ್ಯೆಯೇ ಕಾರಣ. ಯೋಗ್ಯವಾದ ವಿದ್ಯೆ ಇಲ್ಲದವರಿಗೆ ದೇವತಾಪದದ ಪ್ರಾಪ್ತಿಯಿಲ್ಲ. ಧೂಮೋ ಭೂತ್ವಾ ಇತ್ಯಾದಿಗಳಿಗೆ ದೇವತೆಗಳೊಂದಿಗೆ ಗಮನಾಗಮನವೆಂದಷ್ಟೇ ಅರ್ಥವು, ಪದಪ್ರಾಪ್ತಿಯೆಂದಲ್ಲ. ಆದ್ದರಿಂದ ಕಾಮ್ಯಕರ್ಮಗಳಲ್ಲಿ ವೈರಾಗ್ಯವು ಅವಶ್ಯಕ ಎಂದು ಸಿದ್ಧಾಂತ.

೧೭. ನಾತಿಚಿರೇಣಾಧಿಕರಣ: ಓಂ ನಾತಿಚಿರೇಣ ವಿಶೇಷಾತ್ ಓಂ

ಸಹಸ್ಥಾನವು ಪೂರ್ವಪಕ್ಷಯುಕ್ತಿ. ಕಾಮ್ಯಕರ್ಮಿಯು ಭುವಿಗೆ ಹಿಂತಿರುಗುವಾಗ ಮಾರ್ಗಮಧ್ಯದಲ್ಲಿ ಬೇರೆ ಬೇರೆ ದೇವತೆಗಳೊಂದಿಗೆ ಚಿರಕಾಲ ನೆಲೆಸುವುದರಿಂದ,

ಅವನಿಗೆ ಸುಖಪ್ರಾಪ್ತಿಯಿರುವುದು. ಅಂದಮೇಲೆ ಕಾಮ್ಯಕರ್ಮದಲ್ಲಿ ವೈರಾಗ್ಯವೇಕೆ ಎಂದು ಪೂರ್ವಪಕ್ಷ.

ಕಾರಣಾಭಾವವು ಸಿದ್ಧಾಂತಯುಕ್ತಿ. "ವತ್ಸರಾತ್ ಪೂರ್ವಮೇವ ತು" ಎಂದು ಪ್ರಮಾಣವಿರುವುದರಿಂದ ಕ್ಲೃಪ್ತವಾದ ಸಮಯಕ್ಕಿಂತ ಹೆಚ್ಚು ಕಾಲ ಮಾರ್ಗ ಮಧ್ಯದಲ್ಲಿರಲು ಕಾರಣವಿಲ್ಲ. ಆದ್ದರಿಂದ ಚಿರಕಾಲದ ಸುಖಪ್ರಾಪ್ತಿಯೂ ಇಲ್ಲ. ಆದಕಾರಣ ಕಾಮ್ಯಕರ್ಮದಲ್ಲಿ ವೈರಾಗ್ಯವು ಅವಶ್ಯಕವೆಂದು ಸಿದ್ಧಾಂತ.

೧೮. ಅನ್ಯಾಧಿಕರಣ: ಓಂ ಅನ್ಯಾಧಿಷ್ಠಿತೇ ಪೂರ್ವವದಭಿಲಾಪಾತ್ ಓಂ

ಸಹಸ್ಥಾನವು ಪೂರ್ವಪಕ್ಷಯುಕ್ತಿ. "ತ ಇಹ ವ್ರೀಹಿಯವಾಃ ಓಷಧಿ ವನಸ್ಪತಯೋ ಜಾಯಂತೇ" ಇತ್ಯಾದಿ ಶ್ರುತಿಗಳಿಂದ ಕಾಮ್ಯಕರ್ಮಿಗಳಿಗೆ ಧಾನ್ಯಾದಿ ಗಳೊಂದಿಗೆ ಸಹಸ್ಥಾನವು ಕಂಡಿದೆ. ಆದ್ದರಿಂದ ಧಾನ್ಯಾದಿಗಳ ಛೇದನಾದಿಗಳಿಂದ ಅವುಗಳಲ್ಲಿರುವ ಜೀವನಿಗೂ ದುಃಖವು ಉಂಟಾಗುವುದು. ವೇದೋಕ್ತವಾದ ಯಾಗಾದಿಗಳ ಫಲವು ಗಮನಾಗಮನಾದಿಗಳು ಎಂದು ಸಿದ್ಧವಾಗಿದೆ. ಹೀಗೆ ವೇದೋಕ್ತವಾದ ಕರ್ಮಗಳಿಂದ ದುಃಖ ಬರುವುದಾದರೆ ವೇದೋಕ್ತವಾದ ವೈರಾಗ್ಯಾದಿಗಳಿಂದಲೂ ದುಃಖವು ಏಕೆ ಆಗಬಾರದು. ಆದ್ದರಿಂದ ವೈರಾಗ್ಯವು ಅವಶ್ಯಕವಲ್ಲ ಎಂದು ಪೂರ್ವಪಕ್ಷ.

ಕಾರಣಾಭಾವವು ಸಿದ್ಧಾಂತಯುಕ್ತಿ. ಕಾಮ್ಯಕರ್ಮಿಯು ಧಾನ್ಯಾದಿಗಳಲ್ಲಿ ಇದ್ದರೂ ದುಃಖಕ್ಕೆ ಕಾರಣವಾದ ಪಾಪವು ಇಲ್ಲದಿರುವುದರಿಂದ ಛೇದನಾದಿಗಳಿಂದ ಕಾಮ್ಯಕರ್ಮಿಗೆ ದುಃಖ ಭೋಗವಾಗುವುದಿಲ್ಲ. ಸ್ವರ್ಗಸುಖಕ್ಕಾಗಿ ಯಾಗಾದಿಗಳನ್ನು ವಿಧಿಸಿದ ವೇದದ ಬಗ್ಗೆ ಅವಿಶ್ವಾಸ ಮೂಡುವುದಿಲ್ಲ. ಆದ್ದರಿಂದ ವೈರಾಗ್ಯ ವಿಧಾಯಕ ವೇದವಾಕ್ಯವು ವಿಶ್ವಾಸಾರ್ಹವೇ ಆಗಿದೆ. ಆದಕಾರಣ ಕಾಮ್ಯಕರ್ಮದಲ್ಲಿ ವೈರಾಗ್ಯವು ಅವಶ್ಯಕವೆಂದು ಸಿದ್ಧಾಂತ.

೧೯. ರೇತೋಧಿಕರಣ : ಓಂ ರೇತಸ್ಸಿಗ್ಯೋಗೋಽಥ ಓಂ

ವೈಯರ್ಥ್ಯವು ಪೂರ್ವಪಕ್ಷಯುಕ್ತಿ. ಕರ್ಮಿಯು ತಂದೆಯೊಳಗೆ ಪ್ರವೇಶಿಸದೆ ನೇರವಾಗಿ ತಾಯಿಯ ಉದರವನ್ನು ಪ್ರವೇಶಿಸುವ ಸಂಭವವಿರುವಾಗ ಪಿತೃಪ್ರವೇಶ ವ್ಯರ್ಥ. ಆದಕಾರಣ ಮಹಾ ಆಯಾಸವೇನೂ ಇಲ್ಲವಾದ್ದರಿಂದ ಕರ್ಮದಲ್ಲಿ ವೈರಾಗ್ಯ ಬೇಕಾಗಿಲ್ಲ ಎಂದು ಪೂರ್ವಪಕ್ಷ.

ಕ್ಲೃಪ್ತಿಯು ಸಿದ್ಧಾಂತಯುಕ್ತಿ. "ಈಶಕ್ಲೃಪ್ತ್ಯೈವ ಪಿತರಂ ಪ್ರವಿಶ್ಯಾಯಾತಿ ಮಾತರಂ" ಎಂಬ ಪ್ರಮಾಣದಂತೆ ಭಗವಂತನ ಸಂಕಲ್ಪಕ್ಕೆ ಅನುಗುಣವಾಗಿ ಜೀವನು ಪಿತೃಪ್ರವೇಶ ಮಾಡಿಯೇ ತಾಯಿಯ ಉದರವನ್ನು ಪ್ರವೇಶಿಸುತ್ತಾನೆ. ಆದಕಾರಣ ಆಯಾಸವಿದ್ದೇ ಇರುವುದು. ಆದ್ದರಿಂದ ಪುನಃ ಪುನಃ ಜನ್ಮಕ್ಕೆ ಕಾರಣವಾಗುವ ಕಾಮ್ಯಕರ್ಮದಲ್ಲಿ ವೈರಾಗ್ಯವನ್ನು ತಾಳಬೇಕು ಎಂದು ಸಿದ್ಧಾಂತ.

೨೦. ಯೋನ್ಯಧಿಕರಣ: ಓಂ ಯೋನೇಃ ಶರೀರಂ ಓಂ

ಅನ್ಯಥಾಗತಿಯು ಪೂರ್ವಪಕ್ಷಯುಕ್ತಿ. ಪಿತೃದ್ವಾರಾ ಮಾತೃಯೋನಿಯನ್ನು ಪ್ರವೇಶ ಮಾಡಿಯೇ ಜೀವನು ಶರೀರ ಹೊಂದುತ್ತಾನೆ ಎಂಬ ನಿಯಮವಿಲ್ಲ. ಆಹಾರ ದ್ವಾರಾ ಬೇರೆ ರೀತಿಯಲ್ಲಿಯೂ ಮಾತೃಗರ್ಭಕ್ಕೆ ಪ್ರವೇಶವು ಸಂಭವವಿರುವ ಪ್ರಯುಕ್ತ ಯೋನಿಪ್ರವೇಶವು ವ್ಯರ್ಥವಾದ್ದರಿಂದ ಮಹಾ ಆಯಾಸವಿಲ್ಲ. ಆದ್ದರಿಂದ ಕಾಮ್ಯಕರ್ಮದಲ್ಲಿ ವೈರಾಗ್ಯಕ್ಕೆ ಕಾರಣವಿಲ್ಲ ಎಂದು ಪೂರ್ವಪಕ್ಷ.

ಅನ್ಯಾಗತಿಯು ಸಿದ್ಧಾಂತಯುಕ್ತಿ. ಯೋನಿ ಪ್ರವೇಶದ ಹೊರತು ಬೇರೆ ರೀತಿಯಿಂದ ಮಾತೃಗರ್ಭಕ್ಕೆ ಪ್ರವೇಶವೇ ಇಲ್ಲ. 'ಯೋನಿ ದ್ವಾರೇಣ ದೇಹಂ ಚ ಪ್ರಾಪ್ನೋತಿ ಪ್ರಾಯಶೋ ನರಃ' ಎಂದು ಪ್ರಮಾಣವಿದೆ. ಯೋನಿಪ್ರವೇಶವಿಲ್ಲದೆ ಜನ್ಮವು ಕೇವಲ ಮಹಾತ್ಮರಿಗೆ ಹೊರತು ಸಾಮಾನ್ಯರಿಗಲ್ಲ. ಆದ್ದರಿಂದ ಕಾಮ್ಯಕರ್ಮದಲ್ಲಿ ವೈರಾಗ್ಯವು ಅವಶ್ಯಕ ಎಂದು ಸಿದ್ಧಾಂತ.

ಯೋನ್ಯಧಿಕರಣಮ್

ಓಂ ಯೋನೇಃ ಶರೀರಂ ಓಂ

ಈ ಸೂತ್ರವನ್ನು ಭಾಷ್ಯದಲ್ಲಿ ಹೀಗೆ ವ್ಯಾಖ್ಯಾನಿಸಲಾಗಿದೆ – ಸ್ವರ್ಗದಿಂದ ಕೆಳಗಿಳಿದ ಜೀವನು ಮಳೆಯ ನೀರಿನ ಮೂಲಕ ಧಾನ್ಯಾದಿಗಳ ಬೀಜಗಳಲ್ಲಿ ಸೇರಿಕೊಂಡು ಅಲ್ಲಿಂದ ಪುರುಷನ ರೇತಸ್ಸನ್ನು ಪ್ರವೇಶಿಸುತ್ತಾನೆ. ಈ ರೇತಸ್ಸಿನ ಮೂಲಕ ಮಾತೃಯೋನಿ ದ್ವಾರಾ ಗರ್ಭವನ್ನು ಪ್ರವೇಶಿಸಿ, ಕಲಲ ಬುದ್ಬುದಾದಿ ಕ್ರಮದಲ್ಲಿ ಉತ್ಪನ್ನವಾದ ಶರೀರವನ್ನು ಹೊಂದುತ್ತಾನೆಂಬುದು ಪ್ರಸಿದ್ಧವು. ಇದು ಸತ್ಯವಲ್ಲ ಎಂದು ಪೂರ್ವಪಕ್ಷ. ಏಕೆಂದರೆ ಮಾಂಧಾತೃ, ದ್ರೋಣ, ದ್ರುಪದ, ಕೃಪ, ಶುಕಾದಿಗಳಲ್ಲಿ ಬೀಜಾದಿ ಸಂಬಂಧವಿಲ್ಲದೆಯೇ ಜನನವು ಕಂಡಿದೆ. ಆದ್ದರಿಂದ ಜೀವನು ಪಿತೃದ್ವಾರಾ ಮಾತೃಯೋನಿಯನ್ನು ಪ್ರವೇಶಿಸಿ ಶರೀರವನ್ನು ಹೊಂದುತ್ತಾನೆಂದು ಹೇಳುವುದು ಯುಕ್ತವಲ್ಲ ಎಂದು ಪೂರ್ವಪಕ್ಷ. ಹಾಗೆ ಹೇಳಕೂಡದು. ಹಿಂದೆ ಹೇಳಿದ್ದೇ ಯುಕ್ತವೆಂದು ಸಿದ್ಧಾಂತ. "ಮೇಘೋ ಭೂತ್ವಾ ವರ್ಷತಿ। ತ ಇಹ ವ್ರೀಹಿಯವಾ ಓಷಧಯಸ್ತಿಲಾಮಾಷಾ ಇತಿ ಜಾಯಂತೇ। ಯೋ ಯೋ ಹ್ಯನ್ನಮತ್ತಿ। ಯೋ ವಾ ರೇತಃ ಸಿಂಚತಿ ತದ್ರೂಪಾದ್ ಭೂಯ ಏವ ಭವತಿ।" ಇತ್ಯಾದಿ ಶ್ರುತಿಗಳಿರುವುದರಿಂದ ಹಿಂದೆ ಹೇಳಿದ ರೀತಿಯಿಂದಲೇ ದೇಹೋತ್ಪತ್ತಿಯು ಸಾಮಾನ್ಯವಾಗಿ ಜೀವನಿಗೆ ಕಂಡುಬರುತ್ತದೆ. ಮಾಂಧಾತೃವೇ ಮುಂತಾದವರಲ್ಲಿ ಇದಕ್ಕೆ ವ್ಯತ್ಯಾಸವಾಗಿಯೂ ಜನನವು ಹೇಳಲ್ಪಟ್ಟಿದ್ದರೂ ಹಿಂದೆ ಹೇಳಿದ ಬೀಜಾದಿಗಳ ಸಂಬಂಧದಿಂದ ಜೀವನಿಗೆ ದೇಹೋತ್ಪತ್ತಿಯು ಅಯುಕ್ತವೆಂದು ಹೇಳಕೂಡದು. ಹೀಗೆ ಭಾಷ್ಯದಲ್ಲಿ ಮಾಡಿರುವ ವ್ಯಾಖ್ಯಾನವು ಸರಿಯಲ್ಲ. ಏಕೆಂದರೆ ಜೀವನ ಉತ್ಪತ್ತಿಗೆ ಬೀಜಾದಿ ಸಂಬಂಧವು ಸೂತ್ರದಲ್ಲಿ ಹೇಳಿಯೇ ಇಲ್ಲ.

ಹೀಗೆ ಆಶಂಕಿಸಿದರೆ ಅದನ್ನು 'ಬೀಜ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಬೀಜರೂಪಯೋನೀನಾಂ ಸಂಗಾತಿನಿಯಮೋಜ್ಝಿತಂ ।

ಅಥಶಬ್ದೇನ ಭಗವಾನಾಹ ಕಾರಣತಶ್ಚ ತಾಮ್ ॥೪॥

ಧಾನ್ಯಾದಿಗಳು, ರೇತಸ್ಸು, ಪುರುಷ, ಯೋನಿ ಇವುಗಳ ಸಂಬಂಧದಿಂದ ಜೀವನಿಗೆ ದೇಹೋತ್ಪತ್ತಿ ಎಂಬ ನಿಯಮಕ್ಕೆ ಕಲವು ವಿಶೇಷ ಸಂದರ್ಭಗಳಲ್ಲಿ ಅಭಾವವನ್ನು ಭಗವಾನ್ ವೇದವ್ಯಾಸರು 'ಓಂ ರೇತಸ್ಸಿಗ್ಯೋಗೋ೨ಥ ಓಂ' ಎಂಬ ಪೂರ್ವಸೂತ್ರದಲ್ಲಿನ ಅಥ ಶಬ್ದದಿಂದ ಹೇಳಿದರು. ಜ್ಞಾನ ತಪಸ್ಸು ಯೋಗಾದಿ ಕಾರಣ ವಿಶೇಷದಿಂದ ಬೀಜಾದಿ ಸಂಬಂಧವಿಲ್ಲದೆಯೇ ಶುಕಾದಿಗಳಲ್ಲಿ ಶರೀರದ ಉತ್ಪತ್ತಿಯು ಕೂಡುತ್ತದೆ ಎಂಬುದಾಗಿ ಕಾರಣವನ್ನೂ ಹೇಳಿದರು.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದನುವ್ಯಾಖ್ಯಾನೇ
ತೃತೀಯಾಧ್ಯಾಯಸ್ಯ ಪ್ರಥಮಃ ಪಾದಃ ॥

॥ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ಮೂರನೆಯ ಅಧ್ಯಾಯ ಮೊದಲನೆಯ ಪಾದದ ಶ್ರೀಮನ್ನ್ಯಾಯಸುಧಾನುಸಾರಿ ವಿವರಣೆ ಸಹಿತ ಕನ್ನಡಾನುವಾದವು ಮುಕ್ತಾಯವಾಯಿತು॥

* * *

ತೃತೀಯ ಅಧ್ಯಾಯ ಎರಡನೆಯ ಪಾದ

ಈ ಪಾದದಲ್ಲಿ ಭಕ್ತಿಯ ವಿಚಾರವು ಮಾಡಲ್ಪಡುತ್ತದೆ. ಭಾಷ್ಯದಲ್ಲಿ ಹೇಳಿರುವ ಪ್ರಕಾರ ಭಗವನ್ಮಹಿಮೋಕ್ತಿಯ ದ್ವಾರಾ ಸಾಧಕನಲ್ಲಿ ಭಕ್ತಿಯನ್ನು ಹುಟ್ಟಿಸುವುದಕ್ಕಾಗಿ ಈ ಪಾದವು ಪ್ರವೃತ್ತವಾಗಿದೆ. ಸಂಗತಿಯನ್ನು ಮುಂದೆ ಹೇಳುತ್ತೇವೆ ಎಂಬ ಆಶಯದಿಂದ ಮೊದಲು ಈ ಪಾದದ ಅಧಿಕರಣಗಳಲ್ಲಿನ ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳನ್ನು ಸಂಗ್ರಹವಾಗಿ ಹೇಳುತ್ತಾರೆ –

ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳ ಸಂಗ್ರಹ

ಪಶ್ಚಾದದೃಷ್ಟ್ಯವಿಜ್ಞಾನಕಾಲದುಃಖಪೃಥಗ್ಭವಾಃ ।

ಸ್ಥಾನಭೇದೋ ವಿರುದ್ಧತ್ವಂ ನ್ಯಾಯಸಾಮ್ಯಂ ಸ್ವತೋ ಭವಃ ॥೧॥

ಗುಣಸಾಮ್ಯಮಯೋಗಶ್ಚ ತರ್ಕಭಾದೋ ವಿಲೋಮತಾ ।

ನಾನಾಭಾವಃ ಪ್ರಲೋಭಶ್ಚ ಯುಕ್ತಯಃ ಪೂರ್ವಪಕ್ಷಗಾಃ ॥೨॥

ಅಶಕ್ಯಕರ್ತೃತಾಶಕ್ತಿಃ ಸ್ವತೋಽಬೋಧಸ್ತಥೈವ ಚ ।

ಅಮಾನಕ್ಲೃಪ್ತಿಸನ್ಮಾನವ್ಯವಸ್ಥಾತ್ಯಲ್ಪತಾಭವಾಃ ॥೩॥

ವಿಶೇಷದೃಷ್ಟಿವಾಕ್ಯೇ ಚ ಪುಂಶಕ್ತಿಃ ಸುನಿದರ್ಶನಮ್ ।

ಅಲೌಕಿಕತ್ವಮಾಧಿಕ್ಯಂ ಸ್ವಾತಂತ್ರ್ಯಂ ನಿರ್ಣಯಪ್ರಮಾಃ ॥೪॥

'ಯುಕ್ತಯಃ ಪೂರ್ವಪಕ್ಷಗಾಃ' ಎಂದರೆ ಪೂರ್ವಪಕ್ಷಕ್ಕೆ ಸಂಬಂಧಿಸಿದ ಯುಕ್ತಿಗಳು, 'ನಿರ್ಣಯಪ್ರಮಾಃ' ಎಂದರೆ ನಿಶ್ಚಯ ವಾದ ಜ್ಞಾನವನ್ನು ಹುಟ್ಟಿಸುವ ಪ್ರಮಾಣಗಳು ಅಥವಾ ಸಿದ್ಧಾಂತಯುಕ್ತಿಗಳು.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
೧. ಸಂಧ್ಯಾಧಿಕರಣ	ಪಶ್ಚಾದದೃಷ್ಟಿಃ	ಅಶಕ್ಯಕರ್ತೃತಾಶಕ್ತಿಃ
೨. ಪರಾಭಿಧ್ಯಾನಾಧಿಕರಣ	ಅವಿಜ್ಞಾನಮ್	ಸ್ವತೋಽಬೋಧಃ
೩. ದೇಹಯೋಗಾಧಿಕರಣ	ಕಾಲಃ	ತಥೈವ ಚ
೪. ತದಭಾವಾಧಿಕರಣ	ದುಃಖಮ್	ಅಮಾನಕ್ಲೃಪ್ತಿಃ
೫. ಪ್ರಭೋಧಾಧಿಕರಣ	ಪೃಥಗ್ಭವಃ	ಸನ್ಮಾನಂ

೬. ಕರ್ಮಾನುಸ್ಮೃತ್ಯಧಿಕರಣ	ಪೃಥಗ್ಭವಃ	ಸನ್ಮಾನಂ
೭. ಸಂಪತ್ತ್ಯಧಿಕರಣ	ಪೃಥಗ್ಭವಃ	ಸನ್ಮಾನಂ
೮. ನ ಸ್ಥಾನತೋಧಿಕರಣ	ಸ್ಥಾನಭೇದಃ	ವ್ಯವಸ್ಥಾ
೯. ಅರೂಪಾಧಿಕರಣ	ವಿರುದ್ಧತ್ವಂ	ವ್ಯವಸ್ಥಾ
೧೦. ಉಪಮಾಧಿಕರಣ	ನ್ಯಾಯಸಾಮ್ಯಂ	ಅತ್ಯಲ್ಪತಾ
೧೧. ಆಂಬುವದಧಿಕರಣ	ಸ್ವತೋ ಭವಃ	ಭವಃ
೧೨. ವೃದ್ಧಿಹ್ರಾಸಾಧಿಕರಣ	ಗುಣಸಾಮ್ಯಂ	ವಿಶೇಷದೃಷ್ಟಿಃ
೧೩. ಪ್ರಕೃತೈತಾವತ್ತ್ವಾಧಿಕರಣ	ಅಯೋಗಃ	ವಿಶೇಷವಾಕ್ಯಂ ಚ
೧೪. ತದವ್ಯಕ್ತಾಧಿಕರಣ	ತರ್ಕಬಾಧಃ	ಪುಂಶಕ್ತಿಃ
೧೫. ಉಭಯವ್ಯಪದೇಶಾಧಿಕರಣ	ವಿಲೋಮತಾ	ಸುನಿದರ್ಶನಂ
೧೬. ಪರಮತೋಧಿಕರಣ	ವಿಲೋಮತಾ	ಅಲೌಕಿಕತ್ವಂ
೧೭. ಸ್ಥಾನವಿಶೇಷಾಧಿಕರಣ	ನಾನಾಭಾವಃ	ಆಧಿಕ್ಯಂ
೧೮. ತಥಾನ್ಯತ್ವಾಧಿಕರಣ	ನಾನಾಭಾವಃ	ಆಧಿಕ್ಯಂ
೧೯. ಅನೇನಸರ್ವಗತತ್ವಾಧಿಕರಣ	ನಾನಾಭಾವಃ	ಸ್ವಾತಂತ್ರ್ಯಂ
೨೦. ಫಲಾಧಿಕರಣ	ಪ್ರಲೋಭಃ	ಸ್ವಾತಂತ್ರ್ಯಂ

ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳ ವಿವರಣೆ

೧. ಸಂಧ್ಯಾಧಿಕರಣ: ಓಂ ಸಧ್ಯೇ ಸೃಷ್ಟಿರಾಹ ಹಿ ಓಂ

ಪಶ್ಚಾದದೃಷ್ಟಿಯು ಪೂರ್ವಪಕ್ಷಯುಕ್ತಿ. ಸ್ವಾಪ್ನ ಪದಾರ್ಥಗಳು ಸ್ವಪ್ನಾನಂತರ ಕಾಣದಿರುವ ಪ್ರಯುಕ್ತ ಅಸತ್ತಾಗಿರುವುದರಿಂದ ಅವು ಭಗವಂತನ ಅಧೀನವಲ್ಲ. ಆದಕಾರಣ ಭಗವಂತನ ಸ್ವಪ್ನಾದಿ ಪ್ರೇರಕತ್ವ ಮುಂತಾದ ಮಹಿಮೆಗೆ ಚ್ಯುತಿ ಬರುವುದು ಎಂದು ಪೂರ್ವಪಕ್ಷ.

ಅಶಕ್ಯಕರ್ತೃತಾಶಕ್ತಿ ಎನ್ನುವುದು ಸಿದ್ಧಾಂತಯುಕ್ತಿ. ಇತರರಿಗೆ ಸಾಧ್ಯವಿಲ್ಲದ್ದನ್ನೂ ಸೃಷ್ಟಿ ಮಾಡುವ ಶಕ್ತಿಯು ಪರಮಾತ್ಮನಿಗೆ ಇರುವ ಕಾರಣ ಸ್ವಪ್ನಕಾಲದಲ್ಲಿ ಜೀವರ ಸಂಸ್ಕಾರದಿಂದ ಪದಾರ್ಥಗಳನ್ನು ಸೃಷ್ಟಿಮಾಡಿ ಜೀವರಿಗೆ ತೋರಿಸುವುದರಿಂದ ಪರಮಾತ್ಮನ ಸ್ವಪ್ನಪ್ರೇರಕತ್ವಕ್ಕೆ ಚ್ಯುತಿಯಿಲ್ಲ ಎಂದು ಸಿದ್ಧಾಂತ.

೨. ಪರಾಭಿಧ್ಯಾನಾಧಿಕರಣ: ಓಂ ಪರಾಭಿಧ್ಯಾನಾತ್ತು ತಿರೋಹಿತಂ ತತೋ ಹ್ಯಸ್ಯ ಬಂಧವಿಪರ್ಯಯೌ ಓಂ

ಅವಿಜ್ಞಾನವು ಪೂರ್ವಪಕ್ಷಯುಕ್ತಿ. ಸ್ವಾಪ್ನ ಪದಾರ್ಥಗಳ ಪ್ರತೀತಿ ಮತ್ತು ತಿರೋಧಾನಗಳು ಬಾಹ್ಯಪದಾರ್ಥಗಳ ಅಜ್ಞಾನ ಮತ್ತು ಜ್ಞಾನಾಧೀನವೇ ಹೊರತು ಭಗವದಧೀನವಲ್ಲ ಎಂದು ಪೂರ್ವಪಕ್ಷ.

ಸ್ವತೋಽಬೋಧವು ಸಿದ್ಧಾಂತಯುಕ್ತಿ. ಜ್ಞಾನಾಜ್ಞಾನಗಳು ಈಶಾಧೀನವು. ಜೀವನಿಗೆ ಅದರಲ್ಲಿ ಸ್ವಾತಂತ್ರ್ಯವಿಲ್ಲ. ಆದ್ದರಿಂದ ಸ್ವಪ್ನ ಮತ್ತು ತಿರೋಧಾನಗಳೂ ಈಶಾಧೀನವೇ ಎಂದು ಸಿದ್ಧಾಂತ.

೩. ದೇಹಯೋಗಾಧಿಕರಣ: ಓಂ ದೇಹಯೋಗಾದ್ವಾಸೋಽಪಿ ಓಂ

ಕಾಲವು ಪೂರ್ವಪಕ್ಷಯುಕ್ತಿ. ಜಾಗ್ರದವಸ್ಥೆಯು ಕಾಲದ ಅಧೀನವಾದ್ದರಿಂದ ಈಶಾಧೀನವಲ್ಲ. ಆದಕಾರಣ ಈಶ್ವರನಿಗೆ ಜಾಗ್ರದವಸ್ಥೆಯ ಪ್ರೇರಕತ್ವವಿಲ್ಲವೆಂದು ಪೂರ್ವಪಕ್ಷ.

ತಥೈವ ಚ ಎನ್ನುವುದು ಸಿದ್ಧಾಂತಯುಕ್ತಿ. ಕಾಲವು ಅಚೇತನ ಹಾಗೂ ಅಸ್ವತಂತ್ರವೂ ಆದುದರಿಂದ ಅದಕ್ಕೆ ಪ್ರೇರಕತ್ವವಿಲ್ಲ. ಆದಕಾರಣ ಭಗವಂತನೇ ಜಾಗ್ರದವಸ್ಥೆಗೆ ಪ್ರೇರಕ ಎಂದು ಸಿದ್ಧಾಂತ.

೪. ತದಭಾವಾಧಿಕರಣ: ಓಂ ತದಭಾವೋ ನಾಡೀಷು ತಚ್ಛ್ರುತೇರಾತ್ಮನಿ ಹ ಓಂ

ದುಃಖವು ಪೂರ್ವಪಕ್ಷಯುಕ್ತಿ. ಜೀವನು ಸುಪ್ತಿಯಲ್ಲಿ ಭಗವಂತನನ್ನು ಪ್ರವೇಶಿಸದೆ ಬೇರೆ ಕಡೆಯಿದ್ದರೆ ಸುಪ್ತಿಯಲ್ಲೂ ದುಃಖಾನುಭವ ಬರಬೇಕಾಗುತ್ತದೆ. ಆದಕಾರಣ ಸುಪ್ತಿಯಲ್ಲಿ ಜೀವನಿಗೆ ಭಗವಂತನಲ್ಲಿ ಪ್ರವೇಶವನ್ನು ಹೇಳಬೇಕು. ಆಗ ಸುಷುಮ್ನಾನಾಡಿಯಲ್ಲಿರುತ್ತಾನೆ ಎಂಬ ವೇದವಾಕ್ಯಕ್ಕೆ ಅಪ್ರಾಮಾಣ್ಯ ಬರುವುದು. ಇದರಿಂದ ಇತರ ವೇದವಾಕ್ಯಗಳಲ್ಲಿಯೂ ಅವಿಶ್ವಾಸವು ಉಂಟಾಗುವುದು. ಆಗ ಭಗವಂತನ ಮಹಿಮೆಯಲ್ಲೂ ಅವಿಶ್ವಾಸ ಬರುವುದು. ಆದಕಾರಣ ಪರಮಾತ್ಮನಲ್ಲಿ ಭಕ್ತಿಯು ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಅಮಾನಕ್ಲೃಪ್ತಿ ಎನ್ನುವುದು ಸಿದ್ಧಾಂತಯುಕ್ತಿ. ನಾಡಿಯಲ್ಲಿರುವ ಪರಮಾತ್ಮನಲ್ಲಿ ಸುಪ್ತಿಯನ್ನು ಅಂಗೀಕರಿಸಿರುವುದರಿಂದ ಜೀವನಿಗೆ ನಾಡಿಯಲ್ಲೂ ಪರಮಾತ್ಮನಲ್ಲೂ ಸುಪ್ತಿಯೆಂದು ಎರಡನ್ನೂ ಪ್ರಮಾಣವೆಂದು ಸ್ವೀಕರಿಸಬೇಕು. ನಾಡಿಯಲ್ಲಿ ಪ್ರವೇಶ ಹೇಳುವ ಶ್ರುತಿಗೆ ಸಂಭಾವಿತ ಅರ್ಥವನ್ನು ಕಲ್ಪಿಸದೆ ಅಪ್ರಾಮಾಣ್ಯವನ್ನು ಹೇಳಿದರೆ, ಬೇರೆ ಕಡೆಯಲ್ಲೂ ಅಪ್ರಾಮಾಣ್ಯವು ಬರುವುದು. ಆದ್ದರಿಂದ ಯಾವ ಶ್ರುತಿಯೂ ಅಪ್ರಮಾಣ್ಯವಲ್ಲವೆಂದು ಸಿದ್ಧಾಂತ.

೫. ಪ್ರಬೋಧಾಧಿಕರಣ: ಓಂ ಅತಃ ಪ್ರಬೋಧೋಽಸ್ಮಾತ್ ಓಂ

ಪೃಥಗ್ಭವ ಎನ್ನುವುದು ಪೂರ್ವಪಕ್ಷಯುಕ್ತಿ. ನಿದ್ರೆಯಿಂದ ಎಚ್ಚರವಾಗಲಿಕ್ಕೆ ಭೇರಿತಾಡನಾದಿ ಅನ್ಯಕಾರಣವಿರುವುದರಿಂದ ಈಶಾಧೀನವಲ್ಲವೆಂದು ಪೂರ್ವಪಕ್ಷ.

ಸನ್ಮಾನ ಎನ್ನುವುದು ಸಿದ್ಧಾಂತಯುಕ್ತಿ. ಭಗವಂತನಿಲ್ಲದೆ ಯಾವ ವ್ಯಾಪಾರವೂ ನಡೆಯಲಾರದು ಎಂದು ಹೇಳುವ 'ನ ಋತೇ ತ್ವತ್ಕ್ರಿಯತೇ ಕಿಂಚನ' ಎಂಬ ಸಮೀಚೀನವಾದ ಪ್ರಮಾಣವಿರುವುದರಿಂದ ಎಚ್ಚರವೂ ಈಶಾಧೀನವೇ ಎಂದು ಸಿದ್ಧಾಂತ.

೬.ಕರ್ಮಾನುಸ್ಮೃತ್ಯಧಿಕರಣ: ಓಂ ಸ ಏವ ಚ ಕರ್ಮಾನುಸ್ಮೃತಿ ಶಬ್ದವಿಧಿಭ್ಯಃ ಓಂ

ಪೃಥಗ್ಭವವು ಪೂರ್ವಪಕ್ಷಯುಕ್ತಿ. ಲೋಕದಲ್ಲಿ ಬೇರ ಬೇರೆ ದೇಶ ಕಾಲಗಳಲ್ಲಿ ಬೇರೆ ಬೇರೆ ರಾಜರು ಇರುವಂತೆ ಬೇರೆ ಬೇರೆ ನಿಯಾಮಕರಿರಬಹುದು. ಆದ್ದರಿಂದ ಪರಮಾತ್ಮನಿಗೆ ಸರ್ವಾವಸ್ಥಾ ಪ್ರೇರಕತ್ವವು ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಸನ್ಮಾನವು ಸಿದ್ಧಾಂತಯುಕ್ತಿ. 'ದೇಶಕಾಲವಿಶೇಷೇಽಪಿ ಸ್ವಪ್ನಾದೀನಾಂ ಸ ಏವ ಹಿ। ತಿರಸ್ಕರ್ತಾ ಚ ಕರ್ತಾ ಚ ನ ಖಂಡೇಶಃ ಸ ರಾಜವತ್' ಪರಮಾತ್ಮನೇ ಎಲ್ಲ ದೇಶಕಾಲವಿಶೇಷಗಳಲ್ಲಿ ಸರ್ವರಿಗೂ ಸ್ವಪ್ನಾದಿಗಳ ತಿರೋಧಾನ ಪ್ರತೀತಿಗಳನ್ನು ಉಂಟುಮಾಡುತ್ತಾನೆ ಎಂದು ಸಮೀಚೀನ ಪ್ರಮಾಣವಿರುವುದರಿಂದ ವಿಷ್ಣುವೇ ಸರ್ವಾವಸ್ಥಾಪ್ರೇರಕ ಎಂದು ಸಿದ್ಧಾಂತ.

೭. ಸಂಪತ್ತ್ಯಧಿಕರಣ: ಓಂ ಮುಗ್ಧೇಽರ್ಧಸಂಪತ್ತಿಃ ಪರಿಶೇಷಾತ್ ಓಂ

ಪೃಥಗ್ಭವವು ಪೂರ್ವಪಕ್ಷಯುಕ್ತಿ. ಮೋಹಾವಸ್ಥೆಯು ಜಾಗ್ರದ್ ಸ್ವಪ್ನಗಳಿಗಿಂತ ಬೇರೆಯಾಗಿದ್ದು ಸುಪ್ತಿಯಲ್ಲಿ ಅಂತರ್ಗತವಾಗಿದೆ. ಆದಕಾರಣ ಶ್ರೀಹರಿಯು ಮೋಹಾವಸ್ಥೆಯನ್ನು ಪ್ರೇರಿಸಲಾರನು ಎಂದು ಪೂರ್ವಪಕ್ಷ.

ಸನ್ಮಾನವು ಸಿದ್ಧಾಂತ ಯುಕ್ತಿ. ಸುಪ್ತಿಯಲ್ಲಿ ಕೇವಲ ಸುಖವಿದ್ದರೆ ಮೋಹದಲ್ಲಿ ದುಃಖವೇ ಇರುವುದು. ಆದಕಾರಣ ಅದು ಸುಪ್ತಿಯಲ್ಲಿ ಅಂತರ್ಗತವಲ್ಲ. ಆದ್ದರಿಂದ ಜೀವರಲ್ಲಿ ಸಂಭಾವಿತವಾದ ಭಗವಂತನಿಂದ ದೂರಸ್ಥತ್ವರೂಪವಾದ ಜಾಗ್ರದವಸ್ಥೆ, ಸಮೀಪಸ್ಥತ್ವ ರೂಪವಾದ ಸ್ವಪ್ನಾವಸ್ಥೆ, ಪ್ರವೇಶರೂಪವಾದ ಸುಪ್ತಿ ಇವುಗಳಿಂದ ಬೇರೆಯಾದ ಮೋಹಾವಸ್ಥೆಯು ಪರಿಶೇಷ ಪ್ರಮಾಣದಿಂದ ಭಗವಂತನಲ್ಲಿ ಅರ್ಧ ಪ್ರವೇಶರೂಪವೆಂದು ಸಿದ್ಧವಾಗುತ್ತದೆ. ಆದ್ದರಿಂದ ಭಗವಂತನಲ್ಲಿ ಮೋಹಾವಸ್ಥಾ ಪ್ರೇರಕತ್ವವೆಂಬ ಅಧಿಕ ಮಹಾತ್ಮೆಯು ಯುಕ್ತವೇ ಆಗಿದೆ ಎಂದು ಸಿದ್ಧಾಂತ.

೮. ನ ಸ್ಥಾನತೋಽಧಿಕರಣ: ಓಂ ನ ಸ್ಥಾನತೋಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ ಓಂ

ಸ್ಥಾನಭೇದವು ಪೂರ್ವಪಕ್ಷಯುಕ್ತಿ. ಪ್ರತಿ ಶರೀರದಲ್ಲಿ ಕಣ್ಣು ಕಂಠ ಮುಂತಾದ ಜಾಗ್ರದಾದಿ ಸ್ಥಾನಗಳಲ್ಲಿರತಕ್ಕ ಈಶ್ವರನ ರೂಪಗಳು ಸ್ಥಾನಭೇದದಿಂದಾಗಿ ಪರಸ್ಪರ ಭಿನ್ನವು ಎಂದು ಪೂರ್ವಪಕ್ಷ.

ವ್ಯವಸ್ಥಾ ಎನ್ನುವುದು ಸಿದ್ಧಾಂತಯುಕ್ತಿ. 'ಅಯಮೇವ ಸಃ' 'ನೇಹ ನಾನಾಸ್ತಿ

ಕಿಂಚನ' ಇತ್ಯಾದಿ ಶ್ರುತಿಗಳ ಬಲದಿಂದ ಸ್ಥಾನಗಳು ವಿಭಿನ್ನವೇ ಆಗಿದ್ದರೂ ಅಲ್ಲಿರತಕ್ಕ ಭಗವಂತನ ರೂಪಗಳು ಮಾತ್ರ ಪರಸ್ಪರ ಅಭಿನ್ನವು ಎಂದು ವ್ಯವಸ್ಥೆ ಮಾಡಲಿಕ್ಕೆ ಬರುವುದು ಎಂದು ಸಿದ್ಧಾಂತ.

೯. ಅರೂಪಾಧಿಕರಣ: ಓಂ ಅರೂಪವದೇವ ಹಿ ತತ್ಪ್ರಧಾನತ್ವಾತ್ ಓಂ

ವಿರುದ್ಧತ್ವವು ಪೂರ್ವಪಕ್ಷಯುಕ್ತಿ. ಭಗವಂತನಿಗೆ ರೂಪವಿಲ್ಲ ಎಂದು ಹೇಳುವ 'ತದರೂಪಮನಾಮಯಂ' ಎನ್ನುವ ಶ್ರುತಿಗೂ, ರೂಪವಿದೆಯೆಂದು ಹೇಳುವ 'ರುಗ್ಮ ವರ್ಣಂ ಆದಿತ್ಯವರ್ಣಂ' ಎನ್ನುವ ಶ್ರುತಿಗೂ ಪರಸ್ಪರ ವಿರೋಧವಿರುವುದರಿಂದ ಆ ಶ್ರುತಿಗಳಿಗೆ ಅಪ್ರಾಮಾಣ್ಯ ಬರುವುದು. ರೂಪವಿಲ್ಲವೆಂದರೆ ಸೌಂದರ್ಯಾದಿಗಳೂ ಇಲ್ಲವೆಂದಾಗುವುದು. ಆದ್ದರಿಂದ ಪರಮಾತ್ಮನಲ್ಲಿ ಭಕ್ತಿಯು ಕೂಡುವುದಿಲ್ಲ ಎಂದು ಪೂರ್ವಪಕ್ಷ.

ವ್ಯವಸ್ಥಾ ಎನ್ನುವುದು ಸಿದ್ಧಾಂತಯುಕ್ತಿ. ಪರಮಾತ್ಮನು ಅರೂಪನು ಎಂದು ಹೇಳುವ ಶ್ರುತಿಗೆ ಪರಮಾತ್ಮನು ಪ್ರಾಕೃತರೂಪರಹಿತನೆಂದೂ, ಅಪ್ರಾಕೃತ ರೂಪವುಳ್ಳವನೆಂದೂ ಪ್ರಮಾಣಗಳಿಗೆ ಅವಿರೋಧವಾಗಿ ಅರ್ಥವ್ಯವಸ್ಥೆ ಮಾಡಲಿಕ್ಕೆ ಬರುವುದು. ಆದ್ದರಿಂದ ಪರಮಾತ್ಮನಲ್ಲಿ ಭಕ್ತಿಯು ಅವಶ್ಯಕ ಎಂದು ಸಿದ್ಧಾಂತ.

೧೦. ಉಪಮಾಧಿಕರಣ: ಓಂ ಅತ ಏವ ಚೋಪಮಾ ಸೂರ್ಯಕಾದಿವತ್ ಓಂ

ನ್ಯಾಯಸಾಮ್ಯವು ಪೂರ್ವಪಕ್ಷಯುಕ್ತಿ. ಪರಮಾತ್ಮನಿಗೂ ಜೀವನಿಗೂ ಚೇತನತ್ವ ಹಾಗೂ ಅಂಶತ್ವಗಳಲ್ಲಿ ಸಾಮ್ಯವಿರುವುದರಿಂದ ಜೀವನೂ ಮತ್ಸ್ಯಾದಿ ರೂಪಗಳಂತೆ ಪರಮಾತ್ಮನಿಂದ ಅಭಿನ್ನನು. ಆದಕಾರಣ ಈಶ್ವರನಲ್ಲಿ ಭಕ್ತಿಯು ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಅತ್ಯಲ್ಪತಾ ಎನ್ನುವುದು ಸಿದ್ಧಾಂತಯುಕ್ತಿ. ಈಶ್ವರನಿಗೆ ಹೋಲಿಸಿದರೆ ಜೀವನಲ್ಲಿ ಅಲ್ಪಗುಣತ್ವ ರೂಪವಾದ ವಿರುದ್ಧಧರ್ಮವಿರುವ ಕಾರಣ ಜೀವನಿಗೆ ಈಶನೊಂದಿಗೆ ಅಭೇದವು ಕೂಡುವುದಿಲ್ಲ. ಆದ್ದರಿಂದ ಭಕ್ತಿಯು ಅವಶ್ಯಕವೆಂದು ಸಿದ್ಧಾಂತ.

೧೧. ಅಂಬುವದಧಿಕರಣ: ಓಂ ಅಂಬುವದಗ್ರಹಣಾತ್ತು ನ ತಥಾತ್ವಂ ಓಂ

ಸತೋ ಭವಃ ಎನ್ನುವುದು ಪೂರ್ವಪಕ್ಷಯುಕ್ತಿ. ಜೀವನಲ್ಲಿ ನಿತ್ಯದಲ್ಲಿಯೂ ಜ್ಞಾನಾನಂದಾದಿ ಸಾದೃಶ್ಯವಿರುವುದರಿಂದ ಸಾಧನವಿಲ್ಲದೆಯೇ ಅದರ ಅಭಿವ್ಯಕ್ತಿಯು ಆಗುವುದು. ಆದ್ದರಿಂದ ಸ್ವರೂಪಾನಂದಾಭಿವ್ಯಕ್ತಿಗಾಗಿ ಭಕ್ತಿಯನ್ನು ಮಾಡಬೇಕಿಲ್ಲ ಎಂದು ಪೂರ್ವಪಕ್ಷ.

ಭವಃ ಎನ್ನುವುದು ಸಿದ್ಧಾಂತಯುಕ್ತಿ. ಅನಾದಿಕಾಲದಿಂದ ಸಂಸಾರದ ನಿವೃತ್ತಿಯು ಆಗದೇ ಇರುವುದು. ಭಕ್ತ್ಯಾದಿ ಸಾಧನವಿಲ್ಲದೆ ಅದು ನಿವೃತ್ತಿಯಾಗದು. ಆದಕಾರಣ ಸಂಸಾರದ ನಿವೃತ್ತಿಗಾಗಿ ಭಕ್ತ್ಯಾದಿಗಳು ಅವಶ್ಯಕವೆಂದು ಸಿದ್ಧಾಂತ.

೧೨. ವೃದ್ಧಿಹ್ರಾಸಾಧಿಕರಣ: ಓಂ ವೃದ್ಧಿಹ್ರಾಸಭಾಕ್ತ್ವಮಂತರ್ಭಾವಾದುಭಯ ಸಾಮಂಜಸ್ಯಾದೇವಂ ಓಂ

ಗುಣಸಾಮ್ಯವು ಪೂರ್ವಪಕ್ಷಯುಕ್ತಿ. ಬ್ರಹ್ಮಾದಿ ಎಲ್ಲ ಜೀವರಲ್ಲಿ ಮುಕ್ತತ್ವ ರೂಪ ಸಾಮ್ಯವಿರುವುದರಿಂದ ಭಕ್ತ್ಯಾದಿ ಗುಣಗಳೂ ಅವರಲ್ಲಿ ಸಮಾನವಾಗಿರುತ್ತವೆ ಎಂದು ಪೂರ್ವಪಕ್ಷ.

ವಿಶೇಷದೃಷ್ಟಿಯು ಸಿದ್ಧಾಂತಯುಕ್ತಿ. 'ಯಥಾ ಯಥಾ ಅಧಿಕಾರೋ ವಿಶಿಷ್ಯತೇ' ಎಂಬ ಶ್ರುತಿಯು ಸಾಧನದಲ್ಲಿ ವಿಶೇಷವನ್ನು ಹೇಳುತ್ತದೆ. 'ಸೈಷಾऽऽನಂದಸ್ಯ ಮೀಮಾಂಸಾ ಭವತಿ' ಎಂಬ ಶ್ರುತಿಯಲ್ಲಿ ಫಲತಾರತಮ್ಯವು ಉಕ್ತವಾಗಿದೆ. ಸಾಧನದಲ್ಲಿ ವಿಶೇಷವಿಲ್ಲದಿದ್ದರೆ ಫಲತಾರತಮ್ಯವನ್ನು ಕೂಡಿಸಲು ಬರುವುದಿಲ್ಲ. ಆದಕಾರಣ ಜೀವರ ಸಾಧನದಲ್ಲಿ ತಾರತಮ್ಯವಿದೆ ಎಂದು ಸಿದ್ಧಾಂತ.

೧೩. ಪ್ರಕೃತೈತಾವತ್ತ್ವಾಧಿಕರಣ: ಓಂ ಪ್ರಕೃತೈತಾವತ್ತ್ವಂ ಹಿ ಪ್ರತಿಷೇಧತಿ ತತೋ ಬ್ರವೀತಿ ಚ ಭೂಯಃ ಓಂ

ಅಯೋಗವು ಪೂರ್ವಪಕ್ಷಯುಕ್ತಿ. ಜಗತ್ತಿನ ಸಂಹಾರವಾಗದಿರುವಿಕೆಯೇ ಅದರ ರಕ್ಷಣೆ. ಆದ್ದರಿಂದ ಭಗವಂತನಲ್ಲಿ ಸಂಹಾರೆ ಮಾಡದೇ ಇರುವುದಕ್ಕಿಂತ ಭಿನ್ನವಾದ ಪಾಲನ ರೂಪವಾದ ವ್ಯಾಪಾರವು ಯುಕ್ತವಾಗುವುದಿಲ್ಲ. ಅಂದರೆ ಅವನಲ್ಲಿ ಪ್ರತ್ಯೇಕವಾದ ಪಾಲಕತ್ವ ಎಂಬ ಗುಣವಿಲ್ಲವೆಂದು ಪೂರ್ವಪಕ್ಷ.

ವಿಶೇಷವಾಕ್ಯ ಎನ್ನುವುದು ಸಿದ್ಧಾಂತಯುಕ್ತಿ. "ಸ ಸೃಜತಿ ಸ ಪಾಲಯತಿ ಸ ವಿನಾಶಯತಿ" ಎಂಬ ವಿಶೇಷ ವಾಕ್ಯವಿರುವುದರಿಂದ ಭಗವಂತನು ಪಾಲಕನೂ ಆಗಿರುವನೆಂದು ಸಿದ್ಧಾಂತ.

೧೪. ತದವ್ಯಕ್ತಾಧಿಕರಣ: ಓಂ ತದವ್ಯಕ್ತಮಾಹ ಹಿ ಓಂ

ತರ್ಕಬಾಧವು ಪೂರ್ವಪಕ್ಷಯುಕ್ತಿ. ಪರಮಾತ್ಮನು ಅವ್ಯಕ್ತನು. ಸಾಧಕರಿಗೆ ಅವನ ಸಾಕ್ಷಾತ್ಕಾರವಾಗುವುದು ಅಂದರೆ ಅವನು ವ್ಯಕ್ತನಾಗುವನೆಂದು ಹೇಳಿದರೆ ಅವ್ಯಕ್ತತ್ವಕ್ಕೆ ಭಂಗ ಬರುವುದು. ಆದ್ದರಿಂದ ಅವನ ಸಾಕ್ಷಾತ್ಕಾರವೇ ಶಕ್ಯವಿಲ್ಲವಾದ ಕಾರಣ ಭಕ್ತಿಯು ವ್ಯರ್ಥ ಎಂದು ಪೂರ್ವಪಕ್ಷ.

ಪುಂಶಕ್ತಿ ಎನ್ನುವುದು ಸಿದ್ಧಾಂತಯುಕ್ತಿ. ಪರಮಾತ್ಮನು ಅವ್ಯಕ್ತನಾಗಿದ್ದರೂ ತನ್ನ ಅಚಿಂತ್ಯ ಶಕ್ತಿಯಿಂದ ವ್ಯಕ್ತನಾಗುವನು. ಆದಕಾರಣ ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಭಕ್ತಿಯು ಅವಶ್ಯಕವೆಂದು ಸಿದ್ಧಾಂತ.

೧೫. ಉಭಯವ್ಯಪದೇಶಾಧಿಕರಣ: ಓಂ ಉಭಯವ್ಯಪದೇಶಾತ್ತ್ವಹಿ ಕುಂಡಲವತ್ ಓಂ

ವಿಲೋಮತಾ ಎಂದು ಪೂರ್ವಪಕ್ಷಯುಕ್ತಿ. ವಿಲೋಮತಾ ಎಂದರೆ ವಿರುದ್ಧತ್ವ. ಗುಣಸ್ವರೂಪನಾದ ಪರಮಾತ್ಮನಿಗೆ ಗುಣವತ್ತ್ವವು ವಿರುದ್ಧವು. ಗುಣಸ್ವರೂಪನೇ

ಆಗಿದ್ದರೂ ಗುಣವುಳ್ಳವನಲ್ಲವಾದ್ದರಿಂದ ಪರಮಾತ್ಮನಲ್ಲಿ ಭಕ್ತಿಯ ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಸುನಿದರ್ಶನ ಎನ್ನುವುದು ಸಿದ್ಧಾಂತಯುಕ್ತಿ. ಪೂರ್ವಃ ಕಾಲಃ (ಮೊದಲಿನ ಕಾಲ) ಎಂಬಲ್ಲಿ ಪೂರ್ವಃ ಎಂದರೂ ಕಾಲವೇ, ಕಾಲಃ ಎಂದರೂ ಕಾಲವೇ. ಮೊದಲಿನ ಕಾಲವೆನ್ನುವುದು ವಿಶೇಷಣ ವಿಶೇಷ್ಯಭಾವದಿಂದ ಉಕ್ತವಾಗಿದೆ. ಹಾಗೆಯೇ ಗುಣಸ್ವರೂಪನಾದ ಪರಮಾತ್ಮನಿಗೂ ಅವನ ಗುಣಗಳಿಗೂ ವಿಶೇಷಣ ವಿಶೇಷ್ಯಭಾವದಿಂದ ವ್ಯವಹಾರವಿದೆ. ಹೀಗೆ ಗುಣಸ್ವರೂಪನಾದ ಭಗವಂತನು ಗುಣಗಳನ್ನು ಹೊಂದಿರುವನು ಎನ್ನುವುದು ಕೂಡುವುದರಿಂದ ಅವನಲ್ಲಿ ಭಕ್ತಿಯು ಯುಕ್ತವಾಗುವುದೆಂದು ಸಿದ್ಧಾಂತ.

೧೬. ಪರಮತೋಧಿಕರಣ: ಓಂ ಪರಮತಃ ಸೇತೂನ್ಮಾನಸಂಬಂಧಭೇದವ್ಯಪದೇಶೇಭ್ಯಃ ಓಂ

ವಿಲೋಮತಾ ಎನ್ನುವುದು ಪೂರ್ವಪಕ್ಷಯುಕ್ತಿ. ಆನಂದಾದಿ ಪದಗಳು ಲೌಕಿಕ ಆನಂದಾದಿ ವಾಚಕವಾದ್ದರಿಂದ, ಆನಂದ ಪದವಾಚ್ಯತ್ವವು ಲೋಕವಿಲಕ್ಷಣವಾದ ಬ್ರಹ್ಮಾನಂದಕ್ಕಿಲ್ಲ. ಆನಂದ ಪದವಾಚ್ಯತ್ವವನ್ನು ಕೂಡಿಸಲು ಬ್ರಹ್ಮಾನಂದವು ಲೌಕಿಕಾನಂದಕ್ಕೆ ಸದೃಶವೆಂದು ಹೇಳಿದರೆ, ಅಂಥಹ ಆನಂದವುಳ್ಳ ಪರಮಾತ್ಮನಲ್ಲಿ ಭಕ್ತಿಯು ಯುಕ್ತವಾಗಲಾರದು ಎಂದು ಪೂರ್ವಪಕ್ಷ.

ಅಲೌಕಿಕತ್ವ ಎನ್ನುವುದು ಸಿದ್ಧಾಂತಯುಕ್ತಿ. ಭಗವಂತನ ಆನಂದಾದಿ ಗುಣಗಳೂ ಅದನ್ನು ತಿಳಿಸುವ ಶಬ್ದಗಳೂ ಅವನೂ ಎಲ್ಲವೂ ಲೋಕವಿಲಕ್ಷಣವೇ ಎನ್ನುವುದು ನಿಜವೇ. ಆದರೂ ಘಟವೆಂಬ ಒಂದೇ ಶಬ್ದವು ಮಣ್ಣಿನ ಮಡಕೆಗೂ ಸುವರ್ಣದ ಮಡಕೆಗೂ ವಾಚಕವಾಗಿರುವಂತೆ ಲೌಕಿಕ ಶಬ್ದಗಳೂ ಕೂಡ ಅಲೌಕಿಕವಾದ ಆನಂದಾದಿಗಳನ್ನು ತಿಳಿಸುತ್ತವೆ ಎಂದು ಶ್ರುತಿಯು ಪ್ರತಿಪಾದಿಸುತ್ತದೆ. ಆದ್ದರಿಂದ ಅಲೌಕಿಕವಾದ ಆನಂದಾದಿಗಳನ್ನು ಹೊಂದಿರುವ ಪರಮಾತ್ಮನಲ್ಲಿ ಭಕ್ತಿಯು ಯುಕ್ತವೇ ಆಗುವುದೆಂದು ಸಿದ್ಧಾಂತ.

೧೭. ಸ್ಥಾನವಿಶೇಷಾಧಿಕರಣ: ಓಂ ಸ್ಥಾನವಿಶೇಷಾತ್ ಪ್ರಕಾಶಾದಿವತ್ ಓಂ

ನಾನಾಭಾವ ಎನ್ನುವುದು ಪೂರ್ವಪಕ್ಷಯುಕ್ತಿ. ಬ್ರಹ್ಮಾದಿ ಜೀವರ ಆನಂದಾದಿಗಳಲ್ಲಿ ವೈಚಿತ್ರ್ಯವಿರುವುದರಿಂದ ಅವುಗಳಿಗೆ ಬಿಂಬನಾದ ಪರಮಾತ್ಮನಲ್ಲಿಯೂ ವೈಚಿತ್ರ್ಯವಿರಬೇಕು. ಆದರೆ ವೈಚಿತ್ರ್ಯವಿಲ್ಲವೆಂದು ಪ್ರಮಾಣವಿದೆ. ಆದಕಾರಣ ಪರಮಾತ್ಮನ ಆನಂದವು ಬಿಂಬವಲ್ಲವೆಂದಾಗುವುದು. ಆದ್ದರಿಂದ ಭಕ್ತಿಯು ಯುಕ್ತವಲ್ಲವೆಂದು ಪೂರ್ವಪಕ್ಷ.

ಆಧಿಕ್ಯವೆನ್ನುವುದು ಸಿದ್ಧಾಂತ. ಪರಮಾತ್ಮನಲ್ಲಿ, ಅವನ ಆನಂದಾದಿಗಳಲ್ಲಿ ವೈಚಿತ್ರ್ಯವಿಲ್ಲದಿದ್ದರೂ ಪ್ರತಿಬಿಂಬಗಳಲ್ಲಿ ವೈಚಿತ್ರ್ಯವನ್ನುಂಟುಮಾಡುವ ಶಕ್ತಿವಿಶೇಷವು

(ಸಾಮರ್ಥ್ಯಾಧಿಕ್ಯವು) ಅವನಲ್ಲಿದೆ. ಆದಕಾರಣ ಭಕ್ತಿಯು ಯುಕ್ತವೇ ಆಗಿದೆ ಎಂದು ಸಿದ್ಧಾಂತ.

೧೮. ತಥಾನ್ಯತ್ವಾಧಿಕರಣ: ಓಂ ತಥಾನ್ಯತ್ ಪ್ರತಿಷೇಧಾತ್ ಓಂ

ನಾನಾಭಾವ ಎನ್ನುವುದು ಪೂರ್ವಪಕ್ಷಯುಕ್ತಿ. ಭಗವಂತನಿಗೆ ಮತ್ಸ್ಯಾದಿ ನಾನಾ ರೂಪಗಳಿರುವೆ. ಆದರಂತೆಯೇ ಸಾಧಕರ ಧ್ಯಾನಕಾಲದಲ್ಲಿ ಗೋಚರಿಸುವ ಮಾನಸ ವಾಸನಾ ರೂಪವಾದ ಪ್ರತಿಮೆಯೂ ಅವನದ್ದೇ ಒಂದು ರೂಪ. ಭಕ್ತಿಯಿಲ್ಲದೇ ಧ್ಯಾನ ಮಾಡಿದಾಗಲೂ ಆ ರೂಪವು ಪ್ರಕಟವಾಗುತ್ತದೆ ಹಾಗೂ ಫಲವನ್ನೂ ಕೊಡುತ್ತದೆ. ಆದಕಾರಣ ಭಕ್ತಿಯು ಅವಶ್ಯಕವಲ್ಲವೆಂದು ಪೂರ್ವಪಕ್ಷ.

ಆಧಿಕ್ಯವೆನ್ನುವುದು ಸಿದ್ಧಾಂತಯುಕ್ತಿ. ಭಗವಂತನಲ್ಲಿ ಗುಣಪೂರ್ಣತ್ವ ರೂಪವಾದ ಆಧಿಕ್ಯವಿರುವುದು. ಅವನು ದೋಷಯುಕ್ತವಾದ ಮಾನಸ ಪ್ರತಿಮಾ ರೂಪನಲ್ಲ. 'ನೇದಂ ಯದಿದಮುಪಾಸತೇ' ಧ್ಯಾನದಲ್ಲಿ ಗೋಚರವಾಗುವ ಮಾನಸ ರೂಪವಾದ ಪ್ರತಿಮೆಯು ಪರಮಾತ್ಮನಲ್ಲ ಎಂಬ ಶ್ರುತಿಯೂ ಇದೆ. ಅದಕ್ಕಿಂತ ಭಿನ್ನವಾದ ಭಗವಂತನ ಸಾಕ್ಷಾತ್ಕಾರಕ್ಕಾಗಿ ಭಕ್ತಿಯು ಅವಶ್ಯಕವೆಂದು ಸಿದ್ಧಾಂತ.

೧೯. ಅನೇನಸರ್ವಗತತ್ವಾಧಿಕರಣ: ಓಂ ಅನೇನ ಸರ್ವಗತತ್ವ ಮಾಯಾಮಯ ಶಬ್ದಾದಿಭ್ಯಃ ಓಂ

ನಾನಾಭಾವವೆನ್ನುವುದು ಪೂರ್ವಪಕ್ಷಯುಕ್ತಿ. ಭಗವಂತನ ನಾನಾವಿಧವಾದ ಅವತಾರಗಳಲ್ಲಿ ನಾನಾವಿಧವಾದ ಕೌತುಕಗಳು ಕಂಡಿವೆ. ಅದರಂತೆಯೇ ಕೌತುಕದಿಂದ ಭಗವಂತನು ಎಂದಾದರೂ ತನ್ನ ಸೃಷ್ಟ್ಯಾದಿ ಕರ್ತೃತ್ವವನ್ನು ಕೊಡಬಹುದು. ಆಗ ಅವನಲ್ಲಿ ಆ ಮಹಿಮೆಯು ಕಾಣದಾಗುವುದು. ಆದ್ದರಿಂದ ಅವನಲ್ಲಿ ಭಕ್ತಿಯು ಯುಕ್ತವಲ್ಲವೆಂದು ಪೂರ್ವಪಕ್ಷ.

ಸ್ವಾತಂತ್ರ್ಯವು ಸಿದ್ಧಾಂತಯುಕ್ತಿ. ಭಗವಂತನು ಸಂಪೂರ್ಣವಾಗಿ ಸ್ವತಂತ್ರನು. ಆದ್ದರಿಂದ ಅವನು ಯಾವಕಾಲಕ್ಕೂ ಯಾರಿಗೂ ತನ್ನ ಉತ್ಕರ್ಷವನ್ನು ಬಿಟ್ಟು ಕೊಡುವುದಿಲ್ಲ. ಪರಮಾತ್ಮನ ಉತ್ಕೃಷ್ಟತ್ವಕ್ಕೆ ಎಂದಿಗೂ ಚ್ಯುತಿಯಿಲ್ಲವಾದ್ದರಿಂದ ಭಕ್ತಿಯು ಯುಕ್ತವೇ ಆಗುವುದೆಂದು ಸಿದ್ಧಾಂತ.

೨೦. ಫಲಾಧಿಕರಣ: ಓಂ ಫಲಮತ ಉಪಪತ್ತೇಃ ಓಂ

ಪ್ರಲೋಭವು ಪೂರ್ವಪಕ್ಷಯುಕ್ತಿ. ಕರ್ಮ ಮಾಡಿದರೆ ಫಲ, ಇಲ್ಲದಿದ್ದರೆ ಇಲ್ಲ. ಆದಕಾರಣ ಕರ್ಮವೇ ಫಲಪ್ರದ. ವಿಷ್ಣುವು ಫಲಪ್ರದನೆಂಬುದು ಪ್ರಲೋಭನೆ ಮಾತ್ರ ಎಂದು ಪೂರ್ವಪಕ್ಷ.

ಸ್ವಾತಂತ್ರ್ಯವು ಸಿದ್ಧಾಂತಯುಕ್ತಿ. ಭಗವಂತನು ಸ್ವತಂತ್ರನಾದ್ದರಿಂದ ಕರ್ಮ ಮಾಡಿಸುವವನೂ ಅವನೇ, ಫಲವನ್ನು ಕೊಡುವವನೂ ಅವನೇ. ಕೆಲವು

ಕ್ರಮಗಳಿಗೂ ಫಲಕೊಡುವುದೂ, ಕೆಲವಕ್ಕೆ ಕೊಡದಿರುವುದೂ ಕಂಡಿದೆ. ಎಷ್ಟೋ ಕರ್ಮಗಳು ಭೋಗಿಸಲ್ಪಡದೆಯೇ ಭಗವಂತನ ಇಚ್ಛೆಯಿಂದಲೇ ನಾಶಹೊಂದುತ್ತವೆ. ಆದಕಾರಣ ಭಗವಂತನೇ ಫಲಪ್ರದನೆಂದು ಸಿದ್ಧಾಂತ.

ಸಂಧ್ಯಾಧಿಕರಣಮ್

ಓಂ ಸಂಧ್ಯೇ ಸೃಷ್ಟಿರಾಹ ಹಿ ಓಂ

ಓಂ ನಿರ್ಮಾತಾರಂ ಚೈಕೇ ಪುತ್ರಾದಯಶ್ಚ ಓಂ

ಓಂ ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್ ಓಂ

ಓಂ ಸೂಚಕಶ್ಚ ಹಿ ಶ್ರುತೇರಾಚಕ್ಷತೇ ಚ ತದ್ವಿದಃ ಓಂ

ಹಿಂದಿನ ಪಾದದಲ್ಲಿ 'ಯೋನೇಃ ಶರೀರಂ' ಎನ್ನುವ ಪರ್ಯಂತ ಇರುವ ಸೂತ್ರಗಳಿಂದ ಜೀವನಿಗೆ ಜನನವು ಇದೆ ಎಂದು ನಿಶ್ಚಿತವಾಗುತ್ತದೆ. ಹುಟ್ಟಿದವನಿಗೆ ಸ್ವಪ್ನಾದಿ ಅವಸ್ಥೆಗಳ ಸಂಬಂಧವು ಪ್ರಸಿದ್ಧವಾಗಿದೆ. ಆದರಲ್ಲಿ ಭಗವಂತನಿಗೆ ಸ್ವಪ್ನಾವಸ್ಥೆಯನ್ನು ಪ್ರವರ್ತಿಸುವ ಲಕ್ಷಣರೂಪವಾದ ಮಹಿಮೆಯನ್ನು ಈ ಸಂಧ್ಯಾಧಿಕರಣದಲ್ಲಿ ನಿರ್ಣಯಿಸುತ್ತಾರೆ. ಈ ವಿಷಯದಲ್ಲಿ ಪೂರ್ವಪಕ್ಷ ಹೀಗಿದೆ – ಸ್ವಪ್ನವು ಅರ್ಥಜ್ಞಾನರೂಪವಾದುದು. ಸ್ವಪ್ನದಲ್ಲಿ ಕಾಣತಕ್ಕ ಆನೆ ಕುದುರೆ ಇತ್ಯಾದಿಗಳು ಅಸತ್ಯವು. ಏಕೆಂದರೆ ಅವು ಅನಾದಿನಿತ್ಯಗಳಲ್ಲ. ಅವು ಅನಾದಿ ನಿತ್ಯಗಳಾಗಿದ್ದರೆ ಸ್ವಪ್ನಾವಸ್ಥೆಗೆ ಮೊದಲೂ, ಸ್ವಪ್ನ ಕಳೆದ ಮೇಲೂ ತೋರಬೇಕಿತ್ತು. ಆದರೆ ಅವು ಸ್ವಪ್ನಕಾಲದಲ್ಲಷ್ಟೇ ತೋರುತ್ತವೆ. ಅವು ಘಟಾದಿಗಳಂತೆ ಉತ್ಪತ್ತಿ ನಾಶವುಳ್ಳವುಗಳು ಎಂದೂ ಹೇಳಲು ಬರುವುದಿಲ್ಲ. ಹಾಗಿದ್ದರೆ ಘಟಾದಿಗಳಂತೆ ಉತ್ಪತ್ತಿಗೆ ಮುನ್ನವೂ ನಾಶದ ನಂತರವೂ (ಮೃದಾದಿ ರೂಪದಲ್ಲಿ ತೋರುವಂತೆ) ತೋರಬೇಕಾಗಿತ್ತು. ಮಿಂಚಿನಂತೆ ಆ ಕಾಲದಲ್ಲಿಯೇ ಹುಟ್ಟಿ ನಾಶವಾಗುತ್ತವೆ ಎನ್ನುವುದಕ್ಕೆ ಪ್ರಮಾಣವಿಲ್ಲ. ಅವುಗಳಿಗೆ ಉಪಾದಾನಕಾರಣವೂ ನಿಮಿತ್ತಕಾರಣವೂ ಕಾಣುವುದಿಲ್ಲ. ಆದ್ದರಿಂದ ಸ್ವಾಪ್ನ ಪದಾರ್ಥಗಳಿಗೆ ಭ್ರಾಂತಿತ್ವವನ್ನು ಹೇಳಬೇಕು. 'ಸ್ವಪ್ನಮಾಯಾಸರೂಪಾ' 'ಸ್ವಪ್ನ ಮನೋ ರಥೋ ಯಥಾ' ಇತ್ಯಾದಿ ಶ್ರುತಿಸ್ಮೃತಿಗಳಿಂದ ಸ್ವಪ್ನಕ್ಕೆ ಭ್ರಾಂತಿತ್ವವು ವೇದ್ಯವಾಗುವುದು. ಆದ್ದರಿಂದ ಅರ್ಥಜ್ಞಾನರೂಪವಾದ ಸ್ವಪ್ನಾವಸ್ಥೆಯು ಪರಮೇಶ್ವರನ ಅಧೀನವಲ್ಲ. ಹೀಗೆ ಪೂರ್ವಪಕ್ಷ ಬಂದರೆ, ಅದನ್ನು ನಿರಾಕರಿಸಿ ಉಪಾದಾನಾದಿಗಳ ಮೂಲಕ ಸ್ವಾಪ್ನ ಪದಾರ್ಥಗಳಿಗೆ ಸತ್ಯತ್ವವನ್ನು ಸಮರ್ಥಿಸಲು 'ವಾಸನಾ' ಇತ್ಯಾದಿ ವಚನದಿಂದ ಉಪೋದ್ಘಾತವನ್ನು ಹೇಳುತ್ತಾರೆ –

ವಾಸನಾಃ ಸರ್ವವಸ್ತೂನಾಮನಾದ್ಯನುಭವಗತಾಃ ।

ಸಂತ್ಯೈವಾಶೇಷಜೀವಾನಾಮನಾದಿಮನಸಿ ಸ್ಥಿತಾಃ ॥೫॥

ಎಲ್ಲ ಜೀವರಿಗೂ ಅನಾದಿಯಾದ ಮನಸ್ಸಿನಲ್ಲಿ ಅನಾದಿಯಾದ ಅನುಭವದಿಂದ

ಹುಟ್ಟಿರುವ ಎಲ್ಲ ವಸ್ತುಗಳ ವಾಸನೆಗಳು (ಸಂಸ್ಕಾರಗಳು) ಯಾವಾಗಲೂ ಇರುತ್ತವೆ.

ತ್ರಿಗುಣಾತ್ಮಕಂ ಮನೋಽಸ್ತ್ಯೇವ ಯಾವನ್ಮುಕ್ತಿಃ ಸದಾತನಮ್ ।

ತತ್ರೈವಾಶೇಷಸಂಸ್ಕಾರಾಃ ಸಂಚೀಯಂತೇ ಸದೈವ ಚ ॥೬॥

ಮುಕ್ತಿಯಾಗುವ ಪರ್ಯಂತ ನಿತ್ಯವಾದ ತ್ರಿಗುಣಾತ್ಮಕವಾದ ಮನಸ್ಸು ಇದ್ದೇ ಇರುತ್ತದೆ. ಆ ಮನಸ್ಸಿನಲ್ಲಿಯೇ ಎಲ್ಲ ವಸ್ತುಗಳ ಸಂಸ್ಕಾರವೂ ಯಾವಾಗಲೂ ಸಂಚಯವಾಗಿರುತ್ತವೆ.

'ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ' ಎಂದು ಮನಸ್ಸಿಗೆ ಜನ್ಮವು ಶ್ರುತವಾಗಿರುವುದರಿಂದ ಅನಾದಿತ್ವವು ಹೇಗೆ ಕೂಡುತ್ತದೆ ಎಂದು ಆಶಂಕಿಸಿದರೆ –

ಸೂಕ್ಷ್ಮತ್ವೇನ ಲಯೇ ಸಚ್ಚ ಪ್ರಾಕೃತೈರುಪಚೀಯತೇ ।

ಸೃಷ್ಟಿಕಾಲೇ ಯದಾ ತನ್ನ ಕುತಃ ಸಂಸಾರಸಂಸ್ಥಿತಿಃ ॥೭॥

ಮನಸ್ಸು ಸೂಕ್ಷ್ಮರೂಪದಿಂದ ಪ್ರಲಯಕಾಲದಲ್ಲಿ ಇದ್ದೇ ಇರುತ್ತದೆ. ಸೃಷ್ಟಿಕಾಲದಲ್ಲಿ ಅಹಂಕಾರಾದಿಗಳಿಂದ ಸ್ಥೂಲರೂಪದಲ್ಲಿ ಉತ್ಪತ್ತಿಯಾಗುತ್ತದೆ. ಸೃಷ್ಟಿಕಾಲದಲ್ಲಿ ಮನಸ್ಸು ಎಂಬುದು ಇಲ್ಲದೇ ಇದ್ದರೆ, ಪುನಃ ಸಂಸಾರಾವಸ್ಥೆಯು ಯಾವುದರಿಂದ ಆಗುವುದು?

ಸಂಸ್ಕಾರೈರ್ಭಗವಾನೇವ ಸೃಷ್ಟ್ವಾ ನಾನಾವಿಧಂ ಜಗತ್ ।

ಸ್ವಪ್ನಕಾಲೇ ದರ್ಶಯತಿ ಭ್ರಾಂತಿಜಾಗ್ರತ್ತ್ವಮೇವ ಹಿ ॥೮॥

ಎಲ್ಲ ವಸ್ತುಗಳ ವಾಸನೆಗಳೂ ಪ್ರವಾಹತಃ ಅನಾದಿನಿತ್ಯವಾಗಿ ಮನಸ್ಸಿನಲ್ಲಿರುತ್ತವೆ. ಶ್ರೀಹರಿಯೇ ಸ್ವಪ್ನಕಾಲದಲ್ಲಿ ಸಂಸ್ಕಾರರೂಪವಾದ ಉಪಾದಾನ ದ್ರವ್ಯಗಳಿಂದ ನಾನಾ ವಿಧವಾದ ಜಗತ್ತನ್ನು ಸೃಷ್ಟಿಮಾಡಿ ಜೀವನಿಗೆ ತೋರಿಸುತ್ತಾನೆ. ಹಾಗಾದರೆ ಶ್ರುತಿಸ್ಮೃತಿಗಳಲ್ಲಿ ಸ್ವಾಪ್ನಪದಾರ್ಥಗಳಿಗೆ ಭ್ರಾಂತಿತ್ವವನ್ನು ಹೇಳಿದ್ದು ಹೇಗೆ ಕೂಡುವುದು ಎಂದರೆ, ಸ್ವಪ್ನದಲ್ಲಿ ಕಾಣುವ ಪದಾರ್ಥಗಳಿಗೂ ಜಾಗ್ರದವಸ್ಥೆಯಲ್ಲಿ ಕಾಣುವ ಪದಾರ್ಥಗಳಿಗೂ ಅಭೇದವನ್ನು ತಿಳಿಯುವುದೇ ಭ್ರಾಂತಿಯು.

ಹಾಗಾದರೆ ಸ್ವಾಪ್ನ ಪದಾರ್ಥಕ್ಕೆ ಜಾಗ್ರತ್ವ ಪ್ರತೀತಿಯೇ ಭ್ರಾಂತಿಯೆನ್ನುವುದು ಅಯುಕ್ತ. ಏಕೆಂದರೆ ಸ್ವಪ್ನದಲ್ಲಿ ತೋರುವ ಸ್ವಶಿರಚ್ಛೇದನಾದಿ ಕೆಲವು ಸಂಗತಿಗಳು ಅಸತ್ತಾದ್ದರಿಂದ ಅವುಗಳ ಪ್ರತೀತಿಯೂ ಭ್ರಾಂತಿಯೇ. ಸ್ವಪ್ನದಲ್ಲಿ ಅಂಥವುಗಳು ಉತ್ಪತ್ತಿಯಾಗುವುದಕ್ಕೆ ಯಾವ ಉಪಾದಾನಕಾರಣವೂ ಇರುವುದಿಲ್ಲ. ಸ್ವಶಿರ ಚ್ಛೇದನ ಇತ್ಯಾದಿಗಳ ಅನುಭವದ ಅಭಾವದ ಕಾರಣ ಅವುಗಳ ಸಂಸ್ಕಾರವು ಹುಟ್ಟುವುದು ಅಸಾಧ್ಯ. ಅನುಭವಕ್ಕೆ ಬಾರದೆ ಇದ್ದದೂ ಸಂಸ್ಕಾರವನ್ನು ಹುಟ್ಟಿಸುತ್ತದೆ

ಎಂದು ಹೇಳುವುದಾದರೆ 'ಅದೃಷ್ಟೇ ಚಾಶ್ರುತೇ ಭಾವೇ' ಇತ್ಯಾದಿ ಶ್ರುತಿಸ್ಮೃತಿಗಳ ವಿರೋಧ ಬರುವುದು. ಸ್ವಪ್ನದಲ್ಲಿ ತೋರುವ ಸ್ವಶಿರಚ್ಛೇದನಾದಿಗಳು ಅಸತ್ಯವು. ಆದ್ದರಿಂದ ಸ್ವಪ್ನದಲ್ಲಿ ತೋರುವ ಎಲ್ಲ ಪದಾರ್ಥಗಳೂ ಸತ್ಯಗಳೆಂದು ಹೇಳುವುದು ಅಯುಕ್ತ ಎಂದು ಆಶಂಕಿಸಿದರೆ –

ಅದೃಷ್ಟೇ ಚಾಶ್ರುತೇ ಭಾವೇ ನ ಭಾವ ಉಪಜಾಯತೇ ।

ಅದೃಷ್ಟಾದಶ್ರುತಾದ್ಭಾವಾನ್ನ ಭಾವ ಉಪಜಾಯತೇ ॥೯॥

ಇತಿ ಶ್ರುತಿಪುರಾಣೋಕ್ತಿರನಾದಿತ್ವಾತ್ತು ಯುಜ್ಯತೇ ।

'ಅದೃಷ್ಟೇ ಚ.....' ಎನ್ನುವುದು ಶ್ರುತಿವಾಕ್ಯ, 'ಅದೃಷ್ಟಾತ್....' ಎನ್ನುವುದು ಸ್ಮೃತಿವಾಕ್ಯ. ಎರಡು ವಾಕ್ಯಗಳ ತಾತ್ಪರ್ಯವೂ ಒಂದೇ ಆಗಿದೆ. ಅದೇನೆಂದರೆ, ಕಾಣಲ್ಪಡದೇ ಇರುವ ಹಾಗೂ ಕೇಳಲ್ಪಡದೇ ಇರುವ ಪದಾರ್ಥದ ವಿಷಯದಲ್ಲಿ ಸಂಸ್ಕಾರ ಹುಟ್ಟುವುದಿಲ್ಲ. ಸಂಸಾರಕ್ಕೆ ಅನಾದಿತ್ವವಿರುವ ಪ್ರಯುಕ್ತ ಒಂದಾನೊಂದು ಜನ್ಮದಲ್ಲಿ ಸ್ವಶಿರಚ್ಛೇದನಾದಿಗಳ ಅನುಭವವು ಸಂಭವವಿರುವುದರಿಂದ ಸಂಸ್ಕಾರವು ಕೂಡುತ್ತದೆ. ಅನುಭವವಿಲ್ಲದೇ ಸಂಸ್ಕಾರದ ಉತ್ಪತ್ತಿಯನ್ನು ಹೇಳಿದರೆ, ಅದು ಮೇಲಿನ ಶ್ರುತಿಸ್ಮೃತಿಗಳಿಗೆ ವಿರುದ್ಧವಾಗುವುದು. ಆದ್ದರಿಂದ ಸ್ವಪ್ನದಲ್ಲಿ ತೋರುವ ಸ್ವಶಿರಚ್ಛೇದನಾದಿಗಳಿಗೆ ಸತ್ಯತ್ವವನ್ನು ಹೇಳಿದರೆ ಯಾವ ಅನುಪಪತ್ತಿಯೂ ಇರದು.

ಹಾಗಾದರೆ ಸ್ವಪ್ನದಲ್ಲಿ ಶಶವಿಷಾಣಾದಿಗಳು ತೋರುವುದು ಹೇಗೆ ಸಾಧ್ಯ? ಏಕೆಂದರೆ ಅತ್ಯಂತಾಸತ್ತಾಗಿರುವ ಅವು ಜನ್ಮಾಂತರದಲ್ಲಿಯೂ ಅನುಭವಕ್ಕೆ ಬರುವುದು ಸಾಧ್ಯವಿಲ್ಲ. ಅನುಭವವಿಲ್ಲದೆ ಅವುಗಳ ಸಂಸ್ಕಾರವು ಹುಟ್ಟುವುದು ಅಸಂಭವ. ಹೀಗೆ ಆಶಂಕಿಸಿದರೆ –

ಕದಾಚಿದ್ದರ್ಶನಾಯೋಗ್ಯಂ ಯತ್ತತ್ರಾಪಿ ವಿಭಾಗತಃ ॥೧೦॥

ದೃಷ್ಟಂ ಸಮಾಧಿಕರಣಂ ದೃಶ್ಯತೇಽತ್ರ ಸ ಚ ಭ್ರಮಃ ।

ವಾಸನಾಮಾತ್ರಮೂಲತ್ವಾಜ್ಜಾಗ್ರದ್ವತ್ ಸ್ಪಷ್ಟತಾ ನ ಚ ॥೧೧॥

ಯಾವತ್ತೂ ನೋಡುವುದಕ್ಕೆ ಅಯೋಗ್ಯವಾದ ಯಾವ ಶಶವಿಷಾಣವು ಸ್ವಪ್ನದಲ್ಲಿ ಕಾಣಲ್ಪಡುವುದೋ ಅದು ಸತ್ಯವೇ ಆಗಿದೆ. ಮೊಲ ಮತ್ತು ಕೋಡುಗಳು ಜಾಗ್ರದಾವಸ್ಥೆಯಲ್ಲಿ ಪ್ರತ್ಯೇಕವಾಗಿಯೇ ಕಾಣಲ್ಪಟ್ಟಿರುತ್ತವೆ. ಆದ್ದರಿಂದ ಅವುಗಳ ಸಂಸ್ಕಾರವು ಉಪಾದಾನಕಾರಣವೆಂಬುದು ಕೂಡುವುದರಿಂದ ಸ್ವಪ್ನದಲ್ಲಿ ಕಾಣುವ ಶಶವಿಷಾಣಾದಿಗಳ ಸಾಮಾನಾಧಿಕರಣ್ಯವು (ಅಂದರೆ ಒಂದೇ ಕಡೆಯಲ್ಲಿರುವುದು) ಯಥಾರ್ಥವೇ. ಆದರೆ ಜಾಗ್ರದವಸ್ಥೆಯಲ್ಲಿಯೂ ಹಾಗೆಯೇ ತಿಳಿಯುವುದು ಮಾತ್ರ ಭ್ರಾಂತಿಯು. ಸ್ವಾಪ್ನಪದಾರ್ಥಗಳಿಗೆ ಸಂಸ್ಕಾರ ಮಾತ್ರವೇ ಉಪಾದಾನಕಾರಣವು. ಆದಪ್ರಯುಕ್ತ ಅವು ಜಾಗ್ರದವಸ್ಥೆಯಲ್ಲಿ ತೋರುವ ಪದಾರ್ಥಗಳಂತೆ ಸ್ಪಷ್ಟವಲ್ಲ,

ಅಂದರೆ ಬಾಹ್ಯಾರ್ಥ ಕ್ರಿಯಾಸಾಮರ್ಥ್ಯವನ್ನು ಹೊಂದಿರುವುದಿಲ್ಲ.

ಇದುವರೆಗಿನ ವ್ಯಾಖ್ಯಾನದ ಒಟ್ಟು ಅಭಿಪ್ರಾಯವಿಷ್ಟು. ಸ್ವಾಪ್ನ ಪದಾರ್ಥಗಳಾದ ಘಟಾದಿಗಳಿಗೆ ಬಾಧವಿಲ್ಲದಿರುವುದರಿಂದ ಅವು ಅಸತ್ತಲ್ಲ. ಸ್ವಪ್ನಕ್ಕೆ ಮೊದಲೂ ಅಮೇಲೂ ತೋರದಿರುವುದರಿಂದ ಅವು ಅನಾದಿನಿತ್ಯಗಳೂ ಅಲ್ಲ. ಉಪಾದಾನ ಕಾರಣವಿಲ್ಲದೆ ಉತ್ಪತ್ತಿಯು ಕೂಡಲಾರದು. ಆದ್ದರಿಂದ ಅವಶ್ಯವಾಗಿ ಉಪಾದಾನ ವನ್ನು ಅಂಗೀಕರಿಸಬೇಕು. ಸ್ವಾಪ್ನ ಘಟಾದಿಗಳ ಉತ್ಪತ್ತಿಗೆ ಬಾಹ್ಯ ಮೃದಾದಿಗಳು ಕಾರಣವಾಗಲಾರವು. ಏಕೆಂದರೆ ಅವು ಬಾಹ್ಯ ಮೃದಾದಿಗಳಿಂದ ಮಾಡಲ್ಪಟ್ಟ ಘಟಾದಿಗಳಂತೆ ಅರ್ಥಕ್ರಿಯಾಕಾರಿಯಲ್ಲ. ಬೇರೆ ಯಾವ ಉಪಾದಾನಕಾರಣವೂ ಇಲ್ಲ. ಆದಪ್ರಯುಕ್ತ ಪರಿಶೇಷಾನುಮಾನದಿಂದ ಸಂಸ್ಕಾರವನ್ನೇ ಉಪಾದಾನವನ್ನಾಗಿ ಹೇಳಬೇಕು. ಅವುಗಳನ್ನು ಜೀವನೇ ಸೃಷ್ಟಿ ಮಾಡುವನು ಎನ್ನಲಿಕ್ಕೆ ಪ್ರಮಾಣವಿಲ್ಲ. ಆದ್ದರಿಂದ ಭಗವಂತನೇ ಜೀವನ ಸಂಸ್ಕಾರವನ್ನು ಉಪಾದಾನಕಾರಣವನ್ನಾಗಿಸಿ ಸ್ವಾಪ್ನ ಪದಾರ್ಥಗಳನ್ನು ಸೃಷ್ಟಿ ಮಾಡಿ ಜೀವನಿಗೆ ತೋರಿಸುತ್ತಾನೆ ಹಾಗೂ ಅವುಗಳು ತತ್ಕಾಲದಲ್ಲಿಯೇ ಉತ್ಪತ್ತಿನಾಶಗಳನ್ನು ಹೊಂದುತ್ತವೆ ಎಂಬುದಕ್ಕೆ ಪರಿಶೇಷಾನು-ಮಾನವೇ ಪ್ರಮಾಣವು. 'ಯ ಏಷ ಸುಪ್ತೇಷು ಜಾಗರ್ತಿ' 'ಏತಸ್ಮಾದ್ಧ್ಯೇವ ಪುತ್ರೋ ಜಾಯತೇ' 'ನ ತತ್ರ ರಥಾಃ' ಇತ್ಯಾದಿ ಶ್ರುತಿಗಳೂ ಸ್ವಪ್ನಸತ್ಯತ್ವ ವಿಷಯದಲ್ಲಿ ಪ್ರಮಾಣವು.

ಇಲ್ಲಿಯವರೆಗಿನ ಗ್ರಂಥದಿಂದ 'ಸಂಧ್ಯೇ ಸೃಷ್ಟಿರಾಹ ಹಿ' 'ನಿರ್ಮಾತಾರಂ ಚೈಕೇ ಪುತ್ರಾದಯಶ್ಚ' 'ಮಾಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್' ಎಂಬ ಮೂರು ಸೂತ್ರಗಳು ವ್ಯಾಖ್ಯಾನ ಮಾಡಲ್ಪಟ್ಟವು.

ಮಾಯಾವಾದಿಗಳು ಈ ಸೂತ್ರಗಳಿಗೆ ಅನ್ಯಥಾ ವ್ಯಾಖ್ಯಾನ ಮಾಡುತ್ತಾರೆ. ಸ್ವಪ್ನದಲ್ಲಿ ರಥ, ಬೀದಿ ಪುತ್ರಾದಿಗಳು ಯಾವುವೂ ಇರುವುದಿಲ್ಲ. ಜೀವನ ಕಾಮನೆಗಳೇ ಸ್ವಪ್ನದಲ್ಲಿ ಆಯಾ ರೂಪಗಳನ್ನು ಪಡೆಯುತ್ತವೆ. ಜೀವನೇ ಅವುಗಳ ನಿರ್ಮಾತೃ. ಹೀಗೆ ಕೆಲವರು ವ್ಯಾಖ್ಯಾನ ಮಾಡುತ್ತಾರೆ ಎಂಬುದಾಗಿ ಸೂತ್ರಕಾರರು ಮೊದಲ ಎರಡು ಸೂತ್ರಗಳಲ್ಲಿ ಪೂರ್ವಪಕ್ಷ ಮಾಡಿಕೊಂಡು ಮಾಯಾಮಾತ್ರಂ ಎಂಬ ಸೂತ್ರದಿಂದ ಅದನ್ನು ನಿರಾಕರಿಸುತ್ತಾರೆ. 'ನ ತತ್ರ ರಥಾ ನ ರಥಯೋಗಾ ನ ಪಂಥಾನೋ ಭವಂತ್ಯಥ ರಥಾನ್ರಥಯೋಗಾನ್ಪಂಥಃ ಸೃಜತೇ' ಇತ್ಯಾದಿ ಶ್ರುತಿಗಳಿಂದ ಸ್ವಪ್ನದಲ್ಲಿ ರಥಾದಿಗಳ ಅಭಾವವು ಶ್ರುತವಾಗಿದೆ. ಸ್ವಪ್ನದಲ್ಲಿ ರಥಾದಿಗಳ ದರ್ಶನವು ಕೇವಲ ಮಾಯಾಮಾತ್ರ ಸೃಷ್ಟಿಯು. ಸ್ವಪ್ನದ ಸೃಷ್ಟಿಯಲ್ಲಿ ಪಾರಮಾರ್ಥಿಕ ಲೇಶವೂ ಇಲ್ಲ. ಅದು ಅನಿರ್ವಚನೀಯ. ಏಕೆಂದರೆ ಸ್ವಪ್ನದಲ್ಲಿ ರಥಾದಿಗಳಿಗೆ ಉಚಿತವಾದ ದೇಶವಾಗಲೀ ಅವಕಾಶವಾಗಲೀ ಅಸಂಭವ. ಸ್ವಪ್ನದಲ್ಲಿ ದೇಶ ಕಾಲ ವ್ಯತ್ಯಾಸಗಳು ಕಂಡುಬರುತ್ತವೆ. ಸ್ವಪ್ನದಿಂದ ಎಚ್ಚೆತ್ತ ಮೇಲೆ ಸ್ವಪ್ನದಲ್ಲಿ ಕಂಡ ಪದಾರ್ಥಗಳಿಗೆ ಬಾಧ ಉಂಟಾಗುತ್ತದೆ. ಸ್ವಪ್ನದಲ್ಲಿ ಕಾಣುವ ಸಂಗತಿಗಳಿಗೆ ಆದ್ಯಂತಗಳ ವ್ಯಭಿಚಾರ

ಕಂಡುಬರುವುದರಿಂದ ಅಲ್ಲಿಯೇ ಅವುಗಳಿಗೆ ಬಾಧವೂ ಸಂಭವಿಸುತ್ತದೆ. ಒಂದು ಕ್ಷಣದಲ್ಲಿ ರಥವೆಂದು ಕಂಡಿದ್ದು ಮರುಕ್ಷಣದಲ್ಲಿಯೇ ಮನುಷ್ಯನಾಗಿ ಕಾಣಬಹುದು. ಮುಂದಿನ ಕ್ಷಣದಲ್ಲಿ ಆದೇ ವಸ್ತುವು ವೃಕ್ಷವಾಗಿ ತೋರಬಹುದು. ಆದ್ದರಿಂದ ಸ್ವಾಪ್ನ ಪದಾರ್ಥಗಳಿಗೆ ಪಾರಮಾರ್ಥಿಕತ್ವವಿಲ್ಲ. ಕಾರ್ತ್ಸ್ನ್ಯೇನಾಭಿವ್ಯಕ್ತಸ್ವರೂಪತ್ವಾತ್ ಎಂದರೆ ನೋಡುವವನ ದೃಷ್ಟಿಯಿಂದ ಸ್ವಪ್ನವು ಭಿನ್ನವೋ ಅಭಿನ್ನವೋ ಭಿನ್ನಾ-ಭಿನ್ನವೋ ಎಂಬುದನ್ನು ನಿರ್ವಚನ ಮಾಡಲು ಶಕ್ಯವಿಲ್ಲ. ಆದ್ದರಿಂದ ಅದು ಮಾಯಾಮಾತ್ರ ಅಥವಾ ಅನಿರ್ವಚನೀಯ ಎಂದು ಅದ್ವೈತಿಗಳು ಈ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತಾರೆ.

ಈ ಪ್ರಕಾರವಾಗಿ ಸ್ವಪ್ನಕ್ಕೆ ಅನಿರ್ವಚನೀಯತ್ವವನ್ನು ಪ್ರತಿಪಾದಿಸುವುದಕ್ಕಾಗಿ ಮಾಯಾವಾದಿಯು ಭೇದಾದಿ ವಿಕಲ್ಪ ಪ್ರಶ್ನೆಯಿಂದ ಯಾವ ದೂಷಣವನ್ನು ಮಾಡಿದ್ದಾನೋ ಅದು ಸರ್ವಥಾ ಕೂಡುವುದಿಲ್ಲ. ಏಕೆಂದರೆ ಮೊದಲಿಗೆ ವಿಕಲ್ಪ ಪ್ರಶ್ನೆಯೇ ಕೂಡುವುದಿಲ್ಲ ಎಂದು ಹೇಳುತ್ತ ಮಾಯಾವಾದಿಯ ಮತವನ್ನು ನಿರಾಕರಿಸುತ್ತಾರೆ –

ಭೇದೋऽಭೇದೋऽಥವಾ ದ್ವಂದ್ವಮಿತಿ ಪ್ರಶ್ನೋ ನ ಯುಜ್ಯತೇ ।

ದ್ರಷ್ಟುಃ ಸ್ವಪ್ನಸ್ಯ ದೃಷ್ಟತ್ವಾದ್ಭೇದಸ್ಯೈವಾಖಿಲೈರ್ಜನೈಃ ॥೧೨॥

ಸ್ವಪ್ನವನ್ನು ನೋಡತಕ್ಕ ಪುರುಷನ ದೆಶೆಯಿಂದ ಸ್ವಪ್ನವು ಭೇದವೋ ಅಭೇದವೋ ಅಥವಾ ಭೇದಾಭೇದವೋ ಎಂಬ ವಿಕಲ್ಪ ಪ್ರಶ್ನೆಯೇ ಕೂಡುವುದಿಲ್ಲ. ಸ್ವಪ್ನ, ಸ್ವಪ್ನದ್ರಷ್ಟೃಗಳಿಗೆ ಭೇದವಿರುವುದಾಗಿಯೇ ಎಲ್ಲ ಜನರ ಅನುಭವದಿಂದ ನಿಶ್ಚಿತವಾಗಿದೆ. ನಿಶ್ಚಿತವಾದ ಅರ್ಥದಲ್ಲಿ ಸಂಶಯವು ಕೂಡುವುದಿಲ್ಲ. ಪ್ರಶ್ನೆಯೇ ದೋಷಯುಕ್ತ. ಆದ್ದರಿಂದ ಸ್ವಪ್ನಸತ್ಯತ್ವದ ಬಗ್ಗೆ ಮಯಾವಾದಿಯು ಮಾಡಿರುವ ದೂಷಣವು ಕೂಡುವುದಿಲ್ಲ ಎಂದು ಪ್ರತಿಪಾದಿಸಿ, ಪ್ರಶ್ನದೋಷಗಳು ಯಾವುವು ಎಂಬುದನ್ನು ಹೇಳುತ್ತಾರೆ –

ಪ್ರಶ್ನದೋಷಾ ಹಿ ಚತ್ವಾರಃ ಸ್ವವ್ಯಾಹತಿರಸಂಗತಿಃ ।

ಸಿದ್ಧಾರ್ಥತಾ ಚ ವೈಫಲ್ಯಂ ನ ತೈಃ ಸ್ಯಾತ್ತತ್ತ್ವನಿರ್ಣಯಃ ॥೧೩॥

ಪ್ರಶ್ನದೋಷಗಳು ಸ್ವವ್ಯಾಹತಿ, ಅಸಂಗತಿ, ಸಿದ್ಧಸಾಧನತ್ವ ಹಾಗೂ ವೈಫಲ್ಯ ಅಥವಾ ನಿಷ್ಪ್ರಯೋಜನತ್ವ ಎಂದು ನಾಲ್ಕು ವಿಧ. ಇದು ಪ್ರಮಾಣಸಿದ್ಧವು. ಸ್ವವ್ಯಾಹತಾದಿ ಪ್ರಶ್ನೆಗಳಿಂದ ತತ್ತ್ವನಿಶ್ಚಯವು ಸಾಧ್ಯವಿಲ್ಲ.

ಬಂಜೆಯು ಮಕ್ಕಳುಳ್ಳವಳೋ ಅಲ್ಲವೋ ಎಂಬ ಪ್ರಶ್ನೆಯು ಸ್ವವ್ಯಾಹತಿ. ಈಶ್ವರನು ಸುಖಪೂರ್ಣ ಎಂದು ಹೇಳಿದಾಗ ಪ್ರಪಂಚವು ಕ್ಷಣಿಕ ಎಂಬುದಕ್ಕೆ ಪ್ರಮಾಣವೇನು ಎಂದು ಕೇಳುವುದು ಅಸಂಗತಿ. ಎದುರಿಗೇ ಸ್ಪಷ್ಟವಾಗಿ ಘಟವು

ಕಾಣುತ್ತಿರಲು, ಇಲ್ಲಿ ಘಟವು ಇದೆಯೋ ಇಲ್ಲವೋ ಎಂದು ಕೇಳುವುದು ಸಿದ್ಧಸಾಧನತ್ವವು. ಕಾಗೆಗೆ ಎಷ್ಟು ಹಲ್ಲು ಎಂದು ಕೇಳುವುದು ನಿಷ್ಪ್ರಯೋಜಕತ್ವ. ಪ್ರಕೃತದಲ್ಲಿ ಸ್ವಪ್ನ, ಸ್ವಪ್ನದ್ರಷ್ಟೃಗಳಿಗೆ ಭೇದವೆಂಬುದು ಸರ್ವರಿಗೂ ಸಿದ್ಧವಿಷಯಕವಾಗಿರುವುದರಿಂದ ವಿಕಲ್ಪಪ್ರಶ್ನೆಯೇ ಅಯುಕ್ತವೆಂದು ಅಭಿಪ್ರಾಯ.

ಇದರಿಂದ ಏನಾಗುವುದೆಂದರೆ, 'ತತ್ತ್ವ' ಇತ್ಯಾದಿ ವಚನದಿಂದ ಉತ್ತರಿಸುತ್ತಾರೆ–

ತತ್ತ್ವನಿರ್ಣಯವೈಲೋಮ್ಯಂ ಸ್ಯಾದ್ವಾದೇಽಪಿ ಹಿ ನಿಗ್ರಹಃ ।

ಉದ್ಭಾವನೀಯಮೇವ ಸ್ಯಾನ್ನ ಕಥಾವಸಿತಿರ್ಭವೇತ್ ॥೧೪॥

ವಿಜಿಗೀಷುಕಥಾಯಾಂ ತು ಕಥಾವಸಿತಿಕಾರಣಮ್ ।

ಪರಿಹಾರೇಽಪಿ ಸಿದ್ಧತ್ವಂ ದೂಷಣಂ ಪ್ರತಿವಾದಿನಃ ॥೧೫॥

ಪ್ರತಿಜ್ಞಾಯಾಂ ತದನ್ಯಸ್ಯ ಸಿದ್ಧತೈವ ಹಿ ಸಾಧಿಕಾ ।

ಕೇವಲ ಜಲ್ಪವಿತಂಡಗಳಲ್ಲಿ ಮಾತ್ರವಲ್ಲ, ವಾದಕಥೆಯಲ್ಲಿಯೂ ತತ್ತ್ವನಿರ್ಣಯ ವಿರೋಧವು ನಿಗ್ರಹಸ್ಥಾನವಾಗಿಯೇ ಆಗುವುದು. ತತ್ತ್ವನಿರ್ಣಯವೈಲೋಮ್ಯವು ವಾದದಲ್ಲಿ ಉದ್ಭಾವನೀಯವೇ ಆಗುವುದಾದರೂ ಕಥಾಸಮಾಪ್ತಿಗೆ ಕಾರಣವಾಗದು. ಜಲ್ಪವಿತಂಡಗಳಲ್ಲಾದರೂ ನಿಗ್ರಹಸ್ಥಾನವು ಕಥಾಸಮಾಪ್ತಿಗೆ ಕಾರಣವಾಗುವುದು. ಸಿದ್ಧಸಾಧನತ್ವವು ಕೇವಲ ಪ್ರಶ್ನೆಯಲ್ಲಿ ಮಾತ್ರವಲ್ಲ, ಪ್ರತಿವಾದಿಯು ಪ್ರಶ್ನೆಗೆ ಉತ್ತರ ಕೊಡುವ ವಾಕ್ಯದಲ್ಲಿಯೂ ದೂಷಣವಾಗುವುದು. ಪ್ರತಿಜ್ಞಾರ್ಥಕ್ಕೆ ಪ್ರತಿವಾದಿಯನ್ನುಕುರಿತು ಸಿದ್ಧತ್ವವು ದೂಷಣವೇ. ಪ್ರತಿಜ್ಞಾರ್ಥವೆಂದರೆ ವ್ಯಾಪಕಧರ್ಮಕ್ಕೂ ಸಾಧ್ಯಧರ್ಮಿಗೂ ಇರುವ ಅವ್ಯಾಹತ ಸಂಬಂಧ. ಪ್ರತಿಜ್ಞಾರ್ಥದಿಂದ ಇತರವಾದ ಹೇತ್ವಾದಿ ವಾಕ್ಯಗಳ ಅರ್ಥಕ್ಕೆ ಸಿದ್ಧತ್ವವೇ ಸಾಧ್ಯಸಾಧಕವಾಗುತ್ತದೆ.

ಪ್ರತಿಜ್ಞಾರ್ಥವ್ಯತಿರಿಕ್ತವಾದ ಹೇತ್ವಾದಿ ಅರ್ಥಕ್ಕೆ ಸಿದ್ಧತ್ವವೇ ಸಾಧಕವು ಎಂದು ಹೇಳಿದ್ದರಿಂದ ಅಸಿದ್ಧಿಯು ದೂಷಣವೆಂದಾಗುವುದು. ಆ ಅಸಿದ್ಧಿಯು ಆಶ್ರಯಾಸಿದ್ಧಿ, ಅಪ್ರಸಿದ್ಧವಿಶೇಷಣತ್ವ, ಲಿಂಗಾಸಿದ್ಧಿ, ಪಕ್ಷಧರ್ಮತಾಸಿದ್ಧಿ, ವ್ಯಧಿಕರಣಾಸಿದ್ಧಿ, ವ್ಯಾಪ್ಯ–ಸಿದ್ಧಿ ಇವೇ ಮೊದಲಾಗಿ ಅನೇಕ ವಿಧವು. ಸಾಮಾನ್ಯವಾಗಿ ಎಲ್ಲ ಅಸಿದ್ಧಿಗಳಿಗೂ ದೂಷಣತ್ವ ಪ್ರಾಪ್ತವಾದರೂ ಅದರಲ್ಲಿ ಅಪವಾದವುಂಟು ಎಂದು ಹೇಳುತ್ತಾರೆ –

ಆಶ್ರಯವ್ಯಾಶ್ರಯಾಸಿದ್ಧೀ ಸಾಧ್ಯಾಸಿದ್ಧಿಶ್ಚ ದೂಷಣಮ್ ॥೧೬॥

ಕೇಷಾಂಚಿನ್ನ ಚ ತೇ ದೋಷಾ ವ್ಯಾಪ್ತೌ ಸತ್ಯಾಂ ಕಥಂಚನ ।

ಆಶ್ರಯಾಸಿದ್ಧಿ, ವ್ಯಧಿಕರಣಾಸಿದ್ಧಿ, ಸಾಧ್ಯಾಸಿದ್ಧಿಯೂ ಕೂಡ ನೈಯಾಯಿಕಾದಿ ಮತದಲ್ಲಿ ದೂಷಣವು. ಹಾಗಿದ್ದರೂ ವ್ಯಾಪ್ತಿಯಿದ್ದರೆ ಅವುಗಳು ಯಾವುದೇ ರೀತಿಯಿಂದಲೂ ದೋಷಗಳು ಆಗುವುದೇ ಇಲ್ಲ.

ಆಶ್ರಯಾಸಿದ್ಧಿಯಲ್ಲಿ ಅಸದಾಶ್ರಯತ್ವ, ಅಭಾವಾಶ್ರಯತ್ವ, ಅಪ್ರತೀತಾಶ್ರಯತ್ವ, ಪಕ್ಷೀಕೃತ ಆಕಾರದಿಂದ ಅಸತ್ವ ಹಾಗೂ ಸಿದ್ಧಸಾಧನತ್ವ ಎಂಬುದಾಗಿ ಅನೇಕ ವಿಧ. ವ್ಯಾಪ್ತಿಯಿದ್ದರೆ ಅಸದಾಶ್ರಯತ್ವ, ಅಭಾವಾಶ್ರಯತ್ವ, ವ್ಯಧಿಕರಣಾಸಿದ್ಧಿ, ಸಾಧ್ಯಾಸಿದ್ಧಿ ಗಳು ದೋಷಗಳಾಗುವುದಿಲ್ಲ. ಅಪ್ರತೀತಾಶ್ರಯತ್ವಾದಿಗಳು ದೋಷಗಳೇ ಆಗಿವೆ.

ಹಾಗಾದರೆ ಗೋವಿಗೆ ಕೋಡಿನಂತೆ, ಶೃಂಗತ್ವವಿರುವ ಪ್ರಯುಕ್ತ, ಮನುಷ್ಯನಿಗೂ ಕೋಡಿದೆ ಎನ್ನುವ ಅನುಮಾನದಲ್ಲಿ ಆಶ್ರಯಾಸಿದ್ಧಿಯು ಹೇತುದೂಷಣವೆಂದು ಕಂಡಿದೆ. ಅಂದಮೇಲೆ ಅಸದಾಶ್ರಯತ್ವವು ದೋಷವಲ್ಲ ಎಂದು ಹೇಗೆ ಹೇಳುತ್ತೀರಿ ಎಂದು ಕೇಳಿದರೆ –

ದೋಷೋ ವ್ಯಾಹತಿರೇವಾಸ್ತಿ ನೃಶೃಂಗಾಸ್ತಿತ್ವಸಾಧನೇ ॥೧೭॥

ಯತ್ರ ವ್ಯಾಹತತಾ ನಾಸ್ತಿ ಕೋಽತಿಸಂಗೋಽಸ್ಯ ಸಾಧನೇ ।

ಮನುಷ್ಯನಿಗೆ ಕೋಡು ಇದೆ ಎಂದು ಸಾಧಿಸಹೊರಟರೆ ಅದಕ್ಕೆ ಪ್ರತ್ಯಕ್ಷದಿಂದ ಬಾಧ ಬರುತ್ತದೆ. ಆದ್ದರಿಂದ ನೃಶಂಗತ್ವಕ್ಕೆ ಪ್ರಮಾಣವಿರೋಧವೇ ದೂಷಣವು, ಅಸದಾಶ್ರಯತ್ವವಲ್ಲ. ಯಾವ ಸಾಧ್ಯದಲ್ಲಿ ಪ್ರಮಾಣಬಾಧವೂ ವ್ಯಭಿಚಾರಾದಿಗಳೂ ಇಲ್ಲವೋ ಅದನ್ನು ಅಸದಾಶ್ರಯತ್ವ ಹೇತುವಿನಿಂದ ಸಾಧಿಸಿದರೂ ಯಾವ ದೋಷವೂ ಇಲ್ಲ.

ಪ್ರಮಾಣವಿರೋಧದಿಂದ ನೃಶೃಂಗತ್ವ ಹೇತುವು ದುಷ್ಟವೆಂದು ಹೇಳಿದರು. ವ್ಯಾಪ್ತ್ಯಾದಿ ಅಂಗಗಳು ಪೂರ್ಣವಾಗಿದ್ದರೆ ಸಾಧ್ಯದ ಸಿದ್ಧಿಯು ಆಗಲೇಬೇಕು. ವ್ಯಾಪ್ತ್ಯಾದಿಗಳು ಇಲ್ಲವಾದರೆ ಅದರಿಂದಲೇ ದೂಷಣತ್ವವು. ಪ್ರಮಾಣಬಾಧದಿಂದ ಆಗುವುದೇನು? ಎಂದು ಆಶಂಕಿಸಿದರೆ –

ಪ್ರತ್ಯಕ್ಷಾಗಮಮೂಲಾಸ್ತು ನ್ಯಾಯಾಃ ಸರ್ವೇ ಭವಂತಿ ಹಿ ॥೧೮॥

ನ್ಯಾಯಾಭಾಸಾ ಅಮೂಲಾಃ ಸ್ಯುಃ ನ್ಯಾಯಸ್ಯಾನ್ಯಸ್ಯ ತೌ ಪುನಃ ।

ಎಲ್ಲ ನ್ಯಾಯಗಳೂ ಪ್ರತ್ಯಕ್ಷ ಆಗಮಗಳನ್ನೇ ಮೂಲವನ್ನಾಗಿ ಹೊಂದಿವೆ. ಇದು ಪ್ರಸಿದ್ಧ. ಆದ್ದರಿಂದ ಅಮೂಲಗಳಾದ (ಪ್ರತ್ಯಕ್ಷಾಗಮಗಳಿಗೆ ವಿರುದ್ಧವಾದ) ನ್ಯಾಯಗಳು ನ್ಯಾಯಾಭಾಸಗಳೇ ಆಗಿರುತ್ತವೆ.

ಹಾಗಾದರೆ ಅನುಮಾನಮೂಲವಾದ ನ್ಯಾಯವೂ ಇರುವುದರಿಂದ ಎಲ್ಲ ನ್ಯಾಯವೂ ಪ್ರತ್ಯಕ್ಷಾಗಮಮೂಲವು ಎನ್ನುವ ಉಕ್ತಿ ಹೇಗೆ ಕೂಡುತ್ತದೆ ಎಂದರೆ –

ಪ್ರತ್ಯಕ್ಷಾಗಮಮೂಲವಾದ ನ್ಯಾಯದ ದೆಶೆಯಿಂದ ಇತರವಾದ ನ್ಯಾಯಕ್ಕೂ ಪ್ರತ್ಯಕ್ಷಾಗಮಗಳೇ ಮೂಲವು. ಹೀಗೆ ನ್ಯಾಯವು ಸರ್ವಥಾ ಪ್ರತ್ಯಕ್ಷ ಆಗಮಗಳನ್ನು ಅತಿಕ್ರಮಿಸದೇ ಇರುವುದರಿಂದ ಹಾಗೆ ಹೇಳಿದ್ದು.

ಆಗಮವೂ ಕೂಡ ಪ್ರತ್ಯಕ್ಷವೇ ಮೂಲವನ್ನಾಗಿ ಹೊಂದಿದ್ದರೂ ಕೆಲವುಕಡೆ ಪ್ರತ್ಯಕ್ಷಕ್ಕೂ ಮೂಲವಾಗುತ್ತದೆ. ಉದಾಹರಣೆಗೆ ರಾಮಕೃಷ್ಣಾದಿ ಅವತಾರಗಳಲ್ಲಿ ವಿಷ್ಣುತ್ವ ಪ್ರತ್ಯಕ್ಷದ ವಿಷಯಕ್ಕೆ ಆಗಮವೇ ಮೂಲವು. ಆದ್ದರಿಂದ ಎರಡನ್ನೂ ಸ್ವೀಕರಿಸಿದ್ದು. ಅನುಮಾನಕ್ಕೂ ಕೂಡ ಪ್ರತ್ಯಕ್ಷಾಗಮಮೂಲತ್ವವನ್ನು ಹೊಂದಿರುವ ನ್ಯಾಯವೇ ಮೂಲವು, ಸ್ವತಂತ್ರನ್ಯಾಯವಲ್ಲ. ಸ್ವತಂತ್ರನ್ಯಾಯವು ನ್ಯಾಯಾಭಾಸವು. ಆದಕಾರಣ ಅದನ್ನು ಪರಿತ್ಯಾಗ ಮಾಡಬೇಕು.

ಹಾಗಾದರೆ ಪ್ರತ್ಯಕ್ಷವೂ ಕೂಡ ಕೆಲವುಕಡೆ ಅಭಾಸವಾಗಿ ಕಂಡುಬರುವ ಕಾರಣ ಪ್ರಾಮಾಣ್ಯ ನಿರ್ಣಯವು ಹೇಗೆ ಆಗುವುದು ಎಂದು ಆಶಂಕಿಸಿದರೆ –

ಅದೃಷ್ಟೇ ವ್ಯಭಿಚಾರೇ ತು ಸಾಧಕಂ ತದಿತಿ ಸ್ಫುಟಮ್ ॥೧೯॥

ಜ್ಞಾಯತೇ ಸಾಕ್ಷಿಣೈವಾದ್ಧಾ ಮಾನಬಾಧೇ ನ ತದ್ಭವೇತ್ ।

ಯತ್ಸಾಕ್ಷಿಣೈವ ಮಾನತ್ವಂ ಮಾನಾನಾಮವಸೀಯತೇ ॥೨೦॥

ಧೂಮಾದಿ ಲಿಂಗವು ಅಗ್ನಿ ಮೊದಲಾದ ಸಾಧ್ಯವು ಇಲ್ಲದಿರುವ ಸ್ಥಳದಲ್ಲಿ ಕಾಣದೇ ಇದ್ದರೆ ಸಾಧ್ಯವನ್ನು ಸಾಧಿಸಿಕೊಡುವುದು. ಆದರೆ ವ್ಯಭಿಚಾರ ತೋರಿದರೆ ಸಾಧಕವಾಗಲಾರದು. ಹೀಗೆ ಸಾಕ್ಷಿಯಿಂದಲೇ ಸ್ಪಷ್ಟವಾಗಿ ತಿಳಿಯುತ್ತದೆ. ಪ್ರಮಾಣ ಬಾಧವಿದ್ದರೆ ಅದೃಷ್ಟ ವ್ಯಭಿಚಾರಿತ್ವವು ಕೂಡುವುದಿಲ್ಲ.

ಬಾಧಕವಿಲ್ಲದಿದ್ದರೆ ಸಾಧನವು ಸಾಧ್ಯದಲ್ಲಿ ಪ್ರಮಾಣವಾಗುತ್ತದೆ, ಬಾಧಕವಿದ್ದರೆ ಪ್ರಮಾಣವಾಗುವುದಿಲ್ಲ. ಹೀಗೆ ಎಲ್ಲ ಪ್ರಮಾಣಗಳ ಪ್ರಾಮಾಣ್ಯವು ಪ್ರಾಮಾಣ್ಯ ಗ್ರಾಹಕವಾದ ಸಾಕ್ಷಿಯಿಂದಲೇ ನಿಶ್ಚಿತವಾಗುತ್ತದೆ. ಹಾಗಿಲ್ಲದಿದ್ದರೆ ಅನವಸ್ಥೆಯ ಪ್ರಸಂಗ ಬರುವುದು. ಆದ್ದರಿಂದ ಅನುಮಾನಕ್ಕೂ ಪ್ರಾಮಾಣ್ಯವು ಸಾಕ್ಷಿಯಿಂದಲೇ ತಿಳಿಯಲ್ಪಡುತ್ತದೆ.

ಹಾಗಾದರೆ ಪ್ರಾಮಾಣ್ಯವು ಸಾಕ್ಷಿವೇದ್ಯವಾದರೆ, ಸಾಕ್ಷಿಗೆ ಹಿಂದೆ ಹೇಳಿದ ಯಾಥಾರ್ಥ್ಯ ನಿಯಮಕ್ಕೆ ಭಂಗ ಬರುವುದು. ಏಕೆಂದರೆ ಕೆಲವು ವೇಳೆ ಭ್ರಾಂತಿ ಮೊದಲಾದ ಪ್ರಮಾಣವಿಲ್ಲದಿರುವ ಕಡೆಗಳಲ್ಲಿಯೂ ಸಾಕ್ಷಿಯು ಪ್ರಾಮಾಣ್ಯವನ್ನು ಗ್ರಹಿಸಬಹುದು. ಸಾಕ್ಷಿಯು ಭ್ರಮೆಯನ್ನೂ ಪ್ರಮಾಣವೆಂದು ಗ್ರಹಿಸಿದರೆ ನಿಶ್ಶಂಕ ಪ್ರವೃತ್ತಿಯು ಆಗದೇ ಹೋಗುವುದು. ಹೀಗೆ ಆಶಂಕಿಸಿದರೆ –

ಅಮಾನಸ್ಯ ತು ಮಾನತ್ವಂ ಮಾನಸತ್ವಾಚ್ಚಲಂ ಭವೇತ್ ।

ಶುಕ್ತಿರಜತಾದಿ ಭ್ರಮಕ್ಕೆ ಪ್ರಾಮಾಣ್ಯವಾದರೂ ಮನೋಜನ್ಯವಾದ್ದರಿಂದ ಅದು ಬಾಧಿತವಾಗುವುದು. ಸಾಕ್ಷಿಜ್ಞಾನವು ಸರ್ವಥಾ ಅಬಾಧಿತವಾದ್ದರಿಂದ ಅದಕ್ಕೇ ಪ್ರಾಮಾಣ್ಯವು. ಆದ್ದರಿಂದ ಸಾಕ್ಷಿಯಾಥಾರ್ಥ್ಯ ನಿಯಮಕ್ಕೆ ಭಂಗವಿರುವುದಿಲ್ಲ.

ಸಾಧ್ಯವ್ಯಭಿಚಾರಿಯಾದ ಲಿಂಗವು ಅಪ್ರಮಾಣವು ಎಂದು ಹೇಳಲಾಯಿತು.

ಅದರಲ್ಲಿ ವಿಶೇಷವನ್ನು ಹೇಳುತ್ತಾರೆ –

ಉತ್ಸರ್ಗತೋಽಪಿ ಯತ್ಪ್ರಾಪ್ಯಮಪವಾದವಿವರ್ಜಿತಮ್ ॥೨೧॥

ವ್ಯಭಿಚಾರ್ಯಪವಾದೇನ ಮಾನಮೇವ ಭವಿಷ್ಯತಿ ।

ಯಾವ ಲಿಂಗವು ಸ್ವಾಭಾವಿಕವಾಗಿಯೇ ಅಪವಾದರಹಿತವೆಂದು ನಿಶ್ಚಿತವೇ ಆಗಿದ್ದರೂ ಕಾರಣವಿಶೇಷದಿಂದ ಸಾಧ್ಯವಿಲ್ಲದಿರುವ ಸ್ಥಳದಲ್ಲಿರುತ್ತದೋ ಅದು ಪ್ರಮಾಣವೇ ಆಗುವುದು. ಅದು ಹೇಗೆಂದರೆ –

ಅತೋ ಹಿ ಭೋಜನಾದೀನಾಮಿಷ್ಟಸಾಧನತಾನುಮಾ ॥೨೨॥

ಮಾನಂ ವ್ಯವಹೃತೌ ನಿತ್ಯಂ ವ್ಯಭಿಚಾರೋ ಹಿ ತತ್ರ ಚ ।

ಉಪಾಧಿ ನಿಮಿತ್ತಕವಾದ ವ್ಯಭಿಚಾರಕ್ಕೆ ಅಪ್ರಮಾಣ್ಯ ಕಾರಣತ್ವವಿಲ್ಲ. ಆದ್ದರಿಂದ ಮುಂದೆ ಆಗತಕ್ಕ ಭೋಜನಾದಿಗಳಿಗೆ ಇಷ್ಟಸಾಧನತ್ವಾನುಮಾನವು ಪ್ರಮಾಣ ವಾಗುವುದು. ಸೋಪಾಧಿಕ ವ್ಯಭಿಚಾರವೂ ಅಪ್ರಾಮಾಣ್ಯಕ್ಕೆ ಕಾರಣವಾಗಿದ್ದರೆ ಆಗ 'ಮುಂದೆ ಆಗಲಿರುವ ಭೋಜನವು ಇಷ್ಟಕ್ಕೆ ಸಾಧನವು ಭೋಜನವಾಗಿರುವುದರಿಂದ ನಿನ್ನೆ ಮಾಡಿದ ಭೋಜನದಂತೆ' ಎನ್ನುವ ಅನುಮಾನವು ಅಪ್ರಮಾಣವೇ ಆಗಬೇಕಾಗುವುದು. ಅಪ್ರಮಾಣವೇ ಆಗಿದ್ದರೆ ವಿವೇಕಿಗಳಿಗೆ ಭೋಜನದಲ್ಲಿ ಪ್ರವೃತ್ತಿ ಕಾಣುತ್ತಿರಲಿಲ್ಲ. ಆದರೆ ಭೋಜನಾದಿಗಳಲ್ಲಿ ನಿತ್ಯವಾದ ನಿಶ್ಶಂಕವಾದ ಪ್ರವೃತ್ತಿ ಕಂಡಿರುವುದರಿಂದ ಸೋಪಾಧಿಕ . ವ್ಯಭಿಚಾರವು ಪ್ರಮಾಣವೇ ಆಗುವುದು. ಭೋಜನಾದಿಗಳಲ್ಲಿ ವ್ಯಭಿಚಾರವಿಲ್ಲವಾದ್ದರಿಂದ ಪ್ರಮಾಣವೆಂದು ಏಕೆ ಹೇಳಬಾರದು ಎಂದರೆ ಅದು ಯುಕ್ತವಲ್ಲ. ಭೋಜನತ್ವ ಮುಂತಾದ ಅನುಮಾನದಲ್ಲಿ ಸಾಧ್ಯವಾದ ಇಷ್ಟಸಾಧನತ್ವದಿಂದ ವ್ಯಭಿಚಾರವು ಸ್ಪಷ್ಟವೇ ಆಗಿದೆ. ಏಕೆಂದರೆ ಕೆಲವುಕಡೆ ಅಪಥ್ಯ ಭೋಜನಾದಿಗಳಲ್ಲಿ ಅನಿಷ್ಟಸಾಧನತ್ವವೂ ಕಂಡಿದೆ. ಅಪಥ್ಯತ್ವ ಮುಂತಾದ ಉಪಾಧಿ ನಿಮಿತ್ತಕವಾದ ವ್ಯಭಿಚಾರವು ಅನಿಷ್ಟಸಾಧನತ್ವಕ್ಕೆ ಕಾರಣವಾಗುವುದು.

ಇದರ ಅಭಿಪ್ರಾಯವಿಷ್ಟು. 'ಯದ್ಯತ್ ಭೋಜನಂ ತತ್ತದಿಷ್ಟಸಾಧನಂ' ಎಂದು ವ್ಯಾಪ್ತಿಯಿದ್ದರೂ ಕೇಲವು ವೇಳೆ ಅಪಥ್ಯ ಭೋಜನವು ಅನಿಷ್ಟಸಾಧನವಾದ್ದರಿಂದ ವ್ಯಭಿಚಾರವೇ. ಹಾಗಿದ್ದರೂ ನಿತ್ಯ ಭೋಜನಾದಿ ವ್ಯವಹಾರಕ್ಕೆ ಭಂಗವಿಲ್ಲ. ಆದ್ದರಿಂದ ನಿತ್ಯವಾದ ವ್ಯವಹಾರವು ಬೇರೆ ರೀತಿಯಿಂದ ಕೂಡದಿರುವುದರಿಂದ ಪ್ರಮಾಣಗಳಿಗೆ ಪ್ರಾಮಾಣ್ಯವನ್ನು ಗ್ರಹಿಸತಕ್ಕ ಸಾಕ್ಷಿಯನ್ನು ಅಂಗೀಕರಿಸಬೇಕು.

ಹೀಗೆ ಅಸದಾಶ್ರಯತ್ವಕ್ಕೆ ಹೇತುದೂಷಣವನ್ನು ನಿರಾಕರಿಸಿ ಈಗ ವ್ಯಧಿಕರಣಾ–ಸಿದ್ಧಿಯೂ ಹೇತುದೂಷಣವಲ್ಲವೆಂದು ಹೇಳುತ್ತಾರೆ. ವ್ಯಧಿಕರಣ ಎಂದರೆ ಹೇತು ಮತ್ತು ಸಾಧ್ಯಗಳು ಬೇರೇ ಬೇರೆ ಕಡೆ ಇರುವುದು.

ವ್ಯಾಪ್ತತ್ವೇ ವ್ಯಾಶ್ರಯತ್ವಂ ತು ಕಥಮೇವ ಹಿ ದೂಷಣಮ್ ॥೨೩॥

ಹೇತುವಿಗೆ ಸಾಧ್ಯದಿಂದ ವ್ಯಾಪ್ತಿಯಿದ್ದರೆ ಆಗ ವಿಭಿನ್ನಾಶ್ರಯತ್ವರೂಪವಾದ ವ್ಯಧಿಕರಣಾಸಿದ್ಧಿಯು ಹೇಗೆ ತಾನೆ ದೂಷಣವಾದೀತು. ಅಂದರೆ ಹೇಗೂ ದೂಷಣ ವಾಗುವುದಿಲ್ಲ. ಏಕೆಂದರೆ ವ್ಯಾಪ್ತ್ಯಾದಿ ಅಂಗಗಳು ಪೂರ್ಣವಿರುವಾಗ ವ್ಯಧಿಕರಣತ್ವ ಮಾತ್ರದಿಂದ ಹೇತುವಿಗೆ ಅಸಾಧಕತ್ವವು ಎಲ್ಲಿಯೂ ಕಂಡುಬಂದಿಲ್ಲ.

ಇಷ್ಟೇ ಅಲ್ಲದೆ ವ್ಯಧಿಕರಣಕ್ಕೂ ವ್ಯಾಪ್ತ್ಯಾದಿಗಳು ಇರುವುದರಿಂದ ಸಾಧಕತ್ವವು ದೃಷ್ಟವಾಗಿದೆ ಎನ್ನುತ್ತಾರೆ –

ರೋಹಿಣ್ಯುದಯ ಆಸನ್ನಃ ಕೃತ್ತಿಕಾಭ್ಯುದಿತಾ ಯತಃ ।

ಇತ್ಯುಕ್ತೇ ಸಾಧನಂ ನೋ ಕಿಂ ನ ಹ್ಯಜ್ಞೈವಾತ್ರ ಸಾಧಿಕಾ ॥೨೪॥

ಕೃತ್ತಿಕಾನಕ್ಷತ್ರದ ಉದಯವನ್ನು ಕಂಡು ರೋಹಿಣಿಯ ಉದಯ ಸಮೀಪಿಸಿತು ಎಂದು ಹೇಳಿದರೆ, ಅದು ವ್ಯಧಿಕರಣವಾಗಿದ್ದರೂ, ಸಾಧ್ಯಸಿದ್ಧಿಗೆ ಅಂಗವಾಗುವುದಿಲ್ಲ ಎಂದು ಹೇಳುವ ಹಾಗಿಲ್ಲ. ಅದು ಆಗಿಯೇ ಆಗುತ್ತದೆ ಎಂದು ಅಭಿಪ್ರಾಯ.

ಕಾಲಾದಿರೂಪವಾದ ಅಧಿಕರಣವನ್ನು ಇಟ್ಟುಕೊಂಡು ಪ್ರಯೋಗ ವಿಪರಿಣಾಮ ವನ್ನು ಮಾಡಬೇಕೆನ್ನುವ ನೈಯಾಯಿಕರ ವಾದವನ್ನು 'ನ ಹಿ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ. 'ಅತ್ರ' ಉಪಪತ್ತಿಸಿದ್ಧವಾದ ಅರ್ಥದಲ್ಲಿ, 'ಆಜ್ಞೈವ' ಸಮಯ ಮಾತ್ರವೇ, 'ನ ಸಾಧಿಕಾ ಹಿ' ಸಾಧಕವಾಗುವುದಿಲ್ಲ. ಇದು ಪ್ರಸಿದ್ಧವು.

ಹೀಗೆ ವ್ಯಧಿಕರಣಾಸಿದ್ಧಿಯು ದೂಷಣವಲ್ಲವೆಂದು ನಿರೂಪಿಸಿದರು. ಹಾಗೆಯೇ ಸಾಧ್ಯವಿಶೇಷಣದ ಅಪ್ರಸಿದ್ಧಿಯೂ ದೂಷಣವಾಗದೆದು ಹೇಳುತ್ತಾರೆ. ಹಾಗಾದರೆ ಜಗತ್ತು ಸದಸದ್ವಿಲಕ್ಷಣವೆನ್ನುವ ಪಕ್ಷವನ್ನು ಅಪ್ರಸಿದ್ಧಸಾಧ್ಯವಿಶೇಷಣವೆಂಬ ಹೇತುವಿ ನಿಂದಲೇ ದೂಷಿಸಬೇಕಾಗುತ್ತದೆ. ಆದ್ದರಿಂದ ಅಪ್ರಸಿದ್ಧಸಾಧ್ಯವಿಶೇಷಣವು ದೂಷಣ ವಲ್ಲವೆಂದು ಹೇಗೆ ಹೇಳುತ್ತೀರಿ ಎಂದು ಆಶಂಕಿಸಿದರೆ –

ಅನ್ಯತ್ಸದಸತೋರ್ವಿಶ್ವಮಿತಿ ಚ ವ್ಯಾಹತೇರಮಾ ।

ಅಸಿದ್ಧಸಾಧನೇ ದೋಷಃ ಕೋ ವ್ಯಾಪ್ತಿರ್ಯದಿ ವಿದ್ಯತೇ ॥೨೫॥

ವಿಶ್ವವು ಸತ್ತೂ ಅಲ್ಲ ಅಸತ್ತೂ ಅಲ್ಲ, ಇವೆರಡಕ್ಕಿಂತ ವಿಲಕ್ಷಣ ಎನ್ನುವ ಪ್ರತಿಜ್ಞೆಯು ಸ್ವವಚನವಿರೋಧ ಬರುವುದರಿಂದ ಅಪ್ರಮಾಣ. ವ್ಯಾಪ್ತಿ ಮುಂತಾದವು ಎಲ್ಲಿ ಇರುತ್ತದೋ ಅಲ್ಲಿ ಅಪ್ರಸಿದ್ಧವಾದುದನ್ನು ಸಾಧಿಸಿದರೆ ಯಾವ ದೋಷವೂ ಇರುವುದಿಲ್ಲ.

ವ್ಯಾಪ್ತಿಶ್ಚ ವ್ಯತಿರೇಕೇಣ ತತ್ರ ತೈಶ್ಚಾವಗಮ್ಯತೇ ।

ಕೇವಲ ವ್ಯತಿರೇಕೀ ಸಾಧನಗಳ ಸಮೂಹದಲ್ಲಿ, ಅಪ್ರಸಿದ್ಧಗಳಾದ ಸಾತ್ಮಕತ್ವಾದಿ ಸಾಧ್ಯಗಳಿಂದ ವ್ಯಾಪ್ತಿಯೂ ಕೂಡ ಇದೆ. ಪಕ್ಷಧರ್ಮತ್ವವು ಮಾತ್ರ ಇರುವುದಿಲ್ಲ.

ವ್ಯತಿರೇಕವಾದ, ಅಂದರೆ ಸಾಧ್ಯಾಭಾವಕ್ಕೆ ಸಾಧನಾಭಾವ ವ್ಯಾಪ್ತವಾದ, ಲಿಂಗದಿಂದ ವ್ಯಾಪ್ತಿಯು ತಿಳಿಯಲ್ಪಡುತ್ತದೆ.

ಅಭಾವದ ಸಾಧನೆಯಲ್ಲಿ ಅಪ್ರಸಿದ್ಧ ವಿಶೇಷಣತ್ವವು ದೂಷಣವಾಗುವುದಿಲ್ಲ. ಅಭಾವದ ಅಭಾವವು ಭಾವರೂಪವಾದುದರಿಂದ ಪ್ರತಿಯೋಗಿಜ್ಞಾನದ ಅಪೇಕ್ಷೆ ಇರುವುದಿಲ್ಲ. ಆದರೆ ವ್ಯಾಪ್ತ್ಯಾದಿಗಳನ್ನು ಹೇಳಲಿಕ್ಕೆ ಬಾರದ ಸ್ಥಳಗಳಲ್ಲಿ ಅಪ್ರಸಿದ್ಧ ವಿಶೇಷಣತ್ವವು ದೂಷಣವೇ ಆಗುವುದು. ಆದಪ್ರಯುಕ್ತ ಕೇವಲ ವ್ಯತಿರೇಕಿಯ ಪ್ರಾಮಾಣ್ಯವನ್ನವಲಂಬಿಸಿ, ಅಪ್ರಸಿದ್ಧವಿಶೇಷಣತ್ವಕ್ಕೆ ದೂಷಣತ್ವವನ್ನು ನಿರಾಕರಿಸ ಕೂಡದು ಎಂದು ಆಶಂಕಿಸಿದರೆ –

ಅಪ್ರಸಿದ್ಧಸ್ಯ ಸಾಧ್ಯಸ್ಯ ಸಾಧಕತ್ವಂ ಯದೇಷ್ಯತೇ ॥೨೬॥

ಲಿಂಗಸ್ಯೋಕ್ತೌ ವಿಶೇಷೋऽಯಂ ಕೇನ ಮಾನೇನ ಗಮ್ಯತೇ ।

ಹೇತುವಿಗೆ ಅಪ್ರಸಿದ್ಧವಾದ ಸಾಧ್ಯದ ಸಾಧಕತ್ವವು ಅಂಗೀಕೃತವಾದ ಪಕ್ಷದಲ್ಲಿ ಆಗ ಈ ವಚನದಲ್ಲಿ ವಿಶೇಷವು ಯಾವ ಪ್ರಮಾಣದಿಂದ ತಿಳಿಯಲ್ಪಡುತ್ತದೆ ? ಯಾವುದರಿಂದಲೂ ತಿಳಿಯಲ್ಪಡುವುದಿಲ್ಲ ಎಂದರ್ಥ. ಅಪ್ರಸಿದ್ಧವಿಶೇಷಣತ್ವವು ಕೇವಲವ್ಯತಿರೇಕೀಸಾಧಕವಾದ್ದರಿಂದ ಆದಕ್ಕೆ ದೂಷಣತ್ವವಿರುವುದಿಲ್ಲ.

ವ್ಯತಿರೇಕವ್ಯಾಪ್ತಿಯೇ ಸಾಧ್ಯದ ಸಿದ್ಧಿಗೆ ಅಂಗವೆಂದು ಹೇಳಿದರೂ, ವ್ಯತಿರೇಕ ವ್ಯಾಪ್ತಿಯ ಜ್ಞಾನವು ಅವಶ್ಯಕ. ವ್ಯತಿರೇಕವಾದರೋ ಪ್ರತಿಯೋಗಿಜ್ಞಾನಾಧೀನವಾದ ಜ್ಞಾನವುಳ್ಳದ್ದೇ ಆಗಿದೆ. ಆದಕಾರಣ ಪ್ರತಿಯೋಗಿಯಿಲ್ಲದಿರುವ ಅಭಾವಗಳಿಗೂ ವ್ಯತಿರೇಕಿಯು ವ್ಯಾಪ್ತಿಯನ್ನು ಹೇಗೆ ಗ್ರಹಿಸೀತು? ಈ ಹಿಂದೆ ಹೇಳಿದ ಉಕ್ತಿ ವಿಶೇಷಗಳಿಂದಲೇ ಸ್ವಲ್ಪಮಟ್ಟಿಗೆ ಪ್ರತಿಯೋಗಿಯ ಜ್ಞಾನವಾಗುತ್ತಿರಲು, ವ್ಯಾಪ್ತಿಯು ಸುಲಭ ಗ್ರಾಹ್ಯವಾಗುವುದು. ಹೀಗಿರುವಾಗ ಪ್ರತಿಜ್ಞಾವಾಕ್ಯವು ತಿಳಿಯದ ಪದಾರ್ಥ ಜ್ಞಾನವುಳ್ಳದ್ದಾಗುವ ಸಂಭವವಿಲ್ಲ ಎಂದು ಆಶಂಕಿಸಿದರೆ –

ಸಾಧನಂ ಪರಮಾಣ್ವಾದೇರ್ಯದ್ಯಸಿದ್ಧಸ್ಯ ಚೇಷ್ಯತೇ ॥೨೭॥

ಯಥಾನುಭವಮೇವೈತನ್ನಾಂಗೀಕಾರ್ಯಂ ಕುತಸ್ತದಾ ।

ಅಪ್ರಸಿದ್ಧವಾದ ಪರಮಾಣು ಮುಂತಾದವುಗಳಿಗೆ ಅನುಭವಾನುಸಾರವಾಗಿಯೇ ಸಾಧನವು ಅಂಗೀಕರಿಸಲ್ಪಡುವುದಾದರೆ, ಅದೇ ಮಾರ್ಗವನ್ನನುಸರಿಸಿ ವ್ಯತಿರೇಕೀ ಸಾಧ್ಯಸಾಧನವನ್ನೂ ಕೂಡ ಏಕೆ ಅಂಗೀಕರಿಸಬಾರದು?

'ಯತ್ರ' ಇತ್ಯಾದಿ ವಚನದಿಂದ ಉಪಸಂಹಾರ ಮಾಡುತ್ತಾರೆ –

ಯತ್ರ ನಾತಿಪ್ರಸಂಗೋऽಸ್ತಿ ಮಾನಂ ನ ಚ ವಿಪರ್ಯಯೇ ॥೨೮॥

ಕ್ಲಿಷ್ಟಕಲ್ಪನಯೈವಾತ್ರ ಸಾಧ್ಯಮಿತ್ಯತಿದುರ್ಬಚಃ ।

ಎಲ್ಲಿ ಅನ್ವಯವ್ಯಾಪ್ತ್ಯಾದಿಗಳನ್ನು ಹೇಳಿ ಸಾಧಿಸಬೇಕೆಂದು ನಿಯಾಮಕವಾದ ಪ್ರಮಾಣವೂ ಇಲ್ಲವೋ, ಹಾಗೆ ಸಾಧಿಸದಿದ್ದರೆ ಅತಿಪ್ರಸಂಗವೂ ಇಲ್ಲವೋ, ಅಂಥಹ ಕೇವಲವ್ಯತಿರೇಕೀ ವಿಷಯದಲ್ಲಿ ಕ್ಲಿಷ್ಟವಾದ ಕಲ್ಪನೆಯಿಂದಲೇ ಸಾಧಿಸಬೇಕೆಂದು ಹೇಳುವುದು ಅತಿದುಷ್ಟವಾದ ವಚನವು.

ಕೇವಲವ್ಯತಿರೇಕಿಗೆ ಸಪಕ್ಷವಿಲ್ಲದಿರುವುದರಿಂದ 'ಸಪಕ್ಷೇ ಸತ್ವ' ಎನ್ನುವ ಅವಯವವು ಕಡಿಮೆಯಾದ್ದರಿಂದ, ನ್ಯೂನವಾದ ಅವಯವವುಳ್ಳ ಅನುಮಾನವು ಅಪ್ರಸಿದ್ಧವಾದ ಸಾಧ್ಯವನ್ನು ಸಾಧಿಸುವಲ್ಲಿ ಪ್ರಮಾಣವಲ್ಲ ಎನ್ನುವ ಪಕ್ಷವನ್ನು ಈಗ ನಿರಾಕರಿಸುತ್ತಾರೆ –

ಪರಿಶೇಷೋ ಮಿಥಃಸಿದ್ಧಿಶ್ಚಕ್ರಕಸ್ವಾಶ್ರಯಾದಯಃ ॥೨೯॥

ಅಸಿದ್ಧಸಾಧಕತ್ವೇನ ಪಂಚಾವಯವತಾಂ ವಿನಾ ।

ಅಂಗೀಕಾರ್ಯಾಃ ಸಮಸ್ತೈಸ್ತನ್ನಿಯಮಃ ಕಿಂ ನಿಬಂಧನಃ ॥೩೦॥

ಪರಿಶೇಷ, ಮಿಥಸ್ಸಿದ್ಧಿ, ಚಕ್ರಕ, ಸ್ವಾಶ್ರಯ, ಅನವಸ್ಥಾ ಇವೇ ಮುಂತಾದವು ಅಸಿದ್ಧವಾದುದುನ್ನು ಸಾಧಿಸಿಕೊಡುವುದರಿಂದ, ಪಂಚಾವಯವತ್ವವನ್ನು ಹೊರತು ಪಡಿಸಿ (ಅಂದರೆ ಅನುಮಾನದಲ್ಲಿ ಪಕ್ಷಧರ್ಮತಾ ಮೊದಲಾದ ಐದು ಅವಯವಗಳು ಇರಲೇಬೇಕೆಂಬ ನಿಯಮವನ್ನು ಬಿಟ್ಟು), ಪರಿಶೇಷಾದಿಗಳನ್ನು ಎಲ್ಲ ವಾದಿಗಳೂ ಅನುಮಾನಗಳೆಂದು ಅಂಗೀಕರಿಸಬೇಕು. ಪಂಚಾವಯವತ್ವವು ಅವಶ್ಯಕ ಎನ್ನುವ ನಿಯಮಕ್ಕೆ ಯಾವ ನಿಯಾಮಕವಿದೆ? ಅಂದರೆ ಈ ನಿಯಮಕ್ಕೆ ಕಾರಣವೇ ಇಲ್ಲ ಎಂದರ್ಥ. ಪಂಚಾವಯವತ್ವವಿಲ್ಲದಿದ್ದರೂ ಅನುಮಾನತ್ವವಿದ್ದರೆ ಪ್ರಾಮಾಣ್ಯ ಸಾಧನೆಗೆ ಯಾವ ಬಾಧಕವೂ ಇಲ್ಲ. ಆದ್ದರಿಂದ ನ್ಯೂನಾವಯವತ್ವವುಳ್ಳ ಅನುಮಾನವು ಪ್ರಮಾಣವಲ್ಲ ಎನ್ನುವ ಈ ದೂಷಣವು ಯುಕ್ತವಲ್ಲ.

ಪ್ರಸಕ್ತವಾದ ಎರಡು ವಸ್ತುಗಳಲ್ಲಿ ಒಂದನ್ನು ಪ್ರತಿಷೇಧ ಮಾಡಿದರೆ ಉಳಿಯುವ ವಸ್ತುವಿಗೆ ಸಂಬಂಧಿಸಿದ ಬುದ್ಧಿಯು ಪರಿಶೇಷ. ಎರಡು ವಸ್ತುಗಳಿಗೆ ಪರಸ್ಪರ ಅಪೇಕ್ಷೆಯಿಂದ ಉತ್ಪತ್ತಿಯಾಗಲೀ ಜ್ಞಪ್ತಿಯಾಗಲೀ ಅಂಗೀಕರಿಸುವುದು ಮಿಥಸ್ಸಿದ್ಧಿ. ಅನೇಕ ವಸ್ತುಗಳಿಗೆ ಚಕ್ರದಂತೆ ಪರಸ್ಪರ ಅಪೇಕ್ಷೆಯಿಂದ ಉತ್ಪತ್ತಿ, ಜ್ಞಪ್ತಿಗಳನ್ನು ಹೇಳುವುದು ಚಕ್ರಕ. ತನ್ನನ್ನು ಅಪೇಕ್ಷಿಸಿಯೇ ತನಗೆ ಉತ್ಪತ್ತ್ಯಾದಿಗಳನ್ನು ಹೇಳುವುದು ಸ್ವಾಶ್ರಯ. ಮೊದಲನೆಯದನ್ನು ಸಾಧಿಸಲು ಎರಡನೆಯ ವಸ್ತುವಿನ ಅಪೇಕ್ಷೆ, ಅದನ್ನು ಸಾಧಿಸಲು ಮೂರನೆಯ ವಸ್ತುವಿನ ಅಪೇಕ್ಷೆ, ಅದಕ್ಕೆ ಮತ್ತೊಂದರ ಅಪೇಕ್ಷೆ ಹೀಗೆ ಮುಗಿಯದ ಪರಂಪರೆಯೇ ಅನವಸ್ಥೆ.

ಹೀಗೆ ಆಶ್ರಯಾಸಿದ್ಧಿ ಮೊದಲಾದವುಗಳು ದೂಷಣವಲ್ಲವೆಂದು ಉಪಪಾದಿಸಿ, 'ಪರಿಹಾರರೂಪವಾದ ವಾಕ್ಯದಲ್ಲಿಯೂ ಸಿದ್ಧತ್ವವು ದೂಷಣವು' ಎಂದು ಯಾವುದು ಹೇಳಲ್ಪಟ್ಟಿದೋ ಅದು ಯುಕ್ತವಲ್ಲ. ವಾದದಲ್ಲಿ ನಿಗ್ರಹಸ್ಥಾನದ ಅಭಾವವು

ಹೇಳಲ್ಪಟ್ಟಿದೆ ಎನ್ನುವ ಆಶಂಕೆಯನ್ನು 'ಸಿದ್ಧಸಾಧನತಾಯಾಂ' ಎಂಬ ವಚನದಿಂದ ಪರಿಹರಿಸುತ್ತಾರೆ –

ಸಿದ್ಧಸಾಧನತಾಯಾಂ ಚ ನ ಕಥಾವಸಿತಿರ್ಭವೇತ್ ।

ಹೇಗೆ ಸಿದ್ಧಪ್ರಶ್ನಾದಿಗಳನ್ನು ಮಾಡಿದರೂ ವಾದಕಥೆಯು ಮುಕ್ತಾಯವಾಗದೋ ಹಾಗೆಯೇ ಸಿದ್ಧಾರ್ಥವನ್ನು ಸಾಧಿಸಿದರೂ ಕಥಾಸಮಾಪ್ತಿಯು ಆಗಲಾರದು.

'ತದನ್ಯಸ್ಯ ಸಿದ್ಧತೈವ ಹಿ ಸಾಧಿಕಾ' ಎನ್ನುವುದರಿಂದ ಹೇತುವಿಗೆ ವ್ಯಾಪ್ತಿಯ ಅಸಿದ್ಧಿಯೂ, ಸ್ವರೂಪದ ಅಸಿದ್ಧಿಯೂ ದೂಷಣವೆಂದು ಸೂಚಿತವಾಗುವುದು. ಈ ವಿಷಯದಲ್ಲಿ ಕೆಲವರು ಹೀಗೆ ಹೇಳುತ್ತಾರೆ. ವಾದಿ ಪ್ರತಿವಾದಿಗಳ ಮಧ್ಯದಲ್ಲಿ ಒಬ್ಬರ ಮತದಿಂದ ಅಥವಾ ಇಬ್ಬರ ಮತದಿಂದಲೂ ಎಂಬುದಾಗಿ ವ್ಯಾಪ್ತ್ಯಭಾವಾದಿಗಳಲ್ಲಿ ಎರಡು ವಿಧ. ಇನ್ನು ಕೆಲವರು, ವಸ್ತುವಿನಲ್ಲಿ ವಿಕಲ್ಪವು ಅಸಂಭವವಾದ್ದರಿಂದ ಅನ್ಯತರ ಅವ್ಯಾಪ್ತ್ಯಾದಿಯೆಂಬುದು ಇಲ್ಲವೇ ಇಲ್ಲವೆನ್ನುತ್ತಾರೆ. ಇದರಲ್ಲಿ ತತ್ವವು ಯಾವುದೆಂದು ಆಕಾಂಕ್ಷೆ ಬಂದರೆ ಅದನ್ನು ಹೇಳುತ್ತಾರೆ –

ವ್ಯಭಿಚಾರೋ ಹೇತ್ವಸಿದ್ಧಿರೇಕಪಕ್ಷೇಽಪಿ ದೂಷಣಮ್ ॥೬೧॥

ಇಲ್ಲಿ ವ್ಯಭಿಚಾರ ಪದದಿಂದ ಅವ್ಯಾಪ್ತಿಯನ್ನು ಮಾತ್ರ ತೆಗೆದುಕೊಳ್ಳಬೇಕು. ವಾದಿಪ್ರತಿವಾದಿಗಳಲ್ಲಿ ಉಭಯಪಕ್ಷಗಳಲ್ಲಿ ಮಾತ್ರವಲ್ಲದೆ ಕೇವಲ ಒಂದು ಪಕ್ಷದಲ್ಲಿಯೂ ಕೂಡ ಅವ್ಯಾಪ್ತಿ ಮತ್ತು ಹೇತ್ವಸಿದ್ಧಿಗಳು ದೂಷಣವೇ.

ದೋಷಗಳಲ್ಲಿ ಪ್ರತ್ಯೇಕವಾಗಿ ದೃಷ್ಟಾಂತದೋಷಗಳು ಎಂಬುದಾಗಿ ಇರುವುದಿಲ್ಲ. ಅವು ಯಥಾಯೋಗ್ಯವಾಗಿ ಹೇತು ದೋಷಗಳಲ್ಲಿಯೇ ಅಂತರ್ಭಾವವಾಗುತ್ತವೆ ಎಂದು ಕೇಲವರು ಹೇಳುತ್ತಾರೆ. ಅವರನ್ನು ಕುರಿತು ಹೇಳುತ್ತಾರೆ –

ಸಾಧ್ಯಸಾಧನವೈಕಲ್ಯಂ ದೃಷ್ಟಾಂತಸ್ಯ ವಿಶೇಷಣೇ ।

ವೈಯರ್ಥ್ಯಮೇಕಾಸಿದ್ಧೌ ಚ ವಿಶಿಷ್ಟಾಸಿದ್ಧಿರೇವ ಹಿ ॥೬೨॥

ಸಾಧ್ಯ ಮತ್ತು ಸಾಧನವೈಕಲ್ಯಗಳು ಹೇತ್ವಾಭಾಸದಲ್ಲಿ ಸೇರಿದರೂ ಅವು ದೃಷ್ಟಾಂತವನ್ನು ಆಶ್ರಯಿಸಿರುವುದರಿಂದ ದೃಷ್ಟಾಂತದ ದೋಷಗಳೇ ಎನಿಸುತ್ತವೆ. ಸಾಧ್ಯ ವೈಕಲ್ಯ, ಸಾಧನವೈಕಲ್ಯ, ಉಭಯವೈಕಲ್ಯ ಮತ್ತು ಆಶ್ರಯಹೀನತ್ವ ಎಂದು ನಾಲ್ಕು ಸಾಧರ್ಮ್ಯ ದೋಷಗಳು ಹಾಗೂ ಸಾಧ್ಯಾವ್ಯಾವೃತ್ತಿ, ಸಾಧನಾವ್ಯಾವೃತ್ತಿ, ಉಭಯಾವ್ಯಾವೃತ್ತಿ ಮತ್ತು ಆಶ್ರಯಹೀನತ್ವ ಎಂದು ನಾಲ್ಕು ವೈಧರ್ಮ್ಯ ದೋಷಗಳು, ಹೀಗೆ ಒಟ್ಟು ಎಂಟು ಪ್ರಕಾರದ ದೃಷ್ಟಾಂತದೋಷಗಳನ್ನು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ದೃಷ್ಟಾಂತದಲ್ಲಿ ಸಾಧ್ಯವೈಕಲ್ಯ ಹಾಗೂ ಸಾಧನ ವೈಕಲ್ಯಗಳು ದೂಷಣಗಳು. ಹಾಗೆಯೇ ಸವಿಶೇಷಣಕ್ಕೂ ವಿಶೇಷಣವೈಯರ್ಥ್ಯವು ದೂಷಣವು. ವಿಶೇಷಣ ವಿಶೇಷ್ಯಗಳಲ್ಲಿ ಒಂದಕ್ಕೆ ವೈಯರ್ಥ್ಯದಿಂದ ಅಸಿದ್ಧಿಯಿದ್ದರೆ

ವಿಶಿಷ್ಟಾಸಿದ್ಧಿಯೂ ತಪ್ಪಿದ್ದಲ್ಲ.

ಹಾಗಾದರೆ ಪ್ರಶ್ನದೋಷಗಳಲ್ಲಿ ನಾಲ್ಕು ವಿಧವೆಂದು ಹೇಳಿ ಅದರಲ್ಲಿ ವೈಫಲ್ಯ ಮತ್ತು ಅಸಂಗತಿಗಳಿಗೆ ದೋಷತ್ವವನ್ನು ಹೇಳಿದ್ದು ಸರಿಯಲ್ಲ. ಏಕೆಂದರೆ ಅವುಗಳಲ್ಲಿ ದೋಷಗಳು ಹುಟ್ಟುವುದೇ ಅಶಕ್ಯ ಎಂದು ಆಶಂಕಿಸಿದರೆ –

ಅಪ್ರಯೋಜನತಾ ತತ್ರ ಪ್ರಥಮಪ್ರಶ್ನದೂಷಣಮ್ ।

ಪ್ರಶ್ನದೋಷಗಳಲ್ಲಿ ಅಪ್ರಯೋಜನತ್ವವೆನ್ನುವುದು ಪ್ರಥಮಪ್ರಶ್ನದಲ್ಲಿ ಕಂಡು ಬರುವುದು. ಉತ್ತರೋತ್ತರ ಪ್ರಶ್ನಗಳಲ್ಲಿ ಅದನ್ನು ನಿಶ್ಚಯಿಸುವುದು ಅಶಕ್ಯವಾದರೂ, ಪ್ರಥಮಪ್ರಶ್ನದಲ್ಲಿ ಅಪ್ರಯೋಜನತ್ವಕ್ಕೆ ದೂಷಣತ್ವದ ಶಂಕೆಯು ಶಕ್ಯವೇ ಆಗಿದೆ.

ಹೀಗಾದರೆ ಆರೇ ನಿಗ್ರಹಸ್ಥಾನಗಳು ಎನ್ನುವ ನಿಯಮಕ್ಕೆ ಭಂಗ ಬರುವುದು ಎಂದು ಆಶಂಕಿಸಿದರೆ –

ಸಿದ್ಧಪ್ರಶ್ನಾದಿಕಂ ಯತ್ತದಾಧಿಕ್ಯಾಂತರ್ಗತಂ ಭವೇತ್ ॥೩೩॥

ಸಿದ್ಧಪ್ರಶ್ನ, ಸಿದ್ಧಸಾಧನ, ಪ್ರಶ್ನವೈಯರ್ಥ್ಯಗಳು ನಿಗ್ರಹಸ್ಥಾನದಲ್ಲಿಯೇ ಒಂದಾದ ಆಧಿಕ್ಯದಲ್ಲಿಯೇ ಅಂತರ್ಭಾವ ಹೊಂದುತ್ತವೆ. ಆದ್ದರಿಂದ ಆರೇ ನಿಗ್ರಹಸ್ಥಾನಗಳು ಎನ್ನುವ ನಿಯಮಕ್ಕೆ ಭಂಗವಿಲ್ಲ.

ಕೆಲವರು ಅರ್ಥಾಪತ್ತ್ಯಾದಿಗಳನ್ನು ಅನುಮಾನಾದಿಗಳಿಂದ ಪ್ರತ್ಯೇಕವಾದ ಪ್ರಮಾಣ ಎಂದು ಹೇಳುತ್ತಾರೆ. ಅದನ್ನು ನಿರಾಕರಿಸುತ್ತಾರೆ –

ಅರ್ಥಾಪತ್ತ್ಯುಪಮಾಭಾವಾ ಅನುಮಾಂತರ್ಗತಾಃ ಕ್ವಚಿತ್ ।

ಪ್ರತ್ಯಕ್ಷಾಂತರ್ಗತೋಽಭಾವಃ ಸುಖಾದೇರ್ನಿಯಮೇನ ಚ ॥೩೪॥

ಅರ್ಥಾಪತ್ತಿ, ಉಪಮಾನ, ಅಭಾವಗಳು ಕೆಲವು ಕಡೆ ಅನುಮಾನದಲ್ಲಿಯೇ ಸೇರುತ್ತವೆ. ಕೆಲವು ಕಡೆ ಅಭಾವವು ಪ್ರತ್ಯಕ್ಷದಲ್ಲಿಯೇ ಸೇರುತ್ತದೆ. ಆದರೆ ಸುಖ ಮುಂತಾದವು ಸಾಕ್ಷಿಗೆ ಮಾತ್ರ ವೇದ್ಯವಾಗುವ ಪ್ರಯುಕ್ತ ಅವುಗಳ ಅಭಾವವು ನಿಯಮೇನ ಸಾಕ್ಷಿಪ್ರತ್ಯಕ್ಷದಿಂದಲೇ ಗ್ರಾಹ್ಯವಾಗುವುದು.

ಅನ್ಯತ್ರ ಘಟಿತಿ ಪ್ರಾಪ್ತಃ ..... ।

ಸುಖಾದಿಗಳಿಂದ ಇತರವಾದ ಘಟಾದಿಗಳು ಪ್ರತಿಯೋಗಿಯಾಗಿರುವಾಗ ಯಾವ ಅಭಾವಪ್ರಮಾಣವು ಬಹುಬೇಗನೆ ಪ್ರಾಪ್ತವಾಗುವುದೋ ಅದು ಪ್ರತ್ಯಕ್ಷವೇ ಆಗಿರುತ್ತದೆ. ಸ್ವಲ್ಪ ತಡವಾಗಿ ಪ್ರಾಪ್ತವಾಗುವುದು ಅನುಮಾನವೆನಿಸುತ್ತದೆ.

ಹಾಗಾದರೆ ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದಗಳು ಪ್ರಮಾಣಗಳೆಂದು ಪರಿಗಣಿಸಲ್ಪಟ್ಟಿರುವಾಗ ಪ್ರಮಾಣಗಳಲ್ಲಿ

ಮೂರೇ ವಿಧ ಎನ್ನುವುದು ಹೇಗೆ ಕೂಡುತ್ತದೆ ಎಂದು ಆಶಂಕಿಸಿದರೆ ಅದನ್ನು ಪರಿಹರಿಸುತ್ತಾರೆ –

.....ಪ್ರಾರಂಭಾದ್ಯಾಶ್ಚ ಯುಕ್ತಯಃ ।

ಆಗಮಾರ್ಥಾವಸಿತ್ಯರ್ಥಾ ನಿಯತವ್ಯಾಪ್ತಯೋಽಖಿಲಾಃ ॥೩೫॥

ಉಪಕ್ರಮಾದಿಗಳು ಅನುಮಾನದ ಪ್ರಭೇದಗಳೇ ಆಗಿವೆ. ಏಕೆಂದರೆ ಅವೆಲ್ಲವೂ ಆಗಮಾರ್ಥನಿರ್ಣಯಕ್ಕಾಗಿ ನಿಯತವಾಗಿ ವ್ಯಾಪ್ತಿಯ ಅಪೇಕ್ಷೆಯನ್ನು ಹೊಂದಿವೆ.

ಇನ್ನು ವಾಕ್ಯ ಪ್ರಕರಣ ಮುಂತಾದವೂ ಕೂಡ ಅನುಮಾನ ಪ್ರಮಾಣದಲ್ಲಿಯೇ ಸೇರುತ್ತವೆ ಎಂದು ಹೇಳುತ್ತಾರೆ –

ವಾಕ್ಯಂ ಪ್ರಕರಣಂ ಸ್ಥಾನಂ ಸಮಾಖ್ಯಾ ಚ ತಥಾವಿಧಾಃ ।

ಕುರುಪಾಂಡವವತ್ತೇಷಾಮುಪಪತ್ತೇಃ ಪೃಥಗ್ವಚಃ ॥೩೬॥

ವಾಕ್ಯ, ಪ್ರಕರಣ, ಸ್ಥಾನ, ಸಮಾಖ್ಯೆಗಳೂ ಕೂಡ ವ್ಯಾಪ್ತಿಯನ್ನು ಅನುಸರಿಸಿಯೇ ಆಗಮಾರ್ಥನಿರ್ಣಯಕ್ಕೆ ಉಪಯುಕ್ತವಾಗುವುದರಿಂದ ಅವುಗಳೂ ಯುಕ್ತಿಗಳೇ. ಉಪಕ್ರಮಾದಿಗಳಲ್ಲಿ ಉತ್ತರೋತ್ತರ ಪ್ರಾಬಲ್ಯ, ವಾಕ್ಯಾದಿಗಳಲ್ಲಿ ಪೂರ್ವ ಪೂರ್ವ ಪ್ರಾಬಲ್ಯ ಎಂಬ ಭೇದವಿರುವುದರಿಂದ ಅವುಗಳನ್ನು ಪ್ರತ್ಯೇಕವಾಗಿ ಹೇಳಲಾಗಿದೆ. ಪಾಂಡವರೂ ಕುರುವಂಶದವರಾಗಿದ್ದರೂ 'ಸಂತಾನಬೀಜಂ ಕುರುಪಾಂಡವಾನಾಂ' ಇತ್ಯಾದಿ ವಾಕ್ಯಗಳಲ್ಲಿ ಪಾಂಡವರನ್ನು ಪ್ರತ್ಯೇಕವಾಗಿ ಪರಿಗಣಿಸಿರುತ್ತಾರೆ. ಹಾಗೆಯೇ ಉಪಕ್ರಮಾದಿಗಳೂ, ವಾಕ್ಯಾದಿಗಳೂ ಅನುಮಾನದ ಪ್ರಭೇದಗಳೇ ಆಗಿದ್ದರೂ, ಉಪಪತ್ತಿ ಹಾಗೂ ಲಿಂಗಗಳ ನಿಮಿತ್ತದಿಂದ ಪ್ರತ್ಯೇಕವಾಗಿ ಹೇಳುವುದು ಯುಕ್ತವೇ ಆಗುವುದು.

ಹಾಗಿದ್ದರೂ ಜೈನರು ತರ್ಕವನ್ನು ಪ್ರತ್ಯೇಕ ಪ್ರಮಾಣವೆನ್ನುವರು. ಆದರೆ ಮಿಥಸ್ಸಿದ್ಧಿ ಇತ್ಯಾದಿಗಳಿಂದ ತರ್ಕವೂ ಅನುಮಾನದಲ್ಲಿಯೇ ಸೇರುವುದು. ಹಾಗಾದರೆ ತರ್ಕವು ಪ್ರಮಾಣವೇ ಆಗುವುದಿಲ್ಲ. ಅಂದಮೇಲೆ ಅನುಮಾನವಾದರೂ ಹೇಗೆ ಆಗುವುದು? ಅನಿಷ್ಟ ಪ್ರಸಂಜನವೇ ತರ್ಕ. ಪ್ರಾಮಾಣಿಕಪರಿತ್ಯಾಗ ಅಪ್ರಮಾಣಿಕಸ್ವೀಕಾರ ಎಂಬುದಾಗಿ ಅನಿಷ್ಟದಲ್ಲಿ ಎರಡು ವಿಧ. ಆ ತರ್ಕವು ಅತ್ಮಾಶ್ರಯ, ಅನ್ಯೋನ್ಯಾಶ್ರಯ, ಚಕ್ರಕ, ಅನವಸ್ಥಾ, ಪ್ರಸಂಗ ಎಂಬುದಾಗಿ ಐದು ವಿಧ. ತರ್ಕವು ಪ್ರಮಾಣಗಳಿಗೆ ಅನುಗ್ರಾಹಕ ಮಾತ್ರ. ಆದ್ದರಿಂದ ಅಪ್ರಮಾಣವೇ ಆದ ತರ್ಕಕ್ಕೆ ಅನುಮಾನದಲ್ಲಿ ಅಂತರ್ಭಾವ ಹೇಗೆ ಎಂದರೆ –

ಸ್ವನ್ಯಾಯ್ಯೈಃ ಸಾಧನಂ ಕಾರ್ಯಂ ಪರನ್ಯಾಯ್ಯೈಸ್ತು ದೂಷಣಮ್ ।

ಸ್ವನ್ಯಾಯ್ಯೈರ್ದೂಷಣಂ ಚ ಸ್ಯಾತ್ಸಾಧಿತೈಃ ಪ್ರತಿವಾದಿನಃ ॥೩೭॥

ತನಗೆ ಸಿದ್ಧವಾದ ನ್ಯಾಯಗಳಿಂದ (ಧರ್ಮಿ, ಲಿಂಗ, ವ್ಯಾಪ್ತಿ, ದೃಷ್ಟಾಂತಗಳನ್ನು ನ್ಯಾಯ ಶಬ್ದದಿಂದ ತೆಗೆದುಕೊಳ್ಳಬೇಕು) ಸಾಧನವನ್ನು ಹಾಗೂ ದೂಷಣವನ್ನು ಮಾಡತಕ್ಕದ್ದು. ಪರರಿಗಾಗಿಯೇ ಸಿದ್ಧಗಳಾದ ನ್ಯಾಯಗಳಿಂದಲಾದರೂ ದೂಷಣವು ಆಗುವುದು. ಪ್ರತಿವಾದಿಗಳನ್ನು ಕುರಿತು ಸಾಧಿತಗಳಾದ ತನಗೇನೆ ಸಿದ್ಧವಾದ ನ್ಯಾಯಗಳಿಂದ ದೂಷಣವೂ ಹಾಗೂ ಸಾಧನವೂ ಕೂಡ ಆಗುವುದು.

ಇದರ ಅಭಿಪ್ರಾಯವಿಷ್ಟು. ವಾದ ಮತ್ತು ಜಲ್ಪಗಳಲ್ಲಿ ವಾದಿಯು ಸ್ವಪಕ್ಷಸಾಧನ ಹಾಗೂ ಪರಪಕ್ಷದೂಷಣ ಎರಡನ್ನೂ ಮಾಡತಕ್ಕದ್ದು. ವಾದಿ–ಪ್ರತಿವಾದಿ ಪಕ್ಷಗಳೆರಡಕ್ಕೂ ಸಮ್ಮತವಾದ ನ್ಯಾಯಗಳಿಂದಲೇ ಸಾಧನವನ್ನು ಮಾಡಬೇಕು, ಕೇವಲ ಒಂದು ಪಕ್ಷಕ್ಕೆ ಮಾತ್ರ ಸಿದ್ಧವಾದ ನ್ಯಾಯಗಳಿಂದಲ್ಲ. ಉದಾಹರಣೆಗೆ – ಪರ್ವತವು ಬೆಂಕಿಯುಳ್ಳದ್ದು ಹೊಗೆಯಿರುವುದರಿಂದ. ಯಾವುದು ಹೊಗೆಯುಳ್ಳದ್ದೋ ಅದು ಬೆಂಕಿಯುಳ್ಳದ್ದು, ಅಡಿಗೆ ಮನೆಯಲ್ಲಿದ್ದಂತೆ. ಹೀಗೆ ತನಗೂ ಪರರಿಗೂ ಸಮ್ಮತವಾದ ಧೂಮರೂಪವಾದ ಹೇತುವಿನಿಂದಲೇ ಬೆಂಕಿಯನ್ನು ಸಾಧನೆ ಮಾಡಬೇಕು. ದೂಷಣವನ್ನಾದರೋ ಪರರಿಗೆ ಸಿದ್ಧವಾದ ನ್ಯಾಯದಿಂದಲೇ ಮಾಡಬೇಕು.

ಹಾಗಾದರೆ ಆಶ್ರಯಾಸಿದ್ಧಿ, ಅನ್ಯತರಾಸಿದ್ಧಿಗಳು ತರ್ಕದಲ್ಲಿ ದೂಷಣವಾಗುವುದು ಬೇಡ. ಹಾಗಿದ್ದರೂ ಬಾಧ ಅಪಸಿದ್ಧಾಂತಗಳಿದ್ದ ಪ್ರಯುಕ್ತ ತರ್ಕಕ್ಕೆ ಅನುಮಾನತ್ವವು ಕೂಡುವುದಿಲ್ಲ ಎಂದರೆ –

ಪ್ರಸಂಗಾರ್ಥತಯಾ ಪ್ರೋಕ್ತಾ ನ ಸಿದ್ಧಾಂತಸ್ಯ ದೂಷಕಾಃ ।

ಅನಿಷ್ಟಾಪಾದನಕ್ಕೆ ವಿಷಯವಾಗಿ ಹೇಳಲ್ಪಟ್ಟ ನಿರ್ಧೂಮತ್ವ ಮೊದಲಾದ ಅರ್ಥಗಳು ಸಿದ್ಧಾಂತಕ್ಕೆ ದೂಷಕಗಳಾಗುವುದಿಲ್ಲ. ಅಂದರೆ ಬಾಧಿತವೂ ಆಗುವುದಿಲ್ಲ ಎಂದರ್ಥ.

ಅದಿರಲಿ. ಸಾಧನ ಮತ್ತು ದೂಷಣ ಎಂಬುದಾಗಿ ಅನುಮಾನವು ಎರಡು ವಿಧ. ಅದರಲ್ಲಿ ತರ್ಕವು ಸಾಧನವಲ್ಲ, ದೂಷಣವೂ ಅಲ್ಲ ಎಂಬುದು ನಿಮಗೂ ಸಮ್ಮತವೇ ಆಗಿದೆ. ದೋಷಯುಕ್ತ ಜ್ಞಾನವನ್ನು ಹುಟ್ಟಿಸುವುದಕ್ಕೆ ದೂಷಣವೆಂದು ಹೆಸರು. ತರ್ಕದಲ್ಲಿ ಅದು ಸಂಭವಿಸುವುದಿಲ್ಲ. ಪರಸಿದ್ಧವಾದ ನ್ಯಾಯದಿಂದಲೇ ಅವನ ನ್ಯಾಯವು ದೋಷಯುಕ್ತವೆಂದು ತೋರಿಸಿಕೊಡಬೇಕು. ಅದು ಸಾಧುವಲ್ಲ. ಅಸಾಧುವಾದ ತರ್ಕದಿಂದ ದೋಷವನ್ನು ನಿರೂಪಿಸಿದರೆ ಅದು ದೋಷಾಭಾಸ ಎನಿಸುತ್ತದೆ. ಆದ್ದರಿಂದ ತರ್ಕಕ್ಕೆ ಅನುಮಾನತ್ವವು ಹೇಗೆ ಕೂಡುವುದು ಎಂದರೆ, ದೋಷಯುಕ್ತವಾದ ಜ್ಞಾನಕ್ಕೆ ಮೂಲಬೀಜದಂತಿರುವ ಫಲ ಮತ್ತು ಜಾತಿಗಳ ಸ್ವರೂಪವನ್ನು ನಿರೂಪಿಸುತ್ತಾರೆ –

ಫಲಂ ಜಾತಿರಿತಿ ದ್ವೇಧಾ ವ್ಯಾಹತ್ಯಂತರಮಿಷ್ಯತೇ ॥೩೮॥

ಜಾತಿಃ ಸ್ವವ್ಯಾಹತಿರ್ಜ್ಞೇಯಾ ಫಲಮರ್ಥಾಂತರೋತ್ತರಮ್ ।

ಫಲೋತ್ತರ ಮತ್ತು ಜಾತ್ಯುತ್ತರಗಳು ಎಂಬುದಾಗಿ ಎರಡು ವಿಧದ ವ್ಯಾಹತಿ ಪ್ರಭೇದವು ಪ್ರಾಮಾಣಿಕರಿಂದ ಅಂಗೀಕರಿಸಲ್ಪಡುತ್ತದೆ. ಅಥವಾ ವಿರೋಧ ಮತ್ತು ಅಸಂಗತಿಗಳೂ ಕೂಡ ವ್ಯಾಹತಿಪ್ರಭೇದಗಳೆಂದು ಅಂಗೀಕರಿಸಲ್ಪಡುತ್ತವೆ. ಇದರಲ್ಲಿ ಫಲವು ಅಸಂಗತವು, ಜಾತಿಯು ವಿರೋಧವು. ಜಾತಿಯು ಸ್ವವ್ಯಾಹತಿಯೆಂದು ತಿಳಿಯತಕ್ಕದ್ದು. ಫಲವು ಅರ್ಥಾಂತರೋತ್ತರವು. ಅಂದರೆ ಪರನು ಹೇಳಿದ್ದಕ್ಕೆ ಬೇರೆಯ ಅರ್ಥವನ್ನು ಪರಿಕಲ್ಪಿಸಿ, ಆ ಅರ್ಥಾಂತರಕ್ಕೆ ಉತ್ತರವನ್ನು ಹೇಳುವುದು ಫಲದ ಲಕ್ಷಣ.

ಹಿಂದೆ ಹೇಳಿದ ಅರ್ಥಕ್ಕೆ ಈಗ ಉಪಯೋಗವನ್ನು ತೋರಿಸುತ್ತ ಅಪವ್ಯಾಖ್ಯಾನಕ್ಕೆ ದೂಷಣಾಂತರವನ್ನು ಹೇಳುತ್ತಾರೆ –

ಏವಂ ಸಂಶೋಧಿತನ್ಯಾಯಸದಾಗಮವಿರೋಧತಃ ॥೩೮॥

ನಾನಿರ್ವಾಚ್ಯಮಿಹ ಪ್ರೋಕ್ತಂ ಮಾಯಾಮಾತ್ರಪದೇನ ಹಿ ।

ಈ ಪ್ರಕಾರವಾಗಿ ಸಂಶೋಧಿತವಾದ, ಅಂದರೆ ಆಭಾಸದ ದೆಶೆಯಿಂದ ಚೆನ್ನಾಗಿ ವಿವೇಚಿಸಲ್ಪಟ್ಟ ಅನುಮಾನಕ್ಕೆ ನಿರವಕಾಶವಾದ ಹಾಗೂ ನಿರ್ದೋಷವಾದ ಆಗಮಗಳ ವಿರೋಧ ಬರುವುದರಿಂದ, ಈ ಸೂತ್ರದಲ್ಲಿ ಸ್ವಪ್ನವು ಸದಸದ್ವಿಲಕ್ಷಣ ಎಂಬ ಅರ್ಥದಲ್ಲಿ ಮಾಯಾಮಾತ್ರ ಪದದಿಂದ ಹೇಳಲ್ಪಟ್ಟಿಲ್ಲ. ಸ್ವಪ್ನದ ಸತ್ಯತ್ವವು ಸದಾಗಮಗಳಿಂದ ಪ್ರಸಿದ್ಧವಾಗಿದೆ ಎಂಬುದನ್ನು ಇಲ್ಲಿ 'ಹಿ 'ಶಬ್ದದಿಂದ ಸೂಚಿಸಿದ್ದಾರೆ. ಕೇವಲ ಪ್ರಮಾಣಾಭಾವವಲ್ಲ, ಪ್ರಮಾಣವಿರೋಧವೂ ಬರುವುದರಿಂದ ಸ್ವಪ್ನಕ್ಕೆ ಅನಿರ್ವಾಚ್ಯತ್ವವು ಕೂಡುವುದಿಲ್ಲ.

ಸ್ವಪ್ನಕ್ಕೆ ಅನಿರ್ವಾಚ್ಯತ್ವ ಹೇಳುವುದು ಸ್ವವ್ಯಾಹತವೂ ಆಗಿದೆ ಎನ್ನುತ್ತಾರೆ –

ವಿಲಕ್ಷಣಂ ಸದಸತೋರಿತಿ ಹಿ ವ್ಯಾಹತಂ ಸ್ವತಃ ॥೩೯॥

ಸ್ವಾಪ್ನ ಪದಾರ್ಥವು ಸತ್ತು ಮತ್ತು ಅಸತ್ತುಗಳಿಂದ ವಿಲಕ್ಷಣ ಎನ್ನುವ ಪ್ರತಿಜ್ಞೆಯು ಸ್ವವ್ಯಾಹತವೇ ಆಗಿದೆ ಎಂಬುದು ಪ್ರಸಿದ್ಧವು. ಸ್ವವ್ಯಾಹತಿ ಹೇಗೆಂದರೆ, ಸ್ವಪ್ನವು ಸತ್ ಅಲ್ಲ ಎಂದು ಹೇಳಿದರೆ ಅಸತ್ವವೇ ಉಕ್ತವಾಯಿತು. ಪುನಃ ಅಸತ್ತಲ್ಲ ಎಂದು ಹೇಳಿದರೆ ಸತ್ ಶಬ್ದ ವಾಚ್ಯತ್ವ ಬರುವುದು. ಹೀಗೆ ಸ್ವವಚನವಿರೋಧ.

ಇನ್ನು ಸದಸದ್ವಿಲಕ್ಷಣ ಎಂಬುದರಲ್ಲಿ ಸತ್ ಶಬ್ದದಿಂದ ಅಬಾಧ್ಯತ್ವವು ಹೇಳಲ್ಪಡುತ್ತದೋ ಅಥವಾ ಬ್ರಹ್ಮಸ್ವರೂಪವೋ? ವೈಲಕ್ಷಣ್ಯವೂ ಕೂಡ ಆ ಧರ್ಮಕ್ಕೆ ವಿರೋಧಿಧರ್ಮತ್ವವನ್ನು ಹೇಳುತ್ತದೋ ಅಥವಾ ಪ್ರತಿಯೋಗಿಯಾದ ಅನ್ಯೋನ್ಯಾಭಾವವನ್ನು ಹೇಳುತ್ತದೋ? ಯಾವುದೇ ರೀತಿಯಿಂದ ಹೇಳಿದರೂ ಅವು ದೂಷಣಗಳೇ ಆಗುತ್ತವೆ ಎಂದು ಹೇಳುತ್ತಾರೆ –

ಪ್ರತಿಯೋಗಿತ್ವಮಪ್ಯಸ್ಯ ಬ್ರಹ್ಮಣೋಂ೨ಗೀಕೃತಂ ಭವೇತ್ ।

ಮಿಥ್ಯಾ ಚೇತ್ಪ್ರತಿಯೋಗಿತ್ವಂ ವೈಲಕ್ಷಣ್ಯಂ ತತೋ ನ ಹಿ ॥೪೦॥

ಸ್ವಾಪ್ನಪದಾರ್ಥವು ಸದಸದ್ವಿಲಕ್ಷಣವೆಂದು ಪ್ರತಿಪಾದಿಸಿದರೆ, ಸ್ವಾಪ್ನಪ್ರಪಂಚವನ್ನು ಕುರಿತು ಬ್ರಹ್ಮನಿಗೆ ಪ್ರತಿಯೋಗಿತ್ವವೂ ಕೂಡ ಅಂಗೀಕರಿಸಿದಂತೆ ಆಗುವುದು. ಅಂದರೆ ನಿರ್ಧರ್ಮಕನಾದ ಬ್ರಹ್ಮನಲ್ಲಿ ಪ್ರತಿಯೋಗಿತ್ವಧರ್ಮವನ್ನು ಅಂಗೀಕರಿಸಿದರೆ ಅಪಸಿದ್ಧಾಂತವೆಂದು ತಾತ್ಪರ್ಯ. ನಾವು ಮಿಥ್ಯಾಭೂತವಾದ ಪ್ರತಿಯೋಗಿತ್ವಧರ್ಮವನ್ನು ಬ್ರಹ್ಮನಲ್ಲಿ ಹೇಳುತ್ತೇವೆ, ಆದ್ದರಿಂದ ಅಪಸಿದ್ಧಾಂತವಾಗುವುದಿಲ್ಲ ಎಂದರೆ, ಆಗ ಬ್ರಹ್ಮನ ದೆಶೆಯಿಂದ ಸ್ವಾಪ್ನಪದಾರ್ಥಕ್ಕೆ ವೈಲಕ್ಷಣ್ಯವೂ ಕೂಡದೇ ಹೋಗುವುದು.

ಅವಿಲಕ್ಷಣತ್ವಂ ಸತ್ಯಂ ಸ್ಯಾನ್ಮಿಥ್ಯಾತ್ವಂ ಬ್ರಹ್ಮಣಸ್ತತಃ ।

ಅನಿರ್ವಾಚ್ಯಸ್ಯ ಸತ್ತ್ವಂ ವಾ..... ॥

ವೈಲಕ್ಷಣ್ಯಕ್ಕೂ ಮಿಥ್ಯಾತ್ವವನ್ನು ಅಂಗೀಕರಿಸುತ್ತೇವೆ ಎಂದರೆ, ಸ್ವಾಪ್ನಪದಾರ್ಥಕ್ಕೆ ಬ್ರಹ್ಮನಿಂದ ವೈಲಕ್ಷಣ್ಯವಿಲ್ಲ ಎನ್ನುವುದು ಸತ್ಯವಾಗುವುದು. ಆಗ ಪಾರಮಾರ್ಥಿಕ ಸತ್ಯನೆಂದು ನೀವು ಅಂಗೀಕರಿಸಿರುವ ಬ್ರಹ್ಮನಿಗೂ ಸ್ವಾಪ್ನಪ್ರಪಂಚದಂತೆ ಮಿಥ್ಯಾತ್ವವು ಅಥವಾ ಅನಿರ್ವಾಚ್ಯವೆಂದು ಹೇಳಲ್ಪಟ್ಟ ಸ್ವಾಪ್ನಪ್ರಪಂಚಕ್ಕೆ ಬ್ರಹ್ಮನಂತೆ ಸತ್ಯತ್ವವು ಬರಬೇಕಾಗುವುದು.

.....ಯದಿ ಧರ್ಮಾ ನ ಕೇಚನ ॥೪೧॥

ಬ್ರಹ್ಮಣೋ ನೈವ ಜಿಜ್ಞಾಸ್ಯಂ ಜಿಜ್ಞಾಸಾ ಧರ್ಮನಿರ್ಣಯಃ ।

ಇದಮಿತ್ಥಮಿತಿ ಜ್ಞಾನಂ ಜಿಜ್ಞಾಸಾಯಾಃ ಪ್ರಯೋಜನಮ್ ॥೪೨॥

ಬ್ರಹ್ಮನಲ್ಲಿ ಯಾವುದೇ ಧರ್ಮವಿಲ್ಲವೆಂದು ಹೇಳುವುದಾದರೆ, ಅಂಥಾ ಬ್ರಹ್ಮನು ಜಿಜ್ಞಾಸ್ಯನೇ ಆಗಲಾರನು. ಬ್ರಹ್ಮಮೀಮಾಂಸಾಶಾಸ್ತ್ರವು ಅಥಾತೋ ಬ್ರಹ್ಮ ಜಿಜ್ಞಾಸಾ ಎಂದು ಬ್ರಹ್ಮನಿಗೆ ಜಿಜ್ಞಾಸ್ಯತ್ವವನ್ನು ಹೇಳುವುದರಿಂದ, ಬ್ರಹ್ಮನು ನಿರ್ಧರ್ಮಕನಲ್ಲ. ಜಿಜ್ಞಾಸೆ ಏಕೆ ಕೂಡುವುದಿಲ್ಲ ಎಂದರೆ ಧರ್ಮದ ನಿಶ್ಚಯವೇ ಜಿಜ್ಞಾಸೆಯು. ಇಲ್ಲದ ಮೊಲನ ಕೋಡಿನ ಬಗ್ಗೆ ಯಾರೂ ವಿಚಾರ ಮಾಡುವುದಿಲ್ಲ. ಇದಮಿತ್ಥಂ (ಇದು ಹೀಗೇ ಇದೆ) ಎಂಬ ಜ್ಞಾನವೇ ಜಿಜ್ಞಾಸೆಯ ಪ್ರಯೋಜನವು.

ಇತ್ಥಂಭಾವೋ ಹಿ ಧರ್ಮೋ೨ಸ್ಯ ನ ಚೇನ್ನ ಪ್ರತಿಯೋಗಿತಾ ।

ಇತ್ಥಂಭಾವಾತ್ಮಕಾನ್ ಧರ್ಮಾನಾಹುಶ್ಚ ಶ್ರುತಯೋ೨ಖಿಲಾಃ ॥೪೩॥

ಅದೃಶ್ಯತ್ವಾದಯೋ೨ಪ್ಯಸ್ಯ ಗುಣಾ ಹಿ ಪ್ರಭುಣೋದಿತಾಃ ।

ಈ ಬ್ರಹ್ಮನ ಧರ್ಮವು ಇತ್ಥಂಭಾವವೇ. ಬ್ರಹ್ಮನಲ್ಲಿ ಯಾವ ಧರ್ಮವೂ

ಇಲ್ಲವೆಂದಾದರೆ ಪ್ರತಿಯೋಗಿತ್ವವು (ಪ್ರಪಂಚಧರ್ಮ ವ್ಯಾವತ್ತಿಯು) ಆಗಲಾರದು. ಎಲ್ಲ ಶ್ರುತಿಗಳೂ ಬ್ರಹ್ಮನಲ್ಲಿ ನಿಶ್ಚಯವಾಗಿ ಇರುವ ಧರ್ಮಗಳನ್ನೇ ಹೇಳುತ್ತವೆ. ಈ ಬ್ರಹ್ಮನಿಗೆ ಸರ್ವಸಮರ್ಥರಾದ ವೇದವ್ಯಾಸರಿಂದಲೂ ಅದೃಶ್ಯತ್ವಾದಿ ಗುಣಗಳು ಹೇಳಲ್ಪಟ್ಟಿವೆ.

ಹಾಗಾದರೆ ನಾವು ಬ್ರಹ್ಮನಲ್ಲಿ ಭಾವರೂಪಧರ್ಮಗಳನ್ನೇ ಅಂಗೀಕರಿಸುವುದಿಲ್ಲ. ಅಭಾವರೂಪವಾದ ಧರ್ಮಗಳನ್ನಾದರೋ ಸ್ವೀಕರಿಸುತ್ತೇವೆ. ಆದ್ದರಿಂದ ಸೂತ್ರಕ್ಕೆ ವಿರೋಧವಿಲ್ಲ ಎಂದು ಹೇಳಿದರೆ –

ಯದಿ ಸ್ಯುಸ್ತಾದೃಶಾ ಧರ್ಮಾಃ ಸರ್ವಜ್ಞತ್ವಾದಯೋ ನ ಕಿಮ್ ॥೪೪॥

ಬ್ರಹ್ಮನಲ್ಲಿ ಅಭಾವಾತ್ಮಕಗಳಾದ ಅದೃಶ್ಯತ್ವಾದಿ ಧರ್ಮಗಳು ಇವೆ ಎಂದು ಹೇಳುವುದಾದರೆ, ಪ್ರಮಾಣಗಳಿಂದಲೇ ಸಿದ್ಧವಾಗುವ ಸರ್ವಜ್ಞತ್ವಾದಿ ಭಾವರೂಪ ಧರ್ಮಗಳನ್ನೂ ಬ್ರಹ್ಮನಲ್ಲಿ ಏಕೆ ಒಪ್ಪಬಾರದು? ಬ್ರಹ್ಮನಲ್ಲಿ ಸರ್ವಜ್ಞತ್ವಾದಿಗಳನ್ನು ಸ್ವೀಕರಿಸುವುದಿಲ್ಲವಾದರೆ ಅದೃಶ್ಯತ್ವಾದಿ ಅಭಾವರೂಪ ಧರ್ಮಗಳನ್ನೂ ಕೈಬಿಡಬೇಕು ಎಂದು ತಾತ್ಪರ್ಯ.

ಮಿಥ್ಯಾಭೂತವಾದ ಸರ್ವಪದಾರ್ಥಗಳ ಅಪೇಕ್ಷೆಯಿಂದ ಸರ್ವಜ್ಞತ್ವಾದಿಗಳು ಇರುವ ಪ್ರಯುಕ್ತ ಆ ಧರ್ಮಗಳೂ ಮಿಥ್ಯಾಭೂತವೇ ಆಗುತ್ತವೆ. ಆದ್ದರಿಂದ ಪಾರಮಾರ್ಥಿಕವಾದ ಬ್ರಹ್ಮನಲ್ಲಿ ಆ ಧರ್ಮಗಳನ್ನು ಒಪ್ಪುವುದು ಹೇಗೆ ಸಾಧ್ಯ ಎಂದರು ಆಶಂಕಿಸಿದರೆ –

ಅನ್ಯಾಪೇಕ್ಷಾ ಯದಿ ಸ್ಯುಷ್ಟೇ ಸತ್ಯೈವಂ ದೇಶಕಾಲಗಾ ।

ದೇಶಕಾಲಾನಪೇಕ್ಷಾ ಹಿ ನ ಸತ್ತಾ ಕ್ವಾಪಿ ದೃಶ್ಯತೇ ॥೪೫॥

ಸರ್ವಜ್ಞತ್ವಾದಿ ಭಾವರೂಪವಾದ ಧರ್ಮಗಳು ಮಿಥ್ಯಾಭೂತವಾದ ಇತರ ಪದಾರ್ಥಗಳ ಅಪೇಕ್ಷೆಯನ್ನು ಹೊಂದಿವೆ ಎಂಬ ಕಾರಣದಿಂದ ಬ್ರಹ್ಮನಲ್ಲಿ ಒಪ್ಪಲು ಶಕ್ಯವಿಲ್ಲವಾದರೆ, ಅದೃಶ್ಯತ್ವಾದಿ ಅಭಾವರೂಪ ಧರ್ಮಗಳಿಗೂ ಅನ್ಯಾಪೇಕ್ಷೆಯು ಇರುವುದರಿಂದ ಆ ಧರ್ಮಗಳೂ ಬ್ರಹ್ಮನಲ್ಲಿ ಕೂಡಲಾರವು. ಪರಾಪೇಕ್ಷಿತವಾದ ಸರ್ವಜ್ಞತ್ವಾದಿಗಳನ್ನು ಬ್ರಹ್ಮನಲ್ಲಿ ಅಂಗೀಕರಿಸುವುದಿಲ್ಲವಾದರೆ, ಸತ್ತಾರೂಪವಾದ ಧರ್ಮವೂ ಕೂಡ ಪರಾಪೇಕ್ಷಿತವೇ ಆಗಿರುವುದರಿಂದ ಅಂಗೀಕಾರಾರ್ಹವಲ್ಲ. ದೇಶ–ಕಾಲಗಳ ಪ್ರತೀತಿಯನ್ನು ಅಪೇಕ್ಷಿಸದೇ ಇರುವ ಸತ್ತಾರೂಪವಾದ ಧರ್ಮವು ಎಲ್ಲಿಯೂ ಕಾಣಲ್ಪಡುವುದಿಲ್ಲ.

ಬ್ರಹ್ಮನಿಗೆ ನಿರ್ಧರ್ಮಕತ್ವವನ್ನು ಅಂಗೀಕರಿಸಿದರೆ ಜಿಜ್ಞಾಸ್ಯತ್ವವೇ ಕೂಡುವುದಿಲ್ಲ. ಅಷ್ಟೇ ಅಲ್ಲ ಶಾಸ್ತ್ರಯೋನಿತ್ವಾತ್ ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಶಾಸ್ತ್ರವಿಷಯತ್ವವೂ ಕೂಡುವುದಿಲ್ಲ ಎಂದು ಹೇಳುತ್ತಾರೆ –

ಸರ್ವಧರ್ಮೋಜ್ಝಿತಸ್ಯಾಸ್ಯ ಕಿಂ ಶಾಸ್ತ್ರೇಣಾಧಿಗಮ್ಯತೇ ।

ಮಿಥ್ಯಾಧರ್ಮವಿಧಾತುಶ್ಚ ವೇದಸ್ಯೈವಾಪ್ರಮಾಣತಾ ॥೪೬॥

ಸರ್ವ ಧರ್ಮಗಳಿಂದ ವಿರಹಿತನಾದ ಬ್ರಹ್ಮನ ಬಗ್ಗೆ ಶಾಸ್ತ್ರದಿಂದ ಏನು ತಿಳಿಯಲ್ಪಡುತ್ತದೆ? ಬ್ರಹ್ಮನ ಸ್ವರೂಪವು ಸ್ವಪ್ರಕಾಶವಾಗಿರುವುದರಿಂದ ಅದನ್ನು ತಿಳಿಯಲಿಕ್ಕೆ ಶಾಸ್ತ್ರದ ಅಗತ್ಯವಿಲ್ಲವಾದ್ದರಿಂದ ಬ್ರಹ್ಮನಿಗೆ ಶಾಸ್ತ್ರಗಮ್ಯತ್ವವೇ ಕೂಡದೇ ಹೋಗುವುದು ಎಂದು ಭಾವ. ಹಾಗಾದರೆ ಬ್ರಹನಲ್ಲಿ ಪಾರಮಾರ್ಥಿಕ ಧರ್ಮಗಳು ಇಲ್ಲದಿದ್ದರೂ ಮಿಥ್ಯಾಭೂತವಾದ ಧರ್ಮಗಳು ಶಾಸ್ತ್ರಗಳಿಂದ ತಿಳಿಯಲ್ಪಡುತ್ತವೆ ಎಂದು ಹೇಳುವುದಾದರೆ, ಮಿಥ್ಯಾಭೂತ ಧರ್ಮವನ್ನು ವಿಧಿಸಿತಕ್ಕ ವೇದಕ್ಕಾದರೂ ಅಪ್ರಾಮಾಣ್ಯವೇ ಬರುವುದು.

ವೇದವು ಮಿಥ್ಯಾಭೂತವಾದ ಧರ್ಮಗಳನ್ನು ಪ್ರತಿಪಾದಿಸಿ ಅಷ್ಟಕ್ಕೇ ಸುಮ್ಮನಾಗಿದ್ದರೆ ಅದಕ್ಕೆ ಅಪ್ರಮಾಣ್ಯವು ಬರುತ್ತಿತ್ತು. ಆದರೆ ನೇಹ ನಾನಾಸ್ತಿ ಕಿಂಚನ ಇತ್ಯಾದಿ ವಾಕ್ಯಗಳಿಂದ ವೇದವು ಬ್ರಹ್ಮನಲ್ಲಿ ಧರ್ಮಗಳನ್ನು ನಿಷೇಧಿಸುತ್ತದೆ. ಆದಪ್ರಯುಕ್ತ ವೇದಕ್ಕೆ ಅಪ್ರಾಮಾಣ್ಯವಿಲ್ಲ ಎಂದರೆ –

ಅಪ್ರಾಪ್ತಾಂ ಭ್ರಾಂತಿಮಾಪಾದ್ಯ ಕಿಂ ವೇದೋ ಮಾನತಾಂ ವ್ರಜೇತ್ ।

ನ ಹಿ ವೇದಂ ವಿನಾ ಬ್ರಹ್ಮ ವೇದ್ಯಂ ಧರ್ಮಾಶ್ಚ ತದ್ಗತಾಃ ॥೪೭॥

'ಯಃ ಸರ್ವಜ್ಞಃ ಸರ್ವವಿತ್' 'ಯ ಆತ್ಮಾಪಹತ ಪಾಪ್ಮಾ' ಇತ್ಯಾದಿ ವೇದವು ಪ್ರಮಾಣಾಂತರದಿಂದ ಪ್ರಾಪ್ತವಾಗದಿರುವ ಮಿಥ್ಯಾಭೂತವಾದ ಸರ್ವಜ್ಞತ್ವಾದಿ ಧರ್ಮಗಳ ಪ್ರತೀತಿಯನ್ನು ಬ್ರಹ್ಮನಲ್ಲಿ ಹುಟ್ಟಿಸಿ, ತಾನೇ ನೇಹ ನಾನಾಸ್ತಿ ಇತ್ಯಾದಿ ವಚನಗಳಿಂದ ಅವುಗಳನ್ನು ನಿಷೇಧ ಮಾಡುವುದಾದರೆ, ವೇದವು ಪ್ರಾಮಾಣ್ಯವನ್ನು ಹೊಂದುವುದು ಹೇಗೆ? ಪರಸ್ಪರ ವಿರುದ್ಧವಾಗಿರುವುದರಿಂದ ಹುಚ್ಚನ ಮಾತಿನಂತೆ ಅಪ್ರಮಾಣವೇ ಆಗುವುದು. ವೇದವನ್ನು ಬಿಟ್ಟು ಬೇರೆ ಯಾವುದರಿಂದಲೂ ಬ್ರಹ್ಮನಾಗಲೀ ಅವನಲ್ಲಿರುವ ಧರ್ಮಗಳಾಗಲೀ ತಿಳಿಯಲಿಕ್ಕೆ ಸಾಧ್ಯವಿಲ್ಲವಷ್ಟೆ.

ಹಾಗಾದರೆ ಮಿಥ್ಯಾಧರ್ಮಗಳನ್ನು ವಿಧಿಸತಕ್ಕ ವೇದಕ್ಕೆ ಅಪ್ರಾಮಾಣ್ಯವನ್ನು ಹೇಳಿದರೆ ಅದು ನಮಗೆ ಅನಿಷ್ಟವಲ್ಲ. ಏಕೆಂದರೆ ತತ್ವಾವೇದಕ ಹಾಗೂ ಅತತ್ವಾ ವೇದಕ ಎಂದು ವೇದದಲ್ಲಿ ಎರಡು ವಿಭಾಗ. ಅದರಲ್ಲಿ ಜೀವೇಶ್ವರರಿಗೆ ಐಕ್ಯವನ್ನು ಪ್ರತಿಪಾದಿಸುವ ವೇದದ ಒಂದು ಭಾಗ ತತ್ವಾವೇದಕ. ಮತ್ತೊಂದು ಭಾಗ ಅತತ್ವಾ ವೇದಕ ಎಂದು ನಮ್ಮಿಂದ ಅಂಗೀಕರಿಸಲ್ಪಟ್ಟಿದೆ ಎಂದರೆ –

ವೇದವೇದ್ಯಸ್ಯ ಮಿಥ್ಯಾತ್ವಂ ಯದಿ ನೈಕ್ಯಸ್ಯ ತತ್ಕಥಮ್ ।

ವೇದವೇದ್ಯವಾಧ ಬ್ರಹ್ಮನ ಧರ್ಮಗಳಿಗೆ ಮಿಥ್ಯಾತ್ವವು ಹೇಳಲ್ಪಡುವುದಾದರೆ, ಜೀವೇಶ್ವರ ಐಕ್ಯವನ್ನು ಹೇಳುವ ವೇದಭಾಗಕ್ಕೂ ಮಿಥ್ಯಾತ್ವವು ಹೇಗೆ ಆಗಲಾರದು?

ಹಾಗಾದರೆ ಬ್ರಹ್ಮನಲ್ಲಿ ಧರ್ಮಗಳಿಗೆ ಪ್ರಾಪ್ತಿ ಇಲ್ಲವೆಂದು ಹೇಳಿದುದು ಅಯುಕ್ತ. ಪ್ರಮಾಣದಿಂದ ಬ್ರಹ್ಮನಲ್ಲಿ ಧರ್ಮಪ್ರಾಪ್ತಿಯು ಕೂಡುವುದಿಲ್ಲವಾದರೂ, ಧರ್ಮದ ಆರೋಪವು ಅಯುಕ್ತವಲ್ಲ. ವೇದವು ಬ್ರಹ್ಮನಲ್ಲಿ ಆರೋಪಿತವಾದ ಧರ್ಮಗಳನ್ನು ಅನುವಾದ ಮಾಡಿ ಅನಂತರ ನಿಷೇಧ ಮಾಡುವುದು ಯುಕ್ತವೇ ಆಗಿದೆ ಎಂದರೆ –

ಧರ್ಮಾರೋಪೋ೭ಪಿ ಸಾಮಾನ್ಯಧರ್ಮಾದೀನಾಂ ಹಿ ದರ್ಶನೇ ॥೪೮॥

ಬ್ರಹ್ಮನಲ್ಲಿ ಧರ್ಮಾರೋಪವು ಕೂಡಿದ್ದರೆ ಹೀಗೆ ಒಪ್ಪಬಹುದಿತ್ತು. ಹೀಗೆ ಇಲ್ಲ. ಸಾಮಾನ್ಯ ಧರ್ಮ, ಪ್ರಧಾನ ಮುಂತಾದ ಧರ್ಮಗಳು (ಭ್ರಮಕ್ಕೆ ಕಾರಣವಾಗುವ ಅನುಭವಜನ್ಯ ಸಂಸ್ಕಾರವೇ ಪ್ರಧಾನ) ದೃಷ್ಟವಾಗುತ್ತಿರಲು ಧರ್ಮಾರೋಪವೂ ದೃಷ್ಟವಾಗುವುದು. ನಿಮ್ಮ ಪ್ರಕಾರ ಬ್ರಹ್ಮನು ಸರ್ವಧರ್ಮಗಳಿಂದ ವಿರಹಿತನು. ನಿರ್ಧರ್ಮಕ ವಸ್ತುವಿನಲ್ಲಿ ಧರ್ಮಾರೋಪವೂ ಕೂಡುವುದಿಲ್ಲ.

ಇದೇ ವಿಷಯವನ್ನೇ ವಿಸ್ತರಿಸಿ ಹೇಳುತ್ತಾರೆ –

ಇದಂತದಾದಿಧರ್ಮಿತ್ವೇ ಧರ್ಮೋ೭ನ್ಯಃ ಕಲ್ಪ್ಯತೇ೭ತ್ರ ಹಿ ।

ಸರ್ವಧರ್ಮವಿಹೀನಸ್ಯ ಧರ್ಮಾರೋಪಃ ಕ್ವ ದೃಶ್ಯತೇ ॥೪೯॥

ತದರ್ಥಂ ಯದಿ ಧರ್ಮಾಣಾಮಾರೋಪಃ ಸಾನವಸ್ಥಿತಿಃ ।

ಇದು ಅದು ಮುಂತಾದ ಸಾಧಾರಣ ಧರ್ಮಗಳನ್ನು ಕುರಿತು ಧರ್ಮಿತ್ವವು ದೃಷ್ಟವಾದರೆ ಹಾಗೂ ಪ್ರಧಾನ ಜ್ಞಾನವೂ ಕೂಡ ಇದ್ದರೆ ಇತರವಾದ ಧರ್ಮವು ಆರೋಪಿಸಲ್ಪಡುವುದು ಲೋಕದಲ್ಲಿ ಕಂಡಿದೆ. ಸರ್ವಧರ್ಮಗಳಿಂದ ವಿರಹಿತವಾದ ವಸ್ತುವಿಗೆ ಧರ್ಮಾರೋಪವು ಎಲ್ಲಿ ಕಾಣಲ್ಪಡುತ್ತದೆ? ಸಾಧಾರಣ ಪ್ರಧಾನ ಇತ್ಯಾದಿ ಯಾವುದೇ ಧರ್ಮಗಳಿಲ್ಲದ ಬ್ರಹ್ಮನಲ್ಲಿ ಧರ್ಮಾರೋಪವನ್ನು ಸಿದ್ಧಿಸಲಿಕ್ಕೆ ಮತ್ತೊಂದು ಧರ್ಮಾರೋಪವನ್ನು ಕಲ್ಪಿಸಬೇಕು. ಅದರ ಸಿದ್ಧಿಗಾಗಿ ಬೇರೊಂದು ಆರೋಪವನ್ನು ಕಲ್ಪಿಸಬೇಕು. ಹೀಗೆ ಅನವಸ್ಥೆಯು ಬರುವುದು.

ಸಾರ್ವಜ್ಞಾದಿಗಳಿಗೆ ಮಿಥ್ಯಾತ್ವವನ್ನು ಸಿದ್ಧಿಸಲಿಕ್ಕೆ ಜಗತ್ತಿಗೆ ಯಾವ ಭ್ರಾಂತಿ ಕಲ್ಪಿತತ್ವವನ್ನು ಹೇಳಿದರೋ ಅದನ್ನು 'ಈಶ' ಇತ್ಯಾದಿ ವಚನದಿಂದ ದೂಷಿಸುತ್ತಾರೆ. ಜಗತ್ತು ಭ್ರಾಂತಿಕಲ್ಪಿತವು ಎಂದು ಹೇಳುವವನು ಆ ವಿಷಯದಲ್ಲಿ ಪ್ರಮಾಣವನ್ನು ಹೇಳಬೇಕು. ಜಗತ್ಸತ್ಯತ್ವವು ಪ್ರತ್ಯಕ್ಷಗ್ರಾಹಿಯಾದುದರಿಂದ, ಜಗತ್ತು ಭ್ರಾಂತಿಕಲ್ಪಿತ ಎಂಬ ವಿಷಯದಲ್ಲಿ ಪ್ರತ್ಯಕ್ಷವು ಪ್ರಮಾಣವಲ್ಲ. ಈ ವಿಷಯದಲ್ಲಿ ಅನುಮಾನವೂ ಪ್ರಮಾಣವಲ್ಲ ಎಂಬುದನ್ನು ಶೂನ್ಯವಾದಿ ಮತವನ್ನು ನಿರಾಕರಣೆ ಮಾಡುವಾಗಲೇ ಸಮರ್ಥಿಸಲಾಗಿದೆ. ಈ ವಿಷಯದಲ್ಲಿ ಇನ್ನೂ ಹೆಚ್ಚಿನ ದೂಷಣವನ್ನು ಹೇಳುತ್ತಾರೆ–

ಈಶತಜ್ಜ್ಞಾನವೇದಾಕ್ಷಜಾನುಮಾಮಾತೃಪೂರ್ವಿಣಃ ॥೫೦॥

ಭ್ರಾಂತಿರ್ವಿಶ್ವಸ್ಯ ಯೇನೈವ ಮಾನಾಭಾಸೇನ ಕಲ್ಪ್ಯತೇ ।

ತನ್ಮಾತ್ರಸ್ಯಾನ್ಯಥಾಭಾವೇ ಕಿಂ ನ ಸ್ಯಾದ್ವಿಶ್ವಸತ್ಯತಾ ॥೫೧॥

ಈಶವಾಕ್ಯ, ಈಶಾದಿ ಜ್ಞಾನ, ಅಪೌರುಷೇಯ ಆಗಮ, ಪ್ರತ್ಯಕ್ಷ, ಅನುಮಾನ, ಜ್ಞಾನವುಳ್ಳ ಜೀವ ಇತ್ಯಾದಿ ಸರ್ವಪ್ರಮಾಣಗಳಿಂದ ಸಿದ್ಧವಾದ ಜಗತ್ತನ್ನು ಭ್ರಾಂತಿ ಕಲ್ಪಿತ ಎಂದು ಸಾಧಿಸಲು ಇರುವ ಪ್ರಮಾಣ ಒಂದೇ ಒಂದು. ಅದೂ ಕೂಡ ಪ್ರಮಾಣದಂತೆ ತೋರುವ ದುರ್ಬಲವಾದ ಅನುಮಾನ. ಅದೂ ಅಪ್ರಮಾಣವಾದ ಪಕ್ಷದಲ್ಲಿ ಬಹುಪ್ರಮಾಣಗಳನ್ನು ಹೊಂದಿರುವ ಜಗತ್ಸತ್ಯತ್ವವು ಏಕೆ ಸಿದ್ಧಿಸಲಾರದು?

ಇನ್ನು ಜಗತ್ತು ಭ್ರಾಂತಿಸಿದ್ಧವು ಎನ್ನುವ ವಿಷಯದಲ್ಲಿ ಆಗಮವೂ ಪ್ರಮಾಣವಲ್ಲ ಎಂದು ಹೇಳುತ್ತಾರೆ –

ಯೇನೇದಂ ಕಲ್ಪ್ಯತೇ ಭ್ರಾಂತಂ ಭ್ರಾಂತಿಸ್ತಸ್ಯೈವ ಕಿಂ ನ ಸಾ ।

ಭ್ರಾಂತತ್ವೇ ತಸ್ಯ ವಿಶ್ವಾರೇರೀಶಾದ್ಯಭ್ರಾಂತಮೇವ ಹಿ ॥೫೨॥

ಈ ವಿಶ್ವವು ಭ್ರಾಂತಿಕಲ್ಪಿತವೆಂದು ಹೇಳುವ ಗೌಡಪಾದಾದಿಗಳ ಕಲ್ಪನೆಯೂ ಭ್ರಾಂತಿಯಲ್ಲವೆಂದು ಹೇಗೆ ಹೇಳುತ್ತೀರಿ? ಈಶವಾಕ್ಯಾದಿಗಳಿಂದ ವಿಶ್ವದ ಸತ್ಯತ್ವವು ತಿಳಿಯಲ್ಪಟ್ಟಿದೆ. ಇದಕ್ಕೆ ವಿರುದ್ಧವಾಗಿ ವಿಶ್ವಮಿಥ್ಯಾತ್ವವನ್ನು ಹೇಳುವ ಗೌಡಪಾದ ಮುಂತಾದವರ ಪ್ರತೀತಿಯು ಭಾಂತಿಯೇ. ಇದರಿಂದ ವಿಶ್ವಸತ್ಯತ್ವವು ಭ್ರಾಂತಿಯಲ್ಲ, ಸತ್ಯವೇ ಎಂದು ಸಿದ್ಧವಾಗುವುದು.

ಹಾಗಾದರೆ ಗೌಡಪಾದಾದಿಗಳ ಪ್ರತೀತಿಗೆ ವಿರುದ್ಧವಾಗಿ ವಿಶ್ವಸತ್ಯತ್ವವನ್ನು ಹೇಳುವ ಈಶಾದಿ ವಾಕ್ಯಗಳಿಗೇ ಭ್ರಾಂತಿತ್ವವನ್ನು ಹೇಳುತ್ತೇವೆ ಎಂದರೆ –

ಭವೇಯುರ್ಭ್ರಾಂತಯೋ ನೃಣಾಂ ನೈವೇಶಾದೇಃ ಕಥಂಚನ ।

ಮನುಷ್ಯರಿಗೆ ಇಂದ್ರಿಯದೋಷ ಅಜ್ಞಾನ ಮುಂತಾದ ಬಾಹ್ಯ ಹಾಗೂ ಆಂತರಿಕ ಕಾರಣಗಳಿಂದ ಭ್ರಾಂತಿಗಳು ಸಂಭವಿಸುತ್ತವೆ. ಈಶಾದಿಗಳಿಗೆ ಯಾವ ವಿಧದಿಂದಲೂ ಭ್ರಾಂತಿಗಳು ಆಗಲಾರವು. ಏಕೆಂದರೆ ಈಶಾದಿಗಳಿಗೆ ಮನುಷ್ಯರಂತೆ ಇಂದ್ರಿಯದೋಷವಾಗಲೀ, ಅಜ್ಞಾನ, ವಿಪ್ರಲಂಭಗಳಾಗಲೀ ಇರುವುದಿಲ್ಲ.

ಜಗತ್ಸತ್ಯತ್ವವನ್ನು ಗ್ರಹಿಸುವ ಪ್ರತ್ಯಕ್ಷವು 'ನೇಹ ನಾನಾ' ಇತ್ಯಾದಿ ವಾಕ್ಯಗಳಿಂದ ಬಾಧಿತವಾಗುವುದರಿಂದ ಜಗತ್ಸತ್ಯತ್ವವು ಭ್ರಾಂತಿಮೂಲಕವೆಂದೇ ಹೇಳುತ್ತೇವೆ ಎಂದರೆ –

ಸತ್ಯತ್ವಮಕ್ಷಜಪ್ರಾಪ್ತಂ ಯದಿ ಭ್ರಾಂತಮಿತೀಷ್ಯತೇ ॥೫೩॥

ಪ್ರಾಮಾಣ್ಯಮಾಗಮಸ್ಯಾಪಿ ಪ್ರತ್ಯಕ್ಷಾದನ್ಯತಃ ಕುತಃ ।

ಸಾಕ್ಷಿಪ್ರತ್ಯಕ್ಷತೋ ಹ್ಯೇವ ಮಾನಾನಾಂ ಮಾನತೇಯತೇ ॥೫೪॥

ಸಾಕ್ಷಿಣಃ ಸ್ವಪ್ರಕಾಶತ್ವಮನವಸ್ಥಾ ತತೋ ನ ಹಿ ।

ಪ್ರತ್ಯಕ್ಷದಿಂದ ಪ್ರಾಪ್ತವಾದ ಜಗತ್ಸತ್ಯತ್ವವು ಭ್ರಾಂತಿ ಎನ್ನುವುದಾದರೆ ಅದು ಕೂಡುವುದಿಲ್ಲ. ಆಗಮದ ಪ್ರಾಮಾಣ್ಯವೂ ಕೂಡ ಪ್ರತ್ಯಕ್ಷದಿಂದಲೇ ತಿಳಿಯಬೇಕು. ಪ್ರತ್ಯಕ್ಷದ ಹೊರತು ಬೇರೆ ಯಾವುದರಿಂದಲೂ ಆಗಮದ ಪ್ರಾಮಾಣ್ಯವು ಸಿದ್ಧವಾಗುವುದಿಲ್ಲ. ಏಕೆಂದರೆ ಎಲ್ಲ ಪ್ರಮಾಣಗಳ ಪ್ರಾಮಾಣ್ಯವೂ ಸಾಕ್ಷಿಪ್ರತ್ಯಕ್ಷ ದಿಂದಲೇ ವೇದ್ಯವಾಗುವುದು. ಸಾಕ್ಷಿಗೆ ಸ್ವಪ್ರಕಾಶತ್ವವಿರುವುದರಿಂದ ಅನವಸ್ಥೆಯು ಬರುವುದಿಲ್ಲ. ಇದು ಪ್ರಸಿದ್ಧವು.

ಹಾಗಾದರೆ ಪ್ರತ್ಯಕ್ಷ ಮತ್ತು ಆಗಮಗಳ ಪ್ರಾಮಾಣ್ಯವು ಸಾಕ್ಷಿವೇದ್ಯವೆಂದು ಒಪ್ಪೋಣ. ಹಾಗಿದ್ದರೂ ಹಿಂದೆ ಹೇಳಿದ ಪ್ರಕಾರ ಪ್ರಬಲವಾದ ಜಗನ್ಮಿಥ್ಯಾತ್ವ ಸಾಧಕ ಆಗಮದಿಂದ ದುರ್ಬಲವಾದ ಜಗತ್ಸತ್ಯತ್ವ ಸಾಧಕ ಪ್ರತ್ಯಕ್ಷಕ್ಕೆ ಬಾಧ ಬರುವುದರಿಂದ ಜಗತ್ತು ಮಿಥ್ಯೆಯೆಂದೇ ಸಿದ್ಧವಾಗುವುದು ಎಂದರೆ, ಎರಡರ ಪ್ರಾಮಾಣ್ಯವೂ ಸಾಕ್ಷಿವೇದ್ಯವೇ ಆಗಿರುವುದರಿಂದ ಆ ಪ್ರಾಬಲ್ಯ–ದೌರ್ಬಲ್ಯಗಳು ಕೂಡಲಾರವು ಎಂದು ಸಿದ್ಧಾಂತ. ಹಾಗಾದರೆ ಪ್ರತ್ಯಕ್ಷವು ತಾತ್ಕಾಲಿಕ ಪ್ರಮಾಣ, ಆಗಮವಾದರೋ ಆತ್ಯಂತಿಕ ಪ್ರಮಾಣ. ಆದ್ದರಿಂದ ಮಿಥ್ಯಾಸಾಧಕ ಆಗಮದ ಪ್ರಾಮಾಣ್ಯಕ್ಕೆ ಬಾಧವಿಲ್ಲ ಎಂದು ಹೇಳಿದರೆ, ಈ ರೀತಿಯ ಪ್ರಾಮಾಣ್ಯದ ವಿಭಾಗವನ್ನು 'ತಾತ್ಕಾಲಿಕಂ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ –

ತಾತ್ಕಾಲಿಕಂ ಪ್ರಮಾಣತ್ವಮಕ್ಷಜಸ್ಯ ಯದಾ ಭವೇತ್ ॥೫೫॥

ಐಕ್ಯಾಗಮಸ್ಯ ಕಿಂ ನ ಸ್ಯಾತ್ ತಸ್ಯಾಪ್ಯೇತಾದೃಶಂ ಯದಿ ।

ಐಕ್ಯಪ್ರಮಾಣಮಿಥ್ಯಾತ್ವಂ ಯದಾ ವಿಶ್ವಸ್ಯ ಸತ್ಯತಾ ॥೫೬॥

ಐಕ್ಯವಾಕ್ಯಸ್ಯ ಮಾನತ್ವಂ ಯದ್ಯಬಾಧ್ಯಮಿತೀಷ್ಯತೇ ।

ಅಕ್ಷಜಸ್ಯಾಪಿ ಮಾನತ್ವಂ ನಾಬಾಧ್ಯಂ ಕಿಮಿತೀಷ್ಯತೇ ॥೫೭॥

ಜಗತ್ಸತ್ಯತ್ವವನ್ನು ಗ್ರಹಿಸುವ ಪ್ರತ್ಯಕ್ಷದ ಪ್ರಾಮಾಣ್ಯವು ಸಾಕ್ಷಿಗೃಹೀತವಾಗಿದ್ದರೂ ತಾತ್ಕಾಲಿಕವೇ ಆಗುವುದಾದರೆ ಐಕ್ಯಾಗಮದ ಪ್ರಾಮಾಣ್ಯವೂ ಸಾಕ್ಷಿಗೃಹೀತವೇ ಆಗಿರುವುದರಿಂದ ಅದೂ ಕೂಡ ತಾತ್ಕಾಲಿಕವೇ ಏಕೆ ಆಗಬಾರದು? ಐಕ್ಯಾಗಮದ ಪ್ರಾಮಾಣ್ಯವೂ ತಾತ್ಕಾಲಿಕವೆಂದು ಒಪ್ಪಿದರೆ, ಅದಕ್ಕೆ ಸತ್ಯತ್ವಸಾಧಕ ಪ್ರತ್ಯಕ್ಷದಿಂದ ಬಾಧ ಬಂದಾಗ ಜಗನ್ಮಿಥ್ಯಾತ್ವಕ್ಕೇ ಮಿಥ್ಯಾತ್ವ ಬರುವುದು. ಅಂದರೆ ಜಗತ್ಸತ್ಯತ್ವವು ಸಿದ್ಧಿಸುವುದು. ಹಾಗೆ ಹೇಳಕೂಡದು. ನಾವು ಐಕ್ಯಾಗಮಕ್ಕೆ ಅಬಾಧ್ಯತ್ವವನ್ನು ಅಂಗೀಕರಿಸಿದ್ದೇವೆ ಎಂದರೆ, ಸಮಾನನ್ಯಾಯದಿಂದ ಪ್ರತ್ಯಕ್ಷದ ಪ್ರಾಮಾಣ್ಯವೂ ಅಬಾಧ್ಯವೆಂದು ಏಕೆ ಅಂಗೀಕರಿಸಬಾರದು?

ಹಾಗಾದರೆ ಅದ್ವಿತೀಯ ಬ್ರಹ್ಮನನ್ನು ಹೊಂದುವುದೇ ಮೋಕ್ಷವು. ಅದಾದರೋ

ಜಗತ್ಸತ್ಯತ್ವ ಗ್ರಾಹಕ ಪ್ರತ್ಯಕ್ಷಕ್ಕೆ ಅಬಾಧ್ಯತ್ವವಿದ್ದರೆ ಕೂಡಲಾರದು. ಪ್ರಪಂಚವು ಸತ್ಯವೆಂದು ಸಿದ್ಧವಾದರೆ, ಬ್ರಹ್ಮ ಮತ್ತು ಪ್ರಪಂಚ ಹೀಗೆ ಎರಡು ಸತ್ಯ ಪದಾರ್ಥಗಳು ಸಿದ್ಧವಾಗುವುದರಿಂದ, ಅದ್ವೈತಕ್ಕೆ ಹಾನಿ ಬರುವುದು. ಈ ವಿಶೇಷ ಬಾಧಕದಿಂದ ಸಾಕ್ಷಿಯು ಪ್ರತ್ಯಕ್ಷ ಪ್ರಾಮಾಣ್ಯವನ್ನು ತಾತ್ಕಾಲಿಕವೆಂದೇ ಗ್ರಹಿಸುವುದು ಎಂದು ಆಶಂಕಿಸಿದರೆ –

ಅದ್ವೈತಹಾನಿಸಾಮಾನ್ಯಾನ್ನ ವಿಶೇಷಶ್ಚ ಕಶ್ಚನ ।

ಯದಿ ಸ್ವತಸ್ತ್ವಂ ಪ್ರಾಮಾಣ್ಯೇ ವಿಶ್ವಸತ್ತಾ ಕಥಂ ನ ತೇ ॥೫೮॥

ಪ್ರತ್ಯಕ್ಷಕ್ಕಾಗಲೀ, ಐಕ್ಯಾಗಮಕ್ಕಾಗಲೀ ಅಬಾಧ್ಯತ್ವವನ್ನು ಅಂಗೀಕರಿಸಿದರೂ ಅಬಾಧ್ಯವಾದ ಪ್ರಾಮಾಣ್ಯವೆಂಬ ಎರಡನೆಯ ವಸ್ತುವು ಪ್ರಸಕ್ತವಾಗುವುದರಿಂದ ಎರಡು ಪಕ್ಷದಲ್ಲಿಯೂ ಅದ್ವೈತ ಹಾನಿಯು ಸಮಾನವು. ಆದ್ದರಿಂದ ಯಾವ ವಿಶೇಷವೂ ಇಲ್ಲವೇ ಇಲ್ಲ. ಅದ್ವೈತಾಗಮಕ್ಕೆ ಪ್ರಾಬಲ್ಯವನ್ನು ಸಮರ್ಥಿಸಲಿಕ್ಕೆ ಆಗಮಕ್ಕೆ ಸ್ವತಃ ಪ್ರಾಮಾಣ್ಯವನ್ನು ಹೇಳುವುದಾದರೆ, ಪ್ರತ್ಯಕ್ಷ ಪ್ರಮಾಣಕ್ಕೂ ಸ್ವತಸ್ತ್ವವನ್ನು ಏಕೆ ಅಂಗೀಕರಿಸಬಾರದು? ಆಗ ವಿಶ್ವಸತ್ಯತ್ವವನ್ನೂ ಪ್ರಮಾಣವೆಂದು ನೀನು ಅಂಗೀಕರಿಸಬೇಕಾಗುತ್ತದೆ.

ಹಾಗೆಯೇ ಆಗಲಿ. ಪ್ರತ್ಯಕ್ಷ ಆಗಮಗಳೆರಡಕ್ಕೂ ಸ್ವತಃ ಪ್ರಾಮಾಣ್ಯವಿದ್ದರೂ ಅದರಲ್ಲಿ ವಿಶೇಷವಿದೆ. ಪ್ರತ್ಯಕ್ಷವು ತತ್ಕಾಲದಲ್ಲಿಯೇ ಜ್ಞಾನಕ್ಕೆ ಪ್ರಾಮಾಣ್ಯವನ್ನು ಹುಟ್ಟಿಸುತ್ತದೆ. ವಾಕ್ಯವಾದರೋ ಆತ್ಯಂತಿಕ ಪ್ರಾಮಾಣ್ಯವನ್ನು ಹುಟ್ಟಿಸುತ್ತದೆ. ಹಾಗೆಯೇ ಜ್ಞಾನಗ್ರಾಹಕವಾದ ಸಾಕ್ಷಿಯು ಪ್ರತ್ಯಕ್ಷಜ್ಞಾನಕ್ಕೆ ತಾತ್ಕಾಲಿಕವೇ ಆದ ಪ್ರಾಮಾಣ್ಯವನ್ನು ಗ್ರಹಿಸುತ್ತದೆ, ವಾಕ್ಯಜನ್ಯಜ್ಞಾನಕ್ಕೆ ಆತ್ಯಂತಿಕ ಪ್ರಮಾಣ್ಯವನ್ನೇ ಗ್ರಹಿಸುತ್ತದೆ ಎಂದರೆ, ಹಾಗೆ ಹೇಳಕೂಡದು. ಈ ವ್ಯವಸ್ಥೆಗೆ ನಿಯಾಮಕವಿಲ್ಲವೆಂದು ಹಿಂದೆಯೇ ಹೇಳಲಾಗಿದೆ. ಈಗ ದೋಷಾಂತರವನ್ನು ಹೇಳುತ್ತಾರೆ –

ಪ್ರಾಮಾಣ್ಯಸ್ಯ ಮರ್ಯಾದಾ ಕಾಲತೋ ವ್ಯಾಹತಾ ಭವೇತ್ ।

ಕಾಲಾಂತರೇಽಪ್ಯಮಾನಂ ಚೇದಿದಾನೀಂ ಮಾನತಾ ಕುತಃ ॥೫೯॥

ಪ್ರಾಮಾಣ್ಯಕ್ಕೆ ಕಾಲದ ಪರಿಮಿತಿಯನ್ನು ಅಂದರೆ ತಾತ್ಕಾಲಿಕತ್ವವನ್ನು ಹೇಳುವುದು ಸ್ವವಚನ ವಿರುದ್ಧವಾಗುವುದು. ಪ್ರತ್ಯಕ್ಷದ ಪ್ರಾಮಾಣ್ಯವು ಈಗ ಅಬಾಧಿತವಾದರೂ ಕಾಲಾಂತರದಲ್ಲಿ ಬಾಧಿತ ಪ್ರಾಮಾಣ್ಯವುಳ್ಳದ್ದಾಗುವುದು ಎಂದು ನೀನು ಹೇಳುವುದಾದರೆ, ಈಗಾದರೂ ಅದರ ಪ್ರಾಮಾಣ್ಯವು ಹೇಗೆ ಸಿದ್ಧಿಸುವುದು?

ಅದ್ವಿತೀಯಬ್ರಹ್ಮನಲ್ಲಿ ಒಂದಾಗಿ ಸೇರುವುದೇ ಮೋಕ್ಷವೆಂದು ಅಂಗೀಕರಿಸಿ, ಪ್ರತ್ಯಕ್ಷ ಆಗಮಗಳ ಪ್ರಾಮಾಣ್ಯಕ್ಕೆ ಅಬಾಧ್ಯತ್ವವು ಸಮಾನವಾದ್ದರಿಂದ ಅದ್ವೈತ ಮೋಕ್ಷಕ್ಕೆ ಹಾನಿಯೂ ಸಮಾನವೆಂದು ಹೇಳಲಾಯಿತು. ಈಗ ಆ ಮೋಕ್ಷವೇ

ಕೂಡುವುದಿಲ್ಲ ಎಂಬ ಆಶಯದಿಂದ ಪ್ರಶ್ನಿಸುತ್ತಾರೆ –

ಮಿಥ್ಯಾತ್ವಮಾನಂ ಮೋಕ್ಷೇಽಪಿ ಮಾನಂ ಕಿಂ ನೇತಿ ಭಣ್ಯತಾಮ್ ।

ಮಾನತ್ವೇಽದ್ವೈತಹಾನಿಃ ಸ್ಯಾದಮಾನತ್ವೇಽಪ್ಯಮೋಕ್ಷತಾ ॥೬೦॥

ಮಿಥ್ಯಾತ್ವಸಾಧಕ ಆಗಮರೂಪ ಪ್ರಮಾಣವೂ ಅನುಮಾನರೂಪ ಪ್ರಮಾಣವೂ ಮೋಕ್ಷ ಸಮಯದಲ್ಲಿಯೂ ಕೂಡ ಅಬಾಧಿತವಾದ ಪ್ರಾಮಾಣ್ಯವುಳ್ಳದ್ದೋ ಅಥವಾ ಬಾಧಿತಸ್ವರೂಪ ಪ್ರಾಮಾಣ್ಯವುಳ್ಳದ್ದೋ ಎಂದು ಪ್ರಶ್ನಿಸಿದರೆ ಉತ್ತರವು ಹೇಳಲ್ಪಡಲಿ. ಅಬಾಧಿತಸ್ವರೂಪ ಪ್ರಮಾಣವೆಂದು ಹೇಳಿದರೆ ಬ್ರಹ್ಮನ ಅದ್ವಿತೀಯತ್ವಕ್ಕೆ ಭಂಗ ಬರುವುದರಿಂದ ಅದ್ವೈತ ಹಾನಿಯು. ಪ್ರಮಾಣವಲ್ಲವೆಂದರೆ ಮೋಕ್ಷವೇ ಸಿದ್ಧಿಸದು. ಅದು ಹೇಗೆಂದರೆ –

ವಿಶ್ವಸ್ಯ ಪುನರಾಪತ್ತಿರ್ಮಿಥ್ಯಾಮಾನಂ ಯದಾ ನ ಮಾ ।

ಅಸ್ತಿ ಚೇನ್ಮುಕ್ತ್ಯವಸ್ಥಾ ಚ ದ್ವೈತಾಪತ್ತಿರತೋಽನ್ಯಥಾ ॥೬೧॥

ಅಮುಕ್ತತ್ವಂ ತಥಾ ಕಾಲೇ ಕಾಲಾಧೀನಾ ಹಿ ಮುಕ್ತತಾ ।

ವಿಶ್ವಮಿಥ್ಯಾತ್ವ ಸಾಧಕ ಪ್ರಮಾಣಕ್ಕೆ ಪ್ರಾಮಾಣ್ಯವೇ ಇಲ್ಲದೇ ಹೋದರೆ ಆಗ ಜಗತ್ತಿಗೆ ಪುನಃ ಪ್ರಾಪ್ತಿಯು ಆಗಬೇಕಾಗುವುದು. ಅಂದರೆ ಜಗತ್ತು ಇದ್ದರೆ ಮೋಕ್ಷವು ಹೇಗೆ ಕೂಡುವುದು? ಮೋಕ್ಷಕ್ಕೆ ಅಸ್ತಿತ್ವವನ್ನು ಒಪ್ಪಿದರೆ ಆಗ ಎರಡನೆಯ ಪದಾರ್ಥವನ್ನು ಒಪ್ಪಬೇಕಾಗುವುದು. ಮೋಕ್ಷವು ಅಸತ್ತಾದರೆ ಆಗ ಆತ್ಮನಿಗೆ ಅಮುಕ್ತತ್ವವು ಬರಬೇಕಾಗುವುದು. ಹಾಗೆಯೇ ಮೋಕ್ಷಾವಸ್ಥೆಯಲ್ಲಿ ಕಾಲವು ಇದೆಯೋ ಇಲ್ಲವೋ ಎಂದು ವಿಕಲ್ಪಿಸಿ ದೋಷವನ್ನು ಹೇಳಬೇಕು. ಕಾಲವು ಇದ್ದರೆ ದ್ವೈತಾಪತ್ತಿಯು. ಕಾಲವವೇ ಇಲ್ಲದಿದ್ದರೆ ಮುಕ್ತತ್ವವೇ ಇಲ್ಲ. ಏಕೆಂದರೆ ಮುಕ್ತತ್ವವು ನಿಯಮೇನ ಕಾಲವನ್ನೇ ಅಧಿಕರಣವಾಗುಳ್ಳದ್ದು. 'ಯದ್ವಸ್ತು ತತ್ಕಾಲಸಂಬಂಧ್ಯೇವ' ಎಂದು ವ್ಯಾಪ್ತಿಯು ಪ್ರಸಿದ್ಧವು.

ಮುಕ್ತಿಗೆ ಕಾಲಾಧಿಕರಣತ್ವ ನಿಯಮವು ಕೇವಲ ಅನುಮಾನದಿಂದ ಮಾತ್ರವಲ್ಲ ಆಗಮದಿಂದಲೂ ಸಿದ್ಧವಾಗಿದೆ ಎನ್ನುತ್ತಾರೆ –

ಕಾಲ ಏವಾಗಮೋಽಪ್ಯಾಹ ಮುಕ್ತಿಂ ಕಾಲನಿವರ್ತನೇ ॥೬೨॥

ಮುಕ್ತೇರಪಿ ನಿವೃತ್ತಿಃ ಸ್ಯಾತ್..... ।

'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ' 'ದೃಷ್ಟ್ವೈವ ತಂ ಮುಚ್ಯತೇ' ಇತ್ಯಾದಿ ಆಗಮವೂ ಕಾಲದಲ್ಲಿಯೇ ಮುಕ್ತಿಯು ಎಂದು ಹೇಳುತ್ತದೆ. ಕಾಲವು ಅಸತ್ವವೆಂದಾದರೆ ಮೋಕ್ಷವೂ ಅಸತ್ವವೇ ಆಗುವುದು. ಅಂದರೆ ವ್ಯಾಪಕವಾದ ಕಾಲವು ನಿವೃತ್ತವಾದರೆ ವ್ಯಾಪ್ಯವಾದ ಮೋಕ್ಷವೂ ನಿವೃತ್ತವಾಗಬೇಕಾಗುವುದು.

ಮೋಕ್ಷವು ಕಾಲಸಂಬಂಧಿಯಲ್ಲದೇ ಹೋದರೆ ಆಗ ಅದು ಮೊಲದ ಕೋಡಿನಂತೆ ಅಸತ್ತೇ ಆಗುವುದು ಎಂದು ತಾತ್ಪರ್ಯ.

. ಹಾಗಾದರೆ ಮುಕ್ತಿಯು ಅಸತ್ತೆಂಬುದು ನಮಗೆ ಅನಿಷ್ಟವಲ್ಲವೆಂದು ಮಾಯಾವಾದಿಯು ಆಶಂಕಿಸಿದರೆ –

..... ಸಂಸಾರಿತ್ವಮತೋ ಭವೇತ್ ।

ಸತ್ತಾದ ಚೈತನ್ಯಕ್ಕೆ ಬಂದಾಭಾವರೂಪವಾದ ಮೋಕ್ಷವು ಅಸತ್ತಾದರೆ, ದೇವದತ್ತನಂತೆ ಮೋಕ್ಷಾಪೇಕ್ಷಿಗೂ ಸಂಸಾರಿತ್ವವು ಬರಬೇಕಾಗುವುದು.

ಹಾಗಾದರೆ ಬಂಧವು ಮಿಥ್ಯೆಯಾದ್ದರಿಂದ ಸಂಸಾರವೂ ಇಲ್ಲ, ಮೋಕ್ಷವೂ ಇಲ್ಲ. ಆದ್ದರಿಂದ ನಮಗೆ ಅನಿಷ್ಟವಲ್ಲ ಎಂದು ಮಾಯಾವಾದಿಯು ಆಶಂಕಿಸಿದರೆ, ಹಾಗೆ ಹೇಳಕೂಡದು. ಏಕೆಂದರೆ ಬಂಧಮಿಥ್ಯಾತ್ವವನ್ನು ಅಪ್ರಮಾಣಿಕವೆಂದು ದೃಢೀಕರಿಸುವ ಮೂಲಕ ಈ ಹಿಂದೆಯೇ ನಿರಾಕರಿಸಲಾಗಿದೆ.

ಇನ್ನು ಪ್ರಬಲವಾದ ಪ್ರತ್ಯಕ್ಷದಿಂದ ಸಿದ್ಧವಾದುದಕ್ಕೆ ಅನುಮಾನದಿಂದಾಗಲೀ ಆಗಮದಿಂದಾಗಲೀ ಎಲ್ಲಿಯೂ ಬಾಧವು ಕಂಡಿಲ್ಲ ಎಂದು ಹೇಳುತ್ತಾರೆ –

ಕ್ವ ಚ ಪ್ರತ್ಯಕ್ಷತಃ ಪ್ರಾಪ್ತಮನುಮಾಗಮಬಾಧಿತಮ್ ॥೬೩॥

ಸಾಕ್ಷಾತ್ಕಾರದಿಂದ ಸಿದ್ಧವಾದುದು ಅನುಮಾಗಮಗಳಿಂದ ಬಾಧಿತವೆಂಬುದು ಎಲ್ಲಿ ಕಂಡಿದೆ?

ಹಾಗಾದರೆ ದೇಹಾತ್ಮತ್ವವು ಪ್ರತ್ಯಕ್ಷದಿಂದ ಪ್ರಾಪ್ತವಾಗಿದ್ದರೂ, 'ದೇಹೋ ನ ಆತ್ಮಾ ಭೂತತ್ವಾತ್ ಕಾರ್ಯತ್ವಾತ್ ಘಟವತ್' (ದೇಹವು ಆತ್ಮವಲ್ಲ ಭೂತವಾಗಿರುವುದರಿಂದ ಕಾರ್ಯವಾಗಿರುವುದರಿಂದ ಘಟದಂತೆಯೇ) ಇತ್ಯಾದಿ ಅನುಮಾನದಿಂದಲೂ, 'ತಂ ಸ್ವಾಚ್ಛರೀರಾತ್ಪ್ರವೃಹೇತ್' (ಜೀವನನ್ನು ತನ್ನ ಶರೀರದಿಂದ ಭಿನ್ನವಾಗಿ ತಿಳಿಯಬೇಕು) ಇತ್ಯಾದಿ ಆಗಮಗಳಿಂದಲೂ ದೇಹವೇ ಆತ್ಮವೆಂಬ ಪ್ರತ್ಯಕ್ಷಕ್ಕೆ ಬಾಧ ಕಂಡುಬಂದಿದೆ ಎಂದು ಆಶಂಕಿಸಿದರೆ –

ದೇಹಾತ್ಮತ್ವಂ ಯದಿ ನ ತತ್ಪ್ರಾಪ್ತಂ ಪ್ರತ್ಯಕ್ಷತಃ ಕ್ವಚಿತ್ ।

ಮಮ ದೇಹ ಇತಿ ಹ್ಯೇವ ನ ದೇಹೋಽಹಮಿತಿ ಪ್ರಮಾ ॥೬೪॥

ಉಪಚಾರಶ್ಚ ಕೃಷ್ಣೋಽಹಮಿತಿ ಕರ್ದಮಲೇಪನೇ ।

ವಸ್ತ್ರಸ್ಯ ಯದ್ವದೇವಂ ಸ್ಯಾತ್ ಯದ್ಯುಪಾಧಿಕೃತಂ ತದಾ ॥೬೫॥

ಸ್ವತಃ ಶುಕ್ಲತ್ವವತ್ ಕಾರ್ಷ್ಣ್ಯಂ ನ ಮಮೇತಿ ಪ್ರತೀಯತೇ ।

ಪ್ರತ್ಯಕ್ಷದಿಂದ ಪ್ರಾಪ್ತವಾದ ದೇಹವೇ ಆತ್ಮವು ಎಂಬ ಪ್ರತೀತಿಯು ಅನುಮಾನ

ಆಗಮಗಳಿಂದ ಬಾಧಿತವು ಎಂದು ಹೇಳಕೂಡದು. ಏಕೆಂದರೆ ಪಂಡಿತರಲ್ಲಾಗಲೀ ಪಾಮರರಲ್ಲಾಗಲೀ ದೇಹವೇ ಆತ್ಮವು ಎಂಬುದಾಗಿ ಎಂದಿಗೂ ಸಾಕ್ಷಾತ್ಕಾರವಾಗಿಲ್ಲ. ಎಲ್ಲ ಪ್ರಾಣಿಗಳಿಗೂ 'ನನ್ನ ದೇಹ' ಎಂಬ ಪ್ರತೀತಿಯುಂಟೇ ಹೊರತು 'ನಾನೇ ದೇಹ' ಎಂಬುದಾಗಿ ಯಾವತ್ತೂ ಪ್ರತೀತಿಯಿರುವುದಿಲ್ಲ. 'ಕೃಷ್ಣೋ೪ಹಂ' ಎನ್ನುವ ವ್ಯವಹಾರದಲ್ಲಿಯೂ ಆತ್ಮನಿಗೆ ದೇಹವಿದ್ದ ಪ್ರಯುಕ್ತ ಉಪಚಾರದಿಂದ ಹೇಳಿದ್ದೇ ಹೊರತು ಆತ್ಮನೇ ಕಪ್ಪು ಎಂಬ ಮುಖ್ಯಾರ್ಥದಿಂದಲ್ಲ. ಬಿಳಿ ಬಟ್ಟೆಗೆ ಕೆಸರಿನ ಲೇಪವಾದಾಗ ಅದನ್ನು ಕಪ್ಪು ಬಟ್ಟೆ ಎಂದು ಹೇಗೆ ಹೇಳುತ್ತೇವೋ ಹಾಗೆಯೇ ನಾನು ಕಪ್ಪು ಎಂಬ ವ್ಯವಹಾರವು. ವಸ್ತ್ರದಲ್ಲಿ ಕಪ್ಪು ಬಣ್ಣವಿಲ್ಲದಿದ್ದರೂ ಕಪ್ಪು ಬಣ್ಣದ ಕೆಸರಿನ ಸಂಬಂಧದಿಂದ ವಸ್ತ್ರವು ಕಪ್ಪು ಎಂಬ ವ್ಯವಹಾರವು ಹೇಗೋ ಹಾಗೆಯೇ ಕಪ್ಪು ಬಣ್ಣದ ದೇಹದ ಸಂಬಂಧದಿಂದ 'ಕೃಷ್ಣೋ೪ಹಂ' ಎನ್ನುವ ವ್ಯವಹಾರವು ಕೂಡುವುದು. ಕಪ್ಪು ಬಟ್ಟೆಯನ್ನು ನೋಡಿದಾಗ, ಈ ಬಟ್ಟೆಯು ಬಿಳಿಯೇ, ಕಪ್ಪಲ್ಲ. ಕಪ್ಪು ಬಣ್ಣವಾದರೋ ಉಪಾಧಿಕೃತವು ಎಂದು ತಿಳಿಯುತ್ತೇವೆ. ಹಾಗೆಯೇ ನಾನು ಕಪ್ಪು ಎಂದು ಹೇಳುವಾಗಲೂ ನಾನು ಸ್ವತಃ ರೂಪವಿಲ್ಲದವನು, ಕಪ್ಪು ಬಣ್ಣವಾದರೋ ನನ್ನ ಸ್ವಭಾವವಲ್ಲ. ಆದರೆ ದೇಹವೆಂಬ ಉಪಾಧಿಯಿಂದಾಗಿ ನನಗೆ ಕಪ್ಪು ಬಣ್ಣವಿದೆ ಎಂದು ತಿಳಿಯುತ್ತೇವೆ. ಈ ಪ್ರತೀತಿಯು ಯಥಾರ್ಥವೇ ಆಗಿರುವುದರಿಂದ ಇದಕ್ಕೆ ಅನುಮಾನಾದಿಗಳಿಂದ ಬಾಧವಿಲ್ಲ.

ಹಾಗಾದರೆ ಬಟ್ಟೆಗೂ ಕೆಸರಿಗೂ ಭೇದವಿದೆಯೆಂಬ ಜ್ಞಾನವು ನಮಗಿರುವ ಕಾರಣ ಅಲ್ಲಿ ತೋರಿದ ಕಪ್ಪು ಕೆಸರಿನಿಂದಾದದ್ದು ಎಂದು ತಿಳಿಯಲು ಶಕ್ಯವಾಗುತ್ತದೆ. ಆದರೆ ದೇಹ ಆತ್ಮರಿಗೆ ಭೇದದ ಪ್ರತೀತಿಯಿಲ್ಲದಿರುವುದರಿಂದ ಆತ್ಮನಲ್ಲಿ ತೋರುವ ಕಾರ್ಷ್ಣ್ಯವು (ಕಪ್ಪು ಬಣ್ಣವು) ದೇಹೋಪಾಧಿ ನಿಮಿತ್ತಕ ಎಂದು ಹೇಳಲಾಗದು ಎಂದು ಆಶಂಕಿಸಿದರೆ –

ಕಥಂ ಚ ಭೇದಾ ದೇಹಾದೇರಾತ್ಮನೋ ನ ಪ್ರತೀಯತೇ ॥೬೬॥

ದೇಹ ಮತ್ತು ಅದರ ಧರ್ಮಗಳ ದೆಶೆಯಿಂದ ಜೀವನಿಗೆ ಭೇದವು ಹೇಗೆ ತಾನೆ ತೋರುವುದಿಲ್ಲ? ಅಂದರೆ ದೇಹಾದಿಗಳ ಸಂಘಾತಕ್ಕೂ ಆತ್ಮನಿಗೂ ಪರಸ್ಪರ ಭೇದವೂ, ಅದರ ಧರ್ಮಗಳಿಗೆ ಪರಸ್ಪರ ಅಸಂಸರ್ಗವೂ ಪ್ರತೀತವೇ ಆಗುತ್ತದೆ ಎಂದರ್ಥ. ಅದು ಹೇಗೆಂದರೆ –

ಜಾತಮಾತ್ರಾ ಮೃಗಾ ಗಾವೋ ಹಸ್ತಿನಃ ಪಕ್ಷಿಣೋ ಝಷಾಃ ।

ಭಯಾಭಯಸ್ವಭೋಗಾದೌ ಕಾರಣಾನಿ ವಿಜಾನತೇ ॥೬೭॥

ಮೃಗಗಳು, ಗೋವುಗಳು, ಆನೆಗಳು, ಪಕ್ಷಿಗಳು, ಮತ್ಸ್ಯಗಳು ಮುಂತಾದವು ಹುಟ್ಟುತ್ತಿದ್ದಂತೆಯೇ ಭಯ, ಭಯವಿಲ್ಲದಿರುವಿಕೆ ಹಾಗೂ ತನ್ನ ಸುಖದುಃಖಾದಿಗಳ ಅನುಭವದಲ್ಲಿ ಕಾರಣಗಳನ್ನು ಅರಿತಿರುತ್ತವೆ.

ಹೇಗೆಂದರೆ, ಸಿಂಹ ಹುಲಿ ಮುಂತಾದವು ಭಯಕಾರಣಗಳು, ತಾಯಿ ಮುಂತಾದವು ಅಭಯಕಾರಣಗಳು, ಸ್ತನ್ಯಪಾನ ಮುಂತಾದವು ಸುಖಕಾರಣಗಳು, ಶಂಕ್ವಾದಿಗಳಿಂದ ಕಣ್ಣಿನಲ್ಲಿ ತುರಿಸುವಿಕೆ ಮುಂತಾದವು ದುಃಖಕ್ಕೆ ಕಾರಣಗಳು ಇತ್ಯಾದಿ ಸಂಗತಿಗಳು ಪ್ರಾಣಿಪಕ್ಷಿಗಳಿಗೆ ಮೊದಲೇ ತಿಳಿದಿರುತ್ತವೆ. ಆದ್ದರಿಂದಲೇ ಸಿಂಹ ಹುಲಿ ಮೊದಲಾದವುಗಳ ಧ್ವನಿ ಮಾತ್ರದಿಂದ ಸಾಧು ಪ್ರಾಣಿಗಳು ಹೆದರಿ ಪಲಾಯನ ಮಾಡುತ್ತವೆ. ತಾಯಿಯ ಬಳಿ ಓಡಿ ಬರುತ್ತವೆ. ಸ್ತನ್ಯಪಾನಾದಿಗಳಲ್ಲಿ ತೊಡಗುತ್ತವೆ. ಕಣ್ಣಿನಲ್ಲಿ ಸೇರುವ ಹುಳಗಳನ್ನು ದೂರಸರಿಸುತ್ತವೆ.

ಹಾಗಾದರೆ ಇದರಿಂದ ಏನು ತಿಳಿಯುವುದು ಎಂದರೆ –

ಅಸ್ಮೃತೌ ಪೂರ್ವದೇಹಸ್ಯ ವಿಜ್ಞಾನಂ ತತ್ಕಥಂ ಭವೇತ್ ।

ಅನ್ವಯವ್ಯತಿರೇಕಾದೇರನುಸಂಧಾನವಿಸ್ಮೃತೌ ॥೬೮॥

ಪೂರ್ವದೇಹದ ಸ್ಮರಣೆಯಿಲ್ಲದಿದ್ದಲ್ಲಿ ಇವುಗಳು ಭಯಾದಿ ಕಾರಣಗಳು ಎಂಬ ಜ್ಞಾನವು ಹೇಗೆ ಆಗುವುದು? ಇವು ಇಷ್ಟಸಾಧನ, ಅವು ಅನಿಷ್ಟಸಾಧನ, ಇದಿದ್ದರೆ ಸುಖ, ಇದಿಲ್ಲದಿದ್ದರೆ ದುಃಖ, ಹೀಗೆ ಅನ್ವಯ--ವ್ಯತಿರೇಕಗಳಿಂದ ರಾಗದ್ವೇಷಗಳೇ ಪ್ರವೃತ್ತಿ–ನಿವೃತ್ತಿಗಳಿಗೆ ಕಾರಣವು ಎಂದು ನಮ್ಮಲ್ಲಿ ನಿಶ್ಚಿತವಾಗಿದೆ. ಪಶುಪಕ್ಷಿಗಳಿಗೆ ಹುಟ್ಟುವಾಗಲೇ ಇಷ್ಟಾನಿಷ್ಟಸಾಧನತ್ವಗಳ ಜ್ಞಾನವಿರುವುದರಿಂದ ಅದು ಪ್ರತ್ಯಕ್ಷದಿಂದ ಉಂಟಾಗಿದೆ ಎಂದು ಹೇಳುವ ಹಾಗಿಲ್ಲ. ಅನುಮಾನ ಉಪದೇಶಾದಿಗಳಿಂದಲೂ ಸಾಧ್ಯವಿಲ್ಲ. ಏಕೆಂದರೆ ಪಶುಪಕ್ಷಿಗಳಿಗೆ ವಿಶೇಷವಾದ ಬುದ್ಧ್ಯಾದಿಗಳು ಇರುವುದಿಲ್ಲ. ಆದ್ದರಿಂದ ಜನ್ಮಾಂತರ ಅನುಭವದ ಸ್ಮೃತಿಯನ್ನು ಒಪ್ಪಲೇಬೇಕು. ಪಶುಪಕ್ಷಿಗಳಿಗೆ ಪೂರ್ವದೇಹದ ಸ್ಮರಣೆಯು ಇದ್ದೇ ಇರುವುದೆಂದು ನಿಶ್ಚಿತವಾಗುವುದು. ಹಾಗೆಯೇ ಮನುಷ್ಯರಲ್ಲಿಯೂ ಪೂರ್ವದೇಹದ ಸ್ಮರಣೆ ಯನ್ನು ಒಪ್ಪಲೇಬೇಕು.

ಮನುಷ್ಯರಲ್ಲಿಯೂ ಪೂರ್ವದೇಹದ ಸ್ಮರಣೆ ಇರುವುದೆಂದು ಒಪ್ಪೋಣ. ಮುಂದೇನು ಎಂದರೆ –

ಯದಾ ದೇಹಾಂತರಜ್ಞಾನಂ ದೇಹೈಕ್ಯಾವಸಿತಿಃ ಕುತಃ ।

ಈಗ ಈ ದೇಹದಲ್ಲಿರತಕ್ಕ ನನಗೆ ಕೇವಲ ಇದೇ ದೇಹವಲ್ಲದೇ ಇದಕ್ಕೀತ ಮೊದಲು ಬೇರೊಂದು ದೇಹವಿತ್ತು ಎಂಬುದಾಗಿ ದೇಹಾಂತರ ಸ್ಮರಣವು ಯಾವಾಗ ನಿಶ್ಚಿತವಾಗುವುದೋ, ಆಗ ದೇಹಕ್ಕೂ ನನಗೂ ಅಭೇದವು ಎಂಬ ಐಕ್ಯ ಜ್ಞಾನವು ಬರುವುದಾದರೂ ಹೇಗೆ? ಆದುದರಿಂದ ಮಮ ದೇಹಃ ಎಂದು ಆತ್ಮ ಬೇರೆ ದೇಹ ಬೇರೆ ಎಂಬ ಭೇದ ಜ್ಞಾನವು ಯಥಾರ್ಥವೇ ಆಗುವುದು. ಕೃಷ್ಣೋಽಹಂ ಎಂದು ಆತ್ಮನಲ್ಲಿ ದೇಹಧರ್ಮವಾದ ಕಾರ್ಷ್ಣ್ಯಾದಿಗಳ ಆರೋಪವು ಔಪಚಾರಿಕವೆಂದೇ ಅಂಗೀಕರಿಸಬೇಕು.

ಹಾಗಾದರೆ ನನ್ನ ಮನೆ ಇತ್ಯಾದಿಗಳಂತೆ ನನ್ನ ದೇಹ ಎಂದು ಆತ್ಮನಿಗೂ ದೇಹಕ್ಕೂ ಭೇದ ಜ್ಞಾನವೇ ಇದ್ದ ಪಕ್ಷದಲ್ಲಿ, ನನ್ನ ದೇಹ ಕಪ್ಪು ನಾನು ಕಪ್ಪಲ್ಲ ಎಂದು ಜನರು ಏಕೆ ವ್ಯವಹರಿಸುವುದಿಲ್ಲ ಎಂದು ಆಶಂಕಿಸಿದರೆ –

ವ್ಯಾಪ್ತತ್ವಾದಾತ್ಮನೋ ದೇಹೇ ವ್ಯವಹಾರೇಷ್ವಪಾಟವಾತ್ ॥೬೯॥

ಭೇದಜ್ಞಾನೇ೨ಪಿ ಚಾಂಗಾರವಹ್ನಿವತ್ ಸ್ವಾವಿವಿಕ್ತವತ್ ।

ಭವಂತಿ ವ್ಯವಹಾರಾಶ್ಚ ..... ॥

ದೀಪ ಪ್ರಕಾಶದಂತೆ ಆತ್ಮನಿಗೆ ದೇಹದಲ್ಲಿ ವ್ಯಾಪ್ತತ್ವವಿರುವುದರಿಂದ, ಕೆಂಡದಲ್ಲಿ ವ್ಯಾಪ್ತವಾದ ಬೆಂಕಿಯಲ್ಲಿ ಅದೇ ಬೆಂಕಿ ಎಂಬ ವ್ಯವಹಾರವಿದ್ದಂತೆಯೇ, ಜನರಿಗೆ ವ್ಯವಹಾರದಲ್ಲಿ ಸ್ಪಷ್ಟವಾಗಿ ಭೇದದ ಅರಿವು ಇಲ್ಲದಿರುವ ಕಾರಣ, ಕೃಷ್ಣೋ೨ಹಂ ಇತ್ಯಾದಿ ಅಭೇದವತ್ ವ್ಯವಹಾರಗಳು ಆಗುತ್ತವೆ.

ಜ್ಞಾನವೇ ವ್ಯವಹಾರಕ್ಕೆ ಸಾಧನವು. ಹಾಗಿದ್ದರೂ ಯಥಾರ್ಥವಾದ ಭೇದ ಜ್ಞಾನವಿದ್ದರೂ ಅಭೇದ ವ್ಯವಹಾರವು ಹೇಗೆ ಕೂಡುವುದು ಎಂದರೆ –

....., ... ನ ಹಿ ಪ್ರತ್ಯಕ್ಷಗಾನಪಿ ॥೭೦॥

ಅರ್ಥಾನ್ಯಥಾ೨ನುಭವತಃ ಪ್ರತಿಪಾದಯಿತುಂ ಕ್ಷಮಾಃ ।

ಲೋಕಾಃ ತತೋ ಹಿ ಪ್ರತ್ಯಕ್ಷಸಿದ್ಧಂ ನಾನ್ಯೇನ ಕೇನಚಿತ್ ॥೭೧॥

ಶಕ್ಯಂ ವಾರಯಿತುಂ ಕ್ವಾಪಿ ..... ।

ಸ್ವಾನುಭವದಿಂದ ಪ್ರತ್ಯಕ್ಷಕ್ಕೆ ಪ್ರತೀತವಾದ ವಿಷಯಗಳನ್ನೂ ಕೂಡ ಪರರ ಮುಂದೆ ಯಥಾರ್ಥರೂಪದಿಂದ ಪ್ರತಿಪಾದಿಸಲಿಕ್ಕೆ ಜನರು ಸಮರ್ಥರಾಗುವುದಿಲ್ಲ ಎಂಬುದು ಲೋಕದಲ್ಲಿ ಅನುಭವಸಿದ್ಧವು. ಅವಳಿ ಮಕ್ಕಳಿಗೆ ಅತ್ಯಂತ ಭೇದವನ್ನು ಅರಿತಿರುವ ತಾಯಿಯನ್ನು ಈ ಮಕ್ಕಳನ್ನು ಬೇರೆ ಬೇರೆ ಎಂದು ಗುರುತಿಸುವುದು ಹೇಗೆ ಎಂದು ಕೇಳಿದರೆ ತನಗೆ ಗೊತ್ತಿದ್ದರೂ ಅದನ್ನು ಅವಳು ಸಮರ್ಪಕವಾಗಿ ಪ್ರತಿಪಾದಸಲಿಕ್ಕೆ ಸಮರ್ಥಳಾಗುವುದಿಲ್ಲ. ಆದರೂ ಆ ಮಕ್ಕಳು ಬೇರೆ ಬೇರೆ ಎನ್ನುವುದು ಪ್ರತ್ಯಕ್ಷಸಿದ್ಧವೇ ಆಗಿರುವುದರಿಂದ ಅದನ್ನು ಅಪಲಾಪ ಮಾಡುವುದು ಶಕ್ಯವಿಲ್ಲ. ಕೆಲವು ಕಡೆ ಪ್ರತ್ಯಕ್ಷವು ಅಯಥಾರ್ಥವಾಗಿದ್ದರೆ ಅದಕ್ಕೆ ಪ್ರಬಲವಾದ ಪ್ರತ್ಯಕ್ಷದಿಂದಲೇ ಬಾಧವು, ಬೇರೆ ರೀತಿಯಿಂದಲ್ಲ. ಪ್ರತ್ಯಕ್ಷದಿಂದ ಸಿದ್ಧವಾದುದನ್ನು ಬೇರೆ ಯಾವುದರಿಂದಲೂ ನಿರಾಕರಿಸುವುದು ಅಶಕ್ಯವು. ಪ್ರತ್ಯಕ್ಷಕ್ಕೆ ಅದಕ್ಕಿಂತ ಪ್ರಬಲವಾದ ಪ್ರತ್ಯಕ್ಷದಿಂದಲೇ ಬಾಧವು. ಸ್ವಭಾವತಃ ಪ್ರಬಲವಾದ ಪ್ರತ್ಯಕ್ಷಕ್ಕೆ ವಿರುದ್ಧಗಳಾದ ಅನುಮಾನ ಆಗಮಗಳು ಆಭಾಸಗಳೇ.

ಪ್ರತ್ಯಕ್ಷವು ವರ್ತಮಾನಾರ್ಥವನ್ನು ಮಾತ್ರ ಗ್ರಹಿಸುವುದಾದರೂ, ಜಗತ್ತಿಗೆ

ಕಾಲತ್ರಯಬಾಧ್ಯತ್ವವನ್ನು ಪ್ರತಿಪಾದಿಸುತ್ತವೆ ಎಂದು ಪರಕೀಯರು ಉದಾಹರಿಸುವ 'ನೇಹ ನಾನಾಸ್ತಿ' ಇತ್ಯಾದಿ ಆಗಮಗಳಿಗೆ ಪ್ರತ್ಯಕ್ಷ ವಿರೋಧವು ಬಂದೇ ಬರುವುದು. ಹಾಗಿದ್ದರೂ ಪ್ರಸಕ್ತಿ ಇರುವಾಗ ವಸ್ತುಸ್ಥಿತಿಯನ್ನು ಹೇಳಬೇಕು ಎನ್ನುವ ಆಶಯದಿಂದ ಪ್ರತ್ಯಕ್ಷಕ್ಕೆ ವರ್ತಮಾನಗ್ರಾಹಿತ್ವ ಎಂಬ ನಿಯಮವನ್ನು ತಿರಸ್ಕರಿಸಲು ಮುಂದಿನ ಪ್ರಕರಣವನ್ನು ಆರಂಭಿಸುತ್ತ ಸಾಕ್ಷಿಪ್ರತ್ಯಕ್ಷಕ್ಕೆ ಕಾಲತ್ರಯ ಅಬಾಧ್ಯತ್ವವನ್ನು ನಿರೂಪಿಸುತ್ತಾರೆ –

..... ತಚ್ಚೇನ್ನೋತ್ತರಗೋಚರಮ್ ।

ಕಥಮೇವೋತ್ತರಃ ಕಾಲಸ್ತದ್ಗೋ ಮೋಕ್ಷಶ್ಚ ಗಮ್ಯತೇ ॥೭೨॥

ಪ್ರತ್ಯಕ್ಷವಿಶೇಷವಾದ ಸಾಕ್ಷಿಯು ಉತ್ತರಕಾಲವನ್ನೂ ಅತೀತಕಾಲವನ್ನೂ ವಿಷಯೀಕರಿಸದೇ ಹೋದರೆ, ಅಂದರೆ ವರ್ತಮಾನಕಾಲವನ್ನು ಮಾತ್ರ ಗ್ರಹಿಸಿದರೆ, ಉತ್ತರಕಾಲವೂ, ಹಾಗೆಯೇ ಉತ್ತರಕಾಲದಲ್ಲಿರತಕ್ಕ ಮೋಕ್ಷವೂ ಹೇಗೆ ತಾನೆ ತಿಳಿಯಲ್ಪಡುವುದು?

ಶುಕವಾಮದೇವಾದಿಗಳು ಜ್ಞಾನದಿಂದಲೇ ಮುಕ್ತಾರಾಗಿರುವರು. ನಾನೂ ಕೂಡ ಮುಕ್ತನಾಗುವೆನು. ಇತ್ಯಾದಿ ಜ್ಞಾನವು ಆಗಮದಿಂದಲೇ ಆಗುವುದು. ಹಾಗಿರುವಾಗ ಸಾಕ್ಷಿಯು ಅತೀತ ಹಾಗೂ ಆನಾಗತವಾದ ವಿಷಯಗಳನ್ನು ವಿಷಯೀಕರಿಸುವುದು ಎನ್ನುವುದರಿಂದ ಏನು ಪ್ರಯೋಜನವೆಂದು ಆಶಂಕಿಸಿದರೆ –

ಆಗಮೋಽಪಿ ಹಿ ಸಾಮಾನ್ಯೇ ಸಿದ್ಧೇ ಪ್ರತ್ಯಕ್ಷತಃ ಪುನಃ ।

ವಿಶೇಷಂ ಗಮಯೇದೇವ ಕಥಂ ಶಕ್ತಿಗ್ರಹೋಽನ್ಯಥಾ ॥೭೩॥

ಸಾಮಾನ್ಯವಾದ ಅನ್ವಯವುಳ್ಳ ಪದಾರ್ಥಸಮೂಹವು ಪ್ರಮಾಣಾಂತರದಿಂದ ಸಿದ್ಧವಾಗಿರಲು, ಮತ್ತೆ ವಿಶೇಷ ಸಮನ್ವಯದಿಂದ ಆಯಾ ಪದಾರ್ಥಸಮೂಹವನ್ನೇ ಆಗಮವೂ ಕೂಡ ತಿಳಿಸಿಕೊಡುವುದು. ಪುನಃ ಸಾಮಾನ್ಯತಃ ತಿಳಿಸಿಕೊಡುವುದಿಲ್ಲ. ಪದಾರ್ಥಗಳು ಮೊದಲು ಸಿದ್ಧಗಳಾಗಿಲ್ಲ ಎಂದು ಹೇಳುವ ಪಕ್ಷದಲ್ಲಿ, ಪದಗಳಿಗೆ ಪದಾರ್ಥಗಳಲ್ಲಿ ವಾಚಕತ್ವ ಶಕ್ತಿಜ್ಞಾನವು ಬಾರದೇ ಹೋಗುವುದು. ಕಟ್ಟಿಗೆಯನ್ನೇ ಅರಿಯದವನಿಗೆ ಕೊಡಲಿಯಿಂದ ಕಟ್ಟಿಗೆಯನ್ನು ಸೀಳಲು ಬರುತ್ತದೆಂಬ ವಿಷಯವನ್ನು ತಿಳಿಸಲಿಕ್ಕೆ ಆಗುವುದಿಲ್ಲವಷ್ಟೆ.

ಪದಗಳಿಗೆ ವಾಚಕತ್ವ ಬರಬೇಕಾದರೆ ಪದಾರ್ಥಜ್ಞಾನವು ಅವಶ್ಯಕವೆಂದಾಗಲಿ, ಪದಗಳಿಗೂ ಪದಾರ್ಥಗಳಿಗೂ ವಾಚ್ಯವಾಚಕ ಸಂಬಂಧ ಜ್ಞಾನವೇ ಏಕೆ ಬೇಕು? ಎಂದು ಕೇಳಿದರೆ –

ಅತೀತಾನಾಗತಾರ್ಥೇಷು ಜಾತೇ ಶಕ್ತಿಗ್ರಹೇಽಖಿಲಮ್ ।

ವಿಶೇಷಂ ಗಮಯೇದ್ವಾಕ್ಯಂ ನ ತದಜ್ಞಾತಶಕ್ತಿಕೇ ॥೭೪॥

ಪದಾರ್ಥಗಳಲ್ಲಿ ವಾಚ್ಯವಾಚಕತ್ವ ಜ್ಞಾನ ಉಂಟಾದಾಗ ಮಾತ್ರ ಎಲ್ಲ ವಾಕ್ಯವೂ ಅತೀತ ಅನಾಗತ ವಸ್ತುಗಳಲ್ಲಿ ಅನ್ವಯವಿಶೇಷವನ್ನು ತಿಳಿಸಿಕೊಡುವುದು. ಪದಗಳಲ್ಲಿ ಶಕ್ತಿಜ್ಞಾನವಿಲ್ಲದಿದ್ದರೆ ಆ ವಾಕ್ಯವು ವಿಶೇಷವನ್ನು ತಿಳಿಸಿಕೊಡಲಾರದು.

ಹಾಗಾದರೆ ಶಕ್ತಿಜ್ಞಾನವು ವರ್ತಮಾನ ಪದಾರ್ಥಗಳಲ್ಲಿಯೇ ಅವಶ್ಯಕವಾಗಲಿ, ಅತೀತ ಅನಾಗತ ವಿಷಯಗಳಲ್ಲಿ ಬೇಡ ಎಂದು ಹೇಳಿದರೆ –

ಶಕ್ತಿಶ್ಚೇದ್ವರ್ತಮಾನೇ ಸ್ಯಾನ್ನಾತೀತಾನಾಗತಂ ವದೇತ್ ।

ವರ್ತಮಾನಾರ್ಥದಲ್ಲಿ ಮಾತ್ರ ಪದಗಳಿಗೆ ಪದಾರ್ಥಗಳಲ್ಲಿ ವಾಚಕತ್ವ ಶಕ್ತಿಯು ಗ್ರಹಿಸಲ್ಪಡುವುದಾದರೆ, ಆ ವಾಕ್ಯವು ಅತೀತ ಅನಾಗತ ಪದಾರ್ಥಗಳನ್ನು ಗ್ರಹಿಸದೇ ಹೋಗಬೇಕಾಗುವುದು. ಹಾಗಾದರೆ ಅತೀತ ಅನಾಗತವಾದ ಅರ್ಥಗಳಲ್ಲಿಯೂ ಪದಗಳಿಗೆ ಶಕ್ತಿಗ್ರಹಣವು ಇರಲಿ. ಅದರಿಂದ ಏನಾಯಿತು ಎಂದು ಕೇಳಿದರೆ –

ಯದಿ ಶಕ್ತಿಗ್ರಹೋಽನ್ಯತ್ರ ಕಥಂ ಸ ಸ್ಯಾತ್ತದಗ್ರಹೇ ॥೭೫॥

ಅತೀತಾನಾಗತ ಪದಾರ್ಥಗಳ ವಿಷಯದಲ್ಲಿಯೂ ಪದಗಳಿಗೆ ಶಕ್ತಿಜ್ಞಾನವು ಅಂಗೀಕೃತವಾದ ಪಕ್ಷದಲ್ಲಿ, ಆ ಅತೀತಾನಾಗತಾರ್ಥಗಳಲ್ಲಿ ಪದಗಳಿಗೆ ಶಕ್ತಿಜ್ಞಾನವು ಆ ಪದಾರ್ಥಗಳನ್ನು ತಿಳಿಯದಿದ್ದರೆ ಹೇಗೆ ಆಗುವುದು? ಅಂದರೆ ಪದಾರ್ಥವನ್ನು ತಿಳಿಯದೆ ಪದಗಳಲ್ಲಿ ವಾಚ್ಯವಾಚಕ ಸಂಬಂಧವು ತಿಳಿಯಲಾರದು. ಅಂದರೆ ವಿಷಯಗಳ ಅರಿವಿಲ್ಲದೆ ಶಕ್ತಿಯನ್ನು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಸಾಕ್ಷಿಯು ಕೇವಲ ವರ್ತಮಾನ ಪದಾರ್ಥಗಳನ್ನು ಮಾತ್ರವಲ್ಲ ಭೂತ ಹಾಗೂ ಭವಿಷ್ಯತ್ ಪದಾರ್ಥಗಳನ್ನೂ ವಿಷಯೀಕರಿಸುತ್ತದೆ ಎಂದು ಅಂಗೀಕರಿಸಲೇಬೇಕು.

ಈಗ ಮೀಮಾಂಸಮತಾನುಸಾರ ಶಂಕಿಸುತ್ತಾರೆ –

ಸಾಮಾನ್ಯಂ ದೃಷ್ಟಮೇವಾಸಾವನ್ಯತ್ರ ಗಮಯೇದ್ಯದಿ ।

ಸಾಮಾನ್ಯವರ್ಜಿತಂ ವಸ್ತು ಸ್ವರೂಪಂ ಗಮಯೇತ್ಕಥಮ್ ॥೭೬॥

ಪ್ರಕೃತ ವಾಕ್ಯದ ಏಕದೇಶವಾದ ಶಬ್ದವು ವರ್ತಮಾನದಲ್ಲಿ ಚಕ್ಷುರಾದಿಗಳಿಂದ ಶಬ್ದಶಕ್ತಿವಿಷಯವಾಗಿ ತಿಳಿಯಲ್ಪಟ್ಟದ್ದೇ ಆದ ಸಾಮಾನ್ಯವನ್ನು ಕಾಲಾಂತರದಲ್ಲಿಯೂ ಬೋಧಿಸುತ್ತದೆ. ಸಾಮಾನ್ಯಕ್ಕೆ ಎಲ್ಲ ವಸ್ತುಗಳ ಸ್ವರೂಪತ್ವವನ್ನು ನಾವು ಅಂಗೀಕರಿಸಿದ್ದೇವೆ. ಆದ್ದರಿಂದ ಸಾಮಾನ್ಯ ವಿರಹಿತವಾದ ವಸ್ತುಸ್ವರೂಪವನ್ನು ಶಬ್ದವು ತಿಳಿಸಿಕೊಡಲಾರದು ಎಂದು ಮೀಮಾಂಸಕರ ವಾದ.

ಸಾಮಾನ್ಯವು ಎಲ್ಲ ವಸ್ತುಗಳ ಸ್ವರೂಪದಲ್ಲಿಯೇ ಇದೆ ಎಂಬುದನ್ನು ತಿರಸ್ಕರಿಸುತ್ತಾರೆ –

ನ ಸ್ವರೂಪತ್ವಸಾಮಾನ್ಯಂ ಕೇನಾಪ್ಯಂಗೀಕೃತಂ ಕ್ವಚಿತ್ ।

ರಾಯದುರ್ಗದ ಮಠದ ಕೃಷ್ಣಾಚಾರ್
ಬಳ್ಳಾಗಿ

ಸ್ವರೂಪಂ ಚೇದನುಗತಂ ವ್ಯಾವೃತ್ತಂ ತತ್ರ ಕಿಂ ಭವೇತ್ ॥೭೭॥

ಸ್ವರೂಪತ್ವಸಾಮಾನ್ಯವು ಯಾರಿಂದಲೂ ಅಂಗೀಕೃತವಾಗಿಲ್ಲ. ಸ್ವರೂಪವು ಅನುಗತವಾದರೆ (ಅಂದರೆ ಸಾಮಾನ್ಯವಾದರೆ) ಆ ವಸ್ತುವಿನಲ್ಲಿ ವ್ಯಾವೃತ್ತವಾದುದು (ಅಂದರೆ ಆ ವಸ್ತುವಿನಿಂದ ಬೇರೆಯಾದುದು) ಯಾವುದಿರುವುದು?

ಅದು ಹೇಗೆಂದರೆ –

ಸರ್ವಾನುಗತಧರ್ಮಾಣಾಮಂತೇ ಹಿ ಸ್ವತ್ವಮಿಷ್ಯತೇ ।

ಕಿಂ ವ್ಯಾವೃತ್ತಮಿತಿ ಪ್ರಶ್ನೇ ಸ್ವರೂಪಮಿತಿ ಕೇವಲಮ್ ॥೭೮॥

ಸ್ಯಾದುತ್ತರಂ ತತೋಽನ್ಯಚ್ಚೇತ್ತದೇವ ಸ್ವಯಮೇವ ನಃ ।

ಎಲ್ಲ ಅನುಗತ ಧರ್ಮಗಳಿಗೆ ಕೊನೆಯಲ್ಲಿ ಸ್ವರೂಪತ್ವವು ಒಪ್ಪುವುದಾದರೆ (ಮೀಮಾಂಸಕರ ಪ್ರಕಾರ), ಅಲ್ಲಿ ವ್ಯಾವೃತ್ತವಾದುದು ಯಾವುದಿದೆ ಎಂದು ಪ್ರಶ್ನಿಸುತ್ತೇವೆ. ಅದಕ್ಕೆ ಕೇವಲ ಸ್ವರೂಪತ್ವವೆಂದೇ ಉತ್ತರ ಹೇಳಬೇಕಾಗುವುದು. ಸ್ವರೂಪತ್ವದಿಂದ ಭೇದರೂಪವಾದುದು ವ್ಯಾವೃತ್ತವು ಎಂದು ಅಂಗೀಕರಿಸಲ್ಪಟ್ಟರೆ ಅದು ನಮಗೆ ಪದಾರ್ಥಸ್ವರೂಪವೇ ಆಗಿದೆ. ಯಾವುದಕ್ಕಾಗಿ ಸ್ವಸ್ವರೂಪತ್ವವು ಉದಾಹೃತವಾಗಿದೆಯೋ ಅಲ್ಲಿ ಭೇದವೇ ಉದಾಹರಣವಾಗುವುದು.

ಅದರಿಂದ ಪ್ರಕೃತಕ್ಕೆ ಏನಾಯಿತೆಂದರೆ –

ಏವಂ ವ್ಯಾವೃತ್ತರೂಪೇಽಪಿ ಯದಾ ಶಕ್ತಿಗ್ರಹೋ ಭವೇತ್ ॥೭೯॥

ತಸ್ಯ ಸಾಮಾನ್ಯತೋ ಜ್ಞಾನಂ ವಿನಾ ಸ ಚ ಭವೇತ್ಕುತಃ ।

ಹಿಂದೆ ಹೇಳಿದ ಪ್ರಕಾರ ವ್ಯಾವೃತ್ತದಲ್ಲಿಯೂ, ಸ್ವರೂಪದಲ್ಲಿಯೂ ಅಥವಾ ಭೇದದಲ್ಲಿಯೂ ಸ್ವರೂಪಭೇದಾದಿ ಶಬ್ದಗಳಿಗೆ ವಾಚಕತ್ವ ಶಕ್ತಿಜ್ಞಾನವು ಯಾವಾಗ ಅಂಗೀಕೃತವಾಗುವುದೋ, ಆಗ ಆ ಶಕ್ತಿಜ್ಞಾನವು ಸ್ವರೂಪಾದಿಗಳ ಸಾಮಾನ್ಯವಾದ ಜ್ಞಾನವಿಲ್ಲದೆ ಹೇಗೆ ಆಗುವುದು?

ಅತೋ ವಿಶೇಷಸಾಮಾನ್ಯರೂಪಂ ಸರ್ವಮಪೀಷ್ಯತೇ ॥೮೦॥

ಆದ್ದರಿಂದ ಎಲ್ಲ ವಸ್ತುವೂ ವಿಶೇಷರೂಪವೂ (ವ್ಯಾವೃತ್ತರೂಪವೂ) ಸಾಮಾನ್ಯ ರೂಪವೂ ಎಂಬುದಾಗಿ ನಮ್ಮಿಂದ ಅಂಗೀಕರಿಸಲ್ಪಡುತ್ತದೆ.

ಹಾಗಾದರೆ ಇದು ಹಿಂದೆ ಹೇಳಿದ್ದಕ್ಕೆ ವಿರುದ್ಧವು. ಮೊದಲು ಸ್ವರೂಪಾದಿಗಳು ಸಾಮಾನ್ಯವಿರಹಿತವು ಎಂದು ಸಾಧಿಸಿ, ಈಗ ಎಲ್ಲ ವಸ್ತುವೂ ಸಾಮಾನ್ಯ ಹಾಗೂ ವಿಶೇಷರೂಪವು ಎಂದು ಅಂಗೀಕರಿಸುವುದು ಅಯುಕ್ತವು ಎಂದು ಆಶಂಕಿಸಿದರೆ –

ವ್ಯಾವೃತ್ತಂ ಯಚ್ಚ ಸಾಮಾನ್ಯಂ ತದೇವ ಸ್ಯಾದ್ವಿಶೇಷತಃ ।

ಪದಾರ್ಥಗಳಲ್ಲಿ ವಾಚ್ಯವಾಚಕತ್ವ ಜ್ಞಾನ ಉಂಟಾದಾಗ ಮಾತ್ರ ಎಲ್ಲ ವಾಕ್ಯವೂ ಅತೀತ ಅನಾಗತ ವಸ್ತುಗಳಲ್ಲಿ ಅನ್ವಯವಿಶೇಷವನ್ನು ತಿಳಿಸಿಕೊಡುವುದು. ಪದಗಳಲ್ಲಿ ಶಕ್ತಿಜ್ಞಾನವಿಲ್ಲದಿದ್ದರೆ ಆ ವಾಕ್ಯವು ವಿಶೇಷವನ್ನು ತಿಳಿಸಿಕೊಡಲಾರದು.

ಹಾಗಾದರೆ ಶಕ್ತಿಜ್ಞಾನವು ವರ್ತಮಾನ ಪದಾರ್ಥಗಳಲ್ಲಿಯೇ ಅವಶ್ಯಕವಾಗಲಿ, ಅತೀತ ಅನಾಗತ ವಿಷಯಗಳಲ್ಲಿ ಬೇಡ ಎಂದು ಹೇಳಿದರೆ –

ಶಕ್ತಿಶ್ಚೇದ್ವರ್ತಮಾನೇ ಸ್ಯಾನ್ನಾತೀತಾನಾಗತಂ ವದೇತ್ ।

ವರ್ತಮಾನಾರ್ಥದಲ್ಲಿ ಮಾತ್ರ ಪದಗಳಿಗೆ ಪದಾರ್ಥಗಳಲ್ಲಿ ವಾಚಕತ್ವ ಶಕ್ತಿಯು ಗ್ರಹಿಸಲ್ಪಡುವುದಾದರೆ, ಆ ವಾಕ್ಯವು ಅತೀತ ಅನಾಗತ ಪದಾರ್ಥಗಳನ್ನು ಗ್ರಹಿಸದೇ ಹೋಗಬೇಕಾಗುವುದು. ಹಾಗಾದರೆ ಅತೀತ ಅನಾಗತವಾದ ಅರ್ಥಗಳಲ್ಲಿಯೂ ಪದಗಳಿಗೆ ಶಕ್ತಿಗ್ರಹಣವು ಇರಲಿ. ಅದರಿಂದ ಏನಾಯಿತು ಎಂದು ಕೇಳಿದರೆ –

ಯದಿ ಶಕ್ತಿಗ್ರಹೋಽನ್ಯತ್ರ ಕಥಂ ಸ ಸ್ಯಾತ್ತದಗ್ರಹೇ ॥೭೫॥

ಅತೀತಾನಾಗತ ಪದಾರ್ಥಗಳ ವಿಷಯದಲ್ಲಿಯೂ ಪದಗಳಿಗೆ ಶಕ್ತಿಜ್ಞಾನವು ಅಂಗೀಕೃತವಾದ ಪಕ್ಷದಲ್ಲಿ, ಆ ಅತೀತಾನಾಗತಾರ್ಥಗಳಲ್ಲಿ ಪದಗಳಿಗೆ ಶಕ್ತಿಜ್ಞಾನವು ಆ ಪದಾರ್ಥಗಳನ್ನು ತಿಳಿಯದಿದ್ದರೆ ಹೇಗೆ ಆಗುವುದು? ಅಂದರೆ ಪದಾರ್ಥವನ್ನು ತಿಳಿಯದೆ ಪದಗಳಲ್ಲಿ ವಾಚ್ಯವಾಚಕ ಸಂಬಂಧವು ತಿಳಿಯಲಾರದು. ಅಂದರೆ ವಿಷಯಗಳ ಅರಿವಿಲ್ಲದೆ ಶಕ್ತಿಯನ್ನು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಸಾಕ್ಷಿಯು ಕೇವಲ ವರ್ತಮಾನ ಪದಾರ್ಥಗಳನ್ನು ಮಾತ್ರವಲ್ಲ ಭೂತ ಹಾಗೂ ಭವಿಷ್ಯತ್ ಪದಾರ್ಥಗಳನ್ನೂ ವಿಷಯೀಕರಿಸುತ್ತದೆ ಎಂದು ಅಂಗೀಕರಿಸಲೇಬೇಕು.

ಈಗ ಮೀಮಾಂಸಮತಾನುಸಾರ ಶಂಕಿಸುತ್ತಾರೆ –

ಸಾಮಾನ್ಯಂ ದೃಷ್ಟಮೇವಾಸಾವನ್ಯತ್ರ ಗಮಯೇದ್ಯದಿ ।

ಸಾಮಾನ್ಯವರ್ಜಿತಂ ವಸ್ತು ಸ್ವರೂಪಂ ಗಮಯೇತ್ಕಥಮ್ ॥೭೬॥

ಪ್ರಕೃತ ವಾಕ್ಯದ ಏಕದೇಶವಾದ ಶಬ್ದವು ವರ್ತಮಾನದಲ್ಲಿ ಚಕ್ಷುರಾದಿಗಳಿಂದ ಶಬ್ದಶಕ್ತಿವಿಷಯವಾಗಿ ತಿಳಿಯಲ್ಪಟ್ಟದ್ದೇ ಆದ ಸಾಮಾನ್ಯವನ್ನು ಕಾಲಾಂತರದಲ್ಲಿಯೂ ಬೋಧಿಸುತ್ತದೆ. ಸಾಮಾನ್ಯಕ್ಕೆ ಎಲ್ಲ ವಸ್ತುಗಳ ಸ್ವರೂಪತ್ವವನ್ನು ನಾವು ಅಂಗೀಕರಿಸಿದ್ದೇವೆ. ಆದ್ದರಿಂದ ಸಾಮಾನ್ಯ ವಿರಹಿತವಾದ ವಸ್ತುಸ್ವರೂಪವನ್ನು ಶಬ್ದವು ತಿಳಿಸಿಕೊಡಲಾರದು ಎಂದು ಮೀಮಾಂಸಕರ ವಾದ.

ಸಾಮಾನ್ಯವು ಎಲ್ಲ ವಸ್ತುಗಳ ಸ್ವರೂಪದಲ್ಲಿಯೇ ಇದೆ ಎಂಬುದನ್ನು ತಿರಸ್ಕರಿಸುತ್ತಾರೆ –

ನ ಸ್ವರೂಪತ್ವಸಾಮಾನ್ಯಂ ಕೇನಾಪ್ಯಂಗೀಕೃತಂ ಕ್ವಚಿತ್ ।

ರಾಯದುರ್ಗದ ಮಠದ ಕೃಷ್ಣಾಚಾರ್
ಬಳ್ಳಾಗಿ

ಸ್ವರೂಪಂ ಚೇದನುಗತಂ ವ್ಯಾವೃತ್ತಂ ತತ್ರ ಕಿಂ ಭವೇತ್ ॥೭೭॥

ಸ್ವರೂಪತ್ವಸಾಮಾನ್ಯವು ಯಾರಿಂದಲೂ ಅಂಗೀಕೃತವಾಗಿಲ್ಲ. ಸ್ವರೂಪವು ಅನುಗತವಾದರೆ (ಅಂದರೆ ಸಾಮಾನ್ಯವಾದರೆ) ಆ ವಸ್ತುವಿನಲ್ಲಿ ವ್ಯಾವೃತ್ತವಾದುದು (ಅಂದರೆ ಆ ವಸ್ತುವಿನಿಂದ ಬೇರೆಯಾದುದು) ಯಾವುದಿರುವುದು?

ಅದು ಹೇಗೆಂದರೆ –

ಸರ್ವಾನುಗತಧರ್ಮಾಣಾಮಂತೇ ಹಿ ಸ್ವತ್ವಮಿಷ್ಯತೇ ।

ಕಿಂ ವ್ಯಾವೃತ್ತಮಿತಿ ಪ್ರಶ್ನೇ ಸ್ವರೂಪಮಿತಿ ಕೇವಲಮ್ ॥೭೮॥

ಸ್ಯಾದುತ್ತರಂ ತತೋಽನ್ಯಚ್ಚೇತ್ತದೇವ ಸ್ವಯಮೇವ ನಃ ।

ಎಲ್ಲ ಅನುಗತ ಧರ್ಮಗಳಿಗೆ ಕೊನೆಯಲ್ಲಿ ಸ್ವರೂಪತ್ವವು ಒಪ್ಪುವುದಾದರೆ (ಮೀಮಾಂಸಕರ ಪ್ರಕಾರ), ಅಲ್ಲಿ ವ್ಯಾವೃತ್ತವಾದುದು ಯಾವುದಿದೆ ಎಂದು ಪ್ರಶ್ನಿಸುತ್ತೇವೆ. ಅದಕ್ಕೆ ಕೇವಲ ಸ್ವರೂಪತ್ವವೆಂದೇ ಉತ್ತರ ಹೇಳಬೇಕಾಗುವುದು. ಸ್ವರೂಪತ್ವದಿಂದ ಭೇದರೂಪವಾದುದು ವ್ಯಾವೃತ್ತವು ಎಂದು ಅಂಗೀಕರಿಸಲ್ಪಟ್ಟರೆ ಅದು ನಮಗೆ ಪದಾರ್ಥಸ್ವರೂಪವೇ ಆಗಿದೆ. ಯಾವುದಕ್ಕಾಗಿ ಸ್ವಸ್ವರೂಪತ್ವವು ಉದಾಹೃತವಾಗಿದೆಯೋ ಅಲ್ಲಿ ಭೇದವೇ ಉದಾಹರಣವಾಗುವುದು.

ಅದರಿಂದ ಪ್ರಕೃತಕ್ಕೆ ಏನಾಯಿತೆಂದರೆ –

ಏವಂ ವ್ಯಾವೃತ್ತರೂಪೇಽಪಿ ಯದಾ ಶಕ್ತಿಗ್ರಹೋ ಭವೇತ್ ॥೭೯॥

ತಸ್ಯ ಸಾಮಾನ್ಯತೋ ಜ್ಞಾನಂ ವಿನಾ ಸ ಚ ಭವೇತ್ಕುತಃ ।

ಹಿಂದೆ ಹೇಳಿದ ಪ್ರಕಾರ ವ್ಯಾವೃತ್ತದಲ್ಲಿಯೂ, ಸ್ವರೂಪದಲ್ಲಿಯೂ ಅಥವಾ ಭೇದದಲ್ಲಿಯೂ ಸ್ವರೂಪಭೇದಾದಿ ಶಬ್ದಗಳಿಗೆ ವಾಚಕತ್ವ ಶಕ್ತಿಜ್ಞಾನವು ಯಾವಾಗ ಅಂಗೀಕೃತವಾಗುವುದೋ, ಆಗ ಆ ಶಕ್ತಿಜ್ಞಾನವು ಸ್ವರೂಪಾದಿಗಳ ಸಾಮಾನ್ಯವಾದ ಜ್ಞಾನವಿಲ್ಲದೆ ಹೇಗೆ ಆಗುವುದು?

ಅತೋ ವಿಶೇಷಸಾಮಾನ್ಯರೂಪಂ ಸರ್ವಮಪೀಷ್ಯತೇ ॥೮೦॥

ಆದ್ದರಿಂದ ಎಲ್ಲ ವಸ್ತುವೂ ವಿಶೇಷರೂಪವೂ (ವ್ಯಾವೃತ್ತರೂಪವೂ) ಸಾಮಾನ್ಯ ರೂಪವೂ ಎಂಬುದಾಗಿ ನಮ್ಮಿಂದ ಅಂಗೀಕರಿಸಲ್ಪಡುತ್ತದೆ.

ಹಾಗಾದರೆ ಇದು ಹಿಂದೆ ಹೇಳಿದ್ದಕ್ಕೆ ವಿರುದ್ಧವು. ಮೊದಲು ಸ್ವರೂಪಾದಿಗಳು ಸಾಮಾನ್ಯವಿರಹಿತವು ಎಂದು ಸಾಧಿಸಿ, ಈಗ ಎಲ್ಲ ವಸ್ತುವೂ ಸಾಮಾನ್ಯ ಹಾಗೂ ವಿಶೇಷರೂಪವು ಎಂದು ಅಂಗೀಕರಿಸುವುದು ಅಯುಕ್ತವು ಎಂದು ಆಶಂಕಿಸಿದರೆ –

ವ್ಯಾವೃತ್ತಂ ಯಚ್ಚ ಸಾಮಾನ್ಯಂ ತದೇವ ಸ್ಯಾದ್ವಿಶೇಷತಃ ।

ನ ಚೈಕಧರ್ಮತಾ ತೇನ ಪದಾರ್ಥಾನಾಂ ಪರಸ್ಪರಮ್ ॥೮೧॥

ಯಾವುದು ವ್ಯಾವೃತ್ತಸ್ವರೂಪವೋ ಅದುವೇ ವಿಶೇಷಬಲದಿಂದ ಸಾಮಾನ್ಯವೂ ಕೂಡ ಆಗುವುದು. ಆದಪ್ರಯುಕ್ತ ಪದಾರ್ಥಗಳಿಗೆ ಪರಸ್ಪರವಾಗಿ ಏಕಧರ್ಮತ್ವವು ಇಲ್ಲವೇ ಇಲ್ಲ. ಒಟ್ಟು ಅಭಿಪ್ರಾಯವೇನಂದರೆ– ಈ ಹಿಂದೆ ಸ್ವರೂಪಭೇದಾದಿಗಳಲ್ಲಿ ಸಾಮಾನ್ಯವಿಲ್ಲವೆಂದು ಹೇಳಿದ್ದು ಪದಾರ್ಥಸ್ವರೂಪಗಳಲ್ಲಿ ಪರಸ್ಪರ ಅನುಗತವಾದ ಏಕಧರ್ಮತ್ವವಿಲ್ಲ ಎನ್ನುವ ಅಭಿಪ್ರಾಯದಿಂದ. ಈಗ ಏಕಧರ್ಮತ್ವವಿಲ್ಲದಿದ್ದರೂ ವ್ಯಾವೃತ್ತವಾದ ಪದಾರ್ಥಸ್ವರೂಪದಿಂದ ಅಭಿನ್ನವಾದ ಆಯಾ ಪದಾರ್ಥಗಳಲ್ಲಿಯೇ ಇರತಕ್ಕ ಸಾಮಾನ್ಯಕಾರವನ್ನು ಅಂಗೀಕರಿಸಿ, ಸರ್ವವೂ ವಿಶೇಷಸಾಮಾನ್ಯರೂಪವೆಂದು ಹೇಳಿರುವುದರಿಂದ ಪೂರ್ವೋತ್ತರ ವಿರೋಧವಿಲ್ಲ.

ಹೀಗೆ ಗೋತ್ವಾದಿ ಸಾಮಾನ್ಯಕ್ಕೆ ಅನನುಗತತ್ವವನ್ನು ಅಂಗೀಕರಿಸಿ, ಸ್ವರೂಪತ್ವ ಮೊದಲಾದ ಸಾಮಾನ್ಯವಿಲ್ಲದಿರುವುದರಿಂದ, ಅದರಲ್ಲಿ ಶಬ್ದಶಕ್ತಿಜ್ಞಾನಕ್ಕಾಗಿ ಸ್ವರೂಪ ಜ್ಞಾನವು ಅಪೇಕ್ಷಿತ ಎಂದು ಉಕ್ತವಾಗಿದೆ. ಈಗ ಗೋತ್ವಾದಿ ಸಾಮಾನ್ಯವೂ ಕೂಡ ಅನುಗತವಲ್ಲ ಎಂದು ಹೇಳುತ್ತಾರೆ –

ಧರ್ಮಾಣಾಂ ಭೇದದೃಷ್ಟ್ಯೈವ ತತ್ಸಾದೃಶ್ಯಸ್ಯ ದರ್ಶನಾತ್ ।

ಅತಃ ಸರ್ವೇ ಪದಾರ್ಥಾಶ್ಚ ಸಾಮಾನ್ಯಾತ್ಸಾಕ್ಷಿಗೋಚರಾಃ ॥೮೨॥

ದ್ವಿತ್ವ ಬಹುತ್ವ ಮುಂತಾದ ಸಮುದಾಯವ್ಯತಿರಿಕ್ತವಾದ ಶೌಕ್ಲ್ಯಾದಿ ಧರ್ಮಗಳ ಭೇದಜ್ಞಾನದಿಂದ ಅವುಗಳಿಗೆ ಸಾದೃಶ್ಯವು ತೋರುವುದು. ಆದ್ದರಿಂದ(ಅನುಗತವಾದ ಸಾಮಾನ್ಯವು ಇಲ್ಲದಿರುವುದರಿಂದ) ಎಲ್ಲ ವರ್ತಮಾನ, ಅತೀತ ಹಾಗೂ ಅನಾಗತ ಪದಾರ್ಥಗಳೂ ಕೂಡ ಸಾಮಾನ್ಯಾಕಾರವಾಗಿ ಸಾಕ್ಷಿವಿಷಯಕಗಳು.

ಶಕ್ತಿಜ್ಞಾನಕ್ಕೆ ಅತೀತಾದಿ ವಿಷಯಕ ಜ್ಞಾನವಾದರೂ ಸಾಕ್ಷಿಯಿಂದ ಆಗುವುದು ಎಂದು ಹೇಗೆ ಸಿದ್ದವಾಗುತ್ತದೆ ಎಂದರೆ –

ಸರ್ವಮಿತ್ಯೇವ ವಿಜ್ಞಾನಂ ಸರ್ವೇಷಾಂ ಕಥಮನ್ಯಥಾ ।

ಸಾಕ್ಷಿಗೆ ಅತೀತಾದಿ ವಿಷಯಕತ್ವವಿಲ್ಲವಾದರೆ, ಅತೀತಾದಿ ವಿಷಯಕವಾದ ಎಲ್ಲ ಪದಗಳಿಗೂ ಪದಾರ್ಥಗಳಿಗೂ ವಾಚ್ಯವಾಚಕ ಸಂಬಂಧ ಜ್ಞಾನವು ಎಲ್ಲರಿಗೂ ಹೇಗೆ ಆಗುವುದು?

ಹಾಗಾದರೆ ಅನುಗತವಾದ ಸಾಮಾನ್ಯವೇ ಇಲ್ಲವಾದರೆ ಶಬ್ದಶಕ್ತಿಜ್ಞಾನವೇ ಕೂಡುವುದಿಲ್ಲ. ಬೇರೆ ಮಾರ್ಗವೇ ಇಲ್ಲದಿರುವುದರಿಂದ ಸಾಕ್ಷಿಗೆ ಅತೀತಾದಿ ವಿಷಯಕತ್ವವು ಹೇಗೆ ಸಿದ್ಧಿಸುವುದು ಎಂದರೆ –

ಕಿಂಚಿತ್ಸಾದೃಶ್ಯವಿಜ್ಞಾನಾದಖಿಲಸ್ಯಾಪಿ ವಸ್ತುನಃ ॥೮೩॥

ಶಬ್ದಶಕ್ತಿಗ್ರಹಶ್ಚ ಸ್ಯಾತ್ತತ್ತತ್ಸಾದೃಶ್ಯಮಾನತಃ ।

ಕಿಂಚಿತ್ ಸಾದೃಶ್ಯಜ್ಞಾನದಿಂದ ಎಲ್ಲ ವಸ್ತುಗಳಿಗೂ ಶಬ್ದಶಕ್ತಿಜ್ಞಾನವೂ ಕೂಡ ಆಗುವುದು. ಹಾಗಾದರೆ ಸಾದೃಶ್ಯವಿರುವುದರಿಂದ ಗೋಶಬ್ದಕ್ಕೆ ಗವಯದಲ್ಲಿಯೂ ಶಕ್ತಿಜ್ಞಾನವು ಬರಬೇಕಾದೀತು ಎಂದರೆ – ಕಿಂಚಿತ್ ಸಾದೃಶ್ಯ ಜ್ಞಾನವು ಶಬ್ದಶಕ್ತಿ ಜ್ಞಾನಕ್ಕೆ ಕಾರಣವಲ್ಲ. ಮತ್ತೆ ಅತಿವ್ಯಾಪ್ತಿರಹಿತವಾದುದೇ ಕಾರಣವು. ಗೋಶಬ್ದದಲ್ಲಿ ಸಾಸ್ನಾದಿಮತ್ವವು, ಬೇರೆ ಕಡೆ ಬೇರೆ ಎಂದು ತಿಳಿಯಬೇಕು.

ಹೀಗೆ ಸಾಕ್ಷಿಪ್ರತ್ಯಕ್ಷಕ್ಕೆ ಕೇವಲ ವರ್ತಮಾನಗ್ರಾಹಿತ್ವ ಎಂಬುದನ್ನು ನಿರಾಕರಿಸಿ ಈಗ ಮಾನಸ ಪ್ರತ್ಯಕ್ಷಕ್ಕೂ ಕೇವಲ ವರ್ತಮಾನಗ್ರಾಹಿತ್ವವನ್ನು ನಿರಾಕರಿಸುತ್ತಾರೆ –

ಪ್ರತ್ಯಕ್ಷಂ ಮಾನಸಂ ಚೈವ ಯದಾತೀತಾರ್ಥಗೋಚರಮ್ ॥೮೪॥

ತದಾ ಸ್ಮೃತಿಪ್ರಮಾಣತ್ವಮತೀತತ್ವವಿಶೇಷಿತಮ್ ।

ಸ್ಮೃತಿಗೆ ಕಾರಣವಾದ ಮಾನಸ ಪ್ರತ್ಯಕ್ಷವೂ ಕೂಡ ಅತೀತಾರ್ಥ ಗೋಚರವೇ. ಇನ್ನು ಪೂರ್ವಾನುಭವಕ್ಕಿಂತ ಅಧಿಕವಾದುದನ್ನು ವಿಷಯೀಕರಿಸದೆ ಇರುವ ಸ್ಮೃತಿಗೆ ಪ್ರಾಮಾಣ್ಯವೇ ದುರ್ಲಭವು. ಹಾಗಿದ್ದಾಗ ಮಾನಸಪ್ರತ್ಯಕ್ಷತ್ವವು ಹೇಗೆ ಸಿದ್ಧಿಸುವುದು ಎಂದರೆ – ಸ್ಮೃತಿಯು ಅತೀತತ್ವವಿಶೇಷಿತವಾದ ಅರ್ಥವನ್ನು ವಿಷಯೀಕರಿಸುವ ಕಾರಣದಿಂದ ಸ್ಮೃತಿಪ್ರಾಮಾಣ್ಯವು ಸಿದ್ಧವಾಗುವುದು.

ಆಧಿಕ್ಯಮನುಭೂತಾತ್ತು ಯದಾತೀತತ್ವಮಿಷ್ಯತೇ ॥೮೫॥

ಮಾನತಾ ಚ ಕಥಂ ನ ಸ್ಯಾತ್ಸ್ಮೃತೇರ್ಬಾಧಶ್ಚ ನಾತ್ರ ಹಿ ।

ಅತೀತತ್ವವನ್ನು ವಿಷಯೀಕರಿಸುವ ಸ್ಮೃತಿಗೆ ವರ್ತಮಾನತ್ವ ಅನುಭೂತಿಯ ದೆಶೆಯಿಂದ ಆಧಿಕ್ಯವು ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿದೆ. ಅಂದಮೇಲೆ ಸ್ಮೃತಿಗೆ ಪ್ರಾಮಾಣ್ಯವು ಹೇಗೆ ಬರಲಾರದು? ಹೀಗೆ ಸ್ಮೃತಿಪ್ರಾಮಾಣ್ಯವು ಸಿದ್ಧವಾದುದರಿಂದ ಮಾನಸ ಪ್ರತ್ಯಕ್ಷತ್ವವನ್ನೂ ಅಂಗೀಕರಿಸತಕ್ಕದ್ದು. ಯಾಥಾರ್ಥತ್ವವೇ ಪ್ರಮಾಣದ ಲಕ್ಷಣ. ಅದಾದರೂ ಸ್ಮೃತಿಗೆ ಅನುಭವದಿಂದ ಸಿದ್ಧವಾಗಿದೆ. ಆದ್ದರಿಂದ ಸ್ಮೃತಿ ಪ್ರಾಮಾಣ್ಯಕ್ಕೆ ಯಾವ ಬಾಧವೂ ಇಲ್ಲ.

ಮಾನತ್ವಂ ಪ್ರತ್ಯಭಿಜ್ಞಾಯಾ ಅಪಿ ಸರ್ವಾನುಭೂತಿಗಮ್ ॥೮೬॥

ಅತೀತವರ್ತಮಾನತ್ವಧರ್ಮಿಣೇ ಸಾ ಚ ದೃಶ್ಯತೇ ।

ಪ್ರತ್ಯಭಿಜ್ಞೆಗೂ ಕೂಡ ಪ್ರಾಮಾಣ್ಯವು ಎಲ್ಲರ ಅನುಭೂತಿಗೆ ಸಿದ್ಧವಾದುದು. ಹಿಂದೆ ನೋಡಿದ್ದ ವ್ಯಕ್ತಿಯನ್ನು ಇಂದು ಮತ್ತೆ ನೋಡಿದಾಗ ಅವನೇ ಇವನು ಎಂಬ ಜ್ಞಾನ ಉಂಟಾಗುವುದೆ ಪ್ರತ್ಯಭಿಜ್ಞೆ. ಸ್ಮೃತಿಗೆ ಪ್ರಾಮಾಣ್ಯವನ್ನು ಅಂಗೀಕರಿಸದಿದ್ದರೆ ಇದು ಕೂಡುವುದಿಲ್ಲ. ಪ್ರತ್ಯಭಿಜ್ಞೆಯು ಸಾಕ್ಷಿಯಿಂದಲೇ ತಿಳಿಯಲ್ಪಡುತ್ತದೆ.

ಸೋಽಯಂ ಎನ್ನುವಲ್ಲಿ ಸಃ ಎನ್ನುವ ಅಂಶವು ಸ್ಮೃತಿಯಾಗಿರುವುದರಿಂದ ಚಾಕ್ಷುಷಾದಿ ಪ್ರತ್ಯಕ್ಷಕ್ಕೆ ಅತೀತವಿಷಯತ್ವವು ಇಲ್ಲ ಎಂದು ಆಶಂಕಿಸಿದರೆ –

ನ ಚ ಸಾ ಸ್ಮೃತಿಮಾತ್ರಾರ್ಥಾ ತದಿದಂತ್ವಗ್ರಹೈಕತಃ ।।೮೭।।

ಆ ಪ್ರತ್ಯಭಿಜ್ಞೆಯು ಸ್ಮೃತ್ಯನುಭವ ಏಕದೇಶರೂಪವಾದುದು ಹಾಗೂ ಏಕಜ್ಞಾನ ರೂಪವಾದುದು ಅಲ್ಲ. ಏಕೆಂದರೆ ಆ ಪ್ರತ್ಯಭಿಜ್ಞೆಯು ತದತ್ವ ಇದತ್ವ ಇವೆರಡರ ಏಕತ್ವ ಅನುಭವರೂಪವಾದುದು.

'ತಚ್ಚೇನ್ನೋತ್ತರಗೋಚರಂ' ಇತ್ಯಾದಿಗಳಿಂದ ಹೇಳಲ್ಪಟ್ಟ ಅರ್ಥವನ್ನು 'ಅತೋ' ಎಂಬಿತ್ಯಾದಿ ವಚನದಿಂದ ಉಪಸಂಹಾರ ಮಾಡುತ್ತಾರೆ –

ಅತೋ ನ ವರ್ತಮಾನೈಕನಿಯಮಃ ಸ್ಯಾದ್ಗ್ರಹೇಽಕ್ಷಜೇ ।

ಆದ್ದರಿಂದ ಪ್ರತ್ಯಕ್ಷ ಜ್ಞಾನದಲ್ಲಿ ವರ್ತಮಾನವೊಂದನ್ನೇ ವಿಷಯೀಕರಿಸುತ್ತದೆ ಎನ್ನುವ ನಿಯಮವು ಆಗಲಾರದು.

ಪ್ರಮಾಣ ಪ್ರಮೇಯ ಪ್ರಮಾತೃ ಇವುಗಳಿಂದ ಭಿನ್ನವಾದ ವಿಶ್ವವು ಅಬಾಧ್ಯ ವೆಂದು ಹೇಳಿದ್ದನ್ನು ಉಪಸಂಹಾರ ಮಾಡುತ್ತ, ಅರ್ಥದಲ್ಲಿರತಕ್ಕ ಜ್ಞಾತತಾ ರೂಪವಾದ ನಾಲ್ಕನೆಯ ಪ್ರಮಿತಿಯು ಇರುವುದರಿಂದ ಜಗತ್ತು ಮೂರು ಪ್ರಕಾರ ಎನ್ನುವುದು ಹೇಗೆ ಕೂಡುತ್ತದೆ ಎಂಬ ಆಶಂಕೆಯನ್ನು 'ನ ಚ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ನ ಚ ಪ್ರಮಾಣತೋಽನ್ಯಾ ಸ್ಯಾತ್ಪ್ರಮಿತಿರ್ನಾಮ ಕುತ್ರಚಿತ್ ।।೮೮।।

ಮಾನಾಭಾವಾದ್ಗೌರವಾಚ್ಚ ಕಲ್ಪನಾಯಾಃ ಕಿಮೇತಯಾ ।

ಕರಣರೂಪವಾದ ಪ್ರಮಾಣದಿಂದ ಬೇರೆಯಾದ ಪ್ರಮಿತಿ ಅಥವಾ ಜ್ಞಾತತಾ ಎಂಬ ವಸ್ತುವು ಎಲ್ಲಿಯೂ ಇಲ್ಲವೇ ಇಲ್ಲ. ಏಕೆಂದರೆ ಹಾಗೆ ಹೇಳಲು ಪ್ರಮಾಣವೇ ಇಲ್ಲ. ಹಾಗೆ ಅಂಗೀಕರಿಸಿದರೆ ಕಲ್ಪನಾಗೌರವವೂ ಬರುವುದು. ಆದ್ದರಿಂದ ಈ ಜ್ಞಾತತೆಯಿಂದ ಏನು ಪ್ರಯೋಜನವಿದೆ?

ಹಾಗಾದರೆ ಘಟವು ಜ್ಞಾತವಾಯಿತು, ಘಟವು ಪ್ರಕಟವಾಯಿತು ಎನ್ನುವ ಅರ್ಥದಲ್ಲಿ ವಿಶೇಷಣವಾಗಿ ಜ್ಞಾತತಾ ಪ್ರತ್ಯಕ್ಷವು ಕಂಡಿದೆ ಎಂದರೆ –

ಮಯ್ಯೇತಜ್ಜ್ಞಾತಮಿತಿ ತು ಸಾಕ್ಷಿಗಂ ಜ್ಞಾನಗೋಚರಮ್ ।।೮೯।।

ಜ್ಞಾನಮೇವ ತತೋಽನ್ಯಾ ನ ಪ್ರಮಿತಿರ್ನಾಮ ದೃಶ್ಯತೇ ।

ಇದು ನನ್ನಿಂದ ತಿಳಿಯಲ್ಪಟ್ಟಿತು ಎಂಬ ಜ್ಞಾನಕ್ಕೆ ವಿಷಯಕವಾದುದು ಸಾಕ್ಷಿಯಲ್ಲಿರತಕ್ಕ ಜ್ಞಾನವೇ ಹೊರತು ಜ್ಞಾತತೆಯಲ್ಲ. ಸಾಕ್ಷಿಯು ಸ್ವಪ್ರಕಾಶವು.

ಅದರಿಂದ ಬೇರೆಯಾದ ಪ್ರಮಿತಿಯೆನ್ನುವುದು ಗೋಚರಿಸುವುದೇ ಇಲ್ಲ.

ಮೇಲಿನ ಮಾತಿನ ಅಭಿಪ್ರಾಯವೇನೆಂದರೆ, ಪ್ರಥಮ ಜ್ಞಾನದಲ್ಲಿ ಶುದ್ಧವಾದ ಅರ್ಥವೇ ತಿಳಿಯಲ್ಪಡುತ್ತದೆ ಹೊರತು ಜ್ಞಾತತಾ ವಿಶಿಷ್ಟವಾದುದಲ್ಲ. ಆಗ ಜ್ಞಾತತೆಯೇ ಹುಟ್ಟಿರುವುದಿಲ್ಲ. ಆ ಜ್ಞಾತತೆಯನ್ನು ಹುಟ್ಟಿಸಿ ಪುನಃ ಜ್ಞಾತತಾ ವಿಶಿಷ್ಟವಾದ ಅರ್ಥವನ್ನು ಸಾಕ್ಷಿಯು ವಿಷಯೀಕರಿಸುವುದು ಎನ್ನುವ ಪಕ್ಷದಲ್ಲಿ ವಿರಮ್ಯ ವ್ಯಾಪಾರವು ಬರಬೇಕಾಗುವುದು. ಅಲ್ಲದೆ ಆಮೇಲಿನ ಜ್ಞಾನಗಳಲ್ಲಿ ಪ್ರಥಮ ಜ್ಞಾನದಲ್ಲಿ ವಿಷಯೀಕೃತವಾದ ಅರ್ಥಕ್ಕಿಂತ ಹೆಚ್ಚಿನದೇನೂ ಇರುವುದಿಲ್ಲ.

ಈಗ 'ಈಶ ತಜ್ಜ್ಞಾನ' ಇತ್ಯಾದಿಗಳಿಂದ ಹೇಳಲ್ಪಟ್ಟ ಅರ್ಥವನ್ನು 'ಮಾನ' ಇತ್ಯಾದಿ ವಚನದಿಂದ ಉಪಸಂಹಾರ ಮಾಡುತ್ತಾರೆ –

ಮಾನಮಾತೃಪ್ರಮೇಯಾಣಾಂ ತದುಚ್ಛಿತ್ತಿರ್ನ ಹಿ ಕ್ವಚಿತ್ ॥೯೦॥

ಸ್ವಾಪ್ನಾನಾಮಪಿ ಚೈತೇಷಾಂ ನ ಬಾಧೋ ದೃಶ್ಯತೇ ಕ್ವಚಿತ್ ।

ಆದ್ದರಿಂದ ಪ್ರಮಾಣ ಪ್ರಮಾತೃ ಪ್ರಮೇಯ ಇವುಗಳಿಂದ ಕೂಡಿದ ಮೂರು ವಿಧವಾದ ಜಗತ್ತಿಗೂ ಯಾವ ಕಾಲದಲ್ಲಿಯೂ ಬಾಧವು ಇರುವುದೇ ಇಲ್ಲ. ಬಾಧವಿಲ್ಲವೆನ್ನುವುದು ಕೇವಲ ಬಾಹ್ಯ ಪ್ರಪಂಚಕ್ಕೆ ಮಾತ್ರ ಸೀಮಿತವಲ್ಲ. ಸ್ವಪ್ನದಲ್ಲಿ ತೋರುವ ಮೂರು ವಿಧವಾದ ಪ್ರಪಂಚಕ್ಕೂ ಯಾವ ಕಾಲದಲ್ಲಿಯೂ ಬಾಧವು ಕಂಡುಬರುವುದಿಲ್ಲ.

ಜಾಗ್ರತ್ತ್ವಮಾತ್ರಮತ್ರೈಕಮನ್ಯಥಾ ದೃಶ್ಯತೇ ಸ್ಫುಟಮ್ ॥೯೧॥

ಅತೋ ಮಿಥ್ಯಾ ನ ಚ ಸ್ವಪ್ನೋ ಜಾಗ್ರದ್ವಜ್ಜಾಗ್ರದೇವ ಚ ।

ಆತ್ಮವತ್ಕ್ವಚಿದಾತ್ಮಾ ಚ ಸ್ಯಾದೇವ ಭ್ರಮಗೋಚರಃ ॥೯೨॥

ಏತಾವತಾ ನ ಮಿಥ್ಯಾಸೌ ಸ್ವಪ್ನೇ ಜಾಗರಿತೇ ತಥಾ ।

ಸ್ವಪ್ನದಲ್ಲಿ ತೋರುವ ಪದಾರ್ಥಗಳು ಜಾಗ್ರತ್ಕಾಲದಲ್ಲಿ ಕಾಣುವ ಪದಾರ್ಥಗಳೇ ಅಲ್ಲ, ಅವುಗಳಿಗಿಂತ ಭಿನ್ನವಾದುದು ಎಂದು ಸ್ಪಷ್ಟವಾಗಿಯೇ ಕಾಣಲ್ಪಡುತ್ತದೆ. ಆದಕಾರಣ ಸ್ವಪ್ನವು ಮಿಥ್ಯೆಯಲ್ಲ ಜಾಗ್ರತ್ಕಾಲದಲ್ಲಿ ಕಾಣಲ್ಪಡುವ ಶುಕ್ತ್ಯಾದಿಗಳು ಹೇಗೋ ಹಾಗೆಯೇ ಸ್ವಾಪ್ನದೃಷ್ಟ ಪದಾರ್ಥಗಳಿಗೂ ಮಿಥ್ಯಾತ್ವವಿಲ್ಲ. ಭ್ರಮೆಗೆ ಅಧಿಷ್ಠಾನವಾದ ಆತ್ಮನು ಹೇಗೆ ಮಿಥ್ಯೆಯಾಗಲಾರನೋ ಹಾಗೆಯೇ ಸ್ವಪ್ನವೂ ಕೂಡ ಮಿಥ್ಯೆಯಾಗಲಾರದು. ಆತ್ಮನೂ ಕೂಡ ನಾನು ಕ್ಷಣಿಕನು ಇತ್ಯಾದಿ ಭ್ರಮೆಗೆ ಅದಿಷ್ಠಾನನು ಆಗಿಯೇ ಆಗುವನು. ಆತ್ಮನು ಭ್ರಮಾಧಿಷ್ಠಾನನಾಗಿದ್ದರೂ ಹೇಗೆ ಮಿಥ್ಯೆಯಾಗುವುದಿಲ್ಲವೋ ಹಾಗೆಯೇ ಸ್ವಪ್ನದಲ್ಲಿಯೂ, ಜಾಗ್ರದವಸ್ಥೆಯಲ್ಲಿಯೂ ಗೋಚರವಾದ ವಸ್ತುವು ಭ್ರಮಾಧಿಷ್ಠಾನಮಾತ್ರದಿಂದಲೇ ಮಿಥ್ಯೆಯಾಗಲಾರದು.

ಹಾಗಾದರೆ ಆತ್ಮನಲ್ಲಿ ಆರೋಪಿತವಾದ ಕ್ಷಣಿಕತ್ವಾದಿಗಳು ಮಿಥ್ಯಾಭೂತವೇ ಆದುದರಿಂದ ಆತ್ಮನು ಮಿಥ್ಯಾಭೂತನು ಎಂದು ಹೇಳುತ್ತೇವೆ ಎಂದರೆ ಅದನ್ನು ದೂಷಿಸುತ್ತಾರೆ–

ಯದ್ಯಾತ್ಮನ್ಯನ್ಯಥಾ ದೃಶ್ಯಂ ಭ್ರಾಂತಮತ್ರಾಪಿ ತದ್ಭವೇತ್ ॥೯೩॥

ಅಬಾಧಿತಾನುವೃತ್ತೇಸ್ತು ಸ್ವಪ್ನಾದೇರ್ಭ್ರಾಂತತಾ ಕುತಃ ।

ಆತ್ಮನಲ್ಲಿ ಬೇರೆ ರೀತಿಯಿಂದ ಕಾಣಲ್ಪಟ್ಟದ್ದು ಭ್ರಾಂತಿ ಅಥವಾ ಆರೋಪಿತವು ಎನ್ನುವುದಾದರೆ ಆ ಆರೋಪಿತತ್ವವು ಸ್ವಪ್ನದಲ್ಲಿ ತೋರುವ ಜಾಗ್ರತ್ತ್ವಾದಿಗಳಲ್ಲಿಯೂ ಆಗುವುದು. ಅಬಾಧಿತವಾದ ಜ್ಞಾನವಿದ್ದ ಪ್ರಯುಕ್ತ ಸ್ವಪ್ನಾದಿಗಳಿಗೆ ಭ್ರಾಂತತ್ವವು ಅಥವಾ ಬಾಧ್ಯತ್ವವು ಯಾವುದರಿಂದ ಆಗುವುದು? ಅಂದರೆ ಬಾಧೋತ್ತರ ಕಾಲದಲ್ಲಿಯೂ ಆ ಜ್ಞಾನವು ಇರುವುದಾದ್ದರಿಂದ (ಸ್ವಪ್ನದಲ್ಲಿ ಕಂಡ ಪದಾರ್ಥಗಳ ಜ್ಞಾನವು ಸ್ವಪ್ನಾವಸ್ಥೆ ಕಳೆದ ಮೇಲೂ ಇರುವುದು) ಸ್ವಾಪ್ನ ಹಾಗೂ ಜಾಗ್ರತ್ ಪದಾರ್ಥಗಳು ಆರೋಪ್ಯಗಳೂ ಅಲ್ಲ ಬಾಧ್ಯಗಳೂ ಅಲ್ಲ ಎಂದು ತಾತ್ಪರ್ಯ.

ಭ್ರಾಂತಿವಿಷಯತ್ವ ಸಾಧಕ ಹೇತುವಿಗೆ ಅನುಕೂಲ ಪ್ರಮಾಣವು ಇರುವುದಿಲ್ಲ. ಆದರೆ ಪ್ರತಿಕೂಲಪ್ರಮಾಣವಿರುವುದು. ಆದಪ್ರಯುಕ್ತ ಈ ಹೇತುವಿನಿಂದ ಜಾಗ್ರತ್ ಹಾಗೂ ಸ್ವಪ್ನಗಳಿಗೆ ಮಿಥ್ಯಾತ್ವ ಸಾಧನವು ಕೂಡುವುದಿಲ್ಲ ಎನ್ನುತ್ತಾರೆ –

ನ ಚ ಕಾಚಿತ್ಪ್ರಮಾ ವಿಶ್ವಭ್ರಾಂತತ್ವೇ ಸರ್ವಮೇವ ಚ ॥೯೪॥

ಅಭ್ರಾಂತತ್ವೇ ಪ್ರಮಾಣಂ ತು ಕಥಂ ತದ್ಭ್ರಾಂತತಾ ಭವೇತ್ ।

ಸ್ವಪ್ನ ಹಾಗೂ ಜಾಗ್ರದ್ ಪ್ರಪಂಚಗಳಿಗೆ ಮಿಥ್ಯಾತ್ವ ವಿಷಯದಲ್ಲಿ ಯಾವ ಪ್ರಮಾಣವೂ ಇಲ್ಲ. ಪ್ರತ್ಯಕ್ಷ ಮುಂತಾದ ಎಲ್ಲವೂ ಜಗತ್ತು ಭ್ರಾಂತಿಕಲ್ಪಿತವಲ್ಲ ಎನ್ನುವ ವಿಷಯದಲ್ಲಿ, ಅಂದರೆ ಜಗತ್ಸತ್ಯತ್ವ ವಿಷಯದಲ್ಲಿ, ಪ್ರಮಾಣವೇ ಆಗಿವೆ. ಹಾಗಿರುವಾಗ ಜಗತ್ತಿಗೆ ಭ್ರಾಂತಿವಿಷಯತ್ವವು ಹೇಗೆ ತಾನೆ ಸಂಭವಿಸುವುದು?

ದೃಶ್ಯತ್ವಾದಿ ಹೇತುಗಳಿಂದ ಸ್ವಪ್ನ ಹಾಗೂ ಜಾಗ್ರದ್ರೂಪ ಜಗತ್ತಿಗೆ ಮಿಥ್ಯಾತ್ವವನ್ನು ಸಾಧಿಸಿರುವುದರಿಂದ ಪ್ರಮಾಣವಿಲ್ಲವೆಂದು ಹೇಗೆ ಹೇಳುತ್ತೀರಿ ಎಂದು ಆಶಂಕಿಸಿದರೆ ಭ್ರಾಂತಿವಿಷಯತ್ವವನ್ನು ಪ್ರಕಾರಾಂತರದಿಂದ ದೂಷಿಸುತ್ತಾರೆ –

ಕಿಂಚ ಭ್ರಾಂತತ್ವವಾದೀ ಸ ಭ್ರಾಂತತ್ವಂ ಸ್ವಮತಸ್ಯ ಚ ॥೯೫॥

ಅಂಗೀಕರೋತಿ ನಿಯತಂ ತತ್ರ ಸಂಪ್ರತಿಪನ್ನತಾ ।

ವಾದಿನೋಸ್ತೇನ ಚಾಭ್ರಾಂತಂ ವಿಶ್ವಮೇವ ಭವಿಷ್ಯತಿ ॥೯೬॥

ಭ್ರಾಂತತ್ವಭ್ರಾಂತತಾ ಚೇತ್ಸ್ಯಾತ್ ಕಥಂ ನಾಭ್ರಾಂತಿಸತ್ಯತಾ ।

ದೃಶ್ಯತ್ವಾದಿ ಹೇತುಗಳಿಂದ ಸ್ವಪ್ನ ಹಾಗೂ ಜಾಗ್ರದ್ರೂಪ ಎರಡು ವಿಧ ಜಗತ್ತಿಗೂ ಭ್ರಾಂತತ್ವವನ್ನು ಸಾಧಿಸುವ ಅದ್ವೈತಿಯು ತಾನು ಪ್ರತಿಜ್ಞಾ ಮಾಡಿದ ವಿಶ್ವಮಿಥ್ಯಾತ್ವ ರೂಪ ಅರ್ಥಕ್ಕೂ ಮಿಥ್ಯಾತ್ವವನ್ನು ನಿಯಮವಾಗಿ ಅಂಗೀಕರಿಸುತ್ತಾನೆ. ಪರರು ಪ್ರತಿಜ್ಞಾ ಮಾಡಿದ ಅರ್ಥವು ಭ್ರಾಂತಿವಿಷಯಕವು ಎಂಬ ವಿಷಯದಲ್ಲಿ ವಾದಿ ಪ್ರತಿವಾದಿಗಳಿಬ್ಬರಿಗೂ ಸಮ್ಮತವಿದೆ. ಆದಕಾರಣ ವಿಶ್ವವು ಭ್ರಾಂತಿವಿಷಯಕವಲ್ಲ ಎಂದೇ ಆಗುವುದು. ಭ್ರಾಂತಿವಿಷಯತ್ವಕ್ಕೂ ಭ್ರಾಂತಿವಿಷಯತ್ವವಿದ್ದರೆ ಸತ್ಯತ್ವವೇ ಬರುವುದು. ಅಬಾಧ್ಯವಾದ ವಿಶ್ವವು ಸತ್ಯವೆಂದೇ ಸಿದ್ಧವಾಗುವುದು.

ಅಪವ್ಯಾಖ್ಯಾನ ದೂಷಣಕ್ಕೆ ಪ್ರಯೋಜನವನ್ನು ಹೇಳುತ್ತಾರೆ –

ಅಶೇಷದೋಷದುಷ್ಟಂ ತನ್ಮತಂ ಹೇಯಂ ಬುಭೂಷುಭಿಃ ॥೯೭॥

ಸ್ವಾಪ್ನ ಜಾಗ್ರತ ಪ್ರಪಂಚಕ್ಕೆ ಮಿಥ್ಯಾತ್ವವನ್ನು ಪ್ರತಿಪಾದಿಸುವ ಅದ್ವೈತ ಮತವು ಪ್ರಮಾಣವಿರೋಧಾದಿ ಎಲ್ಲ ದೋಷಗಳಿಂದ ಭೂಯಿಷ್ಠವಾದುದರಿಂದ ಉದ್ಧಾರ ಹೊಂದಲು ಬಯಸುವ ಎಲ್ಲ ಜ್ಞಾನಿಗಳಿಂದ ಬಿಡತಕ್ಕದ್ದೇ ಆಗಿದೆ.

ವಿಶ್ವಮಿಥ್ಯಾತ್ವವನ್ನು ಹೇಳುವ ಈ ಮತವು ಜ್ಞಾನಿಗಳಿಂದ ಸ್ವೀಕಾರಕ್ಕೆ ಅನರ್ಹ ಎಂಬುದನ್ನೇ ಮತ್ತೊಂದು ರೀತಿಯಿಂದ ಸಮರ್ಥಿಸುತ್ತಾರೆ –

ಯೇನ ಸ್ವಮತಹೇಯತ್ವಂ ಸ್ವಯಮಂಗೀಕೃತಂ ಸದಾ ।

ಭ್ರಾಂತಿತ್ವಾದ್ದುರ್ಘಟತ್ವಸ್ಯ ಭೂಷಣತ್ವಾಚ್ಚ ಕೇವಲಮ್ ॥೯೮॥

ಉನ್ಮತ್ತೋಽಪಿ ಕಥಂ ತಸ್ಯ ಮತಂ ಸ್ವೀಕರ್ತುಮಿಚ್ಛತಿ ।

ಸ್ವಯಂ ಮಾಯಾವಾದಿಯಿಂದಲೇ ತನ್ನ ಮತವು ಹೇಯವೆಂದೂ, ಸರ್ವವೂ ಭ್ರಾಂತಿವಿಷಯವೆಂದೂ, ದುರ್ಘಟತ್ವವು ತನಗೆ ಭೂಷಣವೆಂದೂ ಯಾವಾಗಲೂ ಅಂಗೀಕರಿಸಲ್ಪಟ್ಟಿದೆ. ಆದಕಾರಣ ಸಾಕ್ಷಾತ್ ಉನ್ಮತ್ತನೂ ಕೂಡ ಅಂದರೆ ಸಹಜವಾಗಿ ಹುಚ್ಚನಾಗಿರುವನೂ ಮಾಯಾವಾದಿಯ ಮತವನ್ನು ಸ್ವೀಕರಿಸಲಿಕ್ಕೆ ಇಚ್ಛಿಸುವುದಿಲ್ಲ. ಅವನೂ ಕೂಡ ತಾನಾಗಿಯೇ ತನ್ನ ಮತವನ್ನು ಭ್ರಾಂತವೆಂದೂ ದುರ್ಘಟವೆಂದೂ ಒಪ್ಪುವುದಿಲ್ಲ.

ಹಾಗಾದರೆ ಲೋಕದಲ್ಲಿ ಈ ಮತವು ಹೇಗೆ ಪ್ರವೃತ್ತವಾಯಿತು ಎಂದರೆ –

ಈಶಶಕ್ತೇರಚಿಂತ್ಯತ್ವಾನ್ಮಹೋನ್ಮತ್ತೈಃ ಪ್ರವರ್ತಿತಮ್ ॥೯೯॥

ಪರಮೇಶ್ವರನ ಅಂಚಿತ್ಯಾದ್ಭುತ ಸಾಮರ್ಥ್ಯದಿಂದಾಗಿ ಮಹಾಮದೋನ್ಮತ್ತರಿಂದ ಈ ದುರ್ಮತವು ಪ್ರವರ್ತಿತವಾಯಿತು.

ಹಾಗಾದರೆ ಸೂತ್ರಕ್ಕೆ ವ್ಯಾಖ್ಯಾನವನ್ನು ಮಾಡುವುದಕ್ಕೆಂದು ಉಪಕ್ರಮಿಸಿ ಅಪವ್ಯಾಖ್ಯಾನವು ಹೇಯವು ಎಂದು ಪ್ರತಿಪಾದಿಸಿದ್ದು ಅಸಂಗತವು ಎಂದರೆ, ತಮ್ಮ

ವ್ಯಾಖ್ಯಾನದಲ್ಲಿ ಶಿಷ್ಯರಿಗೆ ದಾರ್ಢ್ಯ ಬರಲಿಕ್ಕಾಗಿ ಅಪವ್ಯಾಖ್ಯಾನದ ಹೇಯತ್ವವನ್ನು ನಿರೂಪಿಸುವುದು ಅವಶ್ಯಕವೇ ಆಗಿದೆ ಎಂದು ಹೇಳುತ್ತಾರೆ. ಸೂತ್ರಾರ್ಥವನ್ನು ವಿವರಿಸುತ್ತ ಮಾಯಾಮಾತ್ರಂ ಶಬ್ದಾರ್ಥವನ್ನು ಹೇಳುತ್ತಾರೆ –

ಅತಃ ಪ್ರಜ್ಞಾತ್ರ ಮಾಯೋಕ್ತಾ ಜೈವ್ಯುಪಾದಾನಮೇವ ಸಾ ।

ನಿಮಿತ್ತಮೈಶ್ವರೀ ಮುಖ್ಯಾ ನಿರ್ಮಿತಂ ತ್ರಾತಮೇವ ಚ ॥೧೦೦॥

ತಾಭ್ಯಾಂ ಸಹ ಪೃಥಕ್ ಚೈವ ಮಾಯಾಮಾತ್ರಮಿತೀರ್ಯತೇ ।

ಉಭಾಭ್ಯಾಂ ಮಾತಮೈಶ್ವರ್ಯಾ ತ್ರಾತಂ ಸಹ ಪೃಥಕ್ ತತಃ ॥೧೦೧॥

ಮಾಯಾವಾದಿಯ ವ್ಯಾಖ್ಯಾನವು ದುಷ್ಟವಾಗಿರುವುದರಿಂದ, ಮಾಯಾಮಾತ್ರ ಎಂಬುದಕ್ಕೆ ನಿರ್ದುಷ್ಟವಾದ ಅರ್ಥವೇನೆಂದರೆ, ಇಲ್ಲಿ ಜೀವಸಂಬಂಧಿ ಪ್ರಜ್ಞೆಯೇ ಮಾಯಾ ಎಂದು ಹೇಳಲ್ಪಟ್ಟಿದೆ. ಸ್ವಪ್ನಕ್ಕೆ ಆ ಜೀವ ಪ್ರಜ್ಞೆಯು ಉಪಾದಾನಕಾರಣ, ಈಶ್ವರಪ್ರಜ್ಞೆಯೇ ನಿಮಿತ್ತಕಾರಣ. ಅದೇ ಮುಖ್ಯವಾದುದು. ಜೀವಪ್ರಜ್ಞೆಯಾದರೋ ಅಮುಖ್ಯವು. 'ಮಯಾಮಾತ್ರಂ ತು ಕಾರ್ತ್ಸ್ನ್ಯೇನಾನಭಿವ್ಯಕ್ತ ಸ್ವರೂಪತ್ವಾತ್' ಎಂಬ ಸೂತ್ರದಲ್ಲಿನ 'ಮಾಯಾಮಾತ್ರಂ' ಎನ್ನುವ ಪದವನ್ನು 'ನಿರ್ಮಿತಂ' ಇತ್ಯಾದಿ ವಚನದಿಂದ ವ್ಯಾಖ್ಯಾನ ಮಾಡುತ್ತಾರೆ. ಜೀವ ಮತ್ತು ಈಶ್ವರ ಪ್ರಜ್ಞೆಗಳೆರಡೂ ಕೂಡಿ ಸ್ವಪ್ನವು 'ಮಾತಂ' ನಿರ್ಮಿಸಿಲ್ಪಟ್ಟಿದೆ. ಪ್ರತ್ಯೇಕವಾಗಿಯೂ ಈಶ್ವರಪ್ರಜ್ಞೆಯಿಂದ 'ತ್ರಾತಮೇವ' ರಕ್ಷಿಸಲ್ಪಟ್ಟಿದೆ. ಆದ್ದರಿಂದ ಮಾಯಾಮಾತ್ರವೆಂದು ಹೇಳಲ್ಪಡುತ್ತದೆ.

ಹಾಗಾದರೆ ಇದು ಪೂರ್ವಾಪರ ವಿರುದ್ಧವಾಗಿದೆ. ಈ ಮೊದಲು ಸ್ವಪ್ನಕ್ಕೆ ಜೀವನ ವಾಸನಾ ಅಥವಾ ಸಂಸ್ಕಾರವೇ ಉಪಾದಾನಕಾರಣವೆಂದು ಹೇಳಲ್ಪಟ್ಟಿದೆ. ಈಗ ಜೀವಪ್ರಜ್ಞೆಯು ಉಪಾದಾನವೆಂದು ಹೇಳಲಾಗಿದೆ ಎಂದರೆ, ಅದು ಸರಿಯಲ್ಲ. ಪ್ರಜ್ಞಾಶಬ್ದದಿಂದ ಉಪಲಕ್ಷಣದಿಂದ ವಾಸನಾವನ್ನು ಇಟ್ಟುಕೊಳ್ಳಬೇಕು ಎನ್ನುತ್ತಾರೆ–

ಪ್ರಜ್ಞಾತ್ಮಕಂ ಮನೋ ಯೇನ ಮನೋರೂಪಾಶ್ಚ ವಾಸನಾಃ ।

ಧೀರ್ಭೀರಿತಿ ಮನಸ್ಯೇವೇತ್ಯಾಹ ಚ ಶ್ರುತಿರಂಜಸಾ ॥೧೦೨॥

ಪ್ರಜ್ಞೆ, ಸಂಸ್ಕಾರಗಳೆರಡಕ್ಕೂ ಮನಸ್ಸೇ ಉಪಾದಾನಕಾರಣವು. ಆದ್ದರಿಂದ ಏಕ ಕಾರಣತ್ವರೂಪವಾದ ಸಂಬಂಧದಿಂದ ಇವುಗಳಿಗೆ ಲಕ್ಷಣಾವೃತ್ತಿಯು ಕೂಡುತ್ತದೆ. ಪ್ರಜ್ಞೆ ವಾಸನಾದಿಗಳಿಗೆ ಮನಸ್ಸೇ ಕಾರಣವು ಎಂದು ಹೇಗೆ ಹೇಳುತ್ತೀರಿ ಎಂದರೆ, 'ಧೀಃಭೀಃ ಹ್ರೀಃ ಇತ್ಯೇತ್ಸರ್ವಂ ಮನ ಏವ' ಎಂಬ ಶ್ರುತಿಯನ್ನು ಉದಾಹರಿಸುತ್ತಾರೆ. ಎಲ್ಲಕ್ಕೂ ಮನಸ್ಸೇ ಉಪಾದಾನಕಾರಣವೆಂದು ಈ ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿದೆ.

ಹಾಗಾದರೆ ಪ್ರಜ್ಞೆ ಮತ್ತು ಸಂಸ್ಕಾರಗಳಿಗೆ ಕಾರ್ಯಕಾರಣಭಾವ ಸಂಬಂಧವಿದ್ದ ಪ್ರಯುಕ್ತ ಲಕ್ಷಣಾವೃತ್ತಿಗೆ ಅದೇ ಕಾರಣವಾಗಲಿ, ಮನಸ್ಸಿನ ಸಂಬಂಧವೇಕೆಂದರೆ –

ಚಿದಚಿನ್ಮಿಶ್ರಮೇವೈತನ್ಮನೋ ಯಾವಚ್ಚ ಸಂಸೃತಿಃ ।

ತೇನಾವಸ್ಥಾ ಇಮಾಃ ಸರ್ವಾ ಜೀವಃ ಪಶ್ಯತಿ ಸರ್ವದಾ ॥೧೦೩॥

ಕೇವಲ ಸ್ವಪ್ನವೊಂದೇ ಅಲ್ಲ, ಈ ಸಂಸಾರದಲ್ಲಿರತಕ್ಕ ಎಲ್ಲ ಅವಸ್ಥೆಗಳನ್ನೂ ಜೀವನು ಮನಸ್ಸಿನಿಂದಲೇ ಸರ್ವದಾ ನೋಡುತ್ತಾನೆ. ಮನಸ್ಸಿಗೆ ಪ್ರಾಧಾನ್ಯವಿರುವ ಪ್ರಯುಕ್ತ, ಮನಸ್ಸೇ ದ್ವಾರವಾಗುಳ್ಳ ಸಂಬಂಧವನ್ನೇ ಇಲ್ಲಿ ಹೇಳಿದ್ದು. ಕೆಲವರು ಮನಸ್ಸು ಜಡವೆಂದೂ, ಮತ್ತೆ ಕೆಲವರು ಅಚೇತನವಾದರೂ ಆರೋಪಿತ ಚೈತನ್ಯವುಳ್ಳದ್ದು ಎಂದೂ ಹೇಳುತ್ತಾರೆ. ಅದನ್ನು ನಿರಾಕರಿಸುತ್ತ 'ಚಿದಚಿತ್' ಇತ್ಯಾದಿ ವಚನದಿಂದ ಮನಸ್ಸಿನ ಸ್ವರೂಪವನ್ನು ಹೇಳುತ್ತಾರೆ. ಈ ಮನಸ್ಸು ಚೇತನಾಚೇತನ ಮಿಶ್ರಿತವೇ ಆಗಿದ್ದು ಸಂಸಾರವಿರುವ ತನಕ ಹೀಗೆಯೇ ಇರುವುದು.

'ಕಾರ್ತ್ಸ್ನ್ಯೇನಾನಭಿವ್ಯಕ್ತಸ್ವರೂಪತ್ವಾತ್' ಎಂಬ ಸೂತ್ರಖಂಡವನ್ನು ವ್ಯಾಖ್ಯಾನ ಮಾಡುತ್ತಾರೆ –

ಮನೋವಿಕಾರಾ ವಿಷಯಾಃ ಸ್ವಾಪ್ನಾ ಯದ್ಬಾಹ್ಯವನ್ನ ತೇ ।

ಸ್ಥೂಲಾ ಭವಂತ್ಯತಸ್ತೇಷಾಂ ಸ್ಪಷ್ಟತಾ ನ ತಥಾ ಕ್ವಚಿತ್ ॥೧೦೪॥

ಕ್ವಚಿತ್ಸ್ಪಷ್ಟಾ ಅಪಿ ಸ್ಯುಷ್ಟೇ ವಾಸನಾ ಮಾನಸೀ ಚ ಸಾ ।

ಸ್ವಾಪ್ನ ಪದಾರ್ಥಗಳು ಮನೋಜನ್ಯ ವಾಸನಾ ವಿಕಾರಗಳಾಗಿರುವುದರಿಂದಲೇ ಅವು ಸ್ಥೂಲಗಳು ಅಂದರೆ ಅಲ್ಪ ಪ್ರದೇಶದಲ್ಲಿ ಸಂಭವಿಸಲು ಅನರ್ಹಗಳಾಗುವುದಿಲ್ಲ. ಅಲ್ಲದೆ ಅವುಗಳಿಗೆ ಬಾಹ್ಯ ವಸ್ತುಗಳಂತೆ ಕೆಲವು ಕಡೆ ಸ್ಪಷ್ಟತೆ ಇರುವುದಿಲ್ಲ. ಬಾಹ್ಯ ವಸ್ತುಗಳಂತೆ ಕಾರ್ಯಾರ್ಥ ಪ್ರಯೋಜನವೂ ಇರುವುದಿಲ್ಲ. ಆ ಸ್ವಾಪ್ನ ವಿಷಯಗಳು ಕೆಲವು ಕಡೆ ಸ್ಪಷ್ಟಗಳೂ ಹಾಗೂ ಬಾಹ್ಯಾರ್ಥಕ್ರಿಯೆಯನ್ನು ಹುಟ್ಟಿಸುವತಕ್ಕವುಗಳೂ ಆಗಿದ್ದರೂ, ಅದೂ ಕೂಡ ಮನೋಜನ್ಯವಾದ ಸಂಸ್ಕಾರದಿಂದಲೇ ಆದುದು.

ಪರಾಭಿಧ್ಯಾನಾಧಿಕರಣಮ್

ಓಂ ಪರಾಭಿಧ್ಯಾನಾತ್ತು ತಿರೋಹಿತಂ ತತೋ ಹ್ಯಸ್ಯ ಬಂಧವಿಪರ್ಯಯೌ ಓಂ

ಈ ಸೂತ್ರಕ್ಕೆ ಪರರು ಮಾಡಿದ ಅಪವ್ಯಾಖ್ಯಾನವನ್ನು ನಿರಾಕರಿಸಿ ಸೂತ್ರದ ಅಭಿಪ್ರಾಯವನ್ನು 'ಈಶ' ಇತ್ಯಾದಿ ವಚನದಿಂದ ಸ್ಪಷ್ಟಪಡಿಸುತ್ತಾರೆ –

ಈಶೇಚ್ಛಯಾಂತರ್ದಧಾತಿ ವ್ಯಜ್ಯತೇ ಚ ಪುನಸ್ತಯಾ ॥೧೦೫॥

ಸ್ವಪ್ನವು ಈಶ್ವರನ ಇಚ್ಛೆಯಿಂದಲೇ ಅಂತರ್ಧಾನವನ್ನು ಹೊಂದುತ್ತದೆ. ಪುನಃ ಈಶ್ವರನ ಇಚ್ಛೆಯಿಂದಲೇ ವ್ಯಕ್ತವೂ ಆಗುತ್ತದೆ.

ಎರಡು ಅಧಿಕರಣಗಳ ಅರ್ಥವನ್ನು ಉಪಸಂಹಾರ ಮಾಡುತ್ತಾರೆ –

ಸೃಷ್ಟ್ವೈವ ವಾಸನಾಭಿಶ್ಚ ಪ್ರಪಂಚಂ ಸ್ವಾಪ್ನಮೀಶ್ವರಃ ।

ವಾಸನಾಮಾತ್ರತಾಂ ತಸ್ಯ ನೀತ್ವಾಂತರ್ಧಾಪಯತ್ಯಜಃ ॥೧೦೬॥

ಉತ್ಪತ್ತಿರಹಿತನಾದ ಈಶ್ವರನು ಜೀವನ ಸಂಸ್ಕಾರಗಳಿಂದ ಸ್ವಾಪ್ನ ಪ್ರಪಂಚವನ್ನು ಸೃಷ್ಟಿಮಾಡಿ ತೋರಿಸುವ ಮೂಲಕ ಸ್ವಪ್ನಕ್ಕೆ ಸಂಸ್ಕಾರಮಾತ್ರತ್ವವನ್ನು ತಂದುಕೊಟ್ಟು, ಅನಂತರ ಜೀವನಿಗೆ ಸ್ವಾಪ್ನ ಪ್ರಪಂಚದ ಅದರ್ಶನವನ್ನೂ ಹೊಂದಿಸುತ್ತಾನೆ.

ತದಭಾವಾಧಿಕರಣಮ್

ಓಂ ತದಭಾವೋ ನಾಡೀಷು ತಚ್ಛ್ರುತೇರಾತ್ಮನಿ ಹ ಓಂ

ಪ್ರಬೋಧಾಧಿಕರಣಮ್

ಓಂ ಅತಃ ಪ್ರಬೋಧೋಽಸ್ಮಾತ್ ಓಂ

ಸಂಪತ್ತ್ಯಧಿಕರಣಮ್

ಓಂ ಮುಗ್ಧೇಽರ್ಧಸಂಪತ್ತಿಃ ಪರಿಶೇಷಾತ್ ಓಂ

ಇಲ್ಲಿ ಜೀವಬ್ರಹ್ಮರಿಗೆ ಯಾವ ಐಕ್ಯವನ್ನು ಪರಕೀಯರು ವರ್ಣಿಸಿರುವರೋ ಅದು ಸೂತ್ರಾಕ್ಷರಗಳಿಂದ ತೋರುವುದಿಲ್ಲ ಹಾಗೂ ಅದಕ್ಕೆ ವಿರುದ್ಧವೂ ಆಗಿದೆ. ಆದಪ್ರಯುಕ್ತ ಜೀವಬ್ರಹ್ಮೈಕ್ಯವು ಉಪೇಕ್ಷಣೀಯವೇ ಆಗಿರುವುದು ಎನ್ನುವುದನ್ನು ತಿಳಿಸುವುದಕ್ಕಾಗಿ ಮೇಲೆ ಸೂಚಿತವಾದ ಮೂರು ಅಧಿಕರಣಗಳ ತಾತ್ಪರ್ಯವನ್ನು ಹೇಳುತ್ತಾರೆ –

ಸುಷುಪ್ತಿಬೋಧಮೋಹಾಂಶ್ಚ ಸ್ವವಶಸ್ತದ್ವಶಂ ಸದಾ ।

ಜೀವಂ ನಯತಿ ಜೀವೇಶಃ..... ॥

ಸ್ವತಂತ್ರನಾಗಿದ್ದರೂ ಈಶ್ವರನು ಕೇವಲ ಲೀಲೆಯಿಂದ ಆ ಕಾರಣಗಳನ್ನು ಬಳಸಿಕೊಂಡು ಜೀವನನ್ನು ಸುಷುಪ್ತ್ಯಾದಿಗಳ ಅಧೀನನನ್ನಾಗಿ ಮಾಡಿ ಯಾವಾಗಲೂ ಸುಷುಪ್ತಿ, ಪ್ರಬೋಧ, ಮೂರ್ಛಾವಸ್ಥೆಗಳನ್ನು ಹೊಂದಿಸಿಕೊಡುತ್ತಾನೆ.

ಕರ್ಮಾನುಸ್ಮೃತ್ಯಧಿಕರಣಮ್

ಓಂ ಸ ಏವ ಚ ಕರ್ಮಾನುಸ್ಮೃತಿಶಬ್ದವಿಧಿಭ್ಯಃ ಓಂ

ಈ ಸೂತ್ರಕ್ಕೆ ಕೆಲವರು ಹೀಗೆ ವ್ಯಾಖ್ಯಾನ ಮಾಡುತ್ತಾರೆ – ಸುಷುಪ್ತಿಯಲ್ಲಿ ಯಾವ ಜೀವನು ಬ್ರಹ್ಮನನ್ನು ಹೊಂದಿರುವನೋ ಅವನೇ ಏಳುತ್ತಾನೋ ಅಥವಾ ಮತ್ತೊಬ್ಬನೋ ಎಂದು ಸಂಶಯಬಂದರೆ, ಯಾರು ಸುಪ್ತನೋ ಅವನೇ ಏಳುತ್ತಾನೆ ಏಕೆಂದರೆ ಸುಪ್ತನು ಮುಕ್ತನೆಂದರೆ ವಿಧಿಗಳು ಕೂಡುವುದಿಲ್ಲ. ಇದು ಅಪವ್ಯಾಖ್ಯಾನ ಎಂದು ತಿಳಿಸಲು ಅಧಿಕರಣದ ತಾತ್ಪರ್ಯವನ್ನು ಹೇಳುತ್ತಾರೆ –

..... ನಾನ್ಯಃ ಕರ್ತಾಸ್ಯ ಕಶ್ಚನ ॥೧೦೭॥

ಈ ಸ್ವಪ್ನ ಮುಂತಾದವುಗಳಿಗೆ ಈಶ್ವರನನ್ನು ಬಿಟ್ಟು ಮತ್ತೊಬ್ಬ ಕರ್ತನು ಯಾವನೂ ಯಾವಕಾಲದಲ್ಲಿಯೂ ಇರುವುದಿಲ್ಲ. ಬೇರೆ ಬೇರೆ ದೇಶ ಕಾಲಗಳಲ್ಲಿ ಬೇರೆ ಬೇರೆ ರಾಜರು ನಿಯಾಮಕರಾಗಿರುವುದು ಲೋಕದಲ್ಲಿ ಕಂಡಿದೆ. ಆದರೆ ಈಶ್ವರನು ಲೋಕದ ರಾಜರುಗಳಂತೆ ಅಲ್ಲ. ಎಲ್ಲ ಕಾಲ, ದೇಶಗಳಲ್ಲಿಯೂ ಎಲ್ಲ ಜೀವರಿಗೂ ಒಬ್ಬನೇ ಈಶ್ವರನು ನಿಯಾಮಕನು. ಆದ್ದರಿಂದ ಒಬ್ಬನೇ ಈಶ್ವರನು ಸ್ವಪ್ನಾದಿಗಳನ್ನು ಮಾಡತಕ್ಕವನು, ಬೇರೊಬ್ಬನಿಲ್ಲ ಎಂದೇ ಸೂತ್ರದ ಅಭಿಪ್ರಾಯ. ಆದ್ದರಿಂದ ಈ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನವು ಕೂಡುವುದಿಲ್ಲ.

ನ ಸ್ಥಾನತೋಽಪ್ಯಧಿಕರಣಮ್

ಓಂ ನ ಸ್ಥಾನತೋಽಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ ಓಂ

ಪರಮಪುರುಷನು ಪ್ರತಿಶರೀರದಲ್ಲಿಯೂ ಬಲಗಣ್ಣು ಇತ್ಯಾದಿ ಸ್ಥಾನಗಳಲ್ಲಿ ಇರುತ್ತ ಎಲ್ಲ ಶರೀರಗಳಲ್ಲಿಯೂ ಸ್ವಪ್ನಾದಿ ಅವಸ್ಥೆಗಳನ್ನು ಪ್ರವರ್ತಿಸುತ್ತಾನೆ ಎಂದು ಹೇಳಿದೆ. ಹಾಗಾದರೆ ಒಬ್ಬನೇ ಈಶ್ವರನಿಗೆ ಸ್ಥಾನಭೇದದಿಂದ ಜ್ಞಾನಶಕ್ತ್ಯಾದಿಗಳಲ್ಲಿ ಜೀವನಂತೆ ತಾರತಮ್ಯವು ಏಕೆ ಆಗಲಾರದು ಎನ್ನುವ ಆಶಂಕೆ ಬಂದರೆ ಅದನ್ನು ಪರಿಹರಿಸುವುದಕ್ಕಾಗಿ ಈ ಸೂತ್ರವು ಹೊರಟಿದೆ ಎಂದು ತಿಳಿಸಲು 'ನ ಸ್ಥಾನತೋ' ಇತ್ಯಾದಿ ವಚನದಿಂದ ಸೂತ್ರಾರ್ಥವನ್ನು ವಿವರಿಸುತ್ತಾರೆ –

ನ ಸ್ಥಾನಭೇದತೋಽಪ್ಯಸ್ಯ ಭೇದಃ ಕಶ್ಚಿತ್ಪರೇಶಿತುಃ ।

ಸರ್ವತ್ರಾಶೇಷದೋಷೋಜ್ಝಪೂರ್ಣಕಲ್ಯಾಣಚಿದ್ಗುಣಃ ॥೧೦೮॥

ನಾನಾವಿಧ ಶರೀರಗಳಲ್ಲಿ ದಕ್ಷಿಣಾಕ್ಷಿ ಇತ್ಯಾದಿಗಳಿಗೆ ಭೇದವಿದ್ದರೂ ಹಾಗೂ ಸುರನರಾದಿ ಶರೀರಗಳಲ್ಲಿ ವಿವಿಧ ಅಂಗಗಳಿಗೆ ಉಚ್ಚನೀಚಾದಿ ಭೇದವಿದ್ದರೂ, ಅಲ್ಲಲ್ಲಿರತಕ್ಕ ಈಶ್ವರನಿಗೆ ಉಚ್ಚತ್ವ–ನೀಚತ್ವ, ಅನುಗ್ರಾಹ್ಯ–ಅನುಗ್ರಾಹಕ ಇತ್ಯಾದಿ ಯಾವುದೇ ರೀತಿಯ ಭೇದವು ಇರುವುದಿಲ್ಲ. ಏಕೆಂದರೆ ಎಲ್ಲ ಸ್ಥಾನಗಳಲ್ಲಿರುವ ಒಬ್ಬನೇ ಪರಮಾತ್ಮನು ಅಶೇಷದೋಷರಹಿತನೂ, ಪರಿಪೂರ್ಣಗಳಾದ ಮಂಗಲ ಕರವೂ ಜ್ಞಾನಾತ್ಮಕವೂ ಆದ ಅನಂತಗುಣಗಳಿಂದ ಕೂಡಿರುವನು.

ಮೇಲೆ ಹೇಳಿದ ಅರ್ಥವನ್ನು ಆಕ್ಷೇಪಿಸಿಕೊಂಡು ಸಮಾಧಾನ ಹೇಳುವುದಕ್ಕಾಗಿ ಮುಂದಿನ ಸೂತ್ರವು –

ಓಂ ನ ಭೇದಾದಿತಿ ಚೇನ್ನ ಪ್ರತ್ಯೇಕಮತದ್ವಚನಾತ್ ಓಂ

ಬ್ರಹ್ಮನ ರೂಪರೂಪಗಳಲ್ಲಿ ಭೇದವಿಲ್ಲ. ಅವನು ಸರ್ವತ್ರ ಸರ್ವದೋಷಗಳಿಂದ ದೂರನು, ಸಕಲಗುಣಪರಿಪೂರ್ಣನು ಎನ್ನುವುದು ಕೂಡುವುದಿಲ್ಲ. ಏಕೆಂದರೆ ಕಾರ್ಯಕಾರಣ ಬದ್ಧೌ ತೌ ಇತ್ಯಾದಿ ಶ್ರುತಿ ಪುರಾಣಾದಿ ವಾಕ್ಯಗಳಿಂದ ಭಿನ್ನತ್ವ

ದೋಷಿತ್ವ, ಅಲ್ಪಗುಣತ್ವ ಇತ್ಯಾದಿಗಳು ಶ್ರೀಹರಿಯಲ್ಲಿ ಉಕ್ತವಾಗಿದೆ ಎಂಬ ಆಕ್ಷೇಪ ಬಂದರೆ, ಅದನ್ನು ಪರಿಹರಿಸತಕ್ಕ ಸೂತ್ರಾಂಶವನ್ನು ವ್ಯಾಖ್ಯಾನ ಮಾಡುತ್ತಾರೆ –

ತದ್ವಿರುದ್ಧಂ ತು ಯತ್ತತ್ರ ಮಾನಂ ನೈವ ಕ್ವಚಿದ್ಭವೇತ್ ।

ಮಹಾತಾತ್ಪರ್ಯರೋಧೇನ ಕಥಂ ತನ್ಮಾನಮತ್ರ ತು ॥೧೦೯॥

ಯಾವ ವಾಕ್ಯವು ಹಿಂದೆ ಹೇಳಿದ ಗುಣಪೂರ್ಣತ್ವಾದಿ ರೂಪವಾದ ಅರ್ಥಕ್ಕೆ ಮೇಲ್ನೋಟಕ್ಕೆ ವಿರುದ್ಧವಾಗಿ ತೋರುವುದೋ ಆ ವಾಕ್ಯವು ಅಂಥಹ ವಿರುದ್ಧವಾದ ಅರ್ಥದಲ್ಲಿ ಪ್ರಮಾಣವು ಆಗುವುದೇ ಇಲ್ಲ. ಏಕೆಂದರೆ ಎಲ್ಲ ಸ್ಮೃತಿ ಇತಿಹಾಸ ಪುರಾಣಗಳು ಭಗವಂತನ ಅಶೇಷದೋಷದೂರತ್ವ ಹಾಗೂ ಸಮಸ್ತಗುಣಪರಿಪೂರ್ಣತ್ವದ ವಿಷಯದಲ್ಲಿ ಮಹಾತಾತ್ಪರ್ಯವನ್ನು ಹೊಂದಿವೆ. ಅದಕ್ಕೆ ವಿರುದ್ಧವಾಗಿ ಭಗವಂತನಲ್ಲಿ ದೋಷಿತ್ವಾದಿಗಳನ್ನು ಪ್ರತಿಪಾದಿಸುವ ವಾಕ್ಯವು ಆ ವಿಷಯದಲ್ಲಿ ಹೇಗೆ ತಾನೆ ಪ್ರಮಾಣವಾದೀತು?

ಪರಮೇಶ್ವರನು ಸಕಲಗುಣಪರಿಪೂರ್ಣನು ಅಶೇಷದೋಷದೂರನು ಎನ್ನುವ ಅರ್ಥದಲ್ಲಿ ವೇದಾದಿಗಳಿಗೆ ಮಹಾತಾತ್ಪರ್ಯವಿದೆ ಎನ್ನುವಲ್ಲಿ ಪ್ರಮಾಣವಿರುವ ಪಕ್ಷದಲ್ಲಿ ಅದನ್ನು ಅಂಗೀಕರಿಸಬಹುದಿತ್ತು. ಆ ವಿಷಯದಲ್ಲಿ ನಮಗೆ ಪ್ರಮಾಣವೇ ಕಂಡುಬಂದಿಲ್ಲ ಎಂದು ಆಶಂಕಿಸಿದರೆ –

ದುಃಖಾಪ್ಯಯ ಸುಖಾವಾಪ್ತಿಹೇತುತ್ವೇನೈವ ವೇದವಾಕ್ ।

ಭವೇನ್ಮಾನಂ ತದೀಶಾನಾತ್ಪ್ರಸನ್ನಾದೇವ ನಾನ್ಯಥಾ ॥೧೧೦॥

ಆತ್ಯಂತಿಕದುಃಖನಿವೃತ್ತಿ, ನಿರತಿಶಯಸುಖಾಭಿವ್ಯಕ್ತಿರೂಪವಾದ ಮುಕ್ತಿ ಇವುಗಳ ಕಾರಣತ್ವವನ್ನು ಪ್ರತಿಪಾದಿಸುವುದರಿಂದಲೇ ವೇದವಾಕ್ಯವು (ಉಪಲಕ್ಷಣದಿಂದ ಸ್ಮೃತ್ಯಾದಿಗಳನ್ನೂ ಗ್ರಹಿಸಬೇಕು) ಪ್ರಮಾಣವಾಗುವುದು. ದುಃಖನಿವೃತ್ತಿರೂಪವಾದ ಮೋಕ್ಷವು ಸಂತುಷ್ಟನಾದ ವಿಷ್ಣುವಿನಿಂದಲೇ ಆಗುವುದು. ಬೇರೆಯವರಿಂದಾಗಲೀ ಕೇವಲಜ್ಞಾನದಿಂದಾಗಲೀ ಆಗುವುದಿಲ್ಲ. ವಿಷ್ಣುವೊಬ್ಬನೇ ಮೋಕ್ಷದಾತನು. ಅನ್ಯರು ಮೋಕ್ಷವನ್ನು ಕೊಡಲಿಕ್ಕೆ ಸಮರ್ಥರಲ್ಲ.

ಪ್ರಸನ್ನತಾ ಗುಣೋತ್ಕರ್ಷಜ್ಞಾನಾದೇವ ಹಿ ಕೇವಲಮ್ ।

ನಿರ್ದೋಷತಾಪರಿಜ್ಞಾನಾದಪಿ ನಾನ್ಯೇನ ಕೇನಚಿತ್ ॥೧೧೧॥

ಆ ವಿಷ್ಣುವಿನ ಪ್ರಸಾದವು ನಿಶ್ಚಯವಾಗಿಯೂ ಗುಣೋತ್ಕರ್ಷಜ್ಞಾನದಿಂದಲೇ ಆಗುವುದು. ನಿರ್ದೋಷತ್ವ ಪರಿಜ್ಞಾನದಿಂದಲೂ ಕೂಡ ಆಗುವುದು. ಅಲ್ಪಗುಣತ್ವ ಇತ್ಯಾದಿ ಜ್ಞಾನದಿಂದಾಗಲೀ ಅಥವಾ ಕರ್ಮಾದಿಗಳಿಂದಾಗಲೀ ಆಗಲಾರದು.

ಸಂತುಷ್ಟನಾದ ಶ್ರೀಹರಿಯೇ ಮೋಕ್ಷಾದಿ ಪುರುಷಾರ್ಥವನ್ನು ಕೊಡತಕ್ಕವನು

ಎಂಬ ವಿಷಯದಲ್ಲಿ ಪ್ರಮಾಣವಾಗಿ ಆಗಮವಾಕ್ಯಗಳನ್ನು ಉದಾಹರಿಸುತ್ತಾರೆ –

ಯೋ ಮಾಮಶೇಷದೋಷೋಜ್ಝಂ ಗುಣಸರ್ವಸ್ವಬೃಂಹಿತಮ್ ।
ಜಾನಾತ್ಯಸ್ಮೈ ಪ್ರಸನ್ನೋಹಂ ದದ್ಯಾಂ ಮುಕ್ತಿಂ ನ ಚಾನ್ಯಥಾ ॥೧೧೨॥
ಯೋ ಮಾಮಶೇಷಾಭ್ಯಧಿಕಂ ವಿಜಾನಾತಿ ಸ ಏವ ಮಾಮ್ ।
ವಿಜಾನಾತ್ಯಖಿಲಾಂಸ್ತಸ್ಯ ದದ್ಯಾಂ ಕಾಮಾನ್ ಪರಂ ಪದಮ್ ॥೧೧೩॥
ಯೋ ಮಾಮೇವಮಸಂಮೂಢಃ ಕಿಂ ಮಾಂ ನಿಂದಂತಿ ಶತ್ರವಃ ।
ಇತ್ಯಾದಿ ವೇದಸ್ಮೃತಿಗವಾಕ್ಯೈರೇವಾವಸೀಯತೇ ॥೧೧೪॥

ಯಾರು ನನ್ನನ್ನು ಸಮಸ್ತದೋಷರಹಿತನೆಂದೂ, ಸರ್ವಗುಣಪೂರ್ಣನೆಂದೂ (ಪ್ರತ್ಯೇಕವಾಗಿ ಪ್ರತಿಯೊಂದು ಗುಣದಿಂದಲೂ ಪೂರ್ಣನೆಂದೂ), ತಿಳಿಯುತ್ತಾನೋ ಅವನೇ ನನ್ನನ್ನು ಸರಿಯಾಗಿ ತಿಳಿದವನು. ಅವನೇ ಜ್ಞಾನಿಯು. ಅಂಥಹ ಜ್ಞಾನಿಗೆ ನಾನು ಸಂತುಷ್ಟನಾಗಿ ಮೋಕ್ಷವನ್ನು ಕೊಡುತ್ತೇನೆ. ಅನ್ಯಥಾಜ್ಞಾನವು ನನ್ನ ಪ್ರಸಾದಕ್ಕೆ ಕಾರಣವಾಗುವುದಿಲ್ಲ. ಯಾವನು ನನ್ನನ್ನು ಸರ್ವೋತ್ತಮನೆಂದು ತಿಳಿಯುತ್ತಾನೋ ಅವನೇ ನಿಜವಾಗಿ ನನ್ನನ್ನು ತಿಳಿದವನು. ಅಂಥಹ ಜ್ಞಾನಿಗೆ ನಾನು ಸಮಸ್ತ ಅಭೀಷ್ಟಗಳನ್ನೂ ಮೋಕ್ಷವನ್ನೂ ಕೊಡುತ್ತೇನೆ. ಯಾವನು ಅಜ್ಞಾನ, ಅನ್ಯಥಾ ಜ್ಞಾನಗಳಿಂದ ರಹಿತನಾಗಿ ನನ್ನನ್ನು ಸಕಲ ಕ್ಷರಾಕ್ಷರ ಪುರುಷರಿಂದ ಉತ್ತಮನನ್ನಾಗಿ ತಿಳಿಯುತ್ತಾನೋ ಅವನು ನನ್ನನ್ನು ಹೊಂದುತ್ತಾನೆ, ಮುಕ್ತನೂ ಆಗುತ್ತಾನೆ. ಶತ್ರುಗಳು ನನ್ನನ್ನು ಏನೆಂದು ನಿಂದಿಸುತ್ತಾರೆ. ಇವೇ ಮೊದಲಾದ ವೇದಗಳು ಹಾಗೂ ಸ್ಮೃತಿಗಳಲ್ಲಿನ ವಾಕ್ಯಗಳಿಂದಲೇ ಈ ವಿಷಯವು (ಭಗವಂತನ ಪ್ರಸಾದದಿಂದಲೇ ಮುಕ್ತಿಯು, ಅದು ಭಗವಂತನ ಗುಣೋತ್ಕರ್ಷ ಜ್ಞಾನದಿಂದಲೇ ಸಾಧ್ಯವಾಗುವುದು) ನಿಶ್ಚಿತವಾಗುತ್ತದೆ. 'ಯೋ ಮಾಮೇವ' ಎನ್ನುವುದರಿಂದ 'ಕೃತಕೃತ್ಯಶ್ಚ ಭಾರತ' ಎನ್ನುವವರೆಗಿನ ಭಗವಂತನ ವಾಕ್ಯವನ್ನು (ಭಗವದ್ಗೀತೆಯ ಹದಿನೈದನೆಯ ಅಧ್ಯಾಯ) ಇಲ್ಲಿ ಸಂಗ್ರಹಿಸಿದ್ದಾರೆ. 'ಕಿಂ ಮಾಂ ನಿಂದಂತಿ' ಎನ್ನುವ ವಾಕ್ಯದಿಂದ 'ಅಭೀ ಇದಮೇಕಮೇಕೋ ಅಸ್ಮಿ ನಿಪ್ಪಾಳಭೀ ದ್ವಾ ಕಿಮು ತ್ರಯಃ ಕರಂತಿ । ಖಲೇ ನ ಪರ್ಷಾನ್ವ್ರತಿ ಹನ್ಮಿ ಭೂರಿಕಿಮ್ಮಾ ನಿಂದಂತಿ ಶತ್ರವೋऽನಿಂದ್ರಾ' ಎನ್ನುವ ಋಗ್ವೇದ ವಾಕ್ಯವನ್ನು ಇಲ್ಲಿ ಸಂಗ್ರಹಿಸಿದ್ದಾರೆ.

ಈ ವಿಷಯದಲ್ಲಿ 'ಲೋಕತಶ್ಚ' ಇತ್ಯಾದಿ ವಚನದಿಂದ ಅನುಮಾನವನ್ನು ಹೇಳುತ್ತಾರೆ –

ಲೋಕತಶ್ಚ ಪ್ರಸಾದೇನ ಮುಕ್ತಿಃ ಸಗುಣವೇದನಾತ್ ।

ಭಗವಂತನ ಪ್ರಸಾದದಿಂದ ಮುಕ್ತಿಯು ಆಗುವುದು. ಆ ಪ್ರಸಾದವು ಭಗವಂತನ ಗುಣೋತ್ಕರ್ಷಜ್ಞಾನದಿಂದ ಆಗುವುದು ಎನ್ನುವ ಅರ್ಥವು ಲೋಕದೃಷ್ಟಾಂತದಿಂದ

ಕೂಡಿದ ಅನುಮಾನದಿಂದಲೂ ನಿಶ್ಚಿತವಾಗುತ್ತದೆ.

ಮಹಾತಾತ್ಪರ್ಯವಿರೋಧೇನ ಇತ್ಯಾದಿಗಳಿಂದ ಹೇಳಿದ್ದನ್ನು ಉಪಸಂಹಾರ ಮಾಡುತ್ತ, ಪರಕೀಯ ಕೃತ ಅಪವ್ಯಾಖ್ಯಾನವನ್ನು ನಿರಾಕರಿಸಲಿಕ್ಕೆ ಹೇಳಲ್ಪಟ್ಟ ಯುಕ್ತಿಯನ್ನು ವಿಸ್ತರಿಸುತ್ತಾರೆ –

ಮಹಾತಾತ್ಪರ್ಯಮುಖ್ಯಸ್ಯ ವಿರೋಧಾದತ ಏವ ಹಿ ॥೧೧೫॥

ದೋಷಿತ್ವನಿರ್ಗುಣತ್ವಾಲ್ಪಗುಣತ್ವಾದಿ ಕಥಂಚನ ।

ನಾರ್ಥಃ ಶ್ರುತಿಪುರಾಣಾದೇಃ ತದ್ವಿರುದ್ಧೋಽಖಿಲಸ್ಯ ಚ ॥೧೧೬॥

ಅರ್ಥಃ ಸ್ವಯಂ ವಿನಿರ್ಣೀತೋ ವಾಸುದೇವೇನ ಸಾದರಮ್ ।

ಆದ್ದರಿಂದ ಪರಮಮಹಾತಾತ್ಪರ್ಯದ ವಿರೋಧವಿರುವ ಪ್ರಯುಕ್ತ ಯಾವ ಪ್ರಕಾರದಿಂದಲೂ ದೋಷಿತ್ವ, ನಿರ್ಗುಣತ್ವ, ಅಲ್ಪಗುಣತ್ವಾದಿಗಳು ಶ್ರುತಿಪುರಾಣಾದಿ ವಾಕ್ಯಗಳ ಅರ್ಥವಲ್ಲ. ದೋಷಿತ್ವಾದಿಗಳಿಗೆ ವಿರುದ್ಧವಾದ ಅರ್ಥವು ಎಲ್ಲ ಶಾಸ್ತ್ರಕ್ಕೂ ಸ್ವಯಂ ಶ್ರೀಕೃಷ್ಣನಿಂದಲೇ ಸಾದರಪೂರ್ವಕವಾಗಿ ನಿರ್ಣಯಿಸಲ್ಪಟ್ಟಿದೆ.

ಈ ವಿಷಯದಲ್ಲಿ ಭಗವದ್ಗೀತಾ ವಾಕ್ಯವನ್ನು ಉದಾಹರಿಸುತ್ತಾರೆ –

ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ॥೧೧೭॥

ಏತದ್ಬುದ್ಧ್ವಾ ಬುದ್ಧಿಮಾನ್ಸ್ಯಾತ್ ಕೃತಕೃತ್ಯಶ್ಚ ಭಾರತ ।

ಇತಿ ಅತೋಽಖಿಲಸಚ್ಛಾಸ್ತ್ರವಿರುದ್ಧತ್ವೇನ ನಾನುಮಾ ॥೧೧೮॥

ವರ್ತತೇ ತತ್ರ ತೇನೇಶೋ ನಿರ್ಣೀತೋಽಖಿಲಸದ್ಗುಣಃ ।

"ಎಲೈ ಅರ್ಜುನನೇ ನಿನಗೆ ನನ್ನಿಂದ ನನ್ನ ಪುರುಷೋತ್ತಮಾದಿಗಳು ಏನು ಹೇಳಲ್ಪಟ್ಟಿತೋ ಇದು ಅತ್ಯಂತ ಗೋಪ್ಯವಾದ ಶಾಸ್ತ್ರ. ಸರ್ವಶಾಸ್ತ್ರಗಳ ತಾತ್ಪರ್ಯ. ಇದನ್ನು ತಿಳಿದವನು ಅಪರೋಕ್ಷಜ್ಞಾನಿಯೂ, ಮುಕ್ತನೂ ಕೂಡ ಆಗುವನು." ಈ ಕಾರಣದಿಂದ ಎಲ್ಲ ಸಚ್ಛಾಸ್ತ್ರಗಳಿಂದ ವಿರುದ್ಧವಾಗಿರುವುದರಿಂದ, ಅಕ್ಷ್ಯಾದಿ ಬೇರೆ ಬೇರೆ ಸ್ಥಾನಗಳಲ್ಲಿರುವ ಭಗವಂತನ ರೂಪಗಳಿಗೆ ತಾರತಮ್ಯವಿದೆ ಎಂದು ಸಾಧಿಸಲು ನೀನು ಹೇಳಿದ ಅನುಮಾನವು ಭಗವಂತನ ವಿಷಯದಲ್ಲಿ ಕೂಡುವುದಿಲ್ಲ. ಅದರಿಂದ ಪರಮೇಶ್ವರನು ಸಮಸ್ತ ಸದ್ಗುಣಗಳಿಂದ ಪರಿಪೂರ್ಣನೆಂದು ನಿರ್ಣೀತವಾಗುವುದು.

ಉಪಮಾಧಿಕರಣಮ್

ಓಂ ಅತ ಏವ ಚೋಪಮಾ ಸೂರ್ಯಕಾದಿವತ್ ಓಂ

ಈ ಪರಮೇಶ್ವರನಲ್ಲಿ ಜೀವನಿಗೆ ಆತ್ಯಂತಿಕವಾದ ಭಕ್ತಿಯು ಸಿದ್ಧಿಸುವುದಕ್ಕಾಗಿ ಭೇದಾಭೇದವನ್ನು ಹೇಳುವ ಮತವನ್ನು ನಿರಾಕರಿಸುತ್ತಾರೆ. ಅದು ಹೇಗೆಂದರೆ –

ಜೀವಬ್ರಹ್ಮರಿಗೆ ಭೇದವಾದರೂ ಸಿದ್ಧಾಂತಿಗಳಿಂದ ಅಂಗೀಕೃತವೇ ಆಗಿದೆ. ಅಭೇದವಾದರೋ "ಜೀವನು ಬ್ರಹ್ಮಾಭಿನ್ನನು, ಬ್ರಹ್ಮನಂತೆ ಚೇತನನೂ ಹಾಗೂ ಬ್ರಹ್ಮನ ಅಂಶನೂ ಆಗಿರುವುರಿಂದ" ಎಂಬ ಅನುಮಾನದಿಂದ ಸಿದ್ಧವಾಗುವುದು. ಆದಪ್ರಯುಕ್ತ ಜೀವನು ಬ್ರಹ್ಮನಿಂದ ಭಿನ್ನಾಭಿನ್ನನು ಎಂದು ಪೂರ್ವಪಕ್ಷವು ಪ್ರಾಪ್ತವಾದರೆ, ಸೂತ್ರಕಾರರು ಸೂರ್ಯಕಾದಿವತ್ ಎನ್ನುವ ಸೂತ್ರಖಂಡದಿಂದ ಅದನ್ನು ತಿರಸ್ಕರಿಸಿರುತ್ತಾರೆ. ಇಲ್ಲಿ ನೀಡಿರುವ ದೃಷ್ಟಾಂತವಚನದಿಂದ ಯಾವ ಅರ್ಥವನ್ನೂ ಸಾಧಿಸಲಿಕ್ಕೂ ಅಥವಾ ಬಾಧಿಸಲಿಕ್ಕೂ ಬರುವುದಿಲ್ಲ ಎಂದು ಹೇಳಿದರೆ, ಪೂರ್ವಪಕ್ಷ ನಿಷೇಧವನ್ನು ಮಾಡುತ್ತ ಪ್ರತಿಜ್ಞಾ ಹೇತುಗಳನ್ನು ತೋರಿಸುತ್ತಾರೆ –

ನ ಚ ಚಿತ್ತ್ವಾದಭಿನ್ನತ್ವಂ ಜೀವಸ್ಯೇಶವದಾಪ್ಯತೇ ॥೧೧೯॥

ಯತ ಆಭಾಸತಾಮೇವ ಶ್ರುತಿರಸ್ಯ ವದತ್ಯಲಮ್ ।

ಚೇತನತ್ವ ಹಾಗೂ ಅಂಶತ್ವವಿದ್ದರೂ ಜೀವನಿಗೆ ಬ್ರಹ್ಮನೊಂದಿಗೆ ಅಭೇದವು ಈಶ್ವರನಂತೆ ಅಥವಾ ಈಶ್ವರನ ಅವತಾರಗಳಂತೆ ಕೂಡುವುದಿಲ್ಲ. ಏಕೆಂದರೆ ಈ ಜೀವನಿಗೆ ಬ್ರಹ್ಮನ ಪ್ರತಿಬಿಂಬತ್ವವನ್ನೇ ಶ್ರುತಿಯು ಸ್ಪಷ್ಟವಾಗಿ ಹೇಳುತ್ತಿದೆ.

ಜೀವನಿಗೆ ಪರಮಾತ್ಮನ ಪ್ರತಿಬಿಂಬತ್ವವನ್ನು ಪ್ರತಿಪಾದಿಸುವ ಶ್ರುತಿಗಳನ್ನು ಉದಾಹರಿಸುತ್ತಾರೆ –

ಯಥೈಷಾ ಪುರುಷೇ ಛಾಯಾ ಏತಸ್ಮಿನ್ನೇತದಾತತಮ್ ॥೧೨೦॥

ಛಾಯಾ ಯಥಾ ಪುಂಸದೃಶೀ ಪುಮಧೀನಾ ಚ ದೃಶ್ಯತೇ ।

ಏವಮೇವಾತ್ಮಕಾಃ ಸರ್ವೇ ಬ್ರಹ್ಮಾದ್ಯಾಃ ಪರಮಾತ್ಮನಃ ॥೧೨೧॥

ಸತ್ತಾಪ್ರತೀತಿಕಾರ್ಯೇಷು ಪುಮಧೀನೋ ಯಥೇಯತೇ ।

ಆಭಾಸ ಏವಂ ಪುರುಷಾ ಮುಕ್ತಾಶ್ಚ ಪರಮಾತ್ಮನಃ ॥೧೨೨॥

ಹೇಗೆ ಈ ನೆರಳು ಪುರುಷಾಧೀನವೂ, ಪುರುಷನಿಗೆ ಸದೃಶವೂ ಆಗಿದೆಯೋ ಹಾಗೆಯೇ ಬ್ರಹ್ಮಾದಿ ಎಲ್ಲ ಜೀವಸಮುದಾಯವು ಪರಮಾತ್ಮನ ಅಧೀನವೂ, ಸದೃಶವೂ ಆಗಿದೆ. ಸತ್ತಾ ಪ್ರತೀತಿ ಕಾರ್ಯಗಳಲ್ಲಿ ಈ ನೆರಳು ಪುರುಷಾಧೀನವೆಂದು ಹೇಗೆ ತಿಳಿಯಲ್ಪಡುವುದೋ, ಹಾಗೆಯೇ ಸಂಸಾರಿಗಳೂ ಮುಕ್ತರೂ ಕೂಡ ಪರಮಾತ್ಮನಿಗೆ ಆಭಾಸಭೂತರೇ ಅಂದರೆ ಪ್ರತಿಬಿಂಬರೇ ಆಗಿರುವರು.

ಪರಮೇಶ್ವರ ಆಭಾಸತ್ವವಾದರೂ ಎಲ್ಲ ಜೀವರಿಗೂ ಸಾಕ್ಷಾತ್ತಾಗಿ ಇರುವುದಿಲ್ಲ, ಮತ್ತೆ ಪರಂಪರೆಯಿಂದ ಎಂಬುದಾಗಿ ಆಭಾಸ ಸ್ವರೂಪವನ್ನು ಎರಡು ಶ್ರುತಿಗಳ ಉದಾಹರಣೆಯಿಂದ ಹೇಳುತ್ತಾರೆ –

ಛಾಯಾ ವಿಷ್ಣೋ ರಮಾ ತಸ್ಯಾಶ್ಛಾಯಾ ಧಾತಾ ವಿಶೇಷಕೌ ।

ತಸ್ಯೇಂದ್ರಕಾಮೌ ಚ ತಯೋಸ್ತಯೋರನ್ಯೇಽಖಿಲಾ ಅಪಿ ॥೧೨೩॥

ಹರೇರ್ಬ್ರಹ್ಮಾಸ್ಯ ಗೀಸ್ತಸ್ಯಾ ವಿಶೇಷಾವಿಂದ್ರ ಏತಯೋಃ ।

ಮಾರಶ್ಚಾಭಾಸಕಾಃ ಸರ್ವ ಏತಯೋಸ್ತದಧೀನತಃ ॥೧೨೪॥

ಸರ್ವೇಽಲ್ಪಶಕ್ತಯಶ್ಚೈವ ಪೂರ್ಣಶಕ್ತಿಃ ಪರೋ ಹರಿಃ ।

ಚೇತನತ್ವೇಽಪಿ ಭಿನ್ನಾಸ್ತೇ ತಸ್ಮಾದೇತೇನ ಸರ್ವದಾ ॥೧೨೫॥

ಇತ್ಯಾದಿ ಶ್ರುತಿವಾಕ್ಯೇಭ್ಯೋ ಜ್ಞಾಯತೇ ಭೇದ ಏವ ಹಿ ।

ವಿಷ್ಣುವಿಗೆ ಲಕ್ಷ್ಮೀದೇವಿಯು ಛಾಯಾಸದೃಶಳು ಅಥವಾ ಆಭಾಸಭೂತಳು (ಅಂದರೆ ಪ್ರತಿಬಿಂಬಸ್ವರೂಪಳು). ಲಕ್ಷ್ಮೀದೇವಿಗೆ ಚತುರ್ಮುಖ ಬ್ರಹ್ಮನು ಛಾಯಾ ಸದೃಶನು. ಆ ಬ್ರಹ್ಮನಿಗೆ ಗರುಡಶೇಷರು ಹಾಗೂ ಅವರಿಗೆ ಇಂದ್ರಕಾಮರು ಛಾಯಾ ಸದೃಶರು, ಇತರವಾದ ಎಲ್ಲರೂ ಕೂಡ ಇಂದ್ರಕಾಮರಿಗೆ ಛಾಯಾಸದೃಶರು. ಶ್ರೀಹರಿಗೆ ಚತುರ್ಮುಖ ಬ್ರಹ್ಮನೂ, ಆ ಬ್ರಹ್ಮನಿಗೆ ಸರಸ್ವತಿಯೂ, ಅವಳಿಗೆ ಗರುಡ ಶೇಷರೂ, ಆ ಗರುಡಶೇಷರಿಗೆ ಇಂದ್ರನೂ ಮನ್ಮಥನೂ ಕೂಡ ಆಭಾಸಕರು. ಇಂದ್ರಕಾಮರಿಗೆ ಎಲ್ಲ ದೇವತೆಗಳೂ ಅಧೀನರಾದುದರಿಂದ ಆಭಾಸಕರಾಗಿರುವರು. ಎಲ್ಲರೂ ಅಲ್ಪಶಕ್ತಿಯುಳ್ಳವರೇ ಆಗಿರುವರು. ಸರ್ವೋತ್ತಮನಾದ ಶ್ರೀಹರಿಯು ಮಾತ್ರ ಪರಿಪೂರ್ಣವಾದ ಶಕ್ತಿವುಳ್ಳವನು. ಚೇತನತ್ವವಿದ್ದರೂ, ಅಂಶತ್ವವಿದ್ದರೂ ಆಭಾಸಕತ್ವವಿರುವ ಪ್ರಯುಕ್ತ ಜೀವರು ಆ ಶ್ರೀಹರಿಯಿಂದ ಯಾವಾಗಲೂ ಭಿನ್ನರೇ ಆಗಿರುವರು. ಇವೇ ಮುಂತಾದ ಶ್ರುತಿವಾಕ್ಯಗಳಿಂದ ಜೀವರಿಗೂ ಬ್ರಹ್ಮನಿಗೂ ಭೇದವೇ ತಿಳಿಯಲ್ಪಡುತ್ತದೆ.

ಈಗ 'ಅತ ಏವ ಚೋಪಮಾ' ಎನ್ನುವ ಸೂತ್ರಖಂಡವನ್ನು ವ್ಯಾಖ್ಯಾನ ಮಾಡುತ್ತ ಆ ಸಂದರ್ಭದಲ್ಲಿ ಬರುವ ಆಶಂಕೆಯನ್ನು ಪರಿಹರಿಸುವ ಮೂಲಕ ಸೂತ್ರಾರ್ಥವನ್ನು ಪ್ರತಿಪಾದಿಸುತ್ತಾರೆ –

ಆಭಾಸತ್ವಂ ಹಿ ನಿರ್ಣೀತಂ ಜೀವಸ್ಯ ಪರಮಾತ್ಮನಃ ॥೧೨೬॥

ತನ್ನ ಯುಕ್ತಂ ಯದಾಭಾಸ ಉಪಾಧ್ಯಾಯಾತ್ತ ಈಯತೇ ।

ಜೀವನಿಗೆ ಪರಮಾತ್ಮನ ಅಧೀನತ್ವರೂಪವಾದ ಆಭಾಸತ್ವವು ಶ್ರುತಿಗಳಿಂದ ಏನು ನಿರೂಪಿಸಲ್ಪಟ್ಟಿತೋ ಅದು ಯುಕ್ತಿಸಿದ್ಧವಾದುದಲ್ಲ. ಏಕೆಂದರೆ ಆಭಾಸತ್ವವು ಉಪಾಧಿಯ ಅಧೀನವಾದುದು. ಹೇಗೆ ಸೂರ್ಯನ ಪ್ರತಿಬಿಂಬವು ನೀರು ಮೊದಲಾದ ಉಪಾಧಿಯ ಅಧೀನವಾಗಿರುವುದೋ ಹಾಗೆ.

ಉಪಾಧ್ಯಾಯಾತ್ತತಾಭಾವಾದಾಭಾಸತ್ವವಿರೋಧತಃ ॥೧೨೭॥

ಜೀವರಲ್ಲಿ ಆಭಾಸತ್ವ ವ್ಯಾಪಕವಾದ ಉಪಾಧ್ಯಧೀನತ್ವವು ಇಲ್ಲದಿರುವ ಕಾರಣ ಆಭಾಸತ್ವವು ಕೂಡುವುದಿಲ್ಲ (ಉಪಾಧ್ಯಧೀನತ್ವವು ವ್ಯಾಪಕ, ಆಭಾಸತ್ವವು ವ್ಯಾಪ್ಯ. ವ್ಯಾಪಕವಿಲ್ಲದೆ ವ್ಯಾಪ್ಯವು ಕೂಡುವುದಿಲ್ಲ). ಲೋಕದಲ್ಲಿ ಪ್ರತಿಬಿಂಬಕ್ಕೆ ಬಿಂಬದೊಂದಿಗೆ ಐಕ್ಯವೇ ಕಂಡಿರುವುದರಿಂದ, ಪ್ರತಿಬಿಂಬ ರೂಪನಾದ ಜೀವನಿಗೂ ಬಿಂಬರೂಪನಾದ ಪರಮಾತ್ಮನಿಗೂ ಭೇದಸಾಧನವು ಅಯುಕ್ತವು.

ಹೀಗೆ ಆಭಾಸತ್ವ ಅನುಮಾನದಿಂದ ಐಕ್ಯವೇ ಸಿದ್ಧವಾಗುವುದು ಎಂದು ಹೇಳುತ್ತಾರೆ –

ಚೇತನತ್ವೇನ ಚಾಂಶತ್ವಾತ್ಸಮುದಾಯೈಕ್ಯಮಾಪತೇತ್ ।

ಚೇತನತ್ವ ಹಾಗೂ ಅಂಶತ್ವಗಳ ನಿಮಿತ್ತದಿಂದ ಸಮುದಾಯಕ್ಕೆ ಐಕ್ಯವು ಪ್ರಾಪ್ತವಾಗುವುದು.

ಮಾಯಾವಾದಿಗಳು ಜೀವರಿಗೆ ಪ್ರತ್ಯೇಕವಾಗಿಯೂ, ಬ್ರಹ್ಮನಿಂದಲೂ ಅತ್ಯಂತಾ ಭೇದವನ್ನು ಅಂಗೀಕರಿಸುತ್ತಾರೆ. ಆದರೆ ಭೇದಾಭೇದ ವಾದಿಗಳ ಮತವು ಹಾಗಲ್ಲ. ಸಮುದಾಯಕ್ಕೆ ಐಕ್ಯವಿದ್ದರೂ ಬೇಧವು ಕೂಡುವುದು. ಅತ್ಯಂತಾಭೇದವನ್ನು ಬಿಟ್ಟು ಸಮುದಾಯಕ್ಕೆ ಐಕ್ಯವನ್ನು ಅಂಗೀಕರಿಸುವುದೇಕೆ ಎಂದರೆ –

ಅತಃ ಪೃಥಕ್ತ್ವಮುದಿತಂ ಸಮುದಾಯಾಂಶಯೋರ್ಭವೇತ್ ॥೧೨೮॥

ಈಶಾಖ್ಯಾ ಸಮುದಾಯೇ ಸ್ಯಾದೀಶರೂಪೇಷ್ವಿವೋದಿತಾ ।

ಸಮುದಾಯಕ್ಕೆ ಐಕ್ಯವನ್ನು ಅಂಗೀಕರಿಸಿದ್ದರಿಂದ ಶ್ರುತ್ಯಾದಿಗಳಲ್ಲಿ ಹೇಳಲ್ಪಟ್ಟ ಭೇದವು, ಚೇತನ ಸಮುದಾಯರೂಪನಾದ ಬ್ರಹ್ಮನಿಗೂ ಬ್ರಹ್ಮನ ಅಂಶರೂಪನಾದ ಜೀವನಿಗೂ, ಪ್ರಾಪ್ತವಾಗುವುದು. ಆದರೆ ಮಾಯಾವಾದಿಗಳಂತೆ ಬ್ರಹ್ಮನಿಗೂ ಜೀವರಿಗೂ ಅತ್ಯಂತಾಭೇದವನ್ನು ಅಂಗೀಕರಿಸಿದರೆ ಭೇದಪ್ರತಿಪಾದಕ ಶ್ರುತಿಗಳು ಕೂಡದೇ ಹೋಗುವವು. ಸಮುದಾಯಕ್ಕೆ ಐಕ್ಯವಿರುವುದರಿಂದಲೇ ಚೇತನಗಳ ಸಮುದಾಯಕ್ಕೆ ಬ್ರಹ್ಮ ಎಂಬ ಹೆಸರು ಕೂಡುವುದು. ಹೇಗೆ ಮತ್ಸ್ಯಾದಿ ಭಗವದ್ ರೂಪಗಳ ಸಮುದಾಯದಲ್ಲಿ ಭಗವಾನ್ ಎನ್ನುವ ಹೆಸರು ನ ಸ್ಥಾನತೋಪಿ ಇತ್ಯಾದಿಗಳಲ್ಲಿ ಸಿದ್ಧಾಂತಿಗಳಿಂದ ಹೇಳಲ್ಪಟ್ಟಿದೋ ಹಾಗೆಯೇ ಬ್ರಹ್ಮವೆನ್ನುವ ಹೆಸರು ಚೇತನ ಸಮುದಾಯದಲ್ಲಿದೆ.

ಹಾಗಾದರೆ ಜೀವನಿಗೆ ಬ್ರಹ್ಮನೊಂದಿಗೆ ಅಭೇದವೂ ಪರಮಾರ್ಥವಾಗಿದ್ದರೆ ಆಗ ಬ್ರಹ್ಮೈವ ಭವತಿ ಎಂದು ಹೇಳಿದ ಮುಕ್ತಿಯು ಅಯುಕ್ತವಾಗುವುದು ಎಂದರೆ –

ಅತೋ ದೇಹಾದ್ಯುಪಾಧೀನಾಮಪಾಯೇ ಸಮತಾ ಭವೇತ್ ॥೧೨೯॥

ಈಶರೂಪೈಃ ಅಥಾಭಾಸಾ ಮುಖ್ಯತಃ ಸೂರ್ಯಕಾದಿವತ್ ।

ಯದಾ ತದೋಪಾಧ್ಯಾಯತ್ತರೂಪಾಣಾಂ ನಾಶಿತಾ ಭವೇತ್ ।।೧೩೦।।

ಆದಕಾರಣ ಜ್ಞಾನಕರ್ಮಗಳಿಂದ ಶರೀರಾದಿ ಉಪಾಧಿಗಳಿಗೆ ಸಂಪೂರ್ಣ ನಾಶವು ಪ್ರಾಪ್ತವಾಗುತ್ತಿರಲು ಜೀವರಿಗೆ ಶ್ರೀಹರಿಯ ರೂಪಗಳಿಂದ ಸಾಮ್ಯವು ಪ್ರಾಪ್ತವಾಗುವುದು. ಹಾಗೆಯೇ ಯಾವಾಗ ಜೀವರು ಮುಖ್ಯವಾಗಿ ಸೂರ್ಯನ ಪ್ರತಿಬಿಂಬಗಳಂತೆ ಆಭಾಸಭೂತರೋ, ಆಗ ಉಪಾಧ್ಯಧೀನವಾದ ಆ ರೂಪಗಳಿಗೆ ನಾಶವು ಆಗುವುದು.

ಉಪಾಧಿನಾಶವಾದರೆ ಉಪಾಧ್ಯಧೀನತ್ವವುಳ್ಳ ಜೀವರಿಗೂ ನಾಶ ಬರುವುದು. ಉಪಾಧಿಗೆ ನಾಶವಿಲ್ಲವೆಂದರೆ, ಪ್ರತ್ಯಕ್ಷಾದಿಗಳಿಗೆ ವಿರೋಧ ಬರುವುದು ಹಾಗೂ ಸಂಸಾರಿತ್ವವು ಸ್ಥಿರವಾಗುವುದು. ಏವಂ ಚ ಎರಡು ಪ್ರಕಾರದಿಂದಲೂ ಮೋಕ್ಷ ಪ್ರತಿಪಾದಕ ಶಾಸ್ತ್ರಕ್ಕೆ ವೈಯರ್ಥ್ಯ ಬರುವುದು. ಹೀಗೆ ಆಶಂಕೆ ಬಂದರೆ, ಈ ಆಶಂಕೆಯನ್ನು ನಿರಾಕರಿಸುತ್ತ ಸೂತ್ರಾಂಶವನ್ನು ವ್ಯಾಖ್ಯಾನ ಮಾಡುತ್ತಾರೆ –

ಇತ್ಯಾಶಂಕಾನಿವೃತ್ತ್ಯರ್ಥಮಾಹ ವೇದಾಧಿಪಃ ಪ್ರಭುಃ ।

ಅತ ಏವೋಪಮೇತ್ಯೇವ ಚ ಅನ್ಯಾಭಾಸವಿಶೇಷಿತಾಮ್ ।।೧೩೧।।

ಪೂರ್ವೋಕ್ತ ಪ್ರಕಾರ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ವೇದಾಧೀಶರಾದ ಸರ್ವಸಮರ್ಥರಾದ ವೇದವ್ಯಾಸರು ಅತ ಏವೋಪಮಾ ಎಂಬುದಾಗಿಯೇ ಹೇಳಿರುವರು. ಅನ್ಯಾಭಾಸವಿಶೇಷಿತಾಂ ಎಂದು ಸೂತ್ರಖಂಡದ ತಾತ್ಪರ್ಯವನ್ನು ಹೇಳುತ್ತಾರೆ. ಅದೇನೆಂದರೆ ಇತರವಾದ ಸೂರ್ಯಪ್ರತಿಬಿಂಬ ಮುಂತಾದ ಆಭಾಸದ ದೆಶೆಯಿಂದ ಜೀವರಿಗೆ ವೈಲಕ್ಷಣ್ಯವನ್ನು ಸೂತ್ರಕಾರರು ಈ ಸೂತ್ರಖಂಡದಿಂದ ಹೇಳಿರುವರು.

ಹಾಗಾದರೆ ಈ ಸೂತ್ರಾಕ್ಷರಗಳಿಂದ ಈ ತಾತ್ಪರ್ಯವು ಹೇಗೆ ಸಿದ್ಧಿಸುತ್ತದೆ ಎಂದು ಕೇಳಿದರೆ, 'ಅತ ಏವ' ಎನ್ನುವ ಶಬ್ದದಿಂದ ಪರಾಮರ್ಶಿತವಾದ ಅರ್ಥವನ್ನು ತೋರಿಸುತ್ತಾರೆ –

ಯದುಕ್ತಂ ತದಧೀನತ್ವಂ ಸರ್ವಾವಸ್ಥಾಸ್ವಶೇಷತಃ ।

ಜೀವಸ್ಯ ಸದೃಶತ್ವಂ ಚ ಚಿತ್ತ್ವಮಾತ್ರಂ ನ ಚಾಪರಮ್ ।।೧೩೨।।

'ಸಂಧ್ಯೇ ಸೃಷ್ಟಿರಾಹ ಹಿ' ಇತ್ಯಾದಿಗಳಲ್ಲಿ ಜೀವನಿಗೆ ಎಲ್ಲ ವ್ಯಾಪಾರಗಳಲ್ಲಿ ಯಾವ ಪರಮಾತ್ಮನ ಅಧೀನತ್ವವೂ ಹಾಗೂ 'ಪುಂಸ್ತ್ವಾದಿವತ್' ಇತ್ಯಾದಿಗಳಲ್ಲಿ ಸಾದೃಶ್ಯವು ಹೇಳಲ್ಪಟ್ಟಿದೆಯೋ ಅದು ಕೇವಲ ಚೇತನತ್ವ ಸಾದೃಶ್ಯವೇ ಹೊರತು, ಸ್ವಾತಂತ್ರ್ಯಾದಿ ರೂಪವಾದುದು ಅಲ್ಲ.

ಈಗ 'ಅತ ಏವ ಚೋಪಮಾ' ಎಂಬ ವಾಕ್ಯವನ್ನು ಸಂಯೋಜಿಸಿ ಹೇಳುತ್ತಾರೆ.

ತಾವನ್ಮಾತ್ರೇಣ ಚಾಭಾಸೋ ರೂಪಮೇಷಾಂ ಚಿದಾತ್ಮನಾಮ್ ।

ನೋಪಾಧ್ಯಧೀನತಾದ್ಯೈಶ್ಚ ನಾತಿಸಾಮ್ಯಂ ನಿದರ್ಶನೇ ॥೧೩೩॥

ಕೇವಲ ತದಧೀನತ್ವ ಹಾಗೂ ತದ್ಸದೃಶತ್ವ ಮಾತ್ರದಿಂದ ಈ ಚಿದಾತ್ಮರಾದ ಜೀವರಿಗೆ ಸೂರ್ಯಪ್ರತಿಬಿಂಬಾದಿ ಉಪಮಾನವು ಕೂಡುತ್ತದೆ. ಮತ್ತೆ ಉಪಾಧಿಯ ಅಧೀನತ್ವ, ಉಪಾಧಿನಾಶತ್ವ, ಜಡತ್ವ ಮುಂತಾದ ಹೇತುಗಳಿಂದಲೂ ಅಲ್ಲ. ಹಾಗಾದರೆ ದೃಷ್ಟಾಂತ–ದಾರ್ಷ್ಟಾಂತಿಕಭಾವವು ಕೂಡದೇ ಹೋಗುವುದು. ಅದು ಅತ್ಯಂತ ಸಾಮ್ಯವಿದ್ದರೇನೆ ಕೂಡುವುದು. ಇಲ್ಲದಿದ್ದರೆ ವಸ್ತುತ್ವಮಾತ್ರ ಸಾಮ್ಯವು ಸರ್ವತ್ರ ಕೂಡುವುದರಿಂದ ಒಂದು ನೋಣವೂ ಕೂಡ ಆನೆಗೆ ದೃಷ್ಟಾಂತವೆಂದು ಆಗುವುದು. ಹಾಗೆ ಹೇಳಕೂಡದು. ಏಕೆಂದರೆ "ನಿದರ್ಶ್ಯತೇ ಸಾಧ್ಯೇನ ಸಾಧನಸ್ಯ ವ್ಯಾಪ್ತಿರತ್ರೇತೆ ಹಿ ನಿದರ್ಶನಮ್". ಅಂದರೆ ಸಾಧ್ಯದಿಂದ ಹೇತುವಿಗೆ ವ್ಯಾಪ್ತಿಯನ್ನು ತೋರಿಸುವುದಕ್ಕೇನೆ ನಿದರ್ಶನ ಅಥವಾ ದೃಷ್ಟಾಂತ ಎಂದು ಹೆಸರು. ಆದ್ದರಿಂದ ದೃಷ್ಟಾಂತ ಸ್ಥಳದಲ್ಲಿ ಸಾಧ್ಯಸಾಧನ ಧರ್ಮದಿಂದ ಸಾಮ್ಯವನ್ನೇ ದಾರ್ಷ್ಟಾಂತಿಕದಿಂದ ಅನ್ವೇಷಿಸತಕ್ಕದ್ದು. ಅತ್ಯಂತ ಸಾಮ್ಯದ ಅಗತ್ಯವಿಲ್ಲ.

ಜೀವನಿಗೆ ಪರಮಾತ್ಮನೊಂದಿಗೆ ಚೇತನತ್ವ ಮಾತ್ರ ಸಾದೃಶ್ಯವನ್ನು ಹೇಳಿದ್ದು ಕೂಡುವುದಿಲ್ಲ. ಮುಕ್ತಿಯಲ್ಲಿ ಸುಖಾದಿಗಳನ್ನು ಅಂಗೀಕರಿಸಿರುವುದರಿಂದ ವಿರೋಧ ಬರುವುದು ಎಂದರೆ –

ಕಿಂಚಿತ್ಸುಖಾದಿಸಾದೃಶ್ಯಮಪೀಶೇನಾಸುರಾನೃತೇ ।

ಅಸುರರನ್ನು ಬಿಟ್ಟು ಇತರ ಜೀವರಿಗೆ ಈಶ್ವರನೊಂದಿಗೆ ಕಿಂಚಿತ್ ಸುಖಾದಿ ಸಾದೃಶ್ಯವು ಇದ್ದೇ ಇರುವುದು.

ಸುಖಾದಿ ಸಾದೃಶ್ಯವು ಎಲ್ಲರಿಗೂ ಇಲ್ಲವಾದರೂ, ಚೇತನತ್ವ ಸಾದೃಶ್ಯವು ಅಸುರಾದಿ ಸಮಸ್ತ ಜೀವರಿಗೂ ಇರುವುದು. ಸುಖಾದಿ ಸಾದೃಶ್ಯ ಹೇಳುವುದರಿಂದ ಹೇತುವಿರೋಧ ಬರುವುದು. ಆದ್ದರಿಂದ ಚೇತನತ್ವ ಸಾದೃಶ್ಯವನ್ನೇ ಇಲ್ಲಿ ಹೇಳಿದ್ದಾರೆ. ಬ್ರಹ್ಮಾಭಾಸತ್ವಾತ್ ಎಂಬ ಹೇತುವಿಗೆ ಬ್ರಹ್ಮಾಧೀನತ್ವ ಹಾಗೂ ಸಾದೃಶ್ಯವಿದ್ದ ಪ್ರಯುಕ್ತ ಎಂಬ ಅರ್ಥವು ಕೂಡುವುದು. ಸೂರ್ಯಕಾದಿಗಳಂತೆ ಪ್ರತಿಬಿಂಬತ್ವವಿದ್ದ ಪ್ರಯುಕ್ತ ಎಂಬ ಅರ್ಥ ಕೂಡುವುದಿಲ್ಲ. ಆದ್ದರಿಂದ ಅಧೀನತ್ವ ಸಾದೃಶ್ಯಾರ್ಥಗಳಲ್ಲಿ ಹೇಳಲಾದ ಆಭಾಸತ್ವ ಅನುಮಾನವು ನಿರ್ದೋಷವೇ ಆಗಿದೆ.

ಬ್ರಹ್ಮಾಭಾಸ ಎಂಬ ಶಬ್ದವು ಜೀವನಿಗೆ ಬ್ರಹ್ಮಾಧೀನತ್ವ ಹಾಗೂ ಸದೃಶತ್ವಗಳನ್ನು ಯೋಗವೃತ್ತಿಯಿಂದ ಹೇಳುತ್ತದೆ ಎಂದು ಹೇಳುತ್ತಾರೆ –

ತತ ಆಭಾಸತೇ ನಿತ್ಯಂ ತದ್ವದಾಭಾಸತೇಽಪಿ ಚ ॥೧೩೪॥

ಭಾನಮಸ್ತಿತ್ವಮಪಿ ಚೈವಾ ಸಮಂತಾದ್ಯತಸ್ತತಃ ।

ಜೀವ ಆಭಾಸ ಉದ್ದಿಷ್ಟಃ ಸದೈವ ಪರಮಾತ್ಮನಃ ॥೧೩೫॥

ನ ಜಲಾಯತ್ತಸೂರ್ಯಾದಿಪ್ರತಿಬಿಂಬೋಪಮತ್ವತಃ ।

ಜೀವನು ಬ್ರಹ್ಮನಿಂದ ನಿತ್ಯದಲ್ಲಿಯೂ ಪ್ರತೀತನಾಗುತ್ತಾನೆ ಎನ್ನುವುದರಿಂದ ತದಧೀನತ್ವವೂ ಹಾಗೂ ಬ್ರಹ್ಮನಂತೆ ತೋರುತ್ತಾನೆ ಎನ್ನುವುದರಿಂದ ಸಾದೃಶ್ಯವೂ ಹೇಳಲ್ಪಡುತ್ತದೆ. ಯಾವ ಕಾರಣದಿಂದ ಜೀವನಿಗೆ ಜ್ಞಾನ ಮತ್ತು ಸತ್ವವೂ ಕೂಡ ಪರಮಾತ್ಮನಿಂದಲೇ ಚೆನ್ನಾಗಿ ಆಗುವುದೋ ಆದ್ದರಿಂದಲೇ ಜೀವನು ಯಾವಾಗಲೂ ಪರಮಾತ್ಮನ ಪ್ರತಿಬಿಂಬನೆಂದು ಹೇಳಲ್ಪಟ್ಟಿದ್ದಾನೆ. ('ಭಾ ಚ ಆಸಾ ಚ ಭಾऽऽಸೇ। ಆ ಸರ್ವಕಾಲವರ್ತಿನ್ಯೌ ಭಾऽऽಸೇ ಆಭಾಸೇ। ಪರಮಾತ್ಮಾಧೀನೇ ಆಭಾಸೇ ಯಸ್ಯಾಸೌ ಪರಮಾತ್ಮಾಭಾಸಃ।' ಭಾ– ಜ್ಞಾನ, ಸ– ಅಸ್ತಿತ್ವ, ಆ– ಸದಾಕಾಲವೂ ಪರಮಾತ್ಮನ ಅಧೀನದಲ್ಲಿಯೇ ಇರುವುದಕ್ಕೆ ಪರಮಾತ್ಮಾಭಾಸ ಎಂದು ಹೆಸರು). ಮತ್ತೆ ಜಲಾಧೀನಗಳಾದ ಸೂರ್ಯಾದಿ ಪ್ರತಿಬಿಂಬಗಳ ಸಾದೃಶ್ಯವಿದ್ದ ಪ್ರಯುಕ್ತ ಜೀವನು ಪರಮಾತ್ಮನ ಪ್ರತಿಬಿಂಬನು ಎಂದು ತಿಳಿಯಬಾರದು.

ತದಧೀನತ್ವಮೇವೇತಿ ಕಿಂಚಿತ್ಸಾದೃಶ್ಯಮೇವ ಚಃ ॥೧೩೬॥

ಸಂಪ್ರಕಾಶಯತಃ ಸೂತ್ರಗತೌ ಅಖಿಲಮಾನತಃ ।

ಜೀವೇಶಭೇದದೃಷ್ಟ್ಯೈವ ಸಮುದಾಯೈಕತಾ ಕುತಃ ॥೧೩೭॥

ಸೂತ್ರಗತವಾದ ಏವ ಎನ್ನುವ ಶಬ್ದವು ಪರಮಾತ್ಮನ ಅಧೀನತ್ವವೇ ಎಂದು ಅವಧಾರಣಾರ್ಥವನ್ನೂ, ಚ ಶಬ್ದವು ಕಿಂಚಿತ್ಸಾದೃಶ್ಯ ಮಾತ್ರ ಎಂಬ ಅರ್ಥವನ್ನೂ, ಎಲ್ಲ ಪ್ರಮಾಣಗಳಿಂದಲೂ ಚೆನ್ನಾಗಿ ತೋರಿಸಿಕೊಡುತ್ತವೆ. ಜೀವರಿಗೂ ಈಶ್ವರನಿಗೂ ಭೇದವು ದೃಷ್ಟವಾಗಿರುವ ಪ್ರಯುಕ್ತ , ಸಮುದಾಯೈಕತ್ವವು ಯಾವ ಪ್ರಮಾಣದಿಂದ ಸಿದ್ಧವಾಗುತ್ತದೆ?

ಈ ವಿಷಯದಲ್ಲಿ ಮತ್ತೊಂದು ಅನುಮಾನವನ್ನು ಹೇಳುತ್ತಾರೆ. –

ಅಶೇಷದೋಷರಾಹಿತ್ಯಂ ಸರ್ವಶಕ್ತಿತ್ವತೋ ಹರೇಃ ।

ಸರ್ವೋಪೇತೇತಿ ಕಥಿತಮತ ಐಕ್ಯಂ ಕ್ವ ದೋಷಿಣಾ ॥೧೩೮॥

'ಸರ್ವೋಪೇತಾ ಚ ತದ್ದರ್ಶನಾತ್' ಎನ್ನುವುದರಿಂದ ಸರ್ವಶಕ್ತಿಮತ್ವವೆಂಬ ಹೇತುವಿನಿಂದ ಶ್ರೀಹರಿಗೆ ಸರ್ವದೋಷಗಳ ಅಭಾವವು ಸಮರ್ಥಿಸಲ್ಪಟ್ಟಿದೆ. ಜೀವರಲ್ಲಿ ದುಃಖಾದಿ ದೋಷಗಳು ಅನುಭವಸಿದ್ದ. ಹೀಗೆ ವಿರುದ್ಧ ಧರ್ಮಗಳನ್ನು ಹೊಂದಿರುವ ಜೀವಬ್ರಹ್ಮರಿಗೆ ಐಕ್ಯವನ್ನು ಹೇಳುವುದಾದರೆ ಸ್ತಂಭ ಕುಂಭಗಳಿಗೂ ಐಕ್ಯವು ಬರಬೇಕಾಗುವುದು. ಆದ್ದರಿಂದ ಜೀವ ಬ್ರಹ್ಮರಿಗೆ ಐಕ್ಯವು ಕೂಡುವುದಿಲ್ಲ.

ಹಾಗಾದರೆ ಶ್ರೀಹರಿಗೆ ಸರ್ವಶಕ್ತಿಮತ್ವ ಹಾಗೂ ಅಶೇಷದೋಷರಾಹಿತ್ಯವಿರಲಿ.

ಹಾಗಿದ್ದರೂ ಉಪಾಧಿನಿಮಿತ್ತದಿಂದ ಭಿನ್ನನಾದ ಜೀವನು ಶ್ರೀಹರಿಯ ಅಂಶನೇ ಆಗಿರುವ ಪ್ರಯುಕ್ತ ಶ್ರೀಹರಿಯೂ ಆ ಉಪಾಧಿನಿಮಿತ್ತಕ ದೋಷವುಳ್ಳವನಾಗಲಿ, ವಿರೋಧವೇನು? ಎಂದರೆ –

ಅಶೇಷಶಕ್ತಿಯುಕ್ತಶ್ಚೇತ್ಸ್ವತಂತ್ರ್ಯಾದ್ದೋಷವಾನ್ ಕಥಮ್ ।

ಅನುಸಂಧಾನರಹಿತಮೈಕ್ಯಂ ಚೇದೇಕತಾ ನ ತತ್ ॥೧೫೯॥

ಶ್ರೀಹರಿಯು ಎಲ್ಲ ಶಕ್ತಿಗಳಿಂದ ಕೂಡಿರುವನು ಎಂದು ಅಂಗೀಕರಿಸುವುದಾದರೆ ಸರ್ವಸ್ವಾತಂತ್ರ್ಯವಿರುವ ಪ್ರಯುಕ್ತ ಶ್ರೀಹರಿಗೆ ಉಪಾಧಿ ನಿಮಿತ್ತಕ ದೋಷವಾದರೂ ಹೇಗೆ ಸಂಭವಿಸುವುದು? ಅಂದರೆ ಶ್ರೀಹರಿಗೆ ಯಾವ ವಿಧದಿಂದಲೂ ದೋಷ ಸಂಸರ್ಗವು ಕೂಡಲಾರದು ಎಂದು ತಾತ್ಪರ್ಯ. ಒಂದು ಪಕ್ಷ ಜೀವಬ್ರಹ್ಮರಲ್ಲಿ ಐಕ್ಯವನ್ನು ಒಪ್ಪಿದರೂ ಬ್ರಹ್ಮನಿಗೆ ಜೀವಗತ ದುಃಖಾದಿ ಅನುಸಂಧಾನರಾಹಿತ್ಯದಿಂದ ಆ ಐಕ್ಯವು ಕೂಡುವುದಿಲ್ಲ. ಜೀವನಲ್ಲಿ ಬ್ರಹ್ಮಸ್ವರೂಪವಾದ ನಿರ್ದುಃಖತ್ವಾದಿಗಳ ಅನುಸಂಧಾನವಿರುವುದಿಲ್ಲ ಎನ್ನುವುದು ಅನುಭವಸಿದ್ಧವಾಗಿದೆ. ಇದರಿಂದ ಜೀವ ಬ್ರಹ್ಮರಿಗೆ ಐಕ್ಯವು ಇಲ್ಲವೆಂದೇ ಹೇಳಿದಂತಾಯಿತು.

ಚೇತನೈಕ್ಯೇऽನುಸಂಧಾನಂ ಪ್ರಮಾಣಂ ನೈವ ಚಾಪರಮ್ ।

ಅನುಸಂಧಾನರಹಿತಂ ಸಮುದಾಯೈಕ್ಯಮೇವ ಚೇತ್ ॥೧೪೦॥

ಚೇತನೇಷ್ವಸ್ತು ತನ್ನಾಮಮಾತ್ರಮೇವ ಯತಸ್ತತಃ ।

ಚೇತನಗಳಿಗೆ ಐಕ್ಯವಿಷಯದಲ್ಲಿ ಅನುಸಂಧಾನವೊಂದೇ ಪ್ರಮಾಣ. ಬೇರೆ ಯಾವುದೇ ಪ್ರಮಾಣವಿಲ್ಲ. ಯಾವ ಚೇತನನು ಯಾವಾಗ ಬ್ರಹ್ಮಸ್ವರೂಪವನ್ನು ಅನುಸಂಧಾನ ಮಾಡುತ್ತಾನೋ ಆಗ ಆ ಚೇತನನಿಗೆ ಬ್ರಹ್ಮನೊಂದಿಗೆ ಐಕ್ಯವು ಬರುವುದು. ಅನುಸಂಧಾನವಿಲ್ಲದಾಗ ಭೇದವು ಕೂಡುವುದು. ಸಮುದಾಯಕ್ಕೆ ಐಕ್ಯವೇ ನನ್ನಿಂದ ಹೇಳಲ್ಪಡುತ್ತದೆಯೇ ಹೊರತು ಆತ್ಯಂತಿಕ ಐಕ್ಯವಲ್ಲ. ಆದಕಾರಣ ಜೀವರಲ್ಲಿ ಅನುಸಂಧಾನರಹಿತವಾದ ಸಮುದಾಯೈಕ್ಯವು ಯುಕ್ತವಾಗಲಿ. ನಾನು ಹೇಳುವ ಆ ಸಮುದಾಯೈಕ್ಯವಾದರೂ ಕೇವಲ ನಾಮಮಾತ್ರವು, ವಾಸ್ತವವಲ್ಲ. ಆದ್ದರಿಂದ ಅದನ್ನು ಅಂಗೀಕರಿಸುವುದು ದೋಷವಲ್ಲ.

ಮುಕ್ತಿಯಲ್ಲಿ ಅನುಸಂಧಾನವಿದೆ. ಆದ್ದರಿಂದ ಐಕ್ಯವು ಸಿದ್ಧಿಸುತ್ತದೆ. ಮುಕ್ತರ ಸ್ವರೂಪವು ದುಃಖಾದಿ ದೋಷಗಳಿಂದ ದೂರವಾದ ಪ್ರಯುಕ್ತ ಹಿಂದೆ ಹೇಳಿದ ದೋಷವೂ ಬರುವುದಿಲ್ಲ ಎಂದು ಆಶಂಕಿಸಿದರೆ –

ಮುಕ್ತೌಸ್ಯಾದನುಸಂಧಾನಮಿತ್ಯಪಿ ಸ್ಯಾತ್ಸುದುಷ್ಕರಮ್ ॥೧೪೧॥

ಮುಕ್ತಿಯಲ್ಲಿ ಅನುಸಂಧಾನವು ಆಗುವುದು ಎಂಬ ವಚನವೂ ಕೂಡ ಬಹಳ ದುಷ್ಕರವಾದುದು. ಪ್ರಮಾಣವಿಲ್ಲವಾದ್ದರಿಂದ ಅದು ಕೂಡುವುದಿಲ್ಲ.

ಹಾಗೇನಾದರೂ ನೀನು ಹೇಳುವಂತೆ ಮುಕ್ತಿಯಲ್ಲಿ ಅನುಸಂಧಾನವು ಇರುವುದಾದರೆ ಈಗ ಸಂಸಾರದಲ್ಲಿ ಏಕೆ ಇರುವುದಿಲ್ಲ ಎಂದು ಕೇಳುತ್ತೇವೆ. ಆದಕ್ಕೆ ಉತ್ತರವಾಗಿ, ಅವಿದ್ಯೆ ಕಾಮ, ಕರ್ಮಗಳ ಬಂಧವಿರುವುದರಿಂದ ಎಂದು ಹೇಳಿದರೆ, ಹಾಗೆ ಹೇಳುವವನನ್ನು ಅಜ್ಞಾನಾದಿ ಪ್ರತಿಬಂಧಕವು ಇರುವುದರಿಂದಲೇ ಅನುಸಂಧಾನವು ಇಲ್ಲವೆಂದು ನಿನಗೆ ಹೇಗೆ ನಿಶ್ಚಯವಾಗಿದೆ ಎಂದು ಕೇಳಬೇಕು. ಅನುಸಂಧಾನದ ಅಭಾವಕ್ಕೆ ಅವಿದ್ಯೆಯು ಕಾರಣವಲ್ಲ, ಮತ್ತೆ ಐಕ್ಯಾಭಾವವೇ ಕಾರಣ ಎಂದು ನಾವು ಹೇಳುತ್ತೇವೆ. ಆದಾದರೂ ನಿಮಗೆ ಹೇಗೆ ನಿಶ್ಚಯವಾಯಿತು ಎಂದು ಅವನು ನಮ್ಮನ್ನು ಕೇಳಿದರೆ –

ಸರ್ವಜ್ಞ ಏಕತಾಂ ನಾನುಸಂಧತ್ತೇ ನೈವ ಸಾ ಯತಃ ।

ಅನುಸಂಧಾನಾಭಾವವು ಅಜ್ಞಾನಾದಿ ನಿಮಿತ್ತಕ ಎನ್ನುವುದು ಸರ್ವಜ್ಞನಾದ ಈಶ್ವರನಿಗೆ ಸರ್ವಥಾ ಕೂಡುವುದಿಲ್ಲ. ಅಜ್ಞಾನಾದಿ ಸಂಬಂಧವುಳ್ಳ ಜೀವರಿಗೇನೆ ಅಜ್ಞಾನ ನಿಮಿತ್ತಕವಾದ ಅನುಸಂಧಾನಾಭಾವವು ಆಗುವುದು. ಶ್ರೀಹರಿಯು ಸರ್ವಜ್ಞನಾದ್ದರಿಂದ ಅವನಿಗೆ ಐಕ್ಯಾಭಾವದ ಅನುಸಂಧಾನವು ಇದ್ದೇ ಇರುವುದು. ಅವನು ಐಕ್ಯವನ್ನು ಎಂದೂ ಅನುಸಂಧಾನ ಮಾಡುವುದೇ ಇಲ್ಲ.

ಹಾಗಿದ್ದರೂ ಪರಮಾತ್ಮನಿಗೆ ಐಕ್ಯಾನುಸಂಧಾನದ. ಅಭಾವವು ಸಿದ್ಧಿಸುವುದಿಲ್ಲ. ಏಕೆಂದರೆ ಈಗ ಅನುಸಂಧಾನ ಮಾಡದೇ ಇದ್ದರೂ ಮುಂದೊಂದು ಸಮಯದಲ್ಲಿ ಐಕ್ಯಾನುಸಂಧಾನವು ಇರುವುದಿಲ್ಲ ಎಂದು ಹೇಳಲಾಗುವುದಿಲ್ಲ. ಸಾರ್ವಕಾಲಿಕ ಅನುಸಂಧಾನವು ಐಕ್ಯವ್ಯಾಪಕವಲ್ಲ ಎಂದು ಆಶಂಕಿಸಿದರೆ –

ಪಶ್ಚಾತ್ತ್ಯಾದನುಸಂಧಾನಂ ಚೇನ್ಮಿಥ್ಯಾಜ್ಞಾನಿತಾ ಭವೇತ್ ॥೧೪೨॥

ಪರಮಾತ್ಮನಿಗೆ ಐಕ್ಯಾನುಸಂಧಾನವು ಮುಂದಕ್ಕೆ ಆಗುವುದಾದರೆ ಆಗ ಸರ್ವಜ್ಞತ್ವವೇ ಕೂಡುವುದಿಲ್ಲವಾದ್ದರಿಂದ ಪರಮಾತ್ಮನಿಗೆ ಮಿಥ್ಯಾಜ್ಞಾನಿತ್ವವು ಬರಬೇಕಾಗುವುದು.

ಇಲ್ಲದಿರುವುದನ್ನು ಇದೆ ಎಂದು ಅನುಸಂಧಾನ ಮಾಡಿದರೆ ಮಿಥ್ಯಾಜ್ಞಾನಿತ್ವವು ಬರುವುದು. ಆದರೆ ಐಕ್ಯವು ಇಲ್ಲದಿರುವುದಲ್ಲ. ಆದ್ದರಿಂದ ಮಿಥ್ಯಾಜ್ಞಾನಿತ್ವವು ಬರುವುದಿಲ್ಲ ಎಂದು ಹೇಳಿದರೆ –

ವಿದ್ಯಮಾನಾನುಸಂಧಾನಂ ನ ಚೇದಜ್ಞತ್ವಮಾಪತೇತ್ ।

ಇರತಕ್ಕ ವಸ್ತುವಿನ ಅನುಸಂಧಾನವು ಇಲ್ಲವೆಂದು ಹೇಳಿದರೆ ಆಗ ಅಜ್ಞತ್ವವು ಪ್ರಾಪ್ತವಾಗುವುದು. ಈ ಪ್ರಕಾರವಾಗಿ ಜೀವೇಶ್ವರ ಐಕ್ಯವು ನಿರಾಕರಿಸಲ್ಪಡುತ್ತದೆ.

ಐಕ್ಯವು ಇಲ್ಲವೆನ್ನುವುದೇ ವಾಸ್ತವವಾಗಿದ್ದರೆ ಹಿಂದೆ ಹೇಳಿದ ದೋಷಗಳು ಬರುವುವು. ಆದರೆ ಹೀಗೆ ಇರುವುದಿಲ್ಲ. ಈಗ ಐಕ್ಯವಿಲ್ಲದಿದ್ದರೂ ಜ್ಞಾನೋತ್ತರ

ಕಾಲದಲ್ಲಿ ಐಕ್ಯವು ಬರುವುದು. ಆದಪ್ರಯುಕ್ತ ಪರಮಾತ್ಮನ ಸರ್ವಜ್ಞತ್ವಕ್ಕೆ ಹಾನಿ ಬರುವುದಿಲ್ಲ ಎಂದು ಆಶಂಕಿಸಿದರೆ –

ಅಸದೈಕ್ಯಂ ಭವೇತ್ಪಶ್ಚಾದ್ಯದಿ ಸ್ಯಾತ್ಸಪ್ತಮೋ ರಸಃ ॥೧೪೩॥

ಸಮುದಾಯೈಕ್ಯಮೇತಸ್ಮಾದ್ದೂರತೋಽಪಾಕೃತಂ ಸದಾ ।

ಈಗ ಅಸತ್ತಾದ ಐಕ್ಯವು ಆಮೇಲೆ ಉಂಟಾಗುವುದು ಎನ್ನುವುದಾದರೆ ಅಸತ್ತಾದ ಸಪ್ತಮ ರಸವೂ ಮುಂದೆ ಉಂಟಾಗಬೇಕಾಗುವುದು. ಆದ್ದರಿಂದ ಈಗ ಇಲ್ಲದಿರುವ ಅಭೇದವು ಮುಂದೆ ಬರುವುದು ಎಂದು ಹೇಳುವುದು ಅಯುಕ್ತವೆಂದು ತಾತ್ಪರ್ಯ. 'ಸಮುದಾಯೈಕ್ಯ' ಎಂಬ ವಚನದಿಂದ ಭೇದಾಭೇದ ಮತವನ್ನು ತಿರಸ್ಕರಿಸುತ್ತಾರೆ – ಯಾವಾಗಲೂ ಸಮುದಾಯಕ್ಕೆ ಐಕ್ಯತೆಯು ಪ್ರಮಾಣವಿಲ್ಲದಿರುವುದರಿಂದಲೂ, ಅಭಾಸತ್ವ ಮುಂತಾದ ಪ್ರಮಾಣಗಳಿಗೆ ವಿರುದ್ಧವಾದುದರಿಂದಲೂ ದೂರದಿಂದಲೇ ನಿರಾಕೃತವಾಗುವುದು.

ಅತೋಽಶೇಷಗುಣೋನ್ನದ್ಧಂ ನಿರ್ದೋಷಂ ಯಾವದೇವ ಹಿ ॥೧೪೪॥

ತಾವದೇವೇಶ್ವರೋ ನಾಮ ತತ್ರ ಭೇದೋಽಪಿ ನ ಕ್ವಚಿತ್ ।

ಮೇಲೆ ಹೇಳಿದ ಕಾರಣಗಳಿಂದ ಪರಮಾತ್ಮನು ಸಕಲ ಚೇತನ ಸಮುದಾಯ ರೂಪನು ಎನ್ನುವುದು ಅಯುಕ್ತವು ಎಂದು ಸಿದ್ಧವಾಗುವುದು. ಆದಪ್ರಯುಕ್ತ ಸಮಸ್ತ ಗುಣಗಳಿಂದ ಪೂರ್ಣವಾದುದು ಹಾಗೂ ಸಮಸ್ತ ದೋಷಗಳಿಂದ ದೂರವಾದುದು ಎಷ್ಟು ರೂಪಸಮುದಾಯವಿದೆಯೋ ಅವೆಲ್ಲಕ್ಕೂ ಈಶ್ವರ ಎಂದು ಹೆಸರು. ಈ ವಿಧವಾದ ಪರಮಾತ್ಮನ ರೂಪಸಮುದಾಯಗಳಲ್ಲಿ ಯಾವುದಕ್ಕೂ ಪರಸ್ಪರವಾಗಿ ಎಳ್ಳಷ್ಟೂ ಭೇದವಿರುವುದಿಲ್ಲ.

ನೇಹ ನಾನಾಸ್ತಿ ಕಿಮಪಿ ಹರಯೋಽಯಮಯಂ ಹಿ ಸಃ ॥೧೪೫॥

ಇತ್ಯಾದಿಶ್ರುತಿಮಾನೇನ ಜೀವಾಂಶಾಃ ಸರ್ವ ಏವ ಚ ।

ನಿಯಮೇನಾನುಸಂಧಾನವಂತೋ ಯದ್ಯೇಕತಾ ಸ್ವತಃ ॥೧೪೬॥

'ನೇಹ ನಾನಾಸ್ತಿ ಕಿಂಚನ' 'ಅಯಂ ವೈ ಹರಯಃ' 'ಅಯಮೇವ ಸ ಯೋಽಯಮಾತ್ಮಾ' ಇತ್ಯಾದಿ ಶ್ರುತಿಪ್ರಮಾಣದಿಂದ ಪರಮಾತ್ಮನ ರೂಪರೂಪಗಳಲ್ಲಿ ಕಿಂಚಿತ್ತೂ ಭೇದವಿಲ್ಲವೆನ್ನುವುದು ನಿಶ್ಚಿತವಾಗುತ್ತದೆ. ಇಂದ್ರಾದಿಗಳ ಅಂಶಭೂತರಾದ ಅರ್ಜುನಾದಿಗಳು ನಿಯಮೇನ ಪರಸ್ಪರ ಸುಖದುಃಖಾದಿ ಅನುಸಂಧಾನವುಳ್ಳವರು. ಆದುದರಿಂದ ಅನುಸಂಧಾನವು ಐಕ್ಯಕ್ಕೆ ವ್ಯಾಪಕವಾದುದು ಎಂದು ತಾತ್ಪರ್ಯ. ಮತ್ತೆ 'ಆತ್ಮಾ ವೈ ಪುತ್ರನಾಮಾಸೀತ್' ಇತ್ಯಾದಿ ವಚನದಿಂದ ತಂದೆ ಮಕ್ಕಳಿಗೆ ಐಕ್ಯವು ಉಕ್ತವಾಗಿದ್ದರೂ, ಐಕ್ಯಾನುಸಂಧಾನವು ಏಕೆ ಬರುವುದಿಲ್ಲ ಎಂದು ಆಶಂಕಿಸಿದರೆ – ತಂದೆಗೂ ಮಗನಿಗೂ ಇರತಕ್ಕ ಅಂಶಾಂಶಿಭಾವವು ಏಕದೇಶತ್ವ

ರೂಪವಾದುದಲ್ಲ. ಆದ್ದರಿಂದ ಐಕ್ಯತಾನುಸಂಧಾನವಿರುವುದಿಲ್ಲ. ಸ್ವಾಭಾವಿಕ ಅಥವಾ ಏಕದೇಶತ್ವರೂಪವಾದ ಐಕ್ಯವಿದ್ದಾಗ ಮಾತ್ರ ಅನುಸಂಧಾನವು ಕೂಡುವುದು.

ಹಾಗಾದರೆ ಇಂದ್ರಾದಿಗಳಿಗೆ ಅನುಸಂಧಾನವಿದ್ದರೆ ಅರ್ಜುನನು ಇಂದ್ರನಿಗೆ ಅಸಮ್ಮತವಾದ ಖಾಂಡವ ದಹನಾದಿಗಳನ್ನು ಹೇಗೆ ಮಾಡಿದನು ? ಹಾಗೆಯೇ ಇಂದ್ರನು ಅರ್ಜುನನಿಗೆ ಅನಭಿಮತವಾದ ದಹನಶಮನಾದಿಗಳನ್ನು ಹೇಗೆ ಮಾಡಿದನು ? ಎಂದು ಕೇಳಿದರೆ –

ಅಂಶಿನೋऽಶೇಷಸಂಧಾನಮತ್ಯಲ್ಪಸ್ಯಾಪಿ ವಿದ್ಯತೇ ।

ಭುವಿ ಜಾತೇನ ಚಾಂಶೇನ ಸುಖದುಃಖಾದಿ ತದ್ಗತಮ್ ॥೧೪೭॥

ಅನುಭೂಯತೇ ವಿಶೇಷಸ್ತು ಕಶ್ಚಿದೀಶಕೃತೋ ಭವೇತ್ ।

ಅತ್ಯಲ್ಪನಾದ ಅಂಶಿಗೆ ಅಂಶಗತವಾದ ಅಶೇಷ ಅನುಸಂಧಾನವು ಇದ್ದೇ ಇರುವುದಾದರೂ ಅಂಶಕ್ಕೆ ಅನಭಿಮತವಾದ ಕೆಲವು ವಿಶೇಷ ಕಾರ್ಯಗಳು ಈಶನ ಪ್ರೇರಣೆಯಿಂದ ಅಂಶಿಯಿಂದ ಮಾಡಲ್ಪಡುತ್ತವೆ. ಹಾಗೆಯೇ ಭೂಮಿಯಲ್ಲಿ ಹುಟ್ಟಿದ ಅಂಶದಿಂದ ಅಂಶಿಗತವಾದ ಸುಖದುಃಖಾದಿಗಳು ಅನುಭವಿಸಲ್ಪಡುತ್ತವೆ (ಸರ್ವವೂ ಅಲ್ಲ). ಅಂಶ–ಅಂಶಿಗಳಿಗೆ ಐಕ್ಯವಿದ್ದರೂ ಅನುಸಂಧಾನವಿಲ್ಲದ ಕೆಲವು ವಿಶೇಷ ಅನುಭವವಾದರೂ ಈಶ್ವರನಿಂದ ಮಾಡಲ್ಪಡುತ್ತದೆ.

ಹಾಗಾದರೆ ಈಶ್ವರನೂ ಕೂಡ ಅಂಶಾಂಶಿಗಳಿಗೆ ಅಭೇದವಿದ್ದರೂ, ಅಸಮ್ಮತ ವಾದ ಕಾರ್ಯಗಳನ್ನು ಹೇಗೆ ಮಾಡಿಸುತ್ತಾನೆ? ಮತ್ತೆ ಕೆಲವು ಅನುಸಂಧಾನವನ್ನು ಹೇಗೆ ಪ್ರತಿಬಂಧಿಸುತ್ತಾನೆ? ಎಂದು ಆಶಂಕಿಸಿದರೆ –

ಈಶಸ್ಯಾಚಿಂತ್ಯಶಕ್ತಿತ್ವಾನ್ನಾಶಕ್ಯಂ ಕ್ವಾಪಿ ವಿದ್ಯತೇ ॥೧೪೮॥

ಅಂಚಿತ್ಯಾದ್ಭುತ ಶಕ್ತಿಯನ್ನು ಹೊಂದಿರುವ ಈಶ್ವರನಿಗೆ ಶಕ್ಯವಾಗದಿರುವುದು ಎಲ್ಲಿಯೂ ಎಂದಿಗೂ ಇರುವುದಿಲ್ಲ. ಆದುದರಿಂದ ಈಶ್ವರನು ಅಘಟಿತವಾದುದನ್ನು ಮಾಡಿಸುತ್ತಾನೆ.

ಅಂಶಅಂಶಿಗಳಿಗೆ ಅಭೇದವಿದ್ದರೂ ಅಂಶಿಯಲ್ಲಿರತಕ್ಕ ಅಶೇಷ ಅನುಸಂಧಾನವು ಈಶ್ವರನ ಅಚಿಂತ್ಯಶಕ್ತಿಯಿಂದ ಪ್ರತಿಬದ್ಧವಾಗಿದೆಯೆಂದು ಅಂಗೀಕರಿಸುವುದಾದರೆ, ಅದೇಪ್ರಕಾರವಾಗಿ ಜೀವೇಶ್ವರರಿಗೆ ಅಭೇದವಿದ್ದರೂ ಈಶ್ವರನ ಶಕ್ತಿಯಿಂದಲೇ ಐಕ್ಯಾನುಸಂಧಾನಕ್ಕೆ ಪ್ರತಿಬಂಧಕವಾಗುವುದು ಎಂದು ಅಂಗೀಕರಿಸಬೇಕಾಗುವುದು. ಆದಕಾರಣ ಅನುಸಂಧಾನರಾಹಿತ್ಯದಿಂದ ಐಕ್ಯವನ್ನು ನಿರಾಕರಿಸುವುದು ಅಯುಕ್ತವು ಎಂದು ಆಶಂಕಿಸಿದರೆ –

ಸೇಶತಾನುಪಪನ್ನೈವ ಯದಿ ಜೀವೈಕತಾಸ್ಯ ಹಿ ।

ಅನೀಶಸ್ಯೇಶತೇತ್ಯೇವ ವಿರುದ್ಧಂ ಸರ್ವಮಾನತಃ ॥೧೪೯॥

ಪರಮಾತ್ಮನಿಗೆ ಜೀವನೊಂದಿಗೆ ಐಕ್ಯವಿರುವ ಪಕ್ಷದಲ್ಲಿ ಅಘಟಿತ ಘಟನಾ ರೂಪವಾದ ಈಶತ್ವವು ಕೂಡುವುದೇ ಇಲ್ಲ. ಜೀವನಾದರೋ ಈಶ್ವರನಲ್ಲ ಎನ್ನುವುದು ಅನುಭವಸಿದ್ಧವು. ಅನೀಶನಾದ ಜೀವನೊಂದಿಗೆ ಅಭೇದವಿದ್ದರೆ ಪರಮಾತ್ಮನೂ ಕೂಡ ಅನೀಶನೆಂದೇ ಹೇಳಿದಂತೆ ಆಗುವುದು. ಅನೀಶನಾದ ಜೀವನಿಗೆ ಈಶತ್ವವಿದೆ ಎಂದು ಹೇಳುವುದು ಎಲ್ಲ ಪ್ರಮಾಣಗಳಿಗೆ ವಿರುದ್ಧವಾಗಿದೆ.

ಜೀವೇಶ್ವರರಿಗೆ ಐಕ್ಯವನ್ನು ಹೇಳುವುದರಲ್ಲಿ ಶ್ರುತಿಗಳಿಗೆ ತಾತ್ಪರ್ಯವಿಲ್ಲ ಎಂದು ಹೇಳುತ್ತಾರೆ –

ಈಶತ್ವೇನೈವ ವಿಜ್ಞಾತಮನೀಶತ್ವೇನ ಚೇತ್ ಶ್ರುತಿಃ ।

ಅನೀಶತ್ವೇನ ವಿಜ್ಞಾತಮೀಶತ್ವೇನಾಥವಾದಿಶೇತ್ ॥೧೫೦॥

ಪ್ರಮಾಣಾಂತರದಿಂದ ಈಶತ್ವದಿಂದಲೇ ಪ್ರಮಿತನಾದ ಪರಮಾತ್ಮನನ್ನು ಕೆಲವು ಶ್ರುತಿಯು ಅನೀಶನೆಂದೂ ಅಥವಾ ಈಶ್ವರತ್ವವಿಲ್ಲದ ಜೀವನನ್ನು ಕೆಲವು ಶ್ರುತಿಯು ಈಶತ್ವದಿಂದಲೂ ಉಪದೇಶಿಸಿರಬಹುದು. ಕೆಲವು ಶ್ರುತಿಗಳಲ್ಲಿ ಜೀವೇಶ್ವರಿಬ್ಬರೂ ಈಶತ್ವದಿಂದಲೇ ಪ್ರಮಿತರಾಗಿರುವರೆಂದು ಉಕ್ತವಾಗಿರಬಹುದು.

ಉಪಜೀವ್ಯವಿರೋಧೇನ ನೈವ ಮಾನತ್ವಮೇಷ್ಯತಿ ।

ಅತ ಏವೇಶತಾಸಿದ್ಧೇರ್ನ ಕಿಂಚಿತ್ ಶಕ್ಯಮಸ್ಯ ಚ ॥೧೫೧॥

ಹೀಗೆ ಯಾವುದೇ ರೀತಿಯಿಂದ ಉಪದೇಶಿಸಿದ್ದರೂ ಉಪಜೀವ್ಯಪ್ರಮಾಣಕ್ಕೆ ವಿರುದ್ಧವಾದುದರಿಂದ ಆ ವಾಕ್ಯಗಳಿಗೆ ಪ್ರಾಮಾಣ್ಯವು ಬರುವುದೇ ಇಲ್ಲ. ಒಟ್ಟಿನಲ್ಲಿ ಐಕ್ಯವನ್ನು ಪ್ರತಿಪಾದಿಸುವ ಯಾವ ಶ್ರುತಿಯೂ ಪ್ರಮಾಣವಾಗಲಾರದು ಎಂದು ತಾತ್ಪರ್ಯ. ಜೀವೈಕ್ಯವಿದ್ದ ಕಾರಣದಿಂದಲೇ ಈಶ್ವರನಿಗೆ ಅಘಟಿತಘಟನಾಶಕ್ತಿಯು ಸಿದ್ಧಿಸುವುದಿಲ್ಲ. ಆದುದರಿಂದ ಸ್ವಲ್ಪವೂ ಕೂಡ ಈಶತ್ವ ಅನೀಶತ್ವಗಳಿಗೆ ಏಕತ್ರ ಅವಸ್ಥಿತಿಯನ್ನು ಹೊಂದಿಸುವುದು ಆ ಪರಮಾತ್ಮನಿಗೂ ಕೂಡ ಶಕ್ಯವಲ್ಲ.

ಜೀವೈಕ್ಯವಿದ್ದರೂ ಭೇದವಿದ್ದ ಪ್ರಯುಕ್ತ ಈಶತ್ವವು ಉಪಪನ್ನವಾಗುತ್ತದೆ ಎಂಬ ಆಶಂಕೆಯನ್ನು ಪರಿಹರಿಸುತ್ತ, ಪರಮಾತ್ಮನ ಅಂಚಿತ್ಯಾದ್ಭುತಶಕ್ತಿಯ ವಿಷಯದಲ್ಲಿ ಮಂದರಿಗೆ ಇರಬಹುದಾದ ಶಂಕೆಯನ್ನು ಪರಿಹರಿಸುತ್ತಾರೆ –

ಈಶತ್ವೇऽನೀಶಭೇದೇನ ಶ್ರುತ್ಯಾ ಸಮ್ಯಕ್ಪ್ರಕಾಶಿತೇ ।

ಅಯುಕ್ತಮಪಿ ಚಾನ್ಯತ್ರ ಯುಕ್ತಂ ಭವತಿ ತದ್ಬಲಾತ್ ॥೧೫೨॥

ಅತೋऽನ್ಯತ್ರಾಪಿ ಯದ್ದೃಷ್ಟಂ ತದೀಶೇನೈವ ಕಲ್ಪ್ಯತೇ ।

ಶ್ರುತ್ಯಾಭಾಸಾಪ್ತಮಪಿ ನ ಹೀಶತ್ವಪರಿಪಂಥಿ ಯತ್ ॥೧೫೩॥

ಅನೀಶನಾದ ಜೀವನ ಭೇದದಿಂದ ಈಶತ್ವವು ಶ್ರುತಿಯಿಂದ ಚೆನ್ನಾಗಿ ಪ್ರಕಾಶಿಸಲ್ಪಡುತ್ತಿರಲು, ಈಶ್ವರನಿಂದ ಇತರರಲ್ಲಿ ಈಶತ್ವವು ಅಯುಕ್ತವಾಗಿದ್ದರೂ, ಈಶ್ವರನಲ್ಲಿ ಯುಕ್ತವೇ ಆಗುವುದು. ಈಶ್ವರನಿಂದ ಇತರ ಕಡೆಗಳಲ್ಲಿ ಯಾವುದು ಕಾಣಲ್ಪಡುವುದೋ ಅದು ಈಶ್ವರನಿಂದಲೇ ಎನ್ನುವುದು ಈಶತ್ವಬಲದಿಂದಲೇ ಯುಕ್ತವೆಂದು ಕಲ್ಪಿಸಲ್ಪಡುತ್ತದೆ. ಯಾವುದು ಶ್ರುತ್ಯಾಭಾಸದಿಂದ ಈಶತ್ವಕ್ಕೆ ಕಿಂಚಿತ್ ವಿರುದ್ಧವೆಂದು ತೋರುವುದೋ ಅದೂ ಕೂಡ ಪ್ರಮಾಣಸಿದ್ಧವಾದ ಈಶತ್ವಕ್ಕೆ ವಿರೋಧಿಯಾಗಲಾರದು. ಉದಾಹರಣೆ – ಅಣುತ್ವಮಹತ್ವಾದಿಗಳು ಏಕಕಾಲದಲ್ಲಿ ಏಕತ್ರ ಯುಕ್ತವಾಗಿರುವುದು, ಅರ್ಜುನಾದಿಗಳಿಗೆ ಅಶೇಷ ಅನುಸಂಧಾನದ ಅಭಾವ, ಇವೆಲ್ಲವೂ ಈಶ್ವರನ ಐಶ್ವರ್ಯಬಲದಿಂದ ಕೂಡುತ್ತವೆಯೆಂದು ಅಂಗೀಕರಿಸಬೇಕು. ಅದನ್ನು ನಿರಾಕರಿಸಲು ಶಕ್ಯವಿಲ್ಲ. ಮತ್ತೆ ಪ್ರಮಾಣವಿರುದ್ಧವಾದುದನ್ನು ಅದು ಈಶ್ವರನ ಐಶ್ವರ್ಯಕ್ಕೆ ಅವಿರುದ್ಧವಾಗಿದ್ದರೂ (ಉದಾಹರಣೆಗೆ ಶಶವಿಷಾಣಾದಿಗಳು) ಅಂಥಹುದನ್ನು ಕಲ್ಪಿಸಲೇ ಕೂಡದು. ಹಾಗೆಯೇ ಪ್ರಮಾಣಪ್ರಮಿತವಾಗಿದ್ದರೂ ಯಾವುದು ಈಶ್ವರನ ಐಶ್ವರ್ಯಕ್ಕೆ ವಿರೋಧಿಯಾಗಿದೆಯೋ ಅಂಥಹದನ್ನೂ ಕೂಡ ಕಲ್ಪಿಸಲೇ ಕೂಡದು. ಮತ್ತೆ ಆ ಪ್ರಮಾಣಕ್ಕೆ ಯಥಾಯೋಗ್ಯವಾಗಿ ಆಭಾಸತ್ವವನ್ನು ವರ್ಣಿಸಬೇಕು. ಅಂದರೆ ಶ್ರುತಿಗೆ ಪ್ರತೀತಾರ್ಥವನ್ನು ಬಿಟ್ಟು ಇತರ ಪ್ರಮಾಣಗಳಿಗೆ ವಿರೋಧ ಬಾರದಂತೆ ಅರ್ಥೈಸಬೇಕು ಎಂದು ತಾತ್ಪರ್ಯ.

ಈ ಪ್ರಕಾರವಾಗಿ ಅನೀಶನಿಗೆ ಈಶತ್ವವನ್ನು ಹೇಳುವುದು ಎಲ್ಲ ಪ್ರಮಾಣಗಳಿಗೆ ವಿರುದ್ಧವು ಎಂದು ಹೇಳಲಾಯಿತು. ಅದನ್ನು ಸ್ಮೃತಿಯಿಂದ ಸಮರ್ಥಿಸುತ್ತಾರೆ –

ಈಶೋಽನೀಶೋ ಜಗನ್ಮಿಥ್ಯಾ ದುಃಖೀ ಮುಕ್ತೋ ಭಿದಾ ನ ಹಿ ।

ಇತಿ ಪ್ರತಿಜ್ಞಾವ್ಯಾಘಾತಃ ಸರ್ವದೋಷಾಧಿಕಾಧಿಕಃ ॥೧೫೪॥

ಇತಿ ಹಿ ಬ್ರಹ್ಮತರ್ಕೋಕ್ತಿರತಿಹೇಯಮತೋಽಖಿಲೈಃ ।

ಬುಭೂಷಿಭಿರ್ಮತಮಿದಂ ಜೀವೇಶಾಭೇದವಾದಿನಃ ॥೧೫೫॥

ಈಶ್ವರನು ಸರ್ವಸಮರ್ಥನಲ್ಲ, ಜಗತ್ತು ಮಿಥ್ಯೆಯು, ಮುಕ್ತನು ದುಃಖಿಯು, ಭೇದವಿಲ್ಲ ಇತ್ಯಾದಿ ಸ್ವವಚನವಿರುದ್ಧವೂ ಪ್ರಮಾಣವಿರುದ್ಧವೂ ಆದುದನ್ನು ಹೇಳುವುದು ಎಲ್ಲ ದೋಷಗಳಿಗಿಂತಲೂ ಅತ್ಯಂತ ಅಧಿಕವಾದುದು. ಹೀಗೆ ಬ್ರಹ್ಮತರ್ಕದ ವಚನವಿದೆ. ಆದಕಾರಣ ಜೀವೇಶ್ವರರಿಗೆ ಅಭೇದವನ್ನು ಹೇಳುವ, ಅಂದರೆ ಈಶನಿಗೆ ಅನೀಶತ್ವವನ್ನು ಆಪಾದಿಸುವ ಈ ಮತವು ಎಲ್ಲ ಜಿಜ್ಞಾಸುಗಳಿಂದ ಅತ್ಯಂತವಾಗಿ ಬಿಡತಕ್ಕದ್ದು.

ಈಶತ್ವೇಽನೀಶಭೇದೇನ ಇತ್ಯಾದಿಗಳಿಂದ ಹೇಳಲ್ಪಟ್ಟ ಅರ್ಥದಲ್ಲಿ ಸ್ಮೃತಿಯನ್ನು

ಕೂಡ ಹೇಳುತ್ತಾರೆ –

ನಾಯುಕ್ತಮೀಶಿತುಃ ಕಿಂಚಿದೀಶತ್ವಸ್ಯಾವಿರೋಧಿ ಯತ್ ।

ಯದೀಶತ್ವವಿರೋಧಿ ಸ್ಯಾತ್ತದೇವಾಯುಕ್ತಮಂಜಸಾ ।।೧೫೬।।

ಈಶತ್ವಸ್ಯಾವಿರೋಧೇನ ಯೋಜಯಿತ್ವಾಖಿಲಾಃ ಪ್ರಮಾಃ ।

ಸಿದ್ಧೇಶತ್ವೇನ ಚಾಯುಕ್ತಮಪಿ ಹೀಶೇನ ಯೋಜಯೇತ್ ।।೧೫೭।।

ಮಾನತಃ ಪ್ರಾಪ್ತಮಖಿಲಂ ನಾಮಾನಂ ಯೋಜಯೇತ್ಕ್ವಚಿತ್ ।

ಇತಿ ಹಿ ಬ್ರಹ್ಮತರ್ಕೋಕ್ತಿರತೋ ಯುಕ್ತಮಿಹೋದಿತಮ್ ।।೧೫೮।।

ಅಣುತ್ವ ಮಹತ್ವಾದಿಗಳು ಈಶ್ವರತ್ವಕ್ಕೆ ಅವಿರೋಧಿಯಾದುದರಿಂದ ಸರ್ವ ಸ್ವಾಮಿಯಾದ ಶ್ರೀಹರಿಗೆ ಅಯುಕ್ತವಾದುದಲ್ಲ. ಆದರೆ ಜೀವೇಶ್ವರ ಐಕ್ಯವು ಈಶತ್ವಕ್ಕೆ ವಿರೋಧಿಯಾದುದರಿಂದ ಅದೇ ಸ್ಪಷ್ಟವಾಗಿ ಅಯುಕ್ತವು. ಈಶತ್ವಕ್ಕೆ ಅವಿರೋಧವಾಗಿಯೇ ಎಲ್ಲ ಪ್ರಮಾಣಗಳನ್ನೂ ಸಿದ್ಧವಾದ ಈಶತ್ವ ನಿಮಿತ್ತದಿಂದ ಕೂಡಿಸತಕ್ಕದ್ದು. ಲೋಕದೃಷ್ಟಿಯಿಂದ ಅಯುಕ್ತವೆಂದು ಕಂಡರೂ ಪ್ರಮಾಣ ಪ್ರಾಪ್ತ ವಾದ ಎಲ್ಲವನ್ನೂ ಈಶತ್ವಕ್ಕೆ ಅವಿರೋಧವಾಗಿಯೇ ಯೋಜಿಸಬೇಕು. ಅಪ್ರಮಾಣ ವಾದ ಐಕ್ಯಾದಿಗಳನ್ನು ಎಲ್ಲಿಯೂ ಕೂಡಿಸತಕ್ಕದ್ದಲ್ಲ. ಹೀಗೆ ಬ್ರಹ್ಮತರ್ಕವಚನವು ಪ್ರಸಿದ್ಧವು. ಆದ್ದರಿಂದ ಜೀವನು ಬ್ರಹ್ಮನಿಂದ ಅತ್ಯಂತ ಭಿನ್ನನೇ ಎಂದು ಸಿದ್ಧವಾಯಿತು.

ಅರೂಪಾಧಿಕರಣಮ್

ಓಂ ಅರೂಪವದೇವ ಹಿ ತತ್ಪ್ರಧಾನತ್ವಾತ್ ಓಂ

ಸೂತ್ರಾರ್ಥ– ಬ್ರಹ್ಮನಿಗೆ ಪ್ರಕೃತ್ಯಾದಿಗಳಿಂದ ಉತ್ತಮತ್ವವಿದ್ದ ಪ್ರಯುಕ್ತ ಬ್ರಹ್ಮನು ಪ್ರಾಕೃತಾದಿ ದೋಷರಹಿತನೇ ಆಗಿರುವನು.

ಈ ಅಧಿಕರಣದಲ್ಲಿ ಪ್ರಥಮ ಸೂತ್ರದಿಂದ ಬ್ರಹ್ಮನಿಗೆ ರೂಪವಿಲ್ಲವೆಂದು ಉಪಪಾದಿಸಿ, ಪ್ರಕಾಶವಚ್ಚಾವೈಯರ್ಥ್ಯಂ ಎಂಬ ದ್ವಿತೀಯ ಸೂತ್ರದಿಂದ ಬ್ರಹ್ಮನಿಗೆ ವಿಲಕ್ಷಣವಾದ ರೂಪವಿದೆಯೆಂದು ನಿರೂಪಿಸುವ ಮೂಲಕ ರೂಪವತ್ವ ವಿಷಯಕ ಶ್ರುತಿಗಳಿಗೆ ವೈಯರ್ಥ್ಯವನ್ನು ಪರಿಹರಿಸಿದರು. ವಿಲಕ್ಷಣರೂಪವತ್ವವಾದರೂ 'ಆಹ ಚ ತನ್ಮಾತ್ರಂ' 'ದರ್ಶಯತಿ ಚಾಥೋಽಪಿ ಸ್ಮರ್ಯತೇ' ಎನ್ನುವ ಸೂತ್ರಗಳಿಂದ ಸಮರ್ಥಿಸಿದರೆಂದು ಭಾಷ್ಯದಿಂದ ತೋರುತ್ತದೆ. ಅದು ಯುಕ್ತವಲ್ಲ. ರೂಪವತ್ವವನ್ನು ಅಂಗೀಕರಿಸಿದರೆ 'ಅರೂಪವದೇವ ಹಿ ತತ್' ಎಂಬ ಸೂತ್ರಕ್ಕೆ ಅಪ್ರಯೋಜನತ್ವಾ ಶಂಕೆಯು ಬರುವುದರಿಂದ ಅದನ್ನು ಹೇಳುವ ಅಗತ್ಯವಿರಲಿಲ್ಲ ಎಂದರೆ, ಈ ನಾಲ್ಕು ಸೂತ್ರಗಳ ತಾತ್ಪರ್ಯವನ್ನು ಹೇಳುತ್ತಾರೆ –

ಸ ಚಾಪ್ರಾಕೃತರೂಪತ್ವಾದರೂಪಃ ಸ್ವಗುಣಾತ್ಮಕಮ್ ।

ರೂಪಮಸ್ಯ ಶಿರಃಪಾಣಿಪಾದಾದ್ಯಾತ್ಮಕಮಿಷ್ಯತೇ ॥೧೫೯॥

ಅತೋ ನಾನಿತ್ಯತಾ ನೈವ ಶ್ರುತಿದ್ವಯವಿರೋಧಿತಾ ।

ಆ ಪರಮಾತ್ಮನಾದರೋ ಅಪ್ರಾಕೃತರೂಪನು. ಅಂದರೆ ಪ್ರಾಕೃತರೂಪವಿಲ್ಲ. ಈ ತತ್ವವನ್ನು ನಿರೂಪಿಸುವ ಸಲುವಾಗಿ ಅವನನ್ನು ಅರೂಪನೆಂದು ಹೇಳುತ್ತಾರೆ. ಪರಮಾತ್ಮನು ಸ್ವಗುಣಾತ್ಮಕ ಸ್ವರೂಪನು. ಪರಮಾತ್ಮನ ಆನಂದಾದಿ ಗುಣಗಳೂ, ಶಿರಸ್ಸು ಹಸ್ತ ಪಾದಾದಿ ಅವಯಗಳೂ ಅವನ ಸ್ವರೂಪಭೂತವಾದವು. ಆದಕಾರಣ ಅವನು ಅಪ್ರಾಕೃತರೂಪವುಳ್ಳವನು ಎಂದು ಅಂಗೀಕರಿಸತಕ್ಕದ್ದು. ಆದಕಾರಣ ಜನ್ಮ ಮರಣರೂಪವಾದ ಅನಿತ್ಯತೆಯು ಇಲ್ಲ. ರೂಪವತ್ವ ಅರೂಪವತ್ವಗಳನ್ನು ಹೇಳುವ ಶ್ರುತಿಗಳಿಗೆ ವಿರೋಧವು ಇಲ್ಲವೇ ಇಲ್ಲ.

ಪರಮಾತ್ಮನಿಗೆ ರೂಪವಿದ್ದರೆ ಅರೂಪತ್ವ ವ್ಯವಹಾರವು ಹೇಗೆ ಕೂಡುತ್ತದೆ ಎಂಬ ಆಶಂಕೆಯನ್ನು ಪರಹರಿಸಲಿಕ್ಕೆ 'ಪ್ರಕಾಶವತ್' ಎನ್ನುವ ಸೂತ್ರಾವಯವವನ್ನು ಭಾಷ್ಯದಲ್ಲಿ ವ್ಯಾಖ್ಯಾನ ಮಾಡಿದರು. ಈಶ್ವರ ರೂಪವು ಲೋಕವಿಲಕ್ಷಣವಾದರೆ ಆಗ ಅಲ್ಲಿ ರೂಪಶಬ್ದದ ಪ್ರವೃತ್ತಿಯು ಕೂಡದೇ ಹೋಗುವುದು. ಹಾಗೂ ರೂಪವತ್ವ ಪ್ರತಿಪಾದಕ ಶ್ರುತಿಗಳಿಗೆ ವೈಯರ್ಥ್ಯವನ್ನು ಪರಿಹರಿಸಲಿಕ್ಕೆ ಅಶಕ್ಯವಾಗುವುದು ಎನ್ನುವ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಇಲ್ಲಿ ವ್ಯಾಖ್ಯಾನ ಮಾಡುತ್ತಾರೆ –

ಯಥಾ ಹಿ ತೈಜಸಸ್ಯೈವ ಪ್ರಕಾಶಸ್ಯೋಜ್ಝಿತಾವಪಿ ॥೧೬೦॥

ಆತ್ಮೈವ ಜ್ಯೋತಿರಿತ್ಯಾಹ ಜೀವಸ್ಯೇಶಂ ಶ್ರುತಿಸ್ತಥಾ ।

ಹೇಗೆ ಸೂರ್ಯಾದಿ ತೇಜೋರೂಪವಾದ ವಸ್ತುಗಳ ಪ್ರಕಾಶಕ್ಕೆ ಪರಮೇಶ್ವರನು ಕಾರಣನು ಎಂಬ ಪ್ರಸಿದ್ಧಿಯಿಲ್ಲದಿದ್ದರೂ, ಪರಬ್ರಹ್ಮನೇ ಅವುಗಳಿಗೆ ಜ್ಯೋತಿಯು ಅಂದರೆ ಪ್ರಕಾಶಕನು ಎಂಬುದಾಗಿ ಶ್ರುತಿಯು ಹೇಳುತ್ತದೆಯೋ ಹಾಗೆಯೇ ಲೋಕ ವಿಲಕ್ಷಣವಾಗಿದ್ದರೂ ಭಗವದ್ರೂಪದಲ್ಲಿ ರೂಪಶಬ್ದಪ್ರವೃತ್ತಿಯು ಯುಕ್ತವೇ ಆಗಿದೆ.

ವೃದ್ಧಿಹ್ರಾಸಾಧಿಕರಣಮ್

ಓಂ ವೃದ್ಧಿಹ್ರಾಸಭಾಕ್ತ್ವಮಂತರ್ಭಾವಾದುಭಯಸಾಮಂಜಸ್ಯಾದೇವಮ್ ಓಂ

ಸೂತ್ರಾರ್ಥ: ಭಕ್ತಿಯಲ್ಲಿ ಹೆಚ್ಚು ಕಡಿಮೆ ಎಂಬುದಾಗಿ ತಾರತಮ್ಯವಿದೆ. ಹೆಚ್ಚಿನ ಭಕ್ತಿಯುಳ್ಳ ಬ್ರಹ್ಮಾದಿಗಳಿಗೆ ಮಹಾಫಲ, ಕಡಿಮೆ ಭಕ್ತಿಯುಳ್ಳ ಮನುಷ್ಯರಿಗೆ ಅಲ್ಪ ಫಲ. ಹೀಗೆ ಭಕ್ತಿಯಲ್ಲಿ ತಾರತಮ್ಯವನ್ನು ಅಂಗೀಕರಿಸಿದರೆ ಮಾತ್ರ ಶ್ರೀಹರಿಗೆ ಬ್ರಹ್ಮಾದಿಗಳು ಹಾಗೂ ಅಸ್ಮದಾದಿಗಳ ವಿಷಯದಲ್ಲಿ ಸಾಮಂಜಸ್ಯವು ಕೂಡುವುದು.

ಯಾವುದಕ್ಕಾಗಿ ಭಗವನ್ಮಹಿಮೆಯು ಇಲ್ಲಿ ಹೇಳಲಾಗುವುದೋ ಆ ಭಕ್ತಿಯು

ಪುರುಷರಲ್ಲಿ ತಾರತಮ್ಯದಿಂದ ಇರುವುದು ಎಂದು ಇಲ್ಲಿ ಉಪಪಾದಿಸಲ್ಪಡುತ್ತದೆ. ಭಕ್ತಿಯಲ್ಲಿ ವೃದ್ಧಿಹ್ರಾಸಗಳು ಇವೆ ಎಂದು ಅಂಗೀಕರಿಸಿದರೆ ಮಾತ್ರ ಭಕ್ತಿಗೆ ತಕ್ಕಂತೆ ಹೆಚ್ಚು ಕಡಿಮೆ ಫಲವನ್ನು ಕೊಡುವ ಈಶ್ವರನಲ್ಲಿ ವೈಷಮ್ಯವಿಲ್ಲ ಎನ್ನುವುದು ಕೂಡುವುದು ಎಂದು ಹೇಳುತ್ತಾರೆ –

ತದ್ಭಕ್ತಿತಾರತಮ್ಯೇನ ತಾರತಮ್ಯಂ ವಿಮುಕ್ತಿಗಮ್ ॥೧೬೧॥

ಬ್ರಹ್ಮಾದೀನಾಂ ಚ ಸರ್ವೇಷಾಮಾನಂದಾದೇರ್ಯಥಾಕ್ರಮಮ್ ।

ಬ್ರಹ್ಮಾದಿ ಎಲ್ಲ ದೇವತೆಗಳಿಗೂ ಹಾಗೂ ನಮ್ಮೆಲ್ಲರಿಗೂ, ಶ್ರುತಿಯಲ್ಲಿ ಹೇಳಿರುವ ಕ್ರಮದಂತೆ, ಮೋಕ್ಷದಲ್ಲಿರತಕ್ಕ ಆನಂದಾದಿಗಳ ತಾರತಮ್ಯವು ನಾವು ಭಗವಂತನಲ್ಲಿ ಮಾಡುವ ಭಕ್ತಿಯಲ್ಲಿನ ತಾರತಮ್ಯಕ್ಕೆ ಅನುಗುಣವಾಗಿಯೇ ಇರುವುದು. 'ಅಥಾತ ಆನಂದಸ್ಯ ಮೀಮಾಂಸಾ ಭವತಿ' ಇತ್ಯಾದಿ ಶ್ರುತಿಯಿಂದ ತಾರತಮ್ಯವು ತಿಳಿದು ಬರುತ್ತದೆ. ಸಾಧ್ಯವೆನಿಸಿದ ಫಲದ ತಾರತಮ್ಯದಲ್ಲಿ ಸಾಧನೀಭೂತವಾದ ಭಕ್ತಿಯಲ್ಲಿ ತಾರತಮ್ಯವನ್ನು ಅವಶ್ಯವಾಗಿ ಒಪ್ಪಲೇಬೇಕು. ಇಲ್ಲದಿದ್ದರೆ ನಿರ್ದೋಷನಾದ ಭಗವಂತನಲ್ಲಿ ಇಲ್ಲದ ಅಸಾಮಂಜಸ್ಯ ದೋಷವನ್ನು ಆಪಾದಿಸಿದಂತಾಗುವುದು.

ಸ್ಥಾನವಿಶೇಷಾಧಿಕರಣಮ್

ಓಂ ಸ್ಥಾನವಿಶೇಷಾತ್ಪ್ರಕಾಶಾದಿವತ್ ಓಂ

ಓಂ ಉಪಪತ್ತೇಶ್ಚ ಓಂ

ಬಿಂಬನಾದ ಭಗವಂತನಲ್ಲಿ ತಾರತಮ್ಯವಿಲ್ಲದಿರುವ ಪ್ರಯುಕ್ತ ಪ್ರತಿಬಿಂಬಗಳಾದ ಬ್ರಹ್ಮಾದಿಗಳ ಆನಂದದಲ್ಲಿ ತಾರತಮ್ಯವು ಕೂಡುವುದಿಲ್ಲ. ತಾರತಮ್ಯ ಒಪ್ಪುವುದೇ ಆದರೆ ಆಗ ಬ್ರಹ್ಮಾದಿಗಳ ಆನಂದವು ಭಗವದಾನಂದಕ್ಕೆ ಪ್ರತಿಬಿಂಬವಾಗುವುದಿಲ್ಲ. ಆದ್ದರಿಂದ ಭಕ್ತಿಯಲ್ಲಿ ತಾರತಮ್ಯವೂ ಕೂಡುವುದಿಲ್ಲ ಎಂದು ಆಶಂಕಿಸಿದರೆ –

ಪ್ರತಿಬಿಂಬವದಪ್ಯೇಷಾಮಾನಂದೋಽನ್ಯಗುಣಾ ಯಥಾ ॥೧೬೨॥

ಬ್ರಹ್ಮಾದಿಗಳ ಆನಂದವು ಪ್ರಸಿದ್ಧ ಸೂರ್ಯಾದಿ ಪ್ರತಿಬಿಂಬಗಳಂತೆ ಇರುತ್ತದೆ. ಅಂದರೆ ಅವರ ಆನಂದವು ಭಗವದಾನಂದ ಪ್ರತಿಬಿಂಬವೇ ಆಗಿದ್ದರೂ ಕೂಡ, ಸ್ವರೂಪೋಪಾಧಿ ಗುಣಗಳಲ್ಲಿ ವೈಚಿತ್ರ್ಯವಿರುವ ಪ್ರಯುಕ್ತ ಆನಂದದಲ್ಲಿಯೂ ವೈಚಿತ್ರ್ಯವಿರುವುದು. ಹೇಗೆಂದರೆ – ಜಲ, ಸೂರ್ಯಕಾಂತ ಮುಂತಾದವುಗಳಲ್ಲಿ ಇರತಕ್ಕ ಪ್ರತಿಬಿಂಬಗಳಿಗೆ ಸೂರ್ಯಾದಿ ಬಿಂಬದಲ್ಲಿ ವೈಚಿತ್ರ್ಯವಿಲ್ಲದಿದ್ದರೂ, ಸೂರ್ಯಕಾಂತಾದಿ ಸ್ಥಾನಗುಣ ವೈಚಿತ್ರ್ಯದಿಂದ ವೈಚಿತ್ರ್ಯವು ಕೂಡುವುದು.

ವೈಚಿತ್ರ್ಯದಲ್ಲಿ ಇನ್ನೊಂದು ಹೇತುವನ್ನು ಹೇಳುತ್ತಾರೆ –

ನಾರಾಯಣಗುಣಾಧೀನಶ್ಚ ಅತ್ಯಲ್ಪಸ್ತದಪೇಕ್ಷಯಾ ।

ತಸ್ಮಾದ್ಭಿನ್ನಶ್ಚ ಸತತಂ ಅನ್ಯಜ್ಞಾನಂ ಪರಸ್ಯ ಚ ॥೧೬೩॥

ಅನ್ಯಜ್ಞಾನಂ ತು ಜೀವಾನಾಮನ್ಯ ಆನಂದ ಈಶತಾ ।

ಮುಖ್ಯೇಶತಾ ಪರೇಶಸ್ಯ ಗೌಣೇ ಜೀವಸ್ಯ ಸಾ ಯತಃ ॥೧೬೪॥

ಇತಿ ಶ್ರುತೇಃ ..... ।

ಬ್ರಹ್ಮಾದಿಗಳ ಆನಂದವು ಭಗವಂತನ ಆನಂದದ ಅಧೀನವೂ, ತತ್ಸದೃಶವೂ ಆಗಿದೆ. ಆ ಆನಂದವು ಭಗವಂತನ ಆನಂದಕ್ಕಿಂತ ಅತ್ಯಂತ ಅಲ್ಪವೇ ಆದುದರಿಂದ ಯಾವಾಗಲೂ ಭಿನ್ನವೇ ಆಗಿರುವುದು.

ಈಶ್ವರನ ಆನಂದಕ್ಕಿಂತ ಜೀವರ ಆನಂದವು ಅತ್ಯಲ್ಪವೇಕೆ ಎಂದರೆ ಅದಕ್ಕೆ ಪ್ರಮಾಣವನ್ನು ಹೇಳುತ್ತಾರೆ –

ಶ್ರೀಹರಿಯ ಜ್ಞಾನವು ವಿಲಕ್ಷಣವು. ಜೀವರ ಜ್ಞಾನವಾದರೂ ವಿಲಕ್ಷಣವು. ಆನಂದವು ವಿಲಕ್ಷಣವಾದುದು, ಈಶತ್ವವೂ (ನಿಯಾಮಕತ್ವ) ವಿಲಕ್ಷಣವಾದುದು. ಶ್ರೀಹರಿಗೆ ಮುಖ್ಯವಾದ ಈಶತ್ವವು, ಜೀವರಿಗೆ ಅಮುಖ್ಯ ಈಶತ್ವವು. ಹೀಗೆ ಶ್ರುತಿ ಇರುವ ಪ್ರಯುಕ್ತ ಬ್ರಹ್ಮಾದಿಗಳ ಆನಂದವು ಈಶ್ವರನ ಆನಂದಕ್ಕಿಂತ ವಿಲಕ್ಷಣ ಹಾಗೂ ಅತ್ಯಲ್ಪ ಎನ್ನುವುದು ಯುಕ್ತವಾಗುತ್ತದೆ.

ಪ್ರಕೃತ್ಯೈತಾವತ್ತ್ವಾಧಿಕರಣಮ್

ಓಂ ಪ್ರಕೃತ್ಯೈತಾವತ್ತ್ವಂ ಹಿ ಪ್ರತಿಷೇಧತಿ ತತೋ ಬ್ರವೀತಿ ಚ ಭೂಯಃ ಓಂ

ಶ್ರೀಹರಿಗೆ ಸೃಷ್ಟಿ ಸಂಹಾರಗಳ ಕರ್ತೃತ್ವ ಮಾತ್ರವಿರುವುದು, ಪಾಲಕತ್ವವಲ್ಲ. ಅದು ಸ್ವತಃ ಸಿದ್ಧವಾಗಿದೆ ಎಂದು ಭಾಷ್ಯದಲ್ಲಿ ಮಾಡಿದ ಪೂರ್ವಪಕ್ಷವು ಯುಕ್ತವಲ್ಲ. ಸ್ವಭಾವವನ್ನು ಆಶ್ರಯಿಸಿ ಪಾಲಕತ್ವವನ್ನು ಅಪಲಾಪ ಮಾಡಿದರೆ, ಸಮಾನ ನ್ಯಾಯದಿಂದ ಸೃಷ್ಟಿ ಸಂಹಾರಗಳ ಕರ್ತೃತ್ವವೂ ಕೂಡದೇ ಹೋಗುವುದು ಎಂದರೆ, ಪೂರ್ವಪಕ್ಷವನ್ನು ವಿವರಿಸುತ್ತಾರೆ –

..... ಸೃಷ್ಟಿನಾಶೌ ತದಧೀನಾವಿತೀರಿತೇ ।

ಸ್ವಭಾವತ್ವಾತ್ಸ್ಥಿತೇರ್ನೈತದಪೇಕ್ಷೇತಿ ನ ಯುಜ್ಯತೇ ॥೧೬೫॥

ಯತಃ ಸ್ವಭಾವೋಽಪ್ಯಖಿಲ ಈಶಾಯತ್ತೋಽಖಿಲಸ್ಯ ಚ ।

ಸೃಷ್ಟಿನಾಶಗಳು ಈಶ್ವರನ ಅಧೀನವೆಂದು ಸಿದ್ಧಾಂತಿಗಳು ಒಪ್ಪಿರುವಾಗ, ಸ್ಥಿತಿಗೆ ಸ್ವಭಾವಸಿದ್ಧತ್ವ ಪ್ರಯುಕ್ತ ಈಶ್ವರನ ಅಪೇಕ್ಷೆಯು ಇಲ್ಲ ಎನ್ನುವ ಆಶಂಕೆಯು ಕೂಡುವುದಿಲ್ಲ. ಏಕೆಂದರೆ ಎಲ್ಲ ಪದಾರ್ಥಗಳ ಎಲ್ಲ ಸ್ವಭಾವವೂ ಕೂಡ ಈಶ್ವರನ ಅಧೀನವು. ಹೀಗೆ ಒಪ್ಪದಿದ್ದರೆ ಅವುಗಳಿಗೇ ಸ್ವಾತಂತ್ರ್ಯವು ಬರಬೇಕಾಗುವುದು,

ಶ್ರೀಹರಿಗೆ ಈಶ್ವರತ್ವವು ಕೂಡದೇ ಹೋಗುವುದು. 'ಸರ್ವಂ ಖಲ್ವಿದಂ' ಇತ್ಯಾದಿ ಸರ್ವಕ್ಕೂ ಪರಮಾತ್ಮನ ಅಧೀನತ್ವವನ್ನು ಪ್ರತಿಪಾದಿಸುವ ಶ್ರುತಿಗೆ ವಿರೋಧವೂ ಬರುವುದು. ಸೃಷ್ಟಿ ಹಾಗೂ ಸಂಹಾರಗಳನ್ನು ಮಾಡುವವರೂ ಅನ್ನದಾನಾದಿಗಳನ್ನು ನೀಡುವುದರ ಮೂಲಕ ಪಾಲನ ರೂಪವಾದ ಸ್ಥಿತಿಕರ್ತೃತ್ವವನ್ನು ಹೊಂದಿರುವುದು ಲೋಕದಲ್ಲಿ ಕಂಡಿದೆ. ಆದುದರಿಂದ ಶ್ರೀಹರಿಗೆ ಸೃಷ್ಟಿಸಂಹಾರ ಮಾತ್ರವಲ್ಲ, ಪಾಲಕತ್ವವೂ ಇದ್ದೇ ಇರುವುದು.

ಅವ್ಯಕ್ತಾಧಿಕರಣಮ್

ಓಂ ತದವ್ಯಕ್ತಮಾಹ ಹಿ ಓಂ

ಪರಮಾತ್ಮನಿಗೆ ಅವ್ಯಕ್ತತ್ವವನ್ನು ಈ ಅಧಿಕರಣದ ಆದಿಯಲ್ಲಿ ವಿಸ್ತಾರವಾಗಿ ಸಮರ್ಥಿಸಿರುವರು. ಹಾಗಾದರೆ ಭಕ್ತ್ಯಾದಿ ಸಾಧನಗಳಿಗೆ ನಿಷ್ಪ್ರಯೋಜಕತ್ವವೆಂದು ಆಶಂಕಿಸಿ, 'ಪ್ರಕಾಶಶ್ಚ ಕರ್ಮಣ್ಯಭ್ಯಾಸಾತ್' ಎಂಬುದಾಗಿ ದೃಶ್ಯತ್ವವನ್ನೂ ಹೇಳಿದರು. ಅವೆರಡು ಪರಸ್ಪರ ವಿರುದ್ಧವೆಂದು ಆಶಂಕಿಸಿ, 'ಅತೋಽನಂತೇನ ತಥಾ ಹಿ ಲಿಂಗಂ' ಎನ್ನುವ ಸೂತ್ರದಿಂದ ವಿರೋಧವನ್ನು ಪರಿಹರಿಸಿದರು. ಆ ವಿರೋಧ ಪರಿಹಾರವು ಸ್ಫುಟವಾಗಿ ತೋರುವುದಿಲ್ಲ ಎಂದರೆ ಅದರ ತಾತ್ಪರ್ಯವನ್ನು ಇಲ್ಲಿ ಹೇಳುತ್ತಾರೆ –

ಅವ್ಯಕ್ತೋಽಪಿ ಸ್ವಶಕ್ತ್ಯೈವ ಭಕ್ತಾನಾಂ ದೃಶ್ಯತೇ ಹರಿಃ ॥೧೬೬॥

ಶ್ರೀಹರಿಯು ಭಕ್ತರಾದ ಜೀವರ ಶಕ್ತಿಯ ಅಪೇಕ್ಷೆಯಿಂದ ಅವ್ಯಕ್ತನಾಗಿದ್ದರೂ, ಭಕ್ತರಿಗೆ ಅನುಗ್ರಹಿಸಲಿಕ್ಕೆ ತನ್ನ ಶಕ್ತಿಯಿಂದಲೇ ಕಾಣಿಸಿಕೊಳ್ಳುತ್ತಾನೆ. ಶ್ರೀಹರಿಯು ಅವ್ಯಕ್ತನಾಗಿದ್ದರೂ, ಅಚಿಂತ್ಯಾದ್ಭುತ ಶಕ್ತಿಯ ನಿಮಿತ್ತದಿಂದ ವ್ಯಕ್ತತ್ವವೂ ಕೂಡುವುದು.

ಅಹಿಕುಂಡಲಾಧಿಕರಣಮ್

(ಉಭಯವ್ಯಪದೇಶಾಧಿಕರಣಮ್)

ಓಂ ಉಭಯವ್ಯಪದೇಶಾತ್ತ್ವಹಿಕುಂಡಲವತ್ ಓಂ

ಈಶ್ವರನ ಗುಣಕ್ರಿಯಾದಿ ಧರ್ಮಗಳು ಅವನಿಂದ ಭಿನ್ನಗಳಾದರೆ ಆಗ ಸಮವಾಯವು ನಿರಾಕೃತವಾಗುವುದರಿಂದ ಗುಣಾದಿಮತ್ವವು ಅಯುಕ್ತವಾಗುವುದು. ಅಭಿನ್ನವೆಂದು ಹೇಳಿದರೆ ಆಗ ಜ್ಞಾನಾದಿಮತ್ವ ಆನಂದಾದಿ ಭೋಕ್ತೃತ್ವ ಇತ್ಯಾದಿಗಳು ಕೂಡದೇ ಹೋಗುವುದು. ಈ ಪ್ರಕಾರವಾಗಿ ಎರಡು ವಿಧದಿಂದಲೂ ಭಕ್ತಿಯು ಕೂಡಲಾರದು. ಹೀಗೆ ಪೂರ್ವಪಕ್ಷ ಬಂದರೆ ಇಲ್ಲಿ ಹೇತು ದೃಷ್ಟಾಂತಗಳು ಮಾತ್ರ ಸೂಚಿತವಾಗಿವೆ, ಪಕ್ಷಪರಿಗ್ರಹರೂಪವಾದ ಪ್ರತಿಜ್ಞೆಯಲ್ಲ. ಆದ್ದರಿಂದ 'ತದಭಿನ್ನಾ' ಇತ್ಯಾದಿ ವಚನದಿಂದ ಪ್ರತಿಜ್ಞೆಯನ್ನು ತೋರಿಸುತ್ತಾರೆ –

ತದಭಿನ್ನಾ ಗುಣಾ ನಿತ್ಯಮಪಿ ಸರ್ವೇ ವಿಶೇಷತಃ ।

ಗುಣತ್ವೇನ ಗುಣಿತ್ವೇನ ಭೋಕ್ತೃಭೋಗ್ಯತಯಾ ಸ್ಥಿತಾಃ ।।೧೬೭।।

ಪರಮೇಶ್ವರನ ಎಲ್ಲ ಗುಣಗಳೂ ನಿತ್ಯ ಅಂದರೆ ನಿಯಮೇನ ಅವನಿಂದ ಅತ್ಯಂತಾಭಿನ್ನಗಳು. ಹಾಗಿದ್ದರೂ ವಿಶೇಷದ ಬಲದಿಂದ ಗುಣಗುಣಿ ಭಾವದಿಂದಲೂ, ಭೋಕ್ತೃಭೋಗ್ಯ ಭಾವದಿಂದಲೂ ಇರುತ್ತವೆ.

ಹಾಗಾದರೆ ಯಾವದ್ದ್ರವ್ಯಭಾವಿಯಾದ ಪರಿಮಾಣಾದಿಗಳಿಗೆ ಪರಮಾತ್ಮನಿಂದ ಅತ್ಯಂತಾಭೇದವು ಇರಲಿ. ಆದರೆ ಅನಿತ್ಯಗಳೆಂದು ತಿಳಿಯಲ್ಪಟ್ಟಿರುವ ಸೃಷ್ಟ್ಯಾದಿ ಕ್ರಿಯೆಗಳು, ಜ್ಞಾನ–ಆನಂದಾದಿ ಗುಣಗಳು ಇತ್ಯಾದಿಗಳಿಗೆ ಪರಮಾತ್ಮನೊಂದಿಗೆ ಅತ್ಯಂತಾಭೇದವು ಕೂಡುವುದಿಲ್ಲ ಎಂದರೆ –

ವಿಶೇಷಾತ್ಮತಯಾ ತೇಷಾಂ ನಿತ್ಯಶಕ್ತ್ಯಾತ್ಮನಾ ತಥಾ ।

ನಿತ್ಯಂ ಸ್ಥಿತೇರ್ನ ಧರ್ಮಾಣಾಂ ಕ್ರಿಯಾದೀನಾಮನಿತ್ಯತಾ ।।೧೬೮।।

ಪರಮೇಶ್ವರನ ಸಂಬಂಧಿಗಳಾದ ಕ್ರಿಯಾದಿ ಧರ್ಮಗಳು ನಿತ್ಯವು. ಏಕೆಂದರೆ ಅವು ನಿತ್ಯಶಕ್ತಿರೂಪದಿಂದ ನಿತ್ಯದಲ್ಲಿಯೂ ಇರುತ್ತವೆ. ಹಾಗಿದ್ದರೂ ವ್ಯಕ್ತರೂಪದಿಂದ ವ್ಯವಹಾರ ವಿಷಯತ್ವವು ಕೂಡುವುದು. ಆದ್ದರಿಂದ ಅನಿತ್ಯತ್ವವು ಕೂಡುವುದಿಲ್ಲ.

ಹಾಗಾದರೆ ಕ್ರಿಯಾದಿಗಳಿಗೆ ಯಾವ ವ್ಯಕ್ತತ್ವವು ಹೇಳಲ್ಪಟಿದೆಯೋ ಅದು ಅನಿತ್ಯವೇ. ಇಲ್ಲವಾದರೆ ನಿತ್ಯದ ವ್ಯವಹಾರಕ್ಕೆ ನಿರಾಧಾರತ್ವ ಬರುತ್ತದೆ. ಆದ್ದರಿಂದ ಆ ವ್ಯಕ್ತತ್ವವು ಭಗವದ್ಧರ್ಮರೂಪವಾಗಿದ್ದರೂ ಅದಕ್ಕೆ ಅತ್ಯಂತಾಭೇದವು ಕೂಡದೇ ಹೋಗುವುದು ಎಂದರೆ –

ನ ವಿಶೇಷಾತ್ಮತಾ ಚೇಯಮನಿತ್ಯಾ ಶಕ್ತಿರೂಪತಾ ।

ಸೈವ ಯತ್ಸವಿಶೇಷಾ ಸ್ಯಾದ್.....।।

ವ್ಯವಹಾರಕ್ಕೆ ವಿಷಯವಾಗಿ ಹೇಳಲ್ಪಟ್ಟ ವ್ಯಕ್ತತ್ವವು ಅನಿತ್ಯವಾದುದಲ್ಲ. ಆ ವಿಶೇಷ ಸ್ವರೂಪತ್ವವು ಶಕ್ತಿರೂಪತ್ವವೇ ಆಗಿದೆ. ಆ ಶಕ್ತಿಯಾದರೋ ನಿತ್ಯವೆಂದು ಹೇಳಲ್ಪಟ್ಟಿದೆ. ಆದ್ದರಿಂದ ಅನಿತ್ಯವಲ್ಲ. ಹಾಗಾದರೆ ಶಕ್ತಿ ವ್ಯಕ್ತಿ ಎಂಬ ವ್ಯವಹಾರಕ್ಕೆ ವಿಶೇಷವೇ ಇರುವುದಿಲ್ಲ ಎಂದು ಹೇಳಕೂಡದು. ಏಕೆಂದರೆ ಆ ವ್ಯಕ್ತಿಯು ಶಕ್ತಿಯಿಂದ ಸವಿಶೇಷಾಭಿನ್ನವೇ ಆಗಿದೆ.

.....ವಿಶೇಷೋऽನ್ಯೋ ನ ಚಾಪ್ಯಯಮ್ ।।೧೬೯।।

ಸ್ವನಿರ್ವಾಹಕತಾಹೇತೋಸ್ತಥಾಪಿ ಸ್ಯಾದ್ವಿಶೇಷತಾ ।

ಹಾಗಾದರೆ ಸರ್ವ ನಿರ್ವಾಹಕ ಹೇತುವಾದ ವಿಶೇಷವು ಭಗವಂತನಿಂದ ಭಿನ್ನವಾದರೆ ಆಗ ಎಲ್ಲ ಭಗವದ್ಧರ್ಮಗಳಿಗೆ ಭಗವಂತನಿಂದ ಅತ್ಯಂತಾಭೇದವೆಂಬ ಪ್ರತಿಜ್ಞೆಗೆ ಭಂಗ ಬರುವುದು. ಅಭಿನ್ನವೆಂದರೆ ವಿಶೇಷತ್ವವೇ ಕೂಡುವುದಿಲ್ಲ ಎಂದರೆ,

ಈ ವಿಶೇಷವಾದರೂ ಭಗವಂತನಿಂದ ಭಿನ್ನವಾದುದು ಅಲ್ಲವೇ ಅಲ್ಲ. ಆದ್ದರಿಂದ ಪ್ರತಿಜ್ಞಾಹಾನಿಯಿಲ್ಲ. ಹಾಗಿದ್ದರೂ ಸ್ವನಿರ್ವಾಹಕತ್ವರೂಪ ಹೇತುವಿನ ಬಲದಿಂದ ಆ ವಿಶೇಷಕ್ಕೂ ವಿಶೇಷತ್ವವು ಬರುವುದರಿಂದ ಅನವಸ್ಥೆಯು ಉಂಟಾಗದು.

ಪ್ರಮಾಣವಿದ್ದಿದ್ದರೆ ಮೇಲೆ ಹೇಳಿದ ಅರ್ಥಗಳನ್ನು ಅಂಗೀಕರಿಸಬಹುದಿತ್ತು. ನಮಗಾದರೂ ಪ್ರಮಾಣವೇ ಕಾಣುತ್ತಿಲ್ಲ ಎಂದರೆ ಸೂತ್ರದಲ್ಲಿರತಕ್ಕ 'ಉಭಯ ವ್ಯಪದೇಶಾತ್' ಎಂಬ ಹೇತುವನ್ನು ವ್ಯಾಖ್ಯಾನ ಮಾಡುತ್ತಾರೆ –

ವಿಶೇಷತ್ವೇನ ವಿಜ್ಞಾತೇಃ ಪ್ರಮಾಣೈರಖಿಲೈರಪಿ ॥೧೭೦॥

ಉಭಯವಿಧಗಳಾದ ವೇದವಾಕ್ಯಗಳಿಂದ ಜ್ಞಾನಾದಿ ಧರ್ಮಗಳು ಭಗವದ್ ವಿಶೇಷತ್ವದಿಂದಲೂ ಅಭಿನ್ನತ್ವದಿಂದಲೂ ತಿಳಿಯಲ್ಪಡುತ್ತವೆ. ಅದು ಹೇಗೆಂದರೆ –

ಸಸರ್ಜ ಸಂಜಹಾರೇತಿ ವಿಶೇಷೋ ಹ್ಯವಗಮ್ಯತೇ ।

ಶ್ರುತ್ಯೈವ ಸ ಸ ಯೇವೇತಿ ತದಭೇದಶ್ಚ ಗಮ್ಯತೇ ॥೧೭೧॥

ಶ್ರೀಹರಿಯು ಇವೆಲ್ಲವನ್ನೂ ಸೃಷ್ಟಿ ಮಾಡಿದನು (ಸ ಇದಂ ಸರ್ವಮಸೃಜತ), ಸಂಹರಿಸಿದನು (ತತ್ತದತ್ತುಮಧ್ರಿಯತ ಸ ಐಕ್ಷತ) ಇತ್ಯಾದಿ ವಿಶೇಷವು ಶ್ರುತಿಯಿಂದಲೇ ತಿಳಿಯಲ್ಪಡುತ್ತದೆ. 'ಆನಂದೋ ಬ್ರಹ್ಮ' ಇತ್ಯಾದಿ ಶ್ರುತಿಯಿಂದ ಆನಂದಾದಿಯು ಆ ಪರಮಾತ್ಮನೇ ಎಂದು ಅಭೇದವೂ ಕೂಡ ತಿಳಿಯಲ್ಪಡುತ್ತದೆ.

ಇದರ ಅಭಿಪ್ರಾಯವೇನೆಂದರೆ, ಭೇದ ಹಾಗೂ ಅಭೇದ ಪರವಾದ ಉಪದೇಶವು ಅನ್ಯಥಾ ಕೂಡದಿರುವುದರಿಂದ ಬ್ರಹ್ಮನ ಎಲ್ಲ ಧರ್ಮಗಳಿಗೂ ಬ್ರಹ್ಮನೊಂದಿಗೆ ಸವಿಶೇಷ ಅತ್ಯಂತಾಭೇದ, ಕ್ರಿಯಾದಿಗಳಿಗೆ ನಿತ್ಯತ್ವ, ಶಕ್ತಿವ್ಯಕ್ತಿರೂಪತ್ವ ವ್ಯಕ್ತಿರೂಪಕ್ಕೆ ನಿತ್ಯತ್ವ, ಶಕ್ತಿರೂಪದಿಂದ ಅಭಿನ್ನತ್ವ, ಸವಿಶೇಷತ್ವ, ವಿಶೇಷಕ್ಕೆ ಅಭಿನ್ನತ್ವ ಹಾಗೂ ಸ್ವನಿರ್ವಾಹಕತ್ವ ಹೀಗೆ ಎಲ್ಲವೂ ಕಲ್ಪಿಸಲ್ಪಡುತ್ತದೆ.

ಹಾಗಾದರೆ ಬ್ರಹ್ಮನಿಗೂ ಅವನ ಧರ್ಮಗಳಿಗೂ ಭೇದವೇ ಇರಲಿ. ಆದರೂ ಅಭೇದಕ್ಕೆ ಔಪಚಾರಿಕತ್ವವು ಕೂಡುವುದರಿಂದ ಅಭೇದಶ್ರುತಿಗೆ ವಿರೋಧ ಬರುವುದಿಲ್ಲ. ಆದ್ದರಿಂದ ವಿಶೇಷಾಭೇದವನ್ನು ಅಂಗೀಕರಿಸುವ ಅಗತ್ಯವಿಲ್ಲವೆಂದು ಭೇದವಾದಿಯು ಹೇಳುತ್ತಾನೆ. ಅಭೇದವಾದಿಯ ಮತದಂತೆ ಬ್ರಹ್ಮನು ಅಖಂಡನೇ. ಅವನಲ್ಲಿ ಯಾವ ವಿಶೇಷವೂ ಇಲ್ಲ. ಕ್ರಿಯಾದಿಗಳನ್ನು ಪ್ರತಿಪಾದಿಸುವ ಶ್ರುತಿಗಳು ಸಗುಣಬ್ರಹ್ಮನಿಗೆ ಸಂಬಂಧಿಸಿವೆ. ಆದ್ದರಿಂದ ಶ್ರುತಿವಿರೋಧವು ಬರುವುದಿಲ್ಲ. ಇನ್ನೊಬ್ಬನ ಮತದಂತೆ ಭೇದಾಭೇದಗಳಿಂದಲೇ ಉಭಯ ವ್ಯಪದೇಶವು ಸಮಂಜಸವಾಗುವುದರಿಂದ ಸವಿಶೇಷಾಭೇದ ಕಲ್ಪನೆಯಿಂದ ಏನೂ ಪ್ರಯೋಜನವಿರುವುದಿಲ್ಲ. ಎಂದರೆ – ಹೀಗೆ ಹೇಳಕೂಡದು. ಈ ಮೂರು ವಾದಿಗಳೂ ಕೊನೆಗೆ ಅಭೇದದಲ್ಲಿ ವಿಶೇಷವನ್ನು ಅಂಗೀಕರಿಸಲೇ ಬೇಕಾಗುವುದು. ಆದಪ್ರಯುಕ್ತ ಮೊದಲಿಗೇ ಅದನ್ನು

ಅಂಗೀಕರಿಸುವುದು ಉತ್ತಮ ಎಂಬ ಅಭಿಪ್ರಾಯದಿಂದ ಭೇದವಾದಿಯನ್ನು ಕುರಿತು 'ಭೇದ' ಇತ್ಯಾದಿಯಾಗಿ ಹೇಳುತ್ತಾರೆ –

ಭೇದೋ ಯದಿ ವಿಶೇಷಸ್ಯ ಸ ಭೇದೋ ಭೇದಿನಾ ಕಥಮ್ ।

ಭಿನ್ನಶ್ಚೇದನವಸ್ಥಾ ಸ್ಯಾದಭಿನ್ನಶ್ಚೇತ್ ಪುರಾ ನ ಕಿಮ್ ॥೧೭೨॥

ಜ್ಞಾನಾದಿ ಬ್ರಹ್ಮನ ಧರ್ಮಗಳಿಗೆ ಬ್ರಹ್ಮನಿಂದ ಭೇದವನ್ನು ಅಂಗೀಕರಿಸುವ ಭೇದವಾದಿಯನ್ನು ನಾವು ಕೇಳುತ್ತೇವೆ – ಆ ಭೇದವು ಭೇದವುಳ್ಳ ಬ್ರಹ್ಮನಿಂದಲೂ ಜ್ಞಾನಾದಿಗಳಿಂದಲೂ ಕೂಡಿಕೊಂಡು ಯಾವ ಪ್ರಕಾರದಿಂದ ತಿಳಿಯತಕ್ಕದ್ದು? ಭೇದವು ಭೇದಿಗಳಿಂದ ಭಿನ್ನ ಎಂದರೆ ಆಗ ಅನವಸ್ಥೆಯು ಬರುವುದು.

ಅಭಿನ್ನವೆಂದು ಹೇಳಿದರೆ ಅದು ಸವಿಶೇಷಾಭಿನ್ನವೋ ಅಥವಾ ನಿರ್ವಿಶೇಷಾ ಭಿನ್ನವೋ ಎಂದು ಕೇಳಬೇಕು. ಸವಿಶೇಷಾಭಿನ್ನವೆಂದು ಹೇಳಿದರೆ, ಅದು ಮೊದಲು ಇತ್ತೋ ಇಲ್ಲವೋ ಎಂದು ಕೇಳುತ್ತೇವೆ. ಧರ್ಮಗಳಿಗೆ ಧರ್ಮಿಯಿಂದ ಸವಿಶೇಷಾ ಭೇದವು ಏಕೆ ಅಂಗೀಕರಿಸಲ್ಪಡುವುದಿಲ್ಲ? ಭೇದವಿಲ್ಲದಿದ್ದರೂ ಭೇದವಿರುವಂತೆ ವಿಶೇಷದಿಂದಲೇ ಕೂಡುವಾಗ ವ್ಯರ್ಥವಾಗಿ ಪರಂಪರೆಯನ್ನು ಕಲ್ಪಿಸುವುದರಿಂದ ಕಲ್ಪನಾಗೌರವ ಬರುವುದು. ಆದ್ದರಿಂದ ಧರ್ಮಗಳಿಗೇನೆ ಸವಿಶೇಷಾಭೇದವನ್ನು ಅಂಗೀಕರಿಸುವುದು ಯೋಗ್ಯವು.

ಹೀಗೆಯೇ ಆಗಲಿ ಎಂದರೆ –

ವಿಶೇಷೋಽಭಿನ್ನ ಏವೇತಿ ತೇನ ನಾಭ್ಯುಪಗಮ್ಯತೇ ।

ಭೇದವಾದಿಯು ವಿಶೇಷ ಅಥವಾ ಧರ್ಮವನ್ನು ಅಭಿನ್ನವೆಂಬುದಾಗಿಯೇ ಅಂಗೀಕರಿಸುವುದಿಲ್ಲ. ಆದ್ದರಿಂದ ಸವಿಶೇಷತ್ವದ ಅಂಗೀಕಾರವು ಕೂಡುವುದೇ ಇಲ್ಲ. ಅಪಸಿದ್ಧಾಂತವು ಬರಬೇಕಾಗುವುದು. ಇಷ್ಟಸಿದ್ಧಿಯೂ ಆಗದೇ ಹೋಗುವುದು.

ನಿರ್ವಿಶೇಷಾಭಿನ್ನವೆಂದರೆ ಅದನ್ನು ದೂಷಿಸುತ್ತಾರೆ –

ಅಭಿನ್ನೋ ನಿರ್ವಿಶೇಷಶ್ಚೇದ್ಭೇದಸ್ತದ್ಭೇದತಾ ಕುತಃ ॥೧೭೩॥

ಭೇದವು ಭೇದಗಳಿಂದ ಅಭಿನ್ನವೂ ನಿರ್ವಿಶೇಷವೂ ಆಗುವುದಾದರೆ, ಅವುಗಳಿಗೆ ಇದು ಭೇದವು ಎನ್ನುವ ಭಾವವು ಯಾವುದರಿಂದ ತಿಳಿಯಲ್ಪಡುತ್ತದೆ? ಭೇದವಾಗಲೀ ವಿಶೇಷವಾಗಲೀ ಇಲ್ಲದೇ ಹೋದರೆ ಆಗ ಧರ್ಮ–ಧರ್ಮಿ ಎಂಬ ವ್ಯವಹಾರವೇ ಕೂಡುವುದಿಲ್ಲ. ಆಗ ಭೇದವೂ ಕೂಡ ಇಲ್ಲದೇ ಹೋಗುವುದು.

ಭೇದಕ್ಕೆ ಭೇದಿಸ್ವರೂಪತ್ವವನ್ನು ಒಪ್ಪಿದರೂ ವಿಶೇಷವನ್ನು ಒಪ್ಪದಿರುವ ವಾದಿಯನ್ನು ಉದ್ದೇಶಿಸಿ ದೂಷಣಾಂತರವನ್ನು ಹೇಳುತ್ತಾರೆ –

ಅನೇನಾನೇನ ಭಿನ್ನೋಽಯಮಿತಿ ಯತ್ಸವಿಶೇಷತಃ ।

ಭೇದ ಏವೈಷ ಬಹುಧಾ ದೃಶ್ಯತೇ ತತ್ಕಿಮುತ್ತರಮ್ ॥೧೭೪॥

ಇತರ ವಸ್ತುಗಳಿಂದ ಭಿನ್ನವಾದುದು ಈ ಘಟವು ಎಂದು ಆ ಭೇದವೇ ವಿಶೇಷಣವಾಗಿ ಕಾಣಲ್ಪಡುತ್ತದೆ. ಘಟವು ವಿಶೇಷ್ಯವಾಗಿಯೇ ಕಾಣಲ್ಪಡುತ್ತದೆ. ಘಟವು ಪಟದಿಂದ ಭಿನ್ನವು, ಸ್ತಂಭದಿಂದ ಭಿನ್ನವು ಇತ್ಯಾದಿ ಅನೇಕ ಪ್ರಕಾರದಿಂದ ಭೇದವೇ ವಿಶೇಷತಃ ಕಾಣಲ್ಪಡುತ್ತದೆ. ಘಟವಾದರೂ ಏಕರೀತಿ ಕಾಣಲ್ಪಡುತ್ತದೆ. ಆದಕಾರಣ ಭೇದವು ಘಟಸ್ವರೂಪವಲ್ಲ ಎಂಬುದಾಗಿ ಸ್ವರೂಪಭೇದಕ್ಕೆ ಪರರಿಂದ ದೂಷಣವು ಹೇಳಲ್ಪಟ್ಟರೆ, ವಿಶೇಷವನ್ನು ಅಂಗೀಕರಿಸದ ನಿನ್ನಿಂದ ಏನು ಉತ್ತರವು ಹೇಳಲ್ಪಡುತ್ತದೆ? ವಿಶೇಷವನ್ನು ಅಂಗೀಕರಿಸದಿದ್ದರೆ ಆಗ ಭೇದವು ಭೇದಿಯಿಂದ ಅಭಿನ್ನ ಎಂದು ಅಂಗೀಕರಿಸಲಿಕ್ಕೂ ಶಕ್ಯವಾಗದು. ಏಕೆಂದರೆ ಭೇದಸಾಧಕಗಳು ಅನೇಕವಿರುತ್ತವೆ.

ಅಭೇದಭೇದಯೋಶ್ಚೈವ ಸ್ವರೂಪತ್ವಂ ಹಿ ಭೇದಿನಃ ।

ತಯೋರಪ್ಯವಿಶೇಷತ್ವೇ ಪರ್ಯಾಯತ್ವಂ ಹಿ ಶಬ್ದಯೋಃ ॥೧೭೫॥

ಕೇವಲ್ಲ ಭೇದಕ್ಕೆ ಮಾತ್ರವಲ್ಲ, ಅಭೇದಕ್ಕೂ ಕೂಡ ಭೇದಿಯ ಸ್ವರೂಪತ್ವವೇ (ಅಂದರೆ ಭೇದಿಯೊಂದಿಗೆ ಅಭೇದವೇ) ಪ್ರಸಿದ್ಧ. ಹಾಗೆಯೇ ಭೇದಭೇದಗಳಿಗೂ ಕೂಡ ಭೇದಿಯೊಂದಿಗೆ ಅಭೇದವನ್ನು ಅಂಗೀಕರಿಸಬೇಕು. ಅಭೇದ ಭೇದಗಳಿಗೆ ಭೇದವೂ ವಿಶೇಷವೂ ಇಲ್ಲವೆಂದರೆ, ಆ ಶಬ್ದಗಳಿಗೆ ಏಕಾರ್ಥತ್ವವು ಬರುವುದು. ಹಾಗೇ ಆಗಲಿ ಎಂದರೆ –

ಅಭೇದಭೇದಶಬ್ದೌ ಚ ಪರ್ಯಾಯಾವಿತಿ ಕೋ ವದೇತ್ ।

ಭೇದೋऽನ್ಯೋನ್ಯಮಭೇದಶ್ಚ ಭೇದಿನಾ ಚೇದ್ವಿಶೇಷಿತಾ ॥೧೭೬॥

ಭೇದ ಮತ್ತು ಅಭೇದ ಶಬ್ದಗಳನ್ನು ಪರ್ಯಾಯಶಬ್ದಗಳು ಎಂದು ಯಾರೂ ಹೇಳುವುದಿಲ್ಲ. ಹಾಗೆ ಹೇಳುವುದು ಅಪ್ರಾಮಾಣಿಕವೂ ಪ್ರಮಾಣವಿರುದ್ಧವೂ ಆಗಿದೆ. ಭೇದಾಭೇದಗಳಿಗೆ ಭೇದಿಯಿಂದ (ಘಟದಿಂದ) ಅಭೇದವಿರಲಿ. ಹಾಗಿದ್ದರೂ ಭೇದ ಮತ್ತು ಅಭೇದ ಶಬ್ದಗಳಿಗೆ ಪರಸ್ಪರವಾಗಿ ಭೇದವಿರುವಪ್ರಯುಕ್ತ ಪರ್ಯಾಯತ್ವವು ಬರುವುದಿಲ್ಲ. ಹೀಗೆ ಅಂಗೀಕರಿಸುವವನೂ ಕೂಡ ಅಭಿನ್ನವಾದ ವಸ್ತುವಿನಲ್ಲಿ ವಿಶೇಷಿತ್ವವನ್ನು ಅಂಗೀಕರಿಸಲೇಬೇಕು. ಅದು ಹೇಗೆಂದರೆ –

ಅವಿಶೇಷೇ ಕಥಂ ಭೇದೋ ಭೇದಿನ್ಯೈಕಸ್ತಥಾ ಭಿದಾ ।

ಪುನಸ್ತಯೋರ್ವಿಭೇದಶ್ಚ ಭೇದಿಮಾತ್ರತ್ವತೋ ಭವೇತ್ ॥೧೭೭॥

ವಿಶೇಷವಿಲ್ಲವಾದರೆ ಭೇದವು ಭೇದಿಯಿಂದ ಅಭಿನ್ನವೆಂದೂ, ಹಾಗೆಯೇ ಅಭೇದವು ಭೇದಿಯಿಂದ ಅಭಿನ್ನವೆಂದೂ, ಪುನಃ ಆ ಭೇದಾಭೇದಗಳಿಗೆ ಪರಸ್ಪರ ಭೇದವೆಂದೂ ಹೇಳುವುದು ಅವುಗಳಿಗೆ ಭೇದಿಮಾತ್ರಸ್ವರೂಪತ್ವವಿದ್ದ ಪ್ರಯುಕ್ತ

ಕೂಡುವುದಿಲ್ಲ. ಆದ್ದರಿಂದ ಘಟದಿಂದ ಅಭಿನ್ನಗಳಾದ ಭೇದಾಭೇದಗಳಿಗೆ ಪರಸ್ಪರ ಭೇದ ನಿರ್ವಾಹಕ್ಕಾಗಿ ಘಟದಿಂದ ಸವಿಶೇಷಾಭೇದವನ್ನೇ ಅಂಗೀಕರಿಸಬೇಕು. ವಿಶೇಷವನ್ನು ಅಂಗೀಕರಿಸದೇ ಇದ್ದರೆ ಪರ್ಯಾಯತ್ವವನ್ನು ಪರಿಹರಿಸಲು ಸಾಧ್ಯವೇ ಆಗುವುದಿಲ್ಲ.

ಮತ್ತೊಂದು ರೀತಿಯಲ್ಲಿ ಆಶಂಕಿಸುತ್ತಾರೆ –

ಭೇದಿನಶ್ಚೈವ ಭೇದಸ್ಯ ವಿಶೇಷೋ ಯದಿ ಗಮ್ಯತೇ ।

ಅಭೇದಾಭೇದಿನೋಶ್ಚೈವ ಕಿಂ ಭೇದೋऽಭೇದಭೇದಯೋಃ ॥೧೭೮॥

ಭೇದಿ–ಭೇದಗಳಿಗೆ ಅಭೇದವೂ ವಿಶೇಷವೂ ನನ್ನಿಂದ ಅಂಗೀಕರಿಸಲ್ಪಡುವುದು. ಹಾಗೆಯೇ ಅಭೇದ–ಅಭೇದಿಗಳಿಗೂ ಸವಿಶೇಷಾಭೇದವು ಅಂಗೀಕರಿಸಲ್ಪಡುವುದು. ಹಾಗಿದ್ದರೂ ಭೇದಾಭೇದಗಳಿಗೆ ಘಟತನ್ಮಾತ್ರತ್ವವು ಇಲ್ಲದಿರುವ ಪ್ರಯುಕ್ತ, ಪರಸ್ಪರ ಭೇದವು ಕೂಡುವುದರಿಂದ, ಶಬ್ದಗಳಿಗೆ ಪರ್ಯಾಯತ್ವವಿಲ್ಲ. ಆದ್ದರಿಂದ ಭೇದಾ–ಭೇದಗಳಿಗೆ ಪರಸ್ಪರ ಅಭೇದವನ್ನೂ ವಿಶೇಷವನ್ನೂ ಅಂಗೀಕರಿಸಬೇಕೆಂಬುದು ಅಯುಕ್ತವೆಂದು ಭಾವ. ಹೀಗಾದರೆ ಅಭೇದಕ್ಕೂ ಭೇದಕ್ಕೂ ಭೇದವನ್ನು ಯಾವುದರಿಂದ ಕಲ್ಪಿಸಬೇಕು? ಅವುಗಳಿಗೂ ಸವಿಶೇಷಾಭೇದವನ್ನೇ ಅಂಗೀಕರಿಸ ಬೇಕು ಎಂದು ಅಭಿಪ್ರಾಯ. ಈ ವಿಷಯದಲ್ಲಿ ಯುಕ್ತಿಯನ್ನೂ ಹೇಳುತ್ತಾರೆ –

ವಿಶೇಷೇಷ್ವೈವ ಸರ್ವತ್ರ ಯದಿ ವ್ಯವಹೃತಿರ್ಭವೇತ್ ।

ಕಲ್ಪನಾಗೌರವಾಯೈವ ಕಿಂ ಭೇದಃ ಕಲ್ಪ್ಯತೇ ತದಾ ॥೧೭೯॥

ಭೇದ–ಭೇದಿಗಳಿಗೂ, ಅಭೇದ–ಅಭೇದಿಗಳಿಗೂ ಅಭೇದವಿದ್ದರೂ ವಿಶೇಷದ ಬಲದಿಂದಲೇ ಭೇದವ್ಯವಹಾರವು ಆಗುವುದೆಂದು ಅಂಗೀಕರಿಸುವುದಾದರೆ, ಆಗ ಭೇದಾಭೇದಗಳಿಗೆ ಭೇದವು ಕಲ್ಪನಾಗೌರವಕ್ಕಾಗಿಯೇ ಕಲ್ಪಿಸಲ್ಪಡುವುದೇನು? ಎಂದು ಅಪಹಾಸ ಮಾಡುತ್ತಾರೆ.

ಹಾಗಾದರೆ ಕಲ್ಪನಾಗೌರವ ಭಯದಿಂದ ಧರ್ಮ–ಧರ್ಮಿಗಳಿಗೆ ಅಭೇದವನ್ನು ಅಂಗೀಕರಿಸಿ, ವ್ಯವಹಾರ ಸಿದ್ಧಿಗಾಗಿ ವಿಶೇಷವನ್ನು ಅಂಗೀಕರಿಸುತ್ತೇವೆ ಎಂದರೆ, ಹಸು ಮತ್ತು ಕುದುರೆಗಳಲ್ಲಿಯೂ ವಿಶೇಷವಿಲ್ಲದಿರುವುದರಿಂದ ಹಾಗೆಯೇ ಕಲ್ಪಿಸಬಹುದು ಎಂದು ಹೇಳುತ್ತೇವೆ. ಹಾಗಾದರೆ ಜಗತ್ತಿನಲ್ಲಿ ಭೇದವೇ ಇಲ್ಲವಾಗುತ್ತದೆ ಎಂದರೆ –

ಐಕ್ಯಪ್ರತೀತ್ಯಭಾವೇನ ಭೇದ ಏವ ಗವಾಶ್ವಯೋಃ ।

ಸ ಏವೇತಿ ಪ್ರತೀತೌ ಹಿ ವಿಶೇಷೋ ನಾಮ ಭಣ್ಯತೇ ॥೧೮೦॥

ಹಸು ಕುದುರೆಗಳಿಗೆ ಅಭೇದ ಪ್ರತೀತಿಯ ಅಭಾವದಿಂದ ಭೇದವೇ ಸ್ವೀಕರಿಸಲ್ಪಡುತ್ತದೆ, ವಿಶೇಷವಲ್ಲ. ಅದು ಅದೇ ಎನ್ನುವ ಅಭೇದ ಪ್ರತೀತಿಯಿದ್ದಲ್ಲಿ

ಮಾತ್ರ ವಿಶೇಷವೆನ್ನುವುದು ಹೇಳಲ್ಪಡುತ್ತದೆ.

ಈಗ ಅಭೇದವಾದಿಯಿಂದಲೂ ಕೂಡ ವಿಶೇಷವು ಅಂಗೀಕೃತವಾಗಲೇಬೇಕು ಎಂದು ಹೇಳುತ್ತಾರೆ –

ಸಚ್ಚಿದಾದೇರಪರ್ಯಾಯಸಿದ್ಧ್ಯರ್ಥಂ ಮಾಯಿನಾಪಿ ಹಿ ।

ಅಂಗೀಕಾರ್ಯೋ ವಿಶೇಷೋಽಯಂ ..... ॥

ಸತ್ ಚಿತ್ ಮುಂತಾದ ಪದಸಮೂಹಕ್ಕೆ ಅಪರ್ಯಾಯತ್ವ ಸಿದ್ಧಿಸುವುದಕ್ಕಾಗಿ, ಕ್ರಿಯಾದಿ ವಿಷಯಕವಾದ ವಾಕ್ಯಗಳಿಗೆ ಮಾಯಿಕ ವಿಷಯತ್ವವನ್ನು ಅಂಗೀಕರಿಸುವ ಮಾಯಾವಾದಿಯೂ ಕೂಡ, ಅಪರ್ಯಾಯ ಶಬ್ದಪ್ರವೃತ್ತಿಗೆ ಕಾರಣವಾದ ಈ ವಿಶೇಷವನ್ನು ಅಂಗೀಕರಿಸಲಿಕ್ಕೇ ಬೇಕು.

ಈಗ ಅಪೋಹವಾದವನ್ನು ಆಶ್ರಯಿಸಿ ಶಂಕಿಸುತ್ತಾರೆ – (ಪಟ ಮುಂತಾದ ಪದಗಳು ಪಟಾದಿ ವಾಚಕತ್ವವನ್ನು ಹೊಂದಿಲ್ಲ ಮತ್ತೆ ಘಟಾದಿಗಳ ವ್ಯಾವೃತ್ತಿಯನ್ನು ಹೇಳುತ್ತವೆ ಎನ್ನುವ ವಾದವೇ ಅಪೋಹವಾದ) –

..... ಯದ್ಯಸತ್ಯವಿಶೇಷಣಮ್ ॥೧೪೧॥

ಪೃಥಕ್ಪೃಥಗ್ವಾರಯಿತುಂ ಶಬ್ದಾಂತರಮಿತೀಷ್ಯತೇ ।

ಸತ್ಯಾದಿ ಪದಗಳು ಸತ್ಯತ್ವಾದಿ ವಾಚಕವಾದರೆ, ಸತ್ಯತ್ವಾದಿ ವಿಶೇಷಣಾಭಾವ ಹಾಗೂ ಸ್ವರೂಪೈಕ್ಯತೆಯ ಕಾರಣದಿಂದ, ಅವುಗಳಿಗೆ ಬ್ರಹ್ಮನಲ್ಲಿ ಪರ್ಯಾಯತ್ವವು ಬರಬೇಕಾಗುವುದು. ಆದ್ದರಿಂದ ಸತ್ಯಾದಿ ಪದಗಳು ಸತ್ಯತ್ವಾದಿಗಳನ್ನು ಹೇಳುವುದಿಲ್ಲ. ಬ್ರಹ್ಮನಲ್ಲಿ ಆರೋಪಿತವಾದ ಅಸತ್ಯತ್ವಾದಿ ವಿಶೇಷಣವನ್ನು ಬೇರೆ ಬೇರೆಯಾಗಿ ನಿವಾರಿಸುವುದಕ್ಕಾಗಿ ಸತ್ಯಾದಿ ಶಬ್ದಾಂತರವು ಅಂಗೀಕರಿಸಲ್ಪಡುತ್ತದೆ. ಈ ರೀತಿಯ ಅಪೋಹವಾದವನ್ನು 'ಮಾಯಾ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ಮಾಯಾವಿಶೇಷರಾಹಿತ್ಯವಿಶೇಷಣವಿಶೇಷಿತಾ ॥೧೪೨॥

ಸತ್ಯಸ್ಯಾಪಿ ಭವೇತ್ಸಾ ಚ ತಥಾ ಚೇದನವಸ್ಥಿತಿಃ ।

ಇಲ್ಲಿ ಮಾಯಾ ಎಂದರೆ ಆರೋಪಿತ ಅಥವಾ ಕಲ್ಪಿತ ಎಂದರ್ಥ. ಕಲ್ಪಿತವಾದ ಅಸತ್ಯತ್ವಾದಿ ವಿಶೇಷರಾಹಿತ್ಯರೂಪವಾದ ವಿಶೇಷದಿಂದ ಸತ್ಯವಾದ್ದಕ್ಕೂ ವಿಶೇಷಿತ್ವವು ಆಗುವುದು. ಮತ್ತೆ ಆ ವಿಶೇಷಿತ್ವವೂ ಕೂಡ ಅಸತ್ಯತ್ವಾದಿಗಳಂತೆ ಆರೋಪಿತವೇ ಆಗುವುದು ಎಂದು ಶಂಕಿಸಿಕೂಡದು. ಹಾಗಾದರೆ ಅನವಸ್ಥಿತಿ ಉಂಟಾಗುವದು. ಅಂದರೆ ಯಾವ ವಾಕ್ಯಾರ್ಥಕ್ಕೂ ವ್ಯವಸ್ಥೆಯು ಆಗದೇ ಹೋಗುವುದು.

ಬ್ರಹ್ಮನಿಗೆ ನಿರ್ವಿಶೇಷತ್ವವನ್ನು ಹೇಳುವುದರಿಂದ ಪದಗಳಿಗೆ ಪೌನರುಕ್ತ್ಯಾದಿ ದೋಷವು ಬರುವುದಷ್ಟೇ ಅಲ್ಲ, ಯಾವುದೊಂದು ಪದಕ್ಕೂ ಬ್ರಹ್ಮನಲ್ಲಿ ಪ್ರವೃತ್ತಿಯೇ

ಆಗುವುದಿಲ್ಲ ಎಂದು ಹೇಳುತ್ತಾರೆ –

ಯದಿ ಸತ್ಯೇ ವಿಶೇಷೋ ನ ನ ತದುಕ್ತಿರ್ಭವೇತ್ತದಾ ॥೧೮೩॥

ಲಕ್ಷ್ಯತೇ ಚೇತ್ತೇನ ಲಕ್ಷ್ಯಮಿತ್ಯಪಿ ಸ್ಯಾದ್ವಿಶೇಷಿತಾ ।

ಸತ್ಯ ಪದದಲ್ಲಿ ವಿಶೇಷವು ಇಲ್ಲವೆಂದಾದರೆ ಆಗ ವಿಶೇಷದ ಉಕ್ತಿಯೂ ಆಗಲಾರದು. ಏಕೆಂದರೆ ಗುಣಕರ್ಮಾದಿ ನಿಮಿತ್ತವನ್ನು ಅವಲಂಬಿಸದೆ ಯಾವ ಶಬ್ದಕ್ಕೂ ಪ್ರವೃತ್ತಿಯಿರುವುದಿಲ್ಲ. ಬ್ರಹ್ಮನು ಶಬ್ದದಿಂದ ವಾಚ್ಯನೆಂದಾಗಿದ್ದರೆ ಈ ಹಿಂದೆ ಹೇಳಿದ ದೋಷವು ಬರುತ್ತಿತ್ತು. ಆದರೆ ಬ್ರಹ್ಮನು ಶಬ್ದದಿಂದ ವಾಚ್ಯನೇ ಅಲ್ಲ, ಮತ್ತೆ ಲಕ್ಷ್ಯನೇ ಎಂದರೆ, ಅದೂ ಕೂಡ ಲಕ್ಷ್ಯತ್ವರೂಪ ವಿಶೇಷತ್ವವೇ ಆಗುವುದು.

ಹಾಗಾದರೆ ಬ್ರಹ್ಮನಿಗೆ ಲಕ್ಷ್ಯತ್ವವೂ ಕೂಡ ಇರುವುದೇ ಇಲ್ಲ. ಲಕ್ಷ್ಯಂ ಎನ್ನುವುದೂ ಕೂಡ ಲಕ್ಷಣಾವೃತ್ತಿಯಿಂದಲೇ ಹೇಳಲ್ಪಡುತ್ತದೆ, ಶಕ್ತಿವೃತ್ತಿಯಿಂದಲ್ಲ ಎಂದರೆ ಹಾಗೆ ಹೇಳಕೂಡದು. ಈ ವಾಕ್ಯದಲ್ಲಿಯೂ ಲಕ್ಷ್ಯ ಶಬ್ದದಿಂದ ಲಕ್ಷ್ಯತ್ವ ರೂಪ ವಿಶೇಷವು ಪ್ರಾಪ್ತವಾಗುತ್ತದೆ. ಆದ್ದರಿಂದ ಲಕ್ಷ್ಯವೇ ಎಂದರೆ –

ಪುನಃ ಪುನರ್ಲಕ್ಷಣಾಯಾಮಪಿ ಸ್ಯಾದನವಸ್ಥಿತಿಃ ॥೧೮೪॥

ಯದ್ಯಭಾವವಿಶೇಷಿತ್ವಂ ಸ್ಯಾದಂಗೀಕೃತಮೇವ ತೇ ।

ಅಸಾರ್ವಜ್ಞಾದಿರಾಹಿತ್ಯಮಪ್ಯೇವಂ ತೇ ಭವಿಷ್ಯತಿ ॥೧೮೫॥

ಮತ್ತೆ ಮತ್ತೆ ಲಕ್ಷಣಾವೃತ್ತಿಯನ್ನು ಆಶ್ರಯಿಸುವುದರಿಂದ ಅನವಸ್ಥೆ ಬರುವುದು. ನಿನ್ನ ಮತದಲ್ಲಿ ಅಭಾವರೂಪ ವಿಶೇಷತ್ವಕ್ಕೆ ಅಂಗೀಕಾರವಿದೆ ಎಂದರೆ ಬ್ರಹ್ಮನಿಗೆ ಅಸರ್ವಜ್ಞತ್ವಾದಿಗಳ ಅಭಾವವೂ ಕೂಡ ನಿನ್ನಿಂದ ಅಂಗೀಕಾರ್ಯವೇ ಆಗಬೇಕು.

ಈ ವಿಭಾಗವು ಬೇಡ. ಬ್ರಹ್ಮನಲ್ಲಿ ಅಸರ್ವಜ್ಞತ್ವಾದಿಗಳ ಅಭಾವವನ್ನು ಅಂಗೀಕರಿಸುತ್ತೇವೆ ಎಂದರೆ –

ತದಾ ಸಾರ್ವಜ್ಞಮೇವ ಸ್ಯಾದ್ಭಾವಾರ್ಥತ್ವಾನ್ನಞೋರ್ದ್ವಯೋಃ ।

ಯದಿ ನೈತಾದೃಶಂ ಗ್ರಾಹ್ಯಮಸುಖತ್ವಾನಿವರ್ತನಾತ್ ॥೧೮೬॥

ಅಸತ್ತಾಜ್ಞಾನತಾದೇಶ್ಚ ಸ್ಯಾದಸತ್ತಾದಿಕಂ ತದಾ ।

ಎರಡು 'ನಞ್'ಗಳನ್ನು ಪ್ರಯೋಗಿಸಿದಾಗ ಭಾವರೂಪವಾದ ಅರ್ಥವು ಬರುವ ಪ್ರಯುಕ್ತ, ಬ್ರಹ್ಮನಲ್ಲಿ ಅಸರ್ವಜ್ಞತ್ವಾಭಾವವನ್ನು ಹೇಳುವುದರಿಂದ ಭಾವರೂಪವಾದ ಸರ್ವಜ್ಞತ್ವವನ್ನೇ ಹೇಳಿದಂತೆ ಆಗುವುದು. ಹೀಗೆ ಅಂಗೀಕರಿಸದೇ ಇದ್ದರೆ ಬಾಧಕವನ್ನು ಹೇಳುತ್ತಾರೆ – ಬ್ರಹ್ಮನಲ್ಲಿ ಶ್ರುತವಾದ ಸರ್ವಜ್ಞತ್ವಾದಿ ಪದವು ಅಸರ್ವಜ್ಞತ್ವಾದಿಗಳ ನಿವೃತ್ತಿಯನ್ನು ಬೋಧಿಸುತ್ತದೆ ಎನ್ನುವ ಪ್ರಮೇಯವನ್ನು

ಅಂಗೀಕರಿಸದಿದ್ದರೆ, ಆಗ ಆನಂದಾದಿ ಪದಗಳೂ ಅಸುಖತ್ವಾದಿಗಳನ್ನು ನಿವರ್ತನೆ ಮಾಡಲಾರವು. ಆನಂದಾದಿ ಪದಗಳಿಂದ ಅಸುಖತ್ವಾದಿಗಳ ನಿವರ್ತನೆಯಾಗದಿದ್ದರೆ ಅಡ್ಡಿಯಿಲ್ಲ. ಅದರಿಂದ ದೋಷವೇನು ಎಂದರೆ – ಬ್ರಹ್ಮನಲ್ಲಿ ಅಸತ್ವಾದಿಗಳು ಪ್ರಸಕ್ತವಾಗಿವೆ. ಅವುಗಳನ್ನು ಹೋಗಲಾಡಿಸುವುದಕ್ಕಾಗಿ ಸತ್ಯಜ್ಞಾನಾದಿ ವಾಕ್ಯಗಳು ಪ್ರವೃತ್ತವಾಗಿವೆ. ಅವುಗಳೂ ಕೂಡ ಅಸತ್ವಾದಿಗಳನ್ನು ನಿವರ್ತನೆ ಮಾಡದಿದ್ದರೆ, ಆಗ ಬ್ರಹ್ಮನಲ್ಲಿ ಪ್ರಸಕ್ತವಾದ ಅಸತ್ವಾದಿಗಳು ತಾತ್ವಿಕವೇ ಎಂದಾಗುವುದು.

ಅನೃತಾದಿವಿರೋಧಿತ್ವಂ ಯದ್ಯಸ್ಯಾಭ್ಯುಪಗಮ್ಯತೇ ॥೧೪೭॥

ಅನೈಶ್ವರ್ಯವಿರೋಧಿತ್ವಮಪ್ಯೇವಂ ಕಿಂ ನಿವಾರ್ಯತೇ ।

ಸತ್ಯತ್ವಾದಿ ಪದಗಳಿಗೆ ಅಸತ್ಯತ್ವಾದಿಗಳಿಂದ ವಿರೋಧಿತ್ವವು ಅಂಗೀಕರಿಸಲ್ಪಡುವ ಪಕ್ಷದಲ್ಲಿ , ಅದೇ ರೀತಿ ಸರ್ವೈಶ್ವರ್ಯಾದಿ ಪ್ರತಿಪಾದಕ ಪದಗಳಿಗೆ ಅನೈಶ್ವರ್ಯಾದಿ ವಿರೋಧಿತ್ವವೂ ಕೂಡ ಏಕೆ ನಿವಾರಿಸಲ್ಪಡುತ್ತದೆ?

ಉಪಸಂಹಾರ ಮಾಡುತ್ತಾರೆ –

ಅಖಂಡಖಂಡನಾದೇವಂ ವಿಶೇಷೋऽಖಂಡವಾದಿನಾ ॥೧೪೮॥

ಖಂಡಿತೇನಾಪಿ ಮನಸಾ ಸ್ವೀಕಾರ್ಯೋऽನನ್ಯಥಾಗತೇಃ ।

ಹೀಗೆ ಅಖಂಡವಾದವನ್ನು ಅಂದರೆ ಐಕ್ಯವಾದವನ್ನು ಖಂಡಿಸಿದ್ದರಿಂದ ಅಖಂಡವಾದಿಯೂ ಕೂಡ, ಬೇರೆ ಗತಿಯಿಲ್ಲದಿರುವುದರಿಂದ, ಉತ್ಪ್ರೇಕ್ಷೆಯಿಲ್ಲದ ಮನಸ್ಸಿನಿಂದ ವಿಶೇಷವನ್ನು ಸ್ವೀಕರಿಸಲೇಬೇಕು.

ಈಗ ಭೇದಾಭೇದವಾದಿಯೂ ಕೂಡ ವಿಶೇಷವನ್ನು ಅಂಗೀಕರಿಸಲೇಬೇಕು ಎನ್ನುತ್ತಾರೆ –

ಅಖಂಡಖಂಡವಾದಿಭ್ಯಾಂ ಖಂಡಾಖಂಡೇನ ಚೈವ ತತ್ ॥೧೪೯॥

ಮಹಾದರೇಣ ಶಿರಸಿ ವಿಶೇಷೋ ಧಾರ್ಯ ಏವ ಹಿ ।

ಯಾವ ಕಾರಣದಿಂದ ಐಕ್ಯವಾದಿ ಹಾಗೂ ಭೇದವಾದಿ ಇಬ್ಬರಿಂದಲೂ ವಿಶೇಷವು ಅಂಗೀಕಾರ್ಯವಾದುದೋ, ಅದೇ ಕಾರಣದಿಂದಲೇ ಭೇದಾಭೇದವಾದಿಯಿಂದಲೂ ಕೂಡ ವಿಶೇಷವು ಪರಮಾದರದಿಂದ ಶಿರಸ್ಸಿನಲ್ಲಿ ಧಾರ್ಯವೇ ಆಗಿದೆ.

ಮೇಲೆ ಹೇಳಿದ ಪ್ರಕಾರವಾಗಿ ಉಭಯವ್ಯಪದೇಶವು ಬೇರೆ ರೀತಿಯಿಂದ ಕೂಡುವುದಿಲ್ಲವಾದ್ದರಿಂದ, ಭಗವಂತನಿಗೂ ಅವನ ಧರ್ಮಗಳಿಗೂ ಸವಿಶೇಷವಾದ ಅತ್ಯಂತ ಅಭೇದವೇ ಇರುವುದೆಂದು ಸಿದ್ಧವಾಗುವುದು.

ಹಾಗಾದರೆ ಇದು ಸೂತ್ರಕಾರರ ಅಭಿಪ್ರಾಯವಾಗಲು ಸಾಧ್ಯವಿಲ್ಲ. ಏಕೆಂದರೆ

ಸೂತ್ರಕಾರರು ಇಲ್ಲಿ ನೀಡಲಾಗಿರುವ ಅಹಿಕುಂಡಲಾದಿ ಮೂರು ದೃಷ್ಟಾಂತಗಳು ಈ ಅಭಿಪ್ರಾಯಕ್ಕೆ ಅನುಗುಣವಾಗಿರುವುದಿಲ್ಲ, ಎಂದು ಆಶಂಕಿಸಿದರೆ –

ನಿದರ್ಶನತ್ರಯೇಣಾತೋ ಭಗವಾನತ್ಯಭಿನ್ನತಾಮ್ ॥೧೯೦॥

ಗುಣಾನಾಮಾದರೇಣಾಹ ..... ।

ಹೀಗೆ ಉಭಯವ್ಯಪದೇಶವು ಬೇರೆ ರೀತಿಯಿಂದ ಕೂಡುವುದಿಲ್ಲ ಎನ್ನುವ ಅರ್ಥಾಪತ್ತಿ ರೂಪವಾದ ಅನುಮಾನದಿಂದ ಭಗವಂತನಿಗೂ ಅವನ ಗುಣಗಳಿಗೂ ಸವಿಶೇಷವಾದ ಅತ್ಯಂತಾಭೇದವು ಸಿದ್ಧವಾದುದರಿಂದ, ಭಗವಾನ್ ವೇದವ್ಯಾಸರು ಉಭಯವ್ಯಪದೇಶಾತ್ತ್ವಹಿಕುಂಡಲವತ್, ಪ್ರಕಾಶಾಶ್ರಯವದ್ವಾ ತೇಜಸ್ತ್ವಾತ್, ಪೂರ್ವವದ್ವಾ, ಈ ಪ್ರಕಾರವಾಗಿ ಮೂರು ದೃಷ್ಟಾಂತಗಳಿಂದ ಭಗವದ್ಗುಣಗಳಿಗೆ ಸವಿಶೇಷವಾದ ಅತ್ಯಂತಾಭೇದವನ್ನು ವಿಶ್ವಾಸದಿಂದ ಹೇಳಿದರು.

ಹೀಗೆ ಸಾಕ್ಷಾತ್ತಾಗಿ ಅಧಿಕರಣಾರ್ಥವನ್ನು ವ್ಯಾಖ್ಯಾನ ಮಾಡಿ, ಈಗ ಅನುಷಂಗ ಸಿದ್ಧವಾದ (ಉಕ್ತಾರ್ಥವನ್ನು ಅನುಸರಿಸಿ ಸಿದ್ಧವಾದ ಅರ್ಥವನ್ನು) ತೋರಿಸುತ್ತಾರೆ –

..... ತಚ್ಚ ನಾಭಿಹಿತಾನ್ವಯಃ ।

ಭಗವಂತನ ಧರ್ಮಗಳಿಗೆ ಸವಿಶೇಷಾಭೇದವನ್ನು ಸಮರ್ಥಿಸಿರುವುದರಿಂದಲೇ ಅಭಿಹಿತಾನ್ವಯವಾದವು (ಪದಗಳಿಂದ ಹೇಳಲ್ಪಟ್ಟ ಪದಾರ್ಥಗಳಿಂದ ಅನ್ವಯಜ್ಞಾನ ವಾಗುವುದು ಎನ್ನುವ ವಾದ) ಕೂಡುವುದಿಲ್ಲ.

ಅಭಿಹಿತಾನ್ವಯವಾದವು ಅಯುಕ್ತವೆಂದಾದರೆ ಸೂತ್ರಕಾರರಿಗೆ ಅಭಿಮತವಾದ ಅರ್ಥವು ಯಾವುದು? ಉಪಾಯವಿಲ್ಲದೆ ಅನ್ವಯಜ್ಞಾನವು ಸಂಭವಿಸುವುದಿಲ್ಲ. ಅನ್ವಿತಾಭಿಧಾನವೆಂದು ಹೇಳುತ್ತೇವೆ ಎಂದರೆ, ಅಲ್ಲಿಯೂ ವಿಶೇಷವಿದೆ ಎಂಬ ಅಭಿಪ್ರಾಯದಿಂದ ಹೇಳುತ್ತಾರೆ –

ಯದಾಶೇಷವಿಶೇಷಾಣಾಮುಕ್ತಿಃ ಸಾಮಾನ್ಯತೋ ಭವೇತ್ ॥೧೯೧॥

ಪದೈಕೇನಾಪ್ಯುತ್ತರೇಣ ವಿಶೇಷಾವಗತಿರ್ಭವೇತ್ ।

ಎಲ್ಲ ವಿಶೇಷಣಗಳಿಂದ ಅನ್ವಿತವಾದ ಪದಾರ್ಥಕ್ಕೆ ಉಕ್ತಿಯು ಸಾಮಾನ್ಯವಾಗಿ ಪದಗಳಲ್ಲಿ ಮುಖ್ಯವಾದ ಮೊದಲನೆಯ ಪದದಿಂದ ಆಗುವುದಾದರೂ, ಆಮೇಲಿನ ಪದಗಳಿಂದ ವಿಶೇಷವಾದ ಅನ್ವಯಜ್ಞಾನವು ಆಗುವುದು.

ಹಿಂದೆ ಉಕ್ತವಾದ 'ತಚ್ಚ ನಾಭಿಹಿತಾನ್ವಯಃ' ಎನ್ನುವಲ್ಲಿ 'ತತ್' ಶಬ್ದದಿಂದ ಪರಾಮರ್ಶಿತವಾದ ಹೇತುವನ್ನು ಹೇಳುತ್ತಾರೆ –

ಯತೋಽಶೇಷವಿಶೇಷಾಣಾಂ ವಸ್ತುನಾಸ್ತ್ಯೇವ ಚೈಕತಾ ॥೧೯೨॥

ಅತಃ ಸಾಮಾನ್ಯತೋ ಜ್ಞಾತಃ ಪದಾಂತರಬಲಾತ್ಪುನಃ ।

ಭವೇದ್ವಿಶೇಷತೋ ಜ್ಞಾತಸ್ತೇನ ಸ್ಯಾದನ್ವಿತೋಕ್ತಿತಾ ॥೧೯೩॥

ಯಾವ ಕಾರಣದಿಂದ ಎಲ್ಲ ವಿಶೇಷಣಗಳಿಗೆ ಬ್ರಹ್ಮನಿಂದ ಏಕತ್ವವೂ ವಿಶೇಷವೂ ಇದ್ದೇ ಇರುವುದೋ, ಆದಕಾರಣ ಒಂದೊಂದು ಪದದಿಂದಲೂ ಸಾಮಾನ್ಯವಾದ ಅನ್ವಿತದಿಂದ ತಿಳಿಯಲ್ಪಟ್ಟ ಅರ್ಥವು ಮತ್ತೆ ಇತರ ಪದಗಳ ಸನ್ನಿಧಾನ ಬಲದಿಂದ ವಿಶೇಷವಾದ ಅನ್ವಯದಿಂದ ತಿಳಿಯಲ್ಪಡುವುದು. ಆದ್ದರಿಂದ ಪದಗಳಿಗೆ ಅನ್ವಿತಾಭಿಧಾಯಿತ್ವವು ಉಪಪನ್ನವಾಗುವುದು.

ಉಭಯವ್ಯಪದೇಶಾತ್ ಎಂಬ ಅಧಿಕರಣದಲ್ಲಿ ಧರ್ಮಗಳಿಗೆ ಬ್ರಹ್ಮನೊಂದಿಗೆ ಸವಿಶೇಷಾಭೇದವು ಹೇಳಲ್ಪಡುವುದು ಎಂದಾದ ಪಕ್ಷದಲ್ಲಿ, ಅನ್ವಿತಾಭಿಧಾನದ ಸಂಭವನೀಯತೆಯನ್ನು ಹೇಳುವುದು ಈ ಅಧಿಕರಣದ ಸಿದ್ಧಾಂತವಲ್ಲ. ಏಕೆಂದರೆ ಸಂಭವನೀಯತೆಯು ಸಿದ್ಧಿಯೆನಿಸದು, ಹೀಗೆ ಆಶಂಕಿಸಿದರೆ ಅನುಭವದಿಂದಲೂ ಈ ಅರ್ಥವು ನಿಶ್ಚಿತವಾಗಿದೆ ಎನ್ನುತ್ತಾರೆ –

ಸ್ವಾರ್ಥ ಏವಾನ್ವಿತೋ ಯಸ್ಮಾತ್ಕೇನಚಿತ್ತದ್ವಿಶೇಷತಃ ।

ಅನೇನೇತಿ ತದುಕ್ತ್ಯೈವ ಜ್ಞಾಯತೇಽನುಭವೇನ ಹಿ ॥೧೯೪॥

ಸಾಮಾನ್ಯವಾಗಿ ಪದಗಳು ಪ್ರತ್ಯೇಕವಾಗಿ ಅನ್ವಿತಾಭಿಧಾಯಿಗಳೇ ಆಗಿರುತ್ತವೆ. ಅಂದರೆ ಯಾವುದರಿಂದಲಾದರೂ ಸಂಬದ್ಧವಾಗಿಯೇ ಸ್ವಾರ್ಥವನ್ನು ತಿಳಿಸಿ ಕೊಡುತ್ತವೆ. ವಿಶೇಷವಾಗಿ ಅನ್ವಿತಾರ್ಥ ಪ್ರತೀತಿಯು ಪರಸ್ಪರ ಸನ್ನಿಧಾನರೂಪವಾದ ಪದಗಳ ಶಕ್ತಿಯಿಂದ ಆಗುತ್ತದೆ ಎನ್ನುವುದು ಅನುಭವದಿಂದ ಸಿದ್ಧವಾಗಿದೆ.

ಅಭೇದದಿಂದ ವಿಶೇಷಾಭಿಧಾನವು ಪ್ರಾಪ್ತವಾಗುವುದು ಎನ್ನುವುದು ಅನುಭವಕ್ಕೆ ವಿರುದ್ಧವಾದುದರಿಂದ ಅಯುಕ್ತವು. ಆದ್ದರಿಂದ ವಿಶೇಷವನ್ನು ಕಲ್ಪನೆ ಮಾಡಬೇಕು ಎಂದು ಭಾವ. ಅನುಭವವು ಹೇಗಿದೆಯೋ ಹಾಗೆಯೇ ಸ್ವೀಕಾರ ಮಾಡಬೇಕು ಎಂದಿರುವುದರಿಂದ, ಇದರಲ್ಲಿ ಯಾವುದೇ ಅತಿಪ್ರಸಂಗವೂ ಇರುವುದಿಲ್ಲ.

ಅನ್ವಿತಾಭಿಧಾನವನ್ನು ಅಂಗೀಕರಿಸದಿದ್ದರೆ ಬಾಧಕವೇನು ಎಂದು ಹೇಳುತ್ತಾರೆ –

ಯದ್ಯನನ್ವಿತಮೇವೈತತ್ಪದಂ ಸ್ವಾರ್ಥಂ ವದೇದಿಹ ।

ತಥಾನ್ಯಾನ್ಯಪಿ ಸರ್ವಾಣಿ ಕಃ ಕುರ್ಯಾದನ್ವಯಂ ಪುನಃ ॥೧೯೫॥

ಸತ್ಯ ಜ್ಞಾನಾದಿ ವಾಕ್ಯಗಳಲ್ಲಿ ಬ್ರಹ್ಮನೇ ಮುಂತಾದ ಮೊದಲನೆಯ ಪದವು ಅನ್ವಿತವಾಗದೆಯೇ ಸ್ವಾರ್ಥವನ್ನು ಹೇಳುವಂತೆಯೇ, ಆಮೇಲಿನ ಎಲ್ಲ ಪದಗಳೂ ಹಾಗೆಯೇ ಅನನ್ವಿತವಾಗಿಯೇ ಸ್ವಾರ್ಥಗಳನ್ನು ಹೇಳಿದರೆ, ಮತ್ತೆ ಅವುಗಳಿಗೆ ಸಮನ್ವಯವನ್ನು ಯಾವನು ಮಾಡಿಯಾನು? ಆದ್ದರಿಂದ ಉತ್ತರೋತ್ತರ ಪದಗಳು ಪ್ರಥಮ ಪದದಿಂದ ಲಬ್ಧವಾದ ಅನ್ವಯದ ಸಹಾಯದಿಂದ ವಿಶೇಷವಾಗಿಯೇ

ಅನ್ವಿತಾರ್ಥವನ್ನು ತಿಳಿಸಿಕೊಡುತ್ತವೆ. ಹೀಗೆ ಅಂಗೀಕರಿಸದಿದ್ದರೆ ಅನ್ವಯಜ್ಞಾನವೇ ಆಗಲಾರದು.

ಮೇಲೆ ಹೇಳಿದ ವಿಷಯವನ್ನೇ ವಿಸ್ತರಿಸುತ್ತಾರೆ –

ವ್ಯಾಪಾರೋ ನ ಹಿ ಶಬ್ದಸ್ಯ ಪರಃ ಸ್ವಾರ್ಥಪ್ರಕಾಶನಾತ್ ।

ಪುಮಾನಪ್ಯೇಕವಾರೋಕ್ತ್ಯಾ ಕೃತಕೃತ್ಯೋ ಯದಾ ಭವೇತ್ ॥೧೯೬॥

ಅನ್ವಯಸ್ಯ ಕಥಂ ಜ್ಞಾನಂ ಶಬ್ದಾರ್ಥತ್ವಂ ಯದಾಸ್ಯ ನ ।

ಈ ಅನ್ವಯಕ್ಕೆ ಪದಾಭಿಧೇಯತ್ವವು ಇಲ್ಲದಿದ್ದರೆ ಅನ್ವಯದ ಜ್ಞಾನವಾದರೂ ಹೇಗೆ ಆದೀತು? ಬೇರೆ ಉಪಾಯವಿಲ್ಲವಾದ್ದರಿಂದ, ಬೇರೆ ಯಾವ ರೀತಿಯಿಂದಲೂ ಆಗಲಾರದು ಎಂದರ್ಥ. ಪದಕ್ಕೆ ಸ್ವಾರ್ಥವನ್ನು ಪ್ರಕಾಶಿಸುವದರ ಹೊರತು ಇತರ ವ್ಯಾಪಾರವು ಇಲ್ಲವೆಂದು ಪ್ರಸಿದ್ಧಿ. ಅಂದರೆ ಪದವು ಅನ್ವಯವನ್ನು ಹೇಳುವುದಿಲ್ಲ. ಆದ್ದರಿಂದ ಪದವು ಅನ್ವಯಜ್ಞಾನಕ್ಕೆ ಉಪಾಯವಾಗಲಾರದು ಎಂದರ್ಥ. ಒಂದು ಸಲ ಹೇಳುವುದರಿಂದಲೇ ಕೃತಾರ್ಥನಾಗುವುದರಿಂದ ವಕ್ತೃವಾದ ಪುರುಷನೂ ಕೂಡ ಅನ್ವಯಜ್ಞಾನಕ್ಕೆ ಉಪಾಯನಾಗಲಾರನು.

ಪದಗಳಿಂದ ಹೇಳಲ್ಪಟ್ಟ ಪದಾರ್ಥಗಳಿಗೆ ಅನ್ವಯಬೋಧಕತ್ವವಿದೆ ಎನ್ನುವ ಪಕ್ಷದಲ್ಲಿ ದೋಷವನ್ನು ಹೇಳುತ್ತಾರೆ –

ಯದೈವಾನನ್ವಿತಾರ್ಥಸ್ಯ ವಚನಂ ತೈಃ ಪದೈರ್ಭವೇತ್ ॥೧೯೭॥

ಅನನ್ವಿತಃ ಸ್ಯಾಚ್ಛಬ್ದಾರ್ಥೋ ನ ತದರ್ಥೋ ಹಿ ಸೋಽನ್ವಯಃ ।

ಪದಗಳು ಅನನ್ವಿತವೇ ಆದ ಸ್ವಾರ್ಥಗಳನ್ನು ಮಾತ್ರ ಪ್ರತಿಪಾದಿಸಿ ನಿವೃತ್ತಿಯನ್ನು ಹೊಂದುತ್ತವೆ. ಅನಂತರದಲ್ಲಿ ಪದಾರ್ಥಗಳೇ ಆಕಾಂಕ್ಷಾದಿಗಳನ್ನು ಹೊಂದಿ ಅನ್ವಯವನ್ನು ತಿಳಿಸಿ ಕೊಡುತ್ತವೆ ಎಂದು ಹೇಳುವುದಾದರೆ, ಆಗ ಶಬ್ದಾರ್ಥವು ಅನನ್ವಿತವೇ ಆಗುವುದು. ಏಕೆಂದರೆ ಪದಾರ್ಥಗಳಿಂದ ಹೇಳಲ್ಪಟ್ಟ ಆ ಅನ್ವಯವು ಆ ಪದಗಳ ಅರ್ಥವಲ್ಲ. ಹಾಗಿದ್ದರೆ ಪ್ರತ್ಯಕ್ಷಕ್ಕೆ ಕಂಡ ಧೂಮದಿಂದ ಅನುಮಿತವಾದ ಅಗ್ನಿಗೆ ಪ್ರತ್ಯಕ್ಷ ವಿಷಯತ್ವವು ಬರಬೇಕಾದೀತು.

ಹಾಗಾದರೆ ವಾಕ್ಯಕ್ಕೆ ಅನ್ವಯಬೋಧಕತ್ವ ಶಕ್ತಿಯಿರಲಿ ಎಂದರೆ –

ನಿರಾಕಾಂಕ್ಷ್ಯಪದಾನ್ಯೇವ ವಾಕ್ಯಮಿತ್ಯುಚ್ಯತೇ ಬುಧೈಃ ॥೧೯೮॥

ತತ್ತದರ್ಥಾಭಿಧಾನೇನ ಸ್ಯಾನ್ನಿರಾಕಾಂಕ್ಷತಾ ಚ ಸಾ ।

ಅಪೂರ್ತೇಸ್ತಾವದರ್ಥಾನಾಮಾಕಾಂಕ್ಷಾ ಪೂರ್ವಮಿಷ್ಯತೇ ॥೧೯೯॥

ಆಕಾಂಕ್ಷಾರಹಿತವಾದ ಪದಗಳೇ ವಾಕ್ಯವೆಂಬುದಾಗಿ ಜ್ಞಾನಿಗಳು ಹೇಳುತ್ತಾರೆ.

ಪದಗಳನ್ನು ಬಿಟ್ಟು ವಾಕ್ಯವಿಲ್ಲ ಎಂದರ್ಥ. ಪದಗಳು ಜಿಜ್ಞಾಸಿತವಾದ ಅರ್ಥಗಳನ್ನು ಬೋಧಿಸುತ್ತಿದ್ದಂತೆಯೇ ಜಿಜ್ಞಾಸೆಯಿಂದ ನಿವೃತ್ತವಾಗುತ್ತವೆ. (ಜಿಜ್ಞಾಸಾ ಎಂದರೆ ಆಕಾಂಕ್ಷೆ, ನಿರಾಕಾಂಕ್ಷತಾ ಎಂದರೆ ನಿವೃತ್ತವಾದ ಜಿಜ್ಞಾಸಾ). ಅದು ಪದಗಳ ಸ್ವಭಾವವೇ ಆಗಿದೆ. ಗವಾದಿ ಪದಗಳನ್ನು ಹೇಳುವುದಕ್ಕೆ ಮುಂಚೆ ಆನಯ ಎಂದು ಹೇಳಿದಾಗ, ಯಾವುದನ್ನು ತರುವುದು ಇತ್ಯಾದಿಯಾಗಿ ಯಾವ ಜಿಜ್ಞಾಸೆಯು ಇರುವುದೋ ಅದು, ಗವಾದಿ ಪದಗಳನ್ನು ಹೇಳುವವರೆಗೆ ನಿವೃತ್ತಿಯನ್ನು ಹೊಂದುವುದಿಲ್ಲ. ಆನಂತರವೇ ಆ ಜಿಜ್ಞಾಸೆಯು ನಿವೃತ್ತವಾಗುವುದು.

ಇನ್ನು ವಾಕ್ಯಾಂತ್ಯವಾದ ವರ್ಣವೂ, ವರ್ಣಮಾಲೆಯೂ ಇವೆರಡೂ ಅನ್ವಯ ಬೋಧಕಗಳು ಎನ್ನುವ ಪಕ್ಷವು ಅತಿ ದುರ್ಬಲವಾದ್ದರಿಂದ ಅದನ್ನು ದೂಷಿಸಲಿಲ್ಲ. ಜಿಜ್ಞಾಸಾಧಿಕರಣ ವ್ಯಾಖ್ಯಾನದ 'ಶಕ್ತಿಶ್ಚೈವಾನ್ವಿತೇ ಸ್ವಾರ್ಥೇ' ಎನ್ನುವ ಶ್ಲೋಕದಲ್ಲಿ 'ಗೌರವಂ ಕಲ್ಪನೇಽನ್ಯಥಾ' ಎನ್ನುವ ಪದವ್ಯಾಖ್ಯಾನದ ಸಂದರ್ಭದಲ್ಲಿ ಇವೆರಡು ಪಕ್ಷಗಳ ಅತಿಮಂದತ್ವವನ್ನು ನಿರೂಪಿಸಲಾಗಿದೆ.

ಹಾಗಾದರೆ ವರ್ಣಪದ ವಿಭಾಗವಿಲ್ಲದಿರುವ ಸ್ಫೋಟಾಖ್ಯವಾದ ವಾಕ್ಯವೇ ಅನ್ವಯವನ್ನು ಪ್ರತಿಪಾದಿಸುತ್ತದೆ. ಪದಗಳಾದರೋ ಅದಕ್ಕೆ ಅಭಿವ್ಯಂಜಕಗಳಾಗಿ ಉಪಯುಕ್ತವಾಗುತ್ತವೆ ಎಂದು ಹೇಳಿದರೆ –

ಕರ್ಮಕರ್ತೃಕ್ರಿಯಾಣಾಂ ತು ಪೂರ್ತೌ ಕೋಽನ್ಯೋಽನ್ವಯೋ ಭವೇತ್ ।

ಕರ್ಮ–ಕರ್ತೃ–ಕ್ರಿಯೆಗಳನ್ನು, ಅಂದರೆ ಪರಸ್ಪರ ಸಂಸೃಷ್ಟಗಳಾದ ಜಿಜ್ಞಾಸಿತ ಪದಾರ್ಥಗಳನ್ನು ಪದಗಳಿಂದ ಪೂರ್ತಿಗೊಳಿಸುತ್ತಿರಲು, ಬೇರೆ ಯಾವ ಅನ್ವಯವು ಪ್ರತಿಪಾದಿಸಲು ಯೋಗ್ಯವಾಗುವುದು?

ಇದರ ಅಭಿಪ್ರಾಯವೇನೆಂದರೆ – ಸ್ಫೋಟವು ಅನ್ವಯವನ್ನು ಪ್ರತಿಪಾದಿಸುತ್ತದೆ ಎಂದು ಹೇಳುವವನು ಸ್ಫೋಟವಿದೆ ಎನ್ನಲು ಪ್ರಮಾಣವನ್ನು ಹೇಳಬೇಕು. ಅನ್ವಯ ಜ್ಞಾನವು ಬೇರೆ ರೀತಿಯಿಂದ ಕೂಡುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಪದಗಳಿಗೇನೆ ಸಂಸೃಷ್ಟಾರ್ಥ ಪ್ರತಿಪಾದಕತ್ವವು ಕೂಡುತ್ತದೆ. ಅದಕ್ಕಿಂತ ಬೇರೆಯಾದ ಅನ್ವಯವನ್ನು ಹೇಳಬೇಕಾಗಿಲ್ಲವಾದ್ದರಿಂದ ಸ್ಫೋಟಾನ್ವೇಷಣೆಯನ್ನು ಏತಕ್ಕಾಗಿ ಮಾಡಬೇಕು?

ಹೀಗೆ ಅಂಗೀಕರಿಸದೇ ಇದ್ದರೆ ಬಾಧಕವನ್ನು ಹೇಳುತ್ತಾರೆ –

ಅಪೂರ್ತಿಶ್ಚೇತ್ಪದೈರುಕ್ತಃ ಕಿಂ ನೃಶೃಂಗೇಣ ಪೂರ್ಯತೇ ॥೨೦೦॥

ಪ್ರಮಿತವಾದ ಪದಗಳಿಂದ ಅನ್ವಯವನ್ನು ಹೇಳದೇ ಇದ್ದರೆ, ಮನುಷ್ಯನ ಕೋಡಿಗೆ ಸದೃಶವಾದ, ಅಂದರೆ ಅಪ್ರಾಮಾಣಿಕವಾದ, ಸ್ಫೋಟದಿಂದ ಅನ್ವಯವು ಹೇಳಲ್ಪಡುವುದೇನು?

ಹಾಗಾದರೆ ಪದಗಳೇ ಪದಾರ್ಥಗಳ ಪ್ರತಿಪಾದನೆಗೆ ಸಹಕಾರಿಯಾದ ಅವಾಂತರ ವ್ಯಾಪಾರವುಳ್ಳವುಗಳಾಗಿ ಅನ್ವಯವನ್ನು ತಿಳಿಸಿಕೊಡುತ್ತವೆ ಎಂದರೆ ಅದು ಸರಿಯಲ್ಲ. ಏಕೆಂದರೆ ಹಾಗೆ ಒಪ್ಪಿದರೆ ಪದಗಳಿಗೆ ವಿರಮ್ಯ ವ್ಯಾಪಾರವು ಬರಬೇಕಾಗುವುದು. ಆಗಲಿ, ಅದರಿಂದ ದೋಷವೇನು ಎಂದು ಕೇಳಿದರೆ –

ವ್ಯಾಪಾರಶ್ಚೇತ್ತುನಸ್ತೇಷಾಮನುಕ್ತಾವಪಿ ಕಿಂ ನ ಸಃ ।

ಉಕ್ತೇ ಬುದ್ಧಿಸ್ಥತಾಹೇತೋರ್ಯದಿ ವ್ಯಾಪಾರ ಇಷ್ಯತೇ ॥೨೦೧॥

ಚೇತನಗಳಲ್ಲಿ ಮಾತ್ರ ಕಂಡುಬರುವ ವಿರಮ್ಯ ವ್ಯಾಪಾರವನ್ನು ಅಚೇತನವಾದ ಪದಗಳಿಗೂ ಅಂಗೀಕರಿಸುವುದಾದರೆ, ಆಗ ನಾವು ಕೇಳುತ್ತೇವೆ – ಆ ಪದಗಳನ್ನು ಹೇಳದೇ ಇದ್ದರೂ ಪದಾರ್ಥಗಳನ್ನು ಪ್ರತಿಪಾದಿಸುವ ವಿಷಯದಲ್ಲಿ ವ್ಯಾಪಾರವು ಏಕೆ ಆಗುವುದಿಲ್ಲ? ಪದಗಳು ಬುದ್ಧಿಸ್ಥತ್ವ ಹೇತುವಿನಿಂದಲೇ (ಜ್ಞಾತಗಳಾಗಿಯೇ) ಜ್ಞಾನವನ್ನು ಹುಟ್ಟಿಸುತ್ತವೆ. ಅದಕ್ಕೆ ವಚನವು ಅವಶ್ಯಕ. ಹೇಳದೇ ಇದ್ದರೆ ಜ್ಞಾತವೇ ಆಗುವುದಿಲ್ಲವಾದ್ದರಿಂದ ವ್ಯಾಪಾರವೂ ಇರುವುದಿಲ್ಲ. ಹೀಗೆ ಅವನು ಉತ್ತರಿಸಿದರೆ ಆಗ ಮತ್ತೆ ಸಿದ್ಧಾಂತಿಯು ಪ್ರಶ್ನಿಸುತ್ತಾನೆ –

ಬುದ್ಧಿಸ್ಥತ್ವಾಯ ಯತ್ನಂ ನ ಕಥಂ ಕುರ್ಯುಃ ಪುರೈವ ಚ ।

ಪುರುಷಾಧೀನತಾ ತೇಷಾಂ ಯದಿ ಪಶ್ಚಾಚ್ಚ ಸಾ ಸಮಾ ॥೨೦೨॥

ಬುದ್ಧಿವಿಷಯತ್ವಕ್ಕಾಗಿ ಯಾವ ಪದಗಳ ಉಚ್ಚಾರಣೆಯು ಅವಶ್ಯಕವಾಗಿದೆಯೋ ಆ ಪದಗಳು ಹೇಳುವುದಕ್ಕಿಂತ ಮೊದಲೇ ಪ್ರಯತ್ನವನ್ನು ಹೇಗೆ ಮಾಡಲಾರವು ? ಅಂದರೆ ಸುಮ್ಮನೆ ಕುಳಿತಿರುವವನನ್ನು ಉಚ್ಚಾರಣೆಗಾಗಿ ಆ ಪದಗಳು ಏಕೆ ಪ್ರೇರಿಸುವುದಿಲ್ಲ? 'ಪುರಷಾಧೀನತಾ' ಇತ್ಯಾದಿ ವಚನದಿಂದ ಅದಕ್ಕೆ ಉತ್ತರವನ್ನು ಶಂಕಿಸುತ್ತಾರೆ – ಆ ಪದಗಳು ಚೇತನಗಳಾಗಿದ್ದರೆ ಹಾಗೆ ಹೇಳಬಹುದಿತ್ತು. ಆದರೆ ಅವುಗಳು ಚೇತನನಾದ ಪುರುಷನ ಅಧೀನವಾಗಿವೆ. ವಕ್ತೃ ಪುರುಷನು ಯಾವಾಗ ಪದಗಳನ್ನು ಉಚ್ಚಾರಣೆಯಿಂದ ಹೊರಹಾಕುವನೋ ಆಗ ಅವುಗಳು ಶ್ರೋತೃವಿನ ಬುದ್ಧಿಯ ವಿಷಯವಾಗಿ ಪದಾರ್ಥ ಪ್ರತಿಪಾದನಾದಿ ವ್ಯಾಪಾರಕ್ಕೆ ಕಾರಣವಾಗುತ್ತವೆ. ಆಮೇಲೆ ಅನ್ವಯವನ್ನು ತಿಳಿಸಿಕೊಡುವುದರಲ್ಲಿ ಪದಗಳಿಗೆ ಪುರುಷಾಧೀನತ್ವವು ಸಮಾನವಾದುದು. ಪದಗಳು ತಾವು ಏನೂ ಮಾಡುವುದಿಲ್ಲ. ಪುರಷಾಧೀನವಾಗಿ ಅವುಗಳಿಗೆ ವಿರಮ್ಯ ವ್ಯಾಪಾರವು ಕೂಡುವುದು ಎಂದರ್ಥ.

ಹಾಗಾದರೆ ಅನ್ವಯ ಜ್ಞಾನಕ್ಕೆ ಶ್ರೋತೃ ಪುರುಷನು ಕರ್ತನೇ. ಅನನ್ವಿತವಾದ ಅರ್ಥವನ್ನು ಹೇಳುವ ಪದಗಳೇ ಕರಣಗಳು. ಅವುಗಳಿಂದ ತಿಳಿಯತಕ್ಕ ಅರ್ಥಗಳ ಅನ್ವಯಜ್ಞಾನಕ್ಕಾಗಿ ಶ್ರೋತೃ ಪುರುಷನು ಪ್ರಯತ್ನ ಮಾಡುತ್ತಾನೆ ಎಂದರೆ –

ಪುಮಾನೇವಾನ್ವಯಾಯೈಷಾಂ ಯದಿ ಪಶ್ಚಾದ್ವಿಚೇಷ್ಟತೇ ।

ಅನನ್ವಿತಾಭಿಧಾನಾನಾಂ ಸ ಏವಾರ್ಥಾಂತರೋಕ್ತಿಷು ॥೨೦೩॥

ಯತತಾಂ ಶಬ್ದಶಕ್ತಿಶ್ಚೇತ್ತತ್ರ ನೈವಾನ್ವಯೇ ಕಥಮ್ ।

ಅನ್ವಯಜ್ಞಾನಕ್ಕಾಗಿಯೇ ಪದಗಳಿಂದ ಪದಾರ್ಥಸ್ಮರಣೆಯಾದ ಮೇಲೆ ಅನನ್ವಿತ ವಾದುದನ್ನೂ ಹೇಳುವ ಈ ಪದಗಳ ಸಹಾಯದಿಂದ ಆ ಪುರುಷನೇ ವ್ಯಾಪಾರ ಮಾಡುತ್ತಾನೆ ಎಂದಾದರೆ, ಆ ಪುರುಷನೇ ಅರ್ಥಾಂತರ ವಿಷಯಕವಾದ ಉಕ್ತಿಗೆ ಸಂಬಂಧಿಸಿದ ಕಾರ್ಯಜ್ಞಾನಗಳಲ್ಲಿ ಪ್ರಯತ್ನಿಸಲಿ. ಅಂದರೆ ಅನ್ವಯವನ್ನು ಹೇಳದೇ ಇದ್ದ ಪದಗಳಿಂದಲೂ ಅನ್ವಯಜ್ಞಾನವು ಆಗುವುದಾದರೆ ಯಾವದೋ ಪದದಿಂದ ಬೇರೆ ಯಾವುದೋ ಪದಾರ್ಥದ ಜ್ಞಾನವು ಆಗಬೇಕಾಗುವುದು ಎಂದರ್ಥ. ಅಂದರೆ ಗವಾದಿ ಪದಗಳಿಂದ ಅಶ್ವಾದಿಗಳು ಪ್ರತಿಪಾದಿಸಲ್ಪಡಲಿ ಎಂದು ಭಾವ. ಹಾಗೆ ಹೇಳಕೂಡದು. ಏಕೆಂದರೆ ಗವಾದಿ ಪದಗಳಿಗೆ ಅಶ್ವಾದಿಗಳಲ್ಲಿ ಶಕ್ತಿಯೇ ಇಲ್ಲ ಎಂದರೆ , ಅನ್ವಯಜ್ಞಾನದ ವಿಷಯದಲ್ಲಿಯೂ ಹಾಗೆಯೇ. ಅಂದರೆ ಅನ್ವಯದಲ್ಲಿ ಶಕ್ತಿಯಿಲ್ಲದಿರುವ ಈ ಪದಗಳಿಂದ ಅನ್ವಯಜ್ಞಾನಕ್ಕಾಗಿ ಯಾರಾದರೂ ಹೇಗೆ ಪ್ರಯತ್ನ ಮಾಡುವರು?

'ಯದ್ಯನನ್ವಿತಂ' ಇತ್ಯಾದಿಗಳಿಂದ ಹೇಳಲ್ಪಟ್ಟ ಅರ್ಥವನ್ನು ಉಪಸಂಹಾರ ಮಾಡುತ್ತಾರೆ –

ತತ್ಕಲ್ಪನಾಗುರುತ್ವಾದಿದೋಷತೋಽಭಿಹಿತಾನ್ವಯಃ ॥೨೦೪॥

ಅನುಭೂತಿವಿರುದ್ಧಶ್ಚ ತ್ಯಾಜ್ಯ ಏವ ಮನೀಷಿಭಿಃ ।

ಈ ಪ್ರಕಾರವಾಗಿ ಕಲ್ಪನಾಗೌರವಾದಿ ದೋಷದಿಂದ ಕೂಡಿದ ಅಭಿಹಿತಾನ್ವಯ ಮೊದಲಾದ ಪಕ್ಷಗಳೆಲ್ಲವೂ ಅನುಭವಕ್ಕೆ ವಿರುದ್ಧವಾದುದರಿಂದ ಜ್ಞಾನಿಗಳಿಂದ ಬಿಡಲಿಕ್ಕೆ ಅರ್ಹವೇ ಆಗಿವೆ.

ಅನುಭವ ವಿರೋಧವು ಹೇಗೆ ಎಂದರೆ –

ಕರ್ತೃಶಬ್ದೇ ಹ್ಯಭಿಹಿತೇ ಧರ್ಮಸಾಮಾನ್ಯವೇದನಾತ್ ॥೨೦೫॥

ವಿಶೇಷಧರ್ಮಮನ್ವಿಚ್ಛನ್ ಕಿಮಿತ್ಯೇವ ಹಿ ಪೃಚ್ಛತಿ ।

ಕರ್ತೃವಾಚಕ ಶಬ್ದವನ್ನು ಪ್ರಯೋಗಿಸುತ್ತಿರಲು ಅದನ್ನು ಕೇಳಿದ ಪುರುಷನು ಯಾವುದನ್ನು ಎಂದು ಪಚನಾದಿ ವಿಶೇಷ ಧರ್ಮಜ್ಞಾನವನ್ನು ಅಪೇಕ್ಷಿಸಿಯೇ ಪ್ರಶ್ನೆ ಮಾಡುತ್ತಾನೆ. ಸಾಮಾನ್ಯ ಧರ್ಮಜ್ಞಾನದಿಂದಲೇ ವಿಶೇಷ ಜಿಜ್ಞಾಸೆಯು ಹುಟ್ಟುತ್ತದೆ. ಆದ್ದರಿಂದ ಪದದಿಂದ ಧರ್ಮಸಾಮಾನ್ಯಗಳಿಂದ ಕೂಡಿದ ವಸ್ತುವೇ ಹೇಳಲ್ಪಡುತ್ತದೆ ಎಂದು ತಿಳಿಯುತ್ತದೆ.

ಕಿಂ ಎಂಬ ಪ್ರಶ್ನೆಯು ವಿಶೇಷ ಜಿಜ್ಞಾಸೆಯಿಂದ ಎನ್ನುವುದು ಹೇಗೆ ಎಂದರೆ –

ಗುಣಕ್ರಿಯಾದಿಧರ್ಮಾಣಾಂ ವಿಶೇಷೇ ಕಥಿತೇ ಪುನಃ ।।೨೦೬।।

ನಿರಾಕಾಂಕ್ಷೋ ಭವೇದ್ಯಸ್ಮಾಚ್ಛಬ್ದಾ ಅನ್ವಿತವಾಚಕಾಃ ।

ಅತೋಽನಂತಗುಣಾತ್ಮೈಕೋ ಭಗವಾನೇಕ ಏವ ತು ।।೨೦೭।।

ಉಚ್ಯತೇ ಸರ್ವವೇದೈಶ್ಚ ..... ।

ಗುಣ ಕ್ರಿಯಾದಿ ಧರ್ಮಗಳಿಗೆ ವಿಶೇಷವನ್ನು ಹೇಳಿದ ಮೇಲೆಯೇ ಜಿಜ್ಞಾಸಾ ಪುರುಷನ ಆಕಾಂಕ್ಷೆಯು ಪೂರ್ಣವಾಗುವುದು. ಆದ್ದರಿಂದ ವಿಶೇಷ ಧರ್ಮವನ್ನು ಇಚ್ಛಿಸುವವನು ಕಂ ಇತ್ಯಾದಿ ಪ್ರಶ್ನೆ ಮಾಡುತ್ತಾನೆ. ವಿಶೇಷಜ್ಞಾನವು ಸಾಮಾನ್ಯ ಜ್ಞಾನಪೂರ್ವಕವಾದುದು. ಎಲ್ಲ ಶಬ್ದಗಳೂ ಸಾಮಾನ್ಯವಾಗಿ ಅನ್ವಿತವಾಚಕಗಳೇ ಆಗಿರುತ್ತವೆ ಎಂಬ ಪಕ್ಷವೇ ಗ್ರಾಹ್ಯವು. ಆದ್ದರಿಂದ ಶ್ರೀಹರಿಯೊಬ್ಬನೇ ಅನಂತಗುಣ ಸ್ವರೂಪನು. ಅವನೊಬ್ಬನೇ ವಿಶೇಷವಾಗಿ ಎಲ್ಲ ವೇದಗಳಿಂದಲೂ ಹೇಳಲ್ಪಡುತ್ತಾನೆ ಹಾಗೂ ಸಕಲ ಧರ್ಮಗಳಿಂದಲೂ ಯುಕ್ತನಾಗಿದ್ದಾನೆ.

ಪರಮತಾಧಿಕರಣಮ್

ಓಂ ಪರಮತಃ ಸೇತೂನ್ಮಾನಸಂಬಂಧಭೇದವ್ಯಪದೇಶೇಭ್ಯಃ ಓಂ

ಪರಮೇಶ್ವರನ ಆನಂದಾದಿ ಗುಣಗಳು ಲೌಕಿಕಾನಂದಾದಿಗಳಿಗೆ ಸಲಕ್ಷಣಗಳೋ ಅಥವಾ ವಿಲಕ್ಷಣಗಳೋ ಎಂದು ವಿಕಲ್ಪ ಪ್ರಾಪ್ತವಾದರೆ, ಮೊದಲನೇ ಕಲ್ಪದಲ್ಲಿ ಆನಂದಾದಿ ಗುಣಗಳಿಗೆ ಆದರ ಹುಟ್ಟದು. ಪ್ರಮಾಣವಿಲ್ಲವಾದ್ದರಿಂದ ಎರಡನೇದು ಕೂಡುವುದಿಲ್ಲ. ಆನಂದಾದಿ ವಾಚ್ಯತ್ವವಿದ್ದ ಪ್ರಯುಕ್ತ ಈಶ್ವರನ ಆನಂದಾದಿಗಳು ಲೌಕಿಕ ಆನಂದಾದಿಗಳಿಗೆ ಸಮಾನವೇ. ಇಲ್ಲದಿದ್ದರೆ ಅಲ್ಲಿ ಆನಂದಾದಿ ಶಬ್ದಗಳ ಪ್ರವೃತ್ತಿಯೇ ಕೂಡುವುದಿಲ್ಲ. ಅತೀಂದ್ರಿಯವಾದುದರಿಂದ ಅಲ್ಲಿ ಉಪದೇಶಾದಿಗಳ ಅಭಾವವಿದ್ದ ಪ್ರಯುಕ್ತ ಸಾದೃಶ್ಯಾನುಮಾನವನ್ನೇ ಅನುಸರಿಸಬೇಕು. ಆದಾದರೋ ಅಸಿದ್ಧವು. ಆದಪ್ರಯುಕ್ತ ಪರಮೇಶ್ವರನ ಆನಂದಾದಿಗಳಿಗೆ ವೇದವೇದ್ಯತ್ವವೇ ಕೂಡುವುದಿಲ್ಲ. ಹೀಗೆ ಆಶಂಕೆ ಬಂದರೆ, ಅದಕ್ಕೆ ಸಮಾಧಾನ ಹೇಳುವುದಕ್ಕಾಗಿ ಈ ಅಧಿಕರಣವು ಪ್ರಸಕ್ತವಾಗಿದೆ. ಅಲ್ಲಿ ಆಶಂಕಿಸಿದ ಸಕಲ ದೋಷಗಳ ಪರಿಹಾರವು ಸ್ಪಷ್ಟವಾಗಿ ತೋರುವುದಿಲ್ಲ ಎಂದರೆ –

..... ತೇ ಚಾಖಿಲವಿಲಕ್ಷಣಾಃ ।

ಸರ್ವೇ ಸರ್ವಗುಣಾತ್ಮಾನಃ ಸರ್ವಕರ್ತಾರ ಏವ ತು ।।೨೦೮।।

ತಥಾಽಪಿ ಸವಿಶೇಷಾಶ್ಚ .....।

ಆ ಗುಣಗಳಾದರೂ ಕೇವಲ ಗುಣಿಯಿಂದ ಅಭಿನ್ನಗಳು ಮಾತ್ರವಲ್ಲ, ಮತ್ತೆ ಎಲ್ಲ ಲೌಕಿಕಾನಂದಾದಿಗಳಿಂದಲೂ ವಿಲಕ್ಷಣಗಳಾಗಿವೆ. ಹೇಗೆ ವಿಲಕ್ಷಣವೆಂದರೆ –

ಎಲ್ಲ ಗುಣಗಳೂ ಸಕಲಗುಣಸ್ವರೂಪಗಳು (ಅಂದರೆ ಆನಂದವು ಜ್ಞಾನಾತ್ಮಕವು, ಜ್ಞಾನವು ಆನಂದಾತ್ಮಕವು ಇತ್ಯಾದಿ), ಜಗತ್ಸೃಷ್ಟ್ಯಾದಿಗಳನ್ನು ಮಾಡತಕ್ಕವುಗಳು. ಹಾಗೂ ಪರಸ್ಪರ ಅಭಿನ್ನಗಳಾಗಿದ್ದರೂ ಸವಿಶೇಷಗಳೂ ಆಗಿವೆ. ಇದರಿಂದ ವೈಲಕ್ಷಣ್ಯ ಪ್ರಕಾರವು ಸೂಚಿತವಾಯಿತು. ಹಾಗೂ ಈ ಅಧಿಕರಣದ ಮೊದಲಿರಡು ಸೂತ್ರಗಳು ವ್ಯಾಖ್ಯಾತವಾಯಿತು.

ಬಾಧಕ ಪರಿಹಾರಕ್ಕಾಗಿ ಪ್ರವೃತ್ತವಾಗಿರುವ ಸೂತ್ರ –

ಓಂ ಬುದ್ಧ್ಯರ್ಥಃ ಪಾದವತ್ ಓಂ

ಈ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಾರೆ –

..... ವಿದ್ವದ್ವ್ಯುತ್ಪತ್ತಿತೋಽಪಿ ಚ ।

ತೈಸ್ತೈಃ ಶಬ್ದೈಶ್ಚ ಭಣ್ಯತೇ ಯುಜ್ಯತೇ ಚೋಪದೇಶತಃ ॥೨೦೯॥

ಅನ್ಯಾನಂದಾದಿಸಾದೃಶ್ಯಮಾನುಕೂಲ್ಯಾದಿ ನಾಪರಮ್ ।

ಹಾಗಿದ್ದರೂ ವಿದ್ವಾಂಸರ ವ್ಯುತ್ಪತ್ತಿಯಿಂದ ಆಯಾಯ ಶಬ್ದಗಳಿಂದಲೂ ಕೂಡ ಹೇಳಲ್ಪಡುತ್ತವೆ. ವಿದ್ವಾಂಸರಲ್ಲದವರಿಗೆ ವಿದ್ವಾಂಸರ ಉಪದೇಶದಿಂದ ಕೂಡುತ್ತದೆ. ಆನುಕೂಲ್ಯದ ದೃಷ್ಟಿಯಿಂದ ಲೌಕಿಕಾನಂದಾದಿ ಸಾದೃಶ್ಯವು(ಆನಂದಕ್ಕೆ ನಿರುಪಾಧಿಕ ಪ್ರಿಯತ್ವ, ಜ್ಞಾನಕ್ಕೆ ಬೋಧಸ್ವರೂಪತ್ವ ಇವೇ ಮುಂತಾದ ರೂಪದಲ್ಲಿ ಸಾದೃಶ್ಯವು) ಕೂಡುತ್ತದೆ. ಆದರೆ ಲೌಕಿಕಾನಂದಾದಿಗಳಂತೆ ಅಲ್ಪತ್ವ, ಅಸ್ಥಿರತ್ವ ಇತ್ಯಾದಿ ದೋಷ ರೂಪವಾದ ಸಾದೃಶ್ಯವು ಇರುವುದಿಲ್ಲ.

ಹಾಗಾದರೆ ವಿಲಕ್ಷಣವಾದ ಆನಂದಾದಿಗಳನ್ನು ಪ್ರತಿಪಾದಿಸಲು ವಿಲಕ್ಷಣವಾದ ಶಬ್ದಗಳನ್ನೇ ಏಕೆ ಪ್ರಯೋಗಿಸುವುದಿಲ್ಲವೆಂದರೆ, ಹಾಗೆ ಮಾಡಿದರೆ ಅಸ್ಮದಾದಿಗಳ ಬುದ್ಧಿಗೆ ಅವು ನಿಲುಕುವುದಿಲ್ಲ. ಅಲ್ಪತ್ವಾದಿ ಸಾದೃಶ್ಯವು ಏಕೆ ಇಲ್ಲವೆಂದರೆ –

ಪೂರ್ಣತ್ವಾದಿ ಮಹತ್ತೇಷಾಂ ವೈಲಕ್ಷಣ್ಯಂ ಶ್ರುತೌ ಶ್ರುತಮ್ ॥೨೧೦॥

ಪೂರ್ಣೋಽಶೇಷನಿಯಂತಾ ಚ ಸುಖಾದುತ್ತಮ ಏಕಲಃ ।

ಗುಣೋರುಸಮುದಾಯೋಽಯಂ ವಾಸುದೇವಃ ಸುನಿಷ್ಕಲಃ ॥೨೧೧॥

ವಾಸುದೇವಶ್ರುತಿಶ್ಚೈಷಾ ಗುಣಾನ್ವಕ್ತಿ ಹರೇಃ ಪರಾನ್ ।

ಭಗವಂತನ ಗುಣಗಳಿಗೆ ಪೂರ್ಣತ್ವಾದಿ ರೂಪವಾದ ಮಹತ್ತಾದ ವೈಲಕ್ಷಣ್ಯವು ಶ್ರುತಿಗಳಲ್ಲಿ ಹೇಳಲ್ಪಟ್ಟಿದೆ. ಈ ವಾಸುದೇವನು ಗುಣಪೂರ್ಣನು, ಸರ್ವಪ್ರೇರಕನು ಸರ್ವನಿಯಾಮಕನು, ಉತ್ತಮಸುಖಸ್ವರೂಪನು, ಸ್ವತಂತ್ರನು, ಶ್ರೇಷ್ಠವಾದ ಗುಣಗಳ ಸಮುದಾಯರೂಪನು, ಸರ್ವಥಾ ನಿಷ್ಕಲನು (ಷೋಡಶಕಲಾರಹಿತನು). ಇವೇ

ಮೊದಲಾದ ಶ್ರೀಹರಿಯ ಉತ್ಕೃಷ್ಟವಾದ ಅನೇಕ ಗುಣಗಳನ್ನು ವಾಸುದೇವ ಶ್ರುತಿಯು ಹೇಳುತ್ತದೆ.

ಫಲಾಧಿಕರಣಮ್

ಓಂ ಫಲಮತ ಉಪಪತ್ತೇಃ ಓಂ

ಈ ಅಧಿಕರಣದಲ್ಲಿ ಪ್ರಾಣಿಗಳಿಗೆ ಸ್ವರ್ಗನರಕಾದಿ ರೂಪವಾದ ಫಲವು ಈಶ್ವರನಿಂದಲೇ ಆಗುವುದು, ಕರ್ಮದಿಂದ ಅಲ್ಲ. ಕರ್ಮವು ಅಚೇತನವಾದ್ದರಿಂದ ಅದಕ್ಕೆ ಫಲದಾತೃತ್ವವು ಕೂಡುವುದಿಲ್ಲ. 'ವಿಜ್ಞಾನಮಾನಂದಂ ಬ್ರಹ್ಮ ರಾತಿರ್ದಾತುಃ' ಇತ್ಯಾದಿ ಶ್ರುತಿಯಿಂದ ಈಶ್ವರನಿಗೇ ಫಲದಾತೃತ್ವವೆಂದು ಸಿದ್ಧವಾಗುತ್ತದೆ. ಆದರೆ ಜೈಮಿನ್ಯಾಚಾರ್ಯರು 'ಏಷ ಹ್ಯೇವ ಸಾಧು ಕರ್ಮ ಕಾರಯತಿ' ಇತ್ಯಾದಿ ಶ್ರುತಿಯಿಂದಲೇ ಪುಣ್ಯ–ಪಾಪರೂಪವಾದ ಧರ್ಮಾಧರ್ಮಗಳು ಈಶ್ವರನಿಂದಲೇ ಮಾಡಿಸಲ್ಪಡುತ್ತವೆ ಎಂದೂ, ಫಲವು ಕರ್ಮದಿಂದಲೇ ಆಗುತ್ತದೆ ಎಂದೂ ಹೇಳುತ್ತಾರೆ. ಇದರಿಂದ ಈಶ್ವರನೇ ಫಲದಾತೃವೆನ್ನುವ ವಿಷಯದಲ್ಲಿ ಜೈಮಿನಿಗಳ ವಿರೋಧವಿದೆಯೆಂದು ಸಂಶಯ ಬರುವ ಸಂಭವವಿದೆ. ಈ ಸಂಶಯವನ್ನು ಹೋಗಲಾಡಿಸಿ ಸರಿಯಾದ ಸಿದ್ಧಾಂತವನ್ನು ತಿಳಿಸುವುದಕ್ಕಾಗಿ 'ಓಂ ಪೂರ್ವಂ ತು ಬಾದರಾಯಣೋ ಹೇತು ವ್ಯಪದೇಶಾತ್ ಓಂ' ಎನ್ನುವ ಸೂತ್ರವು ಹೊರಟಿದೆ. ಈಶ್ವರನು ಧರ್ಮಾಧರ್ಮಗಳನ್ನು ಅಪೇಕ್ಷಿಸುತ್ತಾನೆ ಎನ್ನುವುದು ನಿಜವೇ. ಆದರೆ ಅಷ್ಟರಿಂದಲೇ ಧರ್ಮಾಧರ್ಮಗಳಿಗೇನೆ ಫಲಕಾರಣತ್ವವು ಎನ್ನುವುದು ಯುಕ್ತವಲ್ಲ. ಧರ್ಮಾದಿಗಳಂತೆ ಈಶ್ವರನೂ ಫಲಕ್ಕೆ ಕಾರಣನು ಎಂದು ಶ್ರುತಿಸಿದ್ಧವಾದುದರಿಂದ ಅದನ್ನು ಬಿಡುವ ಹಾಗಿಲ್ಲ. ಬಾಧಕವಿಲ್ಲದ ಪ್ರಯುಕ್ತ ಶ್ರುತಿಗೆ ಅಮುಖ್ಯಾರ್ಥವೆಂದು ಹೇಳಕೂಡದು. ಸರ್ವೋತ್ತಮನಾದ ಈಶ್ವರನೂ ಕರ್ಮವೂ ಎರಡೂ ಫಲಕ್ಕೆ ಕಾರಣವೆಂದು ಒಪ್ಪಿದರೆ ಸಾಮ್ಯವು ಬರಬೇಕಾಗುವುದು ಎಂದೂ ಹೇಳಕೂಡದು. ಏಕೆಂದರೆ ಫಲವನ್ನು ಕೊಡುವುದರಲ್ಲಿ ಪರಮೇಶ್ವರನು ಕರ್ತನೆಂದೂ, ಕರ್ಮವು ಕರಣವೆಂದೂ, 'ಪುಣ್ಯೇನ ಪುಣ್ಯಂ ಲೋಕಂ ನಯತಿ' ಇತ್ಯಾದಿ ಶ್ರುತಿಗಳು ಹೇಳುತ್ತವೆ. ಕರಣವು ಕರ್ತೃಪ್ರಯೋಜ್ಯವು ಎನ್ನುವುದೂ ಪ್ರಸಿದ್ಧವೇ ಆಗಿದೆ. ಹಾಗಾದರೆ ಕರ್ಮವನ್ನು ಅಪೇಕ್ಷಿಸಿಯೇ ಫಲವನ್ನು ಕೊಡುವುದಾದರೆ, ಈಶ್ವರನ ಅನುಪಚರಿತ ಸ್ವಾತಂತ್ರ್ಯವು ಸಿದ್ಧಿಸುವುದಿಲ್ಲ. ಹಾಗಾಗಿ ಈಶ್ವರನಲ್ಲಿ ಅತಿಶಯವಾದ ಭಕ್ತಿಯು ಸಿದ್ಧಿಸುವುದಿಲ್ಲ. ಹೀಗೆ ಆಶಂಕಿಸಿದರೆ, ಅದನ್ನು ಪರಿಹರಿಸುವುದಕ್ಕಾಗಿ ಸೂತ್ರದಲ್ಲಿನ 'ಪೂರ್ವಂ' ಪದವನ್ನು ವ್ಯಾಖ್ಯಾನ ಮಾಡುತ್ತಾರೆ –

ಸ ಏವಾಶೇಷಜೀವಸ್ಥ ನಿಃಸಂಖ್ಯಾನಾದಿಕಾಲಿಕಾನ್ ॥೨೧೨॥

ಧರ್ಮಾಧರ್ಮಾನ್ ಸದಾ ಪಶ್ಯನ್ ಸ್ವೇಚ್ಛಯಾ ಬೋಧಯತ್ಯಜಃ ।

ಕಾಂಶ್ಚಿತ್ತೇಷಾಂ ಫಲಂ ಚೈವ ದದಾತಿ ಸ್ವಯಮಚ್ಯುತಃ ॥೨೧೩॥

ಉತ್ಪತ್ತಿರಹಿತನಾದ ಆ ಪರಮೇಶ್ವರನೇ ಪ್ರವಾಹತಃ ಅನಾದಿಕಾಲದಿಂದ ಸಮಸ್ತ ಜೀವರಲ್ಲಿರತಕ್ಕ ಅಸಂಖ್ಯವಾದ ಧರ್ಮಾಧರ್ಮಗಳನ್ನು ಸದಾ ನೋಡುವವನಾಗಿ, ತನ್ನ ಇಚ್ಛೆಯಿಂದಲೇ ಕೆಲವರನ್ನು ತಾನಾಗಿಯೇ ಚೇಷ್ಟೆಯಲ್ಲಿ ತೊಡಗಿಸುತ್ತಾನೆ. ಚತುರ್ವಿಧ ನಾಶರಹಿತನಾದ ಆ ಶ್ರೀಹರಿಯೇ ಅವರಿಗೆ ಕರ್ಮಕ್ಕೆ ತಕ್ಕ ಫಲವನ್ನೂ ಕೂಡ ಕೊಡುತ್ತಾನೆ. ಅಂದರೆ ಕರ್ಮದ ಅಪೇಕ್ಷೆಯಿಲ್ಲದೇ ಫಲವನ್ನು ಕೊಡಲು ಶಕ್ತನಾಗಿದ್ದರೂ, ಕೇವಲ ಲೀಲೆಯಿಂದ ಕರ್ಮವನ್ನೂ ಕರಣವನ್ನಾಗಿ ಮಾಡುತ್ತಾನೆ ಎಂದು ತಾತ್ಪರ್ಯ.

ನ ತೇ ವಿಶೇಷಂ ಕಮಪಿ ಪ್ರೇರಣಾದಿಕಮಚ್ಯತೇ ।

ಕುರ್ಯುಃ ಕದಾಪಿ ತೇನಾಯಂ ಸ್ವತಂತ್ರೋಽನುಪಚಾರತಃ ॥೨೧೪॥

ಜೀವರು ಶ್ರೀಹರಿಯಲ್ಲಿ ಪ್ರೇರಣೆ ಮುಂತಾದ ಯಾವ ವಿಶೇಷವನ್ನೂ ಯಾವ ಕಾಲಕ್ಕೂ ಮಾಡಲಾರರು. ಆದ್ದರಿಂದ ಈ ಶ್ರೀಹರಿಯೇ ಮುಖ್ಯವಾಗಿ ಸ್ವತಂತ್ರನು.

ಶ್ರೀಹರಿಯು ಜೀವರ ಧರ್ಮಾಧರ್ಮಗಳನ್ನು ನೋಡಿ ಅದಕ್ಕೆ ತಕ್ಕಂತೆ ಫಲವನ್ನು ಕೊಡುವುದು ಮಾತ್ರವಲ್ಲದೆ ಆ ಧರ್ಮಾಧರ್ಮಗಳಿಗೆ ಪ್ರೇರಕನೂ ಆಗಿದ್ದಾನೆ ಎಂದ ಇಲ್ಲಿಯವರೆಗೆ ಹೇಳಲ್ಪಟ್ಟಿತು. ಈ ಜ್ಞಾನದಿಂದ ಶ್ರೀಹರಿಯಲ್ಲಿ ಮಹತ್ತರವಾದ ಆದರವು ಹುಟ್ಟುವುದು. ಇನ್ನು ಸಮಸ್ತ ಪದಾರ್ಥಗಳನ್ನೂ ಅವುಗಳ ಕರ್ತೃತ್ವವನ್ನು ವಿಚಾರ ಮಾಡಿದಾಗ ಶ್ರೀಹರಿಯಲ್ಲಿ ಆದರವು ಹುಟ್ಟುವುದಿಲ್ಲವೇನು? ಎನ್ನುವ ಅಭಿಪ್ರಾಯದಿಂದ ಕರ್ಮಗಳ ಸ್ವರೂಪವನ್ನು ವಿವರಿಸುತ್ತಾರೆ –

ಕರ್ಮಾಣಿ ತಾನಿ ಚ ಪೃಥಕ್ ಚೇತನಾನ್ಯೇವ ಸರ್ವಶಃ ।

ಅಚೇತನಶರೀರಾಣಿ ಸ್ವಕರ್ಮಫಲಭಾಂಜಿ ಚ ॥೨೧೫॥

ಪ್ರತ್ಯೇಕಂ ತೇಷು ಚಾನಂತಕರ್ಮಾಣ್ಯೇವಂವಿಧಾನಿ ಚ ।

ತಾನಿ ಚೈವಮಿತೀಶಸ್ಯ ನಿಸ್ಸೀಮಾ ಶಕ್ತಿರುತ್ತಮಾ ॥೨೧೬॥

ಅನಾದಿಕಾಲದಿಂದ ಸಮಸ್ತ ಜೀವರಲ್ಲಿರತಕ್ಕ ಅವಧಿರಹಿತಗಳಾದ ಎಲ್ಲ ಕರ್ಮಗಳೂ ಒಂದೊಂದು ದರ್ಮಾಧರ್ಮ ಅಧಿಷ್ಠಾನಭೂತಗಳು, ಹಾಗೂ ಜಡವಾದ ಶರೀರವುಳ್ಳವುಗಳು. ಆದ್ದರಿಂದಲೇ ತಮ್ಮ ಕರ್ಮಗಳ ಫಲಗಳನ್ನು ಹೊಂದುವವು. ಹಿಂದೆ ಹೇಳಿದ ಚೇತನತ್ವ ಮೊದಲಾದ ಧರ್ಮಗಳುಳ್ಳ ಆ ಕರ್ಮಾಭಿಮಾನಿಗಳಲ್ಲಿಯೂ ಪ್ರತ್ಯೇಕವಾಗಿ ಅನಂತ ಕರ್ಮಗಳು ಇರುತ್ತವೆ. ಈ ಪ್ರಕಾರವಾಗಿ ಕರ್ಮಗಳ ದರ್ಶನವುಳ್ಳ ಶ್ರೀಹರಿಗೆ ಯಾವುದೇ ಪ್ರತಿಬಂಧವಿಲ್ಲದ ನಿಸ್ಸೀಮವಾದ ಶಕ್ತಿಯು ಇರುವುದು.

ಕರ್ಮಗಳ ಸ್ವರೂಪವು ಹೀಗೆಯೇ ಎಂದು ಹೇಗೆ ಸಿದ್ಧವಾಗುತ್ತದೆ ಎಂದರೆ –

ಏಕೈವ ಬ್ರಹ್ಮಹತ್ಯಾ ಹಿ ವರಾಹಹರಿಣೋದಿತಾ ।

ಬ್ರಹ್ಮಪಾರಸ್ತವೇನೈವ ನಿಷ್ಕ್ರಾಂತಾ ರಾಜದೇಹತಃ ।।೨೧೭।।

ವಾರಾಹ ಪುರಾಣದಲ್ಲಿ ವರಾಹರೂಪಿಯಾದ ಹರಿಯಿಂದ ಬ್ರಹ್ಮಹತ್ಯೆಯು ಚೇತನತ್ವ ರೂಪದಿಂದ ಹೇಳಲ್ಪಟ್ಟಿದೆ. ಅದೇನೆಂದರೆ, ಬ್ರಹ್ಮಪಾರ ಸ್ತೋತ್ರದಿಂದಲೇ ಬ್ರಹ್ಮಹತ್ಯೆಯು ರಾಜನ ದೇಹದಿಂದ ಹೊರಟುಹೋಯಿತು.

ಸ್ತೋತ್ರಸ್ಯ ತಸ್ಯ ಮಾಹಾತ್ಮ್ಯಾದ್ವ್ಯಾಧತ್ವಂ ಗಮಿತಾ ಪುನಃ ।

ಪ್ರಾಪ್ಯ ಜ್ಞಾನಂ ಪರಂ ಚಾಪ ತಥಾನ್ಯಾನ್ಯಪಿ ಸರ್ವಶಃ ।।೨೧೮।।

ಅನಂತಾನ್ಯುದಿತಾನ್ಯೇವಂ ಪ್ರಭುಣಾ ಕಪಿಲೇನ ಹಿ ।

ಸಂಸಾರೇ ಪಚ್ಯಮಾನಾನಿ ಕರ್ಮಾಣ್ಯಪಿ ಪೃಥಕ್ಪೃಥಕ್ ।।೨೧೯।।

ಆ ಸ್ತೋತ್ರದ ಮಹಿಮೆಯಿಂದ ಮತ್ತೆ ವ್ಯಾಧತ್ವವನ್ನು (ಚೇತನತ್ವದ ದ್ಯೋತಕ) ಗಳಿಸಿ, ಜ್ಞಾನವನ್ನು ಹೊಂದಿ ಸರ್ವೋತ್ತಮನಾದ ಶ್ರೀಹರಿಯನ್ನು ಹೊಂದಿತು. ಹಾಗೆಯೇ ಬ್ರಹ್ಮಹತ್ಯೆಯಿಂದ ಇತರವಾದ ಎಲ್ಲ ಅಪರಿಮಿತಗಳಾದ ಕರ್ಮಗಳೂ ಪ್ರತ್ಯೇಕ ಪ್ರತ್ಯೇಕವಾಗಿ ಹೀಗೆ ಚೇತನತ್ವಾದಿಗಳನ್ನು ಹೊಂದಿದವುಗಳಾಗಿ ಸರ್ವ ಸಮರ್ಥನಾದ ಕಪಿಲರೂಪಿಯಾದ ಶ್ರೀಹರಿಯಿಂದ ಹೇಳಲ್ಪಟ್ಟಿದೆ. ಸಂಸಾರದಲ್ಲಿ ಮಾಡಲ್ಪಡುವ ಕರ್ಮಗಳೂ ಕೂಡ ಪ್ರತ್ಯೇಕ ಪ್ರತ್ಯೇಕವಾಗಿಯೇ ಇರುತ್ತವೆ.

ಪಾದಾರ್ಥವನ್ನು ಉಪಸಂಹಾರ ಮಾಡುತ್ತಾರೆ –

ತಸ್ಮಾದನಂತಮಾಹಾತ್ಮ್ಯಗುಣಪೂರ್ಣೋ ಜನಾರ್ದನಃ ।

ಭಕ್ತ್ಯಾ ಪರಮಯಾರಾಧ್ಯ ಇತಿ ಪಾದಾರ್ಥ ಈಯತೇ ।।೨೨೦।।

ಆದ್ದರಿಂದ ಅನಂತ ಮಹಿಮೆಗಳಿಂದ ಕೂಡಿದ ಗುಣಗಳಿಂದ ಪರಿಪೂರ್ಣನಾದ ಶ್ರೀಹರಿಯು ಪರಮಭಕ್ತಿಯಿಂದ ಆರಾಧ್ಯನು ಎಂದು ಮೂರನೆಯ ಅಧ್ಯಾಯದ ಎರಡನೆಯ ಪಾದದ ಅರ್ಥವು ಹೇಳಲ್ಪಡುತ್ತದೆ.

।। ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ ಶ್ರೀಮದನುವ್ಯಾಖ್ಯಾನೇ
ತೃತೀಯಾಧ್ಯಾಯಸ್ಯ ದ್ವಿತೀಯಃ ಪಾದಃ ।।

।।ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ಮೂರನೆಯ ಅಧ್ಯಾಯ ಎರಡನೆಯ ಪಾದದ
ಶ್ರೀಮನ್ನ್ಯಾಯಸುಧಾನುಸಾರಿ ವಿವರಣೆ ಸಹಿತ ಕನ್ನಡಾನುವಾದವು ಮುಕ್ತಾಯವಾಯಿತು।।

* * *

ಮೂರನೆಯ ಅಧ್ಯಾಯ ಮೂರನೆಯ ಪಾದ

ಈ ಪಾದದಲ್ಲಿ ಉಪಾಸನೆಯು ಹೇಳಲ್ಪಡುತ್ತದೆ ಎಂದು ಭಾಷ್ಯದಲ್ಲಿ ಉಕ್ತವಾಗಿದೆ. ಅದರಲ್ಲಿ ಉಪಾಸನೆಗೋಸ್ಕರವಾಗಿ ಪ್ರವೃತ್ತವಾದ ಈ ಪಾದವು ಪೂರ್ವ ಮತ್ತು ಉತ್ತರ ಪಾದಗಳೊಂದಿಗೆ ಹೇಗೆ ಸಂಗತಿಯನ್ನು ಹೊಂದಿದೆ ಎಂದು ಹೇಳಿದರು. ಇಲ್ಲಿ ಪ್ರಸಂಗವಿರುವುದರಿಂದ ಈ ಅಧ್ಯಾಯದಲ್ಲಿರತಕ್ಕ ನಾಲ್ಕು ಪಾದಗಳಿಗೂ ಸಂಗತಿಯನ್ನು 'ವೈರಾಗ್ಯತೋ' ಇತ್ಯಾದಿ ವಚನದಿಂದ ಹೇಳುತ್ತಾರೆ –

ವೈರಾಗ್ಯತೋ ಭಕ್ತಿದಾರ್ಢ್ಯಂ ತೇನೋಪಾಸಾ ಯದಾ ಭವೇತ್ ।

ಆಪರೋಕ್ಷ್ಯಂ ಭವೇದ್ವಿಷ್ಣೋರಿತಿ ಪಾದಕ್ರಮೋ ಭವೇತ್ ॥ ೧ ॥

ವೈರಾಗ್ಯದ ದೆಶೆಯಿಂದ ಭಕ್ತಿದಾರ್ಢ್ಯವು ಆಗುವುದು. (ವಿಚಾರಸಾಧ್ಯವಾದ ವೈರಾಗ್ಯಕ್ಕಿಂತ ಮುಂಚೆಯೇ ಭಕ್ತಿಯು ಅವಶ್ಯಕವಾದುದರಿಂದ ಭಕ್ತಿದಾರ್ಢ್ಯವೆಂದು ಹೇಳಿದರು.) ಯಾವಕಾರಣದಿಂದ ಆ ಭಕ್ತಿದಾರ್ಢ್ಯದಿಂದ ಉಪಾಸನೆಯೂ, ಆ ಉಪಾಸನೆಯಿಂದ ಶ್ರೀಹರಿಯ ಅಪರೋಕ್ಷವೂ (ಸಾಕ್ಷಾತ್ಕಾರವೂ) ಆಗುವುದೋ ಆ ಕಾರಣದಿಂದ ನಾಲ್ಕು ಪಾದಗಳ ಪೌರ್ವಾಪರ್ಯ ಕ್ರಮವು ಕೂಡುವುದು.

ಹೀಗೆ ಈ ಅಧ್ಯಾಯಗತ ನಾಲ್ಕು ಪಾದಗಳಿಗೂ ಪೌರ್ವಾಪರ್ಯರೂಪವಾದ ಸಂಗತಿಯನ್ನು ಹೇಳಿ, ಆ ಪ್ರಸಂಗದಿಂದ 'ಅಥಾತೋ ಬ್ರಹ್ಮ ಜಿಜ್ಞಾಸಾ' ಎಂಬ ಪ್ರಥಮ ಸೂತ್ರದಿಂದ ಆರಂಭಿಸಿ ಹಿಂದಿನ ಎರಡು ಅಧ್ಯಾಯಗಳ ಎಲ್ಲ ಸೂತ್ರಗಳಿಗೂ ಪರಸ್ಪರ ಸಂಗತಿಯನ್ನು ಹೇಳುವ ಅಪೇಕ್ಷೆಯಿಂದ 'ಯುಕ್ತಿತೋ' ಎಂದು ಪ್ರಾರಂಭಿಸಿ 'ಆಚಾರ್ಯಸಂಪದಾ' ಎನ್ನುವವರೆಗೆ ಮೊದಲನೆಯ ಸೂತ್ರದ ಅರ್ಥವನ್ನು ಅನುವಾದ ಮಾಡುತ್ತಾರೆ –

ಯುಕ್ತಿತೋ ಜ್ಞಾತವೇದಾರ್ಥೋ ನಿರಸ್ಯ ಸಮಯಾನ್ ಪರಾನ್ ।

ಪರಸ್ಪರವಿರೋಧಂ ಚ ಪ್ರಣುದ್ಯಾಶೇಷವಾಕ್ಯಗಮ್ ॥ ೨ ॥

ಸಾಮಾನ್ಯವಾದ ಯುಕ್ತಿವಿರೋಧವನ್ನು ಪ್ರಬಲ ಯುಕ್ತಿಯಿಂದ ಪರಿಹರಿಸಿ, ಎಲ್ಲ ವೇದಗಳಿಗೆ ಭಗವಂತನೇ ಮುಖ್ಯಾರ್ಥನೆಂದು ತಿಳಿದವನಾಗಿ ಸಾಂಖ್ಯಾದಿ ದುಶ್ಶಾಸ್ತ್ರಗಳನ್ನು ನಿರಾಕರಿಸಿ, ಎಲ್ಲ ವೇದವಾಕ್ಯಗಳಲ್ಲಿನ ಪರಸ್ಪರ ವಿರೋಧವನ್ನು ಪರಿಹರಿಸಬೇಕು.

ಅಧ್ಯಾತ್ಮಪ್ರವಣೋ ಭೂತ್ವಾ ತಸ್ಯ ಸನ್ನಿಹಿತತ್ವತಃ ।

ಬಹುಯುಕ್ತಿವಿರೋಧಾನಾಂ ಭಾನಾತ್ತತ್ಸಹಿತಶ್ರುತೇಃ ॥ ೩ ॥

ವಿರೋಧಂ ಚ ನಿರಾಕೃತ್ಯ ಶ್ರುತೀನಾಂ ಪ್ರಾಣತತ್ವಗಾನ್ ।

ಪರಿಹೃತ್ಯ ವಿರೋಧಾಂಶ್ಚ ತತ್ಪ್ರಸಾದಾನುರಂಜಿತಃ ॥ ೪ ॥

ಅಧ್ಯಾತ್ಮದಲ್ಲಿ, ಅಂದರೆ ಜೀವ–ಪರಮಾತ್ಮರಿಗೆ ಅಧಿಷ್ಠಾನಭೂತವಾದ ದೇಹ ಮತ್ತು ಇಂದ್ರಿಯಗಳಲ್ಲಿ ಆಸಕ್ತನಾಗಿ, ಜಿಜ್ಞಾಸೆಯು ಅಲ್ಲಿ ಕೂಡುವುದರಿಂದಲೂ ಹಾಗೂ ಬಹುಯುಕ್ತಿಗಳ ವಿರೋಧದ ಪ್ರತೀತಿ ಇರುವುದರಿಂದಲೂ, ಅವುಗಳನ್ನು ಪ್ರತಿಪಾದಿಸತಕ್ಕ ಶ್ರುತಿಗಳಿಗೆ ಯುಕ್ತಿಸಹಿತಶ್ರುತಿಯ ದೆಶೆಯಿಂದ ವಿರೋಧವನ್ನೂ ಪರಿಹರಿಸಬೇಕು. ಆದರಿಂದ ಇಂದ್ರಿಯಗಳ ಸ್ವರೂಪದಲ್ಲಿರತಕ್ಕ ವಿರೋಧವನ್ನೂ ಪರಿಹರಿಸಿ, ಇಂದ್ರಿಯಾಭಿಮಾನಿ ದೇವತೆಗಳ ಪ್ರಸಾದವನ್ನು ಸಂಪಾದಿಸಬೇಕು.

ದೇಹಕರ್ತೃತ್ವಮೀಶಸ್ಯ ಜ್ಞಾತ್ವಾ ತತ್ಪ್ರಿತೃತಾಸ್ಮೃತೇಃ ।

ವಿಶೇಷಸ್ನೇಹಮಾಪಾದ್ಯ ಸರ್ವಕರ್ತೃತ್ವತೋಽಧಿಕಮ್ ॥ ೫ ॥

ನಿಷ್ಪಾದ್ಯ ಬಹುಮಾನಂ ಚ ತದನ್ಯತ್ರಾತಿದುಃಖತಃ ।

ಉತ್ಪಾದ್ಯಾಧಿಕವೈರಾಗ್ಯಂ ತದ್ಗುಣಾಧಿಕ್ಯವೇದನಾತ್ ॥ ೬ ॥

ಸರ್ವಸ್ಯ ತದ್ವಶತ್ವಾಚ್ಚ ದಾರ್ಢ್ಯಂ ಭಕ್ತೇರವಾಪ್ಯ ಚ ।

ಯತೇತೋಪಾಸನಾಯೈವ ವಿಶಿಷ್ಟಾಚಾರ್ಯಸಂಪದಾ ॥ ೭ ॥

ಅಸ್ಮದಾದಿಗಳ ಶರೀರಾದಿಗಳ ಕರ್ತೃವು ಶ್ರೀಹರಿಯೆಂದು ತಿಳಿದು, ಅವನು ನಮ್ಮ ತಂದೆಯೆಂಬ ಸ್ಮರಣೆಯಿಂದ ವಿಶೇಷ ಪ್ರೀತಿಯನ್ನು ಹೊಂದಬೇಕು. ಅವನು ಸರ್ವಕರ್ತೃವೆಂದು ತಿಳಿದು ಅದಕ್ಕಿಂತ ಹೆಚ್ಚಿನದಾದ ಆದರವನ್ನು ಮಾಡಬೇಕು. ಆ ಶ್ರೀಹರಿಯಿಂದ ಇತರವಾದ ಮಹಾದುಃಖಕ್ಕೆ ಕಾರಣವಾದ ಸಂಸಾರಾದಿಗಳಲ್ಲಿ ಅಧಿಕವಾದ ವೈರಾಗ್ಯವನ್ನು ಹೊಂದಬೇಕು. ಶ್ರೀಹರಿಯ ಸಕಲಗುಣಪೂರ್ಣತ್ವ, ಸರ್ವವಶತ್ವಾದಿಗಳನ್ನು ತಿಳಿದು ಭಕ್ತಿದಾರ್ಢ್ಯವನ್ನು ಹೊಂದಿ, ಉತ್ತಮ ಗುರುಗಳ ಉಪದೇಶವನ್ನು ಸಂಪಾದಿಸಿ, ಉಪಾಸನೆಗಾಗಿಯೇ ಪ್ರಯತ್ನ ಮಾಡಬೇಕು.

ಯತತೋಪಾಸನಾಯೈವ (ಉಪಾಸನೆಗಾಗಿಯೇ ಪ್ರಯತ್ನ ಮಾಡಬೇಕು) ಎನ್ನುವುದರಿಂದ ಬ್ರಹ್ಮಜಿಜ್ಞಾಸೆಯು ಕರ್ತವ್ಯ ಎನ್ನುವುದು ವ್ಯಾಖ್ಯಾನವಾಯಿತು. ಉಳಿದೆಲ್ಲವೂ ಅಥ ಶಬ್ದದ ವ್ಯಾಖ್ಯಾನವು. ಜ್ಞಾತವೇದಾರ್ಥೋ (ಸರ್ವವೇದಗಳ ಮುಖ್ಯಾರ್ಥವು ಭಗವಂತನೇ ಎಂದು ತಿಳಿದವನಾಗಿ) ಎನ್ನುವುದರಿಂದ ಪ್ರಥಮಾ–ಧ್ಯಾಯದ ಪ್ರಮೇಯವು ಉಕ್ತವಾಯಿತು. ಯುಕ್ತಿತೋ ನಿರಸ್ಯ (ವೇದಾರ್ಥವಿರುದ್ಧ ಯುಕ್ತಿಗಳನ್ನು ಸಾಮಾನ್ಯತಃ ನಿರಾಕರಿಸಿ) ಎನ್ನುವುದರಿಂದ ದ್ವಿತೀಯಾಧ್ಯಾಯದ ಪ್ರಥಮ ಪಾದದ ಸಂಗತಿಯನ್ನೂ, ಪರಾನ್ ಸಮಯಾನ್ (ವೈಷ್ಣವ ಸಮಯಗಳಿಗೆ ಇತರವಾದ ಸಾಂಖ್ಯಾದಿ ಸಮಯಗಳನ್ನು ನಿರಾಕರಿಸಿ) ಎನ್ನುವುದರಿಂದ ದ್ವಿತೀಯ ಪಾದದ ಸಂಗತಿಯನ್ನೂ, ಪರಸ್ಪರ ವಿರೋಧಶ್ಚ ಎನ್ನುವುದರಿಂದ ತೃತೀಯ ಹಾಗೂ

ಚತುರ್ಥ ಪಾದಗಳ ಸಂಗತಿಯನ್ನೂ ಸೂಚಿಸಿದರು. ಹಾಗಾದರೆ ಪಾದಭೇದವು ಹೇಗೆ ಎಂದರೆ, ಬಹುಯುಕ್ತಿವಿರೋಧಾನಾಂ ಶ್ರುತೀನಾಂ ಯುಕ್ತಿಸಹಿತಶ್ರುತೇಃ ವಿರೋಧಂ ಚ ನಿರಾಕೃತ್ಯ (ಬಹುಯುಕ್ತಿವಿರೋಧವುಳ್ಳ ಶ್ರುತಿಗಳಿಗೆ ಯುಕ್ತಿಸಹಿತ ಶ್ರುತಿಯಿಂದ ವಿರೋಧವನ್ನು ನಿರಾಕರಿಸಿ) ಎನ್ನುವುದರಿಂದ ಚತುರ್ಥ ಪಾದದ ವಿಶೇಷವು ತೋರಿಸಲ್ಪಟ್ಟಿತು.

ಹೀಗೆ ಬ್ರಹ್ಮಜಿಜ್ಞಾಸೆಯು ಕರ್ತವ್ಯ ಎನ್ನುವ ಪ್ರಥಮ ಸೂತ್ರದ ಅರ್ಥವನ್ನು ಹೇಳಿದರು. ಈಗ ಎರಡನೆಯ ಸೂತ್ರಕ್ಕೆ ಸಂಗತಿಯನ್ನು ಹೇಳುತ್ತಾರೆ –

ಕರ್ತವ್ಯಾ ಬ್ರಹ್ಮಜಿಜ್ಞಾಸೇತ್ಯುಕ್ತೇ ಕಿಮಿತಿ ಸಂಶಯೇ ।

ಅತ ಇತ್ಯುದಿತೇಽಪ್ಯಸ್ಯ ವಿಶೇಷಾನುಕ್ತಿತಃ ಪುನಃ ॥ ೮ ॥

ಸೃಷ್ಟಿಬಂಧನಮೋಕ್ಷಾದಿಕರ್ತೃತ್ವಸ್ಯ ಶ್ರುತತ್ವತಃ ।

ಯತೋ ಮೋಕ್ಷಾದಿದಾತಾಸಾವತೋ ಜಿಜ್ಞಾಸ್ಯ ಏವ ಯಃ ॥ ೯ ॥

ಇತ್ಯಾಹ ತತ್ಪರಂ ಬ್ರಹ್ಮ ವ್ಯಾಸಾಖ್ಯಂ ಜ್ಞಾನರಶ್ಮಿಮತ್ ।

ಬ್ರಹ್ಮನ ವಿಚಾರವನ್ನು ಮಾಡತಕ್ಕದ್ದು ಎಂದು ಹೇಳಿದಾಗ, ಅದರಿಂದ ಪ್ರಯೋಜನವಿದೆಯೋ ಇಲ್ಲವೋ ತಿಳಿಯದಾದ್ದರಿಂದ ಜಿಜ್ಞಾಸೆಯು ಅವಶ್ಯವೋ ಇಲ್ಲವೋ ಎಂಬ ಸಂಶಯ ಬಂದರೆ, ಅದನ್ನು ನಿವಾರಿಸಲು ಅತಃ ಎನ್ನುವುದರಿಂದ ಮೋಕ್ಷಾಖ್ಯ ಪ್ರಯೋಜನವನ್ನು ಹೇಳಿದರು. ಜಿಜ್ಞಾಸೆಗೆ ಮೋಕ್ಷಸಾಧನತ್ವವಿದೆ ಎನ್ನುವುದನ್ನು ವಿಶೇಷವಾದ ಪ್ರಮಾಣಗಳಿಂದ ಉಪಪಾದಿಸದೇ ಇರುವುದರಿಂದ ಆ ವಿಷಯದಲ್ಲಿ ಪುನಃ ಸಂಶಯ ಹುಟ್ಟಲು, ಸೃಷ್ಟಿ ಬಂಧನ ಮೋಕ್ಷಾದಿ ಕರ್ತೃತ್ವವು ಶ್ರೀಹರಿಗೆ ಇದೆ ಎನ್ನುವ ವಿಷಯದಲ್ಲಿ ಶ್ರುತಿಸಿದ್ಧತ್ವವಿರುವ ಪ್ರಯುಕ್ತ, ಶ್ರೀಹರಿಯೇ ಮೋಕ್ಷದಾತೃವು ಎಂದು ನಿಶ್ಚಯವಾಗುತ್ತದೆ. ಆದಪ್ರಯುಕ್ತ ಶ್ರೀಹರಿಯು ನಮಗೆ ಜಿಜ್ಞಾಸ್ಯನೇ ಆಗಿರುತ್ತಾನೆ ಎಂದು ಜ್ಞಾನವೆಂಬ ಕಿರಣಗಳಿಂದ ಪ್ರಕಾಶಿತನಾದ ವ್ಯಾಸನೆಂದು ಖ್ಯಾತನಾದ ಆ ಪರಬ್ರಹ್ಮನು ಹೇಳಿರುವನು. (ಜ್ಞಾನವೇ ರಶ್ಮಿಗಳಂತೆ ಆದ್ದರಿಂದ ಜ್ಞಾನರಶ್ಮಿಗಳು, ಅಂದರೆ ವ್ಯಾಪ್ತವಾದ ಜ್ಞಾನವನ್ನು ಹೊಂದಿದವರು ಎಂದರ್ಥ.)

ಜಿಜ್ಞಾಸೆಗೆ ಮೋಕ್ಷಸಾಧನತ್ವವು ಎನ್ನುವ ವಿಷಯದಲ್ಲಿ ಪ್ರಮಾಣವಿಲ್ಲದಿರುವ ಕಾರಣ ಆಕ್ಷೇಪವು ಪ್ರಾಪ್ತವಾಗಲು ಅದನ್ನು ನಿರಾಕರಿಸದೆ ಶ್ರೀಹರಿಗೆ ಮೋಕ್ಷ ಸಾಧನತ್ವವನ್ನು ಸಮರ್ಥನೆ ಮಾಡುವುದು ಅಯುಕ್ತವು ಎಂದರೆ –

ಯೇನೈವ ಬಂಧಮೋಕ್ಷಃಸ್ಯಾತ್ ಸ ಚ ಜಿಜ್ಞಾಸಯಾ ಗತಃ ॥ ೧೦ ॥

ಸುಪ್ರಸನ್ನೋ ಭವೇದೀಶೋ ಜಿಜ್ಞಾಸಾತೋಽಸ್ಯ ಮುಕ್ತಿದಾ ।

ಸಂತುಷ್ಟನಾದ ಶ್ರೀಹರಿಯಿಂದಲೇ ಸಂಸಾರಬಂಧದಿಂದ ಬಿಡುಗಡೆಯು ಆಗುವುದು. ಅವನಾದರೂ ಜಿಜ್ಞಾಸೆಯಿಂದಲೇ ಸಂತುಷ್ಟನಾಗುವನು. ಆದ್ದರಿಂದ ಮೋಕ್ಷವನ್ನು ಕೊಡತಕ್ಕ ಆ ಶ್ರೀಹರಿಯ ಜಿಜ್ಞಾಸೆ ಮಾಡಬೇಕು.

ಮೋಕ್ಷಾದಿದತ್ವಮೀಶಸ್ಯ ಕಥಮೇವಾವಗಮ್ಯತೇ ।। ೧೧ ।।

ಇತಿ ಚೇಚ್ಛಾಸ್ತ್ರಯೋನಿತ್ವಾತ್ ಶಾಸ್ತ್ರಗಮ್ಯೋ ಹಿ ಮೋಕ್ಷದಃ ।

ಪರಮೇಶ್ವರನ ಮೋಕ್ಷದಾತೃತ್ವವು ಹೇಗೆ ತಿಳಿಯಲ್ಪಡುವುದು ಎಂದರೆ ಶಾಸ್ತ್ರಯೋನಿತ್ವಾತ್ ಎಂಬ ಸೂತ್ರದಿಂದ ಅದಕ್ಕೆ ಸಮಾಧಾನ ಹೇಳಲ್ಪಟ್ಟಿದೆ. ಅಂದರೆ ಮೋಕ್ಷವನ್ನು ಕೊಡತಕ್ಕವನು ಶಾಸ್ತ್ರೈಕಗಮ್ಯನಾದವನು ಎಂದರ್ಥ. ಯಾವ ಶ್ರೀಹರಿಯನ್ನು ಮೋಕ್ಷವದಾತೃವೆಂದು ಶಾಸ್ತ್ರಗಳು ಪ್ರತಿಪಾದಿಸುವುದೋ ಅವನನ್ನು ಶಾಸ್ತ್ರದಿಂದಲೇ ತಿಳಿಯತಕ್ಕದ್ದು, ಅನುಮಾನಾದಿಗಳಿಂದ ಯಾವನೋ ಒಬ್ಬನನ್ನು ಹಾಗೆ ಕಲ್ಪಿಸಬಾರದು.

ಪ್ರತ್ಯಕ್ಷಾದಿಗಳಿಂದ ವೇದ್ಯನಾದವನೂ ಮೋಕ್ಷದಾತೃವು ಎನ್ನುವುದು ಏಕೆ ಕೂಡುವುದಿಲ್ಲ ಎಂದರೆ –

ಪ್ರತ್ಯಕ್ಷಾವಸಿತೇಭ್ಯಃ ಸ್ಯಾದ್ಯದಿ ಮೋಕ್ಷಃ ಕಥಂಚನ ।। ೧೨ ।।

ಕಿಮಿತ್ಯನಾದಿಸಂಸಾರಮಗ್ನಾಃ ಸರ್ವಾ ಇಮಾಃ ಪ್ರಜಾಃ ।

ಯಸ್ಮಾನ್ನಿಯಮತೋ ದುಃಖಹಾನಿಃ ಪ್ರತ್ಯಕ್ಷತೋ ಭವೇತ್ ।।೧೩ ।।

ಧಾವಂತ್ಯೇವ ತಮುದ್ದಿಶ್ಯ ರಾಜಾದ್ಯಮಖಿಲಾಃ ಪ್ರಜಾಃ ।

ಪ್ರತ್ಯಕ್ಷಗಮ್ಯನಾದವನ ಸೇವಾದಿಗಳಿಂದಲೇ ಮೋಕ್ಷವು ಆಗುವುದಾದರೆ, ಹಾಗೆ ಮಾಡುವುದು ಎಲ್ಲರಿಗೂ ಸಾಧ್ಯವಿರಲು ಅನಾದಿಯಾದ ಸಂಸಾರದಲ್ಲಿ ಮಗ್ನರಾದ ಈ ಎಲ್ಲ ಪ್ರಜೆಗಳೂ ಏಕೆ ಮುಕ್ತರಾಗಲಿಲ್ಲ. ಪ್ರತ್ಯಕ್ಷಗಮ್ಯನಾದ ಯಾವನೋ ಒಬ್ಬ ಪುರುಷನಿಂದ ನಿಯಮೇನ ಆತ್ಯಂತಿಕ ದುಃಖವು ನಿವಾರಣೆಯಾಗುವ ಪಕ್ಷದಲ್ಲಿ ಎಲ್ಲ ಪ್ರಜೆಗಳೂ, ದಾರಿದ್ರ್ಯಾದಿ ದುಃಖವನ್ನು ಕಳೆದುಕೊಳ್ಳಲಿಕ್ಕೆ ಇಚ್ಛಿಸುವ ಜನರು ರಾಜನನ್ನು ಕುರಿತು ಧಾವಿಸುವಂತೆ, ಅಂಥಹ ಪುರುಷನೆಡೆಗೆ ಓಡಿಹೋಗುತ್ತಿದ್ದರು.

ಮೋಕ್ಷದಾತೃವಿಗೆ ಅನುಮಾನಗಮ್ಯತ್ವವನ್ನು ದೂಷಿಸುತ್ತಾರೆ –

ಅನುಮಾಗಮ್ಯತೋ ಮೋಕ್ಷೋ ಯದಿ ಸ್ಯಾದನುಮೈವ ಹಿ ।। ೧೪ ।।

ದೃಷ್ಟಪೂರುಷವನ್ಮೋಕ್ಷದಾತೃತಾಂ ವಿನಿವಾರಯೇತ್ ।

ತಚ್ಛಾಸ್ತ್ರಗಮ್ಯ ಏವೈಕೋ ಮೋಕ್ಷದೋ ಭವತಿ ಧ್ರುವಮ್ ।। ೧೫ ।।

'ಅವನು ಮೋಕ್ಷವನ್ನು ಕೊಡುತ್ತಾನೆ ಸಮರ್ಥನಾದ್ದರಿಂದ ಈಶ್ವರನಂತೆ'

ಇತ್ಯಾದಿ ಅನುಮಾನದಿಂದ ಯಾವನೊಬ್ಬ ಪುರುಷನಿಂದ ಮೋಕ್ಷವು ಆಗುವುದೆಂದು ಹೇಳುವುದಾದರೆ, ಅವನು ಮೋಕ್ಷ ಕೊಡಲು ಸಮರ್ಥನಲ್ಲ ಪುರುಷನಾದ್ದರಿಂದ ಇತ್ಯಾದಿ ಅನುಮಾನವೇ ಅವನಿಗೆ ಮೋಕ್ಷದಾತೃತ್ವವನ್ನು ತಡೆಯುವುದು. ಆದ್ದರಿಂದ ಶಾಸ್ತ್ರೈಕಗಮ್ಯನಾದ ಶ್ರೀಹರಿಯೊಬ್ಬನೇ ಮೋಕ್ಷದಾತೃವೆಂದು ನಿಶ್ಚಯವಾಗುತ್ತದೆ.

ಹಾಗೆಯೇ ಆಗಲಿ. ಶಾಸ್ತ್ರೈಕಗಮ್ಯನಿಗೇ ಮೋಕ್ಷದಾತೃತ್ವವು ಇರಲಿ. ಆದರೆ ಶಿವಾದಿ ಇತರರಿಗೂ ಮೋಕ್ಷದಾತೃತ್ವವು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ ಎಂದರೆ, ತತ್ತು ಸಮನ್ವಯಾತ್ ಎಂಬ ನಾಲ್ಕನೆಯ ಸೂತ್ರಕ್ಕೆ ಸಂಗತಿಯನ್ನು ಸೂಚಿಸುತ್ತ ತತ್ ತು ಎನ್ನುವ ಪದದ್ವಯಗಳಿಗೆ ವ್ಯಾಖ್ಯಾನ ಮಾಡುತ್ತಾರೆ --

ಶಾಸ್ತ್ರಗಮ್ಯಶ್ಚ ನಾನ್ಯೋಽಸ್ತಿ ಮೋಕ್ಷದತ್ವೇನ ಕೇಶವಾತ್ ।

ಮೋಕ್ಷದೋ ಹಿ ಸ್ವತಂತ್ರಃ ಸ್ಯಾತ್ ಪರತಂತ್ರಃ ಸ್ವಯಂ ಸ್ಥಿತೌ ॥ ೧೬ ॥

ವರ್ತಮಾನಃ ಕಥಂ ಶಕ್ತಃ ಪರಮೋಕ್ಷಾಯ ಕೇವಲಮ್ ।

ಮೋಕ್ಷವನ್ನು ಕೊಡತಕ್ಕವನು ಶಾಸ್ತ್ರೈಕಗಮ್ಯನಾದ ಶ್ರೀಹರಿಯನ್ನು ಬಿಟ್ಟು ಮತ್ತೊಬ್ಬನಿಲ್ಲ. ಏಕೆಂದರೆ ಸ್ವತಂತ್ರನೇ ಮೋಕ್ಷದಾತೃವಾಗಲು ಸಾಧ್ಯ. ಪರತಂತ್ರನು ತಾನೇ ಸಂಸಾರದಲ್ಲಿರುವಾಗ, ಪರರ ಅಪೇಕ್ಷೆಯಿಲ್ಲದೆ ಮತ್ತೊಬ್ಬರಿಗೆ ಮೋಕ್ಷವನ್ನು ಕೊಡಲು ಹೇಗೆ ಸಮರ್ಥನಾದಾನು?

ಹಾಗಾದರೆ ಸ್ವತಂತ್ರನಾದ ಮತ್ತೊಬ್ಬನನ್ನು ಆಶ್ರಯಿಸಿ ಮುಕ್ತಿಯನ್ನು ಕೊಡುತ್ತಾನೆ ಎಂದರೆ –

ಅನ್ಯಾಶ್ರಯೇಣ ಯದ್ಯೇಷ ದದ್ಯಾನ್ಮೋಕ್ಷಂ ಸ ಏವ ಹಿ ॥ ೧೭ ॥

ತೇನ ನಾನುಸೃತೋ ಮೋಕ್ಷಂ ನ ದದ್ಯಾದನ್ಯವಾಕ್ಯತಃ ।

ಅತಸ್ತದರ್ಥಮಪಿ ಸ ಜ್ಞೇಯೋ ವಿಷ್ಣುರ್ಮುಮುಕ್ಷುಭಿಃ ॥ ೧೮ ॥

ಈ ಅವಾಂತರೇಶ್ವರನು ಮತ್ತೊಬ್ಬನ (ಸ್ವತಂತ್ರನಾದ ವಿಷ್ಣುವಿನ) ಆಶ್ರಯದಿಂದ ಮುಕ್ತಿಯನ್ನು ಕೊಡುವುದಾದರೆ, ಆಗ ಆ ಸ್ವತಂತ್ರನು ಮೋಕ್ಷೇಚ್ಛುವಿನಿಂದ ಸೇವಿತನೇ ಆಗದಿದ್ದರೆ ಕೇವಲ ಮತ್ತೊಬ್ಬನ ಪ್ರಾರ್ಥನೆಯಿಂದಲೇ ಮೋಕ್ಷವನ್ನು ಕೊಡುತ್ತಾನೆ ಎನ್ನುವುದು ಸಾಧ್ಯವೇ ಇಲ್ಲ. ಆದ್ದರಿಂದ ಆ ಅವಾಂತರೇಶ್ವರನಿಂದ ಮೋಕ್ಷವನ್ನು ಪಡೆಯುವುದಕ್ಕಾದರೂ, ಸ್ವತಂತ್ರನಾದ ವಿಷ್ಣುವು ಮುಮುಕ್ಷುಗಳಿಂದ ತಿಳಿಯತಕ್ಕವನು. ಸ್ವತಂತ್ರನಾದ ವಿಷ್ಣುವೇ ಜಿಜ್ಞಾಸೆಗೆ ಮುಖ್ಯವಿಷಯನೆಂದು ಭಾವ.

ಬ್ರಹ್ಮ ಶಿವ ಮುಂತಾದವರನ್ನು ಸೇವಿಸಿದರೂ ಅವರೂ ಕೂಡ ವಿಷ್ಣುವನ್ನೇ ಆಶ್ರಯಿಸಿರುವುದರಿಂದ ಮೋಕ್ಷವನ್ನು ಕೊಡಲಾರರು. ತಮ್ಮನ್ನು ಆರಾಧಿಸುವ ಮುಕ್ತಿಯೋಗ್ಯರಿಗೆ ಮುಕ್ತಿಯನ್ನು ಕೊಡು ಎಂದು ವಿಷ್ಣುವನ್ನು ಪ್ರಾರ್ಥಿಸಬಹುದಷ್ಟೆ.

ಆ ವಿಷ್ಣುವು ಸ್ವತಂತ್ರನಾದ್ದರಿಂದ ತನ್ನನ್ನು ಜ್ಞಾನಭಕ್ತಿಗಳಿಂದ ಉಪಾಸನೆ ಮಾಡುವ ಭಕ್ತರಿಗೆ ಆ ಸೇವೆಯಿಂದ ಸಂತುಷ್ಟನಾಗಿ ಮುಕ್ತಿಯನ್ನು ಕೊಡುವನು. ವಿಷ್ಣುವು ತನ್ನನ್ನು ಸೇವಿಸದೇ ಇದ್ದವರಿಗೆ ಮೋಕ್ಷವನ್ನು ಸರ್ವಥಾ ಕೊಡಲಾರನು ಎನ್ನುವುದು ಶ್ರುತಿಯಿಂದಲೂ ಸಿದ್ಧವಾಗಿದೆ ಎಂದು ತೋರಿಸುತ್ತಾರೆ –

ಯಮ್ಯೈವೇಷ ಇತಿ ಶ್ರುತ್ಯಾ ತಮೇವೇತಿ ಚ ಸಾದರಮ್ ।

ಶಾಸ್ತ್ರಯೋನಿತ್ವಮಸ್ಯೈವ ಜ್ಞಾಯತೇ ವೇದವಾದಿಭಿಃ ॥ ೧೯ ॥

'ಯಮೇವೈಷ ವೃಣುತೇ ತೇನ ಲಭ್ಯಃ' 'ತಮೇವಂ ವಿದಿತ್ವಾऽತಿಮೃತ್ಯುಮೇತಿ' 'ನಾನ್ಯಃ ಪಂಥಾ ವಿದ್ಯತೇ ಅಯನಾಯ' 'ತಂ ವಿದಿತ್ವೈವ ಮೃತ್ಯುಮತ್ಯೇತಿ' ಇತ್ಯಾದಿ ಶ್ರುತಿಗಳಿಂದ, ಆ ವಿಷ್ಣುವನ್ನು ತಿಳಿಯುವುದರಿಂದಲೇ ಮೋಕ್ಷವು ಎಂಬುದಾಗಿ ಆದರಪೂರ್ವಕವಾಗಿ ತಿಳಿದುಬರುವುದು. ಆದ್ದರಿಂದ ಶಾಸ್ತ್ರೈಕಗಮ್ಯತ್ವವು ವಿಷ್ಣುವಿಗೇ ಎಂದು ವೇದಪ್ರಾಮಾಣ್ಯವಾದಿಗಳಿಂದ ತಿಳಿಯಲ್ಪಡುತ್ತದೆ.

ಯ ಏನಂ ವಿದುರಮೃತಾ ಇತ್ಯುಕ್ತಸ್ತು ಸಮುದ್ರಗಃ ।

ತದೇವ ಬ್ರಹ್ಮ ಪರಮಮಿತಿ ಶ್ರುತ್ಯಾವಧಾರಿತಃ ॥ ೨೦ ॥

'ಯ ಏನಂ ವಿದುರಮೃತಾಸ್ತೇ ಭವಂತಿ' ಎಂಬ ಶ್ರುತಿಯಿಂದಲೂ ಜ್ಞಾನಕ್ಕೆ ಮೋಕ್ಷಹೇತುತ್ವವು ತಿಳಿದುಬರುತ್ತದೆ. ಈ ಶ್ರುತಿಯಲ್ಲಿನ ಏನಂ ಎಂಬುದಕ್ಕೆ ಸಮುದ್ರಗಃ ಎಂದು ವಿವರಣೆ. ಸಮುದ್ರಂತಸ್ಥತ್ವವು ಶ್ರೀಹರಿಯ ಲಿಂಗ. 'ತದೇವ ಬ್ರಹ್ಮ ಪರಮಂ ಕವೀನಾಂ' ಎಂಬ ಶ್ರುತಿಯು ಸಮುದ್ರಂತಸ್ಥನು ಪರಬ್ರಹ್ಮನೆಂದು ನಿಶ್ಚಯ ಮಾಡುತ್ತದೆ.

ಯತಃ ಪ್ರಸೂತೇತಿ ತತಃ ಸೃಷ್ಟಿಮಾಹ ತತೋ ಹರಿಃ ।

ಶಾಸ್ತ್ರಯೋನಿರ್ನ ಚಾನ್ಯೋऽಸ್ತಿ ಮುಖ್ಯತಸ್ತ್ವಿತಿ ಗಮ್ಯತೇ ॥ ೨೧ ॥

'ಯತಃ ಪ್ರಸೂತಾ ಜಗತಃ ಪ್ರಸೂತೀ' ಎನ್ನುವ ಶ್ರುತಿಯು ಜಗತ್ತಿಗೆ ಕಾರಣವಾದ ಮೂಲಪ್ರಕೃತಿಗೆ ಶ್ರೀಹರಿಯಿಂದ ಸೃಷ್ಟಿಯನ್ನು ಹೇಳುತ್ತದೆ. ಶ್ರೀಹರಿಯಿಂದ ಇತರರಿಗೆ ಮೂಲಪ್ರಕೃತಿಯನ್ನು ಕುರಿತು ಕಾರಣತ್ವವು ಕೂಡಲಾರದು. ಆದ್ದರಿಂದ ಶ್ರೀಹರಿಯೇ ಮುಖ್ಯವಾಗಿ ಮೋಕ್ಷವನ್ನು ಕೊಡತಕ್ಕವನಾಗಿ ಶಾಸ್ತ್ರೈಕಗಮ್ಯನು, ಮತ್ತೊಬ್ಬನು ಶಾಸ್ತ್ರೈಕಗಮ್ಯನಾದ ಮೋಕ್ಷದಾತೃವು ಇರುವುದಿಲ್ಲ.

ಈ ಸೂತ್ರದಲ್ಲಿರತಕ್ಕ 'ಸಮನ್ವಯಾತ್' ಎನ್ನುವ ಹೇತುವನ್ನು ವ್ಯಾಖ್ಯಾನ ಮಾಡುತ್ತಾರೆ –

ಶಾಸ್ತ್ರಯೋನಿತ್ವಮೇತಸ್ಯ ಜ್ಞಾಯತೇ ಹಿ ಸಮನ್ವಯಾತ್ ।

ಸಮಿತಿ ಹ್ಯುಪಸರ್ಗೇಣ ಪರಮಮುಖ್ಯಾರ್ಥತೋಚ್ಯತೇ ॥ ೨೨ ॥

ಈ ಪರಬ್ರಹ್ಮನಿಗೆ ಉಪಕ್ರಮಾದಿ ಲಿಂಗಗಳಿಂದ ಶಾಸ್ತ್ರಯೋನಿತ್ವವು ಪರಮ ಮುಖ್ಯವೃತ್ತಿಯಿಂದ ತಿಳಿಯಲ್ಪಡುತ್ತದೆ. ಸಮ್ ಎನ್ನುವ ಉಪಸರ್ಗದಿಂದ ಪರಮ ಮುಖ್ಯಾರ್ಥತ್ವವು ಹೇಳಲ್ಪಡುತ್ತದೆ.

ಏವಂ ಪರಮಮುಖ್ಯಾರ್ಥೋ ನಾರಾಯಣ ಇತಿ ಶ್ರುತೇಃ ।

ನಿರ್ಧಾರಣಾಯ ನಾಶಬ್ದಮಿತಿ ವೇದಪತಿರ್ಜಗೌ ॥ ೨೩ ॥

ಹೀಗೆ ಮೋಕ್ಷಾದಿಗಳನ್ನು ಕೊಡುವವನಾಗಿ ನಾರಾಯಣನು ಎಲ್ಲ ಶ್ರುತಿಗಳಿಗೆ ಪರಮಮುಖ್ಯಾರ್ಥನು ಎನ್ನುವುದನ್ನು ನಿಶ್ಚಯಿಸುವುದಕ್ಕಾಗಿ 'ಬ್ರಹ್ಮನು ಶಬ್ದಗಳಿಂದ ಅವಾಚ್ಯನಲ್ಲ' ಎಂದು ವೇದವ್ಯಾಸರು ಹೇಳಿದರು.

ಗತಿ ಸಾಮಾನ್ಯಾತ್ ಎನ್ನುವ ಸೂತ್ರಕ್ಕೆ ಸಂಗತಿಯನ್ನು ಹೇಳುತ್ತಾರೆ –

ಕಥಂ ಸಮನ್ವಯೋ ಜ್ಞೇಯಃ ಸ್ವಲ್ಪಶಾಖಾವಿದಾಂ ನೃಣಾಮ್ ।

ವೇದಾ ಹ್ಯನಂತಾ ಇತಿ ಹಿ ಶ್ರುತಿರಾಹಾಪ್ಯನಂತತಾಮ್ ॥ ೨೪ ॥

ಸಂ ಶಬ್ದಕ್ಕೆ ಮುಖ್ಯವೃತ್ತಿಯಿಂದ ಹಾಗೂ ಸರ್ವವೇದಗಳಿಂದ ಸಮನ್ವಯ ಎಂಬುದಾಗಿ ಎರಡು ರೀತಿಯ ಅರ್ಥವಿದೆ. ಎರಡನೆಯ ಅರ್ಥವನ್ನು ಇಲ್ಲಿ ಹೇಳುತ್ತಾರೆ. ವೇದಗಳು ಅನಂತವಾಗಿವೆ. ಅನಂತಾ ವೈ ವೇದಾಃ ಎನ್ನುವ ಶ್ರುತಿಯೂ ವೇದಗಳಿಗೆ ಅನಂತತ್ವವನ್ನು ಹೇಳುತ್ತದೆ. ಹೀಗಿರುವಾಗ ಅಲ್ಪ ಪ್ರಜ್ಞೆಯುಳ್ಳ ಅಲ್ಪ ಶಾಖಾವೇದಿಗಳಿಗೆ ಸಕಲವೇದ ಸಮನ್ವಯವು ಹೇಗೆ ತಿಳಿಯುವುದು ಸಾಧ್ಯ?

ಪುರುಷರು ಅಲ್ಪಜ್ಞರೇ ಆಗಿರಲಿ, ವೇದಗಳು ಅನಂತಗಳೇ ಇರಲಿ, ಹಾಗಿದ್ದರೂ ಸಮನ್ವಯ ಜ್ಞಾನವು ಅಶಕ್ಯವೆಂಬುದು ಹೇಗೆ ಎಂದರೆ –

ಅನಂತವೇದನಿರ್ಣೇತಿರ್ಮಹಾಪ್ರಲಯವಾರಿಧೇಃ ।

ಉತ್ತಾರಣೋಪಮೇತ್ಯಸ್ಮಾನ್ನ ಜ್ಞೇಯೋಽತ್ರ ಸಮನ್ವಯಃ ॥ ೨೫ ॥

ಇತ್ಯಾಶಂಕಾಪನೋದಾರ್ಥಂ ಸ ಆಹ ಕರುಣಾಕರಃ ।

ಮಹಾಪ್ರಲಯ ಸಮುದ್ರವನ್ನು ಹೇಗೆ ದಾಟುವುದು ಅಸಾಧ್ಯವೋ ಹಾಗೆಯೇ ಅಲ್ಪ ವೇದಜ್ಞರಿಗೆ ಅನಂತವೇದಗಳ ನಿರ್ಣಯವು ಅಶಕ್ಯವು. ಈ ಕಾರಣದಿಂದ ವಿಷ್ಣುವಿನಲ್ಲಿ ಸಕಲ ವೇದಗಳ ಸಮನ್ವಯವನ್ನು ತಿಳಿಯುವುದು ಸಾಧ್ಯವಿಲ್ಲ. ಹೀಗೆ ಆಶಂಕೆ ಬಂದರೆ ಅದನ್ನು ಪರಿಹರಿಸುವುದಕ್ಕಾಗಿ ಕರುಣಾಳುಗಳಾದ ವೇದವ್ಯಾಸರು 'ಗತಿ ಸಾಮಾನ್ಯಾತ್' ಎನ್ನುವ ಸೂತ್ರವನ್ನು ಹೇಳಿದರು.

ಈಗ ಸೂತ್ರದ ಅಭಿಪ್ರಾಯವನ್ನು ಹೇಳುತ್ತಾರೆ –

ಅಶಕ್ಯೋತ್ತಾರಣತ್ವೇಽಪಿ ಹ್ಯಾಗಮಾಪಾರವಾರಿಧೇಃ ॥ ೨೬ ॥

ನಿರ್ಣೇಯತೇ ಮಯ್ಯೇವಾಯಂ ರೋಮಕೂಪಲಯೋದಿನಾ ।

ನನ್ನಿಂದ ಬೇರೆಯವರಿಗೆ ಮಹಾಪ್ರಲಯೋದಕ ಸಮುದ್ರದಂತೆ ಅಪಾರವಾದ ಆಗಮವಾರಿಧಿಯ ಪಾರವನ್ನು ಅರಿಯಲು ಅಶಕ್ಯವಾಗಿದ್ದರೂ, ರೋಮಕೂಪದಲ್ಲಿ ಲೀನವಾದ ಪ್ರಲಯ ಸಮುದ್ರವನ್ನುಳ್ಳ ನನ್ನಿಂದಲೇ ಸಕಲವೇದಗಳ ನಿರ್ಣಯವು ಮಾಡಲ್ಪಟ್ಟಿದೆ. ಅಂದರೆ ವೇದವು ಪ್ರಲಯಸಮುದ್ರಕ್ಕೆ ಸದೃಶವಾದ ಅನಂತ್ಯವನ್ನು ಹೊಂದಿದ್ದರೂ ಅಪರಿಮಿತವಾದ ನನ್ನ ಜ್ಞಾನವೆಂಬ ಸಮುದ್ರದಲ್ಲಿ ಲೀನವಾಗುತ್ತದೆ ಎಂದು ಭಾವ.

ಇದನ್ನೇ ವಿವರಿಸುತ್ತಾರೆ –

ಯದ್ಯಪ್ಯಶೇಷವೇದಾರ್ಥೋ ದುರ್ಗಮೋಽಖಿಲಮಾನವೈಃ ॥ ೨೭ ॥

ಮಜ್ಜ್ಞಾನಾವ್ಯಾಕೃತಾಕಾಶೇ ಪ್ರಾಪ್ನೋತಿ ಪರಮಾಣುತಾಮ್ ।

ಎಲ್ಲ ಮನುಷ್ಯರಿಂದ ಸಕಲ ವೇದಾರ್ಥವು ತಿಳಿಯಲು ಅಶಕ್ಯವೇ ಆಗಿದ್ದರೂ, ಅದು ನನ್ನ ಜ್ಞಾನವೆಂಬ ಅವ್ಯಾಕೃತಾಕಾಶದಲ್ಲಿ ಪರಮಾಣುತ್ವವನ್ನು ಹೊಂದುತ್ತದೆ.

ಸೂತ್ರದ ಅಭಿಪ್ರಾಯವನ್ನು ಉಪಸಂಹಾರ ಮಾಡುತ್ತಾರೆ –

ಇತಿ ಪ್ರಕಾಶಯನ್ ವಿಶ್ವಪತಿರಾಹ ಪ್ರಮೇಯತಾಮ್ ॥ ೨೮ ॥

ನಿಖಿಲಸ್ಯಾಪಿ ವೇದಸ್ಯ ಗತಿಸಾಮಾನ್ಯಮಂಜಸಾ ।

ಹಿಂದೆ ಹೇಳಿದ ಪ್ರಕಾರ ಎಲ್ಲ ವೇದಕ್ಕೂ ತನ್ನಿಂದ ಪ್ರಮೇಯತ್ವವನ್ನು ಅಂದರೆ ಜ್ಞಾನವಿಷಯತ್ವವನ್ನು ಚೆನ್ನಾಗಿ ಸೂಚಿಸಲು ವಿಶ್ವಪತಿಯಾದ ವೇದವ್ಯಾಸರು ಸಕಲ ವೇದಾರ್ಥ ನಿರ್ಣಯಕ್ಕೆ ಸಾಮ್ಯವನ್ನು ಹೇಳಿರುತ್ತಾರೆ. ವೇದವ್ಯಾಸರಿಗೆ ಎಲ್ಲ ವೇದಗಳ ಜ್ಞಾನವಿದೆ ಎನ್ನುವುದನ್ನು ಸೂಚಿಸಲು ವಿಶ್ವಪತಿ ಎಂದು ಹೇಳಿದ್ದಾರೆ. ಎಲ್ಲ ವೇದಗಳೂ ವಿಶ್ವದಲ್ಲಿಯೇ ಸೇರಿವೆ. ಸ್ವಾಮಿತ್ವವಿದೆಯೆಂದರೆ ಅವುಗಳ ಪೂರ್ಣ ಜ್ಞಾನವೂ ಇದೆ ಎಂದರ್ಥ. ಸರ್ವಜ್ಞತ್ವವು ಸರ್ವಸ್ವಾಮಿತ್ವಕ್ಕೆ ಗಮಕ.

ವೇದವ್ಯಾಸರು ಹೇಳಿದಂತೆಯೇ ಮತ್ತೊಬ್ಬರು ರುದ್ರಾದಿ ಇತರರನ್ನು ಕುರಿತು ಸಕಲ ವೇದಗಳ ಗತಿಸಾಮ್ಯವನ್ನು ಹೇಳಿದರೆ, ಶ್ರೀಹರಿಯಲ್ಲಿಯೇ ಸಕಲವೇದಗಳ ಗತಿಸಾಮಾನ್ಯವು ಎನ್ನುವುದು ನಿರ್ಣಯವಾಗಲಾರದು ಎಂದರೆ –

ಕೋ ನಾಮ ಗತಿಸಾಮಾನ್ಯಮನಂತಾಗಮಸಂಪದಃ ॥ ೨೯ ॥

ಜ್ಞಾನಸೂರ್ಯಮೃತೇ ಬ್ರೂಯಾತ್ತಮೇಕಂ ಬಾದರಾಯಣಮ್ ।

ಜ್ಞಾನಸೂರ್ಯರಾದ ಆ ವೇದವ್ಯಾಸರೊಬ್ಬರನ್ನು ಬಿಟ್ಟು ಅಪರಿಮಿತವಾದ ಆಗಮವೆಂಬ ಸಂಪತ್ತಿನ ಜ್ಞಾನಸಾಮ್ಯವನ್ನು ಬೇರೆ ಯಾರು ತಾನೇ ಹೇಳಿಯಾನು?

ಜ್ಞಾನದಿಂದ ಸೂರ್ಯ – ಜ್ಞಾನಸೂರ್ಯ. ಅಂದರೆ ಹೇಗೆ ಸೂರ್ಯನು ತನ್ನ ತೇಜಸ್ಸಿನಿಂದ ವಿಶ್ವವನ್ನು ಪ್ರಕಾಶಿಸುತ್ತಾನೋ ಹಾಗೆಯೇ ಜ್ಞಾನಸೂರ್ಯರಾದ ವೇದ ವ್ಯಾಸರು ಸಜ್ಜನರೆಂಬ ವಿಶ್ವವನ್ನು ಜ್ಞಾನದಿಂದ ಪ್ರಕಾಶಪಡಿಸುತ್ತಾರೆ ಎಂದು ಭಾವ.

ಹಾಗಾದರೆ ವೇದವ್ಯಾಸರು ಸರ್ವಜ್ಞರಾದುದರಿಂದ ಅವರಿಗೆ ಗತಿಸಾಮಾನ್ಯ ಜ್ಞಾನವಿರಲಿ. ಆದರೆ ಶಾಸ್ತ್ರವನ್ನು ಓದುವವರಿಗೆ ಸರ್ವಜ್ಞತ್ವವಿಲ್ಲವಾದ್ದರಿಂದ ಗತಿ ಸಾಮಾನ್ಯದಿಂದ ಏನು ಪ್ರಯೋಜನ ಎಂದು ಆಶಂಕಿಸಿದರೆ, ಸೂತ್ರಕ್ಕೆ ಮತ್ತೊಂದು ಅರ್ಥವನ್ನು ಹೇಳುತ್ತಾರೆ –

ಅನ್ಯೋಽಪ್ಯಲ್ಪಮತಿಃ ಶಾಖಾಚತುಷ್ಪಂಚಗತಂ ವಸು ॥ ೩೦ ॥

ಜಾನನ್ನನುಮಿತತ್ವೇನ ಬ್ರೂಯಾತ್ತಸ್ಯ ಪ್ರಸಾದತಃ ।

ಅನ್ಯನು ಅಲ್ಪಮತಿಯಾಗಿದ್ದರೂ, ಆ ವೇದವ್ಯಾಸರ ಅನುಗ್ರಹದಿಂದ ನಾಲ್ಕೈದು ಶಾಖೆಗಳಲ್ಲಿರತಕ್ಕ ಆಗಮಾರ್ಥವನ್ನು ತಿಳಿದವನಾಗಿ, ಆ ಜ್ಞಾನದಿಂದ ಅಪರಿಮಿತ ಆಗಮಸಂಪತ್ತಿಗೆ ಗತಿಸಾಮ್ಯವನ್ನು ಹೇಳಿಯಾನು.

ಹಾಗಾದರೆ ಇದೇ ಸೂತ್ರದ ವ್ಯಾಖ್ಯಾನವಾಗಲಿ. ಹಿಂದೆ ಹೇಳಿದ್ದು ಸೂತ್ರಕ್ಕೆ ವ್ಯಾಖ್ಯಾನವಾಗದೇ ಹೋಗಲಿ. ಸೂತ್ರಕಾರರು ಸರ್ವಜ್ಞರಾದ್ದರಿಂದ ಸಕಲ ವೇದಗಳ ಗತಿಸಾಮ್ಯವನ್ನು ತಿಳಿಯುತ್ತಾರೆ ಎಂದು ಅಂಗೀಕರಿಸೋಣ. ಇದರಿಂದ ಇತರರ ಸಂಶಯವು ನಿವಾರಣೆಯಾಗುವುದು ಹೇಗೆ ಎಂದು ಆಶಂಕಿಸಿದರೆ –

ಇತಿ ಮುಖ್ಯತಯಾಶೇಷಗತಿಸಾಮಾನ್ಯವಿತ್ಪ್ರಭುಃ ॥ ೩೧ ॥

ಪ್ರತಿಜಜ್ಞೇ ದೃಢಂ ಯಸ್ಮಾದ್ದೇವಾನಾಮಪಿ ಪೂರ್ಯತೇ ।

ಮುಖ್ಯವೃತ್ತಿಯಿಂದ ಎಲ್ಲ ವೇದಗಳಿಗೆ ಗತಿಸಾಮ್ಯವನ್ನು ತಿಳಿದ ವೇದವ್ಯಾಸರು, ಉತ್ತಮಾಧಿಕಾರಿಗಳಿಗೆ ಯಾವ ರೀತಿಯಿಂದ ಸಂಶಯ ನಿವಾರಣೆಯಾಗಿ ದೃಢವಾದ ನಿಶ್ಚಯವು ಆಗುವುದೋ ಹಾಗೆ ಪ್ರತಿಜ್ಞೆ ಮಾಡಿರುತ್ತಾರೆ. ಅಂದರೆ ಸೂತ್ರಕಾರರಲ್ಲಿ ಪರಮಾಪ್ತತ್ವವನ್ನು ಹೊಂದಿರುವ ಉತ್ತಮಾಧಿಕಾರಿಗಳಿಗೆ ಪ್ರತಿಜ್ಞಾಮಾತ್ರದಿಂದಲೇ ಶಂಕಾನಿವಾರಣೆಯಾಗುವ ಪ್ರಯುಕ್ತ ಅವರಿಗೆ ಪ್ರತಿಜ್ಞೆಯಷ್ಟೇ ಸಾಕು. ಇತರರನ್ನು ಕುರಿತು ಅನುಮಾನದಿಂದ ಗತಿಸಾಮಾನ್ಯವು. ಹೀಗೆ ಅಧಿಕಾರಿಭೇದದಿಂದ ಸೂತ್ರಕ್ಕೆ ಎರಡು ರೀತಿಯ ವ್ಯಾಖ್ಯಾನವೂ ಕೂಡುವುದು ಎಂದು ಭಾವ.

ಹಾಗಾದರೆ ಈ ಐದು ಅಧಿಕರಣಗಳಿಂದ ಹೇಳಬೇಕಾದ ಎಲ್ಲ ಅಂಶವನ್ನೂ ಹೇಳಿರುವುದರಿಂದ ಈ ಅಧ್ಯಾಯದ ಉಳಿದ ಅಧಿಕರಣಗಳು ಯಾವುದಕ್ಕಾಗಿ ಎಂದು ಆಶಂಕಿಸಿದರೆ –

ಅತೋ ನಿಖಿಲವೇದಾನಾಂ ಸಿದ್ಧ ಏವ ಸಮನ್ವಯಃ ॥ ೩೨ ॥

ಇತಿಃ ಸುಜ್ಞಾಪಿತಾರ್ಥೋಽಪಿ ಪೃಥಕ್ ಚಾಹ ಸಮನ್ವಯಮ್ ।

ಹಿಂದೆ ಹೇಳಿದ ಪ್ರಕಾರ ಐದು ಅಧಿಕರಣಗಳಿಂದಲೇ ಎಲ್ಲ ವೇದಗಳಿಗೆ ಸಮನ್ವಯವು ಸಿದ್ಧವಾಗಿದೆ. ಈ ಪ್ರಕಾರ ಚೆನ್ನಾಗಿಯೇ ಅರ್ಥವನ್ನು ತಿಳಿಸಿದ್ದರೂ ಪುನಃ ಪರಿಶಿಷ್ಟವಾದ ಅಧ್ಯಾಯದಿಂದ ಸಮನ್ವಯವನ್ನು ವಿಸ್ತಾರವಾಗಿ ಹೇಳಿದ್ದಾರೆ. ಹಿಂದೆ ಹೇಳಿದ್ದನ್ನೇ ಪುನಃ ವಿಸ್ತರಿಸಿ ಹೇಳುವುದು ವಿಶೇಷವಾದ ಜ್ಞಾನಕ್ಕೆ ಕಾರಣವು.

ಪ್ರಥಮಾಧ್ಯಾಯದಲ್ಲಿ ನಾಲ್ಕು ಪಾದಗಳಲ್ಲಿ ಕ್ರಮವಾಗಿ ಪ್ರತಿಪಾದಿತವಾಗಿರುವ ವಿಷಯಗಳನ್ನು ಸಂಗ್ರಹವಾಗಿ ತಿಳಿಸುತ್ತಾರೆ –

ತತ್ರ ಪ್ರಥಮತೋಽನ್ಯತ್ರ ಪ್ರಸಿದ್ಧಾನಾಂ ಸಮನ್ವಯಃ ॥ ೩೩ ॥

ಶಬ್ದಾನಾಂ ವಾಚ್ಯ ಏವಾತ್ರ ಮಹಾಮಲ್ಲೇಶಭಂಗವತ್ ।

ಮೊದಲನೇ ಅಧ್ಯಾಯದಲ್ಲಿ ಮೊದಲನೇ ಪಾದದಲ್ಲಿ ಬೇರೆ ಕಡೆಗಳಲ್ಲಿಯೂ ಪ್ರಸಿದ್ಧವಾದ ನಾಮಾತ್ಮಕ ಶಬ್ದಗಳಿಗೆ ವಿಷ್ಣುವಿನಲ್ಲಿ ಮಹಾಮಲ್ಲೇಶಭಂಗನ್ಯಾಯದಂತೆ ಸಮನ್ವಯವು ಹೇಳಲ್ಪಟ್ಟಿದೆ.

ಹಾಗಾದರೆ ನಾಲ್ಕನೇ ಪಾದದಲ್ಲಿ ಹೇಳಿದ ಬೇರೆ ಕಡೆಗಳಲ್ಲಿಯೇ ಪ್ರಸಿದ್ಧವಾದ ಶಬ್ದಗಳ ಸಮನ್ವಯವು ಪ್ರಧಾನವಾದ್ದರಿಂದ ಅದನ್ನೇ ಮೊದಲು ಹೇಳಬೇಕಿತ್ತು. ಏಕೆಂದರೆ ಅನ್ಯತ್ರ ಪ್ರಸಿದ್ಧಿಯಿಂದ ಅನ್ಯತ್ರೈವ ಪ್ರಸಿದ್ಧಿಯು ಪ್ರಬಲವು ಎಂದರೆ –

ಇತೋಽಪ್ಯಭ್ಯಧಿಕತ್ವೇಽಪಿ ತುರ್ಯಪಾದೋದಿತಸ್ಯ ತು ॥ ೩೪ ॥

ಮಹಾಸಮನ್ವಯೇ ತಸ್ಮಿನ್ನಾಧಿಕಾರೋಽಖಿಲಸ್ಯ ಹಿ ।

ಬ್ರಹ್ಮೈವಾಧಿಕೃತಸ್ತತ್ರ ಮುಖ್ಯತೋಽನ್ಯೇ ಯಥಾಕ್ರಮಮ್ ॥ ೩೫ ॥

ದುರ್ಗಮತ್ವಾಚ್ಚ ನೈವಾತ್ರ ಪ್ರಾಥಮ್ಯೇನೋದಿತೋಽಜಸಾ ।

ನಾಲ್ಕನೆಯ ಪಾದದಲ್ಲಿ ಹೇಳಲ್ಪಟ್ಟ ಅನ್ಯತ್ರೈವ ಪ್ರಸಿದ್ಧ ಶಬ್ದಗಳ ಸಮನ್ವಯಕ್ಕೆ ಅನ್ಯತ್ರ ಪ್ರಸಿದ್ಧ ಶಬ್ದಗಳ ಸಮನ್ವಯಕ್ಕಿಂತ ಅತ್ಯಂತ ಅಧಿಕ್ಯವಿದ್ದರೂ ಈ ಅಧ್ಯಾಯದಲ್ಲಿ ಪ್ರಾಥಮ್ಯದಿಂದ ಹೇಳಲೇ ಇಲ್ಲ. ಏಕೆಂದರೆ ಅಧಿಕವಾದ ಗ್ರಹಣ ಶಕ್ತಿಯನ್ನು ಅಪೇಕ್ಷಿಸುವ ಅನ್ಯತ್ರೈವ ಪ್ರಸಿದ್ಧವಾದ ಸಮನ್ವಯದಲ್ಲಿ ಎಲ್ಲರಿಗೆ ಅಧಿಕಾರವು ಇರುವುದಿಲ್ಲ. ಆ ಮಹಾಸಮನ್ವಯದಲ್ಲಿ ಮುಖ್ಯವಾಗಿ ಚತುರ್ಮುಖ ಬ್ರಹ್ಮನೇ ಅಧಿಕಾರವುಳ್ಳವನು. ಇತರರು ಅವರವರ ಯೋಗ್ಯತಾನುಕ್ರಮಕ್ಕೆ ತಕ್ಕಂತೆ ಅಧಿಕಾರಿಗಳು. ಅನ್ಯತ್ರೈವ ಪ್ರಸಿದ್ಧವಾದ ಶಬ್ದಗಳ ಸಮನ್ವಯವು ಮಂದಾಧಿಕಾರಿಗಳಿಗೆ ಮೊದಲಿಗೇ ಬುದ್ಧಿಯಲ್ಲಿ ಆರೋಢವಾಗುವುದಿಲ್ಲ. ಆದ್ದರಿಂದಲೇ ಈ ಸಮನ್ವಯವು ಮೊದಲನೆಯ ಅಧ್ಯಾಯದ ಮೊದಲಲ್ಲಿ ಚೆನ್ನಾಗಿ ಹೇಳಲ್ಪಡಲೇ ಇಲ್ಲ. ಸಾಧಾರಣ ಸಮನ್ವಯ ಜ್ಞಾನದಿಂದ ಮಂದಾಧಿಕಾರಿಗಳ ಬುದ್ಧಿಯು ವೈದಿಕ ವ್ಯುತ್ಪತ್ತಿಯಲ್ಲಿ

ಆಸಕ್ತವಾಗಿ ಕ್ರಮೇಣ ವಿಶೇಷ ಸಮನ್ವಯದಲ್ಲಿ ಗ್ರಹಣ ಶಕ್ತಿಯನ್ನು ಪಡೆಯುತ್ತದೆ.

ಅತೋಽನ್ಯತ್ರಪ್ರಸಿದ್ಧಾನಾಂ ಶಬ್ದಾನಾಂ ನಿರ್ಣಯಾಯ ತು ।। ೩೬ ।।

ಪ್ರವೃತ್ತಃ ಪ್ರಥಮಂ ದೇವಃ ..... ।

ಆದ್ದರಿಂದ (ಪ್ರಾಧಾನ್ಯದ ನಂತರ ಅತಿಪ್ರಾಧಾನ್ಯವು ಹೇಳಲ್ಪಡಬೇಕು ಎಂಬ ಕ್ರಮವಿರುವುದರಿಂದ) ಅನ್ಯತ್ರ ಪ್ರಸಿದ್ಧ ಶಬ್ದಗಳ ನಿರ್ಣಯಕ್ಕಾಗಿಯೇ ಪ್ರಥಮದಲ್ಲಿ ವೇದವ್ಯಾಸರು ಪ್ರವೃತ್ತರಾಗಿರುತ್ತಾರೆ.

ಆದರಲ್ಲಿ ಆನಂದಮಯಾಧಿಕರಣಕ್ಕೆ ಪ್ರಾಥಮ್ಯವೇಕೆಂದರೆ ಅದಕ್ಕೆ ಹೇತುವನ್ನು ಸೂಚಿಸುತ್ತಾರೆ –

..... ತತ್ರಾನಂದಾದಯೋ ಗುಣಾಃ ।

ಈಶಸ್ಯೈವೇತಿ ನಿರ್ದೇತಾಃ ಶ್ರುತಿಯುಕ್ತಿಸಮಾಶ್ರಯಾತ್ ।। ೩೭ ।।

ಸಮನ್ವಯವನ್ನು ವಿಸ್ತರಿಸುವುದರಲ್ಲಿ ಆನಂದಾದಿ ಗುಣಗಳಿಗೇ ಪ್ರಾಥಮ್ಯವು. ಏಕೆಂದರೆ ಶ್ರುತಿ ಹಾಗೂ ಯುಕ್ತಿಗಳನ್ನು ಚೆನ್ನಾಗಿ ಆಶ್ರಯಿಸಿಕೊಂಡು ಆನಂದಾದಿ ಗುಣಗಳು ಶ್ರೀಹರಿಗೇನೆ ಎಂದು ನಿರ್ಣಯಿಸಲ್ಪಡುತ್ತವೆ. ಆನಂದ ವಿಜ್ಞಾನಾದಿಗಳು ಎಲ್ಲ ಶೋಭನವಾದ ಗುಣಗಳಿಗೆ ಮೂರ್ಧನ್ಯ ಪ್ರಾಯವು. ಆದಪ್ರಯುಕ್ತ ಮಂಗಲ ಸ್ವರೂಪರಾದ ಶ್ರೀಮದಾಚಾರ್ಯರು ಆನಂದ ಶಬ್ದದ ಸಮನ್ವಯವನ್ನೇ ಮೊದಲು ಹೇಳಿರುತ್ತಾರೆ.

ಅಂತರಾಧಿಕರಣಕ್ಕೂ ಆಕಾಶಾಧಿಕರಣಕ್ಕೂ ಆನಂದಮಯಾಧಿಕರಣದ ಸಾಂಗತ್ಯವು ಸಮಾನವಾಗಿದ್ದರೂ, ಮೊದಲಿಗೆ ಅಂತರಾಧಿಕರಣ ಎನ್ನುವ ಕ್ರಮಕ್ಕೆ ಕಾರಣವೇನು ಎಂದರೆ –

ದೇವತಾಂತರಗಾಃ ಸರ್ವೇ ಶಬ್ದವೃತ್ತಿನಿಮಿತ್ತತಃ ।

ವಿಷ್ಣುಮೇವ ವದಂತ್ಯದ್ಧಾ ..... ।।

ಬೇರೆ ದೇವತೆಗಳಲ್ಲಿ ಪ್ರಸಿದ್ಧವಾಗಿರತಕ್ಕ ಇಂದ್ರ ಮೊದಲಾದ ಎಲ್ಲ ಶಬ್ದಗಳೂ ಪರಮಮುಖ್ಯವಾದ ಶಬ್ದವೃತ್ತಿಯಿಂದಲೇ ವಿಷ್ಣುವಿನಲ್ಲಿ ಪ್ರಸಿದ್ಧವಾಗಿವೆ, ಕೇವಲ ಅಮುಖ್ಯವೃತ್ತಿಯಿಂದಲ್ಲ. ಹೇಗೆಂದರೆ ಶಬ್ದವೃತ್ತಿಗಳಾದ ಯೋಗರೂಢಿಗಳಿಗೆ ನಿಮಿತ್ತ ಗಳಾದ ಬಹುಲ ಪ್ರಯೋಗಾದಿಗಳು ವಿಷ್ಣುವಿನಲ್ಲಿಯೇ ಇರುತ್ತವೆ. ಆದ್ದರಿಂದ ಎಲ್ಲ ಶಬ್ದಗಳೂ ಮುಖ್ಯವಾಗಿ ವಿಷ್ಣುವನ್ನೇ ಹೇಳುತ್ತವೆ.

ಹಾಗಾದರೆ ಇಂದ್ರಾದಿಗಳಲ್ಲಿ ಆ ಶಬ್ದಗಳಿಗೆ ಪ್ರವೃತ್ತಿಯೇ ಇಲ್ಲವೇ ಎಂದರೆ –

..... ತತ್ಸಂಗಾದುಪಚಾರತಃ ।। ೩೮ ।।

ಅನ್ಯದೇವಾನ್ ವದಂತೀಹ ವಿಶೇಷಗುಣವತ್ವತಃ ।

ವಿಷ್ಣುಮೇವ ಪರಂ ಬ್ರೂಯುರೇವಮನ್ಯೇಽಪ್ಯಶೇಷತಃ ॥ ೩೯ ॥

ವಿಷ್ಣುವಿನ ಸಂಬಂಧದಿಂದ ಇಂದ್ರಾದಿ ಶಬ್ದಗಳು ಆ ದೇವತೆಗಳನ್ನು ಅಮುಖ್ಯ ವೃತ್ತಿಯಿಂದ ಹೇಳುತ್ತವೆ. ಪೂರ್ಣತ್ವ ಸ್ವಾತಂತ್ರ್ಯ ಮೊದಲಾದ ವಿಶೇಷ ಗುಣಗಳ ನಿಮಿತ್ತದಿಂದ ಇಂದ್ರಾದಿ ಎಲ್ಲ ಶಬ್ದಗಳೂ ವಿಷ್ಣುವನ್ನೇ ಸರ್ವೋತ್ತಮತ್ವೇನ ಹೇಳುತ್ತವೆ. ಹೀಗೆಯೇ ಬೆರೆ ಎಲ್ಲ ಶಬ್ದಗಳೂ ವಿಷ್ಣುವನ್ನೇ ಪರಮಮುಖ್ಯಾರ್ಥದಲ್ಲಿ ಹೇಳುತ್ತವೆ. ಹೀಗೆಯೇ ಮುಂದಿನ ಅಧಿಕರಣಗಳಲ್ಲಿಯೂ ಕ್ರಮ ನಿಮಿತ್ತಾದಿಗಳನ್ನು ತಾವೇ ಊಹಿಸಿಕೊಳ್ಳಬೇಕು ಎಂದು ಭಾವ.

ಹಾಗಾದರೆ ಅನ್ಯತ್ರ ಪ್ರಸಿದ್ಧವಾದ ನಾಮಾತ್ಮಕ ಶಬ್ದಗಳು ಅನಂತವಾಗಿರುವ ಪ್ರಯುಕ್ತ ಪಾದಸಮಾಪ್ತಿಯು ಹೇಗೆ ಎಂದು ಆಶಂಕಿಸಿದರೆ, ಅದನ್ನು ಪರಿಹರಿಸುತ್ತ ಪ್ರಥಮ ಪಾದಾರ್ಥವನ್ನು ಅನುವಾದ ಮಾಡಿ, ದ್ವಿತೀಯ ಪಾದಕ್ಕೆ ಸಂಗತಿಯನ್ನು ಹೇಳುತ್ತಾರೆ –

ಇತ್ಯನ್ಯತ್ರ ಪ್ರಸಿದ್ಧೋರುಶಬ್ದರಾಶೇರಶೇಷತಃ ।

ಜ್ಞಾತೇ ಸಮನ್ವಯೇ ವಿಷ್ಣೌ ಲಿಂಗೈರ್ಹ್ಯೇಷ ಸಮನ್ವಯಃ ॥ ೪೦ ॥

ತೇಷಾಮನ್ಯಗತತ್ವೇ ತು ನ ಸ್ಯಾತ್ಸಮ್ಯಕ್ ಸಮನ್ವಯಃ ।

ಇತ್ಯೇವಾಶೇಷಲಿಂಗಾನಾಂ ಬ್ರಹ್ಮಣ್ಯೇವ ಸಮನ್ವಯಮ್ ॥ ೪೧ ॥

ಆಹ..... ।

ಹೀಗೆ ಪ್ರಥಮಪಾದದಿಂದ ಅನ್ಯತ್ರ ಪ್ರಸಿದ್ಧವಾದ ಉತ್ಕೃಷ್ಟವಾದ ಶಬ್ದ ಸಮೂಹಕ್ಕೆ ನಿಶ್ಶೇಷವಾಗಿ ಸಮನ್ವಯವು ತಿಳಿಯಲ್ಪಡಲು, ಶಂಕೆಯು ಹುಟ್ಟುತ್ತದೆ. ಪ್ರಾಯಶಃ ಲಿಂಗಬಲದಿದಂಲೇ ನಾಮಾತ್ಮಕ ಶಬ್ದ ಸಮನ್ವಯವು ಹೇಳಲ್ಪಡುತ್ತದೆ. ಆ ಲಿಂಗಗಳಿಗಾದರೂ ಅನ್ಯಗತತ್ವವು ಪ್ರತೀತವಾದರೆ, ನಾಮ ಸಮನ್ವಯವು ಚೆನ್ನಾಗಿ ಆಗಲಾರದು. ಹೀಗೆ ಆಶಂಕಿಸಿದರೆ – ಎಲ್ಲ ಲಿಂಗಗಳಿಗೆ ವಿಷ್ಣುವಿನಲ್ಲಿಯೇ ಸಮನ್ವಯವನ್ನು ಎರಡನೆಯ ಪಾದದಲ್ಲಿ ಹೇಳಿರುತ್ತಾರೆ.

ಈಗ ಮೂರನೆಯ ಪಾದಕ್ಕೆ ಮೊದಲನೆಯ ಮತ್ತು ಎರಡನೆಯ ಪಾದ ಗಳಿಂದ ಸಂಗತಿಯನ್ನು ಹೇಳುತ್ತಾರೆ –

ಉಭಯಗತತ್ವಂ ಚ ಸ್ಯಾದತೋ ಲಿಂಗಶಬ್ದಯೋಃ ।

ಇತಿ ಸಂಶಯನುತ್ಯರ್ಥಂ ..... ॥

ಅನ್ಯತ್ರ ಪ್ರಸಿದ್ಧವಾದುದಕ್ಕೆ ಭಗವತ್ಪರತ್ವವನ್ನು ಸಮರ್ಥಿಸಿದ್ದರಿಂದ ಲಿಂಗಾತ್ಮಕ

ಶಬ್ದಗಳಿಗೂ, ನಾಮಾತ್ಮಕ ಶಬ್ದಗಳಿಗೂ ಉಭಯವಿಷಯತ್ವವು (ಭಗವಂತನಿಗೂ, ಇತರರಾದ ರುದ್ರಾದಿಗಳಿಗೂ ಹೀಗೆ ಉಭಯ ವಿಷಯತ್ವವು) ಆಗುವುದು. ಹೀಗೆ ಬರುವ ಆಶಂಕೆಯ ನಿವಾರಿಸುವುದಕ್ಕಾಗಿ ಮೂರನೆಯ ಪಾದವನ್ನು ಆರಂಭಿಸಿದರು ಎಂದು ಹೇಳಿದರು.

ಈ ಆಶಂಕೆಯು ಮೂರನೆಯ ಪಾದದಲ್ಲಿ ಹೇಗೆ ಪರಿಹೃತವಾಗಿದೆ ಎಂದರೆ ತಾತ್ಪರ್ಯವನ್ನು ಹೇಳುತ್ತಾರೆ –

..... ಉಭಯತ್ರ ಪ್ರತೀತಿತಃ ।। ೪೨ ।।

ಶಬ್ದಾನಾಂ ವರ್ತಮಾನಾನಾಂ ಸಲಿಂಗಾನಾಂ ವಿಶೇಷತಃ ।

ಸಮನ್ವಯೋ ಹರಾವೇವ ಯನ್ನೈವಾನ್ಯತ್ರ ಮುಖ್ಯತಃ ।। ೪೩ ।।

ಶಬ್ದಾ ಲಿಂಗಾನಿ ಚ ಯತೋ ನೈವಾನ್ಯತ್ರ ಸ್ವತಂತ್ರತಾ ।

ಶ್ರೀಹರಿಯಲ್ಲಿಯೂ ಇತರರಲ್ಲಿಯೂ ಪ್ರತೀತಿಯಿದ್ದ ಪ್ರಯುಕ್ತ, ಇರತಕ್ಕ ಲಿಂಗಸಹಿತವಾದ ನಾಮಾತ್ಮಕ ಶಬ್ದಗಳಿಗೂ, ಲಿಂಗಾತ್ಮಕ ಶಬ್ದಗಳಿಗೂ ಶ್ರೀಹರಿಯಲ್ಲಿಯೇ ಪರಮಮುಖ್ಯವೃತ್ತಿಯಿಂದಲೂ ತಾತ್ಪರ್ಯದಿಂದಲೂ ಸಮನ್ವಯವು. ಏಕೆಂದರೆ, ಶ್ರೀಹರಿಯಿಂದ ಇತರರಲ್ಲಿ (ಅಂದರೆ ರುದ್ರಾದಿಗಳಲ್ಲಿ) ಶಬ್ದಗಳಿಗೂ ಲಿಂಗಗಳಿಗೂ ಪರಮ ಮುಖ್ಯಾರ್ಥದಿಂದ ಪ್ರವೃತ್ತಿಯು ಇರುವುದಿಲ್ಲ. ಏಕೆಂದರೆ ರುದ್ರಾದಿಗಳಲ್ಲಿ ಸ್ವಾತಂತ್ರ್ಯವು ಇರುವುದಿಲ್ಲ.

ಸ್ವಾತಂತ್ರ್ಯವಿಲ್ಲದಿದ್ದರೂ ಇತರರಲ್ಲಿ ಶಬ್ದಗಳಿಗೆ ಮುಖ್ಯವೃತ್ತಿಯು ಏಕೆ ಇರುವುದಿಲ್ಲವೆಂದರೆ –

ಅಸ್ವತಂತ್ರೇಷು ಶಬ್ದಸ್ಯ ವೃತ್ತಿಹೇತುರ್ನ ಮುಖ್ಯತಃ ।। ೪೪ ।।

ಯತೋಽತೋ..... ।

ಶಬ್ದ ಪ್ರವೃತ್ತಿಗೆ ಕಾರಣವಾದ ಗುಣಾದಿಗಳ ಅಭಾವದಿಂದ ಅಸ್ವತಂತ್ರರಾದ ರುದ್ರಾದಿಗಳಲ್ಲಿ ಶಬ್ದಕ್ಕೆ ಮುಖ್ಯವೃತ್ತಿಯು ಇರುವುದು ಬೇಡ. ಹಾಗಿದ್ದರೂ ಶ್ರೀಹರಿಯಲ್ಲಿಯೇ ವಿಶೇಷವಾದ ಸಮನ್ವಯವು ಹೇಗೆ ಎಂದರೆ – ಇತರರಲ್ಲಿ ಶಬ್ದಗಳಿಗೆ ಮುಖ್ಯಾರ್ಥತ್ವವು ಇರುವುದಿಲ್ಲವೆಂದು ತಾತ್ಪರ್ಯ. ಅಂದರೆ ಶಬ್ದಗಳಿಗೆ ಮುಖ್ಯಾರ್ಥ, ಅಮುಖ್ಯಾರ್ಥ ಎರಡನ್ನೂ ಅಂಗೀಕರಿಸಲೇಬೇಕು. ಪ್ರಸಕ್ತವಾದ ಎರಡು ವಸ್ತುಗಳಲ್ಲಿ ಒಂದಕ್ಕೆ ಮುಖ್ಯಾರ್ಥವು ಕೂಡದಿದ್ದರೆ ಇನ್ನೊಂದಕ್ಕೆ ಮುಖ್ಯಾರ್ಥವು ಆಗಲೇಬೇಕು. ಇಲ್ಲದಿದ್ದರೆ ಮುಖ್ಯಾರ್ಥವನ್ನು ಅಪೇಕ್ಷೆಯನ್ನು ಹೊಂದಿರುವ ಅಮುಖ್ಯಾರ್ಥವೂ ಕೂಡುವುದಿಲ್ಲ.

'ಯದಧೀನಾ' ಇತ್ಯಾದಿ ವಚನದಿಂದ ಯುಕ್ತ್ಯಂತರವನ್ನು ಹೇಳುತ್ತಾರೆ –

..... ಯದಧೀನಾಸ್ತೇ ಶಬ್ದಾರ್ಥತ್ವಮುಪಾಗತಾಃ ।

ಅತ್ಯಲ್ಪೇನೈವ ಶಬ್ದಸ್ಯ ವೃತ್ತಿಹೇತುಗುಣೇನ ತು ॥ ೪೫ ॥

ಅಯೋ ಯಥಾ ದಾಹಕತ್ವಂ ಸ ಏವೇಶಃ ಸ್ವತಂತ್ರತಃ ।

ಮುಖ್ಯಶಬ್ದಾರ್ಥ ಇತಿ ಹಿ ಸ್ವೀಕರ್ತವ್ಯೋ ಮನೀಷಿಭಿಃ ॥ ೪೬ ॥

ಇತ್ಯಾಹ ।

ಭಗವದಿತರವಾದ ಪದಾರ್ಥಗಳಲ್ಲಿರುವ ಗುಣಗಳು ಅತ್ಯಲ್ಪವಾದ ಶಬ್ದಪ್ರವೃತ್ತಿಗೆ ಕಾರಣವಾಗಿರುತ್ತವೆ. ಮತ್ತೂ ಶ್ರೀಹರಿಯಲ್ಲಿಯೇ ಆಧೀನಗಳಾಗಿ ಶಬ್ದಾರ್ಥತ್ವವನ್ನು ಹೊಂದಿರುತ್ತವೆ. ಅನ್ಯಾಧೀನವಾದ ಶಬ್ದಾರ್ಥವು ಅಮುಖ್ಯವು. ಅನ್ಯಾಧೀನವಲ್ಲದ ಶಬ್ದಾರ್ಥವು ಮುಖ್ಯವು. ಅನನ್ಯಾಧೀನವಾದ ಶಬ್ದಾರ್ಥವು ಶ್ರೀಹರಿಯಲ್ಲಿಯೇ. ಆದಕಾರಣ ಎಲ್ಲ ಶಬ್ದಗಳಿಗೂ ಶ್ರೀಹರಿಯಲ್ಲಿಯೇ ಮುಖ್ಯಾರ್ಥವು ಎಂದು ಭಾವ. ಅಗ್ನಿಯ ಸಂಪರ್ಕದಿಂದ ಸುಡುವ ಗುಣವನ್ನು ಪಡೆದ ಕಬ್ಬಿಣವು ದಾಹಕ ಶಬ್ದಾರ್ಥತ್ವವನ್ನು ಹೊಂದಿದ್ದರೂ, ದಾಹಕ ಗುಣವು ಅಗ್ನಿಯ ಅಧೀನವಾದುದರಿಂದ ಸುಡುತ್ತದೆ ಎನ್ನುವ ಶಬ್ದವು ಅಗ್ನಿಯಲ್ಲಿ ಮುಖ್ಯವು, ಕಬ್ಬಿಣದಲ್ಲಿ ಅಮುಖ್ಯವು ಹೇಗೋ ಹಾಗೆ. ಸ್ವತಂತ್ರನಾದ ಶ್ರೀಹರಿಯೇ, ನಿರವಧಿಕವಾದ ಶಬ್ದಪ್ರವೃತ್ತಿಯನ್ನು ಹೊಂದಿರುವುದರಿಂದ, ಶಬ್ದಗಳಿಗೆ ಮುಖ್ಯಾರ್ಥನೆಂದು ಶ್ರುತ್ಯಾದಿಗಳ ಜ್ಞಾನವುಳ್ಳವರು ಸ್ವೀಕರಿಸತಕ್ಕದ್ದು. ಹೀಗೆ ತೃತೀಯ ಪಾದದಿಂದ ಹೇಳುತ್ತಾರೆ.

'ಏವಂ ಚ' ಇತ್ಯಾದಿ ವಚನದಿಂದ ನಾಲ್ಕನೆಯ ಪಾದಕ್ಕೆ ಸಂಗತಿಯನ್ನು ಹೇಳುತ್ತಾರೆ –

..... ಏವಂ ಚ ಶಬ್ದಾನಾಂ ನಾರಾಯಣಸಮನ್ವಯೇ ।

ಸಿದ್ಧೇಽಪ್ಯಶೇಷಶಬ್ದಾನಾಂ ನ ಕಥಂಚನ ಯುಜ್ಯತೇ ॥ ೪೭ ॥

ವಿರೋಧಾದವರತ್ವಾದೇರಪಿ ಪ್ರಾಪ್ತಿರ್ಯತೋ ಭವೇತ್ ।

ಇತಿ ಚೇತ್ ॥

ಹೀಗೆ ಹಿಂದಿನ ಮೂರು ಪಾದಗಳಿಂದ ಕೆಲವು ಶಬ್ದಗಳಿಗೆ ನಾರಾಯಣನಲ್ಲಿ ಸಮನ್ವಯವು ಸಿದ್ಧವಾಯಿತು. ಹಾಗಿದ್ದರೂ ಎಲ್ಲ ಶಬ್ದಗಳಿಗೂ (ಅಂದರೆ ದುಃಖಿ ಬದ್ಧ ಅವರ ಇತ್ಯಾದಿ ಶಬ್ದಗಳಿಗೂ, ಕರ್ಮವಿಷಯಕವಾದ ಜ್ಯೋತಿಷ್ಟೋಮಾದಿ ಶಬ್ದಗಳಿಗೂ) ನಾರಾಯಣನಲ್ಲಿ, ಯೋಗದಿಂದಾಗಲೀ ರೂಢಿಯಿಂದಾಗಲೀ ಶಬ್ದ ವೃತ್ತಿಯು ಕೂಡದಿರುವುದರಿಂದ, ಸೂತ್ರದಲ್ಲಿ ಪ್ರತಿಜ್ಞಾತವಾದ ಸಮನ್ವಯವು ಕೂಡುವುದಿಲ್ಲ. ಶ್ರೀಹರಿಯಲ್ಲಿ ದುಃಖಿತ್ವ ಅವರತ್ವ ಇತ್ಯಾದಿಗಳ ಪ್ರಾಪ್ತಿಯನ್ನು ಹೇಳಿದರೆ ಸರ್ವಪ್ರಮಾಣಗಳಿಂದ ವಿರೋಧ ಬರುವುದು ಹೀಗೆಂದು ಶಂಕಿಸಿದರೆ –

..... ಅವರತ್ವಾದಿ ದ್ವಿವಿಧಂ ಹ್ಯುಪಲಭ್ಯತೇ ।। ೪೮ ।।

ಪರಸ್ಯಾವರತಾಹೇತುರ್ಯಃ ಸ್ವಯಂ ಪರ ಏವ ಸನ್ ।

ಸೋಽಪಿ ಹ್ಯವರಶಬ್ದಾರ್ಥೋ ಯಥಾ ರಾಜಾ ಜಯೀ ಭವೇತ್ ।। ೪೯ ।।

ಅನ್ಯೋಽವರತ್ವಾನುಭವೀ ತಯೋಃ ಪೂರ್ವೋಽಸ್ತಿ ಕೇಶವೇ ।

ಅವರಾದಿ ಶಬ್ದಪ್ರವೃತ್ತಿ ನಿಮಿತ್ತವು ಎರಡು ವಿಧವೆಂದು ಪ್ರಮಾಣಗಳಿಂದ ತಿಳಿದುಬರುತ್ತದೆ. ಹೇಗೆಂದರೆ – ಯಾರು ತಾನು ಸರ್ವೋತ್ತಮನಾದ್ದರಿಂದ ಅವರತ್ವ ವಿಲ್ಲದಿದ್ದರೂ, ಇತರರ ಅವರತ್ವಕ್ಕೆ ಕಾರಣನೋ ಅವನೂ ಅವರ ಶಬ್ದಾರ್ಥನು. ರಾಜನು ತನ್ನ ಭಟರು ಜಯಗಳಿಸಿದ್ದರೂ ತಾನು, ಅವರ ಜಯಕ್ಕೆ ಸ್ವಾಮಿಯಾದ ಪ್ರಯುಕ್ತ, ಜಯವುಳ್ಳವನು ಎನಿಸಿಕೊಳ್ಳುವನು ಹೇಗೋ ಹಾಗೆ. ಅವರತ್ವದ ಅನುಭವತ್ವವು ಮತ್ತೊಂದು ಅವರ ಶಬ್ದಾರ್ಥ. ಹೀಗೆ ಎರಡು ಪ್ರವೃತ್ತಿ ಹೇತುಗಳಲ್ಲಿ ಮೊದಲನೆಯದು (ನಿಯಾಮಕನೆಂಬ ಅರ್ಥದಲ್ಲಿ) ಶ್ರೀಹರಿಯಲ್ಲಿ ಅವರಾದಿ ಶಬ್ದವಾಚ್ಯತ್ವವಿದೆ.

ದ್ವಿತೀಯೋ ಜೀವ ಏವಾಸ್ತಿ ಸ್ವಾತಂತ್ರ್ಯಾನ್ನೈವ ದೂಷಣಮ್ ।। ೫೦ ।।

ಹರೇಃ ।

ಎರಡನೆಯದು (ಅವರತ್ವಾದಿ ಅನುಭವತ್ವವು) ಜೀವ ಹಾಗೂ ಜಡಗಳಲ್ಲಿದೆ. ಎರಡನೆಯದು ಈಶ್ವರನಲ್ಲಿಯೂ ಇದ್ದರೆ ಈಶ್ವರತ್ವಕ್ಕೇ ಹಾನಿಯು. ಅಧಿಕರಣದ ಫಲವನ್ನು ಹೇಳುತ್ತಾರೆ. ಸ್ವಾತಂತ್ರ್ಯಾತ್ ಅಂದರೆ ಪರರಲ್ಲಿರತಕ್ಕ ಅವರತ್ವಾದಿಗಳಲ್ಲಿ ಶ್ರೀಹರಿಗೆ ಸ್ವಾತಂತ್ರ್ಯವಿರುವ ಪ್ರಯುಕ್ತ ಅವರತ್ವಾದಿಗಳು ಅವನಿಗೆ ದೂಷಣವಾಗಿ ಪರಿಣಮಿಸುವುದಿಲ್ಲ. ಹೀಗೆಯೇ ಮುಂದಿನ ಅಧಿಕರಣದ ತಾತ್ಪರ್ಯವನ್ನೂ ಹೇಳತಕ್ಕದ್ದು.

ಪ್ರಥಮಾಧ್ಯಾಯದ ಅರ್ಥಾನುವಾದ ಮಾಡಿಕೊಂಡು ದ್ವಿತೀಯಾಧ್ಯಾಯದ ಸಂಗತಿಯನ್ನು ಹೇಳುತ್ತಾರೆ –

..... ಏವಮಶೇಷೇಣ ಸರ್ವಶಬ್ದಸಮನ್ವಯೇ ।

ಉಕ್ತೇ ವಿರೋಧಹೀನಸ್ಯ ಸ್ಯಾತ್ಸಮನ್ವಯತಾ ಯತಃ ।। ೫೧ ।।

ಅತೋಽಶೇಷವಿರೋಧಾನಾಂ ಕೃತೇಶೇನ ನಿರಾಕೃತಿಃ ।

ಹೀಗೆ ಪ್ರಥಮಾಧ್ಯಾಯದಲ್ಲಿ ಅಶೇಷವಾಗಿ ಎಲ್ಲ ಶಬ್ದಗಳ ಸಮನ್ವಯವು ಉಕ್ತವಾಯಿತು. ವಿರೋಧವಿಲ್ಲದಿದ್ದಾಗಲೇ ಸಮನ್ವಯವು ಕೂಡುವುದು. ಆದ್ದರಿಂದ ದ್ವಿತೀಯಾಧ್ಯಾಯದಲ್ಲಿ ಎಲ್ಲ ವಿರೋಧಗಳ ನಿರಾಕರಣೆಯು ಶ್ರೀಹರಿಯಿಂದ ಮಾಡಲ್ಪಟ್ಟಿತು.

ತೃತೀಯಾಧ್ಯಾಯಕ್ಕೆ ಸಂಗತಿಯನ್ನು ಹೇಳುತ್ತಾರೆ –

ಸಮನ್ವಯಾವಿರೋಧಾಭ್ಯಾಂ ಸಂಜಾತೇ ವಸ್ತುನಿರ್ಣಯೇ ।। ೫೨ ।।

ಕಿಂ ಮಯಾ ಕಾರ್ಯಮಿತ್ಯೇವ ಸ್ಯಾದ್ಬುದ್ಧಿರಧಿಕಾರಿಣಃ ।

ಸಮನ್ವಯ, ಅವಿರೋಧಗಳಿಂದ (ಅಂದರೆ ಮೊದಲೆರಡು ಅಧ್ಯಾಯಗಳಿಂದ) ಪರಬ್ರಹ್ಮ ವಸ್ತುವಿಗೆ ಗುಣಪೂರ್ಣತ್ವ ದೋಷದೂರತ್ವಾದಿ ನಿರ್ಣಯವಾಗುತ್ತಿರಲು, ಅಧಿಕಾರಿಗಳಿಗೆ ನನ್ನಿಂದ ಯಾವ ಸಾಧನೆಯು ಮಾಡಲ್ಪಡಬೇಕು, ಅದು ಹೇಗೆ ಇತ್ಯಾದಿ ಬುದ್ಧಿಯು ಉಂಟಾಗುವುದು.

ತತ್ರ ಭಕ್ತಿವಿಧಾನಾರ್ಥಮಭಕ್ತಾನರ್ಥಸಂತತೌ ।। ೫೩ ।।

ಉಕ್ತಾಯಾಂ ಭಕ್ತಿದಾರ್ಢ್ಯಾಯ ಪ್ರೋಕ್ತೇಽಶೇಷಗುಣೋಚ್ಚಯೇ ।

ವಕ್ತವ್ಯೋಪಾಸನಾ ನಿತ್ಯಂ ಕರ್ತವ್ಯೇತ್ಯಾದರೇಣ ಹಿ ।। ೫೪ ।।

ಮೂರನೆಯ ಅಧ್ಯಾಯಲ್ಲಿ ಭಕ್ತಿಯನ್ನು ಹುಟ್ಟಿಸುವುದಕ್ಕಾಗಿ, ಅಂದರೆ ವೈರಾಗ್ಯಕ್ಕಾಗಿ ಭಕ್ತಿಯನ್ನು ವಿಧಿಸುವುದಕ್ಕಾಗಿ, ಪ್ರಥಮ ಪಾದದಲ್ಲಿ ಅಭಕ್ತರಿಗೆ ಅನರ್ಥಗಳ ಸಂತತಿಯು ಹೇಳಲ್ಪಟ್ಟಿವೆ. ದೃಢವಾದ ಭಕ್ತಿಯನ್ನು ಹುಟ್ಟಿಸಲು ಎರಡನೆಯ ಪಾದದಲ್ಲಿ ಶ್ರೀಹರಿಯ ಅಶೇಷವಾದ ಗುಣಸಮೂಹವು ಉಕ್ತವಾಗಿದೆ. ಇದರಿಂದಾಗಿ ಈ ಪಾದದಲ್ಲಿ ಉಪಾಸನೆಯನ್ನು ಕುರಿತು ಹೇಳಲಿಕ್ಕೆ ಅವಸರ ಪ್ರಾಪ್ತವಾಯಿತು. ಉಪಾಸನೆಯು ನಿರಂತರವೂ ಆದರದಿಂದ ಮಾಡತಕ್ಕದ್ದು. ಆದಕಾರಣ ಈಗ ಉಪಾಸನೆಯು ಹೇಳತಕ್ಕದ್ದೇ ಆಗಿದೆ.

ಹಾಗಾದರೆ ಉಪಾಸನೆಯೇ ವಿಚಾರಣೀಯವು. ಆದರೆ ಪ್ರಥಮಾಧಿಕರಣದಲ್ಲಿ ಸರ್ವಶಾಸ್ತ್ರ ಪರಿಜ್ಞಾನವು ವಿಚಾರ ಮಾಡಲ್ಪಡಲು ಕಾರಣವೇನು ಎಂದರೆ –

ಸೋಪಾಸನಾ ಚ ದ್ವಿವಿಧಾ ಶಾಸ್ತ್ರಾಭ್ಯಾಸಸ್ವರೂಪಿಣೀ ।

ಧ್ಯಾನರೂಪಾ ಪರಾ ಚೈವ ತದಂಗಂ ಧಾರಣಾದಿಕಮ್ ।। ೫೫ ।।

ತಥೋಭಯಾತ್ಮಕಂ ಚೈವ ಪಾದೇಽಸ್ಮಿನ್ ಬಾದರಾಯಣಃ ।

ಆಹೋಪಾಸನಮದ್ಯೈವ ವಿಸ್ತರಾತ್ ಶ್ರುತಿಪೂರ್ವಕಮ್ ।। ೫೬ ।।

ಆ ಉಪಾಸನೆಯು ಎರಡು ವಿಧ. ಒಂದು ಶಾಸ್ತ್ರಾಭ್ಯಾಸ ಸ್ವರೂಪವುಳ್ಳದ್ದು, ಮತ್ತೊಂದು ಧ್ಯಾನರೂಪವಾದುದು. ಶಾಸ್ತ್ರಾಭ್ಯಾಸವೂ ಉಪಾಸನೆಯ ಪ್ರಕಾರವೇ ಆದುದರಿಂದ ಅದನ್ನು ಪ್ರತಿಪಾದಿಸತಕ್ಕ ಪ್ರಥಮಾಧಿಕರಣಕ್ಕೆ ಈ ಪಾದದಲ್ಲಿ ಅಂತರ್ಭಾವವು ಯುಕ್ತವು. ಧಾರಣಾದಿಗಳು ಧ್ಯಾನದ ಅಂಗವೇ ಹೊರತು ಸ್ವತಂತ್ರ ಉಪಾಸನೆಯಲ್ಲ. ಆದರೆ ಶಾಸ್ತ್ರಾಭ್ಯಾಸವು ಧ್ಯಾನಕ್ಕೆ ಅಂಗವಾಗಿದ್ದರೂ, ಸ್ವತಂತ್ರವಾದ

ಉಪಾಸನೆಯೂ ಆಗಿದೆ. ಹೀಗೆ ಉಭಯಾತ್ಮಕವಾದ ಉಪಾಸನೆಯನ್ನು ಇದೇ ಪಾದದಲ್ಲಿಯೇ ವೇದವ್ಯಾಸರು, ಉಪಯುಕ್ತ ಪ್ರಮೇಯದೊಂದಿಗೆ ವಿಸ್ತಾರವಾಗಿ ಶ್ರುತಿಗಳನ್ನು ಉದಾಹರಿಸುವುದರ ಮೂಲಕ ಹೇಳಿದರು.

ಈ ಪ್ರಕಾರವಾಗಿ ಮೂರು ಅಧ್ಯಾಯಗಳ ಎಲ್ಲ ಪಾದಗಳ ಸಂಗತಿಗಳನ್ನು ಹೇಳಿ ಪ್ರಸ್ತುತ ಈ ಪಾದವ ಅಧಿಕರಣಗಳಲ್ಲಿನ ಪೂರ್ವಪಕ್ಷಯುಕ್ತಿಗಳನ್ನೂ, ಸಿದ್ಧಾಂತ ಯುಕ್ತಿಗಳನ್ನೂ ಸಂಗ್ರಹವಾಗಿ ಹೇಳುತ್ತಾರೆ –

ಪೂರ್ವಪಕ್ಷ ಹಾಗೂ ಸಿದ್ಧಾಂತ ಯುಕ್ತಿಗಳ ಸಂಗ್ರಹ

ಪೃಥಗ್ದೃಷ್ಟಿರಶಕ್ಯತ್ವಮನಿರ್ದೇತಿಃ ಸಮುಚ್ಚಯಃ ।
ವಿಶೇಷದರ್ಶನಂ ಕಾರ್ಯಲೋಪೋ ನಾನೋಕ್ತಿರಾಶುತಾ ॥ ೫೭ ॥

ವಿಭ್ರಮೋऽಪಾಕೃತಿರ್ಲಿಂಗಮನವಸ್ಥಾ ವಿಶೇಷಿತಾ ।
ಅಪ್ರಯೋಜನತಾ ಚಾತಿಪ್ರಸಂಗೋ ದೂರಸಂಶ್ರಯಃ ॥ ೫೮ ॥

ವಿಶಿಷ್ಟಕಾರಣಂ ಚೇಷ್ಟಾ ದೃಷ್ಟವೈರೂಪ್ಯಮುನ್ನತಿಃ ।
ಅನುಕ್ತಿರಪ್ರಯತ್ನತ್ವಂ ದೃಢಬಂಧಪರಾಭವೌ ॥ ೫೯ ॥

ಪುಂಸಾಮ್ಯಂ ಪ್ರಾಪ್ತಸಂತ್ಯಾಗಃ ಕಾರಣಾನಿರ್ಣಯೋ ಭ್ರಮಃ ।
ವಿಶೇಷದರ್ಶಿತಾಲಾಪೌ ಗುಣಸಾಮ್ಯಂ ಪೃಥಗ್ದೃಶಿಃ ॥ ೬೦ ॥

ಅಗಮ್ಯವರ್ತ್ಮ ಸಂಧಾನಮಿಷ್ಟಂ ಫಲಮಕಲ್ಪನಾ ।
ಶುದ್ಧವೈರೂಪ್ಯಮಂಗತ್ವಮವಿಶೇಷದೃಶಿಃ ಕ್ರಿಯಾ ॥ ೬೧ ॥

ಯುಕ್ತಯಃ ಪೂರ್ವಪಕ್ಷಸ್ಥಾಃ ಸುಜ್ಞೇಯತ್ವಂ ವಿಧಿಕ್ರಿಯಾ ।
ಮಾಹಾತ್ಮ್ಯಮಲ್ಪಶಕ್ತಿತ್ವಂ ಯಥಾಯೋಗ್ಯಫಲಂ ಭವಃ ॥ ೬೨ ॥

ಫಲಸಾಮ್ಯಂ ವಿಶೇಷಶ್ಚ ಗುಣಾಧಿಕ್ಯಂ ಪ್ರಧಾನತಾ ।
ಯಥಾಶಕ್ತಿ ಕ್ರಿಯಾ ಸಂಧಿಃ ಪ್ರಮಾಣಬಲಮಾನತಿಃ ॥ ೬೩ ॥

ಕಾರಣಂ ಕಾರ್ಯವೈಶೇಷ್ಯಂ ಸ್ವಭಾವೋ ವಸ್ತುದೂಷಣಮ್ ।
ಪ್ರತಿಕ್ರಿಯಾವಿರೋಧಶ್ಚ ಪ್ರತಿಸಂಧಿರನೂನತಾ ॥ ೬೪ ॥

ಸಂಸ್ಕಾರಪಾಟವಂ ಸ್ವೇಚ್ಛಾನಿಯತಿರ್ವಸ್ತುವೈಭವಮ್ ।
ವಿಶೇಷೋಕ್ತಿರಮಾನತ್ವಂ ಪ್ರಾಧಾನ್ಯಂ ಪ್ರೀತಿರಾಗಮಃ ॥ ೬೫ ॥

ಸುಸ್ಥಿರತ್ವಂ ಕೃತಪ್ರಾಪ್ತಿರನಾದಿಗುಣವಿಸ್ತರಃ ।

ಸಾಧನೋತ್ತಮತಾ ನಾನಾದೃಷ್ಟಿಶಿಷ್ಟಿರನೂನತಾ ।। ೬೬ ।।

ಅವಿಘ್ನತ್ವಾವಿರೋಧೌ ಚ ಗುಣವೈಶೇಷ್ಯಮಾಗಮಃ ।

ಸಿದ್ಧಾಂತನಿರ್ಣಯಾ ಹ್ಯೇತಾ ಯುಕ್ತಯೋಽವ್ಯಾಹೃತಾಃ ಸದಾ ।। ೬೭ ।।

'ಪೃಥಗ್ದೃಷ್ಟಿಃ' ಯಿಂದ 'ಕ್ರಿಯಾ' ವರೆಗೆ ಪೂರ್ವಪಕ್ಷಕ್ಕೆ ಸಂಬಂಧಿಸಿದ ಯುಕ್ತಿಗಳು, 'ಸುಜ್ಞೇಯತ್ವಂ' ಯಿಂದ 'ಆಗಮಃ' ವರೆಗೆ ಸಿದ್ಧಾಂತಕ್ಕೆ ಸಂಬಂಧಿಸಿದ ಯುಕ್ತಿಗಳು ಎಂದು ತಿಳಿಯಬೇಕು.

ಅಧಿಕರಣ	ಪೂರ್ವಪಕ್ಷಯುಕ್ತಿ	ಸಿದ್ಧಾಂತಯುಕ್ತಿ
೧. ಸರ್ವವೇದಾಧಿಕರಣ	ಪೃಥಗ್ದೃಷ್ಟಿಃ	ಸುಜ್ಞೇಯತ್ವಂ
೨. ಉಪಸಂಹಾರಾಧಿಕರಣ	ಅಶಕ್ಯತ್ವಂ	ವಿಧಿಕ್ರಿಯಾ
೩. ಪ್ರಾಪ್ತ್ಯಧಿಕರಣ	ಅನಿರ್ಣೀತಿಃ	ಮಾಹಾತ್ಮ್ಯಮ್
೪. ಸರ್ವಾಭೇದಾಧಿಕರಣ	ಅನಿರ್ಣೀತಿಃ	ಮಾಹಾತ್ಮ್ಯಮ್
೫. ಆನಂದಾಧಿಕರಣ	ಸಮುಚ್ಚೆಯಃ	ಅಲ್ಪಶಕ್ತಿತ್ವಂ
೬. ಪ್ರಿಯಶಿರಸ್ತ್ವಾದ್ಯಧಿಕರಣ	ವಿಶೇಷದರ್ಶನಂ	ಯಥಾಯೋಗ್ಯಫಲಂ
೭. ಇತರಾಧಿಕರಣ	ಕಾರ್ಯಲೋಪಃ	ಭವಃ
೮. ಆಧ್ಯಾನಾಧಿಕರಣ	ನಾನೋಕ್ತಿಃ	ಫಲಸಾಮ್ಯಂ
೯. ಆತ್ಮಗೃಹೀತ್ಯಧಿಕರಣ	ಅಶುತಾ	ವಿಶೇಷಃ
೧೦. ಅನ್ವಯಾಧಿಕರಣ	ವಿಭ್ರಮಃ	ಗುಣಾಧಿಕ್ಯಂ
೧೧. ಕಾರ್ಯಾಧಿಕರಣ	ಅಪಾಕೃತಿಃ	ಪ್ರಧಾನತಾ
೧೨. ಸಮಾನಾಧಿಕರಣ	ಲಿಂಗಂ	ಯಥಾಶಕ್ತಿಕ್ರಿಯಾ
೧೩. ನವಾ೨ವಿಶೇಷಾಧಿಕರಣ	ಅನವಸ್ಥಾ	ಸಂಧಿಃ
೧೪. ಸಂಭೃತ್ಯಧಿಕರಣ	ಅವಿಶೇಷಿತಾ	ಪ್ರಮಾಣಬಲಮ್
೧೫. ಪುರುಷವಿದ್ಯಾಧಿಕರಣ	ಅಪ್ರಯೋಜನತಾ	ಆನತಿಃ
೧೬. ವೇಧಾದ್ಯಧಿಕರಣ	ಅಪ್ರಯೋಜನತಾ	ಆನತಿಃ
೧೭. ಹಾನ್ಯಧಿಕರಣ	ಅತಿಪ್ರಸಂಗಃ	ಕಾರಣಮ್
೧೮. ಛಂದಾಧಿಕರಣ	ಅದೂರಸಂಶ್ರಯಃ	ಕಾರ್ಯವೈಶೇಷ್ಯಂ

೧೯. ಅನಿಯಮಾಧಿಕರಣ	ವಿಶಿಷ್ಟಕಾರಣಂ	ಸ್ವಭಾವಃ
೨೦. ಯಾವದಧಿಕರಣ	ಚೇಷ್ಟಾ	ವಸ್ತುದೂಷಣಮ್
೨೧. ಇಯದಾಮನನಾಧಿಕರಣ	ದೃಷ್ಟವೈರೂಪ್ಯಂ	ಪ್ರತಿಕ್ರಿಯಾವಿರೋಧಃ
೨೨. ವ್ಯತಿಹಾರಾಧಿಕರಣ	ಉನ್ನತಿಃ	ಪ್ರತಿಸಂಧಿಃ
೨೩. ಸತ್ಯಾಧಿಕರಣ	ಅನುಕ್ತಿಃ	ಅನೂನತಾ
೨೪. ಕಾಮಾಧಿಕರಣ	ಅಪ್ರಯತ್ನತ್ವಂ	ಸಂಸ್ಕಾರಪಾಟವಂ
೨೫. ತನ್ನಿರ್ಧಾರಣಾಧಿಕರಣ	ದೃಢಬಂಧಃ	ಸ್ವೇಚ್ಛಾನಿಯತಿಃ
೨೬. ಪ್ರದಾನಾಧಿಕರಣ	ಪರಾಭವಃ	ವಸ್ತುವೈಭವಂ
೨೭. ಲಿಂಗಭೂಯಸ್ತ್ವಾಧಿಕರಣ	ಪುಂಸಾಮ್ಯಂ	ವಿಶೇಷೋಕ್ತಿಃ
೨೮. ಪೂರ್ವವಿಕಲ್ಪಾಧಿಕರಣ	ಪ್ರಾಪ್ತಸಂತ್ಯಾಗಃ	ಅಮಾನತ್ವಂ
೨೯. ವಿದ್ಯಾಧಿಕರಣ	ಕಾರಣಾನಿರ್ಣಯಃ	ಪ್ರಾಧಾನ್ಯಂ
೩೦. ಶ್ರುತ್ಯಧಿಕರಣ	ಭ್ರಮಃ	ಪ್ರೀತಿಃ
೩೧. ಅನುಬಂಧಾಧಿಕರಣ	ವಿಶೇಷದರ್ಶಿತಾ	ಆಗಮಃ
೩೨. ಪ್ರಜ್ಞಾಂತರಾಧಿಕರಣ	ಆಲಾಪಃ	ಸುಸ್ಥಿರತ್ವಂ
೩೩. ನ ಸಾಮಾನ್ಯಾಧಿಕರಣ	ಗುಣಸಾಮ್ಯಂ	ಕೃತಪ್ರಾಪ್ತಿಃ
೩೪. ಪರೇಣಾಧಿಕರಣ	ಪೃಥಗ್ಧೃತಿಃ	ಅನಾದಿಗುಣವಿಸ್ತರಃ
೩೫. ಏಕಾಧಿಕರಣ	ಅಗಮ್ಯವರ್ತ್ಮ	ಸಾಧನೋತ್ತಮತಾ
೩೬. ಅಂಗಾವಬದ್ಧಾಧಿಕರಣ	ಸಂಧಾನಂ	ನಾನಾದೃಷ್ಟಿಃ
೩೭. ಭೂಮ್ನ ಕ್ರತ್ವಧಿಕರಣ	ಇಷ್ಟಂ ಫಲಂ	ಶಿಷ್ಟಿಃ
೩೮. ನಾನಾಶಬ್ದಾಧಿಕರಣ	ಅಕಲ್ಪನಾ	ಅನೂನತಾ
೩೯. ವಿಕಲ್ಪಾಧಿಕರಣ	ಶುದ್ಧವೈರೂಪ್ಯಂ	ಅವಿಘ್ನತ್ವಂ
೪೦. ಕಾಮ್ಯಾಧಿಕರಣ	ಅಂಗತ್ವಂ	ಅವಿರೋಧಃ
೪೧. ಅಂಗಾಧಿಕರಣ	ಅವಿಶೇಷದೃಷ್ಟಿಃ	ಗುಣವೈಶೇಷ್ಯಂ
೪೨. ನ ವಾಧಿಕರಣ	ಕ್ರಿಯಾ	ಆಗಮಃ

ಪೂರ್ವಪಕ್ಷ ಹಾಗೂ ಸಿದ್ಧಾಂತಯುಕ್ತಿಗಳ ವಿವರಣೆ

೧. ಸರ್ವವೇದಾಧಿಕರಣ: ಓಂ ಸರ್ವವೇದಾಂತ ಪ್ರತ್ಯಯಂ ಚೋದನಾದ್ಯ ವಿಶೇಷಾತ್ ಓಂ

ಪೃಥಗ್ದೃಷ್ಟಿಯು ಪೂರ್ವಪಕ್ಷಯುಕ್ತಿ. ವೇದಗಳಲ್ಲಿ ನಾನಾ ಶಾಖೆಗಳಿವೆ. ಅದರಲ್ಲಿ ಒಂದೊಂದು ಶಾಖೆಯಲ್ಲಿ ಪ್ರತಿಪಾದಿತವಾದ ವಿಷಯವೂ ಬೇರೆ ಬೇರೆ. ಆದಕಾರಣ ಆಯಾ ಶಾಖೆಗಳವರು ಮಾತ್ರ ತಮ್ಮ ತಮ್ಮ ಶಾಖೆಗಳನ್ನು ಅಧ್ಯಯನ ಮಾಡಬೇಕು. ಇಲ್ಲದಿದ್ದರೆ ಶಾಖಾಭೇದವು ಅಯುಕ್ತವೆಂದು ಪೂರ್ವಪಕ್ಷ.

ಸುಜ್ಞೇಯತ್ವವು ಸಿದ್ಧಾಂತಯುಕ್ತಿ. 'ನಾನಾ ವೇದೈರಿತಿಹಾಸೈಃ ಪುರಾಣೈಃ ಸುಜ್ಞೇಯ ಏಕೋ ಭಗವಾನ್ ಯುಕ್ತಿಭಿಶ್ಚ' ಎಂದು ಶ್ರುತಿಯಿರುವುದರಿಂದ ಎಲ್ಲ ವೇದಶಾಖೆಗಳನ್ನೂ ಅಧ್ಯಯನ ಮಾಡಬೇಕು. ಅಶಕ್ತರ ದೃಷ್ಟಿಯಿಂದ ಶಾಖಾಭೇದ ಮಾಡಲಾಗಿದೆ. ಯಥಾಶಕ್ತಿ ಸಮಗ್ರವೇದವನ್ನು ಅಧ್ಯಯನ ಮಾಡಬೇಕು ಎಂದು ಸಿದ್ಧಾಂತ.

೨. ಉಪಸಂಹಾರಾಧಿಕರಣ: ಓಂ ಉಪಸಂಹಾರೋಽರ್ಥಭೇದಾತ್ ವಿಧಿಶೇಷವತ್ ಸಮಾನೇ ಚ ಓಂ

ಅಶಕ್ಯತ್ವವು ಪೂರ್ವಪಕ್ಷಯುಕ್ತಿ. ಸಕಲ ವೇದೋಕ್ತ ಗುಣಗಳನ್ನು ಬುದ್ಧಿಯಲ್ಲಿ ವಿಷಯೀಕರಿಸಿ ಧ್ಯಾನಮಾಡುವುದು ಅಶಕ್ಯ. ಕ್ರಮವಾಗಿ ಒಂದೊಂದೇ ಗುಣವನ್ನು ಧ್ಯಾನ ಮಾಡುವುದೂ ವಿಹಿತವಾಗಿಲ್ಲ. ಆದಕಾರಣ ಎಲ್ಲ ವೇದಗಳಲ್ಲಿ ಉಕ್ತವಾದ ಗುಣಗಳನ್ನು ತಿಳಿಯುವುದು ಅನವಶ್ಯಕವೆಂದು ಪೂರ್ವಪಕ್ಷ.

ವಿಧಿಕ್ರಿಯಾ ಎನ್ನುವುದು ಸಿದ್ಧಾಂತಯುಕ್ತಿ. 'ಸರ್ವೇ ಗುಣಾಃ ಸರ್ವದೈವ ಹ್ಯುಪಾಸ್ಯಾಃ ತೇನೈವ ವಿದ್ವಾನ್ ವಿಧಿಕೃನ್ನಾನ್ಯಥಾ ಸ್ಯಾತ್' ಎಲ್ಲ ಗುಣಗಳನ್ನು ಯಾವಾಗಲೂ ಧ್ಯಾನ ಮಾಡಬೇಕು ಎಂದು ಶ್ರುತಿಯು ಹೇಳುವುದರಿಂದ, ಸಕಲ ಗುಣಗಳನ್ನು ಉಪಸಂಹಾರಮಾಡಿಯೇ ಧ್ಯಾನಮಾಡಬೇಕು. ಇಲ್ಲದಿದ್ದರೆ ವಿಧಿ ಲೋಪವಾಗುತ್ತದೆ. ಹಾಗೆ ಮಾಡುವುದು ಅಶಕ್ಯವಾದ್ದರಿಂದ ಉಪಸಂಹಾರ ಮಾಡದೆಯೇ ಯಥಾಶಕ್ತಿ ಎಲ್ಲ ಗಣಗಳನ್ನೂ ಧ್ಯಾನಮಾಡಬೇಕು ಎಂದು ಸಿದ್ಧಾಂತ.

೩. ಪ್ರಾಪ್ತ್ಯಧಿಕರಣ: ಓಂ ಪ್ರಾಪ್ತೇಶ್ಚ ಸಮಂಜಸಮ್ ಓಂ

ಅನಿರ್ಣೀತಿಯು ಪೂರ್ವಪಕ್ಷಯುಕ್ತಿ. ಉಪಸಂಹಾರ ಮಾಡಿಕೊಂಡು ಧ್ಯಾನ ಅಥವಾ ಮಾಡದೆಯೇ ಧ್ಯಾನ ಎನ್ನುವುದು ಪರಸ್ಪರ ವಿರುದ್ಧವಾಗಿದೆ. ಯಾರು ಉಪಸಂಹಾರ ಸಹಿತ ಧ್ಯಾನ ಮಾಡಬೇಕು, ಯಾರಿಗೆ ಉಪಸಂಹಾರ ಬೇಕಿಲ್ಲ ಎನ್ನುವುದು ನಿರ್ಣಯವಾಗದಿರುವುದರಿಂದ ಎರಡು ಪ್ರಕಾರದ ಧ್ಯಾನವೂ ಅಯುಕ್ತ ಎಂದು ಪೂರ್ವಪಕ್ಷ.

ಮಾಹಾತ್ಮ್ಯವು ಸಿದ್ಧಾಂತಯುಕ್ತಿ. ಮಹಾತ್ಮೆ ಎಂದರೆ ಯೋಗ್ಯತೆ ಎಂದರ್ಥ. ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಗುಣಗಳು ಏಕಕಾಲದಲ್ಲಿ ತೋರುತ್ತವೋ ಅವರವರು ಅಷ್ಟು ಗುಣಗಳನ್ನು ತಮ್ಮ ಯೋಗ್ಯತಾನುಸಾರ ಉಪಸಂಹಾರ ಮಾಡಿ ಧ್ಯಾನಮಾಡಬೇಕು. ಬ್ರಹ್ಮದೇವರಿಗೆ ಸರ್ವವೇದೋಕ್ತ ಗುಣಗಳೂ ಭಾಸವಾಗುತ್ತವೆ. ಬೇರೆಯವರಿಗೆ ಅವರ ಯೋಗ್ಯತಾನುಸಾರ ಅಷ್ಟಷ್ಟು ಗುಣಗಳು ಭಾಸವಾಗುತ್ತವೆ. ಆದಕಾರಣ ಎರಡು ವಿಧದ ಉಪಾಸನೆಯೂ ಯುಕ್ತವೇ ಆಗಿದೆ ಎಂದು ಸಿದ್ಧಾಂತ.

೪. ಸರ್ವಾಭೇದಾಧಿಕರಣ: ಓಂ ಸರ್ವಾಭೇದಾದನ್ಯತ್ರೇಮೇ ಓಂ

ಅನಿರ್ಣೀತಿಯು ಪೂರ್ವಪಕ್ಷಯುಕ್ತಿ. 'ದೃಷ್ಟ್ಯೈವ ತಂ ಮುಚ್ಯತೇ' ಎಂದು ಸಾಮಾನ್ಯ ದರ್ಶನದಿಂದ ಮುಕ್ತಿಯನ್ನು ಹೇಳಲಾಗಿದೆ. ಸರ್ವಗುಣೋಪಸಂಹಾರ ಮಾಡುವರಿಗೆ ಅಧಿಕ ಫಲವೂ, ಕಡಿಮೆ ಉಪಸಂಹಾರ ಮಾಡುವರಿಗೆ ಕಡಿಮೆ ಫಲವೂ ಎಂಬ ನಿರ್ಣಯವಿಲ್ಲ. ಆದಕಾರಣ ಸರ್ವಗುಣೋಪಸಂಹಾರ ಅನವಶ್ಯಕ ಎಂದು ಪೂರ್ವಪಕ್ಷ.

ಮಾಹಾತ್ಮ್ಯವು ಸಿದ್ಧಾಂತಯುಕ್ತಿ. ಸರ್ವಗುಣೋಪಸಂಹಾರ ಸಹಿತ ಉಪಾಸನೆಗೆ ಇರುವ ಮಹಿಮೆಯಿಂದಲೇ ಅಂಥಹ ಸಾಧಕರಿಗೆ ಅಧಿಕ ಫಲವೆಂದು ನಿರ್ಣೀತ ವಾಗುತ್ತದೆ. ಇಲ್ಲದಿದ್ದರೆ ಸರ್ವಗುಣೋಪಸಂಹಾರ ವಿಧಾನವೇ ನಿರರ್ಥಕವಾಗುತ್ತದೆ ಎಂದು ಸಿದ್ಧಾಂತ.

೫. ಆನಂದಾಧಿಕರಣ: ಓಂ ಆನಂದಾದಯಃ ಪ್ರಧಾನಸ್ಯ ಓಂ

ಸಮುಚ್ಚಯವು ಪೂರ್ವಪಕ್ಷಯುಕ್ತಿ. ಯಾರು ಯಾರು ಯಾವ ಯಾವ ಗುಣಗಳನ್ನು ಉಪಾಸನೆ ಮಾಡಬೇಕೆನ್ನುವುದಕ್ಕೆ ನಿರ್ಣಾಯಕ ಪ್ರಮಾಣವಿಲ್ಲ. ಸ್ವೇಚ್ಛೆಯಿಂದ ಉಪಸಾನೆಯನ್ನು ಹೇಳಿದರೆ, ಗುಣಸಮುಚ್ಚಯ ಮಾಡುವಾಗ ತನ್ನ ಉಪಾಸನೆಗೆ ಯೋಗ್ಯವಾದ ಹಾಗೂ ಅಯೋಗ್ಯವಾದ ಗುಣಗಳ ಸುಮಚ್ಚಯವೂ ಆಗುವುದು. ಆದ್ದರಿಂದ ಧ್ಯಾನವು ಅಯುಕ್ತವೆಂದು ಪೂರ್ವಪಕ್ಷ.

ಅಲ್ಪಶಕ್ತಿತ್ವವು ಸಿದ್ಧಾಂತಯುಕ್ತಿ. ಮನುಷ್ಯರು ಅಲ್ಪಶಕ್ತಿವುಳ್ಳವರಾದ್ದರಿಂದ ಸತ್ ಚಿತ್ ಆನಂದ ಆತ್ಮ ಎಂಬುದಾಗಿ ನಾಲ್ಕು ಗುಣಗಳಿಂದ ಮಾತ್ರ ಪರಬ್ರಹ್ಮನ ಉಪಾಸನೆ ಮಾಡಬೇಕು. ಬ್ರಹ್ಮಾದಿಗಳಿಗೆ ಇನ್ನೂ ಅಧಿಕವಾದ ಗುಣಗಳ ಉಪಾಸನೆ ಯಲ್ಲಿ ಸಾಮರ್ಥ್ಯವಿದ್ದರೂ, ಇತರರಿಗೆ ಅಲ್ಪಶಕ್ತಿತ್ವದ ಪ್ರಯುಕ್ತ ನಾಲ್ಕಕ್ಕಿಂತ ಹೆಚ್ಚಿನ ಗುಣಗಳ ಉಪಾಸನೆಯಲ್ಲಿ ಸಾಮರ್ಥ್ಯವಿಲ್ಲ. ಹೀಗೆ ಸರ್ವೋಪಾಸ್ಯಗಳಾದ ಗುಣಗಳ ನಿರ್ಣಯವಾಗುವುದರಿಂದ ಧ್ಯಾನವು ಯುಕ್ತವೆಂದು ಸಿದ್ಧಾಂತ.

೬. ಪ್ರಿಯಶಿರಸ್ತ್ವಾದ್ಯಧಿಕರಣ: ಓಂ ಪ್ರಿಯಶಿರಸ್ತ್ವಾದ್ಯಪ್ರಾಪ್ತಿರುಪಚಯಾಪಚಯೌ ಹಿ ಭೇದೇ ಓಂ

ವಿಶೇಷದರ್ಶನವು ಪೂರ್ವಪಕ್ಷಯುಕ್ತಿ. ಭಗವಂತನ ಪ್ರಿಯಶಿರಸ್ತ್ವಾದಿಗಳು ಆನಂದಾದಿ ಗುಣಗಳ ವಿಶೇಷವೆಂದೇ ಕಂಡಿರುವುದರಿಂದ ಇವುಗಳನ್ನು ಎಲ್ಲರೂ ಉಪಾಸನೆ ಮಾಡಬೇಕು ಎಂದು ಪೂರ್ವಪಕ್ಷ.

ಯಥಾಯೋಗ್ಯಫಲ ಎನ್ನುವುದು ಸಿದ್ಧಾಂತಯುಕ್ತಿ. 'ಯಥಾಯೋಗ್ಯಾನ್ ಗುಣ ಪೂಗಾನುಪಾಸ್ಯ ಫಲಂ ಭವೇನ್ಮುಕ್ತಿಗಂ ನಾನ್ಯಥಾ ಸ್ಯಾತ್' ಎನ್ನುವ ಶ್ರುತಿಯಿಂದ ಯಥಾಯೋಗ್ಯವಾದ ಗುಣಗಳ ಉಪಾಸನೆಯಿಂದಲೇ ಫಲವೆಂದು ನಿರ್ಣಯವು. ಆದ್ದರಿಂದ ಮನುಷ್ಯರು ನಾಲ್ಕು ಗುಣಗಳಿಂದಲೇ ಯಥಾಯೋಗ್ಯವಾಗಿ ಉಪಾಸನೆ ಮಾಡಬೇಕು. ಇಲ್ಲದಿದ್ದರೆ ಫಲತಾರತಮ್ಯ ನಿರ್ವಾಹವೂ ಅಶಕ್ಯವೆಂದು ಸಿದ್ಧಾಂತ.

೭. ಇತರಾಧಿಕರಣ: ಓಂ ಇತರೇ ತ್ವರ್ಥಸಾಮಾನ್ಯಾತ್ ಓಂ

ಕಾರ್ಯಲೋಪವು ಪೂರ್ವಪಕ್ಷಯುಕ್ತಿ. ಮನುಷ್ಯರಿಗೆ ನಾಲ್ಕು ಗುಣಗಳ ಉಪಾಸನೆಯಿಂದಲೇ ಫಲವು ಸಿದ್ಧಿಸುವಾಗ ದೇವತೆಗಳು ಬಹುಗುಣಗಳನ್ನು ಏಕೆ ಉಪಾಸನೆ ಮಾಡಬೇಕು? ಹೆಚ್ಚು ಗುಣಗಳ ಉಪಾಸನೆಯಿಂದ ಹೆಚ್ಚಿನ ಫಲವಿಲ್ಲದ ಕಾರಣ ಕಾರ್ಯಲೋಪ ಪ್ರಸಂಗ ಬರುವುದು. ಆದ್ದರಿಂದ ಬ್ರಹ್ಮನಿಂದ ಇತರರಾದ ದೇವತೆಗಳು ನಾಲ್ಕು ಗುಣಗಳನ್ನು ಮಾತ್ರ ಉಪಾಸನೆ ಮಾಡಬೇಕು ಎಂದು ಪೂರ್ವಪಕ್ಷ.

ಭವಃ ಎನ್ನುವುದು ಸಿದ್ಧಾಂತಯುಕ್ತಿ. ಅಂದರೆ ದೇವತೆಗಳಿಗೆ ಇಂತಿಷ್ಟು ಗುಣಗಳ ಉಪಾಸನೆಯೆಂಬ ನಿಯಮ ಸದ್ಭಾವ. ದೇವತೆಗಳಿಗೆ ವಿಮುಕ್ತಿಯಲ್ಲಿ ಉಂಟಾಗುವ ಉತ್ಕರ್ಷವನ್ನು ತಿಳಿದು ಅದಕ್ಕನುಗುಣವಾಗಿ ಬ್ರಹ್ಮದೇವರು ಅವರಿಗೆ ಭಗವಂತನ ಗುಣಗಳನ್ನು ಉಪದೇಶಿಸುತ್ತಾರೆ. ದೇವತೆಗಳು ಅವುಗಳನ್ನು ಉಪಾಸನೆ ಮಾಡಿ ಆಯಾ ಫಲವನ್ನು ಮುಕ್ತಿಯಲ್ಲಿ ಹೊಂದುತ್ತಾರೆ ಎಂದು ಪ್ರಮಾಣವಿದೆ. ಆದ್ದರಿಂದ ಕಾರ್ಯಲೋಪ ಪ್ರಸಂಗವಿಲ್ಲ ಎಂದು ಸಿದ್ಧಾಂತ.

೮. ಆಧ್ಯಾನಾಧಿಕರಣ: ಓಂ ಆಧ್ಯಾನಾಯ ಪ್ರಯೋಜನಾಭಾವಾತ್ ಓಂ

ನಾನೋಕ್ತಿಯು ಪೂರ್ವಪಕ್ಷಯುಕ್ತಿ. ಉಪಾಸನೆಗೆಂದೇ ಗುಣಗಳನ್ನು ಹೇಳುವ ಉದ್ದೇಶವಿದ್ದರೆ ವೇದವು ಎಲ್ಲ ಗುಣಗಳನ್ನು ಒಂದೇ ಕಡೆಯಲ್ಲಿ ಹೇಳಬೇಕಿತ್ತು. ಆದರೆ ಒಂದೊಂದು ಶಾಖೆಯಲ್ಲಿ ಒಂದೊಂದು ಗುಣವನ್ನು ಹೇಳಿರುವುದರಿಂದ ವೇದಕ್ಕೆ ಉಪಾಸನೆಗಾಗಿ ಗುಣಗಳನ್ನು ಹೇಳುವ ಉದ್ದೇಶವಿಲ್ಲ ಎಂದು ಪೂರ್ವಪಕ್ಷ.

ಫಲಸಾಮ್ಯವು ಸಿದ್ಧಾಂತಯುಕ್ತಿ. ಬೇರ ಬೇರೆ ಕಡೆಗಳಲ್ಲಿ ಹೇಳಿದ ಗುಣಗಳನ್ನು ಪ್ರಯತ್ನ ಪಟ್ಟು ತಿಳಿದು ಉಪಾಸನೆ ಮಾಡಿದರೆ ಪ್ರಯತ್ನಕ್ಕೆ ತಕ್ಕಂತೆ ಮುಕ್ತಿಯಲ್ಲಿ ಫಲವಿಶೇಷವಿದೆ. ಆದಕಾರಣ ಅಂಥಹ ಫಲವಿಶೇಷಕ್ಕಾಗಿ ವೇದವು ನಾನಾಶಾಖೆ ಗಳಲ್ಲಿ ಗುಣಗಳನ್ನು ಹೇಳಿದೆ ಎಂದು ಸಿದ್ಧಾಂತ.

೯. ಆತ್ಮಗೃಹೀತ್ಯಧಿಕರಣ: ಓಂ ಆತ್ಮಗೃಹೀತಿರಿತರವತ್ತದುತ್ತರಾತ್ ಓಂ

ಆಶುತಾ (ಶೀಘ್ರತ್ವ) ಎನ್ನುವುದು ಪೂರ್ವಪಕ್ಷಯುಕ್ತಿ. ಆತ್ಮೇತ್ಯೇವೋಪಾಸೀತ ಇತ್ಯಾದಿ ಶ್ರುತಿಯು ಆತ್ಮತ್ವವನ್ನು ಮಾತ್ರ ಉಪಾಸನೆ ಮಾಡುವುದರಿಂದ ಶೀಘ್ರದಲ್ಲಿ ಅಪರೋಕ್ಷವು ಎಂದು ಹೇಳಿರುವುದರಿಂದ, ಆತ್ಮತ್ವ ಗುಣವೊಂದನ್ನೇ ಉಪಾಸನೆ ಮಾಡಬೇಕು ಎಂದು ಪೂರ್ವಪಕ್ಷ.

ವಿಶೇಷವು ಸಿದ್ಧಾಂತಯುಕ್ತಿ. ಅನಂದತ್ವ ಚಿತ್ತ್ವ ಸತ್ತ್ವಗಳೂ ಕೂಡ ಆತ್ಮ ಶಬ್ದದ ವಿಶೇಷಾರ್ಥವಾಗಿರುವ ಪ್ರಯುಕ್ತ, ಆತ್ಮ ಎಂದೇ ಉಪಾಸನೆ ಮಾಡಬೇಕು ಎಂದರೆ ಆತ್ಮಶಬ್ದದಿಂದ ಉಪಲಕ್ಷಿತವಾದ ಸತ್ ಚಿತ್ ಆನಂದ ಆತ್ಮ ಹೀಗೆ ಎಲ್ಲ ನಾಲ್ಕು ಗುಣಗಳನ್ನೂ ಉಪಾಸನೆ ಮಾಡಬೇಕೆಂದೇ ಅರ್ಥ ಮಾಡಬೇಕು ಎಂದು ಸಿದ್ಧಾಂತ.

೧೦. ಅನ್ವಯಾಧಿಕರಣ: ಓಂ ಅನ್ವಯಾದಿತಿ ಚೇತ್ ಸ್ಯಾದವಧಾರಣಾತ್ ಓಂ

ವಿಭ್ರಮಃ ಎನ್ನುವುದು ಪೂರ್ವಪಕ್ಷಯುಕ್ತಿ. ವ್ಯಾಪ್ತತ್ವ ಮುಂತಾದ ಎಲ್ಲ ಗುಣಗಳಿಗೆ ಆತ್ಮ ಶಬ್ದವು ವಾಚಕವಾದ್ದರಿಂದ, ನಾಲ್ಕು ಗುಣಗಳನ್ನೇ ಉಪಾಸನೆ ಮಾಡಬೇಕೆಂದು ನಿರ್ಣೀತವಾಗುವುದಿಲ್ಲ. ಎಲ್ಲರೂ ಎಲ್ಲ ಗುಣಗಳನ್ನೂ ಉಪಾಸನೆ ಮಾಡಬೇಕೆಂದು ಅರ್ಥವಾಗುವುದರಿಂದ ಸರಿಯಾದ ನಿರ್ಣಯವಾಗುವುದಿಲ್ಲ ಎಂದು ಪೂರ್ವಪಕ್ಷ.

ಗುಣಾಧಿಕ್ಯ ಎನ್ನುವುದು ಸಿದ್ಧಾಂತಯುಕ್ತಿ. ಆತ್ಮಶಬ್ದವು ಸರ್ವಗುಣವಾಚಕವೇ ಆಗಿದ್ದರೂ, ಅಧಿಕ ಗುಣವುಳ್ಳವರಿಗೆ ಮಾತ್ರ ಭಗವಂತನ ಅಧಿಕ ಗುಣಗಳನ್ನು ಬೋಧಿಸುತ್ತದೆಯೇ ಹೊರತು ಎಲ್ಲರಿಗೂ ಅಲ್ಲ. ಎಲ್ಲರಿಗೂ ಅವರವರ ಯೋಗ್ಯತೆಗೆ ಅನುಗುಣವಾಗಿ ಗುಣಗಳನ್ನು ಬೋಧಿಸುತ್ತದೆ. ಆದ್ದರಿಂದ ವಿಭ್ರಮ ಅಥವಾ ಗೊಂದಲಕ್ಕೆ ಅವಕಾಶವಿಲ್ಲವೆಂದು ಸಿದ್ಧಾಂತ.

೧೧. ಕಾರ್ಯಾಧಿಕರಣ: ಓಂ ಕಾರ್ಯಾಖ್ಯಾನಾದಪೂರ್ವಂ ಓಂ

ಅಪಾಕೃತಿಯು ಪೂರ್ವಪಕ್ಷಯುಕ್ತಿ. ಭಗವಂತನ ಗುಣಗಳು ಅಲೌಕಿಕವಾದವು. ಧ್ಯಾನಕ್ಕೆ ಮಂಚೆ ಅವುಗಳ ಅನುಭೂತಿಯು ಇರುವುದಿಲ್ಲ. ಧ್ಯಾನ ಸಮಯದಲ್ಲಿ ಅವುಗಳ ಸ್ಮರಣೆ ಸಾಧ್ಯವಿಲ್ಲ. ಆದಕಾರಣ ಲೌಕಿಕ ಗುಣಗಳಿಂದಲೇ ಭಗವಂತನ ಉಪಾಸನೆ ಮಾಡಬೇಕು. ಭಗವಂತನಲ್ಲಿ ಲೌಕಿಕಗುಣಗಳ ಉಪಾಸನೆ ಕೂಡುವುದಿಲ್ಲ ಎಂದರೆ, ಆಗ ಧ್ಯಾನವೇ ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಪ್ರಧಾನತಾ ಎನ್ನುವುದು ಸಿದ್ಧಾಂತಯುಕ್ತಿ. ಲೌಕಿಕ ಗುಣಗಳ ದೆಶೆಯಿಂದ ಅಲೌಕಿಕ ಗುಣಗಳು ಅತ್ಯುತ್ತಮವಾದ್ದರಿಂದ ಅತ್ಯಂತ ಪ್ರಧಾನಗಳಾಗಿವೆ. ಭಗವಂತನ ಗುಣಗಳು ಅತ್ಯುತ್ತಮವೆಂದು ಧ್ಯಾನಿಸಿದರೆ ಮಾತ್ರ ಅತ್ಯುತ್ತಮವಾದ ಮೋಕ್ಷಕ್ಕೆ ಕಾರಣವಾಗುತ್ತವೆ. ಆದಕಾರಣ ಪ್ರಧಾನವಾದ್ದರಿಂದ ಅಲೌಕಿಕ ಗುಣಗಳಿಂದಲೇ ಭಗವಂತನನ್ನು ಉಪಾಸನೆ ಮಾಡಬೇಕು ಎಂದು ಸಿದ್ಧಾಂತ.

೧೨. ಸಮಾನಾಧಿಕರಣ: ಓಂ ಸಮಾನ ಏವಂ ಚಾಭೇದಾತ್ ಓಂ

ಲಿಂಗವು ಪೂರ್ವಪಕ್ಷಯುಕ್ತಿ. ಬ್ರಹ್ಮ ಸರಸ್ವತಿಯರಿಗೆ ವೇದೋಕ್ತ ಸಮಸ್ತ ಗುಣಗಳ ಉಪಸಂಹಾರವಿದೆ. ಆದರಿಂದ ಮುಕ್ತಿಯಲ್ಲಿ ಸ್ಥಾನೈಕ್ಯವೂ ಇದೆ. ಆದರೂ ಆನಂದರೂಪ ಫಲದಲ್ಲಿ ಬ್ರಹ್ಮದೇವರಿಗೆ ಸರಸ್ವತಿಗಿಂತ ಆಧಿಕ್ಯವಿದೆ. ಸಮಾನವಾದ ಗುಣೋಪಸಂಹಾರವಿದ್ದರೂ ಫಲದಲ್ಲಿ ತಾರತಮ್ಯವೆನ್ನುವ ಲಿಂಗದಿಂದ ಇತರರಿಗೂ ಉಪಾಸನೆಗೆ ತಕ್ಕಂತೆ ಮುಕ್ತಿಯಲ್ಲಿ ಫಲವಾಗುವುದಿಲ್ಲ ಎಂದು ಪೂರ್ವಪಕ್ಷ.

ಯಥಾಶಕ್ತಿಕ್ರಿಯಾವು ಸಿದ್ಧಾಂತಯುಕ್ತಿ. ಬ್ರಹ್ಮದೇವರು ಧ್ಯಾನ ಮಾಡುವ ಎಲ್ಲ ಗುಣಗಳನ್ನೂ ಸರಸ್ವತಿಯು ಧ್ಯಾನ ಮಾಡುವುದರಿಂದ ಇಬ್ಬರಿಗೂ ಸ್ಥಾನೈಕ್ಯವಿದೆ ಎಂಬುದು ನಿಜವೇ. ಆದರೆ ಸರಸ್ವತಿಯು ಸಾಮಾನ್ಯವಾಗಿ ಭಗವಂತನ ಕ್ರಿಯೆಗಳನ್ನು ಉಪಾಸನೆ ಮಾಡುವರೇ ಹೊರತು, ಬ್ರಹ್ಮದೇವರಂತೆ ವಿಶೇಷವಾಗಿ ತ್ರಿವಿಕ್ರಮತ್ವ ಮೊದಲಾದುವನ್ನು ಧ್ಯಾನಿಸುವುದಿಲ್ಲ. ಹೀಗೆ ಯಥಾಶಕ್ತಿ ಕ್ರಿಯಾರೂಪ ಸಾಧನೆಯಿಂದ ಅವರಿಬ್ಬರಲ್ಲಿ ಫಲತಾರತಮ್ಯವು ಕೂಡುತ್ತದೆ ಎಂದು ಸಿದ್ಧಾಂತ.

೧೩. ನವಾ೯ವಿಶೇಷಾಧಿಕರಣ: ಓಂ ನ ವಾ೯ವಿಶೇಷಾತ್ ಓಂ

ಅನವಸ್ಥಾ ಎನ್ನುವುದು ಪೂರ್ವಪಕ್ಷಯುಕ್ತಿ. ಆತ್ಮ ಶಬ್ದವು ಅಧಿಕಾರಿಗಳ ಯೋಗ್ಯತೆಗೆ ಅನುಗುಣವಾಗಿ ಇಷ್ಟಿಷ್ಟೇ ಗುಣಗಳಿಗೆ ವಾಚಕವು ಎಂಬ ವ್ಯವಸ್ಥೆಯು ಇಲ್ಲವಾದ್ದರಿಂದ ಆತ್ಮಶಬ್ದೋಕ್ತ ಗುಣಗಳನ್ನು ಉಪಾಸನೆ ಮಾಡುವುದು ಯುಕ್ತವಲ್ಲ ಎಂದು ಪೂರ್ವಪಕ್ಷ.

ಸಂಧಿ ಎನ್ನುವುದು ಸಿದ್ಧಾಂತಯುಕ್ತಿ. ಸಂಧಿ ಎಂದರೆ ಅಭಿಸಂಧಿ ಅಥವಾ ಅಭಿಪ್ರಾಯ ಎಂದರ್ಥ. ಯಾವ ಯಾವ ಅಧಿಕಾರಿಗಳಿಗೆ ಎಷ್ಟೆಷ್ಟು ಗುಣಗಳನ್ನು ಉಪಾಸನೆ ಮಾಡಲು ಯೋಗ್ಯತೆಯಿದೆಯೋ ಆಯಾ ಅಧಿಕಾರಿಗಳನ್ನು ಕುರಿತು ಆತ್ಮ ಶಬ್ದವು ಅಷ್ಟಷ್ಟು ಗುಣಗಳನ್ನು ಮಾತ್ರ ತಿಳಿಸುತ್ತದೆ ಎಂಬ ಅಭಿಪ್ರಾಯವಿರುವ ಪ್ರಯುಕ್ತ ಆತ್ಮಶಬ್ದೋಕ್ತ ಗುಣಗಳನ್ನು ಉಪಸಂಹಾರ ಮಾಡಬೇಕೆನ್ನುವುದು ಯುಕ್ತವೇ ಎಂದು ಸಿದ್ಧಾಂತ.

೧೪. ಸಂಭೃತ್ಯಧಿಕರಣ: ಓಂ ಸಂಭೃತಿ ದ್ಯುವ್ಯಾಪ್ತ್ಯಪಿ ಚಾತಃ ಓಂ

ಅವಿಶೇಷಿತಾ ಎಂಬುದು ಪೂರ್ವಪಕ್ಷಯುಕ್ತಿ. ಮೋಕ್ಷೇಚ್ಛೆಯು ಅವಿಶೇಷವಾಗಿ ಅಂದರೆ ಸಾಮಾನ್ಯವಾಗಿ ಎಲ್ಲರಲ್ಲಿಯೂ ಇರುವುದರಿಂದ ಹಾಗೂ ಎಲ್ಲರಿಗೂ ಸ್ವಾಧಮರ ಸಂಭರಣ ಮತ್ತು ಪ್ರಕಾಶವ್ಯಾಪ್ತಿಯು ಅಪೇಕ್ಷಿತವಾಗಿರುವುದರಿಂದ, ಎಲ್ಲರೂ ಭಗವಂತನ ಈ ಗುಣಗಳನ್ನು ಉಪಾಸನೆ ಮಾಡಬೇಕೆಂದು ಪೂರ್ವಪಕ್ಷ.

ಪ್ರಮಾಣಬಲವು ಸಿದ್ಧಾಂತಯುಕ್ತಿ. 'ಸತ್ಯೋ ಜ್ಞಾನಂ ಪರಮಾನಂದರೂಪಃ ಆತ್ಮೇತ್ಯೇವಂ ನಿತ್ಯದೋಪಾಸನಂ ಸ್ಯಾತ್। ನಾನ್ಯತ್ ಕಿಂಚಿತ್ ಸಮುಪಾಸೀತ ಧೀರಃ

ಸರ್ವೈರ್ಗುಣೈರ್ದೇವಗಣಾ ಉಪಾಸತೇ' 'ಸತ್ಯ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಪ್ರಮಾಣ ಬಲದಿಂದ ಸಂಭೃತಿ ದ್ಯುವ್ಯಾಪ್ತಿಗಳು ಎಲ್ಲರಿಂದ ಉಪಾಸ್ಯವಲ್ಲವೆಂದು ಸಿದ್ಧಾಂತ.

೧೫. ಪುರುಷವಿದ್ಯಾಧಿಕರಣ: ಓಂ ಪುರುಷ ವಿದ್ಯಾಯಾಮಪಿ ಚೇತರೇಷಾಮನಾ ಮ್ನಾನಾತ್ ಓಂ

ಅಪ್ರಯೋಜನತಾ ಎನ್ನುವುದು ಪೂರ್ವಪಕ್ಷಯುಕ್ತಿ. ಪರಮಾತ್ಮನಲ್ಲಿ ಬಹುಗುಣಗಳನ್ನು ಪ್ರತಿಪಾದಿಸುವ ಪುರುಷಸೂಕ್ತಾದಿಗಳು ಇವೆ. ಅಲ್ಪಗುಣಗಳನ್ನು ಪ್ರತಿಪಾದಿಸುವ 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಇತ್ಯಾದಿ ಶ್ರುತಿಗಳೂ ಇವೆ. ಆದ್ದರಿಂದ ಬೇರೆ ಬೇರೆ ಕಡೆಗಳಿಂದ ಗುಣಗಳನ್ನು ಉಪಸಂಹಾರ ಮಾಡುವುದು ವ್ಯರ್ಥವೆಂದು ಪೂರ್ವಪಕ್ಷ.

ಆನತಿ ಎನ್ನುವುದು ಸಿದ್ಧಾಂತಯುಕ್ತಿ. ಆನತಿ ಎಂದರೆ ಪ್ರಾಪ್ತಿ. 'ಗುಣಾಃ ಸರ್ವೇ ಬ್ರಹ್ಮಣ್ಯೇವ ಹ್ಯುಪಾಸ್ಯಾಃ ನಾನ್ಯೈರ್ದೇವೈಃ ಕಿಮು ಸರ್ವೈರ್ಮನುಷ್ಯೈಃ' ಇತ್ಯಾದಿ ಶ್ರುತಿಗಳಿಂದ ಬ್ರಹ್ಮ ದೇವರನ್ನು ಹೊರತು ಇತರರಿಗೆ ಸರ್ವಗುಣೋಪಸಂಹಾರವು ಸಾಧ್ಯವಿಲ್ಲ. ಎಲ್ಲ ಗುಣಗಳನ್ನು ಒಂದೇ ಕಡೆಯಲ್ಲಿ ಹೇಳಿರುವುದಿಲ್ಲ. ಆದರೂ ಬೇರೆ ಬೇರೆ ಕಡೆಗಳಿಂದ ಯಥಾಶಕ್ತಿ ಸರ್ವಗುಣೋಪಸಂಹಾರ ಪ್ರಾಪ್ತಿಯಿದೆ. ಆದಕಾರಣ ಸರ್ವಗುಣೋಪಸಂಹಾರವು ವ್ಯರ್ಥವಲ್ಲ ಎಂದು ಸಿದ್ಧಾಂತ.

೧೬. ವೇಧಾದ್ಯಧಿಕರಣ: ಓಂ ವೇಧಾದ್ಯರ್ಥಭೇದಾತ್ ಓಂ

ಅಪ್ರಯೋಜನತಾವು ಪೂರ್ವಪಕ್ಷಯುಕ್ತಿ. ವೇಧ ಇತ್ಯಾದಿ ಭಗವದ್ಗುಣಗಳನ್ನು ಉಪಾಸನೆ ಮಾಡಿದರೆ ದುಷ್ಟನಿಗ್ರಹರೂಪ ಫಲವು ಉಂಟಾಗುವುದರಿಂದ, ಈ ಉಪಾಸನೆಯಿಂದ ಸಜ್ಜನರಿಗೆ ದ್ರೋಹಾದಿಗಳನ್ನು ಮಾಡಬೇಕೆಂಬ ದುರ್ಜನರಿಗೆ ಪ್ರಯೋಜನಾಭಾವು ಸಿದ್ಧಿಸುವುದು. ಇದು ಎಲ್ಲರಿಗೂ ಅಪೇಕ್ಷಿತವಾದ್ದರಿಂದ ಈ ಗುಣಗಳನ್ನು ಎಲ್ಲರೂ ಉಪಾಸನೆ ಮಾಡಬೇಕು ಎಂದು ಪೂರ್ವಪಕ್ಷ.

ಆನತಿ (ಪ್ರಾಪ್ತಿ) ಎನ್ನುವುದು ಸಿದ್ಧಾಂತಯುಕ್ತಿ. ಯತಿಗಳಿಗೂ ಉಪಾಸನೆಯ ಪ್ರಾಪ್ತಿಯಿದೆ. ಅವರಿಗೆ ವೇಧಾದಿ ಗುಣಗಳ ಉಪಾಸನೆಯು ನಿಷಿದ್ಧವಾದ್ದರಿಂದ ಈ ಗುಣಗಳು ಸರ್ವರಿಂದಲೂ ಉಪಾಸ್ಯವೆನ್ನುವುದು ಯುಕ್ತವಲ್ಲ ಎಂದು ಸಿದ್ಧಾಂತ.

೧೭. ಹಾನ್ಯಧಿಕರಣ: ಓಂ ಹಾನೌ ತೂಪಾಯನಶಬ್ದಶೇಷತ್ವಾತ್ ಕುಶಾಚ್ಛಂದಸ್ತುತ್ಯು ಪಗಾನವತ್ ತದುಕ್ತಂ ಓಂ

ಅತಿಪ್ರಸಂಗವು ಪೂರ್ವಪಕ್ಷಯುಕ್ತಿ. ಮುಕ್ತಿಯಲ್ಲಿಯೂ ಉಪಾಸನೆಯುಂಟು ಎಂದು ಒಪ್ಪಿದರೆ ಅದರಿಂದ ಫಲ ಪ್ರಾಪ್ತಿಯಾಗಬೇಕಾಗುವುದು. ಅಂದರೆ ಮುಕ್ತಿಗೆ ಮುಂಚೆ ಆ ಫಲವಿದ್ದಿಲ್ಲ ಎಂಬ ಕಾರಣದಿಂದ ಮುಕ್ತಿಗೆ ಅಪೂರ್ಣತ್ವ ಬರುವುದು.

ಹೀಗೆ ಅತಿಪ್ರಸಂಗ ಬರುವುದರಿಂದ ಮುಕ್ತಿಯಲ್ಲಿ ಉಪಾಸನೆಯನ್ನು ಮಾಡಕೂಡದು ಎಂದು ಪೂರ್ವಪಕ್ಷ.

ಕಾರಣವೆನ್ನುವುದು ಸಿದ್ಧಾಂತಯುಕ್ತಿ. 'ನ ಹೀಯತೇ ಯತ್ರ ಗತ್ವಾ ಯತ್ರ ಗತ್ವಾ ನ ವರ್ಧತೇ' ಎಂಬ ಪ್ರಮಾಣದ ಪ್ರಕಾರ ಮುಕ್ತಿಯಲ್ಲಿ ಫಲವಿಲ್ಲದಿದ್ದರೂ, ಸಂಸ್ಕಾರ ವೆಂಬ ಕಾರಣದಿಂದ ಮುಕ್ತಿಯಲ್ಲಿಯೂ ಉಪಾಸನೆಯು ಕೂಡುತ್ತದೆ.

೧೮. ಛಂದಾಧಿಕರಣ: ಓಂ ಛಂದತ ಉಭಯಾವಿರೋಧಾತ್ ಓಂ

ಅದೂರಸಂಶ್ರಯ ಎನ್ನುವುದು ಪೂರ್ವಪಕ್ಷಯುಕ್ತಿ. ಮುಕ್ತನು ಸಂಸ್ಕಾರವೆಂಬ ಕಾರಣದಿಂದ ಮುಕ್ತಿಯಲ್ಲಿಯೂ ಉಪಾಸನೆ ಮಾಡುವಂತೆ, ಅವನಿಗೆ ಕರ್ಮಕರಣ ಶಕ್ತಿಯೂ ಇರುವುದರಿಂದ ಕರ್ಮವನ್ನೂ ಮಾಡಲಿ ಎಂದು ಪೂರ್ವಪಕ್ಷ.

ಕಾರ್ಯವೈಶೇಷ್ಯ ಎಂಬುದು ಸಿದ್ಧಾಂತಯುಕ್ತಿ. ಉಪಾಸನಾ ರೂಪ ಕಾರ್ಯಕ್ಕೆ ನಿತ್ಯತ್ವವೆಂಬ ವಿಶೇಷವಿರುವದರಿಂದ ಆ ಸ್ವಭಾವವು ಮುಕ್ತಿಯಲ್ಲಿಯೂ ಇರುವುದು. ಕರ್ಮಕರಣರೂಪ ಕಾರ್ಯದಲ್ಲಿ ಹಾಗೆ ಇಲ್ಲ. ಆದ್ದರಿಂದ ಮುಕ್ತಿಯಲ್ಲಿ ಕರ್ಮ ನಿಯಮವಿಲ್ಲವೆಂದು ಸಿದ್ಧಾಂತ.

೧೯. ಅನಿಯಮಾಧಿಕರಣ: ಓಂ ಅನಿಯಮಃ ಸರ್ವೇಷಾಮವಿರೋಧಾಚ್ಛಬ್ದಾನುಮಾಭ್ಯಾಂ ಓಂ

ವಿಶಿಷ್ಟಕಾರಣವೆನ್ನುವುದು ಪೂರ್ವಪಕ್ಷಯುಕ್ತಿ. ಭಗವಂತನ ಸರ್ವಗುಣಗಳನ್ನು ಉಪಾಸನೆ ಮಾಡುವಲ್ಲಿ ಕೆಲವರಿಗೆ ಯೋಗ್ಯತೆಯಿಲ್ಲ ಎನ್ನುವಂತೆ ಜ್ಞಾನಿಗಳಲ್ಲಿಯೂ ಕೆಲವರಿಗೆ ಮೋಕ್ಷವನ್ನು ಹೊಂದುವ ಯೋಗ್ಯತೆ ಇರುವುದಿಲ್ಲ. ಆದಕಾರಣ ಎಲ್ಲ ಜ್ಞಾನಿಗಳೂ ಉಪಾಸನೆ ಮಾಡಬೇಕಿಲ್ಲ ಎಂದು ಪೂರ್ವಪಕ್ಷ.

ಸ್ವಭಾವವು ಸಿದ್ಧಾಂತಯುಕ್ತಿ. ಎಲ್ಲ ಜ್ಞಾನಿಗಳಿಗೂ ನಿಯಮೇನ ಮೋಕ್ಷ ಕೊಡುವುದು ಭಗವಂತನ ಸ್ವಭಾವ. ಮೋಕ್ಷಕ್ಕೆ ಅಯೋಗ್ಯರಾದವರಿಗೆ ಜ್ಞಾನವನ್ನೇ ಉಂಟುಮಾಡುವುದಿಲ್ಲ. ಜ್ಞಾನಿಗಳಿಗೆ ಮೋಕ್ಷವು ಖಚಿತ. ಆದಕಾರಣ ಉಪಾಸನೆ ಮಾಡಬೇಕು ಎಂದು ಸಿದ್ಧಾಂತ.

೨೦. ಯಾವದಧಿಕರಣ: ಓಂ ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಂ ಓಂ

ಚೇಷ್ಟಾವು ಪೂರ್ವಪಕ್ಷಯುಕ್ತಿ. ಚೇಷ್ಟಾ ಎಂದರೆ ಪ್ರಯತ್ನ. ಮುಕ್ತಿಯಲ್ಲಿರುವ ಬ್ರಹ್ಮಾದಿಗಳ ಆನಂದಾದಿ ತಾರತಮ್ಯವನ್ನು ನಿರ್ವಾಹ ಮಾಡಲು ಪ್ರಯತ್ನ ತಾರತಮ್ಯವನ್ನು ಅಂಗೀಕರಿಸಿದರೆ ಸಾಕು. ಉಪಾಸನೆಗೆ ಇವರು ಅಧಿಕಾರಿಗಳು, ಅವರಲ್ಲ ಎಂಬ ಅಧಿಕಾರ ನಿಯಮದ ಅಗತ್ಯವಿಲ್ಲವೆಂದು ಪೂರ್ವಪಕ್ಷ.

ವಸ್ತುದೂಷಣವು ಸಿದ್ಧಾಂತಯುಕ್ತಿ. ಪ್ರಯತ್ನ ತಾರತಮ್ಯವು ಅಧಿಕಾರ ಅಥವಾ ಯೋಗ್ಯತಾ ತಾರತಮ್ಯಕ್ಕೆ ಅಧೀನವಾಗಿದೆ. ಯೋಗ್ಯತೆಗೆ ಮೀರಿದ ಪ್ರಯತ್ನವು

ದೂಷಿತವಾಗುವುದರಿಂದ ಯಥಾಯೋಗ್ಯ ಉಪಾಸನೆಯನ್ನು ಅಂಗೀಕರಿಸಲೇಬೇಕು ಎಂದು ಸಿದ್ಧಾಂತ.

೨೧. ಇಯದಾಮನನಾಧಿಕರಣ: ಓಂ ಇಯದಾಮನನಾತ್ ಓಂ

ದೃಷ್ಟವೈರೂಪ್ಯವು ಪೂರ್ವಪಕ್ಷಯುಕ್ತಿ. ಸಾಧಕರಲ್ಲಿ ಒಬ್ಬರಿಗಿಂತ ಒಬ್ಬರು ಅಧಿಕರು ಎಂದು ಕಂಡಿದೆ. ಸರ್ವಗುಣ ಉಪಾಸನೆಗೆ ಪ್ರಾಣನಿಗಿಂತ ಅಧಿಕರು ಇಲ್ಲವೆಂದು ಹೇಳಿದರೆ ಲೋಕದಲ್ಲಿ ಕಾಣುವ ಪರಿಸ್ಥಿತಿಗೆ ವಿರೋಧವಾಗುವುದು. ಆದಕಾರಣ ಪ್ರಾಣ ಅಥವಾ ಬ್ರಹ್ಮದೇವರೇ ಸರ್ವಗುಣೋಪಾಸನೆಗೆ ಅಧಿಕಾರಿಗಳು ಎಂದು ಹೇಳುವುದು ಅಯುಕ್ತವು ಎಂದು ಪೂರ್ವಪಕ್ಷ.

ಪ್ರತಿಕ್ರಿಯಾವಿರೋಧವು ಸಿದ್ಧಾಂತಯುಕ್ತಿ. 'ಯಃ ಸರ್ವಮವಜಾನೀಯಾತ್ ಋತೇ ದೇವಂ ನಾರಾಯಣಂ ದೇವೀಂ ಚ ಪರಮಾಂ ಶ್ರಿಯಂ। ಸ ಪ್ರಾಣಾನ ವರುದ್ಧ್ಯೇಮಂ ಮಂತ್ರಮಾವರ್ತಯೀತ' ಇತ್ಯಾದಿ ಪ್ರತಿಕ್ರಿಯಾ ವಿಧಾನಾದಿಗಳಿಂದ ವಿರೋಧ ಬರುವುದರಿಂದ ಪ್ರಾಣನೇ ಸರ್ವಾಧಿಕಾರಿಗಳಲ್ಲಿ ಶ್ರೇಷ್ಠನು. ಆದ್ದರಿಂದ ಉಪಾಸಕರಲ್ಲಿ ಪ್ರಾಣನೇ ಶ್ರೇಷ್ಠನು ಎಂದು ಸಿದ್ಧಾಂತ.

೨೨. ವ್ಯತಿಹಾರಾಧಿಕರಣ: ಓಂ ವ್ಯತಿಹಾರೋ ವಿಶಿಂಷಂತಿ ಹೀತರವತ್ ಓಂ

ಉನ್ನತಿಯು ಪೂರ್ವಪಕ್ಷಯುಕ್ತಿ. ಉನ್ನತಿ ಎಂದರೆ ಶ್ರೇಷ್ಠತ್ವ. ಛಾಂದೋಗ್ಯ ಉಪನಿಷತ್ತಿನ ತಾರತಮ್ಯ ಪ್ರಕರಣದಲ್ಲಿ ಯಾರಿಂದ ಯಾರು ಉತ್ತಮರು ಎಂಬ ಪ್ರಶ್ನೆಗೆ ಉತ್ತರವಾಗಿ ನಾಮಾಭಿಮಾನಿ ಉಷಾದೇವಿಯಿಂದ ಆರಂಭಿಸಿ ಪ್ರಾಣನ ಪರ್ಯಂತ ತಾರತಮ್ಯವು ಉಕ್ತವಾಗಿದೆ. ಪ್ರಾಣನಿಗಂತ ಶ್ರೇಷ್ಠರು ಯಾರು ಎಂಬ ಪ್ರಶ್ನೆ ಅಲ್ಲಿ ಕಂಡುಬಂದಿಲ್ಲ. ಆದ್ದರಿಂದ ಪ್ರಾಣನಿಗೆ ಉನ್ನತಿಯು ಪ್ರಾಪ್ತವಾಗುವುದು. ಆದ್ದರಿಂದ ವಿಷ್ಣುವಿಗೆ ಪ್ರಾಣನಿಗಿಂತ ಉತ್ತಮತ್ವ ಸಿದ್ಧಿಸುವುದಿಲ್ಲವೆಂದು ಪೂರ್ವಪಕ್ಷ.

ಪ್ರತಿಸಂಧಿಯು ಸಿದ್ಧಾಂತಯುಕ್ತಿ. ಪ್ರತಿಸಂಧಿ ಎಂದರೆ ಆಧ್ಯಾಹಾರ. ಅದೇ ಉಪನಿಷತ್ತಿನಲ್ಲಿ ಪ್ರಾಣ ಪ್ರಕರಣಕ್ಕಿಂತ ಭಿನ್ನವಾದ ಸತ್ಯ ಪ್ರಕರಣದಲ್ಲಿ ಸತ್ಯ ಜ್ಞಾನಿಯು ಪ್ರಾಣಬೋಧಕನಿಗಿಂತಲೂ ಅತ್ಯುತ್ಕೃಷ್ಟ ತತ್ವಬೋಧಕ ಎಂದು 'ಏಷ ತು ಅತಿವದತಿ' ಎಂಬ ವಾಕ್ಯದಿಂದ ಪ್ರಶಂಸಿಸಲಾಗಿದೆ. ಇವೆರಡರ ಮಧ್ಯದಲ್ಲಿ ಪ್ರಾಣನಿಗಿಂತ ಶ್ರೇಷ್ಠನು ಯಾರು ಎಂಬ ಪ್ರಶ್ನೆಯನ್ನೂ, ಸತ್ಯನಾಮಕ ಭಗವಂತನು ಶ್ರೇಷ್ಠ ಎಂಬ ಉತ್ತರವನ್ನೂ ಅಧ್ಯಾಹಾರ ಮಾಡುವುದು ಅವಶ್ಯವಾದ್ದರಿಂದ ವಿಷ್ಣುವೇ ಸರ್ವಶ್ರೇಷ್ಠನೆಂದು ಸಿದ್ಧಾಂತ.

೨೩. ಸತ್ಯಾಧಿಕರಣ: ಓಂ ಸೈವ ಹಿ ಸತ್ಯಾದಯಃ ಓಂ

ಅನುಕ್ತಿಯು ಪೂರ್ವಪಕ್ಷಯುಕ್ತಿ. ಛಾಂದೋಗ್ಯದಲ್ಲಿ ಪ್ರಾಣಪ್ರಕರಣದ ಅನಂತರದಲ್ಲಿ ಬರುವ ಸತ್ಯ, ವಿಜ್ಞಾನ, ಆತ್ಮ ಇತ್ಯಾದಿ ಶಬ್ದಗಳಿಂದ ವಾಚ್ಯವಾದವನು

ಒಬ್ಬನೇ ಎಂದು ಅಭೇದೋಕ್ತಿಯು ಇರುವುದಿಲ್ಲ. ಆದ್ದರಿಂದ ಸತ್ಯ ಪದೋಕ್ತನಾದ ವಿಷ್ಣುವಿಗಿಂತ ವಿಜ್ಞಾನಾದಿಗಳಿಗೆ ಉತ್ತಮತ್ವವು ಪ್ರಾಪ್ತವಾಗುವುದರಿಂದ ವಿಷ್ಣುವು ಸರ್ವೋತ್ತಮನಲ್ಲ ಎಂದು ಪೂರ್ವಪಕ್ಷ.

ಅನೂನತಾ ಎನ್ನುವುದು ಸಿದ್ಧಾಂತಯುಕ್ತಿ. ಅನೂನತಾ ಎಂದರೆ ಪೂರ್ಣತ್ವ. ಸತ್ಯಾದಿ ಎಲ್ಲ ಶಬ್ದಗಳಿಂದ ವಾಚ್ಯನಾದವನು ವಿಷ್ಣುವೇ ಹೊರತು ಇತರರಲ್ಲ. ಏಕೆಂದರೆ 'ಸತ್ಯಂ ಪೂರ್ಣಂ ವಿಜ್ಞಾನಂ ಪೂರ್ಣಮದಃ ಪೂರ್ಣಂ ಪೂರ್ಣಮಿದಂ' ಇತ್ಯಾದಿ ಶಾಖಾಂತರದಲ್ಲಿ ಪೂರ್ಣತ್ವ ರೂಪದಿಂದ ಸತ್ಯಾದಿಗಳಿಗೆ ಅಭೇದವೇ ಹೇಳಲ್ಪಟ್ಟಿದೆ. ಆದ್ದರಿಂದ ವಿಷ್ಣುವೇ ಪ್ರಾಣನಿಗಿಂತ ಉತ್ತಮನು ಎಂದು ಸಿದ್ಧಾಂತ.

೨೪. ಕಾಮಾಧಿಕರಣ: ಓಂ ಕಾಮಾದಿತರತ್ರ ತತ್ರ ಚಾಯತನಾದಿಭ್ಯಃ ಓಂ

ಅಪ್ರಯತ್ನತ್ವವು ಪೂರ್ವಪಕ್ಷಯುಕ್ತಿ. ಲಕ್ಷ್ಮೀದೇವಿಯು ನಿತ್ಯಮುಕ್ತಳಾದ್ದರಿಂದ ಅವಳು ಉಪಾಸನೆಗಾಗಿ ಪ್ರಯತ್ನ ಮಾಡಬೇಕಿಲ್ಲ. ಆದರೂ ಅವಳು ನಿತ್ಯದಲ್ಲಿಯೂ ಭಗವದುಪಾಸನೆ ಮಾಡುತ್ತಾಳೆ. ಅದನ್ನು ಸಮರ್ಥಿಸಲು ಪ್ರಯತ್ನವನ್ನು ಒಪ್ಪಬೇಕು. ಆಗ ಲಕ್ಷ್ಮೀದೇವಿಯೂ ಉಪಾಸನೆಗೆ ಅಧಿಕಾರಿಣಿ ಎನಿಸುವುದರಿಂದ ಅವಳಿಗೂ ಸಂಸಾರಿತ್ವವು ಬರುವುದು. ಆದ್ದರಿಂದ ಅಧಿಕಾರಿಗಳಲ್ಲಿ ಪ್ರಾಣನಿಗಿಂತ ಮೇಲೆ ಯಾರೂ ಇಲ್ಲ ಎನ್ನುವುದು ಅಯುಕ್ತವೆಂದು ಪೂರ್ವಪಕ್ಷ.

ಸಂಸ್ಕಾರಪಾಟವವು ಸಿದ್ಧಾಂತಯುಕ್ತಿ. ಲಕ್ಷ್ಮೀದೇವಿಯು ಭಗವಂತನಿಗೆ ಅತ್ಯಂತ ಪ್ರಿಯಳು, ಅನಾದಿಕಾಲದಿಂದ ಪರಮಾತ್ಮನಿಗೆ ಅತ್ಯಂತ ಸಮೀಪಳು. ಆದ್ದರಿಂದ ಅವಳು ಅಸ್ವತಂತ್ರಳಾದರೂ ನಿತ್ಯಮುಕ್ತತ್ವವು ಕೂಡುತ್ತದೆ. ಯಾರಾದರೂ ತಮಗೆ ಅತಿಪ್ರಿಯವಾದ ವಸ್ತುವನ್ನು ಸದಾಕಾಲವೂ ಧ್ಯಾನ ಮಾಡುವುದು ಲೋಕದಲ್ಲಿ ಕಂಡಿದೆ. ಲಕ್ಷ್ಮೀದೇವಿಯೂ ತನಗೆ ಅತಿಪ್ರಿಯನಾದ ಪರಮಾತ್ಮನನ್ನು ಮುಕ್ತ್ಯರ್ಥ ಪ್ರಯತ್ನವಿಲ್ಲದೆ ಸಂಸ್ಕಾರ ಪಾಟವದಿಂದ ನಿತ್ಯದಲ್ಲಿಯೂ ಉಪಾಸನೆ ಮಾಡುತ್ತಾಳೆ. ಆದ್ದರಿಂದ ಲಕ್ಷ್ಮೀದೇವಿಯು ಅಧಿಕಾರಿ ವರ್ಗದಲ್ಲಿ ಬರುವುದಿಲ್ಲ. ಆದಕಾರಣ ಪ್ರಾಣನೇ ಅಧಿಕಾರಿವರ್ಗಕ್ಕೆ ಅವಧಿಯು ಎಂದು ಸಿದ್ಧಾಂತ.

೨೫. ತನ್ನಿರ್ಧಾರಣಾಧಿಕರಣ: ಓಂ ತನ್ನಿರ್ಧಾರಣಾರ್ಥನಿಯಮಸ್ತದ್ದೃಷ್ಟೇಃ ಪೃಥಗ್ಹ್ಯ ಪ್ರತಿಬಂಧಃ ಫಲಂ ಓಂ

ದೃಢಬಂಧವು ಪೂರ್ವಪಕ್ಷಯುಕ್ತಿ. ಸಂಸಾರಬಂಧವು ಅದೃಢವಾಗಿದ್ದರೆ ಅದನ್ನು ಶ್ರವಣಾದಿಗಳಿಂದಲೇ ಛೇದಿಸಬಹುದಿತ್ತು. ಆದರೆ ಅದು ದೃಢವಾಗಿರುವುದರಿಂದ ಸಾಮಾನ್ಯವಾದ ಶ್ರವಣಾದಿ ಉಪಾಸನೆಯಿಂದ ಅದನ್ನು ಛೇದಿಸಲು ಅಶಕ್ಯವು. ಆದ್ದರಿಂದ ಶ್ರಲಣಾದಿಗಳು ವ್ಯರ್ಥ ಎಂದು ಪೂರ್ವಪಕ್ಷ.

ಸ್ವೇಚ್ಛಾನಿಯತಿಯು (ಈಶ್ವರನ ಇಚ್ಛೆಯೆಂಬ ನಿಯಮ) ಸಿದ್ಧಾಂತಯುಕ್ತಿ. ಸಂಸಾರ ಬಂಧವು ಅದೃಢವೇ ಆಗಿದೆ. ಆದರೂ ಶ್ರವಣ ಮನನ ನಿಧಿಧ್ಯಾಸನ ರೂಪ

ಉಪಾಸನೆಯಿಂದ ಸಂತುಷ್ಟನಾದ ನಾನು ಇವನನ್ನು ಸಂಸಾರಬಂಧದಿಂದ ಬಿಡಿಸಿ ಮುಕ್ತಿಯನ್ನು ಕೊಡುತ್ತೇನೆ ಎಂಬ ಈಶ್ವರನ ಇಚ್ಛೆಯೆಂಬ ನಿಯಮವಿರುವುದರಿಂದ ಶ್ರವಣಾದಿಗಳು ವ್ಯರ್ಥವಲ್ಲ ಎಂದು ಸಿದ್ಧಾಂತ.

೨೬. ಪ್ರದಾನಾಧಿಕರಣ: ಓಂ ಪ್ರದಾನವದೇವ ಹಿ ತದುಕ್ತಂ ಓಂ

ಪರಾಭವವು ಪೂರ್ವಪಕ್ಷಯುಕ್ತಿ. ಜ್ಞಾನ ಮೋಕ್ಷಗಳು ಗುರುವಿನ ಅಧೀನವು ಎಂದರೆ, ಕದಾಚಿತ್ತಾಗಿ ಗುರುಗಳಿಗೆ ಕೋಪದಿಂದ ಜ್ಞಾನವು ಪರಾಭವ ಆಂದರೆ ನಷ್ಟವಾದ ಪಕ್ಷದಲ್ಲಿ ಮೋಕ್ಷವೇ ಇಲ್ಲದಂತಾಗುವುದು. ಆಗ ಜ್ಞಾನಿಗಳಿಗೆ ಮೋಕ್ಷ ನಿಯತ ಎಂದು ಹೇಳಿದ್ದು ಅಯುಕ್ತವಾಗುವುದು. ಆದಕಾರಣ ಜ್ಞಾನವು ಕೇವಲ ಶ್ರವಣಾದಿಗಳ ಅಧೀನಾದ್ದರಿಂದ ಗುರುಗಳು ಹೇಳಿದಂತೆ ಉಪಾಸನೆ ಮಾಡಕೂಡದು ಎಂದು ಪೂರ್ವಪಕ್ಷ.

ವಸ್ತುವೈಭವ ಎನ್ನುವುದು ಸಿದ್ಧಾಂತಯುಕ್ತಿ. ವಸ್ತುವೈಭವ ಎಂದರೆ ಜ್ಞಾನದ ವೈಭವ. ಜ್ಞಾನವು ಗುರುಗಳ ಅಧೀನವೇ ಆದರೂ ಜ್ಞಾನಿಗಳಿಗೆ ಗುರುಗಳ ಕೋಪ ಶಾಪಗಳು ಮೋಕ್ಷಕ್ಕೆ ಪ್ರತಿಬಂಧಕವಲ್ಲ. 'ಜ್ಞಾನಿನೋ ಗುರುಶಾಪೇಪಿ ನಾಮುಕ್ತಿಃ ಸಂಸೃತೇಃ ಕ್ವಚಿತ್। ಆನಂದಹ್ರಾಸದೋಷೇಣ ಸೈವ ಮುಕ್ತಿರ್ವಿದುಷ್ಯತಿ' ಎಂಬ ಉಕ್ತಿಯ ಪ್ರಕಾರ ಗುರು ಶಾಪದ ನಿಮಿತ್ತದಿಂದ ಮೋಕ್ಷದಲ್ಲಿ ಆನಂದಹ್ರಾಸ ಮಾತ್ರ ಉಂಟಾಗುವುದು. ಜ್ಞಾನಿಗೆ ನಿಯತವಾಗಿ ಮೋಕ್ಷವೆಂಬುದೇ ಜ್ಞಾನದ ವೈಭವ. ಆದ್ದರಿಂದ ಗುರುಪ್ರದಾನವು (ಪ್ರಸಾದಪೂರ್ವಕ ಜ್ಞಾನೋಪದೇಶ) ಅವಶ್ಯಕವೆಂದು ಸಿದ್ಧಾಂತ.

೨೭. ಲಿಂಗಭೂಯಸ್ಟ್ವಾಧಿಕರಣ: ಓಂ ಲಿಂಗಭೂಯಸ್ಟ್ವಾತ್ತದ್ಧಿ ಬಲೀಯಸ್ತದಪಿ ಓಂ

ಪುಂಸಾಮ್ಯವು ಪೂರ್ವಪಕ್ಷಯುಕ್ತಿ. ಶಿಷ್ಯ ಮತ್ತು ಗುರುಗಳಲ್ಲಿ ಪುರುಷತ್ವವು ಸಮಾನವಾಗಿರುವಾಗ ಗುರುಪ್ರಸಾದಕ್ಕೆ ಪ್ರಾಬಲ್ಯವನ್ನು ಹೇಳುವುದು ಯುಕ್ತವಲ್ಲ. ಶಿಷ್ಯ ಪ್ರಯತ್ನವೇ ಪ್ರಧಾನವು, ಗುರು ಪ್ರಸಾದವು ಸಹಕಾರಿಯಷ್ಟೆ ಎಂದು ಏಕೆ ಹೇಳಬಾರದು ಎಂದು ಪೂರ್ವಪಕ್ಷ.

ವಿಶೇಷೋಕ್ತಿಯು ಸಿದ್ಧಾಂತಯುಕ್ತಿ. 'ಗುರುಪ್ರಸಾದೋ ಬಲವಾನ್ನ ತಸ್ಮಾದ್ ಬಲವತ್ತರಂ। ತಥಾಪಿ ಶ್ರವಣಾದಿಶ್ಚ ಕರ್ತವ್ಯೋ ಮೋಕ್ಷಸಿದ್ಧಯೇ' ಇತ್ಯಾದಿ ವಿಶೇಷೋಕ್ತಿಯಿಂದ ಗುರುಗಳ ಪ್ರಸಾದವೇ ಪ್ರಬಲವು. ಆದ್ದರಿಂದ ಅವಶ್ಯವಾಗಿ ಗುರುಗಳ ಅನುಗ್ರಹವನ್ನು ಸಂಪಾದಿಸಬೇಕು ಎಂದು ಸಿದ್ಧಾಂತ.

೨೮. ಪೂರ್ವವಿಕಲ್ಪಾಧಿಕರಣ: ಓಂ ಪೂರ್ವವಿಕಲ್ಪಃ ಪ್ರಕರಣಾತ್ ಸ್ಯಾತ್ ಕ್ರಿಯಾ ಮಾನಸವತ್ ಓಂ

ಪ್ರಾಪ್ತಸಂತ್ಯಾಗವು ಪೂರ್ವಪಕ್ಷಯುಕ್ತಿ. ಗುರು ಪರಿತ್ಯಾಗಕ್ಕೆ ದೋಷಪ್ರಾಪ್ತಿಯು ಹೇಳಿರುವ ಪ್ರಯುಕ್ತ ಉತ್ತಮರಾದ ಗುರುಗಳು ಪ್ರಾಪ್ತವಾದಾಗಲೂ ಪೂರ್ವಪ್ರಾಪ್ತ

ಗುರುಗಳನ್ನು ಪರಿತ್ಯಾಗ ಮಾಡಬಾರದು. ಆದ್ದರಿಂದ ಸರ್ವಜ್ಞರಾದ ಗುರುಗಳು ಪ್ರಥಮದಲ್ಲಿ ಪ್ರಾಪ್ತವಾಗದೆ ಅನಂತರ ಪ್ರಾಪ್ತವಾದರೆ ಅವರನ್ನು ಸ್ವೀಕರಿಸಬಾರದು ಎಂದು ಪೂರ್ವಪಕ್ಷ.

ಅಮಾನತ್ವವೆನ್ನುವುದು ಸಿದ್ಧಾಂತಯುಕ್ತಿ. ಉತ್ತಮ ಗುರುಗಳನ್ನು ಸ್ವೀಕರಿಸಲು ಪೂರ್ವಗುರುಗಳ ಪರಿತ್ಯಾಗ ಮಾಡಿದರೆ ದೋಷವಿದೆ ಎನ್ನುವುದಕ್ಕೆ ಪ್ರಮಾಣವಿಲ್ಲ. ಆದ್ದರಿಂದ ಉತ್ತಮಗುರುಗಳನ್ನು ಸ್ವೀಕರಿಸಬಹುದು ಎಂದು ಸಿದ್ಧಾಂತ.

೨೯. ವಿದ್ಯಾಧಿಕರಣ: ಓಂ ವಿದ್ಯೈವ ತು ನಿರ್ಧಾರಣಾತ್ ಓಂ

ಕಾರಣಾನಿರ್ಣಯ ಎನ್ನುವುದು ಪೂರ್ವಪಕ್ಷಯುಕ್ತಿ. 'ವಿದ್ವಾನಮೃತೋ ಭವತಿ' ಎಂಬ ಶ್ರುತಿಯ ಪ್ರಕಾರ ಜ್ಞಾನವು ಮೋಕ್ಷಕ್ಕೆ ಕಾರಣವೋ ಅಥವಾ 'ಕರ್ಮಣೈವ ಹಿ ಸಂಸಿದ್ಧಮಾಸ್ಥಿತಾ ಜನಕಾದಯಃ' ಎಂಬ ಸ್ಮೃತಿಯಂತೆ ಕರ್ಮವೇ ಮೋಕ್ಷಕ್ಕೆ ಕಾರಣವೋ ಎಂಬುದು ನಿರ್ಣಯವಾಗದಿರುವುದರಿಂದ ಜ್ಞಾನಕ್ಕಾಗಿ ಉಪಾಸನೆ ಮಾಡಬೇಕಿಲ್ಲ ಎಂದು ಪೂರ್ವಪಕ್ಷ.

ಪ್ರಾಧಾನ್ಯವು ಸಿದ್ಧಾಂತಯುಕ್ತಿ. 'ನಾನ್ಯಃ ಪಂಥಾ ಅಯನಾಯ ವಿದ್ಯತೇ' ಎಂಬ ಶ್ರುತಿಯು ಮೋಕ್ಷಕ್ಕೆ ಜ್ಞಾನವನ್ನು ಹೊರತು ಪಡಿಸಿ ಬೇರೆ ಮಾರ್ಗವಿಲ್ಲವೆಂದು ಜ್ಞಾನಕ್ಕೇ ಪ್ರಾಧಾನ್ಯವನ್ನು ಹೇಳಿರುವುದರಿಂದ ಜ್ಞಾನಕ್ಕಾಗಿ ಉಪಾಸನೆ ಮಾಡಬೇಕು ಎಂದು ಸಿದ್ಧಾಂತ.

೩೦. ಶ್ರುತ್ಯಧಿಕರಣ: ಓಂ ಶ್ರುತ್ವಾದಿ ಬಲೀಯಸ್ತ್ವಾಚ್ಚ ನ ಬಾಧಃ ಓಂ

ಭ್ರಮವು ಪೂರ್ವಪಕ್ಷಯುಕ್ತಿ. ಕರ್ಮಣೈವ ಎನ್ನುವ ಸ್ಮೃತಿಯು ಏವಕಾರದಿಂದ ಕರ್ಮಕ್ಕೇನೆ ಪ್ರಾಧಾನ್ಯವನ್ನು ಹೇಳುತ್ತಿರುವಾಗ ನಾನ್ಯಃ ಪಂಥಾ ಎಂದು ಹೇಳುವ ಶ್ರುತಿಗೇ ಪ್ರಾಧಾನ್ಯವನ್ನು ತಿಳಿಯುವುದು ಭ್ರಾಂತಿ ಮೂಲಕವು. ಆದ್ದರಿಂದ ಕರ್ಮವೂ ಮೋಕ್ಷಸಾಧನವೆಂದು ಪೂರ್ವಪಕ್ಷ.

ಪ್ರೀತಿಯು ಸಿದ್ಧಾಂತಯುಕ್ತಿ. 'ಪ್ರಿಯೋ ಹಿ ಜ್ಞಾನಿನೋऽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ' ಎಂಬ ವಚನದಿಂದ ಜ್ಞಾನಿಗಳಲ್ಲೇ ಭಗವಂತನಿಗೆ ಅಧಿಕವಾದ ಪ್ರೀತಿಯು ಎಂದು ಸಿದ್ಧವಾಗಿದೆ. ಯಮೈವೇಷ ವೃಣತೇ ಎಂಬ ವಚನದ ಪ್ರಕಾರ ಭಗವಂತನ ಪ್ರೀತಿಯಿಂದಲೇ ಮೋಕ್ಷವು. ಆದ್ದರಿಂದ ಜ್ಞಾನವೇ ಭಗವತ್ ಪ್ರಸಾದ ರೂಪವಾದ ಮೋಕ್ಷಕ್ಕೆ ಪ್ರಧಾನ ಸಾಧನವೆಂದು ಸಿದ್ಧಾಂತ.

೩೧. ಅನುಬಂಧಾಧಿಕರಣ: ಓಂ ಅನುಬಂಧಾದಿಭ್ಯಃ ಓಂ

ವಿಶೇಷದರ್ಶಿತಾ ಎನ್ನುವುದು ಪೂರ್ವಪಕ್ಷಯುಕ್ತಿ. ಯಾವನೋ ಒಬ್ಬ ಶಿಷ್ಯನಿಗೆ ಶ್ರೀಹರಿಯಲ್ಲಿ ಭಕ್ತಾದಿಗಳು ಇಲ್ಲದಿದ್ದರೂ ಗುರುಗಳ ಅನುಗ್ರಹದಿಂದ ಮೋಕ್ಷಕ್ಕೆ ಸಾಧನವಾದ ವಿಶೇಷಜ್ಞಾನವು ಆಗುವುದು. ದ್ವೇಷದಿಂದಲೂ ಮುಕ್ತಿ ಎಂಬ ವಿಶೇಷ

ದರ್ಶನವೂ ಪ್ರಸಿದ್ಧವು. ಆದ್ದರಿಂದ ಭಕ್ತ್ಯಾದಿಗಳು ಅನವಶ್ಯಕವೆಂದು ಪೂರ್ವಪಕ್ಷ.

ಆಗಮವು ಸಿದ್ಧಾಂತಯುಕ್ತಿ. 'ಭಕ್ತ್ಯೈವೈನಂ ಜಾನಾತಿ ಭಕ್ತ್ಯೈವೈನಂ ಪಶ್ಯತಿ ಭಕ್ತ್ಯೈವ ಬಂಧಾದ್ವಿಮುಚ್ಯತೇ' 'ಭಕ್ತ್ಯೈವಾನಂದೀ ಭವತಿ' ಇತ್ಯಾದಿ ಆಗಮಗಳಿಂದ ಭಕ್ತ್ಯಾದಿಗಳು ಅವಶ್ಯಕವೆಂದು ಸಿದ್ಧಾಂತ.

೩೨. ಪ್ರಜ್ಞಾಂತರಾಧಿಕರಣ: ಓಂ ಪ್ರಜ್ಞಾಂತರ ಪೃಥಕ್ತ್ವವತ್ ದೃಷ್ಟಿಶ್ಚ ತದುಕ್ತಂ ಓಂ

ಆಲಾಪವು ಪೂರ್ವಪಕ್ಷಯುಕ್ತಿ. 'ದೃಷ್ಟ್ಯೈವ ತಂ ಮುಚ್ಯತೇ ನಾ ಪರೇಣ' ಇತ್ಯಾದಿ ವಚನದಿಂದ ಭಗವಂತನ ದರ್ಶನದಿಂದಲೇ ಮೋಕ್ಷವೆಂದು ಹೇಳಿ ಅದರಲ್ಲಿ ತಾರತಮ್ಯನ್ನು ಹೇಳದೆ ಇರುವ ಪ್ರಯುಕ್ತ ಮುಕ್ತಿಯಲ್ಲಿ ತಾರತಮ್ಯವಿಲ್ಲ ಎಂದು ಪೂರ್ವಪಕ್ಷ.

ಸುಸ್ಥಿರತ್ವ ಎನ್ನುವುದು ಸಿದ್ಧಾಂತಯುಕ್ತಿ. 'ಯಥಾಯೋಗ್ಯಮೇವೈಷ ಆತ್ಮಾನಂ ದರ್ಶಯತಿ' ಇತ್ಯಾದಿ ಶ್ರುತಿಯಿಂದ ದರ್ಶನ ತಾರತಮ್ಯವು ಸುಸ್ಥಿರವಾದುದರಿಂದ ತಾರತಮ್ಯವು ಯುಕ್ತವೇ ಎಂದು ಸಿದ್ಧಾಂತ.

೩೩. ನ ಸಾಮಾನ್ಯಾಧಿಕರಣ: ಓಂ ನ ಸಾಮಾನ್ಯಾದಪ್ಯುಪಲಬ್ಧೇಃ ಮೃತ್ಯುವನ್ನ ಹಿ ಲೋಕಾಪತ್ತಿಃ ಓಂ

ಗುಣಸಾಮ್ಯವು ಪೂರ್ವಪಕ್ಷಯುಕ್ತಿ. ಭಗವಂತನ ಎಲ್ಲ ರೂಪಗಳಲ್ಲಿ ಗುಣ ಸಾಮ್ಯವಿರುವುದರಿಂದ ಯಾವುದೇ ಭಗವದ್ರೂಪದ ಸಾಕ್ಷಾತ್ಕಾರವೂ ಮುಕ್ತಿಗೆ ಕಾರಣವಾಗುವುದು. ಬಿಂಬರೂಪದ ದರ್ಶನದಿಂದಲೇ ಮುಕ್ತಿಯು ಎನ್ನುವುದು ಯುಕ್ತವಲ್ಲವೆಂದು ಪೂರ್ವಪಕ್ಷ.

ಕೃತಪ್ರಾಪ್ತಿಯು ಸಿದ್ಧಾಂತಯುಕ್ತಿ. ಎಲ್ಲ ಅಶ್ವಮೇಧಯಾಗಗಳೂ ಸಮಾನವೇ ಆಗಿದ್ದರೂ ತಾನು ಮಾಡಿದ ಯಾಗ ಮಾತ್ರ ತನಗೆ ಫಲಪ್ರದವಾಗುವಂತೆ, ಎಲ್ಲ ರೂಪಗಳು ಸಮಾನವಾಗಿದ್ದರೂ ಸ್ವಬಿಂಬರೂಪದರ್ಶನವೇ ತನಗೆ ಫಲಪ್ರದವೆಂದು ಶ್ರುತಿಗಳಿಂದ ತಿಳಿದುಬರುವುದು. ಆದ್ದರಿಂದ ಬಿಬೋಪಾಸನೆಯು ಅವಶ್ಯಕವೆಂದು ಸಿದ್ಧಾಂತ.

೩೪. ಪರೇಣಾಧಿಕರಣ: ಓಂ ಪರೇಣ ಚ ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬಂಧಃ ಓಂ

ಪೃಥಗ್ದೃಶಿಯು ಪೂರ್ವಪಕ್ಷಯುಕ್ತಿ. 'ಭಕ್ತಿರೇವೈನಂ ನಯತಿ' ಭಕ್ತಿಯೇ ಈ ಸಾಧಕನನ್ನು ಮೋಕ್ಷಕ್ಕೆ ಒಯ್ಯುತ್ತದೆ ಎಂಬ ಪ್ರಮಾಣದಂತೆ ಪ್ರತ್ಯೇಕವಾಗಿ ಭಕ್ತಿಗೇ ಮೋಕ್ಷಪ್ರದತ್ವವಿರುವುದರಿಂದ ಭಗವಂತನದ್ದೇನೂ ಕೃತ್ಯವಿಲ್ಲವೆಂದು ಪೂರ್ವಪಕ್ಷ.

ಅನಾದಿಗುಣವಿಸ್ತರ ಎನ್ನುವುದು ಸಿದ್ಧಾಂತಯುಕ್ತಿ. ಕೇವಲ ಭಕ್ತಿಯಿಂದಲೇ ಮೋಕ್ಷವೆನ್ನುವುದು ಸರಿಯಲ್ಲ. ಏಕೆಂದರೆ ಜೀವನಲ್ಲಿ ಅನಾದಿ ಕಾಲದಿಂದಲೂ

ಭಕ್ತಿಯು ಅವ್ಯಕ್ತವಾಗಿಯೇ ಇರುವುದು. ಭಗವಂತನು ತನ್ನ ಇಚ್ಛೆಯಿಂದ ಆ ಭಕ್ತಿಯು ವ್ಯಕ್ತವಾಗುವಂತೆ ಅನುಗ್ರಹಿಸಿ ಅದನ್ನು ನಿಮಿತ್ತ ಮಾಡಿಕೊಂಡು ಮೋಕ್ಷ ಕೊಡುವನು. ಆದ್ದರಿಂದ ಭಗವದನುಗ್ರಹವಿಲ್ಲದೆ ಮೋಕ್ಷವಿಲ್ಲವೆಂದು ಸಿದ್ಧಾಂತ.

೩೫. ಏಕಾಧಿಕರಣ: ಓಂ ಏಕ ಆತ್ಮನಃ ಶರೀರೇ ಭಾವಾತ್ ಓಂ

ಅಗಮ್ಯವರ್ತ್ಮ ಎನ್ನುವುದು ಪೂರ್ವಪಕ್ಷಯುಕ್ತಿ. ಅಂಶಿಯ ಜ್ಞಾನಾದಿಗಳು ಅಂಶದಲ್ಲಿ ಇಲ್ಲವಾದ್ದರಿಂದ ಅಂಶಿಯ ಮಾರ್ಗ ಅಂಶದಿಂದ ಅಗಮ್ಯವು. ಅಂಶ ಅಂಶಿಗಳಿಗೆ ಭೇದವು ಇಲ್ಲದೇ ಹೋದರೆ ಜ್ಞಾನಾದಿ ಭೇದವೂ ಇಲ್ಲದೇ ಹೋಗುವುದು. ಅಂಶಿಯ ಯೋಗ್ಯತೆ ಒಂದೊಂದು ಅಂಶದಲ್ಲಿಯೂ ಒಂದೊಂದು ಪ್ರಕಾರವಾಗುವುದು. ಆದ್ದರಿಂದ ಅನಾದಿ ಯೋಗ್ಯತೆ ಎನ್ನುವ ವ್ಯವಸ್ಥೆಯು ಇಲ್ಲದೇ ಹೋಗುವುದು. ಆದಕಾರಣ ಯೋಗ್ಯತೆಗೆ ಅನುಗುಣವಾಗಿ ಉಪಾಸನೆ ಎನ್ನುವುದು ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಸಾಧನೋತ್ತಮತಾ ಎನ್ನುವುದು ಸಿದ್ಧಾಂತಯುಕ್ತಿ. ಸಾಧನಗಳಲ್ಲಿ ಅದೃಷ್ಟಕ್ಕೆ ಉತ್ತಮತ್ವವಿದೆ. ಅಂಶಿಯ ಅದೃಷ್ಟದಿಂದ ನಿರ್ಮಿತವಾದ ಶರೀರವನ್ನು ಅಂಶನು ಪಡೆಯುತ್ತಾನೆ. ಈ ರೀತಿಯಲ್ಲಿ ಅಂಶ ಅಂಶಿಗಳಿಗೆ ಅಭೇದವಿದೆ. ಆದಕಾರಣ ಅಂಶನೂ ಅವನ ಸ್ವರೂಪಭೂತವಾದ ಅಂಶಿಯ ಯೋಗ್ಯತೆಯೂ ಅನಾದಿ ನಿತ್ಯವು ಎಂದೇ ಒಪ್ಪಬೇಕು. ಅಂಶದ ಸರ್ವವ್ಯಾಪಾರಗಳ ಅನುಭವವು ಅಂಶಿಗೆ ಇರುವುದು. ಆದರೆ ಭಗವಂತನ ಅಚಿಂತ್ಯ ಶಕ್ತಿಯಿಂದ ಅಂಶದ ಎಲ್ಲ ವ್ಯಾಪಾರಗಳ ಅನುಭವವು ಅಂಶಿಗೆ ಬರುವುದಿಲ್ಲ. ಆದರೆ ಅಂಶಿಗೆ ಉಂಟಾಗುವ ಬಿಂಬಾಪರೋಕ್ಷ ಮೊದಲಾದ ಪ್ರಧಾನ ಫಲಗಳು ಅಂಶಿಯ ಅನುಭವಕ್ಕೆ ಬರುತ್ತದೆ. ಆದಕಾರಣ ಅನಾದಿಯಾದ ಉಪಾಸನಾದಿಗಳಲ್ಲಿ ಅನಾದಿಯಾದ ಯೋಗ್ಯತಾಪೇಕ್ಷೆಯಿದೆ ಎಂದು ಸಿದ್ಧಾಂತ.

೩೬. ಅಂಗಾವಬದ್ಧಾಧಿಕರಣ: ಓಂ ಅಂಗಾವಬದ್ಧಾಸ್ತು ನ ಶಾಖಾಸು ಹಿ ಪ್ರತಿವೇದಂ ಓಂ

ಸಂಧಾನವು ಪೂರ್ವಪಕ್ಷಯುಕ್ತಿ. ಬ್ರಹ್ಮಾದಿ ದೇವತೆಗಳನ್ನು ಭಗವಂತನ ಪರಿವಾರವೆಂಬ ಅನುಸಂಧಾನ ಸಹಿತ ಭಗವಂತನನ್ನು ಉಪಾಸನೆ ಮಾಡಬೇಕು ಎಂದು ಹೇಳಲಾಗಿದೆ. ಅದು ಯುಕ್ತವಲ್ಲ. ಏಕೆಂದರೆ ದೇವತ್ವಾದಿ ಗುಣಗಳನ್ನು ಸಾಧಾರಣವಾಗಿ ಎಲ್ಲರಲ್ಲಿಯೂ ಅನುಸಂಧಾನ ಮಾಡುವುದರಿಂದ ಒಬ್ಬರ ಅಸಾಧಾರಣ ಗುಣಗಳನ್ನು ಮತ್ತೊಬ್ಬರಲ್ಲಿ ಅನುಸಂಧಾನ ಮಾಡಬೇಕಾದ ಪ್ರಸಂಗ ಬರುವುದು. ಆದಕಾರಣ ಬ್ರಹ್ಮಾದಿ ದೇವತೆಗಳನ್ನು ಭಗವಂತನ ಪರಿವಾರವೆಂದು ಉಪಾಸನೆ ಮಾಡಬಾರದು. ಕೇವಲ ಭಗವಂತನನ್ನು ಮಾತ್ರ ಉಪಾಸನೆ ಮಾಡಬೇಕು ಎಂದು ಪೂರ್ವಪಕ್ಷ.

ನಾನಾದೃಷ್ಟಿಯು ಸಿದ್ಧಾಂತಯುಕ್ತಿ. ವೇದದಲ್ಲಿ ಬ್ರಹ್ಮಾದಿ ಅಂಗದೇವತೆಗಳನ್ನು ಅವರವರ ತಾರತಮ್ಯಕ್ಕೆ ಅನುಸಾರವಾಗಿ ವಿಲಕ್ಷಣ ಗುಣಗಳನ್ನು ಉಳ್ಳವರಾಗಿ

ಪ್ರತಿಪಾದಿಸಲಾಗಿದೆ. ಅದೇರೀತಿಯಲ್ಲಿ ನಾನಾದೃಷ್ಟಿ ಅಂದರೆ ತಾರತಮ್ಯಾನುಸಾರ ಅವರನ್ನು ಉಪಾಸನೆ ಮಾಡಬೇಕು. ಅಧಮರ ಗುಣಗಳನ್ನು ಉತ್ತಮರಲ್ಲಿ ಉಪಾಸನೆ ಮಾಡಬಹುದು. ಆದರೆ ಉತ್ತಮರ ಗುಣಗಳನ್ನು, ಅವರಿಗಿಂತ ಯೋಗ್ಯತೆಯಲ್ಲಿ ನೀಚರಾದ, ಅಧಮರಲ್ಲಿ ಉಪಾಸನೆ ಮಾಡಬಾರದು. ದೇವತ್ವ ಯಜ್ಞಭೋಕ್ತೃತ್ವಾದಿ ಸಾಧಾರಣ ಗುಣಗಳನ್ನು ಎಲ್ಲ ದೇವತೆಗಳಲ್ಲಿಯೂ ಉಪಾಸನೆ ಮಾಡಬಹುದು. ಬ್ರಹ್ಮದೇವರ ಜೀವೋತ್ತಮತ್ವ ಇತ್ಯಾದಿ ಅಸಾಧಾರಣ ಗುಣಗಳನ್ನು ಎಲ್ಲರಲ್ಲಿಯೂ ಉಪಾಸನೆ ಮಾಡಬಾರದು ಎಂದು ಸಿದ್ಧಾಂತ.

೩೭. ಭೂಮ್ನಃಕ್ರತ್ವಧಿಕರಣ: ಓಂ ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾಚ ದರ್ಶಯತಿ ಓಂ

ಇಷ್ಟ ಫಲವು ಪೂರ್ವಪಕ್ಷಯುಕ್ತಿ. ಜೀವರಿಗೆ ಇಷ್ಟವಾದ ಆನಂದಾದಿ ಗುಣಗಳ ಉಪಾಸನೆಯಿಂದಲೇ ಅವರ ಸ್ವರೂಪಾನಂದಾಭಿವ್ಯಕ್ತಿ ಮುಂತಾದ ಇಷ್ಟಫಲಗಳು ಲಭಿಸುತ್ತವೆ. ಭೂಮವೆಂಬ (ಪೂರ್ಣತ್ವ) ಗುಣವನ್ನು ಉಪಾಸನೆ ಮಾಡುವುದರಿಂದ ಲಭಿಸುವ ಫಲದಲ್ಲಿ ವಿಶೇಷವೇನೂ ಇರುವುದಿಲ್ಲ. ಆದಕಾರಣ ಭೂಮತ್ವ ಗುಣದ ಉಪಾಸನೆ ಮಾಡಬೇಕಿಲ್ಲ ಎಂದು ಪೂರ್ವಪಕ್ಷ.

ಶಿಷ್ಟಿ ಎನ್ನುವುದು ಸಿದ್ಧಾಂತಯುಕ್ತಿ. 'ಭೂಮೈವ ದೇವಃ ಪರಮೋ ಹ್ಯುಪಾಸ್ಯ ನೈವಾಭೂಮಾ ಫಲಮೇಷಾಂ ವಿಧತ್ತೇ' ಪರಮಾತ್ಮನನ್ನು ಪೂರ್ಣಾನಂದ ಪೂರ್ಣ ಜ್ಞಾನ ಇತ್ಯಾದಿ ಭೂಮತ್ವರೂಪದಿಂದ ಉಪಾಸನೆ ಮಾಡದಿದ್ದರೆ ಪರಮಾತ್ಮನು ಫಲವನ್ನು ನೀಡುವುದಿಲ್ಲವಾದ್ದರಿಂದ ಭೂಮತ್ವ ಗುಣವನ್ನು ಸರ್ವರೂ ಉಪಾಸನೆ ಮಾಡಬೇಕು ಎಂಬುದಾಗಿ ಶ್ರುತಿಯು ಶಾಸನ ಮಾಡಿದೆ. ಆದಕಾರಣ ಸರ್ವರೂ ಭೂಮತ್ವವನ್ನು ಉಪಾಸನೆ ಮಾಡಬೇಕು ಎಂದು ಸಿದ್ಧಾಂತ.

೩೮. ನಾನಾಶಬ್ದಾಧಿಕರಣ: ಓಂ ನಾನಾ ಶಬ್ದಾದಿ ಭೇದಾತ್ ಓಂ

ಅಕಲ್ಪನಾ ಎನ್ನುವುದು ಪೂರ್ವಪಕ್ಷಯುಕ್ತಿ. ಭೂಮತ್ವದಲ್ಲಿ ನಾನಾಪ್ರಕಾರ ಗಳನ್ನು ಕಲ್ಪನೆ ಮಾಡಲು ಅವಕಾಶವಿಲ್ಲ. ಆದ್ದರಿಂದ ಬ್ರಹ್ಮದೇವರು ಉಪಾಸನೆ ಮಾಡುವ ಭೂಮತ್ವವನ್ನೇ ಬೇರೆಯವರೂ ಉಪಾಸನೆ ಮಾಡಬೇಕು. ಆದಕಾರಣ ಹಿಂದೆ ಹೇಳಿದ ಅಧಿಕಾರಿ ತಾರತಮ್ಯವು ಕೂಡುವುದಿಲ್ಲ ಎಂದು ಪೂರ್ವಪಕ್ಷ.

ಅನೂನತಾ ಎನ್ನುವುದು ಸಿದ್ಧಾಂತಯುಕ್ತಿ. ಅನೂನತಾ ಎಂದರೆ ಯೋಗ್ಯತೆಗೆ ಅನುಗುಣವೆಂದರ್ಥ. 'ಯಾವಾನೇವಾಧಿಕಾರೇಷು ವಿಶೇಷೋ೨ನೂನ ಏವ ಹಿ । ತತೋ ಭೂಮತ್ವ ದೃಷ್ಟೌ ಚ ಬ್ರಹ್ಮಾದೀನಾಂ ಪೃಥಕ್ ಪೃಥಕ್' ಎಂಬ ವಚನದಿಂದ ಅಧಿಕಾರಿಗಳು ಅವರವರ ಯೋಗ್ಯತಾನುಗುಣವಾದ ಭೂಮತ್ವವನ್ನು ಉಪಾಸನೆ ಮಾಡಬೇಕು ಎಂದು ಸಿದ್ಧಾಂತ.

೩೯. ವಿಕಲ್ಪಾಧಿಕರಣ: ಓಂ ವಿಕಲ್ಪೋ ವಿಶಿಷ್ಟಫಲವತ್ತ್ವಾತ್ ಓಂ

ಶುದ್ಧವೈರೂಪ್ಯವು ಪೂರ್ವಪಕ್ಷಯುಕ್ತಿ. ಶುದ್ಧ ಎಂದರೆ ಮೋಕ್ಷಸಾಧನವಾದ ಬಿಂಬ ರೂಪ. ಅದಕ್ಕೆ ವೈರೂಪ್ಯವಾದುದು ಎಂದರೆ ಬಿಂಬ ರೂಪಕ್ಕಿಂತ ಇತರವಾದ ಭಗವದ್ರೂಪಗಳು. ಮುಮುಕ್ಷುಗಳು ಬಿಂಬರೂಪಕ್ಕಿಂತ ಬೇರೆಯಾದ ಭಗವದ್ ರೂಪಗಳನ್ನು ಉಪಾಸನೆ ಮಾಡುವ ಅವಶ್ಯಕತೆಯಿಲ್ಲವೆಂದು ಪೂರ್ವಪಕ್ಷ.

ಅವಿಘ್ನತ್ವವು ಸಿದ್ಧಾಂತಯುಕ್ತಿ. ಮೋಕ್ಷಸಾಧನ ಬಿಂಬರೂಪೋಪಾಸನೆಯ ಅನಂತರವೂ ವಿಶಿಷ್ಟ ಮೋಕ್ಷಕ್ಕೆ ಪ್ರತಿಬಂಧಕವಾದ ದುರಿತವನ್ನು ನಿವಾರಿಸಲಿಕ್ಕಾಗಿ ಬಿಂಬಾತಿರಿಕ್ತವಾದ ನರಸಿಂಹಾದಿ ರೂಪಗಳನ್ನು ಉಪಾಸನೆ ಮಾಡಬೇಕು ಎಂದು ಸಿದ್ಧಾಂತ.

೪೦. ಕಾಮ್ಯಾಧಿಕರಣ: ಓಂ ಕಾಮ್ಯಾಸ್ತು ಯಥಾಕಾಮಂ ಸಮುಚ್ಚೀಯೇರನ್ ನ ವಾ ಪೂರ್ವಹೇತ್ವಭಾವಾತ್ ಓಂ

ಅಂಗತ್ವವು ಪೂರ್ವಪಕ್ಷಯುಕ್ತಿ. ಮೋಕ್ಷಕ್ಕೆ ಅಂಗಭೂತವಾದುದು ಗುರುಗಳ ಅನುಗ್ರಹ. ಅದಕ್ಕೆ ಅವಶ್ಯಕವಾದ ಧನಕನಕಾದಿಗಳನ್ನು ಸಂಪಾದಿಸಲು ಶ್ರೀಕರಾದಿ ಭಗವದ್ರೂಪಗಳನ್ನು ಉಪಾಸನೆ ಮಾಡಬೇಕು ಎಂದು ಪೂರ್ವಪಕ್ಷ.

ಅವಿರೋಧವು ಸಿದ್ಧಾಂತಯುಕ್ತಿ. ಕಾಮ್ಯೋಪಾಸನೆ ಮಾಡದಿದ್ದರೆ ಮೋಕ್ಷಕ್ಕೆ ಏನೂ ವಿರೋಧವಿಲ್ಲ. ಧನಾಪೇಕ್ಷೆ ಇತ್ಯಾದಿಗಳಿಲ್ಲದೆಯೇ ಗುರುವಿನ ಅನುಗ್ರಹ ಸಂಪಾದಿಸಬಹುದು. ಶ್ರೀಹರಿಯ ಪ್ರಸಾದಕ್ಕಾಗಿ ಉಪಾಸನೆಯೇ ಹೊರತು ಕಾಮ್ಯ ಫಲಕ್ಕಾಗಿ ಅಲ್ಲ ಎಂದು ಸಿದ್ಧಾಂತ.

೪೧. ಅಂಗಾಧಿಕರಣ: ಓಂ ಅಂಗೇಷು ಯಥಾಶ್ರಯಭಾವಃ ಓಂ

ಅವಿಶೇಷದೃಶೇಃ ಎನ್ನುವುದು ಪೂರ್ವಪಕ್ಷಯುಕ್ತಿ. ಬ್ರಹ್ಮಾದಿ ದೇವತೆಗಳು ಭಗವಂತನ ಶಿರಸ್ಸು ಇತ್ಯಾದಿ ಅಂಗಗಳನ್ನು ಆಶ್ರಯಿಸಿರುತ್ತಾರೆ ಎಂದು ಉಪಾಸನೆ ಮಾಡಲು ದೇವತೆಗಳು ಮಾತ್ರ ಅಧಿಕಾರಿಗಳು ಎಂಬ ವಿಶೇಷವಚನವಿಲ್ಲ ಹಾಗೂ ಇತರರಿಗೆ ಅದರಲ್ಲಿ ಅಧಿಕಾರವಿಲ್ಲ. ಆದಕಾರಣ ಅಂಗದೇವತೋಪಾಸನೆಗೆ ದೇವತೆಗಳೇ ಅಧಿಕಾರಿಗಳು ಎನ್ನವುದು ಅಯುಕ್ತವೆಂದು ಪೂರ್ವಪಕ್ಷ.

ಗುಣವೈಶೇಷ್ಯವು ಸಿದ್ಧಾಂತಯುಕ್ತಿ. ಮುಕ್ತಿಯಲ್ಲಿ ಭಗವಂತನ ಆಯಾಯ ಅಂಗ ಗಳಲ್ಲಿ ಆಶ್ರಯಿಸಿರುವಿಕೆ ಆಯಾಯ ದೇವತೆಗಳ ವಿಶೇಷಗುಣವಾಗಿದೆ. ಮುಕ್ತಿಯಲ್ಲಿ ನನಗೆ ಭಗವಂತನ ಈ ಅಂಗವು ಆಶ್ರಯವು ಎಂದು ಉಪಾಸನೆ ಮಾಡುವುದರಿಂದ ಆಯಾ ದೇವತೆಗಳಿಗೆ ವಿಶಿಷ್ಟ ಫಲವಿರುವುದು. ಆದಕಾರಣ ದೇವತೆಗಳಿಗೆ ಮಾತ್ರ ಅಂಗದೇವತೋಪಾಸನೆಗೆ ಅಧಿಕಾರವೆಂದು ಸಿದ್ಧಾಂತ.

೪೨. ನ ಪಾಧಿಕರಣ: ಓಂ ನ ವಾ ತತ್ಸಹಭಾವಾತ್ ಶ್ರುತೇಃ ಓಂ

ಕ್ರಿಯಾ ಎನ್ನುವುದು ಪೂರ್ವಪಕ್ಷಯುಕ್ತಿ. ಅಂಗದೇವತಾ ಉಪಾಸನೆಯು

ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ
ಬಿ ಟ್ಟಿ ಗಿ

ಕರ್ತವ್ಯವಾದರೆ, ಅದೂ ಒಂದು ಕ್ರಿಯೆಯಾದ್ದರಿಂದ, ಯಾಗಾದಿ ಕ್ರಿಯೆಗಳನ್ನು ವಿಧಿಸುವಾಗ ಅಗ್ನಿಷ್ಟೋಮೇನ ಯಜೇತ ಎಂದು ಯಾಗವನ್ನು ಹೇಳಿದಂತೆ ಎಲ್ಲ ಶಾಖೆಯಲ್ಲಿಯೂ ಉಪಾಸನಾ ವಿಧಿವಾಕ್ಯದಲ್ಲಿ 'ಚಕ್ಷೋಸ್ಸೂರ್ಯೋ ಅಜಾಯತ' ಇತ್ಯಾದಿ ಅಂಗಾಶ್ರಿತತ್ವವನ್ನು ಹೇಳಬೇಕಿತ್ತು. ಆದರೆ ಹಾಗೆ ಹೇಳಿಲ್ಲವಾದ್ದರಿಂದ ಅಂಗಾಶ್ರಿತತ್ವವನ್ನು ಉಪಾಸನೆ ಮಾಡಬೇಕಿಲ್ಲ ಎಂದು ಪೂರ್ವಪಕ್ಷ.

ಆಗಮ ಎನ್ನುವುದು ಸಿದ್ಧಾಂತಯುಕ್ತಿ. 'ಉಪಾಸನಂ ಯಜನಂ ಚೇತಿ ಸಾಮ್ಯಂ ತತ್ತದ್ವಿಶೇಷಾನ್ ಸಂಹರೇತ್ಸರ್ವತಶ್ಚ ತಥಾ ಕರ್ತ್ರಾಣಾಂ ತತ್ಫಲಾನಾಂ ವಿಶೇಷಾದ್ ವ್ಯರ್ಥಾಃ ಹಿ ಶಾಖಾ ಅನ್ಯಥೈವಂ ಚ ಸಾರ್ಥಾಃ' ಅಂಗಾಶ್ರಿತತ್ವಾದಿಗಳು ಯಾವ ಯಾವ ಶಾಖೆಗಳಲ್ಲಿ ಉಕ್ತವಾಗಿವೆಯೋ ಆಯಾ ಶಾಖೆಗಳಿಂದ ಅವುಗಳನ್ನು ಉಪಸಂಹಾರ ಮಾಡಿ ಉಪಾಸನೆ ಮಾಡಬೇಕು. ಇಲ್ಲದಿದ್ದರೆ ಆಯಾ ಶಾಖೆಗಳಲ್ಲಿ ಹೇಳಿದ್ದು ವ್ಯರ್ಥವಾಗುತ್ತದೆ ಎಂದು ಆಗಮ ವಚನವಿದೆ. ಆದಕಾರಣ ಆಯಾ ಅದಿಕಾರಿಗಳು ಅಂಗಾಶ್ರಿತತ್ವವನ್ನು ಉಪಾಸನೆ ಮಾಡಬೇಕು. ಈ ರೀತಿ ಉಪಾಸನೆ ಎಲ್ಲರಿಗೂ ಇಲ್ಲವೆಂಬ ಅಭಿಪ್ರಾಯದಿಂದ ವಿಧಿವಾಕ್ಯದಲ್ಲಿ ಹೇಳಿಲ್ಲವೆಂದು ಸಿದ್ಧಾಂತ.

ಸರ್ವವೇದಾಧಿಕರಣಮ್

ಓಂ ಸರ್ವವೇದಾಂತಪ್ರತ್ಯಯಂ ಚೋದನಾದ್ಯವಿಶೇಷಾತ್ ಓಂ

ಧ್ಯಾನರೂಪವಾದ ಉಪಾಸನೆಯು ಈ ಅಧಿಕರಣದ ವಿಷಯ. ಅಧ್ಯಯನ ಶ್ರವಣ ಮನನಗಳಿಂದ ಕೇವಲ ತಮ್ಮ ತಮ್ಮ ಶಾಖೆಗಳನ್ನಷ್ಟೇ ತಿಳಿಯಬೇಕೋ ಅಥವಾ ಎಲ್ಲ ವೇದಗಳನ್ನೂ ತಿಳಿಯಬೇಕೋ ಎಂದು ಸಂಶಯ. ಶಾಖಾಭೇದವು ಅತಿಪ್ರಸಿದ್ಧವಾದ ಪ್ರಯುಕ್ತ ಮೊದಲನೆಯ ಪಕ್ಷವೇ ಉತ್ತಮ ಎಂದು ಪೂರ್ವಪಕ್ಷ. 'ಸರ್ವವೇದಾಂತ ಪ್ರತ್ಯಯಂ' ಸರ್ವ ಶಾಖೆಗಳನ್ನೂ ಅಧ್ಯಯನ ಮಾಡಬೇಕು ಎಂದು ಸಿದ್ಧಾಂತ. ಅದರಲ್ಲಿ ಸರ್ವ ಶಬ್ದವು ಅಸಂಕುಚಿತವೃತ್ತಿಯಿಂದ ಹೇಳಲ್ಪಟ್ಟಿದೆ ಎಂದರೆ, ಅದನ್ನು ನಿರಾಕರಿಸುವುದಕ್ಕಾಗಿ 'ಯಥಾಶಕ್ತಿ' ಇತ್ಯಾದಿ ವಚನದಿಂದ ವ್ಯಾಖ್ಯಾನ ಮಾಡುತ್ತಾರೆ –

ಯಥಾಶಕ್ತ್ಯಖಿಲಾನ್ ವೇದಾನ್ವಿಜ್ಞಾಯೋಪಾಸನಂ ಭವೇತ್ ।
ತತ್ರಾಖಿಲಸ್ಯ ವಿಜ್ಞಪ್ತಿಃ ಸಮ್ಯಗ್ಬ್ರಹ್ಮಣ ಏವ ಹಿ ॥ ೬೮ ॥
ತದನ್ಯೇಷಾಂ ಯಥಾಯೋಗಮಖಿಲಜ್ಞಪ್ತಿರಿಷ್ಯತೇ ।

ತನ್ನ ಶಕ್ತಿ ಅಥವಾ ಯೋಗ್ಯತೆಗೆ ಅನುಸಾರವಾಗಿ ಎಲ್ಲ ವೇದಗಳನ್ನು ತಿಳಿದು ಉಪಾಸನೆಯನ್ನು ಮಾಡತಕ್ಕದ್ದು. ಆ ಉಪಾಸಕರಲ್ಲಿ ಚೆನ್ನಾಗಿ ಅಖಿಲ ವೇದಗಳ ವಿಜ್ಞಾನವು ಬ್ರಹ್ಮನಿಗೆ ಮಾತ್ರ ಸಾಧ್ಯವು. ಇತರರಿಗೆ ಅವರವರ ಯೋಗ್ಯತಾನುಸಾರ ಸರ್ವವೇದಜ್ಞಾನವು ಆಗುವುದೆಂದು ಅಂಗೀಕರಿಸಲ್ಪಡುತ್ತದೆ.

ಹಾಗಾದರೆ 'ಸರ್ವೈಶ್ಚ ವೇದೈಃ ಪರಮೋ ಹಿ ದೇವೋ ಜಿಜ್ಞಾಸ್ಯೋ೨ಸೌ ನಾಲ್ಪವೇದೈಃ ಪ್ರಸಿದ್ಧ್ಯೇತ್' ಇತ್ಯಾದಿ ಶ್ರುತಿಯಿಂದ ಅಲ್ಪವೇದಜ್ಞನಿಗೆ ಪರಬ್ರಹ್ಮನ ಉಪಾಸನೆಗೆ ಯೋಗ್ಯವಾದ ವಿಜ್ಞಾನ ಸಂಪತ್ತಿಯು ಕೂಡುವುದಿಲ್ಲ. ಆದ್ದರಿಂದ ಸೂತ್ರಗತ ಸರ್ವ ಶಬ್ದಕ್ಕೆ ಮುಖ್ಯಾರ್ಥವನ್ನೇ ಹೇಳಬೇಕು. ಅಲ್ಪಜ್ಞರಾದ ನಮ್ಮಂಥವರಿಗೆ ಈ ಜನ್ಮದಲ್ಲಿ ಸರ್ವವೇದಜ್ಞಾನವು ಅಸಂಭವ. ಹಾಗಿದ್ದರೂ ಯಾವ ಜನ್ಮದಲ್ಲಿ ಅದು ಸಂಭವನೀಯವೋ ಅಂಥಹ ಜನ್ಮವನ್ನು ಕಲ್ಪಿಸಬೇಕು ಎಂದರೆ –

ತಾವತೋಪಾಸನೇ ಯೋಗ್ಯೋ ಭವೇದೇವಾಖಿಲಃ ಪುಮಾನ್ ॥ ೬೯ ॥

ಎಲ್ಲ ಜನರೂ ತಮ್ಮ ಶಕ್ತಿಗೆ ಅನುಸಾರವಾದ ವಿಜ್ಞಾನದಿಂದಲೇ ಧ್ಯಾನರೂಪ ಉಪಾಸನೆಯಲ್ಲಿ ಯೋಗ್ಯರೇ ಆಗುವರು.

ಯಥಾಶಕ್ತಿ ವೇದಜ್ಞಾನವು ಭಗವದುಪಾಸನೆಗೆ ಉಪಯುಕ್ತವು, ಸರ್ವವೇದ ಜ್ಞಾನವು ಅವಶ್ಯಕವಲ್ಲ ಎನ್ನುವಲ್ಲಿ ಪುರಾಣವಾಕ್ಯವನ್ನೂ ಪಠಿಸುತ್ತಾರೆ –

ಮಹತ್ತ್ವಸ್ಯ ಪರಂ ಪಾರಂ ವಿದಿತ್ವೈವ ಜನಾರ್ದನಃ ।

ಸ್ತೋಷ್ಯತಾಮೇತಿ ತುಷ್ಟತ್ವಮಿತಿ ನಾಸ್ತ್ಯೇವ ನಾರದ ॥ ೭೦ ॥

ಕಿಂತು ನಿಶ್ಚಲಯಾ ಭಕ್ತ್ಯಾ ಹ್ಯಾತ್ಮಜ್ಞಾನಾನುರೂಪತಃ ।

ಯಃ ಸ್ತೋಷ್ಯತಿ ಸದಾ ಭಕ್ತಸ್ತುಷ್ಟಸ್ತಸ್ಯ ಸದಾ ಹರಿಃ ॥ ೭೧ ॥

ಇತ್ಯಾದಿ ವಾಕ್ಯಸಂದರ್ಭಾದ್ಯಥಾಯೋಗ್ಯಾಖಿಲಜ್ಞತಾ ।

ಆತ್ಮಜ್ಞಾನಾನುರೂಪತ್ವಂ ಯಥಾಶಕ್ತಿವಿಚಾರಣಾತ್ ॥ ೭೨ ॥

ಎಲೈ ನಾರದನೇ, ಭಗವಂತನು ತನ್ನ ಮಹತ್ವದ ಆಚೆಯ ದಡವನ್ನು ತಿಳಿದವನಿಂದ (ಅಂದರೆ ಸರ್ವವೇದಗಳನ್ನು ತಿಳಿದವನಿಂದ) ಮಾತ್ರ ಸ್ತೋತ್ರವನ್ನು ಮಾಡಿಸಿಕೊಳ್ಳುತ್ತಾನೆ ಹಾಗೂ ಅದರಿಂದ ಮಾತ್ರ ಸಂತುಷ್ಟನಾಗುತ್ತಾನೆ ಹೀಗೆ ನಿಯಮವು ಇಲ್ಲವೇ ಇಲ್ಲ. ಕಿಂತು ನಿಶ್ಚಲವಾದ ದೃಢವಾದ ಭಕ್ತಿಯಿಂದ ತನ್ನ ಯೋಗ್ಯತೆಗೆ ಅನುಸಾರವಾಗಿ ಸದಾ ಸ್ತೋತ್ರವನ್ನು ಮಾಡುವ ಭಕ್ತನಿಗೆ ಶ್ರೀಹರಿಯು ಸದಾ ಸಂತುಷ್ಟನಾಗುತ್ತಾನೆ. ಇದೇ ಮೊದಲಾದ ವಾಕ್ಯಗಳ ಸಂದರ್ಭದಿಂದ ಯಥಾ ಯೋಗ್ಯವಾದ ಸರ್ವವೇದಜ್ಞತ್ವವು ಧ್ಯಾನೋಪಾಸನೆಗೆ ಉಪಯುಕ್ತವೆಂದು ತಿಳಿದು ಬರುತ್ತದೆ. ಇಲ್ಲಿ ಆತ್ಮಜ್ಞಾನವೆಂದರೆ ಆತ್ಮಯೋಗ್ಯಜ್ಞಾನವೆಂದೇ ಅರ್ಥ. ಆ ಆತ್ಮ ಯೋಗ್ಯಜ್ಞಾನಕ್ಕೆ ಅನುರೂಪತ್ವವು ಯಥಾಶಕ್ತಿ ವೇದವಿಚಾರಣೆಯಿಂದ ಆಗುವುದು.

ಯಾವುದಕ್ಕಾಗಿ ಸರ್ವವೇದಜ್ಞಾನ ಎಂದರೆ ಅದಕ್ಕೆ ಉತ್ತರವಾಗಿ ಚೋದನಾದ್ಯ ವಿಶೇಷಾತ್ ಎಂದು ಹೇಳಿದರು. ಅಲ್ಲಿ ಶಾಖಾಭೇದಗಳು ಸುಪ್ರಸಿದ್ಧವಾದುದರಿಂದ ಚೋದನಾದಿಗಳೂ ಕೂಡ ವಿಶೇಷಪರವೆಂದು ವ್ಯಾಖ್ಯಾನ ಮಾಡತಕ್ಕದ್ದು ಎಂದರೆ,

'ಓಂ ಸ್ವಾಧ್ಯಾಯಸ್ಯ. ತಥಾತ್ವೇನ ಹಿ ಸಮಾಚಾರೇ೨ಧಿಕಾರಾಚ್ಚೇತಿ ಓಂ' ಎನ್ನುವ ಸೂತ್ರದಿಂದ ಸೂತ್ರಕಾರರು ಯುಕ್ತ್ಯಂತರವನ್ನು ಹೇಳಿದರು. ಅದರಲ್ಲಿ 'ಹಿ' ವರೆಗಿನ ಸೂತ್ರಖಂಡವನ್ನು 'ವೇದ' ಎಂಬ ವಚನದಿಂದ ವ್ಯಾಖ್ಯಾನಿಸುತ್ತಾರೆ –

ವೇದಃ ಕೃತ್ಸ್ನೋ೨ಧಿಗಂತವ್ಯಃ ಸ್ವಾಧ್ಯಾಯಾಧ್ಯಯನಂ ಭವೇತ್ ।

ಇತ್ಯಾದಿ ವಾಕ್ಯವೈಯರ್ಥ್ಯಮನ್ಯಥಾ ನ ನಿವಾರ್ಯತೇ ॥ ೭೩ ॥

ವೇದಃ ಎಂದು 'ವೇದಃ ಕೃತ್ಸ್ನೋ೨ಧಿಗಂತವ್ಯಃ ಸರಹಸ್ಯೋ ದ್ವಿಜನ್ಮನಾ' ಎನ್ನುವ ಸ್ಮೃತಿಯನ್ನೂ, ಸ್ವಾಧ್ಯಾಯ ಎಂದು 'ಸ್ವಾಧ್ಯಾಯೋ೨ಧ್ಯೇತವ್ಯಃ' ಎನ್ನುವ ಶ್ರುತಿಯನ್ನೂ ಸ್ಮರಿಸುತ್ತಾರೆ. ಕೇವಲ ತಮ್ಮ ತಮ್ಮ ಶಾಖೆಗಳ ಜ್ಞಾನವನ್ನು ಮಾತ್ರ ಅಂಗೀಕರಿಸಿದರೆ, ದ್ವಿಜನಾದವನು ಸಮಸ್ತ ವೇದವನ್ನೂ ಹೊಂದತಕ್ಕದ್ದು, ವೇದಾಧ್ಯಯನವು ಕರ್ತವ್ಯ ಇತ್ಯಾದಿ ಶಾಸ್ತ್ರವಾಕ್ಯಗಳಿಗೆ ಬರುವ ವೈಯರ್ಥ್ಯವನ್ನು ನಿವಾರಿಸಲಾಗುವುದಿಲ್ಲ.

ಸಮಾಚಾರೇ೨ಧಿಕಾರಾಚ್ಚ ಎಂಬ ಸೂತ್ರಖಂಡವನ್ನು ವ್ಯಾಖ್ಯಾನಿಸುತ್ತಾರೆ –

ಅದ್ಯಾಪಿ ತೇನ ದೇವಾದ್ಯಾಃ ಶೃಣ್ವತೇ ಮನ್ಯತೇ ಸದಾ ।

ಧ್ಯಾಯಂತಿ ಚ ಯಥಾಯೋಗ್ಯಂ ..... ॥

ಸರ್ವವಿಜ್ಞಾನವು ಅವಶ್ಯಕವೆನ್ನುವ ಕಾರಣದಿಂದಲೇ ದೇವಾದಿಗಳು ಈಗಲೂ ಕೂಡ ಸದಾಕಾಲವೂ ಯಥಾಯೋಗ್ಯವಾಗಿ ಶ್ರವಣ ಮಾಡುತ್ತಾರೆ, ಮನನ ಮಾಡುತ್ತಾರೆ ಹಾಗೂ ಧ್ಯಾನವನ್ನೂ ಮಾಡುತ್ತಾರೆ.

ದೇವತೆಗಳಿಗೆ ಬ್ರಹ್ಮಸಾಕ್ಷಾತ್ಕಾರವಾದ ನಂತರವೂ ಈಗಲೂ ಶ್ರವಣಾದಿಗಳನ್ನು ಮಾಡುತ್ತಿರುವರು ಎನ್ನುವುದಾದರೆ, ಆ ಶ್ರವಣಾದಿಗಳಿಗೆ ನಿರವಧಿಕತ್ವವು ಬರುವುದು ಎಂದರೆ –

..... ತಥಾ೨ಪ್ಯವಸ್ತುನಿರ್ಣಯಮ್ ॥ ೭೪ ॥

ಶ್ರವಣಂ ಮನನಂ ಚೈವ ಕರ್ತವ್ಯಂ ಸರ್ವದೈವ ಹಿ ।

ಹಾಗಿದ್ದರೂ ಪರಬ್ರಹ್ಮಾದಿ ವಸ್ತುನಿರ್ಣಯವಾಗುವ ಪರ್ಯಂತ (ಅಂದರೆ ಪರೋಕ್ಷವಾಗಿ ಯಥಾರ್ಥವಾದ ನಿಶ್ಚಯವಾಗುವವರೆಗೆ) ಸರ್ವದಾ ಸರ್ವಪ್ರಕಾರದಿಂದಲೂ ಶ್ರವಣವೂ, ಮನನವೂ ಕೂಡ ಕರ್ತವ್ಯವೇ ಆಗಿದೆ. ಹಿ ಶಬ್ದವು ಶ್ರವಣಾದಿಗಳಿಗೆ ವಸ್ತುನಿರ್ಣಯ ಹೇತುತ್ವವನ್ನು ಸೂಚಿಸುತ್ತದೆ.

ವಸ್ತುನಿರ್ಣಯ ಪರ್ಯಂತ ಶ್ರವಣ ಮನನದಲ್ಲಿ ಕರ್ತವ್ಯತ್ವವನ್ನು ಹೇಳುವುದು ಅಯುಕ್ತವು. ಏಕೆಂದರೆ ನಿರ್ಣಯಿಸಲ್ಪಟ್ಟ ಅರ್ಥದಲ್ಲಿಯೂ ಕಾರಣಾಂತರಗಳಿಂದ ಪುನಃ ಸಂಶಯಾದಿಗಳು ಕಂಡುಬರಬಹುದು. ಆದ್ದರಿಂದ ವಸ್ತುನಿರ್ಣಯವಾಗಿದೆ

ಎನ್ನುವುದನ್ನೇ ನಿಶ್ಚಯಿಸಲು ಅಶಕ್ಯವು ಎಂದರೆ –

ಮತಿಶ್ರುತಿಧ್ಯಾನಕಾಲವಿಶೇಷಂ ಗುರುರುತ್ತಮಃ ।। ೭೫ ।।

ವೇತ್ತಿ ತಸ್ಯೋಕ್ತಮಾರ್ಗೇಣ ಕುರ್ವತಃ ಸ್ಯಾದ್ಧಿ ದರ್ಶನಮ್ ।

ಮನನ, ಶ್ರವಣ, ಧ್ಯಾನ, ಕಾಲ ಇವುಗಳ ವಿಶೇಷವನ್ನು ಉತ್ತಮ ಗುರುವು, ಅಂದರೆ ಶಿಷ್ಯನ ಯೋಗ್ಯತೆಯನ್ನು ತಿಳಿದಿರುವ ಗುರುವು, ತಿಳಿಯುತ್ತಾನೆ. ಅಂಥ ಗುರುವು ಉಪದೇಶಿಸಿದ ಮಾರ್ಗದಲ್ಲಿ ಶ್ರವಣಾದಿಗಳನ್ನು ಮಾಡುವವನಿಗೆ ಬ್ರಹ್ಮ ದರ್ಶನವು ಆಗುವುದು.

ಹಾಗಿದ್ದರೂ ದೇವತೆಗಳು ಈಗಲೂ ಶ್ರವಣಾದಿಗಳನ್ನು ಮಾಡುತ್ತಿರುತ್ತಾರೆ ಎನ್ನುವುದು ಅಯುಕ್ತವು. ಏಕೆಂದರೆ ಶ್ರವಣಾದಿಗಳು ತತ್ವದರ್ಶನಕ್ಕೆ ಸಾಧನವೆಂದು ಹೇಳಲಾಗಿದೆ. ದೇವಾದಿಗಳಿಗೆ ತತ್ವದರ್ಶನವು ಸ್ವಾಭಾವಿಕವೆನ್ನುವ ವಿಷಯದಲ್ಲಿ 'ನೈವ ದೇವಪದಂ ಪ್ರಾಪ್ತಾ ಬ್ರಹ್ಮದರ್ಶನವರ್ಜಿತಾಃ' ಇತ್ಯಾದಿ ಪ್ರಮಾಣವಿದೆ. ಸಾಧ್ಯವನ್ನು ಹೊಂದಿದಮೇಲೆ ಸಾಧನಾನುಷ್ಠಾನವು ಕೂಡುವುದಿಲ್ಲ ಎಂದರೆ –

ಶ್ರವಣಂ ದೃಷ್ಟತತ್ವಸ್ಯ ಮನನಂ ಧ್ಯಾನಮೇವ ಚ ।। ೭೬ ।।

ವಿಶೇಷಾನಂದ ಸಂಪ್ರಾಪ್ತ್ಯೈ ಅನ್ಯಸ್ಯೈತಾನಿ ದೃಷ್ಟಯೇ ।

ಬ್ರಹ್ಮದರ್ಶನವಾದವನಿಗೂ ವಿಶೇಷವಾದ ಆನಂದ ಪ್ರಾಪ್ತಿಗಾಗಿ ಶ್ರವಣ ಮನನ ಧ್ಯಾನಗಳು ಯುಕ್ತವೇ ಆಗಿದೆ. ಇನ್ನೂ ತತ್ವದರ್ಶನವಿಲ್ಲದವನಿಗೆ ಶ್ರವಣಾದಿಗಳು ಆ ದರ್ಶನಕ್ಕೋಸ್ಕರ ಸಾಧನವಾಗುತ್ತವೆ.

ಶಿಷ್ಯಯೋಗ್ಯತೆಯನ್ನು ತಿಳಿದ ಗುರುವಿನ ಉಪದೇಶಾನುಸಾರ ಶ್ರವಣಾದಿಗಳು ಕರ್ತವ್ಯ ಎನ್ನುವುದು ಅಯುಕ್ತವು. ಏಕೆಂದರೆ ಅಂಥ ಗುರುವು ದುರ್ಲಭವಾದ್ದರಿಂದ ಶ್ರವಣಾದಿಗಳೇ ಅನುಪಪನ್ನವಾಗುವುದು. ಹೀಗೆ ಆಶಂಕಿಸಿದರೆ –

ಯದಿ ತಾದೃಗ್ಗುರುರ್ನಾಸ್ತಿ ನಿರ್ಣೀತಶ್ರವಣಾದಿಕಮ್ ।। ೭೭ ।।

ತಸ್ಸಿದ್ಧಾಂತಾನುಸಾರೇಣ ನಿರ್ಣಯಜ್ಞಾತ್ ಸಮಾಚರೇತ್ ।

ಒಂದುಪಕ್ಷ ಶಿಷ್ಯನ ಯೋಗ್ಯತೆಯನ್ನು ಅರಿತ ಮುಖ್ಯ ಗುರುವು ಸಿಗದಿದ್ದರೂ, ಶ್ರವಣಾದಿಗಳು ಇಲ್ಲವೆಂದಾಗುವುದಿಲ್ಲ. ನಿರ್ಣೀತವಾದ ಬ್ರಹ್ಮಸೂತ್ರಾದಿ ಶಾಸ್ತ್ರಗಳ ಶ್ರವಣದಿಂದ ಸರ್ವಜ್ಞರ ಸಿದ್ಧಾಂತವನ್ನು ಅನುಸರಿಸಿ ನಿರ್ಣಯವನ್ನು ತಿಳಿದಿರುವ ಅಮುಖ್ಯ ಗುರುಗಳಿಂದ ಉಪದೇಶ ಪಡೆದು ಶ್ರವಣಾದಿಗಳನ್ನು ಮಾಡಬೇಕು. ಅನಂತರ ಮುಖ್ಯಗುರುವೂ ಲಭ್ಯವಾಗಿ ಬ್ರಹ್ಮದರ್ಶನಕ್ಕೆ ಕಾರಣವಾಗುವುದು.

ಸರ್ವಜ್ಞರಾದ ಗುರುಗಳಿಂದ ಶ್ರವಣಾದಿಗಳನ್ನು ಮಾಡುವುದೇ ಬ್ರಹ್ಮದರ್ಶನಕ್ಕೆ ಮುಖ್ಯಕಾರಣವಾದರೆ, ಅಂಥ ಗುರುವು ಸಿಗದಿದ್ದರೆ, ಶ್ರವಣಾದಿಗಳ ಅಭಾವನ್ನೇ

ಅಂಗೀಕರಿಸಬಹುದಲ್ಲ? ಸರ್ವಜ್ಞರಾದ ಗುರುಗಳ ಪ್ರಾಪ್ತಿಗೆ ಅಮುಖ್ಯ ಗುರುವಿನಿಂದ ಶ್ರವಣಾದಿಗಳನ್ನೇ ಏಕೆ ಮಾಡಬೇಕು? ಕೇವಲ ಪುಣ್ಯದಿಂದಲೇ ಅಂಥ ಗುರುವು ಲಭ್ಯನಾಗಬಹುದು ಎಂದರೆ –

ಶ್ರವಣಾದಿ ವಿನಾ ನೈವ ಕ್ಷಣಂ ತಿಷ್ಠೇದಪಿ ಕ್ವಚಿತ್ ॥ ೭೮ ॥

ಅತ್ಯಶಕ್ಯೇ ತು ನಿದ್ರಾದೌ ಪುನರೇವ ಸಮಾಚರೇತ್ ।

'ಸ್ವಾಧ್ಯಾಯಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ' ಇತ್ಯಾದಿ ಶ್ರುತಿಸ್ಮೃತಿಗಳು ಯಾವಕಾಲಕ್ಕೂ ಒಂದು ಕ್ಷಣವಾದರೂ ಶ್ರವಣಾದಿಗಳನ್ನು ಬಿಟ್ಟು ಸುಮ್ಮನೆ ಕಾಲಹರಣ ಮಾಡತಕ್ಕದ್ದಲ್ಲ ಎಂದು ಹೇಳುತ್ತಿವೆ. ಶ್ರವಣಾದಿಗಳನ್ನು ಸರ್ವಜ್ಞರಾದ ಗುರುಗಳಿಂದ ಮಾಡಬೇಕು ಎನ್ನುವುದೂ ಸರಿಯೇ. ಆದರೂ ಅಂಥ ಗುರುಗಳು ಸಿಗದಿದ್ದರೆ 'ಗುಣೇ ತ್ವನ್ಯಾಯಕಲ್ಪನಾ' ಎನ್ನುವ ನ್ಯಾಯದಿಂದ ಹೇಗಾದರೂ ಶ್ರವಣಾದಿಗಳನ್ನು ಮಾಡಲೇಬೇಕು. ನಿದ್ರಾದಿಗಳನ್ನು ತಪ್ಪಿಸುವಂತಿಲ್ಲವಾದ್ದರಿಂದ ನಿರಂತರವಾಗಿ ಒಂದ ಕ್ಷಣವನ್ನೂ ಬಿಡದೇ ಶ್ರವಣಾದಿಗಳು ಅಶಕ್ಯವು ಎಂದರೆ – ಪರಿಹರಿಸಲು ಅಶಕ್ಯವೇ ಆದ ನಿದ್ರಾದಿಗಳು ಪ್ರಾಪ್ತವಾದರೆ, ಆ ಶ್ರಮವನ್ನು ಪರಿಹರಿಸಿಕೊಂಡು ತಕ್ಷಣವೇ ಮತ್ತೆ ಶ್ರವಣಾದಿಗಳಲ್ಲಿ ತೊಡಗಬೇಕು.

ಅಭಾವೇ ನಿರ್ಣಯಜ್ಞಸ್ಯ ತಚ್ಛಾಸ್ತ್ರಾಣ್ಯೇವ ಸರ್ವದಾ ॥ ೭೯ ॥

ಶ್ರುಣುಯಾದ್ಯದಿ ಸಜ್ಞಾನಪ್ರಾಚುರ್ಯಮುಪಲಭ್ಯತೇ ।

ನಿರ್ಣಯವನ್ನು ತಿಳಿದಿರುವ ಗುರುಗಳು ಸಿಗದಿದ್ದರೂ, ಸದಾ ಸಚ್ಛಾಸ್ತ್ರಗಳನ್ನೇ ಶ್ರವಣ ಮಾಡಬೇಕು. ಹಾಗಾದರೆ ಯಾರಿಂದಲಾದರೂ ಶ್ರವಣವನ್ನು ಮಾಡಬಹುದೇ ಎಂದರೆ ಹಾಗೆ ಹೇಳಕೂಡದು. ಯಾರು ತನಗಿಂತ ಹೆಚ್ಚಿಗೆ ಜ್ಞಾನವನ್ನು ಹೊಂದಿರುತ್ತಾರೋ ಅಂಥವರಿಂದಲೇ ಶ್ರವಣ ಮಾಡಬೇಕು.

ತನಗಿಂತ ಜ್ಞಾನದಲ್ಲಿ ಅಧಿಕನೂ ಹಾಗೂ ಚೆನ್ನಾಗಿ ವ್ಯಾಖ್ಯಾನ ಮಾಡತಕ್ಕವನೂ ಆದ ಪುರುಷನು ಸಿಗದಿದ್ದರೆ ಏನು ಮಾಡಬೇಕು ಎಂದರೆ –

ಮಹದ್ಭ್ಯೋ ವಿಷ್ಣುಭಕ್ತೇಭ್ಯೋ ಯಥಾಶಕ್ತಿ ಚ ಸಂಶಯಾನ್ ॥ ೮೦ ॥

ಛಿಂದ್ಯಾತ್ ಸ್ವತೋಽಧಿಕಾಭಾವೇ ಸ್ವಯಮೇವ ಸಮಭ್ಯಸೇತ್ ।

ಬ್ರೂಯಾದಪಿ ಚ ಶಿಷ್ಯೇಭ್ಯಃ ಸತ್ಸಿದ್ಧಾಂತಮಪಾಹಯನ್ ॥ ೮೧ ॥

ತನ್ನಿಂದ ಜ್ಞಾನದಿಂದಾಗಲೀ ವಿಷ್ಣುಭಕ್ತಿಯಿಂದಾಗಲೀ ಶ್ರೇಷ್ಠರಾದ ವಿಷ್ಣು ಭಕ್ತರ ದೆಶೆಯಿಂದ ಯಥಾಶಕ್ತಿ ತನ್ನ ಸಂದೇಹಗಳನ್ನು ನಾಶಮಾಡಿಕೊಳ್ಳಬೇಕು. ಏಕೆಂದರೆ ವಿಷ್ಣುಭಕ್ತ್ಯಾದಿಗಳಿಂದ ಸಂಪನ್ನರಾದವರು ಅದೇ ಪ್ರಕಾರವಾಗಿ ಆದರವು ಹುಟ್ಟುವ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ತನಗಿಂತ ಅಧಿಕನು ಸಿಗದಿದ್ದರೆ ತಾನಾಗಿಯೇ

ಚೆನ್ನಾಗಿ ಅಭ್ಯಾಸ ಮಾಡಬೇಕು. ಸತ್ಸಿದ್ಧಾಂತವನ್ನು ಬಿಡದೆ, ಅಂದರೆ ನಿರ್ದುಷ್ಟವಾದ ಪ್ರಾಮಾಣಿಕವಾದ ಶಾಸ್ತ್ರದ ಅಭಿಪ್ರಾಯಕ್ಕೆ ವಿರೋಧವಾಗದಂತೆ, ತಾನೂ ಗಟ್ಟಿ ಮಾಡಿಕೊಳ್ಳುವುದಲ್ಲದೆ, ಶಿಷ್ಯರಲ್ಲಿಯೂ ಸಹ ಸತ್ಸಿದ್ಧಾಂತವು ದೃಢವಾಗಿ ಮನದಟ್ಟಾಗುವ ರೀತಿಯಲ್ಲಿ ಸಿದ್ಧಾಂತವನ್ನು ಹೇಳಬೇಕು.

ಅವಶ್ಯವಾಗಿ ಧಾರಣೆ ಮಾಡತಕ್ಕ ಅಂಥಹ ಸತ್ಸಿದ್ಧಾಂತವು ಪರ ಮತ್ತು ಅಪರ ಎಂಬುದಾಗಿ ಎರಡು ವಿಧ. ಅವೆರಡರಲ್ಲಿಯೂ ಪ್ರತ್ಯೇಕವಾಗಿ ವಾಚನಿಕ ಮತ್ತು ಆನುಷಂಗಿಕ ಎಂಬುದಾಗಿ ಎರಡು ವಿಧ. ಅದರಲ್ಲಿ ವಾಚನಿಕವಾದ ಪರ ಸತ್ಸಿದ್ಧಾಂತವನ್ನು ತಿಳಿಸುತ್ತಾರೆ –

ಅಶೇಷಗುಣಪೂರ್ಣತ್ವಂ ಸರ್ವದೋಷಮುಜ್ಝಿತಿಃ ।

ವಿಷ್ಣೋರನ್ಯಚ್ಚ ತತ್ತಂತ್ರಮಿತಿ ಸಮ್ಯಗ್ ವಿನಿರ್ಣಯಃ ॥ ೮೨ ॥

ವಿಷ್ಣುವಿಗೆ ಸರ್ವಗುಣಪರಿಪೂರ್ಣತ್ವ ಹಾಗೂ ಸರ್ವದೋಷರಹಿತತ್ವ, ಇತರ ಎಲ್ಲಕ್ಕೂ ಆ ವಿಷ್ಣುವಿನ ಅಧೀನತ್ವ, ಹೀಗೆ ಚೆನ್ನಾಗಿ ನಿರ್ಣಯಿಸಲ್ಪಡುವುದೇ ವಾಚನಿಕವಾದ ಪರ ಸತ್ಸಿದ್ಧಾಂತ. ಎಲ್ಲಕ್ಕೂ ವಿಷ್ಣುವಿನ ಅಧೀನತ್ವವನ್ನು ಹೇಳಿದ್ದರಿಂದ ವಿಷ್ಣುವಿಗೆ ಸಕಲ ಜಗಜ್ಜನ್ಮಾದಿಕಾರಣತ್ವವು ಸಿದ್ಧಿಸುತ್ತದೆ.

ಈಗ ಆನುಷಂಗಿಕವಾದ ಪರ ಸತ್ಸಿದ್ಧಾಂತವನ್ನು ತಿಳಿಸುತ್ತಾರೆ –

ಸ್ವತಂತ್ರತ್ವಂ ಸದಾ ತಸ್ಯ ತಸ್ಯ ಭೇದಶ್ಚ ಸರ್ವತಃ ।

ಅದೋಷತ್ವಸ್ಯ ಸಿದ್ಧ್ಯರ್ಥಂ ಯದಭೇದೇ ತದನ್ವಯಃ ॥ ೮೩ ॥

ಆ ವಿಷ್ಣುವಿಗೆ ಯಾವಾಗಲೂ ಸ್ವತಂತ್ರತ್ವ (ಅಂದರೆ ಸಮಸ್ತ ಜೀವಜಡಾತ್ಮಕ ಪ್ರಪಂಚದ ಸತ್ತಾದಿ ಎಲ್ಲಕ್ಕೂ ವಿಷ್ಣುವಿನ ಅಧೀನತ್ವ) ಹಾಗೂ ಪ್ರಕೃತಿ ಜೀವ ಜಡಗಳ ದೆಶೆಯಿಂದ ಆತ್ಯಂತಿಕ ಭಿನ್ನತ್ವ, ಹೀಗೆ ತಿಳಿಯುವುದೇ ಆನುಷಂಗಿಕವಾದ ಪರಸತ್ಸಿದ್ಧಾಂತ. ಹೀಗೆ ಅಂಗೀಕರಿಸುವುದರಿಂದ ವಿಷ್ಣುವಿಗೆ ಅದೋಷತ್ವವು, ಉಪ ಲಕ್ಷಣದಿಂದ ಅಶೇಷಗುಣಪೂರ್ಣತ್ವ, ಸಕಲಜಗಜ್ಜನ್ಮಾದಿಕಾರಣತ್ವಗಳು ಸಿದ್ಧಿಸುತ್ತವೆ. ಹಾಗಲ್ಲದೆ ಜಗತ್ತಿಗೆ ವಿಷ್ಣುವಿನಿಂದ ಅಭೇದವೂ ಅಸ್ವಾತಂತ್ರ್ಯವೂ ಇದ್ದರೆ, ಆಗ ವಿಷ್ಣುವಿಗೆ ಜಗತ್ತಿನ ದೋಷಗಳ ಸಂಬಂಧವೂ, ಗುಪೂರ್ಣತ್ವದ ಅಭಾವವೂ ಕೂಡ ಪ್ರಸಕ್ತವಾಗುತ್ತದೆ.

ಅನ್ಯತ್ತಂತ್ರಂ ಎನ್ನುವಲ್ಲಿ ಅನ್ಯಶಬ್ದವು ಅಮುಕ್ತರಿಗೆ ಸಂಬಂಧಿಸಿದ್ದು, ಮುಕ್ತರಿಗಲ್ಲ ಎಂಬ ಶಂಕೆ ಬಂದರೆ ಅದನ್ನು ಪರಿಹರಿಸುತ್ತಾರೆ –

ತತ್ತಂತ್ರತ್ವಂ ಚ ಮುಕ್ತಾನಾಮಪಿ ತದ್ಗುಣಪೂರ್ತಯೇ ।

ಮುಕ್ತಾನಾಮಪಿ ಭೇದಶ್ಚ ..... ॥

ಶ್ರೀಹರಿಯ ಗುಣಪೂರ್ಣತ್ವದ ಸಿದ್ಧಿಗಾಗಿ ಮಕ್ತರಿಗೂ ಕೂಡ ಶ್ರೀಹರಿಯ ಅಧೀನತ್ವವನ್ನು ಅಂಗೀಕರಿಸಬೇಕು. ಮುಕ್ತರಿಗೂ ಕೂಡ ಶ್ರೀಹರಿಯಿಂದ ಅತ್ಯಂತ ಭೇದವೂ ಇರತಕ್ಕದ್ದೇ. ಮುಕ್ತರಿಗೆ ಶ್ರೀಹರಿಯಿಂದ ಅಭೇದವಿದ್ದರೆ, ಶ್ರೀಹರಿಯ ಅಧೀನತ್ವವು ಸಿದ್ಧಿಸುವುದಿಲ್ಲ. ಇದರಿಂದ ಶ್ರೀಹರಿಯ ಗುಣಪೂರ್ಣತ್ವಕ್ಕೆ ಭಂಗವು. ಆದ್ದರಿಂದ ಮುಕ್ತರಿಗೂ ಶ್ರೀಹರಿಯಿಂದ ಭೇದವನ್ನು ಅಂಗೀಕರಿಸಬೇಕು.

ಇದನ್ನೇ ಉಪಪಾದಿಸುತ್ತಾರೆ –

..... ನ ಹಿ ಭಿನ್ನಮಭಿನ್ನತಾಂ ।। ೮೪ ।।

ಗಚ್ಛತ್ ದೃಷ್ಟಂ ಕ್ವಚಿತ್ತಸ್ಯಾಪ್ಯಭಾವೋ೭ನುಭವೋಪಗಃ ।

ಒಂದು ಕಾಲದಲ್ಲಿ ಭೇದವುಳ್ಳದ್ದು ಮತ್ತೊಂದು ಕಾಲದಲ್ಲಿ ಅಭೇದತ್ವವನ್ನು ಹೊಂದುವುದೆಂದು ಎಲ್ಲಿಯೂ ಕಂಡಿಲ್ಲ. ಅಮುಕ್ತರಿಗೂ ಪರಮಾತ್ಮನಿಗೂ ಭೇದವು ಎನ್ನುವುದು ಪ್ರತ್ಯಕ್ಷಾನುಭವಸಿದ್ಧವು. ಹೀಗೆ ಮೊದಲು ಭಿನ್ನರಾದವರಿಗೆ ಮುಕ್ತಿಯಲ್ಲಿ ಶ್ರೀಹರಿಯಿಂದ ಅಭೇದವೆನ್ನುವುದು ಕೂಡುವುದಿಲ್ಲ. ಭಿನ್ನವಾದುದು ಅಭಿನ್ನತ್ವವನ್ನು ಹೊಂದುವುದಿಲ್ಲ ಎನ್ನುವುದು ಅನುಭವಸಿದ್ಧವೂ ಆಗಿದೆ.

ಹಾಗಾದರೆ ಸಂಸಾರದಲ್ಲಿಯೂ ಅಭಿನ್ನರಾದವರಿಗೇ ಮುಕ್ತಿಯಲ್ಲಿ ಅಭೇದವು ಬರುವುದಾದರೆ, ಹಾಗೆಯೇ ಏಕೆ ಅಂಗೀಕರಿಸಬಾರದು ಎಂದರೆ –

ಪೂರ್ವಾಭೇದೇ ದೋಷವತ್ವಮೀಶಸ್ಯೇತ್ಯತಿಭಿನ್ನತಾ ।। ೮೫ ।।

ನಾರಾಯಣೇನ ಮುಕ್ತಾನಾಮಪಿ ಸಮ್ಯಗಿತಿ ಸ್ಥಿತಿಃ ।

ಮುಕ್ತಿಯ ಪೂರ್ವದಲ್ಲಿ ಅಂದರೆ ಸಂಸಾರದಲ್ಲಿ ಅಭೇದವಿದ್ದರೆ, ಸಂಸಾರವು ದುಃಖಾದಿರೂಪವಾದುದರಿಂದ, ಶ್ರೀಹರಿಗೂ ದೋಷವತ್ವವು ಬರಬೇಕಾಗುವುದು. ಆದಕಾರಣ ಮುಕ್ತರಿಗೂ ಕೂಡ ಶ್ರೀಹರಿಯಿಂದ ಅತ್ಯಂತಭೇದವೆಂಬುದು ಚೆನ್ನಾಗಿ ನಿರ್ಣೀತವಾದ ಸ್ಥಿತಿಯು. ಅಂದರೆ ಆನುಷಂಗಿಕವಾದ ಪರ ಸತ್ಸಿದ್ಧಾಂತವು.

ಹಾಗಾದರೆ ಭೇದಾಭೇದವು ಕೂಡುವುದರಿಂದ ಅತ್ಯಂತ ಭೇದವನ್ನು ಏಕೆ ಅಂಗೀಕರಿಸಬೇಕು ಎಂದರೆ –

ಭೇದಾಭೇದೇ೭ಪ್ಯಭೇದೇನ ದೋಷಾಣಾಮಪಿ ಸಂಭವಃ ।। ೮೬ ।।

ಭೇದದಿಂದ ಸಹಿತವಾದ ಅಭೇದವನ್ನು ಸಂಸಾರದಲ್ಲಿಯೂ ಅಂಗೀಕರಿಸಬೇಕು. ಆಗ ಅಭೇದದಿಂದ ಹಿಂದೆ ಹೇಳಿದ ದೋಷಗಳೂ ಕೂಡ ಪ್ರಾಪ್ತವಾಗುತ್ತವೆ. ಆದರೆ ಭೇದವನ್ನು ಅಂಗೀಕರಿಸಿದರೆ ಆ ದೋಷಗಳು ಬರುವುದಿಲ್ಲ. ಆದಪ್ರಯುಕ್ತ ಸಂಸಾರದಲ್ಲಿಯೂ ಮುಕ್ತಿಯಲ್ಲಿಯೂ ಅತ್ಯಂತ ಭೇದವನ್ನೇ ಅಂಗೀಕರಿಸತಕ್ಕದ್ದು.

ಈಗ ಅಪರಸಿದ್ಧಾಂತವನ್ನು ಹೇಳುತ್ತಾರೆ –

ನಿರ್ದೋಷತ್ವಂ ರಮಾಯಾಶ್ಚ ತದನಂತರತಾ ತಥಾ ।

ಬ್ರಹ್ಮಾ ಸರಸ್ವತೀ ವೀಂದ್ರಶೇಷರುದ್ರಾಶ್ಚ ತತ್ ಸ್ತ್ರಿಯಃ ॥ ೮೭ ॥

ಶಕ್ರಕಾಮೌ ತದನ್ಯೇ ಚ ಕ್ರಮಾನ್ಮುಕ್ತಾವಪೀತಿ ಚ ।

ಸತ್ಸಿದ್ಧಾಂತ ಇತಿ ಜ್ಞೇಯೋ ನಿರ್ಣೀತೋ ಹರಿಣಾ ಸ್ವಯಂ ॥ ೮೮ ॥

ಪರಮೇಶ್ವರನಂತೆ ಲಕ್ಷ್ಮೀದೇವಿಗೂ ನಿರ್ದೋಷತ್ವವು ಇದೆ. ಆದರೂ ಪರಮೇಶ್ವರನ ಅಧೀನತ್ವವೂ ಇರುವುದು. ಲಕ್ಷ್ಮೀದೇವಿಗೆ ಭಗವಂತನೊಬ್ಬನಿಂದಲೇ ಅವರತ್ವವು. ಚತುರ್ಮುಖ ಬ್ರಹ್ಮ, ಸರಸ್ವತೀ ದೇವಿ, ಗರುಡ–ಶೇಷ–ರುದ್ರರೂ ಕೂಡ, ಅವರುಗಳ ಪತ್ನಿಯರಾದ ಸೌಪರ್ಣ್ಯಾದಿಗಳೂ, ಇಂದ್ರಕಾಮರು, ಹಾಗೂ ಇತರ ದೇವತೆಗಳೂ ಕೂಡ ಮೇಲೆ ಹೇಳಿದ ತಾರತಮ್ಯ ಕ್ರಮದಿಂದಲೇ ಮುಕ್ತಿಯಲ್ಲಿಯೂ ಸಂಸಾರದಲ್ಲಿಯೂ ಶ್ರೀಹರಿಯ ಅಧೀನರಾಗಿಯೇ ಇರುವರು. ಹೀಗೆಯೇ ಜಗತ್ಸತ್ಯತ್ವಾದಿಗಳೂ ಅಪರಸಿದ್ಧಾಂತದಲ್ಲಿಯೇ ಗ್ರಾಹ್ಯವು. ಅಶೇಷಗುಣ ಪೂರ್ಣತ್ವಾದಿಗಳು ಸತ್ಸಿದ್ಧಾಂತವೆನ್ನುವುದು ಹೇಗೆಂದರೆ, ಇದು ಸೂತ್ರಕಾರರಿಂದ ಸಾಕ್ಷಾತ್ತಾಗಿ ನಿರ್ಣಯಿಸಲ್ಪಟ್ಟಿದೆ. ಬಲಾತ್ಕಾರದಿಂದ ಸೂತ್ರಾರ್ಥವಾಗಿ ಕಲ್ಪಿತವಲ್ಲ.

ಹಿಂದೆ 'ಸತ್ಸಿದ್ಧಾಂತಮಪಾಹಯನ್' ಎಂದು ಉಕ್ತವಾಗಿದೆ. ಸತ್ಸಿದ್ಧಾಂತವನ್ನು ಬಿಡುವುದರಿಂದ ದೋಷವೇನು ಎಂದರೆ –

ಏತದ್ವಿರೋಧಿ ಯತ್ಸರ್ವಂ ತಮಸೇಂऽಧಾಯ ಕೇವಲಂ ।

ಅಂಧಂತಮೋ ವಿಶಂತೀತಿ ಪ್ರಾಹ ಶ್ರುತಿರತಿಸ್ಫುಟಂ ॥ ೮೯ ॥

ಮೇಲೆ ಹೇಳಿದ ಸತ್ಸಿದ್ಧಾಂತಕ್ಕೆ ವಿರುದ್ಧವಾಗಿ ತಿಳಿಯಲ್ಪಡುವ ಎಲ್ಲವೂ ಅಂಧಂ ತಮಸ್ಸಿಗೇ ಕಾರಣವಾಗುವುದು. ಎಂದಿಗೂ ಅದು ಸುಖಕ್ಕೆ ಕಾರಣವಾಗದು. ಏಕೆಂದರೆ 'ಅಂಧಂತಮಃ ಪ್ರವಿಶಂತಿ ಯೇऽವಿದ್ಯಾಮುಪಾಸತೇ' ಹೀಗೆ ಶ್ರುತಿಯು ಅತ್ಯಂತ ಸ್ಪಷ್ಟವಾಗಿ ಹೇಳುತ್ತದೆ. ಪ್ರಾಮಾಣಿಕವಾದ ಸತ್ಸಿದ್ಧಾಂತಕ್ಕೆ ವಿರುದ್ಧವಾದುದೇ ಅವಿದ್ಯೆಯು.

ಹಾಗಾದರೆ ಪ್ರಕೃತವಾದ ಸಿದ್ಧಾಂತಕ್ಕೆ ಪ್ರಾಮಾಣಿಕತ್ವವು ಹೇಗೆ ಎಂದರೆ –

ಇತ್ಯೇವ ಶ್ರುತಯೋऽಶೇಷಾಃ ಪಂಚರಾತ್ರಮಥಾಖಿಲಂ ।

ಮೂಲರಾಮಾಯಣಂ ಚೈವ ಭಾರತಂ ಸ್ಮೃತಯೋऽಖಿಲಾಃ ॥ ೯೦ ॥

ವೈಷ್ಣವಾನಿ ಪುರಾಣಾನಿ ಸಾಂಖ್ಯಯೋಗೌ ಪರಾವಪಿ ।

ಬ್ರಹ್ಮತರ್ಕಶ್ಚ ಮೀಮಾಂಸೇತ್ಯನಂತಃ ಶಬ್ದಸಾಗರಃ ॥ ೯೧ ॥

ಅನಂತಾ ಯುಕ್ತಯಶ್ಚೈವ ಪ್ರತ್ಯಕ್ಷಾಗಮಮೂಲಕಾಃ ।

ಪ್ರತ್ಯಕ್ಷಮೈಶ್ವರಂ ಚೈವ ರಮಾದೀನಾಮಶೇಷತಃ ॥ ೯೨ ॥

ಮುಕ್ತಾನಾಮಪ್ಯಮುಕ್ತಾನಾಮೇತಮೇವಾರ್ಥಮುತ್ತಮಂ ।

ಅನ್ಯಾವಕಾಶರಹಿತಂ ಪ್ರಕಾಶಯತಿ ಸಾದರಮ್ ॥ ೯೩ ॥

ಮೇಲೆ ಹೇಳಿದ ಪ್ರಕಾರವಾಗಿಯೇ ಎಲ್ಲ ಶ್ರುತಿಗಳೂ, ಜೀವರ ಉತ್ಪತ್ತಿ ಇತ್ಯಾದಿ ಗಳನ್ನು ಪ್ರತಿಪಾದಿಸತಕ್ಕ ಸಮಸ್ತ ಪಂಚರಾತ್ರಾಗಮವೂ, ಮೂಲರಾಮಾಯಣವೂ (ಅವಾಂತರ ರಾಮಾಯಣವನ್ನು ವ್ಯಾವರ್ತನೆ ಮಾಡಲು ಏವ ಶಬ್ದವು), ಮಹಾ ಭಾರತವೂ, ಎಲ್ಲ ಸ್ಮೃತಿಗಳೂ, ವೈಷ್ಣವಪುರಾಣಗಳೂ, ಪ್ರಾಚೀನವಾದ ಸಾಂಖ್ಯ ಹಾಗೂ ಯೋಗ ಶಾಸ್ತ್ರಗಳೂ, ಬ್ರಹ್ಮತರ್ಕವೂ, ಮೂರುವಿಧವಾದ ಮೀಮಾಂಸಾ ಶಾಸ್ತ್ರವೂ (ಕರ್ಮ, ದೈವೀ ಹಾಗೂ ಬ್ರಹ್ಮ ಮೀಮಾಂಸಾ) ಇತ್ಯಾದಿ ಅನಂತವಾದ ಶಬ್ದಸಮೂಹವು ಮೇಲೆ ಹೇಳಿದ ಸತ್ಸಿದ್ಧಾಂತವನ್ನೇ ಪ್ರಕಾಶಿಸುತ್ತವೆ. ಪ್ರತ್ಯಕ್ಷ ಹಾಗೂ ಆಗಮಗಳೇ ಮೂಲವಾದ ಅಸಂಖ್ಯ ಯುಕ್ತಿಗಳೂ ಇದನ್ನೇ ಪ್ರಕಾಶಿಸುತ್ತವೆ. ಈಶ್ವರ ಸಂಬಂಧಿಯಾದ ಪ್ರತ್ಯಕ್ಷವೂ ಕೂಡ (ಏವ ಶಬ್ದದಿಂದ ಈಶ್ವರಪ್ರತ್ಯಕ್ಷಕ್ಕೆ ಪ್ರಾಬಲ್ಯವನ್ನು ಸೂಚಿಸುತ್ತಾರೆ) ಲಕ್ಷ್ಮೀದೇವಿಯಿಂದ ಮೊದಲ್ಗೊಂಡು ಎಲ್ಲ ಮುಕ್ತರ ಹಾಗೂ ಅಮುಕ್ತರ ಪ್ರತ್ಯಕ್ಷವೂ ಕೂಡ ಇದೇ ಶ್ರೇಷ್ಠವಾದ ಅರ್ಥವನ್ನು ಇತರ ಅವಕಾಶವು ಇಲ್ಲದಂತೆ ತಾತ್ಪರ್ಯಪೂರ್ವಕವಾಗಿ ಪ್ರಕಾಶಿಸುತ್ತವೆ.

ಈ ಪ್ರಕಾರವಾಗಿ ಸತ್ಸಿದ್ಧಾಂತವನ್ನು ಬಿಡದೇ ಶ್ರವಣಾದಿಗಳನ್ನು ಮಾಡಬೇಕೆಂದು ಹೇಳಲ್ಪಟ್ಟಿತು. ಅದರಲ್ಲಿ ಯಾವಾಗಲೂ ಸಚ್ಛಾಸ್ತ್ರಗಳನ್ನೇ ಶ್ರವಣ ಮಾಡಬೇಕೆಂದು ಹೇಳಿದ್ದನ್ನು ಈಗ ವಿವರಿಸುತ್ತಾರೆ –

ಏತದೇವ ಚ ಸಚ್ಛಾಸ್ತ್ರಂ ದುಃಶಾಸ್ತ್ರಂ ತು ತತಃ ಪರಮ್ ।

ಸಚ್ಛಾಸ್ತ್ರಮಭ್ಯಸೇನ್ನಿತ್ಯಂ ದುಶ್ಶಾಸ್ತ್ರ ತು ಪರಿತ್ಯಜೇತ್ ॥ ೯೪ ॥

ಮೇಲೆ ಹೇಳಲ್ಪಟ್ಟ ವೇದಾದಿಗಳೇ ಸಚ್ಛಾಸ್ತ್ರಗಳು. ಅದಕ್ಕೆ ವಿರುದ್ಧವಾದುದೂ ಉದಾಸೀನವಾದುದೂ ದುಶ್ಶಾಸ್ತ್ರವು. ನಿತ್ಯವೂ ಸಚ್ಛಾಸ್ತ್ರವನ್ನೇ ಅಭ್ಯಾಸಮಾಡಬೇಕು. ದುಶ್ಶಾಸ್ತ್ರಗಳಾದರೂ, ಹೇಯವಾದ್ದರಿಂದ, ನಿತ್ಯದಲ್ಲಿಯೂ ಪರಿತ್ಯಜಿಸಲೇ ಬೇಕು.

ಹಾಗಾದರೆ ಸಚ್ಛಾಸ್ತ್ರವನ್ನೇ ಅಭ್ಯಾಸ ಮಾಡಬೇಕೆಂದು ಹೇಳುವ ಮೂಲಕ ಶ್ರವಣ ಮನನಗಳಿಗೆ ಕರ್ತವ್ಯತ್ವವನ್ನು ಹೇಳಿದ್ದು ಅಯುಕ್ತವು. ಏಕೆಂದರೆ ಕೇವಲ ನಿಧಿಧ್ಯಾಸನದಿಂದಲೇ ಬ್ರಹ್ಮಸಾಕ್ಷಾತ್ಕಾರವು ಕೂಡುವುದು ಎಂದರೆ –

ಅಸಂಶಯೇನ ತತ್ವಸ್ಯ ನಿರ್ಣಯೇ ಬ್ರಹ್ಮದರ್ಶನಂ ।

ಸಂಶಯ ವಿಪರ್ಯಯಗಳು ನಾಶವಾಗಿ ಯಥಾರ್ಥವಾದ ತತ್ವನಿರ್ಣಯವು ಉಂಟಾದಾಗ ನಿಧಿಧ್ಯಾಸನದಿಂದ ಬ್ರಹ್ಮದರ್ಶನವಾಗುವುದು. (ಪರಬ್ರಹ್ಮನನ್ನು ಕುರಿತು ನಿರಂತರವಾದ ಅನುಚಿಂತನವೇ ನಿಧಿಧ್ಯಾಸನವು. ಏನೂ ಗೊತ್ತಿಲ್ಲದ

ವಿಷಯದ ಬಗ್ಗೆ ಅನುಚಿಂತನವು ಸಾಧ್ಯವಿಲ್ಲ. ಆದ್ದರಿಂದ ಪರಬ್ರಹ್ಮ ಸ್ವರೂಪವನ್ನು ಅರಿಯುವುದಕ್ಕಾಗಿ ಶ್ರವಣ ಮನನಗಳು ಅವಶ್ಯಕವು ಎಂದು ತಾತ್ಪರ್ಯ.)

ಹಾಗಾದರೆ ಯಥಾಶಕ್ತಿ ಶ್ರವಣಮನನಗಳನ್ನು ಅವಶ್ಯವಾಗಿ ಮಾಡಬೇಕೆಂದು ಹೇಳಿದ್ದು ಅಯುಕ್ತವು. ಪುರುಷಶಕ್ತಿಯಲ್ಲಿನ ತಾರತಮ್ಯದಿಂದ ಶ್ರವಣ ಮನನಗಳಿಗೂ ತಾರತಮ್ಯವು ಸಂಭವಿಸುವುದು. ಸಾಧ್ಯವಾದ ಫಲವು (ಶ್ರವಣಾದಿಗಳ ಫಲ ಜ್ಞಾನ, ಜ್ಞಾನದ ಫಲ ಮೋಕ್ಷ) ಒಂದೇ ರೀತಿಯಾದುದರಿಂದ ಶ್ರವಣಾದಿಗಳ ತಾರತಮ್ಯಕ್ಕೆ ವೈಯರ್ಥ್ಯವು ಬರುವುದು. ಬಂಧಧ್ವಂಸ ರೂಪವಾದ ಮೋಕ್ಷದಲ್ಲಿ ತಾರತಮ್ಯವು ಕೂಡುವುದಿಲ್ಲ. ಹೀಗೆ ಆಶಂಕಿಸಿದರೆ –

ಸಮ್ಯಗ್ವಿಷಮವಿಜ್ಞಾನ ತಾರತಮ್ಯಾನುಸಾರತಃ ॥ ೯೫ ॥

ಫಲಂ ಭವೇತ್ತಾರತಮ್ಯಾತ್ಸುಖದುಃಖಾತ್ಮಕಂ ನೃಣಾಮ್ ।

ಸಮ್ಯಕ್ ಚಾಧಿಕವಿಜ್ಞಾನಾತ್ಸುಖಾಧಿಕ್ಯಂ ಭವೇನ್ನೃಣಾಮ್ ॥ ೯೬ ॥

ಅತೋ ಯಥಾತ್ಮಶಕ್ತ್ಯೈವ ಶ್ರವಣಂ ಮನನಂ ತಥಾ ।

ಯಥಾರ್ಥಜ್ಞಾನ, ವಿಪರೀತಜ್ಞಾನ ಇವುಗಳ ತಾರತಮ್ಯಕ್ಕೆ ಅನುಸಾರವಾಗಿ ಮನುಷ್ಯರಿಗೆ ಕ್ರಮವಾಗಿ ತಾರತಮ್ಯಸಹಿತವಾದ ಸುಖ–ದುಃಖ ರೂಪವಾದ ಫಲವು ಆಗುವುದು. ಅಂದರೆ ಅಧಿಕವಾದ ಯಥಾರ್ಥಜ್ಞಾನದಿಂದ ಅಧಿಕವಾದ ಸುಖವು, ಅಧಿಕವಾದ ವಿಪರೀತಜ್ಞಾನದಿಂದ ಅಧಿಕವಾದ ದುಃಖವು. ಆದಕಾರಣ ತನ್ನ ಯೋಗ್ಯತಾನುಸಾರವಾಗಿಯೇ ಚೆನ್ನಾಗಿ ಶ್ರವಣವನ್ನೂ ಮನನವನ್ನೂ ಮಾಡಬೇಕು.

ಉಪಸಂಹಾರಾಧಿಕರಣಮ್

ಓಂ ಉಪಸಂಹಾರೋಽರ್ಥಾಭೇದಾದ್ವಿಧಿಶೇಷವತ್ಸಮಾನೇ ಚ ಓಂ

ಈ ಅಧಿಕರಣದಲ್ಲಿ ಎಲ್ಲ ವೇದಗಳಲ್ಲಿ ಹೇಳಲ್ಪಟ್ಟ ಎಲ್ಲ ಗುಣಗಳನ್ನೂ ದೋಷಾಭಾವಗಳನ್ನೂ ಸರಿಯಾಗಿ ತಿಳಿದು ಉಪಸಂಹಾರಪೂರ್ವಕವಾಗಿ ಬ್ರಹ್ಮನ ಉಪಾಸನೆ ಮಾಡಬೇಕು. ಹೇಗೆ ವಿಧಿವಿಹಿತಗಳಾದ ಸಂಧ್ಯಾವಂದನಾದಿಗಳನ್ನು ಮಾಡಬೇಕೋ ಹಾಗೆಯೇ ಧ್ಯಾನವನ್ನೂ, ವಿಧಿವಿಹಿತವಾದುದರಿಂದ, ಮಾಡಬೇಕು. ಪೂರ್ಣತ್ವಾದಿಗಳಿಗೆ ಅವಿರುದ್ಧವಾದ ಗುಣಗಳಲ್ಲಿಯೇ ಉಪಸಂಹಾರವು ಎಂದು ಪ್ರತಿಪಾದಿಸಲಾಗಿದೆ.

ಇದನ್ನೇ ವಿವರಿಸುತ್ತಾರೆ –

ಕೃತ್ವಾಽಥ ಕುರ್ವನ್ನಪಿ ವಾ ನಿದಿಧ್ಯಾಸನಮಾಚರೇತ್ ॥ ೯೭ ॥

ಶ್ರವಣವನ್ನೂ ಮನನವನ್ನೂ ಮಾಡಿದವನಾಗಿ ಅಥವಾ ಮಾಡುವವನಾಗಿ ಆತ್ಮಶಕ್ತಿಗೆ ಅನುಸಾರವಾಗಿ ನಿದಿಧ್ಯಾಸನವನ್ನು ಆಚರಿಸಬೇಕು. ಈ ವಾಕ್ಯದಿಂದ

'ಪ್ರಾಪ್ತೇಶ್ಚ ಸಮಂಜಸಮ್' ಇತ್ಯಾದಿ ಸೂತ್ರಗಳಿಗೂ ತಾತ್ಪರ್ಯವು ಹೇಳಲ್ಪಟ್ಟಿದೆ ಎಂದು ತಿಳಿಯಬೇಕು. 'ಅಸಂಶಯೇನ ತತ್ವಸ್ಯ ನಿರ್ಣಯೇ ಬ್ರಹ್ಮದರ್ಶನಮ್' ಎನ್ನುವುದರಿಂದ 'ತನ್ನಿರ್ಧಾರಣಾರ್ಥನಿಯಮಃ' ಇತ್ಯಾದಿ ಸೂತ್ರಗಳ ತಾತ್ಪರ್ಯವು ಉಕ್ತವಾಗಿದೆ.

ಅನುಬಂಧಾದ್ಯಧಿಕರಣಮ್

ಓಂ ಅನುಬಂಧಾದಿಭ್ಯಃ ಓಂ

ಯೋಗಶಾಸ್ತ್ರದಲ್ಲಿ ಯಮಾದಿಗಳು ಉಪಾಸನೆಗೆ ಅಂಗವಾಗಿ ಉಪದೇಶ ಮಾಡಲ್ಪಡುತ್ತವೆ. ಆದರೆ ಯಮಾನುಷ್ಠಾನವು ಉಪಾಸನೆಗೆ ಅಂಗವಲ್ಲ ಎಂದು ಪೂರ್ವಪಕ್ಷಿಯು ತಿಳಿಯುತ್ತಾನೆ. ವಿಷ್ಣುಭಕ್ತ್ಯಾದಿ ಗುಣಗಳ ಸಂಪತ್ತಿಯೂ, ವಿಷಯ ಸಂಸರ್ಗಾದಿ ದೋಷಗಳ ವರ್ಜನೆಯೂ ಯಮಶಬ್ದದಿಂದ ಹೇಳಲ್ಪಡುತ್ತದೆ. ಭಕ್ತಿ ಇತ್ಯಾದಿಗಳ ಸಹಿತವಾಗಿ ಮಾಡತಕ್ಕ ಉಪಾಸನೆಯೇ ಮೋಕ್ಷಸಾಧನತ್ವವು, ಬೇರೆ ಪ್ರಕಾರವಲ್ಲ ಎನ್ನುವುದಕ್ಕೆ ಪ್ರಮಾಣವಿಲ್ಲ. ದ್ವೇಷಾಚ್ಚೈತ್ಯಾದಯೋ ನೃಪಾಃ ವೈರೇಣ ಯನ್ನೃಪತಯಃ ಇತ್ಯಾದಿಗಳಲ್ಲಿ ದ್ವೇಷಾದಿಗಳಿಗೆ ಮೋಕ್ಷಸಾಧನತ್ವವು ಪ್ರತೀತ ವಾಗಿದೆ. ದೃಷ್ಟೈವ ತಂ ಮುಚ್ಯತೇ ನಾಪರೇಣ ಎಂದು ಬ್ರಹ್ಮಸಾಕ್ಷಾತ್ಕಾರಕ್ಕೇನೆ ಮೋಕ್ಷಸಾಧನತ್ವವು ಎಂದು ಪ್ರತೀತವಾಗಿದೆ. ಇವೆರಡನ್ನೂ ಪರ್ಯಾಲೋಚಿಸಿದರೆ ದ್ವೇಷಕ್ಕೆ ಬ್ರಹ್ಮಸಾಕ್ಷಾತ್ಕಾರ ಸಾಧನತ್ವವು ತಿಳಿಯಲ್ಪಡುತ್ತದೆ. ಹೀಗೆಯೇ ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳಿಗೂ ಅಂಗತ್ವವನ್ನು ನಿರಾಕರಿಸಬೇಕು ಎಂದು ಪೂರ್ವಪಕ್ಷಿಯು ಆಶಂಕಿಸಿದರೆ, ಅದರ ಪರಿಹಾರಕ್ಕಾಗಿ ಅನುಬಂಧಾದಿಭ್ಯಃ ಎನ್ನುವ ಸೂತ್ರವು ಹೊರಟಿದೆ. ಬ್ರಹ್ಮಸಾಕ್ಷಾತ್ಕಾರವೂ ಕೂಡ ಭಕ್ತ್ಯಾದಿಗಳಿಂದಲೇ ಆಗುವುದು, ದ್ವೇಷಾದಿಗಳಿಂದಲ್ಲ ಎನ್ನುವುದು ಸೂತ್ರಾರ್ಥ. ಅಲ್ಲಿ ಉಕ್ತ ದೋಷವು ಹೇಗೆ ಪರಿಹೃತವಾಗಿದೆಯೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದಕಾರಣ ವ್ಯಾಖ್ಯಾನ ಮಾಡುತ್ತಾರೆ –

ವಿಷಯೇಷು ಚ ಸಂಸರ್ಗಾಚ್ಛಾಶ್ವತಸ್ಯ ಚ ಸಂಶಯಾತ್ ।

ಮನಸಾ ಚಾನ್ಯದಾಕಾಂಕ್ಷಾತ್ಪರಂ ನ ಪ್ರತಿಪದ್ಯತೇ ॥ ೯೮ ॥

ಇತಿ ಭಾರತವಾಕ್ಯಂ ಹಿ ತೇನೈತದ್ದೋಷವರ್ಜಿತಃ ।

ಸದೋಪಾಸನಯಾ ಯುಕ್ತೋ ವಾಸುದೇವಂ ಪ್ರಪಶ್ಯತಿ ॥ ೯೯ ॥

ವಿಷಯಗಳಲ್ಲಿಯೂ, ವಿಷಯಗಳ ಸಂಸರ್ಗದಿಂದಲೂ, ಶಾಶ್ವತನಾದ ಬ್ರಹ್ಮನ ವಿಷಯದಲ್ಲಿ ಸಂಶಯದಿಂದಲೂ, ಮನಸ್ಸಿನಿಂದಲೂ, ಮುಕ್ತಿಯಿಂದ ಇತರವಾದ ವಿಷಯಸಮೂಹವನ್ನು ಕುರಿತು ಇಚ್ಛೆಯಿಂದಲೂ ಪರಬ್ರಹ್ಮನು ಕಾಣಲ್ಪಡುವುದಿಲ್ಲ. ಹೀಗೆ ಭಾರತವಾಕ್ಯವು ಇರುವುದರಿಂದ, ಮೇಲೆ ಹೇಳಿದ ದೋಷಗಳಿಂದ

ರಹಿತನಾದವನೇ ಯಾವಾಗಲೂ ಉಪಾಸನೆಯಿಂದ ಯುಕ್ತನಾಗಿ ವಾಸುದೇವನನ್ನು ನೋಡುತ್ತಾನೆ. ಯಮಾದಿಗಳಿಂದ ಯುಕ್ತನಾದವನಿಗೇನೆ ವಿಷಯಾದಿಗಳ ಸಂಸರ್ಗ ಮುಂತಾದ ದೋಷಗಳ ರಾಹಿತ್ಯವು ಯುಕ್ತವಾಗುವುದು. ಇದರಿಂದ ಯಮ ನಿಯಮಾದಿಗಳಿಗೆ ಉಪಾಸನೆಯ ಅಂಗತ್ವವು ಸಿದ್ಧಿಸುವುದು.

ಯಮಾದ್ಯನುಷ್ಠಾನವು ಆವಶ್ಯಕವೆನ್ನುವುದಕ್ಕೆ ಯುಕ್ತಿಯನ್ನೂ ಹೇಳುತ್ತಾರೆ –

ದೋಷಾ ಅನಾದಿಸಂಬದ್ಧಾಸ್ತೇ ಮುಕ್ತಿಪರಿಪಂಥಿನಃ ।

ಸಂತ್ಯೇವ ಪ್ರಾಯಶಃ ಪುಂಸು ತೇನ ಮೋಕ್ಷೋ ನ ಜಾಯತೇ ॥ ೧೦೦ ॥

ವಿಷ್ಣುಭಕ್ತ್ಯಾದಿ ಅಭಾವ, ವಿಷಯಸಂಸರ್ಗ ಮೊದಲಾದ ದೋಷಗಳು ಮುಕ್ತಿ ಮಾರ್ಗಕ್ಕೆ ಅಡಚಣೆಯಾಗಿ ಬಹುತೇಕ ಪುರುಷರಲ್ಲಿ ಅನಾದಿ ಕಾಲದಿಂದಲೂ ಸಂಬಂಧವುಳ್ಳದ್ದಾಗಿ ಇದ್ದೇ ಇರುತ್ತವೆ. ಆ ಕಾರಣದಿಂದ ಅವರಿಗೆ ಮೋಕ್ಷವು ಆಗುವುದಿಲ್ಲ.

ಹಾಗೆಯೇ ಆಗಲಿ. ಆದರೆ ಕೆಲವು ಸಂಸಾರಿಗಳೂ ಕೂಡ ರಾಗಾದಿ ದೋಷ ರಹಿತರೂ, ಚಿಕ್ಕ ಮಕ್ಕಳೂ ಮುಗ್ಧರು ಮೊದಲಾದ ಜೀವರೂ ಇರುತ್ತಾರೆ. ಆದಕಾರಣ ದೋಷಗಳು ಮೋಕ್ಷಾಭಾವಕ್ಕೆ ಕಾರಣವು ಹೇಗೆ ಎಂದರೆ –

ಸರ್ವೇ ಶು ಏತೇ ಜೀವೇಷು ದೃಶ್ಯಂತೇ ತಾರತಮ್ಯತಃ ।

ಬಾಲಮುಗ್ಧಾದಿ ಎಲ್ಲ ಜೀವರಲ್ಲಿಯೂ ಮೇಲೆ ಹೇಳಿದ ಎಲ್ಲ ದೋಷಗಳು ತಾರತಮ್ಯ ರೂಪದಿಂದಲೇ ಕಾಣಲ್ಪಡುತ್ತವೆ.

ದೋಷಗಳೂ ಕೂಡ ಪ್ರವಾಹತಃ ಅನಾದಿಯಾಗಿವೆ. ಬಾಲಮುಗ್ಧಾದಿ ಜೀವರಲ್ಲಿ ಭಕ್ತ್ಯಾದಿ ಅಭಾವ ಮೊದಲಾದ ದೋಷಗಳು ಪ್ರತ್ಯಕ್ಷ ಅನುಮಾನಗಳಿಂದ ದೃಷ್ಟಗಳೇ ಆಗಿವೆ. ರಾಗದ್ವೇಷಾದಿ ದೋಷಗಳೂ ಕೂಡ ಪುರುಷರಲ್ಲಿ ತಾರತಮ್ಯಕ್ಕೆ ಅನುಗುಣವಾಗಿಯೇ ಇರುತ್ತವೆ. ಆ ದೋಷಗಳು ಪ್ರಸುಪ್ತ (ಅವ್ಯಕ್ತವಾದವು), ತನು (ಅಲ್ಪಗಳು), ವಿಚ್ಛಿನ್ನ (ಬಹುಶಃ ವ್ಯಕ್ತಗಳಾಗಿದ್ದರೂ ಸರ್ವದಾ ಅವಿದ್ಯಮಾನಗಳು), ಉದಾರ (ಯಾವಾಗಲೂ ಪ್ರಕಟವಾದವುಗಳು) ಎನ್ನುವ ಭೇದದಿಂದ ನಾಲ್ಕು ವಿಧ. ಬಾಲಾದಿಗಳಲ್ಲಿ ಸದಾ ಪ್ರಕಟವಾಗುವ ದೋಷಗಳ ಅಭಾವದಿಂದ ಅವುಗಳ ಅಭಾವೋಕ್ತಿಯು. ಸ್ತನ್ಯಪಾನಾದಿ ಇಚ್ಛಾದಿಗಳು ಅವರಲ್ಲಿಯೂ ಕಂಡಿವೆ. ಹೀಗೆ ಎಲ್ಲರಲ್ಲಿಯೂ ಎಲ್ಲ ದೋಷಗಳೂ ಪ್ರಮಿತವಾಗಿವೆ ಎಂದು ಹೇಳಿದ್ದು ಯುಕ್ತವು.

ಹಾಗಾದರೆ ಸಂಸಾರಿಗಳಲ್ಲಿ ಬ್ರಹ್ಮಪದ ಪ್ರಾಪ್ತಿಗೆ ಯೋಗ್ಯರಾದ ಋಜುಗಳೆಂಬ ಪುರುಷರು ಇರುವರು. ಅವರು ದೋಷಿಗಳು ಎಂದು ಹೇಳುವುದು ಯುಕ್ತವಲ್ಲ. ಏಕೆಂದರೆ ದೋಷಯುಕ್ತತ್ವವು ಋಜುತ್ವಕ್ಕೆ ವಿರುದ್ಧವು. ಆದ್ದರಿಂದ ಎಲ್ಲ ಜೀವರೂ ದೋಷಯುಕ್ತರು ಎನ್ನುವುದು ಕೂಡುವುದಿಲ್ಲ ಎಂದರೆ –

ಋಜೂನಾಮೇಕ ಏವಾಸ್ತಿ ಪರಮೋತ್ಸಾಹವರ್ಜನಮ್ ॥ ೧೦೧ ॥

ಸ ಗುಣಾಲ್ಪತ್ವಮಾತ್ರತ್ವಾನ್ನರ್ಜುತ್ವೇನ ವಿರುದ್ಧ್ಯತೇ ।

ಋಜುಗಳಿಗೂ ಪರಮೋತ್ಸಾಹವರ್ಜನ (ಮೋಕ್ಷಕ್ಕಾಗಿ ಮಹಾಪ್ರಯತ್ನವನ್ನು ಬಿಡುವುದು) ಎಂಬ ಒಂದೇ ಒಂದು ದೋಷವು ಇದೆ. ದೋಷಗಳು ಹೆಚ್ಚಾಗಿ ಇಲ್ಲ ಎನ್ನುವ ಅರ್ಥದಲ್ಲಿ ಋಜುತ್ವವು ಕೂಡುತ್ತದೆ. ಅಲ್ಪ ಪ್ರಮಾಣದಲ್ಲಿದ್ದರೆ ಅದು ಇಲ್ಲವೆಂದು ಹೇಳುವುದು ರೂಢಿ. ಪರಮೋತ್ಸಾಹವೆಂಬ ದೋಷವು ರಾಗಾದಿಗಳಂತೆ ಭಾವರೂಪವಾದುದಲ್ಲ. ಅಥವಾ ಗುಣಾಭಾವರೂಪವಾದುದೂ ಅಲ್ಲ. ಅದು ಗುಣಾಲ್ಪತ್ವಮಾತ್ರದಿಂದ ಋಜುತ್ವಕ್ಕೆ ವಿರುದ್ಧವಾಗುವುದಿಲ್ಲ.

ಸಂಸಾರಕ್ಕೆ ಕಾರಣವಾದ ಮುಕ್ತಿಗೆ ಪ್ರತಿಬಂಧಕಗಳಾದ ಈ ದೋಷಗಳು ಎಲ್ಲರಲ್ಲಿಯೂ ಇವೆ ಎನ್ನುವುದರಿಂದ ಏನು ಹೇಳಿದಂತಾಯಿತು ಎಂದರೆ –

ಅತೋ ವಿಷ್ಣೌ ಪರಾ ಭಕ್ತಿಸ್ತದ್ಭಕ್ತೇಷು ರಮಾದಿಷು ॥ ೧೦೨ ॥

ತಾರತಮ್ಯೇನ ಕರ್ತವ್ಯಾ ಪುರುಷಾರ್ಥಮಭೀಪ್ಸತಾ ।

ಆದಕಾರಣ ಮೋಕ್ಷಾಪೇಕ್ಷಿಯಾದ ಪುರುಷನು ಶ್ರೀಹರಿಯಲ್ಲಿ ಸರ್ವೋತ್ಕೃಷ್ಟವಾದ ಭಕ್ತಿಯನ್ನೂ, ವಿಷ್ಣುಭಕ್ತರಾದ ರಮಾದಿಗಳಲ್ಲಿ ತಾರತಮ್ಯಕ್ಕೆ ಅನುಸಾರವಾದ ಭಕ್ತಿಯನ್ನೂ ಮಾಡತಕ್ಕದ್ದು.

ಇದನ್ನೇ ವಿವರಿಸುತ್ತಾರೆ –

ಸ್ವಾದರಃ ಸರ್ವಜಂತೂನಾಂ ಸಂಸಿದ್ಧೋ ಹಿ ಸ್ವಭಾವತಃ ॥ ೧೦೩ ॥

ತತೋಽಧಿಕಃ ಸ್ವೋತ್ತಮೇಷು ತದಾಧಿಕ್ಯಾನುಸಾರತಃ ।

ಕರ್ತವ್ಯೋ ವಾಸುದೇವಾಂತಂ ಸರ್ವಥಾ ಶುಭಮಿಚ್ಛತಾ ॥ ೧೦೪ ॥

ನ ಕದಾಚಿತ್ತ್ಯಜೇತ್ತಂ ಚ ಕ್ರಮೇಣೈನಂ ವಿವರ್ಧಯೇತ್ ।

ಎಲ್ಲ ಜಂತುಗಳಿಗೂ ಉಪಕಾರಾದಿಗಳನ್ನು ಅಪೇಕ್ಷಿಸದೆ ಒಳ್ಳೆಯ ಸ್ನೇಹವನ್ನು ಮಾಡತಕ್ಕದ್ದು. ಸರ್ವ ರೀತಿಯಿಂದಲೂ ಮಂಗಲವನ್ನು ಇಚ್ಛಿಸುವ ಪುರುಷನು ತನ್ನ ವಿಷಯಕವಾದ ಆದರದ ದೆಶೆಯಿಂದ ಹೆಚ್ಚಾದ ಆದರವನ್ನು ತನಗಿಂತ ಉತ್ತಮರಲ್ಲಿ ಮಾಡಬೇಕು. ಹೀಗೆ ವಾಸುದೇವ ಪರ್ಯಂತವಾಗಿ ಅವರವರ ಆಧಿಕ್ಯವನ್ನನುಸರಿಸಿ ಹೆಚ್ಚಿನ ಆದರವನ್ನು ಮಾಡಬೇಕು. ವಾಸುದೇವನಲ್ಲಾದರೋ ನಿರತಿಶಯವಾದ ಸ್ನೇಹವನ್ನು ಮಾಡಬೇಕು. ಯಾವಕಾಲದಲ್ಲಿಯೂ ವಿಷ್ಣ್ವಾದಿಗಳಲ್ಲಿ ಆದರವನ್ನು ಬಿಡಬಾರದು. ಜೊತೆಗೆ ಕಾಲಕ್ರಮದಿಂದ ಈ ಆದರವನ್ನು ಹೆಚ್ಚಿಸಿಕೊಳ್ಳಬೇಕು.

ಹಾಗಾದರೆ ತನ್ನ ಸಮಾನಿಕರಲ್ಲಿಯೂ ಹಾಗೂ ತನಗಿಂತ ಅಧಮರಲ್ಲಿಯೂ ಆದರವನ್ನು ಹೇಗೆ ಮಾಡಬೇಕು ಎಂದರೆ –

ಸಮೇಷು ಸ್ವಾತ್ಮವತ್ ಸ್ನೇಹಃ ಸತ್ಸ್ವನ್ಯತ್ರ ತತೋ ದಯಾ ॥ ೧೦೫ ॥

ಕಾರ್ಯ್ಯೈವಮಾಪರೋಕ್ಷ್ಯೇಣ ದೃಶ್ಯತೇ ಕ್ಷಿಪ್ರಮೀಶ್ವರಃ ।

ಸಮಾನರಲ್ಲಿ ತನ್ನಂತೆಯೇ ಸ್ನೇಹವನ್ನೂ, ಉತ್ತಮರಿಂದಲೂ ಸಮಾನರಿಂದಲೂ ಅಧಮರಾದ ಸಜ್ಜನರಲ್ಲಿ ದಯೆಯನ್ನೂ ಮಾಡಬೇಕು. ಹೀಗೆ ಯೋಗ್ಯತೆಗೆ ಅನುಸಾರವಾಗಿ ಆದರವನ್ನು ಮಾಡುವುದರಿಂದ ಶ್ರೀಹರಿಯು ಶೀಘ್ರದಲ್ಲಿಯೇ ಪ್ರತ್ಯಕ್ಷವಾಗಿ ಕಾಣಲ್ಪಡುತ್ತಾನೆ.

ದೋಷವನ್ನು ತ್ಯಜಿಸುವಲ್ಲಿಯೂ ವಿಶೇಷವಿದೆ. ರಾಗಾದಿಗಳು ಸಂಸಾರವನ್ನು ಹೊಂದಿಸುತ್ತವೆ. ವಿಪರೀತ ಜ್ಞಾನಾದಿಗಳಾದರೂ ನಿತ್ಯನರಕವನ್ನೇ ಹೊಂದಿಸುತ್ತವೆ. ಆದ್ದರಿಂದ ವಿಪರೀತ ಜ್ಞಾನಾದಿಗಳನ್ನು ಅತಿಶಯವಾಗಿ ತ್ಯಜಿಸಬೇಕು ಎನ್ನುವ ಅಭಿಪ್ರಾಯದಿಂದ ಶ್ರುತಿಯನ್ನು ಹೇಳುತ್ತಾರೆ –

ತತ್ತಮೋಂಧಂ ವ್ರಜೇದ್ವಿಷ್ಣುಸಮತ್ವಂ ಯೋಽನುಪಶ್ಯತಿ ॥ ೧೦೬ ॥

ರಮಾಬ್ರಹ್ಮಶಿವಾದೀನಾಮಪಿ ಮುಕ್ತೌ ಕಥಂಚನ ।

ಕಿಮುತಾಧಿಕ್ಯದೃಷ್ಟೇಸ್ತದ್ಗುಣಾಭಾವಮತೇರಪಿ ॥ ೧೦೭ ॥

ದೋಷವೇತ್ತುರಭೇದಸ್ಯ ದ್ರಷ್ಟುರ್ದ್ರಷ್ಟುಸ್ತಥೋಭಯೋಃ ।

ಇತ್ಯಾಹ ಸಚ್ಛ್ರುತಿಃ ತೇನ ಸಂಪ್ರೋಕ್ತಗುಣಸಂಯುತಃ ॥ ೧೦೮ ॥

ಉಪಾಸೀತ ಹರಿಂ ದೃಷ್ಟ್ವಾ ಮುಕ್ತಿಸ್ತೇನೈವ ಜಾಯತೇ ।

ಯಾವನು ರಮಾಬ್ರಹ್ಮರುದ್ರಾದಿಗಳಿಗೆ ಮುಕ್ತಿಯಲ್ಲಿಯೂ ಯಾವುದೇ ಧರ್ಮದಿಂದಲೂ ವಿಷ್ಣುಸಾಮ್ಯವನ್ನು ತಿಳಿಯುತ್ತಾನೋ ಅವನು ಪ್ರಸಿದ್ಧವಾದ ಅಂಧಂತಮಸ್ಸನ್ನು ಹೊಂದುವನು. ರಮಾಬ್ರಹ್ಮಾದಿಗಳಿಗೆ ವಿಷ್ಣುವಿನ ದೆಶೆಯಿಂದ ಆಧಿಕ್ಯವನ್ನು ಕಾಣುವವನಿಗೆ ಅಂಧಂತಮಸ್ಸು ನಿಶ್ಚಿತವೆಂದು ಮತ್ತೆ ಹೇಳಬೇಕೇನು? ವಿಷ್ಣುವಿನಲ್ಲಿ ಗುಣಾಭಾವವನ್ನೂ ದೋಷಭಾವವನ್ನೂ ತಿಳಿದಿರುವ, ವಿಷ್ಣುವಿಗೆ ಜೀವರಿಂದಲೂ ಜಡರಿಂದಲೂ ಅಭೇದವನ್ನು ಹಾಗೆಯೇ ಭೇದಾಭೇದವನ್ನು ಕಾಣತಕ್ಕ ಪುರುಷನಿಗೆ ಅಂಧಂತಮಸ್ಸು ಆಗುವುದೆಂದು ಮತ್ತೆ ಹೇಳಬೇಕೇನು? ಹೀಗೆ ಸಮೀಚೀನವಾದ ಶ್ರುತಿಯು ಹೇಳುತ್ತದೆ. ಆದಪ್ರಯುಕ್ತ ಹಿಂದೆ ವಿಶೇಷವಾಗಿ ಉಕ್ತವಾಗಿರುವ ವಿಷಯ ಸಂಸರ್ಗರಾಹಿತ್ಯ ಮುಂತಾದ ಗುಣಗಳಿಂದ ಅಥವಾ ಯೋಗಶಾಸ್ತ್ರೋಕ್ತ ಯಮಾದಿ ಗುಣಗಳಿಂದ ಕೂಡಿದವನಾಗಿ ಶ್ರೀಹರಿಯನ್ನು ಉಪಾಸನೆ ಮಾಡಬೇಕು. ಜ್ಞಾನಾನಂದಾದಿ ಗುಣಗಳಿಂದ ಯುಕ್ತನೆಂದು ಚೆನ್ನಾಗಿ ಹೇಳಲ್ಪಟ್ಟ ಶ್ರೀಹರಿಯನ್ನು ಅಂಥಹ ಉಪಾಸನೆಯಿಂದಲೇ ಕಾಣುವುದರಿಂದ, ಕರ್ಮಕ್ಷಯವು ಪೂರ್ತಿಯಾದ ನಂತರ ಮೋಕ್ಷವು ಆಗುವುದು.

ಪರಮಾತ್ಮನ ದ್ವೇಷಿಗಳಿಗೂ ಮುಕ್ತಿಯಾಗುವುದೆಂದು ಪುರಾಣಗಳಲ್ಲಿ ಹೇಳಿದೆ ಎನ್ನುವ ಪೂರ್ವಪಕ್ಷಿಯ ಮತವನ್ನು ಈಗ ನಿರಾಕರಿಸುತ್ತಾರೆ –

ದ್ವೇಷಾದ್ಯನ್ಮುಕ್ತಿ ಕಥನಂ ಶ್ರುತಿವಾಕ್ಯವಿರೋಧಿ ತತ್ ।। ೧೦೯ ।।

ರಿಪವೋ ಯೇ ತು ರಾಮಸ್ಯ ವಿಮುಖತ್ವಾನ್ನಿರಾಮಿಣಃ ।

ಅಭಿದ್ರೋಹಪದೇ ನಿತ್ಯಮಂಧೇ ತಮಸಿ ತೇ ಸ್ಥಿತಾಃ ।। ೧೧೦ ।।

ದ್ವೇಷನಿಮಿತ್ತದಿಂದ ಮುಕ್ತಿ ಎಂದು ಹೇಳುವುದು ಶ್ರುತಿವಾಕ್ಯಕ್ಕೆ ವಿರೋಧಿಯು. ಆದಕಾರಣ ಬೇರೆ ರೀತಿಯಿಂದ ವ್ಯಾಖ್ಯಾನ ಮಾಡಬೇಕು. ಇಲ್ಲಿ ಉದಾಹರಿಸಿರುವ ಶ್ರುತಿವಾಕ್ಯವು ಯಾವುದೆಂದರೆ, 'ಮಾ ನಸ್ತೇನೇಭ್ಯೋ ಯೇ ಅಭಿದ್ರುಹಸ್ಪದೇ ನಿರಾಮಿಣೋ ರಿಪವೋಽನ್ನೇಷು ಜಾಗೃಧುಃ'. ಇದು ವಾಯುವನ್ನು ಕುರಿತು ವಿದ್ಯಾದೇವತೆಯ ವಚನವು. ಈ ಮಂತ್ರಾರ್ಥವರ್ಣನೆಯು ಐತರೇಯ ಭಾಷ್ಯದಲ್ಲಿ ದ್ವಿತೀಯ ಪ್ರಘಟ್ಟಕ ಸಪ್ತಮಾಧ್ಯಾಯದಲ್ಲಿ ಬಂದಿದೆ.

ಈ ಶ್ರುತಿಯನ್ನೇ 'ರಿಪವೋ' ಇತ್ಯಾದಿ ಅರ್ಥತಃ ಪಠಿಸುತ್ತಾರೆ – ಯಾರು ರಾಮನ ಶತ್ರುಗಳೋ ಅವರು ರಾಮನಿಗೆ ವಿಮುಖರಾದ್ದರಿಂದ ನಿರಾಮಿಗಳು. 'ರಾಮೋ ರಮಣಂ ತದಸ್ಯಾಸ್ತೀತಿ ರಾಮೀ ಭಗವಾನ್ ರಾಮಃ ತಸ್ಮಾನ್ನಿಷ್ಕ್ರಾಂತಾಃ ತಸ್ಯ ವಿಮುಖಾ ನಿರಾಮಿಣಃ' ಎನ್ನುವ ವ್ಯುತ್ಪತ್ತಿಯಿಂದ, ಸುಖರೂಪಿಯಾದ ಭಗವಂತನನ್ನು ಅತಿಕ್ರಮಿಸಿದವರು (ಭಕ್ತಿರಹಿತರು). ಆದ್ದರಿಂದಲೇ ರಾಮನಿಗೆ ಶತ್ರುಗಳು. ಅವರು ಅತಿಶಯವಾದ ದ್ರೋಹಕ್ಕೆ ಸ್ಥಾನವಾದ ಅಂಧಂತಮಸ್ಸಿನಲ್ಲಿ ನಿರಂತರವೂ ಇರತಕ್ಕ ಸ್ಥಿತಿಯನ್ನು ಹೊಂದುತ್ತಾರೆ.

ಹರಿದ್ವಿಷಸ್ತಮೋ ಯಾಂತಿ ಯೇ ಚೈವ ತದಭೇದಿನಃ ।

ತನ್ನಿರ್ಗುಣತ್ವವೇತ್ತಾರಸ್ತಸ್ಯ ದೋಷವಿದೋಽಪಿ ಚ ।। ೧೧೧ ।।

ಇತ್ಯಾದಿ ಶ್ರುತಿಸಂದರ್ಭಾದ್ದ್ವೇಷಿಣಸ್ತಮ ಈಯತೇ ।

ಹರಿದ್ವೇಷಿಗಳು ಅಂಧಂತಮಸ್ಸನ್ನು ಹೊಂದುತ್ತಾರೆ. ಶ್ರೀಹರಿಗೆ ಜೀವಾದಿಗಳಿಂದ ಅಭೇದವನ್ನು ಹೇಳುವವರೂ, ನಿರ್ಗುಣತ್ವವನ್ನು ತಿಳಿಯುವವರೂ, ಅಜ್ಞಾನಾದಿ ದೋಷಗಳನ್ನು ತಿಳಿಯುವವರೂ ಕೂಡ ಅಂಧಂತಮಸ್ಸನ್ನು ಹೊಂದುತ್ತಾರೆ. ಇತ್ಯಾದಿ ಶ್ರುತಿಗಳ ಸಂದರ್ಭದ ದೆಶೆಯಿಂದ ಭಗವದ್ದ್ವೇಷಿಗಳು ಅಂಧತಮಸ್ಸನ್ನು ಹೊಂದುತ್ತಾರೆ ಎನ್ನುವುದು ನಿಶ್ಚಯವಾಗುವುದು.

ಭಗವದ್ದ್ವೇಷಿಗಳಿಗೆ ಮೋಕ್ಷವನ್ನು ಹೇಳುವುದು ಸ್ಮೃತಿವಿರುದ್ಧವೂ ಆಗಿದೆ ಎಂಬ ಅಭಿಪ್ರಾಯದಿಂದ ಆ ಸ್ಮೃತಿಗಳನ್ನು ಪಠಿಸುತ್ತಾರೆ –

ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ ।। ೧೧೨ ।।

ವಿವಕ್ಷುರತ್ಯಾಗಾತ್ಸೂನೋಃ ಪ್ರಹ್ಲಾದಸ್ಯಾನುಭಾವತಃ ।

ಭಗವನ್ನಿಂದೆಯಿಂದ ಅಂಧಂತಮಸ್ಸನ್ನು ಹೊಂದುವ ವಿಷಯದಲ್ಲಿ ಸಂಭಾವನಾ ವಿಷಯನಾದ ಹಿರಣ್ಯಕಶಿಪುವೂ ಕೂಡ ಮಗನಾದ ಪ್ರಹ್ಲಾದನ ಸಾಮರ್ಥ್ಯದಿಂದ ಅಂಧಂತಮಸ್ಸನ್ನು ಅತಿಕ್ರಮಿಸಿದನು.

ಯದನಿಂದತ್ಪಿತಾ ಮಹ್ಯಂ ತ್ವದ್ಭಕ್ತೇ ಮಯಿ ಚಾಘವಾನ್ ॥ ೧೧೩ ॥

ತಸ್ಮಾತ್ಪಿತಾ ಮೇ ಪೂಯೇತ ದುರಂತಾದ್ದುಸ್ತರಾದಘಾತ್ ।

ನನ್ನ ತಂದೆಯು ನನ್ನ ನಿಮಿತ್ತವಾಗಿ ನಿನ್ನನ್ನು ನಿಂದಿಸಿದನು. ನಿನ್ನ ಭಕ್ತನಾದ ನನ್ನ ವಿಷಯದಲ್ಲಿಯೂ ಅಪರಾಧ ಮಾಡಿದನು. ವಿಷ್ಣು ಹಾಗೂ ವೈಷ್ಣವರ ನಿಂದೆಯೆಂಬ ಅಪರಾಧದಿಂದ ಹುಟ್ಟಿದ ದಾಟಲು ಅಶಕ್ಯವಾದ ಕೊನೆಯಿಲ್ಲದ ನಿತ್ಯನರಕದಿಂದ ನನ್ನ ತಂದೆಯು ರಕ್ಷಿಸಲ್ಪಡಲಿ ಎಂದು ನರಸಿಂಹನನ್ನು ಕುರಿತು ಪ್ರಹ್ಲಾದನು ಪ್ರಾರ್ಥಿಸಿದ್ದಾನೆ. ನಿಂದಾದಿಗಳು ದ್ವೇಷಮೂಲಕವೆಂಬುದು ಪ್ರಸಿದ್ಧವೇ ಆಗಿದೆ. ವಿಷ್ಣು ಹಾಗೂ ವೈಷ್ಣವರ ದ್ವೇಷದಿಂದ ಅಂಧಂತಮಸ್ಸು ಅನಿವಾರ್ಯವೆಂಬುದು ಈ ಪ್ರಸಂಗದಿಂದ ಸಿದ್ಧವಾಗುತ್ತದೆ.

ನಿಂದಾಂ ಭಗವತಃ ಶೃಣ್ವನ್ ತತ್ಪರಸ್ಯ ಜನಸ್ಯ ವಾ ॥ ೧೧೪ ॥

ತತೋ ನಾಪೈತಿ ಯಃ ಸೋಪಿ ಯಾತ್ಯಧಃ ಸುಕೃತಾಚ್ಚ್ಯುತಃ ।

ಭಗವಂತನ ಹಾಗೂ ಭಗವದ್ಭಕ್ತರ ನಿಂದೆಯನ್ನು ಕೇಳಿದಾಗ ಆ ಸ್ಥಳದಿಂದ ದೂರಕ್ಕೆ ಹೋಗದೆ ಇದ್ದರೆ, ಆ ಪುರುಷನೂ ಕೂಡ ಪುಣ್ಯದಿಂದ ಚ್ಯುತನಾಗಿ ಅಂಧಂತಮಸ್ಸನ್ನು ಹೊಂದುವನು. ಅಂದಮೇಲೆ ನಿಂದಕನಿಗೆ ಅಧಃಪತನವಾಗುತ್ತದೆ ಎನ್ನವುದು ಶತಸ್ಸಿದ್ಧವು.

ಅವಜಾನಂತಿ ಮಾಂ ಮೂಢಾಃ ಮಾನುಷೀಂ ತನುಮಾಶ್ರಿತಂ ॥ ೧೧೫ ॥

ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಂ ।

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ॥ ೧೧೬ ॥

ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ।

'ಅವಜಾನಂತಿ' ಯಿಂದ ಪ್ರಾರಂಭಿಸಿ 'ಅಧಮಾಂ ಗತಿಂ' ವರೆಗಿನ ಶ್ಲೋಕಗಳು ಶ್ರೀಭಗವದ್ಗೀತೆಯಲ್ಲಿನ ಶ್ರೀಕೃಷ್ಣನ ವಾಕ್ಯಗಳು. ಮನುಷ್ಯ ಸದೃಶವಾದ ದೇಹವನ್ನು ಆಶ್ರಯಿಸಿರುವ ಗುಣಪರಿಪೂರ್ಣನಾದ ಸರ್ವೋತ್ತಮನಾದ ನನ್ನನ್ನು ಅಜ್ಞಾನಿಗಳು ಯಥಾರ್ಥವಾಗಿ ತಿಳಿಯವುದಿಲ್ಲ. ವಿಪರೀತವಾಗಿ ಅಧಮನನ್ನಾಗಿ ತಿಳಿಯುತ್ತಾರೆ. ತಾಮಸ ಸ್ವಭಾವದ ಅವರ ಆಶೆಗಳು ವ್ಯರ್ಥವು, ಕರ್ಮಗಳು ವ್ಯರ್ಥವು ಹಾಗೂ ಅವರ ಜ್ಞಾನವು ನಿಷ್ಪ್ರಯೋಜಕವು. ಅವರಿಗೆ ಸುಖಲೇಶವೂ ಆಗುವುದಿಲ್ಲ.

ವಿಪರೀತವಾದ ಮನಸ್ಸುಳ್ಳ ಅವರು ತಮೋಯೋಗ್ಯರು. ಬುದ್ಧಿಭ್ರಂಶವನ್ನು ಹುಟ್ಟಿಸುವಂಥ ರಾಕ್ಷಸೀ ಹಾಗೂ ಆಸುರೀ ಸ್ವಭಾವವನ್ನು ಆಶ್ರಯಿಸಿದವರಾಗಿ ನನ್ನನ್ನು ತಿರಸ್ಕರಿಸುತ್ತಾರೆ.

ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥ ೧೮೭ ॥

ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।

ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥ ೧೮೮ ॥

ತನ್ನ ಹಾಗೂ ಪರರ ದೇಹಗಳಲ್ಲಿ ನಿಯಾಮಕನಾಗಿರತಕ್ಕ ನನ್ನಲ್ಲಿ ವಿಶೇಷವಾದ ದ್ವೇಷವನ್ನು ಮಾಡುವ ಹಾಗೂ ನಿರ್ದೋಷನೂ ಗುಣಪೂರ್ಣನೂ ಆದ ನನ್ನ ವಿಷಯದಲ್ಲಿ ವಿಪರೀತವಾಗಿ ಹೇಳುವ ನನ್ನ ದ್ವೇಷಿಗಳೂ, ಕ್ರೂರಿಗಳೂ, ಅಶುಭರೂ ಆದ ಮನುಷ್ಯಾಧಮರನ್ನು ಅಸುರ ಸಂಬಂಧಿಯಾದ ಯೋನಿಗಳಲ್ಲಿ ಸಂಸಾರಗಳಲ್ಲಿ ಮತ್ತೆ ಮತ್ತೆ ಬೀಳಿಸುತ್ತೇನೆ.

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।

ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ ॥ ೧೮೯ ॥

ಹೇ ಅರ್ಜುನನೇ, ತಾಮಸಿಗಳಾದ ಆ ಮೂಢರು ಅನೇಕ ಜನ್ಮಗಳಲ್ಲಿ ಆಸುರೀ ಯೋನಿಯನ್ನು ಹೊಂದುವರು. ನನ್ನನ್ನು ಹೊಂದುವುದೇ ಇಲ್ಲ. ಕೊನೆಯಲ್ಲಿ ನಿತ್ಯನರಕರೂಪವಾದ ಅಧಮವಾದ ಗತಿಯನ್ನು ಹೊಂದುತ್ತಾರೆ.

ಯೋ ದ್ವಿಷ್ಯಾದ್ವಿಭುದಶ್ರೇಷ್ಠಂ ದೇವಂ ನಾರಾಯಣಂ ಪ್ರಭುಂ ।

ಕಥಂ ಸ ನ ಭವೇದ್ದ್ವೇಷ್ಯ ಆಲೋಕಾಂತಸ್ಯ ಕಸ್ಯಚಿತ್ ॥ ೧೯೦ ॥

ಯೋದ್ವಿಷ್ಯಾದ್ವಿಬುಧಶ್ರೇಷ್ಠಂ ದೇವಂ ನಾರಾಯಣಂ ಪ್ರಭುಂ ।

ಮಜ್ಜಂತಿ ಪಿತರಸ್ತಸ್ಯ ನರಕೇ ಶಾಶ್ವತೀಃ ಸಮಾಃ ॥ ೧೯೧ ॥

ಇತ್ಯಾದಿ ವಾಕ್ಯಸಂದೋಹಾದ್ ದ್ವೇಷಿಣಸ್ತಮ ಏವ ತು ।

ಯಾವಾತನು ದೇವಶ್ರೇಷ್ಠನೂ ಸರ್ವಸಮರ್ಥನೂ ಕ್ರೀಡಾದಿಗುಣವಿಶಿಷ್ಟನೂ ಆದ ನಾರಾಯಣನನ್ನು ದ್ವೇಷಿಸುತ್ತಾನೋ, ಆತನು ಚಂಡಾಲಪರ್ಯಂತವಾದ ಯಾರಿಗಾದರೂ ದ್ವೇಷಿಸಲಿಕ್ಕೆ ಅರ್ಹನು ಹೇಗೆ ಆಗಲಾರನು? ಅಂಥ ಹರಿದ್ವೇಷಿಯ

ಪಿತೃಗಳು ನರಕದಲ್ಲಿ ಅನೇಕ ಸಂವತ್ಸರಗಳ ಕಾಲ ಮುಳುಗಿ ಹೋಗುತ್ತಾರೆ. ಇದೇ ಮೊದಲಾದ ವಾಕ್ಯಗಳ ಸಮೂಹದಿಂದ ಹರಿ ಮತ್ತು ಹರಿಭಕ್ತರ ದ್ವೇಷಿಗಳಿಗೆ ಮತ್ತೆ ಎಂದಿಗೂ ಮೇಲೇಳಲಾರದ ತಮಸ್ಸೇ ಗತಿಯು ಎಂದು ನಿಶ್ಚಯವಾಗುತ್ತದೆ.

ವಿದ್ಯಾಧಿಕರಣಮ್

ಓಂ ವಿದ್ಯೈವ ತು ನಿರ್ಧಾರಣಾತ್ ಓಂ

ಈ ಅಧಿಕರಣವನ್ನು 'ಅನುಬಂಧಾದಿಭ್ಯಃ' ಎನ್ನುವ ೩ನೇ ಅಧಿಕರಣಕ್ಕಿಂತ ಮೊದಲಿಗೇ ವ್ಯಾಖ್ಯಾನ ಮಾಡಬೇಕಿತ್ತು. ಹಾಗಿದ್ದರೂ ಉಪಾಸಾನೆಯ ಸ್ವರೂಪವು ತಿಳಿದ ನಂತರವೇ ಅದರ ಸಾರ್ಥಕ್ಯವನ್ನು ಸಮರ್ಥನೆ ಮಾಡುವುದು ಸೂಕ್ತವಾದ ಕಾರಣ ಉಪಾಸನೆಯ ಸ್ವರೂಪವನ್ನು ತಿಳಿಸುವ ೩ನೇ ಅಧಿಕರಣದ ವ್ಯಾಖ್ಯಾನದ ನಂತರ 'ವಿದ್ಯೈವ ತು ನಿರ್ಧಾರಣಾತ್' ಎನ್ನುವ ೨೯ನೇ ಅಧಿಕರಣದ ವ್ಯಾಖ್ಯಾನ ಮಾಡುವುದು ಸುಸಂಗತವಾಗಿದೆ. ಭಗವದುಪಾಸನೆಯು ಕರ್ತವ್ಯವಲ್ಲ, ವೈಯರ್ಥ್ಯ ಬರುವುದರಿಂದ. ಸಾಕ್ಷಾತ್ಕಾರದಿಂದ ಮೋಕ್ಷಾಖ್ಯ ಫಲವಿರುವುದರಿಂದ ಅದಕ್ಕಾಗಿ ಭಗವದುಪಾಸನೆ ಎಂದೂ ಹೇಳಕೂಡದು. ಏಕೆಂದರೆ ಚಾರ್ವಾಕರ ಪ್ರಕಾರ ಮೋಕ್ಷವೇ ಇಲ್ಲವಾದ್ದರಿಂದ ಸಾಕ್ಷಾತ್ಕಾರವೂ ನಿಷ್ಪ್ರಯೋಜಕವೆಂದು ಆಶಂಕಿಸಿದರೆ, ಮೋಕ್ಷವು ಇರುವುದೆಂದೂ, ಆ ಮೋಕ್ಷವು ಭಗವದ್ದರ್ಶನದಿಂದಲೇ ಸಾಧ್ಯವೆಂದೂ ಸಾಧಿಸಲಿಕ್ಕಾಗಿ ಈ ಅಧಿಕರಣವು ಪ್ರಸಕ್ತವಾಗಿದೆ. ಮೊದಲಿಗೆ ಚಾರ್ವಾಕ ಮತವನ್ನು ಅನುವಾದ ಮಾಡಿ ಅನಂತರ ಅದನ್ನು ನಿರಾಕರಿಸುತ್ತಾರೆ –

ನೈವ ಮೋಕ್ಷ ಇತಿ ಪ್ರಾಹುರ್ಲೋಕಾಯತಮತೇ ಸ್ಥಿತಾಃ ॥ ೧೨೨ ॥

ಚಾರ್ವಾಕ ಮತದಲ್ಲಿ ಶ್ರದ್ಧೆಯುಳ್ಳವರು ಮೋಕ್ಷವು ಇಲ್ಲವೇ ಇಲ್ಲ ಎಂದು ಹೇಳುತ್ತಾರೆ (ಸ್ವರೂಪದಲ್ಲಿಯೇ ಇಲ್ಲವೆಂದು ತಿಳಿಸಲು ಏವ ಶಬ್ದವು).

ಹಾಗಾದರೆ ಯಾವ ಪುರುಷಾರ್ಥವಿದೆ ಎಂದರೆ –

ಭೋಗಃ ಶರೀರಪರ್ಯಂತಂ ಭಸ್ಮೀಭಾವಸ್ತತೋ ಭವೇತ್ ।

ಸ್ರಕ್ ಚಂದನ ಮೊದಲಾದ ವಿಷಯಸುಖಾನುಭವ ರೂಪವಾದ ಭೋಗವಿದೆ. ಅದೇ ಪುರಷಾರ್ಥವು ಎಂದು ಹೇಳುತ್ತಾರೆ. ಶರೀರಪಾತವಾಗುವವರೆಗೆ ಮಾತ್ರ ಅನುಭವಸಿಲ್ಪಡುವ ಈ ಭೋಗವು ಐಹಿಕವು. ಸ್ವರ್ಗಾಪವರ್ಗಗಳಿಗೆ ಅಸ್ತಿತ್ವವಿಲ್ಲ. ಏಕೆಂದರೆ ಶರೀರಪತನಾನಂತರ ಶರೀರವು ಭಸ್ಮವಾಗುವುದು. ಶರೀರಪತನವಾದ ಮೇಲೆ ಆತ್ಮನಿಗೆ ಸ್ವರ್ಗಾಪವರ್ಗಗಳನ್ನು ಹೇಳಬೇಕು. ಶರೀರದಿಂದ ಪ್ರತ್ಯೇಕವಾದ ಆತ್ಮನಿಲ್ಲವಾದ್ದರಿಂದ ಶರೀರ ಭಸ್ಮವಾದ ಮೇಲೆ ಆತ್ಮನೂ ನಾಶನಾಗುತ್ತಾನೆ. ಅಂದಮೇಲೆ ಸ್ವರ್ಗಾದಿಗಳು ಯಾರಿಗಾಗಿ ಇದ್ದಾವು? ಹೀಗೆ ಚಾರ್ವಾಕ ಮತವು. ಅದನ್ನು 'ತತ್ಕೇನ' ಇತ್ಯಾದಿ ವಚನದಿಂದ ದೂಷಿಸುತ್ತಾರೆ –

ಇತಿ ತತ್ಕೇನ ಮಾನೇನ ದೃಷ್ಟಂ ಪ್ರತ್ಯಕ್ಷವಾದಿನಾ ॥ ೧೨೩ ॥

ನ ಹಿ ಪ್ರತ್ಯಕ್ಷಮಾನೇನ ಮೋಕ್ಷಾಭಾವೋ೭ವಸೀಯತೇ ।

ಹೀಗೆ ಹೇಳಿದರೆ, ಮೋಕ್ಷವಿಲ್ಲವೆಂದು ಯಾವ ಪ್ರಮಾಣದಿಂದ ತಿಳಿದು ಬರುವುದು? ಪ್ರತ್ಯಕ್ಷದಿಂದಲೋ ಅಥವಾ ಬೇರೆ ಪ್ರಮಾಣದಿಂದಲೋ? ಎಂದು ಪ್ರತ್ಯಕ್ಷವಾದಿಯಾದ ಚಾರ್ವಾಕನನ್ನು ಪ್ರಶ್ನಿಸುತ್ತಾರೆ. ಚಾರ್ವಾಕನು ಪ್ರಮಾಣವೆಂದು ಅಂಗೀಕರಿಸುವ ಪ್ರತ್ಯಕ್ಷದಿಂದ ಮೋಕ್ಷಾಭಾವವು ನಿಶ್ಚಯವಾಗದು. ಪ್ರತ್ಯಕ್ಷದಿಂದ ಬೇರೆಯಾದ ಅನುಮಾನಾದಿ ಪ್ರಮಾಣವನ್ನು ಅವನು ಒಪ್ಪುವುದಿಲ್ಲ.

ಹಾಗಾದರೆ ಪ್ರಮಾಣವಿಲ್ಲವಾದ್ದರಿಂದ ಮೋಕ್ಷಾಭಾವವು ನಿಶ್ಚಯವಾಗುವುದು ಬೇಡ. ಮೋಕ್ಷವಿದೆ ಎನ್ನುವ ನಿಶ್ಚಯವೂ ಸಾಧ್ಯವಿಲ್ಲ ಎಂದರೆ –

ಘಟತೇ ಮುಕ್ತಿದೃಷ್ಟಿಸ್ತು ಪುರುಷೇಣ ಮಹೀಯಸಾ ॥ ೧೨೪ ॥

ಪ್ರಾಕೃತರ ಪ್ರತ್ಯಕ್ಷವು ಮೋಕ್ಷವನ್ನು ವಿಷಯೀಕರಿಸಲು ಅಶಕ್ಯವಾಗಿದ್ದರೂ, ಮಹಾನುಭಾವರಾದ ಪುರುಷರ ಪ್ರತ್ಯಕ್ಷದಿಂದ ಮೋಕ್ಷವಿದೆಯೆಂಬ ನಿಶ್ಚಯವು ಯುಕ್ತವೇ ಆಗುವುದು. ಮಹಾತ್ಮರಿಗೆ ಮೋಕ್ಷದ ಪ್ರತ್ಯಕ್ಷವಿದೆ ಎನ್ನುವುದು ಪರರಿಗೆ ಅವರ ವಾಕ್ಯದಿಂದಲೇ ತಿಳಿಯುವುದು.

ಹಾಗಾದರೆ ನನಗೂ ಹೇಳಲಿಕ್ಕೆ ಬರುವುದು. ಪರಪುರುಷರಲ್ಲಿರುವ ಮೋಕ್ಷದ ಅಭಾವವು ಅಸ್ಮದಾದಿಗಳಿಗೆ ಪ್ರತ್ಯಕ್ಷವಿಷಯವಾಗದಿದ್ದರೂ, ಮಹಾತ್ಮರಾದ ನಮ್ಮ ಆಚಾರ್ಯರಿಗೆ ಪ್ರತ್ಯಕ್ಷ ಸಿದ್ಧವೇ ಆಗುವುದು. ಅದಾದರೂ ಅವರ ವಾಕ್ಯದಿಂದಲೇ ನಮಗೆ ತಿಳಿಯುವುದು ಎಂದರೆ –

ನೇತಿ ವಕ್ತುರ್ಮಹತ್ವಂ ತು ಕಥಂಚನ ನ ವಿದ್ಯತೇ ।

ಸಾಧಯನ್ ಸರ್ವಸಾಮಾನ್ಯಂ ಕಥಮೇವ ವಿಶೇಷವಾನ್ ॥ ೧೨೫ ॥

ಯಾವ ಪುರುಷನಲ್ಲಿಯೂ ವರ್ತಮಾನದಲ್ಲಾಗಲೀ, ಭವಿಷ್ಯದಲ್ಲಾಗಲೀ ಮೋಕ್ಷವು ಇಲ್ಲವೇ ಇಲ್ಲ ಎಂದು ನಾನು ಪ್ರತ್ಯಕ್ಷದಿಂದ ಕಾಣಲು ಸಮರ್ಥನೆಂದು ಹೇಳುವ ಪುರುಷನಿಗೆ ಯಾವಪ್ರಕಾರದಿಂದಲೂ ಮಹತ್ವವೇ ಇರುವುದಿಲ್ಲ. ಎಲ್ಲ ಪುರುಷರಿಗೂ ಸಮಾನ ಧರ್ಮವನ್ನು ಪ್ರತಿಪಾದಿಸುವ ಚಾರ್ವಾಕಾಚಾರ್ಯನು ಹೇಗೆ ತಾನೇ ಇತರರಿಂದ ವಿಶೇಷವಾದ ಮಹಿಮೆಯುಳ್ಳವನಾಗುತ್ತಾನೆ? ಅಂದರೆ ಇತರರಿಗೆ ಇಲ್ಲದ ಮೋಕ್ಷಾಭಾವದ ಪ್ರತ್ಯಕ್ಷವು ಅವನಿಗೂ ಇರುವುದು ಸಾಧ್ಯವಿಲ್ಲ ಎಂದು ಭಾವ.

ಹಾಗಾದರೆ ಪ್ರತ್ಯಕ್ಷದಿಂದ ಮೋಕ್ಷವನ್ನು ಕಾಣುವ ಮಹಾಪುರುಷನೂ ಇಲ್ಲವೇ ಇಲ್ಲ, ಪ್ರಮಾಣವಿಲ್ಲದಿರುವುದರಿಂದ ಎಂದು ನಾನೂ ಹೇಳುತ್ತೇನೆ. ಆದ್ದರಿಂದ ಮೋಕ್ಷವು ಅನಿಶ್ಚಿತವೇ ಎಂದರೆ –

ದೃಶ್ಯಂತೇ ಪುರುಷಾ ಲೋಕೇ ಪರಾಪರವಿದೋಪಿ ಚ ।

ಅಪರೋಕ್ಷದೃಶೋ ಯೋಗನಿಷ್ಠಾಶ್ಚಾಮಲಚಕ್ಷುಷಃ ॥ ೧೨೬ ॥

ಪ್ರತ್ಯಕ್ಷಂ ದೇವತಾಂ ದೃಷ್ಟ್ವಾ ತತ್ಪ್ರಸಾದಾಪ್ತಭೂತಯಃ ।

ಜ್ಞಾನವಿಜ್ಞಾನಪಾರಜ್ಞಾ ನಿಷಿಧ್ಯಂತೇ ಕಥಂ ನೃಭಿಃ ॥ ೧೨೭ ॥

ವಿಶೇಷವಾದ ಪ್ರತ್ಯಕ್ಷ ದೃಷ್ಟಿಯುಳ್ಳ ಮಹಾಮಹಿಮರಾದ ವಸಿಷ್ಠಾದಿ ಅನೇಕ ಮಹಾಪುರುಷರು (ಕೇವಲ ಒಬ್ಬನಲ್ಲ) ಈ ಭೂಮಂಡಲದಲ್ಲಿ ಕಾಣಲ್ಪಡುತ್ತಾರೆ. ಅವರು ಹೇಗಿರುತ್ತಾರೆಂದರೆ, ಸಾಮಾನ್ಯಜ್ಞಾನ–ವಿಶೇಷಜ್ಞಾನ ಇವುಗಳ ಪಾರವನ್ನೂ, ಪರ–ಅಪರ ತತ್ವಗಳನ್ನೂ ತಿಳಿದಿರುವ ಅವರು ಅಪರೋಕ್ಷಜ್ಞಾನಿಗಳು. ಯೋಗದಲ್ಲಿ ವಿಶೇಷ ನಿಷ್ಠೆಯಿಂದ ಪಡೆದ ನಿರ್ಮಲವಾದ ಚಕ್ಷಸ್ಸುಳ್ಳವರು. ಅಂಥಹ ದಿವ್ಯವಾದ ಚಕ್ಷಸ್ಸಿನಿಂದ ಪರದೇವತೆಯನ್ನು ಪ್ರತ್ಯಕ್ಷದಿಂದ ಕಂಡು, ಆ ದೇವತೆಯ ಪ್ರಸಾದದಿಂದ ತೇಜಸ್ಸು ಮೊದಲಾದ ಐಶ್ವರ್ಯವನ್ನು ಹೊಂದಿರುತ್ತಾರೆ. ಅಂಥಹ ಮಹಾಪುರುಷರ ಪ್ರತ್ಯಕ್ಷದಿಂದ ಮೋಕ್ಷವಿದೆ ಎನ್ನುವುದು ನಿಶ್ಚಯವಾಗುತ್ತದೆ. ನಮ್ಮಂಥಹ ಸಾಮಾನ್ಯರಿಗೆ ಕಾಣದಿರುವುದರಿಂದ ಅವರಿಲ್ಲವೆಂದು ಹೇಳಕೂಡದು. ಅಲ್ಪವಾದ ಜ್ಞಾನ ಹಾಗೂ ಪರಿಮಿತವಾದ ದೃಷ್ಟಿಯುಳ್ಳ ಸಾಮಾನ್ಯ ಜನರಿಂದ ಅವರು ಹೇಗೆ ತಾನೇ ನಿಷೇಧಿಸಲ್ಪಡುತ್ತಾರೆ? ಹಾಗೆ ಕಣ್ಣಿಗೆ ಬೀಳಲು ಅವರೇನು ಸಾಮಾನ್ಯ ಜನರಂತೆ ಅಂಗಡಿ ಬೀದಿಗಳಲ್ಲಿ ಅಡ್ಡಾಡುವುದಿಲ್ಲವಷ್ಟೆ.

ಪುರುಷಸ್ವರೂಪಮಾತ್ರದಲ್ಲಿ ವಿವಾದವೇ ಇಲ್ಲ. ಹಾಗಿದ್ದರೂ ಅವರಿಗೆ ಅಂಥಹ ಮಹಿಮಾತಿಶಯವು ಯಾವುದರಿಂದ ಎಂದರೆ –

ದೃಶ್ಯತೇ ಚಾತಿಮಾಹಾತ್ಮ್ಯಂ ತೇಷಾಮತಿಮಹೌಜಸಾಂ ।

ಯದಿ ತೇಽಪಿ ನಿಷಿಧ್ಯಂತೇ ಕಿಂ ನೋಕ್ತಿಸ್ತೇ ನಿಷಿಧ್ಯತೇ ॥ ೧೨೮ ॥

ಅವರು ಕೇವಲ ಪುರುಷರಲ್ಲ. ಮತ್ತೆ ಅತ್ಯಂತ ಮಹತ್ತಾದ ಸಾಮರ್ಥ್ಯವುಳ್ಳ ಅಂಥಹ ಮಹಾತ್ಮರ ಮಹಾಮಹಿಮೆಯೂ ಕಾಣಲ್ಪಡುತ್ತದೆ. ವಿಂಧ್ಯಾದ್ರಿಗಳ ವೃದ್ಧಿ ಸ್ತಂಭನ, ಸಮುದ್ರಪಾನ ಇತ್ಯಾದಿ ಮಹಾಸಾಮರ್ಥ್ಯವು ಅಗಸ್ತ್ಯಾದಿಗಳಲ್ಲಿ ಕಂಡಿದೆ. ಅಣಿಮಾದಿ ಮಹೈಶ್ವರ್ಯಾದಿಗಳಿಲ್ಲದೆ ಅಂಥಹ ಮಹಾಕಾರ್ಯಗಳು ಅವರಿಗೆ ಸಿದ್ಧಿಸಲಾರವು. ಮಹಾಯೋಗಸಿದ್ಧಿಯನ್ನು ಹೊಂದಿರುವ ಅವರು ವಂಚನೆಯನ್ನು ಯಾತಕ್ಕಾಗಿ ಮಾಡಬೇಕು. ಅದರಿಂದ ಅವರಿಗೆ ಪ್ರಯೋಜನವಾದರೂ ಏನಿದೆ? ಆದಕಾರಣ ಅಂಥವರ ಪ್ರತ್ಯಕ್ಷಕ್ಕೆ ವಿಷಯವಾದ ಮೋಕ್ಷವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಹಾಗಿದ್ದರೂ ಅವರ ವಾಕ್ಯವನ್ನೂ ಕೂಡ ವಂಚನೆ ಎಂಬರ್ಥದಲ್ಲಿ ನಿಷೇಧಿಸುವುದಾದರೆ, ನೀನು ಅಂಗೀಕರಿಸುವ ಚಾರ್ವಾಕಾಚಾರ್ಯನ ವಾಕ್ಯವೂ ಅದೇ ಕಾರಣದಿಂದ ಏಕೆ ನಿಷೇಧಿಸಲ್ಪಡುವುದಿಲ್ಲ?

ಚಾರ್ವಾಕಾಚಾರ್ಯನ ಉಕ್ತಿಗೆ ಪ್ರತ್ಯಕ್ಷಸಂವಾದದಿಂದ ಪ್ರಾಮಾಣ್ಯ ನಿಶ್ಚಯವು ಆಗುವುದು. ಆದ್ದರಿಂದ ಅದನ್ನು ನಿರಾಕರಿಸುವಂತಿಲ್ಲ ಎಂದರೆ, ಪ್ರಕೃತ ಯೋಗಿಗಳ ವಾಕ್ಯದಲ್ಲಿಯೂ ಅದು ಸಮಾನವೇ ಎನ್ನುತ್ತಾರೆ –

ಯದುಕ್ತವಾಕ್ಯಪ್ರಾಮಾಣ್ಯಂ ಪ್ರತ್ಯಕ್ಷೇಣೋಪಲಭ್ಯತೇ ।

ವರಾದಯೋಽಪಿ ತದ್ದತ್ತಾಃ ಸದಾ ಸತ್ಯಾ ಭವಂತಿ ಹಿ ॥ ೧೨೯ ॥

ಯೋಗಿಗಳಿಂದ ಉಕ್ತವಾದ ವಾಕ್ಯಗಳಿಗೆ ಪ್ರತ್ಯಕ್ಷಸಂವಾದದಿಂದ ಪ್ರಾಮಾಣ್ಯವು ನಿಶ್ಚಯವಾಗುವುದು. ಹಾಗಿದ್ದರೂ ನಾವು ಹೇಳಿದ ಯೋಗಿಗಳ ವಾಕ್ಯವು ನಿನ್ನಿಂದ ನಿಷೇಧಿಸಲ್ಪಡುವುದಾದರೆ, ಹಾಗೆಯೇ ನಿನ್ನ ಚಾರ್ವಾಕಾಚಾರ್ಯನ ವಾಕ್ಯವೂ ಏಕೆ ನಿಷೇಧಿಸಲ್ಪಡುವುದಿಲ್ಲ? ಎನ್ನುವ ಪ್ರಶ್ನೆಯು ಇಲ್ಲಿ ಸಂಭಾವಿತವು. ಆ ಯೋಗಿಗಳಿಂದ ಕೊಡಲ್ಪಟ್ಟ ವರಗಳೂ ಶಾಪಗಳೂ ಕೂಡ ಯಾವಾಗಲೂ ಸತ್ಯವೇ ಆಗುವುದು ಕಂಡಿದೆ. ಯಾವಾಗಲೂ ನಿಯಮದಿಂದ ಯಥಾರ್ಥವಾದುದನ್ನೇ ನುಡಿಯುವ ಯೋಗಿಗಳ ವಾಕ್ಯವನ್ನೂ ನಿಷೇಧಿಸುವುದಾದರೆ ನಿಮ್ಮ ಆಚಾರ್ಯನ ವಾಕ್ಯವೂ ನಿಷೇಧಕ್ಕೆ ಅರ್ಹವೇ ಆಗುವುದು ಎಂದು ತಾತ್ಪರ್ಯ.

ಹೀಗೆ ಮೋಕ್ಷಾಭಾವವನ್ನು ಹೇಳುವ ಚಾರ್ವಾಕಮತದ ಅಪ್ರಾಮಾಣ್ಯವನ್ನು ಉಪಪಾದಿಸಲಾಯಿತು. ಈಗ ಬೇರೆ ಹೇತುವಿನಿಂದಲೂ ಅದಕ್ಕೆ ಅಪ್ರಮಾಣ್ಯವನ್ನು ಉಪಪಾದಿಸುತ್ತಾರೆ –

ಅಪ್ರಾಮಾಣ್ಯಂ ತದುಕ್ತೇಶ್ಚ ವೃಥಾವಾಚಾವಸೀಯತೇ ।

ನ ಹಿ ಪ್ರಯೋಜನಂ ಕಿಂಚಿತ್ಪರಲೋಕನಿವಾರಣಾತ್ ॥ ೧೩೦ ॥

ವೃಥಾವಾಚಂ ವೃಥಾ ಹನ್ಯಾದ್ಯದಿ ತಸ್ಯ ಕಿಮುತ್ತರಂ ।

ಚಾರ್ವಾಕನ ಉಕ್ತಿಗೆ ಪ್ರಯೋಜನವಿಲ್ಲದ ಪ್ರಯುಕ್ತ ಅಪ್ರಾಮಾಣ್ಯವು ನಿಶ್ಚಿತವಾಗುತ್ತದೆ. ಮೋಕ್ಷಾದಿ ಪರಲೋಕವನ್ನು ನಿರಾಕರಿಸುವುದರಿಂದ ಯಾವ ಪ್ರಯೋಜನವೂ ಇಲ್ಲವಷ್ಟೆ. ಅದೃಷ್ಟವಾದ ಧರ್ಮಾಧರ್ಮಗಳಾಗಲೀ, ಸ್ವರ್ಗ ನರಕಾದಿಗಳಾಗಲೀ ಇಲ್ಲವೆಂದು ವೃಥಾ ಉಪದೇಶ ಮಾಡುವ ಗುರುವನ್ನಾಗಲೀ ಅವನ ಶಿಷ್ಯನನ್ನಾಗಲೀ ಯಾವನಾದರೂ ವೃಥಾ ಸಂಹರಿಸಿದರೆ, ಅವನನ್ನು ಹಾಗೇಕೆ ಮಾಡಿದೆಯೆಂದು ಕೇಳುವ ಹಾಗಿಲ್ಲ. ಹಾಗೆ ಕೇಳಿದರೆ ಅವನು ನೀಡುವ ಉತ್ತರವಾದರೂ ಏನಿರುವುದು? ಅದಕ್ಕೆ ಏನೂ ಉತ್ತರವಿಲ್ಲವೆಂದು ತಾತ್ಪರ್ಯ.

ಹೀಗೆ ಚಾರ್ವಾಕನ ಉಕ್ತಿಗೆ ವೃಥಾತ್ವವೂ ಅನರ್ಥಕಾರಣತ್ವವೂ ಇರಲಿ. ಹಾಗಿದ್ದರೂ ಅಪ್ರಮಾಣ್ಯವು ಯಾವುದರಿಂದ ಎಂದರೆ –

ಸ್ವಜೀವನವಿರೋಧಾಯ ವದನ್ ಕಿಂ ನಾಮ ಬುದ್ಧಿಮಾನ್ ॥ ೧೩೧ ॥

ತನ್ನ ಹಾಗೂ ತನ್ನ ಶಿಷ್ಯರ ಜೀವನದ ವಿರೋಧಕ್ಕಾಗಿ ವ್ಯರ್ಥವೂ ಅನರ್ಥಕ್ಕೆ ಕಾರಣವೂ ಆದ ಮಾತನ್ನು ಹೇಳುವವನು ಬುದ್ಧಿವಂತನೆನಿಸುವನೇ? ಅಂದರೆ ಅವನು ವಿವೇಕಶೂನ್ಯನು ಎಂದು ತಾತ್ಪರ್ಯ.

ಮೇಲೆ ಹೇಳಿದ ವಿಷಯವನ್ನೇ ಬುದ್ಧ್ಯಾರೋಢಕ್ಕಾಗಿ ಮತ್ತೆ ಸಂಕ್ಷಿಪ್ತವಾಗಿ ಹೇಳುತ್ತಾರೆ –

ಪ್ರಾಮಾಣ್ಯೇ ಸಂಶಯಃ ಕಿಂ ಸ್ಯಾತ್ತಯೋಃ ಪುರುಷಯೋರಪಿ ।

ಸ್ವಜೀವನವಿರುದ್ಧೋಕ್ತಿರಜ್ಞೋ ದೃಷ್ಟಸ್ಯ ಚಾಪಿ ಯಃ ॥ ೧೩೨ ॥

ಯಶ್ಚಾಂತೀದ್ರಿಯದೇವೋಕ್ತಿಶ್ರೋತಾ ದೃಷ್ಟಪರಾವರಃ ।

ಅತೀತಾನಾಗತಂ ಸರ್ವಂ ಲೋಕಾನುಭವಮಾಪಯನ್ ॥ ೧೩೩ ॥

ಚಾರ್ವಾಕನು ತನ್ನ ಹಾಗೂ ಶಿಷ್ಯರ ಜೀವನಕ್ಕೆ ವಿರುದ್ಧವಾಗುವ ರೀತಿಯಲ್ಲಿ ಉಪದೇಶ ಮಾಡುವನು ಹಾಗೂ ಪ್ರತ್ಯಕ್ಷ ವಿಷಯದಲ್ಲಿಯೂ ಅಜ್ಞನಾಗಿರುವನು. ಆದರೆ ಯೋಗಿಯು ಇಂದ್ರಿಯಕ್ಕೆ ಅಗೋಚರವಾದ ದೇವತೆಗಳ ವಚನಗಳನ್ನು ಕೇಳುವನು (ಅಂದರೆ ಅವರ ಮಾತಿನಲ್ಲಿ ವಿಶ್ವಾಸವನ್ನು ಹೊಂದಿರುವನು), ಪರಾಪರ ತತ್ವಗಳನ್ನು ಬಲ್ಲವನು, ಅತೀತಾನಾಗತವಾದ ಎಲ್ಲ ವಸ್ತುಗಳ ವಿಷಯದಲ್ಲಿ ಪ್ರತ್ಯಕ್ಷ ಸಂವಾದದಿಂದ ಜನರಲ್ಲಿ ವಿಶ್ವಾಸವನ್ನು ಹೊಂದಿಸಿ ಕೊಡುವನು. ಹೀಗಿರುವಾಗ ಯೋಗಿ ಚಾರ್ವಾಕರುಗಳಲ್ಲಿ ಯಾರ ವಚನವು ಪ್ರಮಾಣ ಎನ್ನುವ ವಿಷಯದಲ್ಲಿ ಸಂಶಯವು ಬರುವುದೋ ಏನು?

ಹೀಗೆ ಚಾರ್ವಾಕಾಚಾರ್ಯನ ಪ್ರತ್ಯಕ್ಷಕ್ಕೆ ಅಪ್ರಾಮಾಣ್ಯವೂ, ಯೋಗಿಪ್ರತ್ಯಕ್ಷಕ್ಕೆ ಪ್ರಾಮಾಣ್ಯವೂ ಹೇಳಲ್ಪಟ್ಟಿತು. ಯೋಗಿಯ ವಚನದಿಂದ ತಿಳಿಯಲ್ಪಟ್ಟ ಯೋಗಿಯ ಪ್ರತ್ಯಕ್ಷದಿಂದ ಮೋಕ್ಷವು ಸಿದ್ಧಿಸುವುದೆಂದೂ ಉಪಪಾದಿಸಲಾಯಿತು. ಈಗ ವೇದದಿಂದಲೂ ಅದನ್ನು ಸಾಧಿಸುವ ಇಚ್ಛೆಯಿಂದ ವೇದಪ್ರಾಮಾಣ್ಯದಲ್ಲಿ ಸಂಶಯ ವ್ಯಕ್ತಪಡಿಸುವ ಪರಕೀಯನು ಮಾಡಬಹುದಾದ ವಿಕಲ್ಪಗಳನ್ನು ಒಂದೊಂದಾಗಿ ನಿರಾಕರಿಸುತ್ತಾರೆ.

ಸಮಗ್ರವಾದ ವೇದಕ್ಕೆ ಸಂವಾದವು ಇಲ್ಲದಿರುವ ನಿಮಿತ್ತದಿಂದ ವೇದಕ್ಕೆ ಅಪ್ರಾಮಾಣ್ಯವು ಎನ್ನುವ ಮೊದಲನೆಯ ವಿಕಲ್ಪವನ್ನು 'ಅತಃ' ಎನ್ನುವ ವಚನದಿಂದ ನಿರಾಕರಿಸುತ್ತಾರೆ –

ಅತಃ ಪ್ರತ್ಯಕ್ಷಗಮ್ಯತ್ವಾದ್ವೇದಮಾತ್ಮಸ್ಯ ಚ ಸ್ಫುಟಮ್ ।

ವೈದಿಕ ಕರ್ಮಾನುಷ್ಠಾನವುಳ್ಳವರಿಗೆ ಫಲಸಿದ್ಧಿಯು ಕಂಡಿರುವುದರಿಂದಲೂ, ಪ್ರತ್ಯಕ್ಷಸಂವಾದದಿಂದ ಸಿದ್ಧವಾಗಿರುವುದರಿಂದಲೂ, ವೇದಪ್ರಾಮಾಣ್ಯವು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ವೇದಪ್ರಾಮಾಣ್ಯವು ಸಿದ್ಧಿಸುವುದರಿಂದ ವೇದೋಕ್ತ ಮೋಕ್ಷರೂಪ

ಫಲವೂ ಸಿದ್ಧವಾಗುವುದೆಂದು ಭಾವ.

ವೇದದ ಭಾಗವಿಶೇಷಕ್ಕೆ ಸಂವಾದವಿಲ್ಲವೆನ್ನುವ ಎರಡನೆಯ ವಿಕಲ್ಪವನ್ನು 'ಯದಿ' ಎನ್ನುವ ವಚನದಿಂದ ದೂಷಿಸುತ್ತಾರೆ –

ಯದ್ಯಾಗಮಸ್ಯ ನೋ ಮಾತ್ವಮಕ್ಷಜಸ್ಯ ತಥಾ ಭವೇತ್ ॥ ೧೩೪ ॥

ವೇದದ ಭಾಗವಿಶೇಷಕ್ಕೆ ಸಂವಾದವಿಲ್ಲದಿರುವ ಪ್ರಯುಕ್ತ ಸಮಗ್ರವಾದ ವೇದಕ್ಕೆ ಅಪ್ರಾಮಾಣ್ಯವು ಹೇಳಲ್ಪಡುವುದಾದರೆ, ಪ್ರತ್ಯಕ್ಷಮಾತ್ರಕ್ಕೆ ಹಾಗೆಯೇ ಅಪ್ರಾಮಾಣ್ಯವು ಆಗುವುದು. ಹೇಗೆಂದರೆ ಸಂವಾದವಿಲ್ಲದಿರುವುದರಿಂದ ನಮ್ಮ ಸುಖಾದಿ ವಿಷಯಕವಾದ ಪ್ರತ್ಯಕ್ಷಕ್ಕೂ ಅಪ್ರಮಾಣ್ಯವು ಬರಬೇಕಾಗುವುದು.

ಪ್ರತ್ಯಕ್ಷವು ಸ್ವತ ಏವ ಪ್ರಮಾಣವು. ಆದ್ದರಿಂದ ಅಲ್ಲಿ ಸಂವಾದದಿಂದ ಏನು ಪ್ರಯೋಜನವು ಎಂದರೆ –

ಯದ್ಯಕ್ಷಜಸ್ಯ ಮಾತ್ವಂ ಸ್ಯಾದಾಗಮಸ್ಯ ಕಥಂ ನ ತತ್ ।

ಸಂವಾದವಿಲ್ಲದ ಪ್ರತ್ಯಕ್ಷಕ್ಕೆ ಸ್ವತ ಏವ ಪ್ರಾಮಾಣ್ಯವು ಇರುವುದಾದರೆ ಅದೇ ರೀತಿ ಆಗಮಕ್ಕೆ ಸ್ವತ ಏವ ಪ್ರಾಮಾಣ್ಯವು ಹೇಗೆ ಆಗುವುದಿಲ್ಲ?

ಉನ್ಮತ್ತನ ವಾಕ್ಯದಂತೆ ವಾಕ್ಯತ್ವವಿದ್ದ ಪ್ರಯುಕ್ತ ವೇದವು ಅಪ್ರಮಾಣವೆಂಬ ಮೂರನೆಯ ವಿಕಲ್ಪವನ್ನು ದೂಷಿಸುತ್ತಾರೆ –

ಲೋಕವಾಕ್ಯಾದ್ವಿಶೇಷಶ್ಚಾವ್ಯಭಿಚಾರೇಣ ಸಿಧ್ಯತಿ ॥ ೧೩೫ ॥

ಉನ್ಮತ್ತಾದಿಗಳ ವಾಕ್ಯಕ್ಕೆ ಬಾಧವು ಕಂಡುಬರುವುದು. ಆದರೆ ವೇದವಾಕ್ಯವು ಉನ್ಮತ್ತನ ವಾಕ್ಯದಂತಲ್ಲ. ಅದಕ್ಕೆ ಬಾಧರಾಹಿತ್ಯವೆಂಬ ವಿಶೇಷವಿದೆ. ಆದಪ್ರಯುಕ್ತ ವೇದಕ್ಕೆ ಪ್ರಮಾಣ್ಯವು ಸಿದ್ಧಿಸುವುದು. ವೈದಿಕವಾದ ಅರ್ಥವು ಪ್ರತ್ಯಕ್ಷಸಿದ್ಧವಲ್ಲ. ಪ್ರತ್ಯಕ್ಷದಿಂದ ವೇದಕ್ಕೆ ಬಾಧಿತತ್ವವು ಸಿದ್ಧಿಸುವುದಿಲ್ಲ. ಬಾಧಿತವಾದ್ದರಿಂದ ವೇದಕ್ಕೆ ಅಪ್ರಮಾಣ್ಯವು ಎನ್ನುವ ನಾಲ್ಕನೆಯ ವಿಕಲ್ಪವೂ ಇದರಿಂದಲೇ ನಿರಸ್ತವಾಯಿತು. ವೇದಕ್ಕೆ ಫಲಸಂವಾದವಿದೆಯೆಂದು ಈಗಾಗಲೇ ಉಪಪಾದಿಸಲಾಗಿದೆ. ಆದ್ದರಿಂದ ವೇದಪ್ರಾಮಾಣ್ಯ ಸಿದ್ಧಿಗೆ ಯಾವ ಬಾಧಕವೂ ಇಲ್ಲ.

ಹೀಗೆ ಚಾರ್ವಾಕ ಮತವನ್ನು ನಿರಾಕರಿಸಲಾಯಿತು. ಈಗ ಜೈನರು ಹೇಳುವ ಮೋಕ್ಷಸಾಧನವನ್ನು ಮೊದಲು 'ಅಸ್ತಿ' ಇತ್ಯಾದಿ ವಚನದಿಂದ ಅನುವಾದ ಮಾಡಿ, ಅನಂತರ 'ಕಥಂ' ಇತ್ಯಾದಿ ದೂಷಣ ಮಾಡುತ್ತಾರೆ –

ಅಸ್ತಿ ಮೋಕ್ಷೋಽಪಿ ಧರ್ಮೇಣ ಯಥಾರ್ಥಜ್ಞಾನತೋಽಪಿ ಚ ।

ಪ್ರಾಮಾಣ್ಯಮನುಮಾಯಾಶ್ಚ ಜಿನಸ್ಯಾಪ್ತತ್ವಸಾಧನೇ ॥ ೧೩೬ ॥

ತದ್ವಾಕ್ಯಾದ್ಧರ್ಮಸಜ್ಞಾನವಿಜ್ಞಪ್ತಿರ್ಭವತೀತಿ ಚ ।

ಮೋಕ್ಷವೂ ಇದೆ. ಆ ಮೋಕ್ಷವು ಧರ್ಮದಿಂದಲೂ ಯಥಾರ್ಥಜ್ಞಾನ ದಿಂದಲೂ ಲಭಿಸುವುದು. ಹೀಗೆ ಮೋಕ್ಷವನ್ನೂ ಮೋಕ್ಷಸಾಧನವನ್ನೂ ಜೈನರು ಅಂಗೀಕರಿಸುತ್ತಾರೆ. ಹಾಗಾದರೆ ವಿವಾದವಾದರೂ ಯಾವ ವಿಷಯದಲ್ಲಿ ಎಂದು ಕೇಳಿದರೆ ಅದನ್ನು ತೋರಿಸುತ್ತಾರೆ. ಜೈನರ ಪ್ರಕಾರ ಯಥಾರ್ಥ ಜ್ಞಾನ, ಸಮ್ಯಕ್ ಚಾರಿತ್ರ್ಯ (ಧರ್ಮ) ಇವುಗಳ ಸಮುಚ್ಚಯದಿಂದ ಸಾಧ್ಯವಾದುದು ಮೋಕ್ಷವು. ಜಿನನಿಗೆ ಆಪ್ತತ್ವವನ್ನು ಸಾಧಿಸುವ ವಿಷಯದಲ್ಲಿ ಜಿನದರ್ಶಿಗಳ ವಾಕ್ಯವು ಪ್ರಮಾಣ. ಜಿನನ ವಾಕ್ಯದಿಂದ ಸರಿಯಾದ ಧರ್ಮಜ್ಞಾನವೂ, ತತ್ವಜ್ಞಾನವೂ ಆಗುವುದೆಂದು ಜೈನರು ಹೇಳುತ್ತಾರೆ. ಅಂದರೆ ಜಿನನ ವಾಕ್ಯಕ್ಕೆ 'ಜಿನಃ ಆಪ್ತಃ ಅಸ್ಖಲಿತವಾಕ್ಯತ್ವಾತ್' ಇತ್ಯಾದಿ ಅನುಮಾನದಿಂದ ಆಪ್ತತ್ವ ನಿಶ್ಚಯವು. ಹೀಗೆ ಆಪ್ತತ್ವವೆಂದು ಭಾವಿಸಲ್ಪಟ್ಟ ವಾಕ್ಯದಿಂದ ಮೋಕ್ಷಸಾಧನದ ಸಿದ್ಧಿಯು. ಸ್ವತಃ ಪ್ರಮಾಣವಾದ ವೇದದಿಂದ ಅಲ್ಲ ಎಂದು ಅಭಿಪ್ರಾಯ.

ಧರ್ಮಜ್ಞಾನಗಳ ಸ್ವರೂಪದಲ್ಲಿಯೂ ವಿಪ್ರತಿಪತ್ತಿಯನ್ನು ತೋರಿಸುತ್ತಾರೆ –

ಧರ್ಮೋ೨ಹಿಂಸಾಪರೋ ನಾನ್ಯೋ ಜ್ಞಾನಂ ಪುದ್ಗಲದರ್ಶನಮ್ ।। ೧೫೭ ।।

ಇತಿ ಜೈನಾಃ ಕಥಂ ತತ್ಸ್ಯಾತ್ ಪ್ರಮಾಣಮನುಮಾನತಃ ।

ಅಹಿಂಸಾಪ್ರಧಾನವಾದುದು ಧರ್ಮ. ಹಿಂಸೆಯಿಂದ ಕೂಡಿದ ಯಜ್ಞಾದಿಗಳು ಧರ್ಮವಲ್ಲ. ಆತ್ಮನಿಗೆ ದೇಹಾದಿಗಳಿಂದ ಭೇದರೂಪವಾದ ದರ್ಶನವೇ ಯಥಾರ್ಥ ಜ್ಞಾನ. ಹೀಗೆ ಜೈನರು ಹೇಳುತ್ತಾರೆ. ಅನುಮಾನದಿಂದ ಜಿನವಾಕ್ಯವು ಪ್ರಮಾಣವು ಎಂದು ತಿಳಿಯಲು ಹೇಗೆ ಯೋಗ್ಯವಾಗುವುದು?

ಜಿನವಾಕ್ಯಕ್ಕೆ ಅನುಮಾನದಿಂದ ಪ್ರಾಮಾಣ್ಯವು ಏಕೆ ಕೂಡುವುದಿಲ್ಲ ಎಂದು ಕೇಳಿದರೆ ಅದಕ್ಕೆ ಹೇತುವನ್ನು ಹೇಳುವುದಕ್ಕಾಗಿ ಉಪೋದ್ಘಾತರೂಪದಿಂದ ಪ್ರತ್ಯಕ್ಷ ಅನುಮಾನ ಆಗಮಗಳ ಸ್ವರೂಪವನ್ನು ಕ್ರಮದಿಂದ ಹೇಳುತ್ತಾರೆ –

ವಿಷಯಾನ್ಪ್ರತಿ ಸ್ಥಿತಂ ಹ್ಯಕ್ಷಂ ಪ್ರತ್ಯಕ್ಷಮಿತಿ ಗೀಯತೇ ।। ೧೫೮ ।।

ಪ್ರತ್ಯಕ್ಷಶಬ್ದಾನುಸಾರಾದನುಮೇತಿ ಪ್ರಕೀರ್ತಿತಾ ।

ನಿರ್ದೋಷಗಳಾದ ವಿಷಯಗಳನ್ನು ಕುರಿತು ಇರತಕ್ಕ ದೋಷರಹಿತವಾದ ಇಂದ್ರಿಯವು ಪ್ರತ್ಯಕ್ಷವೆಂದು ಹೇಳಲ್ಪಡುತ್ತದೆ. ಅನುಮಾನಕ್ಕೆ ಪ್ರತ್ಯಕ್ಷ ಆಗಮಗಳ ಅನುಸಾರವಾಗಿಯೇ ಪ್ರಾಮಾಣ್ಯವು. ಆದ್ದರಿಂದಲೇ ಅದು 'ಅನುಮಾ' ಎಂದು ಹೇಳಲ್ಪಡುವುದು.

ಆಸಮಂತಾದ್ಗಮಯತಿ ಧರ್ಮಾಧರ್ಮೌ ಪರಂ ಪದಂ ।। ೧೫೯ ।।

ಯಚ್ಚಾಪ್ಯತೀಂದ್ರಿಯಂ ತ್ವನ್ಯತ್ತೇನಾಸಾವಾಗಮಃ ಸ್ಮೃತಃ ।

'ಆ' ಎಂದರೆ ಎಲ್ಲ ರೀತಿಯಿಂದಲೂ ಚೆನ್ನಾಗಿ ಧರ್ಮಾಧರ್ಮಗಳನ್ನೂ, ಶ್ರೇಷ್ಠವಾದ ಪರಬ್ರಹ್ಮಸ್ವರೂಪವನ್ನೂ ಯಾವುದು 'ಗಮಯತಿ' ಎಂದರೆ ತಿಳಿಸಿ ಕೊಡುವುದೋ, ಅತೀಂದ್ರಿಯವಾದುದನ್ನೂ ಹಾಗೂ ಅನುಮಾನದಿಂದ ತಿಳಿಯಲು ಅಶಕ್ಯವಾದ ವಿಷಯಗಳನ್ನೂ ಕೂಡ ತಿಳಿಸಿಕೊಡುವುದೋ, ಆ ಕಾರಣದಿಂದಲೇ ಅದು ಆಗಮವೆಂದು ಹೇಳಲ್ಪಟ್ಟಿದೆ.

ಏತೇನ ಕಾರಣೇನೈವ ತತ್ತನ್ಮಾನತ್ವಮಿಷ್ಯತೇ ।। ೧೪೦ ।।

ಈ ಕಾರಣದಿಂದಲೇ ಪ್ರತ್ಯಕ್ಷಾದಿಗಳಿಗೆ ಪ್ರತ್ಯಕ್ಷಾದಿತ್ವವು ಅಂದರೆ ಪ್ರತ್ಯಕ್ಷಾದಿ ಶಬ್ದವಾಚ್ಯತ್ವವು ಪ್ರಾಮಾಣಿಕರಿಂದ ಅಂಗೀಕರಿಸಲ್ಪಡುತ್ತದೆ.

ಸ್ವರೂಪಂ ಹಿ ತದೇತೇಷಾಮನ್ಯಥಾऽಸಿದ್ಧಿಮಾನತಃ ।

ಅತೋऽನುಮಾ ಕಥಂ ಧರ್ಮಂ ಪುದ್ಗಲಂ ಚಾಪಿ ದರ್ಶಯೇತ್ ।। ೧೪೧ ।।

ನಿರ್ದೋಷವಾದ ವಿಷಯಗಳ ಸಂಪರ್ಕವನ್ನು ಹೊಂದಿರುವ ದೋಷವಿಲ್ಲದ ಇಂದ್ರಿಯಾದಿಗಳನ್ನು ಹೊಂದಿರುವುದೇ ಪ್ರತ್ಯಕ್ಷಾದಿ ಪ್ರಮಾಣಗಳ ಲಕ್ಷಣವು. ಲಕ್ಷಣವೇ ಶಬ್ದಪ್ರವೃತ್ತಿಗೆ ನಿಮಿತ್ತವಾಗುತ್ತದೆ. ಅನ್ಯಥಾ ಅಸಿದ್ಧಿ ಹಾಗೂ ಅದರ ಪ್ರಮಾಣ ಇವುಗಳಿಂದ ಪ್ರಾಮಾಣ್ಯದ ಲಕ್ಷಣವು ನಿರೂಪಿಸಲ್ಪಡುತ್ತದೆ. ಬೇರೆ ಪ್ರಕಾರದಿಂದ ಪ್ರಮಾಣದ ಲಕ್ಷಣವನ್ನು ನಿರೂಪಿಸುವುದು ಸಾಧ್ಯವಿಲ್ಲ. ಆದಕಾರಣ ಅನುಮಾನದಿಂದ ಪ್ರಮಾಣವೆಂದು ತಿಳಿಯಲ್ಪಡುವ ಜಿನವಾಕ್ಯವು ಧರ್ಮವನ್ನೂ, ದೇಹಾತಿರಿಕ್ತ ಆತ್ಮನನ್ನೂ ಕೂಡ ಹೇಗೆ ತಾನೆ ತಿಳಿಸಿಕೊಡುವುದು? ಅಂದರೆ ಜಿನ ವಾಕ್ಯಕ್ಕೆ ಹಿಂದೆ ಹೇಳಿದ ಆಗಮಲಕ್ಷಣವಾಗಲೀ ಜಿನನಿಗೆ ಆಪ್ತತ್ವನಿಶ್ಚಯವಾಗಲೀ ಇಲ್ಲವಾದ ಪ್ರಯುಕ್ತ ಜಿನವಾಕ್ಯದಿಂದ ಧರ್ಮಾಧರ್ಮಗಳ ನಿಶ್ಚಯವು ಆಗುವುದಿಲ್ಲ ಎಂದು ತಾತ್ಪರ್ಯ.

ಕೇವಲ ಜಿನನ ವಾಕ್ಯಕ್ಕೆ ಅಸ್ಖಲಿತತ್ವವು ನಿಶ್ಚಯವಾಗಿಲ್ಲವೆಂದಷ್ಟೇ ಅಲ್ಲ. ಮತ್ತೆ ಸ್ಖಲನವೂ ಕಂಡುಬರುವುದು, ಆದ್ದರಿಂದ ಜಿನನ ವಾಕ್ಯಕ್ಕೆ ಅಸಿದ್ಧತ್ವವು ಎನ್ನುತ್ತಾರೆ –

ಸ್ವರೂಪೇ ಪುದ್ಗಲಸ್ಯೋಕ್ತಾ ದೋಷಾ ಆನಂದಮೇವ ಚ ।

ನ ಮನ್ಯತೇ ಪುದ್ಗಲಂ ಸ ದುಃಖಾಭಾವಃ ಸುಖಂ ತ್ವಿತಿ ।। ೧೪೨ ।।

ಮಾತ್ರಾಭೋಗಾತಿರೇಕೇಣ ಸುಖಾಧಿಕಸ್ಯ ದರ್ಶನಾತ್ ।

ದೇಹಾತಿರಿಕ್ತನಾದ ಮತ್ತು ದೇಹಸದೃಶನಾದ ಆತ್ಮನ ಸ್ವರೂಪದ ವಿಷಯದಲ್ಲಿ 'ಏವಂ ಚಾತ್ಮಾ ಕಾರ್ತ್ಸ್ನ್ಯಂ' ಇತ್ಯಾದಿಗಳಲ್ಲಿ ದೋಷಗಳು ಹೇಳಲ್ಪಟ್ಟಿವೆ. ಆದ್ದರಿಂದ ಜಿನನ ಮಾತುಗಳಿಗೆ ಸ್ಖಲಿತತ್ವವು. ಪ್ರಕಾರಾಂತರದಿಂದಲೂ ಜಿನನ ಮಾತಿನ ಸ್ಖಲನವನ್ನು ತೋರಿಸುತ್ತಾರೆ – ಜಿನನು ಆತ್ಮನನ್ನು ಆನಂದರೂಪಿಯೆಂದೇ ತಿಳಿಯುವುದಿಲ್ಲ. ಆದರೆ ತತ್ವಜ್ಞಾನಿಗಳು ಆತ್ಮನನ್ನು ಆನಂದಸ್ವರೂಪಿಯನ್ನಾಗಿಯೂ

ತಿಳಿಯುತ್ತಾರೆ. ಅಲ್ಲದೆ ಜಿನನು ಸುಖವನ್ನು ಭಾವರೂಪವೆಂದು ತಿಳಿಯುವುದಿಲ್ಲ. ಮತ್ತೆ ಅದು ದುಃಖಾಭಾವರೂಪವಾದುದೆಂದು ತಿಳಿಯುತ್ತಾನೆ. ಅದು ಅಯುಕ್ತವು. ಆದ್ದರಿಂದ ಜಿನನು ಸ್ಖಲಿತವಾದ ಮಾತುಳ್ಳವನು. ಶಬ್ದಾದಿ ವಿಷಯಗಳ ಅಧಿಕವಾದ ಭೋಗದಿಂದ ಸುಖಾಧಿಕ್ಯವೂ, ಅಲ್ಪಭೋಗದಿಂದ ಅಲ್ಪಸುಖವೂ ಎನ್ನುವುದು ಸಾಕ್ಷಿಗೋಚರವು.

ಸುಖಸ್ಯಾಭಾವತಾ ಕೇನ ನ ಚ ಸ್ಯಾತ್ಕಿಂ ವಿಪರ್ಯಯಃ ॥ ೧೪೩ ॥

ದುಃಖಾದಿಗಳಂತೆ ಸುಖದಲ್ಲಿ ತಾರತಮ್ಯವಿಲ್ಲವಾದ್ದರಿಂದ ಅದು ಭಾವ ರೂಪವಲ್ಲ ಎನ್ನುವುದು ಸರಿಯಲ್ಲ. ಸುಖವು ತಾರತಮ್ಯಯುಕ್ತವಲ್ಲ ಎನ್ನುವ ಪಕ್ಷದಲ್ಲಿ ಬುದ್ಧಿಯುಳ್ಳ ಯಾವನಾದರೂ ಹೆಚ್ಚಿನ ಸುಖಕ್ಕಾಗಿ ಹೆಚ್ಚಿನ ವಿಷಯ ಭೋಗವನ್ನು ಮಾಡುತ್ತಿರಲಿಲ್ಲ. ಆದ್ದರಿಂದ ಸುಖವು ತಾರತಮ್ಯಯುಕ್ತವೂ ಭಾವ ರೂಪವೂ ಆಗಿದೆ ಎಂದು ತಾತ್ಪರ್ಯ. ಸುಖಾಭಾವತ್ವವು ಪ್ರಮಾಣದಿಂದ ಸಿದ್ಧವಾಗುವುದು ಎಂದಿದ್ದರೆ ಈ ತಾರತಮ್ಯಾದಿ ಪ್ರತೀತಿಗೆ ಔಪಾಧಿಕತ್ವವನ್ನು ಹೇಳಬಹುದಿತ್ತು. ಆದರೆ ಈ ತಾರತಮ್ಯದ ಪ್ರತೀತಿಯು ಸಾಕ್ಷಿಗೋಚರವು. ಅಲ್ಲದೆ ಸುಖಕ್ಕೆ ಅಭಾವತ್ವವು ಯಾವ ಪ್ರಮಾಣದಿಂದಲೂ ಸಿದ್ಧಿಸುವುದಿಲ್ಲ. ಆದಪ್ರಯುಕ್ತ ತಾರತಮ್ಯಾದಿ ಪ್ರತೀತಿಯು ಔಪಾಧಿಕವೆನ್ನುವುದು ಅಯುಕ್ತವು.

ಹೀಗೆಯೇ ಪ್ರತೀತ್ಯಾದಿಗಳಿಗೆ ಔಪಾಧಿಕತ್ವವನ್ನು ಹೇಳಿದರೆ ಬಾಧಕವನ್ನು ಹೇಳುತ್ತಾರೆ 'ನ ಚ' ಎಂದು –

ಯಾವ ನಿಬಂಧನೆಯೂ ಇಲ್ಲದೆ ಸುಖತಾರತಮ್ಯಾದಿ ದರ್ಶನಾದಿಗಳಿಗೆ ಔಪಾಧಿಕತ್ವವನ್ನು ಕಲ್ಪಿಸಿದರೆ, ಆಗ ಸುಖವು ಭಾವರೂಪವು, ದುಃಖವು ಅದರ ಅಭಾವವು ಎಂದಾಗುವುದು. ಅದರಲ್ಲಿ ತಾರತಮ್ಯದರ್ಶನವು ಪ್ರತಿಯೋಗಿಯ ಸುಖೋಪಾಧಿನಿಮಿತ್ತವು. ಸುಖನಿವೃತ್ತಿಗಾಗಿ ಅಹಿಕಂಟಕಾದಿಗಳು – ಹೀಗೆ ಜಿನನು ಹೇಳಿದರೆ, ಇದಕ್ಕೆ ವಿಪರೀತವಾಗಿಯೂ ಏಕೆ ಆಗಲಾರದು ಎಂದು ಕೇಳುತ್ತಾರೆ. ಎರಡರಲ್ಲಿಯೂ ವಿಶೇಷವು ತೋರುವುದಿಲ್ಲವಾದ ಪ್ರಯುಕ್ತ, ಸ್ವಾಭಾವಿಕವಾಗಿ ತಾರತಮ್ಯವುಳ್ಳ ಸುಖದುಃಖಗಳೆರಡಕ್ಕೂ ಭಾವತ್ವವನ್ನು ಅಂಗೀಕರಿಸತಕ್ಕದ್ದು.

'ಸುಖಮಭಾವೋ ವಸ್ತುತ್ವಾತ್ ಸಮ್ಮತಾಭಾವವತ್' ಎನ್ನುವ ಪ್ರಮಾಣವಿದ್ದ ಪ್ರಯುಕ್ತ 'ಸುಖಸ್ಯಾಭಾವತಾ ಕೇನ' ಎಂದು ಹೇಳಿದ್ದು ಹೇಗೆ ಎಂದರೆ –

ಯದಿ ಭಾವೋಽಪಿ ಕಶ್ಚಿತ್ಸ್ಯಾತ್ ತಸ್ಯೈವಾಭಾವತಾ ಕುತಃ ।

ವಸ್ತುತ್ವಾತ್ ಎಂಬ ಹೇಪುವಿನಿಂದ ಸುಖಾಭಾವತ್ವವನ್ನು ಅನುಮೇಯಿಸುವನ ಮತದಲ್ಲಿ, ಯಾವುದಾದರೊಂದು ಪದಾರ್ಥವು ಭಾವವೂ ಕೂಡ ಆಗುವುದಾದರೆ, ಸುಖಕ್ಕೆ ಮಾತ್ರ ಅಭಾವತ್ವವು ಯಾವುದರಿಂದ ಎಂದು ಕೇಳುತ್ತೇವೆ.

ಹಾಗಾದರೆ ಎಲ್ಲ ಪದಾರ್ಥಗಳೂ ಅಭಾವರೂಪಗಳೇ ಎಂದು ಹೇಳಿದರೆ, ಅದನ್ನು ದೂಷಿಸುತ್ತಾರೆ 'ಯದಿ ಸರ್ವೇಪಿ' ಎಂದು –

ಯದಿ ಸರ್ವೇऽಪ್ಯಭಾವಾಃ ಸ್ಯುರನ್ಯೋನ್ಯಮಿತಿ ಭಾವತಾ ।। ೧೪೪ ।।

ಅಭಾವಾಭಾವತೈವ ಸ್ಯಾತ್ಕಿನ್ನಶ್ಚಿನ್ನಂ ತದಾ ಭವೇತ್ ।

ಎಲ್ಲ ಪದಾರ್ಥಗಳನ್ನೂ ಅನ್ಯೋನ್ಯಾಭಾವಗಳೆಂದು ತಿಳಿಯುವ ಪಕ್ಷದಲ್ಲಿ, ಆಗ ಭಾವತ್ವವೇ ಆಗುವುದು. ಹೀಗೆ ಎಲ್ಲ ಪದಾರ್ಥಗಳಿಗೂ ಅನ್ಯೋನ್ಯಾಭಾವತ್ವವನ್ನು ಹೇಳಿದ್ದರಿಂದ ನಮಗೆ ಯಾವ ಛಿನ್ನತ್ವವೂ ಆಗುವುದಿಲ್ಲ. ಏಕೆಂದರೆ ಅಭಾವದ ಅಭಾವವೆಂದರೆ ಭಾವತ್ವವೇ ಆಗುವುದು. ಮತ್ತೆ 'ಭಾವತ್ವಂ' ಇತ್ಯಾದಿ ವಚನದಿಂದ ಭಾವ ಮತ್ತು ಅಭಾವಗಳ ಸ್ವರೂಪವನ್ನು ಹೇಳುತ್ತಾರೆ –

ಭಾವತ್ವಂ ವಿಧಿರೂಪತ್ವಂ ನಿಷೇಧತ್ವಮಭಾವತಾ ।। ೧೪೫ ।।

ನಿಷೇಧಸ್ಯ ನಿಷೇಧೋಪಿ ಭಾವ ಏವ ಬಲಾದ್ಭವೇತ್ ।

ಪ್ರಥಮಪ್ರತಿಪತ್ತಿಸ್ತು ಭಾವಾಭಾವನಿಯಾಮಿಕಾ ।। ೧೪೬ ।।

ಭಾವತ್ವವೆಂದರೆ ವಿಧಿಸ್ವರೂಪತ್ವವು, ಅಭಾವವೆಂದರೆ ನಿಷೇಧಸ್ವರೂಪತ್ವವು. ಅಭಾವವೆಂದರೆ ನಿಷೇಧವು. ನಿಷೇಧಕ್ಕೆ ನಿಷೇಧವೂ ಕೂಡ ಅನುಭವದ ಬಲದಿಂದ ವಿಧಿರೂಪವಾದ ಭಾವಪದಾರ್ಥವೇ ಆಗುವುದು. ಪ್ರಥಮ ಪ್ರತಿಪತ್ತಿಯಲ್ಲಿ ವಿಧಿ ರೂಪದಿಂದ ತೋರುವುದು ಭಾವ ಪದಾರ್ಥ, ನಿಷೇಧರೂಪದಿಂದ ತೋರುವುದು ಅಭಾವ ಪದಾರ್ಥ. ಆದ್ದರಿಂದ ಪ್ರಾಥಮಿಕ ಜ್ಞಾನವೇ ಭಾವಾಭಾವ ನಿಯಾಮಕವು.

ಈ ಪ್ರಕಾರವಾಗಿ ಸ್ಖಲಿತ ವಚನತ್ವವುಳ್ಳ ಜಿನನ ವಾಕ್ಯಕ್ಕೆ ಅಯುಕ್ತತ್ವವನ್ನು ತೋರಿಸಿ, ಜಿನೋಕ್ತವಾದ ಮೋಕ್ಷಸಾಧನಕ್ಕೆ ಅಪ್ರಾಮಾಣಿಕತ್ವವು ಹೇಳಲ್ಪಟ್ಟಿತು. ಈಗ ಯುಕ್ತಿವಿರೋಧವನ್ನೂ ತೋರಿಸುತ್ತಾರೆ –

ನ ಚ ಪುದ್ಗಲವಿಜ್ಞಾನಂ ಮೋಕ್ಷದಂ ಭವತಿ ಕ್ವಚಿತ್ ।

ಆತ್ಮಜ್ಞಾನವು ಮುಕ್ತಿಯನ್ನು ಕೊಡತಕ್ಕುದು ಆಗುವುದಿಲ್ಲ, ಅಚೇತನವಾದ್ದರಿಂದ ಪಟದಂತೆಯೇ. ಏಕೆಂದರೆ ಅಚೇತನಕ್ಕೆ ಮೋಕ್ಷದಾತೃತ್ವವು ಎಲ್ಲಿಯೂ ಕಂಡಿಲ್ಲ.

ಆತ್ಮಜ್ಞಾನವು ಅಚೇತನವಾದ್ದರಿಂದ ಮೋಕ್ಷದಾತೃವಲ್ಲವೆಂದರೆ, ಆತ್ಮನೇ ಮೋಕ್ಷದಾತೃವು ಚೇತನನಾದ್ದರಿಂದ ಎಂದು ಹೇಳುತ್ತೇವೆ. ಏಕೆಂದರೆ ಆತ್ಮನು ತಿಳಿಯಲ್ಪಟ್ಟಾಗ, ಅದರಿಂದ ಪ್ರಸನನ್ನಾಗಿ ಮೋಕ್ಷವನ್ನು ಕೊಡುತ್ತಾನೆ ಎಂದರೆ –

ಅಸ್ವಾತಂತ್ರ್ಯಾತ್ಪುದ್ಗಲಸ್ಯ ಜ್ಞಾತೋऽಪಿ ಸುಖದೋ ನ ಹಿ ।। ೧೪೭ ।।

ನ ಹಿ ದುಃಖಿಪರಿಜ್ಞಾನಾದ್ದುಃಖಿತ್ವಂ ವಿನಿವರ್ತತೇ ।

ಆತ್ಮನಿಗೆ ಸ್ವಾತಂತ್ರ್ಯವಿಲ್ಲದ ಪ್ರಯುಕ್ತ, ತಿಳಿಯಲ್ಪಟ್ಟ ಆತ್ಮನೂ ಕೂಡ ಮೋಕ್ಷ ದಾಯಕನು ಆಗಲಾರನು. ಪಟಾದಿಗಳಲ್ಲಿ ವ್ಯಾಪ್ತಿಯು ಸ್ಪಷ್ಟವಾಗಿದೆ ಎನ್ನುವುದನ್ನು ಹಿ ಶಬ್ದದಿಂದ ಸೂಚಿಸುತ್ತಾರೆ. ಹಿಂದೆ ಹೇಳಿದ ಎರಡು ಪಕ್ಷಗಳನ್ನೂ ನ ಹಿ ದುಃಖಿ ಎಂಬ ವಚನದಿಂದ ನಿರಾಕರಿಸುತ್ತಾರೆ – ದುಃಖವುಳ್ಳವನ ಜ್ಞಾನದಿಂದ ದುಃಖಿತ್ವವು ಬಿಟ್ಟು ಹೋಗುವುದಿಲ್ಲ. ಆತ್ಮನು ಅಸ್ವತಂತ್ರನಾದ್ದರಿಂದ ದುಃಖಿಯು ದೇವದತ್ತನಂತೆ. ಆದ್ದರಿಂದ ದುಃಖಿಯಾದ ಆತ್ಮನ ಜ್ಞಾನದಿಂದ ಅವನನ್ನು ತಿಳಿದವನ ದುಃಖವು ನಿವೃತ್ತಿಯಾಗಲಾರದು.

ಹಾಗಾದರೆ ಆತ್ಮಜ್ಞಾನವು ದೇವದತ್ತನು ಹಸುವನ್ನು ದಾನ ಕೊಡುವಂತೆ ಮೋಕ್ಷವನ್ನು ಕೊಡುವುದಿಲ್ಲ. ಮತ್ತೆ ಕತ್ತಲೆಗೆ ವಿರೋಧವಾದ ಬೆಳಕು ಕತ್ತಲೆಯನ್ನು ತೆಗದುಹಾಕುವಂತೆ ಆತ್ಮಜ್ಞಾನವು ದುಃಖವನ್ನು ತೆಗೆದುಹಾಕುವುದು. ಸ್ವಾತ್ಮಜ್ಞಾನವೇ ಸ್ವದುಃಖವಿರೋಧಿಯು, ಕೇವಲ ಆತ್ಮಜ್ಞಾನಮಾತ್ರವಲ್ಲ ಎಂದು ಆಶಂಕಿಸಿದರೆ –

ಯದಿ ಪುದ್ಗಲವಿಜ್ಞಾನಾದದುಃಖೀ ಸ್ಯಾತ್ಕಥಂಚನ ।। ೧೪೮ ।।

ದೇಹವಾನಪಿ ನಾದುಃಖೀ ಕಿಂ ಜ್ಞಾನಾದುತ್ತರಂ ಸದಾ ।

ದುಃಖ ಮತ್ತು ಆತ್ಮಜ್ಞಾನಗಳಿಗೆ ವಿರುದ್ಧತ್ವವಿರುವ ಪ್ರಯುಕ್ತ, ಆತ್ಮಜ್ಞಾನದಿಂದ ಹೇಗಾದರೂ ಅದುಃಖಿಯು ಆಗುವನು ಎನ್ನುವ ಪಕ್ಷದಲ್ಲಿ, ಜ್ಞಾನೋತ್ತರ ಕಾಲದಲ್ಲಿ ಶರೀರವುಳ್ಳವನೂ ಕೂಡ ನಿರಂತರದಲ್ಲಿಯೂ ಅದುಃಖಿಯು ಏಕೆ ಆಗಲಾರನು?

ಹಾಗಾದರೆ ಈಶ್ವರಜ್ಞಾನವು ಮೋಕ್ಷಸಾಧನವು ಎಂಬುದಾಗಿ ನಿಮ್ಮಿಂದಲೂ ಅಂಗೀಕರಸಲ್ಪಟ್ಟಿದೆ. ಅಲ್ಲಿಯೂ ಈ ದೂಷಣವು ಸಮಾನವೇ ಎಂದರೆ –

ಈಶಕ್ಲೃಪ್ತ್ಯನುಸಾರೇಣ ಸ್ಯಾತ್ಕಾಲಾದೀಶವಾದಿನಃ ।। ೧೪೯।।

ಈಶ್ವರನನ್ನು ಒಪ್ಪುವ ನಮ್ಮ ಮತದಲ್ಲಿಯೂ ಈಶ್ವರೇಚ್ಛೆಗೆ ಅನುಸಾರವಾಗಿ ಕೆಲವು ಸಮಯಾನಂತರ ಮುಕ್ತಿಯು ಆಗುವುದು. ಅಂದರೆ ಈಶ್ವರನ ಜ್ಞಾನವೇ ಮೋಕ್ಷಸಾಧನವೆಂದು ನಾವು ಹೇಳುವುದಿಲ್ಲ. ಮತ್ತೆ ಪ್ರಸನನ್ನಾದ ಪರಮೇಶ್ವರನೇ ಮೋಕ್ಷಸಾಧನನು ಎಂದು ತಾತ್ಪರ್ಯ.

ಹೀಗೆ ಆತ್ಮಜ್ಞಾನಕ್ಕೆ ಮೋಕ್ಷಸಾಧನತ್ವವನ್ನು ನಿರಾಕರಿಸಿ, ಕರ್ಮಕ್ಕೂ ಕೂಡ ಮೋಕ್ಷಸಾಧನತ್ವವನ್ನು ನಿರಾಕರಿಸುತ್ತಾರೆ –

ಕರ್ಮಹೇತುತ್ವಮಪಿ ತು ನಿಶ್ಚೈತನ್ಯಾನ್ನ ಹಿ ಕ್ವಚಿತ್ ।

ಮುಕ್ತಿಯನ್ನು ಕುರಿತು ಕರ್ಮಕ್ಕೆ ಕಾರಣತ್ವವೂ ಕೂಡ ಕೂಡುವುದೇ ಇಲ್ಲ, ಅದು ಅಚೇತನವಾದುದರಿಂದ. ಯಾವ ಅಚೇತನದಲ್ಲಿಯೂ ಮೋಕ್ಷಸಾಧನತ್ವವು ನಮ್ಮಂತೆ ನಿಮಗೂ ಸಮ್ಮತವಲ್ಲ.

ಅಚೇತನತ್ವವಿದ್ದರೂ ವಿಶಿಷ್ಟವಾದ ಈ ಕರ್ಮವು ಮೋಕ್ಷಕ್ಕೆ ಸಾಧನವು ಏಕೆ ಆಗಲಾರದು ಎಂದರೆ – ಮೋಕ್ಷಪರ್ಯಂತವಾಗಿ ಮಾಡಲ್ಪಡತಕ್ಕದು ಒಂದೇ ಕರ್ಮವೋ ಅಥವಾ ಅನೇಕ ಕರ್ಮಗಳೋ ಎಂದು ವಿಕಲ್ಪ ಮಾಡಿಕೊಂಡು ಎರಡು ಪಕ್ಷಗಳಿಗೂ ಬಾಧಕವನ್ನು ಹೇಳುತ್ತಾರೆ –

ಅಶೇಷದುಃಖವಿಲಯೇ ನೇದಾನೀಂ ಕಾರಣಂ ಯಥಾ ।। ೧೫೦ ।।

ತಥೋತ್ತರಂ ನ ಚೈವ ಸ್ಯಾದ್ದೃಷ್ಟಿಪೂರ್ವಾನುಮಾ ಯತಃ ।

ಹೇಗೆ ಮೊದಲನೆಯ ಕ್ರಿಯೆಯು ಅಶೇಷವಾಗಿ ದುಃಖಗಳ ನಾಶಕ್ಕೆ ಕಾರಣ ವಾಗುವುದಿಲ್ಲವೋ ಹಾಗೆಯೇ ಆ ಕ್ರಿಯೆಯಿಂದ ಹುಟ್ಟಿದ ಎರಡನೆಯ ಹಾಗೂ ಮುಂದಿನ ಎಲ್ಲ ಕರ್ಮಗಳೂ ಅಶೇಷವಾದ ದುಃಖಗಳ ನಾಶಕ್ಕೆ ಅಂದರೆ ಮೋಕ್ಷಕ್ಕೆ ಕಾರಣವು ಆಗುವುದಿಲ್ಲ. ಹಿಂದೆ ಹೇಳಿದ ನಿಶ್ಚೈತನ್ಯಾದಿ ಅನುಮಾನವು ಪ್ರಮಾಣ ಗೃಹೀತವಾದ ವ್ಯಾಪ್ತ್ಯಾದಿಗಳನ್ನು ಹೊಂದಿರುವುದರಿಂದ ಅದು ನಿರ್ದುಷ್ಟವಾದುದು.

ಶಕ್ತಸ್ಯಾನ್ಯಸ್ಯ ವಿಜ್ಞಾನಂ ತತ್ಪ್ರೀತಿಜನಕಂ ಯದಿ ।। ೧೫೧।।

ತಯೈವ ಬಂಧಹಾನಿಃಸ್ಯಾದಿತಿ ಕಿನ್ನಾಮ ದೂಷಣಮ್ ।

ಶಕ್ತನಾದ ಮತ್ತೊಬ್ಬನ ಗುಣೋತ್ಕರ್ಷಾದಿ ವಿಶಿಷ್ಟ ಜ್ಞಾನವು ಆ ವಿಷ್ಣುವಿಗೆ ಪ್ರೀತಿಯನ್ನು ಹುಟ್ಟಿಸುವುದೆಂದು ಹೇಳುವುದಾದರೆ, ಆ ವಿಷ್ಣುವಿನ ಪ್ರೀತಿಯಿಂದಲೇ ಸಂಸಾರಬಂಧವು ನಾಶವಾಗುವುದೆಂದು ಅನುಮೇಯಿಲ್ಪಟ್ಟರೆ ಅದು ಹೇಗೆ ದೂಷಣ ವಾಗುವುದು? ಏಕೆಂದರೆ ಈ ಅನುಮಾನವು ಪ್ರಮಾಣಗೃಹೀತವಾದ ವ್ಯಾಪ್ತ್ಯಾದಿ ಗಳನ್ನು ಹೊಂದಿರುವುದು.

ಹಾಗಾದರೆ ಇದಕ್ಕೆ ವಿರುದ್ಧವಾಗಿಯೂ ನಾನು ಅನುಮಾನ ಮಾಡುತ್ತೇನೆ. ಆದ್ದರಿಂದ ಸತ್ಪ್ರತಿಪಕ್ಷವು. ಹೇಗೆಂದರೆ, 'ವಿಮತಾ ಬಂಧಹಾನಿಃ ಸ್ಯಾತ್ ಸ್ವಜ್ಞಾನ ನಿಬಂಧನಾ' (ವಿವಾದ ವಿಷಯವಾದ ಬಂಧಹಾನಿಯು ತನ್ನ ಜ್ಞಾನವೇ ಕಾರಣ ವಾಗಿವುಳ್ಳದ್ದು), ಅಥವಾ 'ಪರಪ್ರಸಾದ ನಿಬಂಧನಾ ನ ಭವತಿ' (ಇತರರ ಪ್ರಸಾದ ವನ್ನು ಕಾರಣವಾಗಿವುಳ್ಳದ್ದು ಆಗುವುದಿಲ್ಲ) ಎಂದು ಅನುಮೇಯಿಸುತ್ತೇನೆ. ಹೀಗೆ ಆಶಂಕಿಸಿದರೆ –

ಸ್ವಜ್ಞಾನಾದ್ಬಂಧಹಾನಿಸ್ತು ದೃಶ್ಯತೇ ಕಸ್ಯ ಕುತ್ರಚಿತ್ ।। ೧೫೨ ।।

ಅಹಿಂಸಾಯಾಶ್ಚ ಧರ್ಮತ್ವಂ ಕೇನ ಮಾನೇನ ಗಮ್ಯತೇ ।

ಹಿಂಸಾಯಾ ಏವ ಧರ್ಮತ್ವಮಿತ್ಯುಕ್ತೇ ಸ್ಯಾತ್ಕಿಮುತ್ತರಮ್ ।। ೧೫೩ ।।

ತನ್ನ ಜ್ಞಾನದಿಂದ ಬಂಧಹಾನಿ ಎನ್ನುವುದು ಎಲ್ಲಿ ಯಾರಿಗೆ ಕಂಡಿದೆ. ಎಲ್ಲಿಯೂ ಯಾರಿಗೂ ಕಂಡಿಲ್ಲ ಎಂದು ತಾತ್ಪರ್ಯ. ಹೀಗೆ ವ್ಯಾಪ್ತಿಯ ಅಭಾವು. ಅಹಿಂಸೆಗೂ

ಕೂಡ ಧರ್ಮತ್ವವು ಯಾವ ಪ್ರಮಾಣದಿಂದ ತಿಳಿಯಲ್ಪಡುತ್ತದೆ? ಜಿನವಾಕ್ಯದಿಂದ ಎಂದು ಹೇಳಕೂಡದು. ಅದಕ್ಕೆ ಪ್ರಾಮಾಣ್ಯ ಸಾಧಕವಾದುದು ಯಾವುದೂ ಇಲ್ಲ. ಹಿಂಸೆಗೇನೇ ಧರ್ಮತ್ವವನ್ನು ಹೇಳಿದರೆ ಅದಕ್ಕೆ ಏನು ಉತ್ತರವಿದೆ? ಏನೂ ಇಲ್ಲ. ಜಿನನು ಆಪ್ತನೂ, ಸರ್ವಜ್ಞನೂ ಆದುದರಿಂದ ಜಿನವಾಕ್ಯವು ಪ್ರಮಾಣ ಎಂದರೆ, ಜಿನೇತರನು ಆಪ್ತನಲ್ಲ ಅಥವಾ ಸರ್ವಜ್ಞನಲ್ಲವೆಂದು ಹೇಗೆ ನಿಶ್ಚಯವಾಗುವುದು? ಅಂತೂ ಧರ್ಮ ನಿಶ್ಚಯವು ಆಗದೇ ಹೋಗುವುದು.

ಧರ್ಮಾದಿಗಳಿಗೆ ಮೋಕ್ಷಸಾಧನತ್ವವೂ ಕೂಡ ಅಪ್ರಮಾಣಿಕವು ಎನ್ನುತ್ತಾರೆ –

ಧರ್ಮಸ್ಯ ಸುಖಹೇತುತ್ವಮಪಿ ಕೇನಾವಗಮ್ಯತೇ ।

ಹತ್ಯಾಯಾ ಮೋಕ್ಷಹೇತುತ್ವಂ ಕುತೋ ಮಾನಾನ್ನಿವಾರ್ಯತೇ ॥ ೧೫೪ ॥

ಧರ್ಮಕ್ಕೆ ಮೋಕ್ಷಹೇತುತ್ವವೂ ಕೂಡ ಯಾವುದರಿಂದ ತಿಳಿಯಲ್ಪಡುತ್ತದೆ? ಹಿಂಸೆಗೆ ಮೋಕ್ಷಹೇತುತ್ವವು ಯಾವ ಪ್ರಮಾಣದಿಂದ ನಿವಾರಿಸಲ್ಪಡುತ್ತದೆ? ಹೀಗೆ ಕೇವಲ ಜಿನವಾಕ್ಯದಿಂದಾಗಲೀ ಇತರರ ವಾಕ್ಯದಿಂದಾಗಲೀ ಧರ್ಮಾಧರ್ಮಗಳಿಗೆ ಮೋಕ್ಷಹೇತುತ್ವವು ತೀರ್ಮಾನವಾಗಲಾರದು.

ಈಗ ಬೌದ್ಧರಿಗೆ ಅಭಿಮತವಾದ ಮೋಕ್ಷಸಾಧನವನ್ನು ನಿರಾಕರಿಸುವ ಶೂನ್ಯವಾದಿಯಿಂದ ಹೇಳಲ್ಪಟ್ಟ ಮೋಕ್ಷಸಾಧನವನ್ನೂ ನಿರಾಕರಿಸುತ್ತಾರೆ –

ನ ಚ ಶೂನ್ಯಪರಿಜ್ಞಾನಾಚ್ಛೂನ್ಯಭಾವನಯಾಪಿ ಚ ।

ಮೋಕ್ಷಃ ಕಥಂ ಚ ನ ಭವೇದ್ಯದಿದಾನೀಂ ಕಥಂ ನ ಸಃ ॥ ೧೫೫ ॥

ಶೂನ್ಯವೇ ತತ್ವವು, ಸಮಸ್ತವೂ ಅದರಲ್ಲಿಯೇ ಅಡಕವಾಗಿದೆ ಎನ್ನುವ ತಿಳಿವಳಿಕೆಯಿಂದಲೂ, ಹಾಗೆಯೇ ಶೂನ್ಯಧ್ಯಾನದಿಂದಲೂ ಹೇಗಾದರೂ ಮೋಕ್ಷವು ಆಗಲಾರದು. ಹಾಗೊಮ್ಮೆ ಮೋಕ್ಷವಾಗುವುದೆಂದು ಹೇಳಿದರೆ, ಆ ಮೋಕ್ಷವು ಶೂನ್ಯ ಪರಿಜ್ಞಾನ ಬಂದ ಕೂಡಲೇ ಏಕೆ ಆಗಲಾರದು?

ಹಾಗಾದರೆ ನಿಮ್ಮ ಮತದಲ್ಲಿ ಅಂಗೀಕರಿಸುವಂತೆ ನಮ್ಮ ಮತದಲ್ಲಿಯೂ ಜ್ಞಾನವಾದ ಮೇಲೆಯೂ ಸಂಸಾರದಲ್ಲಿ ಅವಸ್ಥಿತಿ ಎನ್ನುವುದು ಏಕೆ ಆಗಲಾರದು ಎಂದರೆ, ಅದರಲ್ಲಿ ವೈಷಮ್ಯವನ್ನು ಹೇಳುತ್ತಾರೆ –

ಪರಪ್ರಸಾದನೇಚ್ಛೋಸ್ತು ವಿಲಂಬೋ ನಾಮ ಯುಜ್ಯತೇ ।

ಪುಮಿಚ್ಛಾಧೀನತಾ ನೋ ಚೇದ್ವಿಲಂಬಃ ಕಿಂ ಕೃತೋ ಭವೇತ್ ॥ ೧೫೬ ॥

ತನ್ನಿಂದ ಅನುಷ್ಠಾನ ಮಾಡಲು ಸಾಧ್ಯವಾದ ಸಾಧನವನ್ನು ಮಾಡಿದವನೂ ಫಲಕ್ಕಾಗಿ ಇನ್ನೊಬ್ಬನ ಪ್ರಸಾದವನ್ನು ಇಚ್ಛಿಸುವುದಾದರೆ, ಫಲ ಹೊಂದುವಲ್ಲಿ ವಿಲಂಬವೆಂಬುದು ಕೂಡುವುದು. ಲೋಕದಲ್ಲಿ ಹಾಗೆ ಕಂಡಿದೆ. ಮೋಕ್ಷವು

ರಾಯಮರ್ಗದ ಮಠದ ಶೃಷ್ಣಾಚಾರ್
ಬಳ್ಳಾರಿ

ಮತ್ತೊಬ್ಬ ಪುರುಷನ ಪ್ರಸಾದದ ಅಧೀನವಲ್ಲವೆಂದು ಹೇಳವುದಾದರೆ, ಆಗ ಮೋಕ್ಷಕ್ಕೆ ವಿಲಂಬವು ಯಾವ ಕಾರಣದಿಂದ?

ಹಾಗಾದರೆ ಪರಪ್ರಸಾದದ ಅಪೇಕ್ಷೆ ಇಲ್ಲದ ಕೆಲವು ಕಾರ್ಯಗಳಲ್ಲಿಯೂ ಫಲ ವಿಲಂಬವು ಲೋಕದಲ್ಲಿ ಕಂಡಿದೆ (ಔಷಧ ವಿಶೇಷವನ್ನು ಸೇವಿಸಿದರೂ ಅದರ ಕಾರ್ಯವಾದ ರೋಗಪರಿಹಾರವು ವಿಲಂಬವಾಗಿ ಆಗುವುದು ಕಂಡಿದೆ). ಆದ್ದರಿಂದ ಪುರುಷನ ಇಚ್ಛಾಧೀನತ್ವವಿಲ್ಲದಿದ್ದರೆ ವಿಲಂಬವಾಗಬಾರದು ಎನ್ನುವುದು ಸರಿಯಲ್ಲ ಎಂದು ಹೇಳಿದರೆ –

ಅನ್ಯತ್ರಾಪಿ ವಿಲಂಬಾಸ್ತು ಸ್ಯುರೀಶೇಚ್ಛಾ ನಿಮಿತ್ತತಃ ।

ಅನ್ಯಥಾಕಾರಣಂ ಚೇತ್ಸ್ಯಾತ್ಕಿಂ ಕಾರ್ಯಂ ನೋಪಜಾಯತೇ ॥ ೧೫೭ ॥

ಕಾರಣೇ ಸತಿ ಕಾರ್ಯಸ್ಯ ಭಾವಃ ಸುನಿಯತೋಽಸ್ಯ ಹಿ ।

ಮೋಕ್ಷದ ದೆಶೆಯಿಂದ ಬೇರೆ ಕಡೆಗಳಲ್ಲಿಯೂ ವಿಲಂಬಗಳಾದರೂ ಅದಕ್ಕೆ, ಇಷ್ಟು ಸಮಯವಾದ ಮೇಲೆ ಈ ಕಾರ್ಯವು ಆಗಲಿ, ಎನ್ನುವ ಈಶ್ವರನ ಇಚ್ಛೆಯೇ ನಿಮಿತ್ತವು. ಈಶ್ವರನ ಇಚ್ಛೆಯು ನಿಮಿತ್ತವಲ್ಲವಾದರೆ, ಒಂದು ಕಾರ್ಯಕ್ಕೆ ಕಾರಣವು ಇರುವಾಗ ಅದು ಕೂಡಲೇ ಹುಟ್ಟುವುದಿಲ್ಲವೇಕೆ? ಸರ್ವಥಾ ಹುಟ್ಟಲೇಬೇಕು. ಪುರುಷೇಚ್ಛಾಧೀನತ್ವವು ಇಲ್ಲದಿದ್ದರೂ ಸಾಮಗ್ರಿ ವೈಕಲ್ಯ, ಪ್ರತಿಬಂಧಕಾದಿಗಳಿಂದ ವಿಲಂಬವಾಗಲಿಕ್ಕೆ ಸಾಧ್ಯವಿದೆ ಎಂದು ಹೇಳಿದರೆ, ಬೌದ್ಧನಿಗೆ ಹಾಗೆ ಹೇಳಲು ಶಕ್ಯವಿಲ್ಲ ಎನ್ನುತ್ತಾರೆ. ಏಕೆಂದರೆ ಈ ಬೌದ್ಧನ ಮತದಲ್ಲಿ ಕಾರಣವಿರಲಿಕ್ಕೆ ಕಾರ್ಯದ ಉತ್ಪತ್ತಿಯು ಸುನಿಯತವೇ ಆಗಿದೆ. 'ಸಮರ್ಥಸ್ಯ ಕ್ಷೇಪಾಯೋಗಾತ್' ಎನ್ನುವ ಅವನ ಮಾತಿನಿಂದಲೇ ಇದು ನಿಶ್ಚಿತವಾಗುವುದು. ಕಾರ್ಯೋತ್ಪತ್ತಿಯಲ್ಲಿ ಶಕ್ತನಾದವನಿಗೆ ವಿಕ್ಷೇಪ ಅಥವಾ ವಿಲಂಬವು ಕೂಡುವುದಿಲ್ಲ ಎಂದು ಈ ಮಾತಿನ ಅರ್ಥ. ಈ ಪ್ರಕಾರವಾಗಿ ಶೂನ್ಯವಿಜ್ಞಾನಾದಿಗಳು ಮೋಕ್ಷಕ್ಕೆ ಸಾಧನವಲ್ಲವೆಂದು ಸಿದ್ಧವಾಗುವುದು.

ಈಗ ವಿಜ್ಞಾನವಾದಿಗಳಿಂದ ಹೇಳಲ್ಪಟ್ಟ ಮೋಕ್ಷಸಾಧನವನ್ನು ದೂಷಿಸುತ್ತಾರೆ –

ವಿಜ್ಞಾನವಾದಿನಶ್ಚೈವ ವಿಜ್ಞಾನಾದ್ವೈತವೇದನಾತ್ ॥ ೧೫೮ ॥

ವಿಜ್ಞಾನಭಾವನಾಚ್ಚೈವ ಮೋಕ್ಷೋ ನ ಘಟತೇ ಕ್ವಚಿತ್ ।

ವಿಜ್ಞಾನಾದ್ವೈತ ಜ್ಞಾನದ ನಿಮತ್ತದಿಂದಲೂ (ವಿಜ್ಞಾನವೊಂದೇ ತತ್ವವು, ಅದರಿಂದ ಬೇರೆಯಾದ ತತ್ವವಿಲ್ಲ ಎನ್ನುವುದೇ ವಿಜ್ಞಾನಾದ್ವೈತ), ವಿಜ್ಞಾನಾದ್ವೈತ ಧ್ಯಾನದ ನಿಮಿತ್ತದಿಂದಲೂ ಮೋಕ್ಷವಾಗುವುದು ಎಂದು ಹೇಳುವ ವಿಜ್ಞಾನ ವಾದಿಗಳ ಮತದಲ್ಲಿಯೂ ಮೋಕ್ಷವು ಯಾವಕಾಲದಲ್ಲಿಯೂ ಕೂಡುವುದಿಲ್ಲ.

ಈಗ ವೈಭಾಷಿಕ ಸೌತ್ರಾಂತಿಕರಿಗೆ ಅಭಿಮತವಾದ ಮೋಕ್ಷಸಾಧನವನ್ನು

ನಿರಾಕರಿಸುತ್ತಾರೆ –

ಅಂತರ್ಜ್ಞಾನಸ್ಯ ಬಾಹ್ಯೇ ಚ ಕ್ಷಣಿಕತ್ವಸ್ಯ ವೇದನಾತ್ ।। ೧೫೯ ।।

ಭಾವನಾಚ್ಚೋಕ್ತಮಾರ್ಗೇಣ ಮಾನಾಭಾವಾನ್ನ ಮುಚ್ಯತೇ ।

ಶರೀರದೊಳಗೆ ಇರತಕ್ಕ ಜ್ಞಾನಕ್ಕೂ ಬಾಹ್ಯದಲ್ಲಿರತಕ್ಕ ರೂಪಕ್ಕೂ ಯಾವ ಕ್ಷಣಿಕತ್ವವಿದೆಯೋ ಅದರ ಜ್ಞಾನದಿಂದಲೂ ಹಾಗೂ ಧ್ಯಾನದಿಂದಲೂ ಕೂಡ ಮೋಕ್ಷವಾಗುವುದಿಲ್ಲ. ಏಕೆಂದರೆ ಕ್ಷಣಿಕತ್ವ ಜ್ಞಾನದಿಂದ ಧ್ಯಾನ ಮಾಡುವವನಿಗೂ ಕ್ಷಣಿಕತ್ವವಿರುವುದು ಹಾಗೂ ಈ ವಿಷಯದಲ್ಲಿ ಪ್ರಮಾಣವೂ ಇರುವುದಿಲ್ಲ. ಈ ಮತವನ್ನು ಅಂಗೀಕರಿಸಿದ ಪಕ್ಷದಲ್ಲಿ – ಸಾಧನಾನುಷ್ಠಾನ ಕರ್ತೃವಿಗೆ ಕ್ಷಣಿಕತ್ವದ ಪ್ರಯುಕ್ತ ನಾಶವಿರುವುದರಿಂದ ಅವನಿಗೆ ಮೋಕ್ಷವಿಲ್ಲ, ಸಾಧನ ಮಾಡದವನಿಗೆ ಮೋಕ್ಷವು ಆಗಬೇಕಾಗುವುದು, ಕರ್ತೃವಿನ ಪುಣ್ಯಕ್ಕೂ ಕ್ಷಣಿಕತ್ವದಿಂದಾಗಿ ನಾಶವು, ಇತ್ಯಾದಿ ದೋಷಗಳು ಬರುತ್ತವೆ.

ಹೀಗೆ ವೇದಬಾಹ್ಯಮತಗಳನ್ನು ನಿರಾಕರಿಸಿ, ವೈದಿಕಮತಗಳನ್ನು ನಿರಾಕರಿಸುವ ಸಲುವಾಗಿ ಸಾಂಖ್ಯೋಕ್ತ ಮೋಕ್ಷಸಾಧನವನ್ನು ಅನುವಾದ ಮಾಡಿ ದೂಷಿಸುತ್ತಾರೆ–

ಪ್ರಕೃತೇಃ ಪುರುಷಸ್ಯಾಪಿ ವಿವೇಕೋ ಮುಕ್ತಿಸಾಧನಮ್ ।। ೧೬೦ ।।

ಇತಿ ಸಾಂಖ್ಯಾ ನ ಚೈತಸ್ಮಿನ್ಮಾನಮೀಶಾಪ್ರಸಾದತಃ ।

ಅಂತಃಕರಣಾದಿ ರೂಪವಾದ ಪ್ರಕೃತಿಗೂ ಪುರುಷನಾದ ತನಗೂ ಸ್ವರೂಪ ಹಾಗೂ ಧರ್ಮದಿಂದ ಭೇದದರ್ಶನವು ಮೋಕ್ಷಕ್ಕೆ ಸಾಧನವು, ಹೀಗೆ ಸಾಂಖ್ಯರು ಹೇಳುತ್ತಾರೆ. ಇದು ಅಯುಕ್ತವು. ಈ ಅರ್ಥದಲ್ಲಿ ಪ್ರಮಾಣವು ಇಲ್ಲವೇ ಇಲ್ಲ. ಈಶ್ವರ ಪ್ರಸಾದವಿಲ್ಲದೆ ಕೇವಲ ಪ್ರಕೃತಿ–ಪುರುಷ ವಿವೇಕವು ಮೋಕ್ಷಸಾಧನವು ಎನ್ನುವ ಅರ್ಥದಲ್ಲಿ ಪ್ರಮಾಣವಿಲ್ಲ.

'ಯ ಏನಂ ವೇತ್ತಿ ಪುರುಷಂ ಪ್ರಕೃತಿಂ ಚ ಗುಣೈಃ ಸಹ। ಸರ್ವಥಾ ವರ್ತಮಾನೋಪಿ ನ ಸ ಭೂಯೋಭಿಜಾಯತೇ। ಕ್ಷೇತ್ರಕ್ಷೇತ್ರಜ್ಞಯೋರೇವಮಂತರಂ ಜ್ಞಾನ ಚಕ್ಷುಷಾ। ಭೂತಪ್ರಕೃತಿಮೋಕ್ಷಂ ಚ ಯೇ ವಿದುರ್ಯಾಂತಿ ತೇ ಪರಮ್' ಇತ್ಯಾದಿ ವಾಕ್ಯಗಳು ಪ್ರಕೃತಿ–ಪುರುಷ ವಿವೇಕಕ್ಕೆ ಮೋಕ್ಷಸಾಧನತ್ವವನ್ನು ಪ್ರತಿಪಾದಿಸುತ್ತವೆ. ಈಶ್ವರನ ಪ್ರಸಾದದ್ವಾರಾ ಮೋಕ್ಷವೆಂದು ಪಾರಂಪರ್ಯ ಕಲ್ಪಿಸಲಿಕ್ಕೆ ಕಾರಣವಿಲ್ಲ. ಆದ್ದರಿಂದ ಇವುಗಳಿಗೇನೆ ಸಾಕ್ಷಾತ್ ಮೋಕ್ಷಸಾಧನತ್ವ ವಿಷಯದಲ್ಲಿ ಪ್ರಾಮಾಣ್ಯವು ಎಂದರೆ –

ಶ್ರುತಯಃ ಸ್ಮೃತಯಶ್ಚೈವ ಯದೇಶಸ್ಯ ಪ್ರಸಾದತಃ ।। ೧೬೧ ।।

ವದಂತಿ ನಿಯಮಾನ್ಮುಕ್ತಿಂ ತಮೃತೇಽತಃ ಕುತೋ ಭವೇತ್ ।

'ಯಸ್ಯ ಪ್ರಸಾದಾತ್' ಇತ್ಯಾದಿ ಶ್ರುತಿಗಳೂ, 'ಅಜ್ಞಾನಾಂ ಜ್ಞಾನದೋ ವಿಷ್ಣುಃ' ಇತ್ಯಾದಿ ಸ್ಮೃತಿಗಳೂ ಈಶ್ವರನ ಪ್ರಸಾದದ ದೆಶೆಯಿಂದ ನಿಯಮದಿಂದ (ಮುಚ್ಯತೇ ನಾಪರೇಣ, ಸ ಏವೈಕಃ ಇತ್ಯಾದಿ ವಚನದಿಂದ ಸಾಧನಾಂತರವನ್ನು ನಿರಾಕರಿಸಿ) ಮೋಕ್ಷವನ್ನು ಹೇಳುವ ಪ್ರಯುಕ್ತ, ಈಶಪ್ರಸಾದ ಹೊರತು ಬೇರೆ ಯಾವುದರಿಂದ ಮೋಕ್ಷವು ಆಗುವುದು? ಅಂದರೆ ಈಶ್ವರ ಪ್ರಸಾದದಿದಂಲೇ ಮೋಕ್ಷವು ಎಂದು ತಾತ್ಪರ್ಯ.

ವೈಶೇಷಿಕಾದಿಗಳಿಂದ ಹೇಳಲ್ಪಟ್ಟ ಮೋಕ್ಷಸಾಧನವನ್ನು ನಿರಾಕರಿಸುತ್ತಾರೆ –

ಕಣಾದಯೋಗಾಕ್ಷಪಾದಾ ಅಪೀಶಸ್ಯ ಪ್ರಸಾದತಃ ।। ೧೬೨ ।।

ಮುಕ್ತಿಂ ಬ್ರುವಾಣ ಅಪ್ಯಾಹುಃ ಭೋಗಾದೇವ ಚ ಕರ್ಮಣಾಮ್ ।

ಕ್ಷಯಂ ಪ್ರಾಹುಃ ಕುತಶ್ಚೈತತ್ಪ್ರಸನ್ನೇ ಜಗದೀಶ್ವರೇ ।। ೧೬೩ ।।

ಕೇವಲ ಸಾಂಖ್ಯಾದಿಗಳಷ್ಟೇ ಅಲ್ಲ, ಕಣಾದ ಪತಂಜಲಿ ಅಕ್ಷಪಾದ ಇವರೆಲ್ಲರೂ ಕೂಡ ಅನುಪಪನ್ನಭಾಷಿಗಳೇ. ಹಾಗಾದರೆ ಈ ಮೂವರೂ ಮುಕ್ತಿಯು ಈಶ್ವರ ಪ್ರಸಾದ ಸಾಧ್ಯವೆಂಬುದಾಗಿಯೇ ಹೇಳುತ್ತಾರೆ. ಆದಕಾರಣ ಇವರು ಅನುಪಪನ್ನ ಭಾಷಿಗಳು ಹೇಗೆ ಎಂದರೆ 'ಈಶಸ್ಯ' ಎಂಬ ವಚನದಿಂದ ಸಾಧಿಸುತ್ತಾರೆ –

ಈಶ್ವರನ ಪ್ರಸಾದದಿಂದ ಮುಕ್ತಿಯು ಎಂದು ಹೇಳಿದರೂ ಕೂಡ ಅದಕ್ಕೆ ಧರ್ಮಾದಿ ಸಹಕಾರಿತ್ವವನ್ನೇ ಇವರು ಅಂಗೀಕರಿಸಿರುವರು. ಆದ್ದರಿಂದ ಇವರು ಅನುಪಪನ್ನಭಾಷಿಗಳು. ಭೋಗಾದೇವ ಇತ್ಯಾದಿ ವಚನದಿಂದ ಬೇರೆ ಕಾರಣವನ್ನು ನೀಡುವುದರ ಮೂಲಕ ಇದನ್ನೇ ಸಮರ್ಥಿಸುತ್ತಾರೆ –

ತತ್ವಜ್ಞಾನಿಗಳು ಒಪ್ಪಿರುವಂತೆ ಜ್ಞಾನ ಹುಟ್ಟುವುದಕ್ಕೆ ಮುಂಚಿನ ಕರ್ಮಗಳಿಗೆ ಜ್ಞಾನದಿಂದಲೇ ವಿನಾಶ ಎನ್ನುವುದನ್ನು ವೈಶೇಷಿಕಾದಿಗಳು ಒಪ್ಪುವುದಿಲ್ಲ. ಮತ್ತೆ ಆ ಕರ್ಮಗಳಿಗೆ ಭೋಗದಿಂದಲೇ ವಿನಾಶವನ್ನು ಹೇಳುತ್ತಾರೆ. ಆದ್ದರಿಂದ ಅವರು ಅನುಪಪನ್ನಭಾಷಿಗಳು. ಜ್ಞಾನಿಗೂ ಕೂಡ ಕರ್ಮಗಳಿಗೆ ಫಲಭೋಗದಿಂದಲೇ ವಿನಾಶವು ಎಂದು ಯಾವ ಪ್ರಮಾಣದಿಂದ ತಿಳಿಯಬೇಕು? ಯಾವುದರಿಂದಲೂ ಇಲ್ಲ ಎಂದರ್ಥ. ಕರ್ಮವು ಪೂರ್ತಿಯಾಗಿ ನಾಶವಾಗದೆ ಮೋಕ್ಷವಾಗದು. ಮತ್ತೆ ಬೇರೆ ರೀತಿಯಿಂದ ಕರ್ಮಕ್ಷಯ ಸಾಧ್ಯವಿಲ್ಲ. ಆದ್ದರಿಂದ ಭೋಗದಿಂದಲೇ ಕರ್ಮ ಕ್ಷಯವು ಎಂದು ಕಲ್ಪಿಸುತ್ತೇವೆ ಎಂದರೆ – ಜ್ಞಾನದಿಂದ ಪ್ರಸನ್ನನಾದ ಭಗವಂತನೇ ಅಭುಕ್ತವಾದ ಫಲವುಳ್ಳ ಕರ್ಮಗಳನ್ನು ವಿನಾಶಗೊಳಿಸಿ ಮೋಕ್ಷವನ್ನು ನೀಡುವನು ಎನ್ನುವುದು ಕೂಡುವುದರಿಂದ ಅನ್ಯಥಾ ಕಲ್ಪಿಸುವುದು ಅಯುಕ್ತವು ಎನ್ನುತ್ತಾರೆ. ಜಗದೀಶ್ವರನಾದ ಭಗವಂತನಿಗೆ ಅಸಾಧ್ಯವಾದುದು ಯಾವುದಿದೆ?

ಈಶ್ವರನ ಪ್ರಸಾದದಿಂದಲೇ ಮೋಕ್ಷ ಎಂದು ಸಮರ್ಥಿಸಲು ಪ್ರಮಾಣಗಳನ್ನು

ಹೇಳುತ್ತಾರೆ –

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥ ೧೬೪ ॥
ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮನೀಶ್ವರೇ ॥ ೧೬೫ ॥
ಇತಿ ಶ್ರುತಿಪುರಾಣಾದಿವಚನೇಭ್ಯೋಽನ್ಯಥಾಗತೇಃ ।

ನಮಗಿಂತ ಉತ್ತಮರಾದ ಬ್ರಹ್ಮಾದಿಗಳು ಯಾರ ದೃಷ್ಟಿಯಿಂದ ಅವರರೋ ಅಂಥಹ ಸರ್ವೋತ್ತಮನಾದ ಶ್ರೀಹರಿಯ ದರ್ಶನವಾಗುತ್ತಿರಲು ಅವಿದ್ಯೆಯು ನಾಶವಾಗುತ್ತದೆ, ಎಲ್ಲ ಸಂಶಯಗಳೂ ನಾಶವಾಗುತ್ತವೆ, ಆ ಪುರುಷನ ಕರ್ಮಗಳೂ ನಾಶವಾಗುತ್ತವೆ. ಹೀಗೆ ಶ್ರುತಿಯು. ವ್ಯಾಪ್ತಗುಣವುಳ್ಳ ಜಗದೀಶ್ವರನ ದರ್ಶನವಾದ ಕೂಡಲೇ ಅವಿದ್ಯೆಯೂ, ಎಲ್ಲ ಸಂಶಯಗಳೂ ಹಾಗೂ ಕರ್ಮಗಳೂ ವಿನಾಶ ಹೊಂದುತ್ತವೆ. ಹೀಗೆ ಭಾಗವತ ವಾಕ್ಯವು. ಹೀಗೆ ಶ್ರುತಿ ಪುರಾಣ ಮೊದಲಾದ ವಚನಗಳ ದೆಶೆಯಿಂದ ಈಶ್ವರಪ್ರಸಾದದಿಂದಲೇ ಕರ್ಮಗಳಿಗೆ ವಿನಾಶವೆನ್ನುವುದು ನಿಶ್ಚಯವಾಗುವುದರಿಂದ ಫಲಭೋಗವಿಲ್ಲದೇನೆ ಕರ್ಮಗಳಿಗೆ ನಾಶವು ಕೂಡುತ್ತದೆ.

ಪಾಶುಪತಾದಿಗಳಿಂದ ಹೇಳಲ್ಪಟ್ಟ ಮೋಕ್ಷಸಾಧನವನ್ನು ನಿರಾಕರಿಸುತ್ತಾರೆ –

ನ ಚ ಪಾಶುಪತಾದ್ಯುಕ್ತಶಿವಾದೀನಾಮನುಗ್ರಹಾತ್ ॥ ೧೬೬ ॥

ಪಾಶುಪತ ಶಬ್ದದಿಂದ ಶೈವ, ಪಾಶುಪತ, ಕಾಲಾಮುಖ ಹಾಗೂ ಮಹಾವ್ರತ ಎಂಬ ನಾಲ್ಕು ವಿಧರಾದವರು ಹೇಳಲ್ಪಡುತ್ತಾರೆ. ಆದಿ ಪದದಿಂದ ಸ್ಕಾಂದ ಸೌರಾದಿಗಳನ್ನೂ ಇಟ್ಟುಕೊಳ್ಳಬೇಕು. ಪಾಶುಪತಾದಿಗಳು ಹೇಳಿರುವಂತೆ ಶಿವಾದಿಗಳ ಅನುಗ್ರಹದಿಂದ ಮೋಕ್ಷವು ಆಗುವುದೇ ಇಲ್ಲ.

ಶಿವಾದಿಗಳ ಅನುಗ್ರಹದಿಂದ ಮೋಕ್ಷವು ಯಾವ ಕಾರಣದಿಂದ ಆಗುವುದಿಲ್ಲ ಎಂದರೆ –

ನಾನ್ಯಃ ಪಂಥಾ ಇತಿ ಹ್ಯುಕ್ತಂ ಪುರುಷಜ್ಞಾನತಃ ಶ್ರುತೌ ।

ಮೋಕ್ಷಕ್ಕೆ ಬೇರೆ ಮಾರ್ಗವು ಇಲ್ಲ ಎಂಬುದಾಗಿ ಮೋಕ್ಷಕ್ಕೆ ಅನ್ಯಮಾರ್ಗವನ್ನು ನಿಷೇಧ ಮಾಡಿ 'ತಮೇವ ವಿದ್ವಾನ್' ಎನ್ನುವ ಶ್ರುತಿಯು 'ಸಹಸ್ರಶೀರ್ಷಾ ಪುರುಷಃ' ಎನ್ನುವ ಶ್ರುತಿಯಲ್ಲಿ ಹೇಳಲ್ಪಟ್ಟ ಪುರುಷನ ಜ್ಞಾನದಿಂದಲೇ ಅಮೃತತ್ವವು ಎಂದು ಪ್ರತಿಪಾದಿಸುತ್ತದೆ. ಆದ್ದರಿಂದ ಈ ಪುರುಷನ ಅನುಗ್ರಹವೇ ಮುಕ್ತಿಗೆ ಕಾರಣವು ಶಿವಾದಿಗಳ ಅನುಗ್ರಹವಲ್ಲ ಎಂದು ತಿಳಿಯಬೇಕು.

ಹಾಗಾದರೆ ಪಶುಪತಿಯೆಂದು ಪ್ರಸಿದ್ಧನಾದ ಶಿವನೇ ಪುರುಷಸೂಕ್ತದಲ್ಲಿ ಪುರುಷನೆಂದು ಹೇಳಲ್ಪಟ್ಟಿದ್ದಾನೆ, ವಿಷ್ಣುವಲ್ಲ. ಆದ್ದರಿಂದ ವಿಷ್ಣುಜ್ಞಾನಕ್ಕೇ ಮೋಕ್ಷ ಸಾಧನತ್ವ ಎಂದು ಹೇಳುವುದು ಸರಿಯಲ್ಲ. ಪಶುಪುರುಷನ ಜ್ಞಾನವೂ ಕೂಡ ಪಶುಪತಿಯ ಅನುಗ್ರಹಕ್ಕೆ ಪರಮೋಪಯೋಗಿಯಾದುದರಿಂದ ಅದೇ ಮೋಕ್ಷಸಾಧನವೆಂದು ಹೇಳಲ್ಪಡುತ್ತದೆ. ಹೀಗೆ ಆಶಂಕಿಸಿದರೆ –

ಪುರುಷಶಬ್ದಕ್ಕೆ ವಿಷ್ಣುವಿನಲ್ಲಿ ಶಕ್ತಿಯಿಲ್ಲವಾದ್ದರಿಂದ ಪುರುಷಶಬ್ದವು ವಿಷ್ಣುವನ್ನು ಪ್ರತಿಪಾದಿಸುವುದಿಲ್ಲ ಎಂದು ಹೇಳಕೂಡದು. ಏಕೆಂದರೆ ನಾರಾಯಣಾನುವಾಕದಲ್ಲಿ ಶ್ರೀಹರಿಯಲ್ಲಿ ಪುರುಷಶಬ್ದಕ್ಕೆ ಪ್ರಯೋಗವಿದೆ ಎನ್ನುತ್ತಾರೆ –

ಸರ್ವೇ ನಿಮೇಷಾ ಜಜ್ಞಿರೇ ವಿದ್ಯುತಃ ಪುರುಷಾದಧಿ ॥ ೧೬೭ ॥

ಏವಂ ಪುರುಷಶಬ್ದಶ್ಚ ಪ್ರಯುಕ್ತೋಽಬ್ಧಿಶಯೇ ಹರೌ ।

ವಿಶೇಷವಾಗಿ ಪ್ರಕಾಶಿಸುವ ಸರ್ವೋತ್ತಮನಾದ ಪುರುಷನಿಂದ ಎಲ್ಲ ನಿಮೇಷಗಳೂ ಹುಟ್ಟಿದವು. 'ವಿದ್ಯುತಃ ಪುರುಷಾತ್' ಎನ್ನುವಲ್ಲಿ ಪಶುಪುರುಷನನ್ನೇ ಏಕೆ ಗ್ರಹಿಸಬಾರದು ಎಂದರೆ ಅದನ್ನು ನಿರಾಕರಿಸಲು 'ಅಬ್ಧಿಶಯೇ ಹರೌ' ಎಂದು ಹೇಳಲಾಗಿದೆ. 'ಅಂಭಸ್ಯಪಾರೇ ಯಮಂತಃ ಸಮುದ್ರೇ' ಎಂದು ಈ ಪುರುಷನಲ್ಲಿ ಅಬ್ಧಿಶಯತ್ವವು ಶ್ರುತವಾಗಿದೆ. 'ಮಹೋದಧಿಶಯೋಂತಕಃ' ಇತ್ಯಾದಿಗಳಿಂದ ಅದು ವಿಷ್ಣುವಿನ ಲಿಂಗವೆಂದು ತಿಳಿಯಲ್ಪಡುತ್ತದೆ. ಹೀಗೆ ಪುರುಷ ಶಬ್ದವಾದರೂ ಕ್ಷೀರಾಬ್ಧಿಶಾಯಿಯಾದ ಶ್ರೀಹರಿಯಲ್ಲಿ ಪ್ರಯೋಗಿಸಲ್ಪಟ್ಟಿದೆ. ಆದ್ದರಿಂದ ಪುರುಷಶಬ್ದದಿಂದ ಶ್ರೀಹರಿಯನ್ನೇ ಗ್ರಹಿಸತಕ್ಕದ್ದು.

ಪುರುಷಶಬ್ದವಾಚಿಯು ನಾರಾಯಣನೇ ಹೊರತು ಪಶುವಲ್ಲ ಎನ್ನುವುದನ್ನು ಕಾರಣಾಂತರದಿಂದಲೂ ಸಮರ್ಥಿಸುತ್ತಾರೆ –

ನ ತಸ್ಯೇಶೇ ಕಶ್ಚನ ತಸ್ಯ ನಾಮ ಮಹದ್ಯಶಃ ॥ ೧೬೮ ॥

ಇತಿ ಚಾಧಿಪತಿಸ್ತಸ್ಯ ಪ್ರತಿಷಿದ್ಧಃ ಸ್ವಯಂ ಶ್ರುತೌ ।

ವಿಶ್ವತಃ ಪರಮಾಂ ನಿತ್ಯಂ ವಿಶ್ವಂ ನಾರಾಯಣಂ ಹರಿಮ್ ॥ ೧೬೯ ॥

ಇತಿ ಸರ್ವಾಧಿಕತ್ವೋಕ್ತ್ಯಾ ಸಮೋಽಪಿ ವಿನಿವಾರತಃ ।

ಸಮಾಧಿಕಸ್ಯ ರಾಹಿತ್ಯಾನ್ನೋಪಚಾರಪುಮಾನಸೌ ॥ ೧೭೦ ॥

ಆ ಪುರುಷನನ್ನು ಬಿಟ್ಟು ಬೇರೆ ಯಾರೂ ಸಮರ್ಥರಿಲ್ಲ. ಮಹತ್ ಎಂದೂ ಯಶಃ ಎಂದೂ ಅವನಿಗೇ ಹೆಸರು. ಆ ಪುರುಷನಿಗೆ ಮತ್ತೊಬ್ಬ ನಿಯಾಮಕನಿಲ್ಲ ಎಂದು ಶ್ರುತಿಯಲ್ಲಿ (ನ ತಸ್ಯೇಶೇ ಕಶ್ಚನ ಎಂದು) ಮುಖತಃ ನಿಷೇಧಿತವಾಗಿದೆ. ಸರ್ವರೀತಿಯಿಂದಲೂ ಸರ್ವೋತ್ತಮನಾದ ಆ ಶಬ್ದವಾಚ್ಯನಾದ ಅವಿನಾಶಿಯಾದ

ಪೂರ್ಣನಾದ ಪಾಪವಿನಾಶಕನಾದ ನಾರಾಯಣನನ್ನು ತಿಳಿದು ಮುಕ್ತನಾಗುತ್ತಾನೆ ಎಂಬುದಾಗಿ ನಾರಾಯಣಾನುವಾಕದಲ್ಲಿಯೇ ಆ ಪುರುಷನಿಗೆ ಸರ್ವಾಧಿಕ್ಯವನ್ನೂ ಹೇಳಿರುವುದರಿಂದ ಅವನಿಗೆ ಸಮಾನಿಕನೂ ಸಂಪೂರ್ಣವಾಗಿ ನಿವಾರಿಸಲ್ಪಡುವನು. ಆ ಪುರುಷನಿಗೆ ಸಮಾನಿಕನೂ ಅಧಿಕನೂ ಇಲ್ಲದಿರುವ ಪ್ರಯುಕ್ತ ನಾರಾಯಣ ಅನುವಾಕದಲ್ಲಿ ಶ್ರುತನಾದವನು ಔಪಚಾರಿಕನಾದ ಪಶುಪುರುಷನು ಆಗುವುದಿಲ್ಲ. ವಿಷ್ಣುವಿಗೇ ಸಮಾಧಿಕರಾಹಿತ್ಯವು ಕೂಡುವುದರಿಂದ ಪುರುಷಶಬ್ದವಾಚ್ಯನು ವಿಷ್ಣುವೇ ಎಂದು ನಿಶ್ಚಯವಾಗುವುದು.

ಹೀಗೆ ಪುರುಷಶಬ್ದಕ್ಕೆ ವಿಷ್ಣುವಿನಲ್ಲಿ ವಾಚಕತ್ವ ಶಕ್ತಿಯಿದ್ದಾಗಲೂ, ಪುರುಷಸೂಕ್ತದಲ್ಲಿ ವಿಷ್ಣುಜ್ಞಾಪಕತ್ವ ಲಿಂಗವಿಲ್ಲದಿರುವುದರಿಂದ ಅದು ವಿಷ್ಣುಪರವಲ್ಲ ಎಂದರೆ –

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ।

ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ।। ೧೭೧ ।।

ಮುಕ್ತಾಮುಕ್ತಪರೇಶತ್ವಮಿತಿ ತಸ್ಯಾಹ ಸಾ ಶ್ರುತಿಃ ।

ಅಮೃತೇಶಾನವಚನಾತ್ಸರ್ವಸ್ಯೇಶಾನತೋದಿತಾ ।। ೧೭೨ ।।

ಹಿಂದೆ ಆಗಿಹೋದ, ಈಗ ಇರತಕ್ಕ ಮುಂದೆ ಆಗತಕ್ಕ ಯಾವ ಅಮುಕ್ತವಾದ ಜಗತ್ತಿರುವುದೋ ಇದೆಲ್ಲವೂ ಪುರುಷಾಧೀನವೇ. ಈ ಪುರುಷನು ಅನ್ನ ಶಬ್ದದಿಂದ ವಾಚ್ಯವಾದ (ಭಕ್ಷಣೀಯವಾದ) ಅಮುಕ್ತವರ್ಗವನ್ನು ಅತಿಕ್ರಮಿಸುತ್ತಾನೆ ಅಂದರೆ ಅಮುಕ್ತರಿಗೆ ಅಧಿಪತಿಯು. ಆದಕಾರಣ ಮುಕ್ತರ ಸಮೂಹಕ್ಕೂ ನಿಯಾಮಕನು. ಹೀಗೆ ಪುರುಷಸೂಕ್ತವು ಶ್ರೀಹರಿಗೆ ಮುಕ್ತಾಮುಕ್ತರ ನಿಯಾಮಕತ್ವವನ್ನು ಹೇಳುತ್ತದೆ. ಉತ್ತರಾರ್ಧದಲ್ಲಿ ಮುಕ್ತನಿಯಾಮಕತ್ವವನ್ನು ಹೇಳತಕ್ಕ ವಚನವಿರುವ ಪ್ರಯುಕ್ತ, ಪೂರ್ವಾರ್ಧದಲ್ಲಿ ಹೇಳಲ್ಪಟ್ಟ ಅಮುಕ್ತರೆಲ್ಲರಿಗೂ ನಿಯಾಮಕತ್ವವೇ ಹೇಳಲ್ಪಟ್ಟಿದೆ ಎಂದು ತಿಳಿಯತಕ್ಕದ್ದು.

ಯದಿ ಸರ್ವತ್ವಮುದಿತಮುತೇಶ ಇತಿ ತದ್ವೃಥಾ ।

ಉತಶಬ್ದೋ ವದೇದೇಷ ಹೀಶತ್ವಸ್ಯ ಸಮುಚ್ಚಯಮ್ ।। ೧೭೨ ।।

ಪೂರ್ವಾರ್ಧದಲ್ಲಿ ಪುರುಷನಿಗೆ ಸರ್ವಾತ್ಮಕತ್ವವು ಹೇಳಲ್ಪಟ್ಟಿದೆ ಎಂದು ಅಂಗೀಕರಿಸಿದರೆ, ಉತ್ತರಾರ್ಧದಲ್ಲಿ ಅಮೃತಸ್ಯೋತೇಶಾನಃ ಎನ್ನುವಲ್ಲಿ ಉತ ಶಬ್ದವು ವ್ಯರ್ಥವಾಗುವುದು. ಹೇಗೆಂದರೆ, ಉತ್ತರಾರ್ಧದಲ್ಲಿರತಕ್ಕ ಉತ ಶಬ್ದವು ಈಶತ್ವಕ್ಕೆ ಸಮುಚ್ಚಯಾರ್ಥವನ್ನು ಹೇಳುವುದು. ಅದಕ್ಕೆ ಬೇರೆ ಅರ್ಥವು ಕೂಡುವುದಿಲ್ಲ. ಆದಕಾರಣ ಎರಡರಲ್ಲಿಯೂ ಈಶತ್ವವನ್ನು ಹೇಳದಿದ್ದರೆ ಅವುಗಳ ಸಮುಚ್ಚಯಾರ್ಥವನ್ನು ಹೇಳುವ ಉತ ಶಬ್ದಕ್ಕೆ ವೈಯರ್ಥ್ಯ ಬರುವುದು.

ಪುರುಷೇಣೈವೇದಂ ವ್ಯಾಪ್ತಮಿತಿ ಬ್ರಾಹ್ಮಣಂ ಚಾಹ ತಂ ಪ್ರತಿ ।

ಏತಾವಾನಸ್ಯ ಮಹಿಮೇತಿ ಮಹಿಮ್ನೋ ವಚೋ ಹಿ ತತ್ ॥ ೧೭೩ ॥

ಪುರುಷನಿಂದಲೇ ಇವೆಲ್ಲವೂ ವ್ಯಾಪ್ತವು (ಅಂದರೆ ವಶೀಕೃತವು ಎಂದರ್ಥ). ವ್ಯಾಪ್ತವೆಂದರೆ ಎಲ್ಲವೂ ಪರರಮಾತ್ಮನೇ ಆಗಿರುವನು ಎಂದು ಅರ್ಥ ಮಾಡುವುದು ಮಿಥ್ಯಾದೃಷ್ಟಿಯು. ಹೀಗೆಂದು ಶಾಖಾಂತರ ಬ್ರಾಹ್ಮಣವೂ ಕೂಡ ಈ ಮಂತ್ರವನ್ನು ಕುರಿತು ಪ್ರವೃತ್ತವಾಗಿದೆ. ಆದ್ದರಿಂದ ಸರ್ವತ್ವವು ಪುರುಷನಿಗೆ ಸರ್ವಾಭೇದತ್ವವನ್ನು ಹೇಳುವುದಿಲ್ಲ. ಸರ್ವಕ್ಕೂ ಪುರಷಾಧೀನತ್ವವನ್ನೇ ಹೇಳುತ್ತದೆ. 'ಏತಾವನಸ್ಯ ಮಹಿಮಾ' ಎಂದು ಈ ಪುರುಷನಿಗೆ ಉಕ್ತವಾದ ಮಹಿಮೆಗಳೆಲ್ಲವೂ 'ಪುರುಷ ಏವೇದಂ ಸರ್ವಂ' ಎಂಬ ಉತ್ತರವಾಕ್ಯದ ಬಲದಿಂದ ಪುರುಷನ ಮಹಿಮೆಯನ್ನು ಹೇಳತಕ್ಕ ವಚನವೆಂದು ತಿಳಿಯಲ್ಪಡುತ್ತದೆ.

ಸೋಽಮೃತಸ್ಯಾಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್ ।

ಇತ್ಯಮುಕ್ತಾಧಿಪತ್ಯಂ ತು ಪೂರ್ವಾರ್ಧೋಕ್ತಮನೂದ್ಯ ಚ ॥ ೧೭೪ ॥

ಉತಾಮೃತಸ್ಯೇಶ ಇತಿ ವಿಧತ್ತೇ ಮುಕ್ತಿಗೇಶತಾಮ್ ।

ಅತೋ ವಿಷ್ಣುಪರಿಜ್ಞಾನಾದೇವ ಮುಕ್ತಿರ್ನ ಚಾನ್ಯತಃ ॥ ೧೭೫ ॥

ಮರಣಶೀಲವಾದ ಅದನೀಯವಾದ ಬ್ರಹ್ಮಾದಿ ಜಗತ್ತನ್ನು ಅತಿಕ್ರಮಿಸಿರುವ ಪ್ರಯುಕ್ತ ಆ ಪುರುಷನು ಭಯರಹಿತವಾದ ಮುಕ್ತರಿಗೆ ನಿಯಾಮಕನು. ಹೀಗೆ ಪುರುಷಸೂಕ್ತಾರ್ಥವನ್ನು ಪ್ರತಿಪಾದಿಸುವ ಭಾಗವತದ ವಚನವಿದೆ. ಆದಕಾರಣ ಪೂರ್ವಾರ್ಧದಲ್ಲಿ ಹೇಳಲ್ಪಟ್ಟ ಅಮುಕ್ತಾಧಿಪತ್ಯವನ್ನೂ ಹೇತುತ್ವೇನ ಅನುವಾದ ಮಾಡಿಕೊಂಡು, 'ಉತಾಮೃತಸ್ಯೇಶಾನಃ' ಎನ್ನುವ ಶ್ರುತಿಯಿಂದ ಮುಕ್ತರಿಗೂ ನಿಯಾಮಕತ್ವವನ್ನು ಪುರುಷಸೂಕ್ತವು ವಿಧಿಸುತ್ತದೆ. ಆದ್ದರಿಂದ ವಿಷ್ಣುಪರಿಜ್ಞಾನದಿಂದ ಹೊಂದಲ್ಪಟ್ಟ ವಿಷ್ಣುಪ್ರಸಾದದಿಂದಲೇ ಮುಕ್ತಿಯು. ಶಿವಾದಿಗಳ ಅನುಗ್ರಹದಿಂದಲ್ಲ.

ಪಾಶುಪತರೂ ಕೂಡ ಜ್ಞಾನಗಳಿಗೆ ಭೋಗದಿಂದಲೇ ಕರ್ಮಕ್ಷಯವನ್ನು ಹೇಳುತ್ತಾರೆ. ಅದೂ ಕೂಡ ಅನುಪಪನ್ನವೆಂದು ಹೇಳುತ್ತಾರೆ –

ತದ್ಯಥೇತಿ ಶ್ರುತೇಶ್ಚೈವ ತತಃ ಕರ್ಮಕ್ಷಯೋ ಭವೇತ್ ।

ಅಗ್ನಿಯಲ್ಲಿ ಪ್ರವೇಶಿಸಿದ ಹುಲ್ಲು ಕಡ್ಡಿ ಅಥವಾ ಹತ್ತಿಯ ರಾಶಿಯು ಹೇಗೆ ಸುಟ್ಟು ಭಸ್ಮವಾಗುವುದೋ ಹಾಗೆಯೇ ಜ್ಞಾನಿಯ ಎಲ್ಲ ಪಾಪಗಳೂ ವಿನಾಶವಾಗುತ್ತವೆ ಎಂದು ಹೇಳುವ ಶ್ರುತಿಯಿಂದ (ತದ್ಯಥೇಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತೈವಂ ಹೈವಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ), ಆ ವಿಷ್ಣುಪರಿಜ್ಞಾನದಿಂದಲೇ ಕರ್ಮಕ್ಷಯವು ಆಗುವುದು.

ಮೇಲೆ ಹೇಳಿದ ಅರ್ಥವನ್ನು ಸ್ಪಷ್ಟ ಪಡಿಸಲು ಭಗವದ್ವಾಕ್ಯದ ಸಮಾಖ್ಯೆಯನ್ನು ಹೇಳುತ್ತಾರೆ –

ಯಥೈಧಾಂಸಿ ಸಮಿದ್ಧೋಗ್ನಿರ್ಭಸ್ಮಸಾತ್ಕುರುತೇ೨ರ್ಜುನ ॥ ೧೭೬ ॥

ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ।

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ॥ ೧೭೭ ॥

ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ।

ಇತ್ಯಾದಿ ಭಗವದ್ವಾಕ್ಯೈರುಕ್ತಾರ್ಥಶ್ಚಾವಸೀಯತೇ ॥ ೧೭೮ ॥

ಹೇ ಅರ್ಜುನನೇ, ಚೆನ್ನಾಗಿ ಪ್ರಜ್ವಲಿಸುವ ಅಗ್ನಿಯು ಕಟ್ಟಿಗೆಗಳನ್ನು ಸುಟ್ಟು ಭಸ್ಮ ಮಾಡುವಂತೆ ಜ್ಞಾನಾಗ್ನಿಯು ಎಲ್ಲ ಕರ್ಮಗಳನ್ನೂ ಭಸ್ಮವನ್ನಾಗಿ ಮಾಡುತ್ತದೆ. ಎಲ್ಲ ಅವೈಷ್ಣವ ಧರ್ಮಗಳನ್ನೂ ಕಾಮ್ಯಕರ್ಮಗಳನ್ನೂ ಸಂಪೂರ್ಣವಾಗಿ ತ್ಯಜಿಸಿ, ನನ್ನನ್ನೇ ಶರಣು ಹೊಂದು. ಆದರಿಂದ ಪ್ರಸನ್ನನಾದ ನಾನು ನಿನ್ನನ್ನು ಎಲ್ಲ ಪಾಪಗಳಿಂದಲೂ ಬಿಡಿಸುವೆನು, ಮೋಕ್ಷವನ್ನೂ ನೀಡುವೆನು. ಶೋಕ ಬೇಡ. ಇತ್ಯಾದಿ ಭಗವಂತನ ವಾಕ್ಯಗಳಿಂದ ನಾವು ಹಿಂದೆ ಹೇಳಿದ ಅರ್ಥವೇ ನಿಶ್ಚಯವಾಗುತ್ತದೆ.

ಭಾಟ್ಟರ ಮೋಕ್ಷಸಾಧನವನ್ನು ಅನುವಾದ ಮಾಡಿ ನಿರಾಕರಿಸುತ್ತಾರೆ –

ನಿತ್ಯನೈಮಿತ್ತಿಕಂ ಕರ್ಮ ಕುರ್ವನ್ನನ್ಯತಪರಿತ್ಯಜನ್ ।

ಮುಚ್ಯತೇ ಸಂಸೃತೇಶ್ಚೈತದಪ್ಯೇತೇನ ನಿರಾಕೃತಮ್ ॥ ೧೭೯ ॥

ನಿತ್ಯ ನೈಮಿತ್ತಿಕ ಕರ್ಮಗಳನ್ನು ಮಾಡುತ್ತ, ಇತರವಾದ ಕಾಮ್ಯ ಹಾಗೂ ನಿಷಿದ್ಧ ಕರ್ಮಗಳನ್ನು ಬಿಡುತ್ತ, ಉಪಾತ್ತ ಅಂದರೆ ಪೂರ್ವದಲ್ಲಿ ಸಂಪಾದಿತವಾದ ಕರ್ಮಗಳನ್ನು ಭೋಗದಿಂದಲೇ ನಾಶಪಡಿಸುವ ಪುರುಷನು ಸಂಸಾರ ಬಂಧದಿಂದ ಬಿಡುಗಡೆ ಹೊಂದುತ್ತಾನೆ. ಹೀಗೆ ಹೇಳುವ ಭಾಟ್ಟರ ಮೋಕ್ಷಸಾಧನವೂ ಕೂಡ 'ನಾನ್ಯಃ ಪಂಥಾ' ಎನ್ನುವ ಶ್ರುತಿವಾಕ್ಯದಿಂದಲೇ ನಿರಾಕೃತವಾಗುತ್ತದೆ.

ಹಾಗಾದರೆ ಸೂತ್ರದಲ್ಲಿ ಹೇಳಿಲ್ಲದ ಈ ಮೋಕ್ಷಸಾಧನವೆಲ್ಲವನ್ನು ಯಾತಕ್ಕಾಗಿ ಹೇಳಿದ್ದು ಎಂದರೆ –

ವಿದ್ಯೈವೇತೀಮಮೇವಾರ್ಥಂ ಸ್ವಯಮೇವಾಹ ವೇದರಾಟ್ ।

'ವಿದ್ಯೈವ ತು ನಿರ್ಧಾರಣಾತ್' ಎನ್ನುವ ಸೂತ್ರದಿಂದ ಭಗವದ್ಜ್ಞಾನದಿಂದಲೇ ಮೋಕ್ಷವು ಎನ್ನುವ ಅರ್ಥವನ್ನು ವೇದವ್ಯಾಸರು ತಾವೇ ಸಾಕ್ಷಾತ್ತಾಗಿ (ಅರ್ಥತಃ ಅಲ್ಲ) ಹೇಳಿದ್ದಾರೆ.

ಸೂತ್ರಗಳಿಗೆ ಬೇರೆ ರೀತಿಯ ಅರ್ಥಗಳನ್ನು ಹೇಳುವ ವೃತ್ತಿಕಾರರ ಮತವನ್ನು ನಿರಾಕರಿಸುವ ಉದ್ದೇಶದಿಂದ ಸಮುಚ್ಚಯನಿಯಮವಾದಿಗಳ ಮತವನ್ನು (ಜ್ಞಾನ ಕರ್ಮಗಳು ಒಟ್ಟಾಗಿ ಸೇರಿ ಮೋಕ್ಷಕ್ಕೆ ಸಾಧನವೆನ್ನುವ ಮತ) ನಿರಾಕರಿಸುತ್ತಾರೆ –

ವಿನಾ ಕರ್ಮ ನ ಮೋಕ್ಷಃ ಸ್ಯಾಜ್ಜ್ಞಾನೇನೇತ್ಯಪಿ ಸಾ ಶ್ರುತಿಃ ॥ ೧೮೦ ॥

ನಾನ್ಯಃ ಪಂಥಾ ಇತಿ ಹ್ಯೇವ ನಿವಾರಯತಿ ಸಾದರಮ್।

ಕೇವಲ ಜ್ಞಾನದಿಂದ ಸಂಸಾರನಿವೃತ್ತಿಯು ಆಗುವುದು. ಆನಂದವೃದ್ಧಿಯಾದರೂ ಕರ್ಮಸಾಪೇಕ್ಷವಾದ ಜ್ಞಾನದಿಂದ ಎಂದು ವೇದವ್ಯಾಸರ ಸಿದ್ಧಾಂತ. ಆದ್ದರಿಂದ ಜ್ಞಾನಕರ್ಮಗಳಿಂದ ಮೋಕ್ಷವು ಎನ್ನುವ ಸಮುಚ್ಚಯನಿಯಮವಾದಿಗಳ ಮತವನ್ನು 'ವಿನಾ ಕರ್ಮ' ಇತ್ಯಾದಿ ವಚನದಿಂದ ಅನುವಾದ ಮಾಡಿ ನಿರಾಕರಿಸುತ್ತಾರೆ. ಕರ್ಮವನ್ನು ಹೊರತು ಕೇವಲ ಜ್ಞಾನದಿಂದ ಮೋಕ್ಷವು ಆಗಲಾರದು ಎನ್ನುವ ಈ ಮತವನ್ನೂ ಕೂಡ ಸೂತ್ರಗೃಹೀತವೇ ಆದ 'ನಾನ್ಯಃ ಪಂಥಾ' ಎನ್ನುವ ಶ್ರುತಿಯು ಸ್ಪಷ್ಟವಾಗಿ ನಿರಾಕರಿಸುತ್ತದೆ.

ಪರ ಮತ್ತು ಅಪರ ಎಂದು ಮುಕ್ತಿಯಲ್ಲಿ ಎರಡು ವಿಧ. ವೈಕುಂಠ ಹಾಗೂ ಸತ್ಯ ಲೋಕಾದಿಗಳ ಪ್ರಾಪ್ತಿಯು ಅಪರಮುಕ್ತಿಯು. ಅವಿದ್ಯೆಯು ನಾಶವಾಗುತ್ತಿದ್ದಂತೆಯೇ ಅದ್ವೈತ ಬ್ರಹ್ಮನಲ್ಲಿ ಸೇರುವುದು ಪರಮುಕ್ತಿಯು. ಪ್ರತೀಕಾದಿಗಳ ಉಪಾಸನೆಯು ಅಪರಮುಕ್ತಿಗೆ ಸಾಧನವಾದರೆ, ಏಕತ್ವಜ್ಞಾನವು ಪರಮುಕ್ತಿಗೆ ಸಾಧನವು. ಹೀಗೆ ಮಾಯಾವಾದಿಗಳು ಹೇಳುತ್ತಾರೆ. ಅದನ್ನು ನಿರಾಕರಿಸುತ್ತಾರೆ –

ಅನ್ಯಥೋಪಾಸನಮಪಿ ತಮೇವಮಿತಿ ವಾದಿನೀ ।। ೧೪೧ ।।

ನಿವಾರಯತ್ಯಾದರೇಣ ನ ಪ್ರತೀಕ ಇತಿ ಪ್ರಭುಃ ।

ಆ ಪುರುಷನನ್ನು ಯಥಾರ್ಥವಾಗಿ ತಿಳಿದವನೇ ಮೋಕ್ಷವನ್ನು ಹೊಂದುತ್ತಾನೆ ಎಂದು ಹೇಳುವ ತಮೇವಂ ವಿದ್ವಾನ್ ಶ್ರುತಿಯು, ಅನ್ಯಥೋಪಾಸನೆಯೂ ಕೂಡ ಪುರುಷಾರ್ಥಕ್ಕೆ ಸಾಧನವೆಂಬುದನ್ನು ವಿಶ್ವಾಸದಿಂದ ನಿವಾರಿಸುತ್ತದೆ. ಪ್ರತಿಮೆಯೇ ಬ್ರಹ್ಮನು ಎನ್ನುವ ಮಿಥ್ಯೋಪಾಸನೆಯನ್ನು ಮಾಡತಕ್ಕದ್ದಲ್ಲ ಎಂದು ವೇದವ್ಯಾಸರು ನ ಪ್ರತೀಕೇ ಹಿ ಸಃ ಎನ್ನುವ ಸೂತ್ರದಿಂದ ಹೇಳಿರುವರು.

ಅನ್ಯಥಾಜ್ಞಾನದಿಂದ ಹಾಗೂ ಏಕತ್ವಜ್ಞಾನದಿಂದ ಮಾಡುವ ಉಪಾಸನೆಗಳು ಪುರುಷಾರ್ಥ ಸಾಧಕವಲ್ಲ ಎಂದಷ್ಟೇ ತಿಳಿಯುವುದಲ್ಲ, ಮತ್ತೆ ಅವು ಅನರ್ಥಕ್ಕೂ ಕಾರಣವು ಎಂದು ಹೇಳುತ್ತಾರೆ –

ಅಂಧಂತಮಃ ಪ್ರವಿಶಂತಿ ಯೇ ತ್ವವಿದ್ಯಾಮುಪಾಸತೇ ।। ೧೪೨ ।।

ಇತಿ ಶ್ರುತಿವಿರೋಧಾಚ್ಚ ನಾನ್ಯಥೋಪಾಸನಂ ಭವೇತ್ ।

ನ ಚಾಪ್ಯೇಕತ್ವವಿಜ್ಞಾನಾದುಕ್ತನ್ಯಾಯೇನ ಮುಚ್ಯತೇ ।। ೧೪೩ ।।

ಯಾರು ಅನ್ಯಥಾ ಉಪಾಸನೆ ಮಾಡುತ್ತಾರೋ ಅಂಥವರು ಅಂಧಂತಮಸ್ಸನ್ನು ಪ್ರವೇಶಿಸುತ್ತಾರೆ. ಹೀಗೆ ಶ್ರುತಿವಿರೋಧವಿರುವ ಪ್ರಯುಕ್ತ ಅನ್ಯಥೋಪಾಸನೆಯು ಪುರುಷಾರ್ಥಕ್ಕೆ ಸಾಧಕವಾಗಲಾರದು. ಹಿಂದೆ ಹೇಳಿದ ನ್ಯಾಯದಿಂದಲೇ ಏಕತ್ವ ಜ್ಞಾನದಿಂದಲೂ ಸಂಸಾರದಿಂದ ಬಿಡುಗಡೆಯಾಗದು ಅಂದರೆ ಪರಮೋಕ್ಷವಾಗದು.

ಹೀಗೆ ಪರಮಪುರುಷಾರ್ಥವಾದ ಮೋಕ್ಷಕ್ಕೆ ಭಗವದುಪಾಸನೆಯೊಂದೇ ಸಾಧನವು, ಬೇರೆ ಇಲ್ಲ. ಸರ್ವೋತ್ತಮತ್ವ ಜ್ಞಾನದಿಂದ ಶ್ರೀಹರಿಯನ್ನೇ ಉಪಾಸನೆ ಮಾಡಬೇಕು, ಶಿವಾದಿಗಳನ್ನಲ್ಲ. ಶ್ರುತ್ಯುಕ್ತವಾದ ವಿಜ್ಞಾನ ಆನಂದ ಇತ್ಯಾದಿ ವಿಷ್ಣು ವಿಶಿಷ್ಟವಾದ ಅನಂತ ಗುಣಗಳಲ್ಲಿ ತನ್ನ ಯೋಗ್ಯತೆಗೆ ಎಷ್ಟು ಶಕ್ಯವೋ ಅಷ್ಟನ್ನೂ ಧ್ಯಾನ ಮಾಡಬೇಕು. ಬ್ರಹ್ಮಾದಿಗಳ ಯೋಗ್ಯತೆಯಲ್ಲಿ ತಾರತಮ್ಯವಿರುವಂತೆ ಅವರು ಮಾಡುವ ಉಪಾಸನೆಯಲ್ಲಿಯೂ ತಾರತಮ್ಯವಿದೆ. ಇತ್ಯಾದಿ ವಿಷಯಗಳನ್ನು ಶ್ರುತಿ ಸ್ಮೃತಿಗಳ ಮೂಲಕ ಉಪಪಾದಿಸಿದರು. ಈಗ ಅಧಿಕರಣಾರ್ಥವನ್ನು ಉಪಸಂಹಾರ ಮಾಡುತ್ತಾರೆ –

ಇತಿ ಸರ್ವಂ ಪ್ರವಿಜ್ಞಾಯ ಸರ್ವೈಸ್ತರ್ಕೈಃ ಸದಾಗಮೈಃ ।

ಉಪಾಸೀತ ಹರಿಂ ನಿತ್ಯಂ ಗುಣೈರೇವ ಸ್ವಯೋಗತಃ ॥ ೧೮೪ ॥

ಹೀಗೆ ಎಲ್ಲ ಸದ್ಯುಕ್ತಿಗಳಿಂದ ಹಾಗೂ ಸದಾಗಮಗಳಿಂದ ಎಲ್ಲವನ್ನು ಚೆನ್ನಾಗಿ ತಿಳಿದು, ತನ್ನ ಯೋಗ್ಯತಾನುಸಾರವಾದ ಅಂದರೆ ಉಪಾಸನೆಗೆ ಯೋಗ್ಯವಾದ ಗುಣಗಳಿಂದ ಯುಕ್ತನಾದ ಶ್ರೀಹರಿಯನ್ನು ಉಪಾಸನೆ ಮಾಡತಕ್ಕದ್ದು.

ಆ ಯೋಗ್ಯತೆಯನ್ನೇ ವಿವರಿಸುತ್ತಾರೆ –

ಬ್ರಹ್ಮಾ ಸರ್ವಗುಣೈಶ್ಚೈವ ಕ್ರಿಯಾಸಾಮಾನ್ಯತಶ್ಚ ಗೀಃ ।

ಗುಣಸಾಮಾನ್ಯತೋ ರುದ್ರೋ ದ್ರವ್ಯಸಾಮಾನ್ಯತಃ ಪರೇ ॥ ೧೮೫ ॥

ಕೇವಲ ಚತುರ್ಮುಖ ಬ್ರಹ್ಮನೇ ಸಮಸ್ತವೇದಗಳಿಂದ ಹೇಳಲ್ಪಟ್ಟ ಸಮಸ್ತ ಗುಣ ಕ್ರಿಯಾರೂಪಾದಿಗಳಿಂದಲೂ ಶ್ರೀಹರಿಯನ್ನು ಉಪಾಸನೆ ಮಾಡತಕ್ಕದು. ಸರಸ್ವತಿ ಯಾದರೂ ಕ್ರಿಯಾಸಂಕೋಚದಿಂದ ಸಕಲ ವೇದೋಕ್ತ ಸಕಲ ಗುಣರೂಪಗಳನ್ನೂ, ರುದ್ರನು ಗುಣಸಂಕೋಚದಿಂದ ಸಮಸ್ತ ರೂಪಗಳನ್ನೂ ಉಪಾಸನೆ ಮಾಡಲಿಕ್ಕೆ ಯೋಗ್ಯರು. ಇಂದ್ರಾದಿಗಳು ಗುಣಕ್ರಿಯಾರೂಪಗಳ ಸಂಕೋಚದಿಂದ ಉಪಾಸನೆ ಮಾಡುತ್ತಾರೆ.

'ಇತಿ ಸರ್ವಂ ಪ್ರವಿಜ್ಞಾಯ' ಎನ್ನುವುದರಿಂದಲೇ 'ಸಮಾನ ಏವಂ ಚಾ ಭೇದಾತ್' ಎಂಬ ಅಧಿಕರಣದ ತಾತ್ಪರ್ಯವೂ ಉಕ್ತವಾಯಿತು. ಇದು ೧೨ನೆಯ ಅಧಿಕರಣವಾದರೆ ವಿದ್ಯಾಧಿಕರಣವು ೨೯ನೆಯದು. ಆದಕಾರಣ ಇದು ಬಹಳ ಹಿಂದೆಯೇ ವ್ಯಾಖ್ಯಾನವಾಗಬೇಕಿತ್ತು ಎಂದರೆ – ಪ್ರಕರಣಶುದ್ಧಿಯಿದ್ದರೆ ಪ್ರಮೇಯ ಸಂಗ್ರಹವು ಸುಲಭ. ಆದ್ದರಿಂದ ಕ್ರಮಭಂಗ ಎಂದು ಸುಧಾಕಾರರ ಸಮಾಧಾನ. ಹೇಗೆಂದರೆ, ಉಪಾಸನಾ ಸ್ವರೂಪವು ಅನಿಶ್ಚಿತವಾಗಿದ್ದರೆ ಯಾವ ವಿಚಾರಕ್ಕೂ ಅವಕಾಶ ಲಭಿಸುವುದಿಲ್ಲ. ಆದಕಾರಣ ಉಪಾಸನೆಯ ಸ್ವರೂಪವನ್ನು ಮೊದಲು ತೋರಿಸಿದರು. ಅದರಿಂದ ಉಪಾಸನೆಗೆ ಕರ್ತವ್ಯತ್ವವು ಸಮರ್ಥಿತವಾಗಿದೆ. ಆಮೇಲೆ

ಇತಿಕರ್ತವ್ಯತಾವನ್ನು ಜಿಜ್ಞಾಸೆ ಮಾಡುವಲ್ಲಿ ಯೋಗ್ಯತಾದಿ ವಿಚಾರವು ಅವಶ್ಯಕವು. ಹೀಗೆ ಸುಧಾಕಾರರು ಹೇಳುತ್ತಾರೆ.

ಯಾವದಧಿಕಾರಾಧಿರಣಮ್

ಓಂ ಯಾವದಧಿಕಾರಮವಸ್ಥಿತಿರಾಧಿಕಾರಿಕಾಣಾಂ ಓಂ

ಈ ಸೂತ್ರವು ಯಥಾ ಯಥಾ ಇತ್ಯಾದಿಗಳಿಂದ ಭಾಷ್ಯದಲ್ಲಿ ವ್ಯಾಖ್ಯಾನ ಮಾಡಲ್ಪಟ್ಟಿದೆ. ಆದರೆ ಅಧಿಕಾರ ವಿಶೇಷಕ್ಕೆ ಕಾರಣತ್ವವನ್ನು ಹೇಳಿರುವುದಿಲ್ಲ. ಮುಕ್ತಿಯಲ್ಲಿ ಎಂದು ಹೇಳಿರುವುದರಿಂದ ಸಂಸಾರದಲ್ಲಿ ಇಲ್ಲವೇ ಇಲ್ಲ ಎಂದು ಪ್ರತೀತವಾಗುವುದು. ಆನಂದಮಾತ್ರ ಗ್ರಹಣದಿಂದ ಗುಣತಾರತಮ್ಯಕ್ಕೆ ವ್ಯಾವೃತ್ತಿಯು ಪ್ರಾಪ್ತವಾಗುವುದು. ಧರ್ಮಿಗಳು ನಿರ್ದೇಶಿಸಲ್ಪಟ್ಟಿಲ್ಲ. ಹೀಗೆ ಭಾಷ್ಯದಲ್ಲಿಯ ವ್ಯಾಖ್ಯಾನವು ಸ್ಪಷ್ಟವಿಲ್ಲದ ಪ್ರಯುಕ್ತ ಇಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನ ಮಾಡುತ್ತಾರೆ –

ಅಧಿಕಾರವಿಶೇಷೇಣ ಭಕ್ತಿಜ್ಞಾನಸುಖಾದಿಭಿಃ ।

ವಿಶೇಷೋ ದೇವತಾದೀನಾಂ ಮೋಕ್ಷೇ ಚೈವ ವಿಶೇಷತಃ ॥ ೧೮೬ ॥

ಯೋಗ್ಯತಾವಿಶೇಷದಿಂದ ಭಕ್ತಿ, ಜ್ಞಾನ, ಸುಖ ಮೊದಲಾದ ಗುಣಗಳಿಂದ ದೇವತೆಗಳೇ ಮೊದಲಾದವರಿಗೆ ವಿಶೇಷವಿದೆ. ಇಲ್ಲಿ ಸಾಮಾನ್ಯಾಕಾರದಿಂದ ಹೇಳಲ್ಪಟ್ಟಿರುವುದರಿಂದ ಮುಕ್ತಿಯಲ್ಲಿಯೂ, ಸಂಸಾರದಲ್ಲಿಯೂ ಕೂಡ ವಿಶೇಷವಿದೆ ಎಂದು ತಿಳಿಯಲ್ಪಡುತ್ತದೆ. ಅದರಲ್ಲಿಯೂ ವಿಶೇಷವಾಗಿ ಕಂಡುಬರುವುದು ಮುಕ್ತಿಯಲ್ಲಿಯೇ. ಈ ಅಭಿಪ್ರಾಯದಿಂದ ಮುಕ್ತಿಯಲ್ಲಿ ವಿಶೇಷವೆಂದು ಭಾಷ್ಯದಲ್ಲಿ ಹೇಳಿರುವುದು ಯುಕ್ತವೇ ಆಗಿದೆ. ಸಂಸಾರದಲ್ಲಿ ವಿಕ್ಷೇಪದ ಕಾರಣ ಸ್ವಲ್ಪ ಮಟ್ಟಿಗೆ ಯೋಗ್ಯತಾನುಸಾರಿತ್ವದಲ್ಲಿ ಏರುಪೇರಾಗುವುದು. ಮುಕ್ತಿಯಲ್ಲಿ ವಿಕ್ಷೇಪವಿಲ್ಲದ ಪ್ರಯುಕ್ತ ಯೋಗ್ಯತಾನುಸಾರಿತ್ವಕ್ಕೆ ವ್ಯತ್ಯಯವಿಲ್ಲ. ಆದಕಾರಣ ಭಾಷ್ಯದಲ್ಲಿ ಮುಕ್ತೌ ಎಂದು ಹೇಳಿದರು.

ಹಾಗಾದರೆ ಮುಕ್ತರಿಗೂ ಪರಸ್ಪರವಾಗಿ ದ್ವೇಷ ಅಸೂಯಾದಿ ಪ್ರಸಂಗದಿಂದ ಮುಕ್ತತ್ವಕ್ಕೆ ವಿರೋಧವು ಬರಬೇಕಾಗುವುದು ಎಂದು ಆಶಂಕಿಸಿದರೆ, ಅದನ್ನು ಪರಹರಿಸುವುದಕ್ಕಾಗಿ 'ಓಂ ಅಕ್ಷರಧಿಯಾಂ ತ್ವವಿರೋಧಃ ಸಾಮಾನ್ಯತದ್ಭಾವಾಭ್ಯಾಮೌಪಸದವತ್ತದುಕ್ತಂ ಓಂ' ಎನ್ನುವ ಸೂತ್ರವು ಹೊರಟಿದೆ. ಈ ಸೂತ್ರವೂ ಕೂಡ ಭಾಷ್ಯದಲ್ಲಿ ಸ್ಪಷ್ಟವಾಗಿಲ್ಲ. ಭಾಷ್ಯದಲ್ಲಿ ಉಕ್ತವಾಗಿರುವಂತೆ ದೋಷಾಭಾವಸಾಮ್ಯಾತ್ ಎನ್ನುವಲ್ಲಿ ಸಾಮ್ಯ ಪದಕ್ಕೆ ಪ್ರಯೋಜನವು ಕಾಣುವುದಿಲ್ಲ. ಶಿಷ್ಯವತ್ ಎನ್ನುವುದೂ ಅಯುಕ್ತವೆಂದು ತೋರುವುದು. ಹೀಗೆ ಭಾಷ್ಯದಲ್ಲಿ ಮೇಲ್ನೋಟಕ್ಕೆ ಅಯುಕ್ತವೆಂದು ಭಾಸವಾಗುವ ಸಂಗತಿಗಳನ್ನು ಇಲ್ಲಿನ ವ್ಯಾಖ್ಯಾನದಿಂದ ಸ್ಪಷ್ಟಪಡಿಸುತ್ತಾರೆ –

ನ ತಾವತಾ ವಿರೋಧೋಽಸ್ತಿ ನಿರ್ದೋಷತ್ವಾತ್ಸಮಸ್ತಶಃ ।

ಆಭಾಸತ್ವಾತ್ಪರೇಷಾಂ ತದವರಾಣಾಂ ಚ ಸರ್ವಶಃ ॥ ೧೮೭ ॥

ಪರಸ್ಪರ ಸಾಮ್ಯವಿದ್ದರೇನೆ ದ್ವೇಷಾದಿ ಪ್ರಸಂಗವು ಹಾಗೂ ಅದರಿಂದ ಮುಕ್ತತ್ವಕ್ಕೆ ವಿರೋಧವು. ಮುಕ್ತರು ಮಾತ್ಸರ್ಯಾದಿ ದೋಷರಹಿತರಾದುದರಿಂದ ಅವರಲ್ಲಿ ಪರಸ್ಪರವಾಗಿ ನಿರ್ದೋಷತ್ವ ರೂಪದಿಂದ ಸಾಮ್ಯವಿರುವುದು. ಉತ್ತಮರಿಂದ ಅಧಮರಾದ ಎಲ್ಲರಿಗೂ ಉತ್ತಮರ ಪ್ರತಿಬಿಂಬತ್ವವಿದ್ದ ಪ್ರಯುಕ್ತ ಪರಸ್ಪರವಾಗಿ ತಾರತಮ್ಯವಿರುವುದು. ಇದರಿಂದ ದ್ವೇಷಾದಿಗಳ ಪ್ರಸಕ್ತಿಯಿಲ್ಲ. ಹೀಗೆ ಒಂದು ರೀತಿಯಿಂದ ಸಾಮ್ಯವೂ ಮತ್ತೊಂದು ರೀತಿಯಿಂದ ತಾರತಮ್ಯವೂ ಕೂಡುವ ಪ್ರಯುಕ್ತ ಮುಕ್ತತ್ವಕ್ಕೆ ವಿರೋಧವಿಲ್ಲ. ಸಮಸ್ತಶಃ ಎನ್ನುವುದು ಭಾಷ್ಯದಲ್ಲಿನ ಸಾಮ್ಯ ಶಬ್ದಕ್ಕೂ, ಆಭಾಸತ್ವಾತ್ ಎನ್ನುವುದು ಉತ್ತಮೇಭ್ಯಃ ಎನ್ನುವುದಕ್ಕೂ ವ್ಯಾಖ್ಯಾನವು.

ಇದನ್ನು ವಿವರಿಸಲಿಕ್ಕಾಗಿಯೇ 'ಯತಃ' ಇತ್ಯಾದಿ ವಚನದಿಂದ ದೃಷ್ಟಾಂತವನ್ನು ವ್ಯಾಖ್ಯಾನ ಮಾಡುತ್ತಾರೆ –

ಯತೋಽವರಾಣಾಂ ಸರ್ವೇಽಪಿ ಗುಣಾಃ ಸರ್ವಾಃ ಕ್ರಿಯಾ ಅಪಿ ।

ನಿಯಮೇನೈವ ಪೂರ್ವೇಷಾಂ ಸುಪ್ರಸಾದನಿಬಂಧನಾಃ ॥ ೧೮೮ ॥

ಅತಃ ಸಚ್ಛಿಷ್ಯವತ್ತೇಷಾಂ ನೈವೇರ್ಷ್ಯಾದಿಃ ಕಥಂಚನ ।

ಯೋಗ್ಯತೆಯಲ್ಲಿ ನಿಕೃಷ್ಟರಾದವರ ಎಲ್ಲ ಗುಣಗಳೂ ಎಲ್ಲ ಕ್ರಿಯೆಗಳೂ ಕೂಡ ನಿಯಮವಾಗಿ ಅವರಿಗಿಂತ ಉತ್ತಮರ ಸುಪ್ರಸಾದವೆಂಬ ನಿಬಂಧನೆಗೆ ಒಳಪಟ್ಟಿರುವ ಕಾರಣ, ಗುರುಗಳಲ್ಲಿ ನಿರ್ದುಷ್ಟವಾದ ಭಕ್ತಿಯುಳ್ಳ ಶಿಷ್ಯನಂತೆಯೇ, ಮುಕ್ತರಲ್ಲಿ ಯಾವ ಪ್ರಕಾರದಿದಂಲೂ ಪರಸ್ಪರ ಅಸೂಯಾದಿಗಳು ಇರುವುದೇ ಇಲ್ಲ.

ಮಾಯಾವಾದಿಗಳು ಯಾವದಧಿಕಾರಂ ಎನ್ನುವ ಮೊದಲನೆಯ ಸೂತ್ರಕ್ಕೇನೆ ಇವೆಲ್ಲ ಅರ್ಥವು ಎಂದು ವರ್ಣಿಸುತ್ತ, ಅಕ್ಷರಧಿಯಾಂ ಎನ್ನುವದು ಬೇರೆಯೇ ಅಧಿಕರಣವೆಂದು ವ್ಯಾಖ್ಯಾನ ಮಾಡುತ್ತಾರೆ. ಇದನ್ನು ನಿರಾಕರಿಸುತ್ತಾರೆ –

ನ ಚ ಸಂಸಾರಿದೇವಾನಾಂ ಕಾಲೇಯತ್ತಾಪರೇ ಇಮೇ ॥ ೧೮೯ ॥

ಸೂತ್ರೇ ಹ್ಯಾರಬ್ಧಮಾತ್ರಸ್ಯ ಭೋಗೇನೈವ ಕ್ಷಯೋ ದ್ರುವಃ ।

ಅನಾರಬ್ಧಸ್ಯ ಭೋಗೇನ ತ್ವಿತರೇ ಇತಿ ಚೋದಿತಃ ॥ ೧೯೦ ॥

ಪೌನರುಕ್ತ್ಯೇನ ತೇನೈತೇ ಉಕ್ತಾರ್ಥೇ ಇತಿ ನಿಶ್ಚಯಃ ।

ಸಂಸಾರಿಗಳಾದ ದೇವತೆಗಳಿಗೆ, ಪ್ರಾರಬ್ಧಕರ್ಮದ ಫಲಭೋಗವು ತೀರುವವರೆಗೆ ಸಂಸಾರದಲ್ಲಿ ಅವಸ್ಥಿತಿಯು ಎಂಬ ಕಾಲಮರ್ಯಾದೆಯನ್ನು ಪ್ರತಿಪಾದಿಸುವುದು ಈ ಸೂತ್ರಗಳ ಉದ್ದೇಶವಲ್ಲ. ಏಕೆಂದರೆ, ಅನಾರಬ್ಧ ಕರ್ಮಕ್ಕೆ ಜ್ಞಾನದಿಂದಲೇ ನಾಶವು, ಪ್ರಾರಬ್ಧ ಕರ್ಮಕ್ಕೆ ಮಾತ್ರ ಭೋಗದಿಂದಲೇ ನಾಶವೆನ್ನುವುದು ನಿಶ್ಚಿತ. ಈ ಅರ್ಥವು

'ಅನಾರಬ್ಧಕಾರ್ಯೇ ಏವ ತು ಪೂರ್ವೇ ತದವಧೇಃ' ಎನ್ನುವ ಸೂತ್ರದಿಂದಲೂ, 'ಭೋಗೇನ ತ್ವಿತರೇ ಕ್ಷಪಯಿತ್ವಾಥ ಸಂಪದ್ಯತೇ' ಎನ್ನುವ ಸೂತ್ರದಿಂದಲೂ ಹೇಳಲ್ಪಟ್ಟಿದೆ. ಹೀಗೆ ಮಾಯಾವಾದಿಗಳ ವ್ಯಾಖ್ಯಾನಕ್ಕೆ ಪುನರುಕ್ತಿ ಎಂಬ ದೋಷ ಬರುವುದರಿಂದ ಅಪವ್ಯಾಖ್ಯಾನವು. ಹೀಗೆ ಈ ಸೂತ್ರಗಳು ನಮ್ಮಿಂದ ಹೇಳಲ್ಪಟ್ಟ ಅರ್ಥವನ್ನೇ ಹೊಂದಿವೆ ಎಂದು ನಿಶ್ಚಯವಾಗುವುದು.

ಇಯದಾಮನನಾಧಿಕರಣಮ್

೦೦ ಇಯದಾಮನನಾತ್ ೦೦

ಯಾವ ಜ್ಞಾನಯೋಗ್ಯರಿಗೆ ಮುಕ್ತಿಸಂಸಾರಗಳಲ್ಲಿ ಈ ತಾರತಮ್ಯವು ಸಮರ್ಥನೆ ಮಾಡಲ್ಪಟ್ಟಿತೋ, ಅವರುಗಳು ಛಾಂದೋಗ ಉಪನಿಷತ್ತಿನಲ್ಲಿ, ನಾಮವಾಗಾದಿ ಕ್ರಮದಿಂದ ಪ್ರಾಣನವರೆಗೆ ಹೇಳಲ್ಪಟ್ಟಿದ್ದಾರೆ. ಅದರಲ್ಲಿ ಪ್ರಾಣನೇ ಅಧಿಕಾರಿಗಳ ತಾರತಮ್ಯಕ್ಕೆ ಅವಧಿಯೋ ಅಥವಾ ಅವನಿಗಿಂತ ಕೆಳಗೆ ಮತ್ತೊಬ್ಬನಿರುವನೋ ಎಂದು ಸಂಶಯವು ಬರಲು, ದೇವತಾ ತಾರತಮ್ಯದ ಅವಧಿಯು ಪ್ರಾಣನ ಪರ್ಯಂತವೇ ಎಂದು ಸಿದ್ಧಾಂತ. ಅದರಲ್ಲಿ ನಾಮಾದಿ ಆ ದೇವತೆಗಳು ಯಾರು ಎಂದು ತಿಳಿಯುವುದಿಲ್ಲ. ಅವರಲ್ಲಿ ಹದಿನೈದು ಮಂದಿಯೇ ಎನ್ನುವುದು ಹೇಗೆ, ಇನ್ನೂ ಹೆಚ್ಚಿರಬಹುದಲ್ಲ ಎಂದು ಆಶಂಕೆ ಬಂದರೆ ಅದನ್ನು ನಿವಾರಿಸಲು ಬೃಹತ್ ಸಂಹಿತಾ ವಚನವನ್ನು ಪಠಿಸುತ್ತಾರೆ –

ಉಷಾ ಸ್ವಾಹಾ ಚ ಪರ್ಜನ್ಯೋ ಮಿತ್ರೋಽಗ್ನಿರ್ವರುಣೋ ವಿಧುಃ ॥ ೧೯೧ ॥

ಪ್ರವಹೋಽನಿರುದ್ಧ ಇಂದ್ರೋಮೇ ರುದ್ರೋ ವಾಣೀ ಚ ಮಾರುತಃ ।

ಉತ್ತರೋತ್ತರಸ್ಚೈತೇ ಗುಣೈಸ್ಸರ್ವೈಶ್ಚ ಮುಕ್ತಿಗಾಃ ॥ ೧೯೨ ॥

ಅಶ್ವಿನಿ ದೇವತೆಗಳ ಹೆಂಡತಿ ಉಷಾ, ಅಗ್ನಿಯ ಹೆಂಡತಿ ಸ್ವಾಹಾ, ಪರ್ಜನ್ಯ ಹಾಗೂ ಮಿತ್ರ (ಇವೆರಡೂ ಆದಿತ್ಯನ ರೂಪಗಳು), ಅಗ್ನಿ, ವರುಣ, ಚಂದ್ರ, ಪ್ರವಹ ವಾಯು, ಕಾಮಪುತ್ರ ಅನಿರುದ್ಧ, ಇಂದ್ರ ಹಾಗೂ ಪಾರ್ವತಿ, ರುದ್ರ, ಭಾರತೀದೇವಿ, ಮುಖ್ಯಪ್ರಾಣ, ಮುಕ್ತಿಯಲ್ಲಿ ಹಾಗೂ ಸಂಸಾರದಲ್ಲಿರತಕ್ಕ ಇವರೆಲ್ಲರೂ ಕೂಡ, ಎಲ್ಲ ಗುಣಗಳಿಂದಲೂ ಹಿಂದೆ ಹೇಳಿದ ಕ್ರಮದಿಂದಲೇ ತಾರತಮ್ಯದಲ್ಲಿ ಉತ್ತರೋತ್ತರ ಅಧಿಕರಾಗಿರುತ್ತಾರೆ.

ಮೇಲೆ ಹೇಳಿದವರಿಗಿಂತ ಇನ್ನೂ ಅಧಿಕರು ಇರುವರು ಎಂಬ ಶಂಕೆಯನ್ನು ನಿವಾರಿಸುವುದಕ್ಕಾಗಿ ಇವರುಗಳ ಸಮಾನರನ್ನೂ, ಮಧ್ಯದವರನ್ನೂ ಹೇಳುತ್ತಾರೆ –

ಸೂರ್ಯಧರ್ಮೌ ಯಥಾ ಸೋಮೋ ಮನುರ್ದಕ್ಷೋ ಬೃಹಸ್ಪತಿಃ ।

ಶಚೀ ರತಿಶ್ಚಾನಿರುದ್ಧಸಮಾಸ್ತಾರಾ ಚ ಮಿತ್ರವತ್ ॥ ೧೯೩ ॥

ಸೋಮವಚ್ಛತರೂಪಾ ತು ಪ್ರಸೂತಿರ್ವಹ್ನಿವದ್ವಿರಾಟ್ ।
ಪರ್ಜನ್ಯವದ್ವಾರುಣೀ ಚ ತಥಾ ಸಂಜ್ಞಾ ಚ ರೋಹಿಣೀ ॥ ೧೯೪ ॥
ಧಾರ್ಮೀ ಚ ಮಿತ್ರವತ್ಪ್ರೇವ ಪ್ರಾವಹೀ ಪರಿಕೀರ್ತಿತಾ ।
ಮಿತ್ರಪರ್ಜನ್ಯಮಧ್ಯಸ್ಥಾವಶ್ವಿನೌ ವಿಘ್ನವಿತ್ತಪೌ ॥ ೧೯೫ ॥
ಭೃಗುರಗ್ನಿಸಮೋ ಮಿತ್ರಸ್ತನ್ಮಧ್ಯೇ ಬ್ರಹ್ಮಪುತ್ರಕಾಃ ।
ವರುಣಾಗ್ನ್ಯಂತರಾ ತತ್ರ ನಾರದಃ ಪ್ರಾಯ ಇಂದ್ರವತ್ ॥ ೧೯೬ ॥
ಕಾಮಃ ಸುಪರ್ಣೇ ಚೋಮಾವದ್ವೀಂದ್ರೋ ರುದ್ರವದೀರಿತಃ ।
ನಿಋತಿರ್ಮಿತ್ರಸದೃಶೋ ವಿಶ್ವಾಮಿತ್ರಃ ಕಸೂನುವತ್ ॥ ೧೯೭ ॥
ವೈವಸ್ವತೋ ಮನುಶ್ಚಾಶ್ವಿಪಶ್ಚಾದನ್ಯೇ ತತೋಽವರಾಃ ।
ಚ್ಯವನೋಚ್ಯಥ್ಯವೈನ್ಯಾಶ್ಚ ಶಶಿಬಿಂದುಶ್ಚ ಹೈಹಯಃ ॥ ೧೯೮ ॥
ತದ್ವಚ್ಚ ವಿಪ್ರರಾಜನ್ಯವಿಶೇಷೋಽತ್ರಾಪಿ ಕಶ್ಚನ ।
ತದ್ವತ್ ಪ್ರಿಯವ್ರತಶ್ಚಾಪಿ ತದನ್ಯಾಃ ಶತದೇವತಾಃ ॥ ೧೯೯ ॥
ಪರ್ಜನ್ಯಮಿತ್ರಾಂತರಾಲೇ ತದನ್ಯೇ ತು ತತೋಽವರಾಃ ।

ಯಥಾ ಸೋಮೋ ತಥಾ ಸೂರ್ಯಧರ್ಮೌ ಎಂದು ಅನ್ವಯ. ಅಂದರೆ ಸೂರ್ಯನು ಯಮನು ಇವರಿಬ್ಬರೂ ಸೋಮನಿಗೆ ಸಮ. ಸ್ವಾಯಂಭುವ ಮನು, ದಕ್ಷಪ್ರಜಾಪತಿ, ಬೃಹಸ್ಪತಿ, ಶಚೀದೇವಿ, ರತಿದೇವಿ ಈ ಐವರು ಅನಿರುದ್ಧನಿಗೆ ಸಮ. ಬೃಹಸ್ಪತಿಯ ಹೆಂಡತಿಯಾದ ತಾರಾದೇವಿಯಾದರೂ ಮಿತ್ರಾಖ್ಯ ಸೂರ್ಯನಿಗೆ ಸಮ. ಸ್ವಾಯಂಭುವಿನ ಹೆಂಡತಿಯಾದ ಶತರೂಪಾ ಸೋಮನಿಗೆ ಸಮ. ದಕ್ಷನ ಹೆಂಡತಿಯಾದ ಪ್ರಸೂತಿಯು ಅಗ್ನಿಗೆ ಸಮ. ಅನಿರುದ್ಧನ ಹೆಂಡತಿಯಾದ ವಿರಾಟ್, ವರುಣನ ಪತ್ನಿ ವಾರುಣೀ, ಸೂರ್ಯ ಪತ್ನಿ ಸಂಜ್ಞಾ, ಸೋಮನ ಪತ್ನಿ ರೋಹಿಣೀ, ಯಮನ ಹೆಂಡತಿ ಇವರುಗಳು ಪರ್ಜನ್ಯಾಖ್ಯ ಸೂರ್ಯನಿಗೆ ಸಮ. ಪ್ರವಹನ ಹೆಂಡತಿಯಾದರೂ ಮಿತ್ರನಿಗೆ ಸಮ. ಅಶ್ವಿನೀದೇವತೆಗಳಿಬ್ಬರು, ಗಣಪತಿ, ಕುಬೇರ ಈ ನಾಲ್ವರು ಸಮಾನಿಕರಾಗಿದ್ದು ಮಿತ್ರಾಖ್ಯ ಸೂರ್ಯನಿಂದ ಅಧಮರು, ಪರ್ಜನ್ಯನ ದೆಶೆಯಿಂದ ಉತ್ತಮರು. ಆದಪ್ರಯುಕ್ತ ಮಿತ್ರಪರ್ಜನ್ಯರ ನಡುವೆ ಇವರಿಗೆ ಸ್ಥಾನ. ಭೃಗುಋಷಿಯು ಅಗ್ನಿಗೆ ಸಮ. ಬ್ರಹ್ಮಪುತ್ರರಾದ ಮರೀಚ್ಯಾದಿಗಳು ಮಿತ್ರ ಅಗ್ನಿಯರ ಮಧ್ಯದಲ್ಲಿ ಬರುತ್ತಾರೆ. ಪರಸ್ಪರ ಸಮಾನಿಕರಾದ ಮರೀಚ್ಯಾದಿಗಳು ಮಿತ್ರನಿಗಿಂತ ಉತ್ತಮರೂ ಅಗ್ನಿಗಿಂತ ಅಧಮರೂ ಆಗಿರುತ್ತಾರೆ. ಆ ಬ್ರಹ್ಮಪುತ್ರರಲ್ಲಿ ನಾರದನು ವರುಣ ಅಗ್ನಿಯರ ಮಧ್ಯದಲ್ಲಿ, ಅಂದರೆ ವರುಣನಿಂದ ಅಧಮನು ಅಗ್ನಿಯಿಂದ

ವರುಣ ಅಗ್ನಿಯರ ಮಧ್ಯದಲ್ಲಿ, ಅಂದರೆ ವರುಣನಿಂದ ಅಧಮನು ಅಗ್ನಿಯಿಂದ ಉತ್ತಮನು. ದಕ್ಷ, ಭೃಗು, ನಾರದ ಇವರುಗಳನ್ನು ಪ್ರತ್ಯೇಕವಾಗಿ ಹೇಳಿರುವುದರಿಂದ ಬ್ರಹ್ಮಪುತ್ರರಾದ ಮರೀಚ್ಯಾದಿಗಳು ಏಳು ಜನ ಮಾತ್ರ. ಮನ್ಮಥನು ಪ್ರಾಯಶಃ ಇಂದ್ರನಂತೆಯೇ ಅಂದರೆ ಇಂದ್ರನಿಗೆ ಸ್ವಲ್ಪ ಕಡಿಮೆಯವನು. ಗರುಡನ ಪತ್ನಿಯು ಪಾರ್ವತಿಯಂತೆ. ಗರುಡನು ರುದ್ರನಂತೆ. ನಿರ್ಋತಿ ಮಿತ್ರನಿಗೆ ಸಮ. ವಿಶ್ವಾಮಿತ್ರ ಋಷಿ ಹಾಗೆಯೇ ವೈವಸ್ವತ ಮನುವೂ ಬ್ರಹ್ಮಪುತ್ರರಾದ ಮರೀಚ್ಯಾದಿಗಳಿಗೆ ಸಮ. ಸ್ವಾಯಂಭುವ ಮನು, ವೈವಸ್ವತ ಮನು ಹಾಗೂ ಭಗವದವತಾರವಾದ ತಾಪಸ ಮನು ಇವರನ್ನು ಬಿಟ್ಟು ಉಳಿದ ಮನುಗಳು ವೈವಸ್ವತನಿಗಿಂತ ಕೆಳಗಿನವರು. ಆದರೆ ಅಶ್ವಿನಿದೇವತೆಗಳಿಗಿಂತ ಮೇಲಿನವರು ಅಂದರೆ ಪರ್ಜನ್ಯನಿಂದ ಉತ್ತಮರು. ಚ್ಯವನ, ಉಚಥ್ಯ, ವೈನ್ಯ, ಶಶಿಬಿಂದು, ಹೈಹಯ ಇವರುಗಳು ಹನ್ನೊಂದು ಮನುಗಳಿಗೆ ಸಮಾನರು. ಇವರಲ್ಲಿಯೂ ವಿಪ್ರತ್ವ, ಕ್ಷತ್ರಿಯತ್ವ ನಿಮಿತ್ತಕವಾದ ವಿಶೇಷವಿದೆ. ಮಕ್ತಿಯಲ್ಲಿಯೂ ವಿಪ್ರತ್ವಾದಿಗಳು ಇರುತ್ತವೆ. ಇವರಲ್ಲಿ ಚ್ಯವನ ಉಚಥ್ಯರು ವಿಪ್ರರು, ಅನ್ಯರು ಕ್ಷತ್ರಿಯರು. ಪ್ರಿಯವ್ರತನೂ ಕೂಡ ಅವರರಾದ ಮನುಗಳಂತೆಯೇ. ಮೇಲೆ ಹೇಳಿದವರಿಂದ ಇತರರಾದ ನೂರು ದೇವತೆಗಳು ಹಾಗೂ ಈ ಗುಂಪಿಗೇ ಸೇರುವ ಸೋಮಪಾನಕ್ಕೆ ಅರ್ಹರಾದ ದೇವತೆಗಳು ಪರ್ಜನ್ಯ ಮಿತ್ರರ ನಡುವೆ ಇರುತ್ತಾರೆ. ಇವರು ಪರ್ಜನ್ಯನಿಂದ ಉತ್ತಮರೂ ಮಿತ್ರನಿಂದ ಅಧಮರೂ, ಅಶ್ವಿನಿ ದೇವತೆಗಳಿಗೆ ಸಮಾನಿಕರೂ ಆಗಿರುತ್ತಾರೆ. ಮೇಲೆ ಹೇಳಿದ ದೇವತೆಗಳಿಗಿಂತ ಇತರರಾದ ದೇವತೆಗಳು ಶತಾಂತರ್ಗತ ದೇವತೆಗಳಿಗಿತಲೂ ನಿಕೃಷ್ಟರು, ಅಂದರೆ ಅವರರಾದ ಮನುವಿಗೆ ಸಮಾನರು.

ಮಹಾಲಕ್ಷ್ಮಿಯು ಪ್ರಾಣನಿಂದಲೂ ಉತ್ತಮಳಾಗಿದ್ದರೂ, ಅಧಿಕಾರಿಗಳಲ್ಲಿ ಪ್ರಾಣಪರ್ಯಂತವಾಗಿ ಹೇಳಿದ್ದು ಹೇಗೆ ಎಂದರೆ –

ಏತೇಭ್ಯೋಽಭ್ಯಧಿಕಾ ಶ್ರೀಸ್ತು ಸದಾ ಮುಕ್ತಾ ವಿಶೇಷತಃ ॥ ೨೦೦ ॥

ತತ್ಸಮೋ ನಾಸ್ತಿ ಪರಮೋ ಹರಿರೇವ ನ ಚಾಪರಃ ।

ಸಂಹಿತಾಯಾಂ ಬೃಹತ್ಯಾಂ ತು ಸ್ವಯಂ ಭಗವತೋದಿತಮ್ ॥ ೨೦೧ ॥

ತದೇತದಖಿಲಂ ..... ।

ಮಹಾಲಕ್ಷ್ಮಿಯು ಪೂರ್ವೋಕ್ತವಾದ ಎಲ್ಲ ದೇವತೆಗಳಿಂದ ವಿಶೇಷವಾಗಿ ಅತ್ಯಧಿಕಳು. ಅವಳು ಸರ್ವದಾ ಮುಕ್ತಳು (ಬಂಧರಹಿತಳು). ಆದಕಾರಣ ಅಧಿಕಾರ ವರ್ಗದಲ್ಲಿ ಅವಳು ಸೇರುವುದಿಲ್ಲ. ಲಕ್ಷ್ಮಿಗೆ ಸಮಾನಿಕರು ಯಾರೂ ಇಲ್ಲ. ಇದರಿಂದ 'ಕಾಮಾದಿತರತ್ರ ತತ್ರ ಚಾಯತನಾದಿಭ್ಯಃ' ಎನ್ನುವ ಅಧಿಕರಣದ ತಾತ್ಪರ್ಯವು ಉಕ್ತವಾಯಿತು. ಮಹಾಲಕ್ಷ್ಮಿಗಿಂತಲೂ ಉತ್ತಮನಾದ ಶ್ರೀಹರಿಯೇ ಸರ್ವೋತ್ತಮನು. ಅವನಿಗೆ ಸಮನೂ ಅಧಿಕನೂ ಮತ್ತೊಬ್ಬನಿಲ್ಲ. ಇದರಿಂದ 'ವ್ಯತಿಹಾರೋ ವಿಶಿಂಷಂತಿ ಹೀತರವತ್' ಹಾಗೂ 'ಸೈವ ಹಿ ಸತ್ಯಾದಯಃ' ಎನ್ನುವ

ಎರಡು ಅಧಿಕರಣಗಳ ತಾತ್ಪರ್ಯ ಹೇಳಲ್ಪಟ್ಟಿತು. ಇವೆಲ್ಲವೂ ಬೃಹತ್ಸಂಹಿತೆಯಲ್ಲಿ ಸಾಕ್ಷಾತ್ತಾಗಿ ಭಗವಾನ್ ವೇದವ್ಯಾಸರಿಂದಲೇ ಹೇಳಲ್ಪಟ್ಟಿದೆ.

ಹಾಗಾದರೆ ಉಪನಿಷತ್ತಿನಲ್ಲಿ ನಾಮದಿಂದ ಪ್ರಾರಂಭಿಸಿ ಪ್ರಾಣಪರ್ಯಂತವಾಗಿ ಹದಿನೈದು ಮಂದಿಯನ್ನು ಹೇಳಲಾಗಿದೆ. ಇಲ್ಲಿ ಉಷಾ ಸ್ವಾಹಾ ಇತ್ಯಾದಿಯಾಗಿ ಹದಿನಾಲ್ಕೇ ಹೇಳಿರುವುದರಿಂದ ವಿಸಂವಾದವು ಹೇಗೆ ಇಲ್ಲ ಎಂದರೆ –

..... ಪ್ರಾಣ ಆಹಂಕಾರಿಕ ಏವ ಚ ।

ಇಂದ್ರಾದನಂತರಃ ..... ॥

ತೈಜಸಾಹಂಕಾರದಿಂದ ಹುಟ್ಟಿರುವ ಮತ್ತೊಬ್ಬ ಪ್ರಾಣನಿರುವನು. ಅವನಾದರೂ ಇಂದ್ರನಿಂದ ಹಾಗೂ ಅನಿರುದ್ಧನಿಂದ ಉತ್ತಮನೆಂದೂ ತಿಳಿಯತಕ್ಕುದು.

ಪ್ರಜ್ಞಾಂತರಾಧಿಕರಣಮ್

ಓಂ ಪ್ರಜ್ಞಾಂತರಪೃಥಕ್ತ್ವವದ್ದೃಷ್ಟಿಶ್ಚ ತದುಕ್ತಂ ಓಂ

ಈ ಅಧಿಕರಣದ ವ್ಯಾಖ್ಯಾನ ಮಾಡುವಾಗ ಉಪಾಸನಾ ಭೇದದಂತೆಯೇ ದರ್ಶನಭೇದವು ಎಂದು ಭಾಷ್ಯದಲ್ಲಿ ಹೇಳಿರುವರು. ದರ್ಶನಭೇದದ ವಿಷಯದಲ್ಲಿ ಮೂಲಕಾರಣವನ್ನು ಹೇಳಿಲ್ಲವಾದ ಕಾರಣ ಭಾಷ್ಯೋಕ್ತಿಯು ಅಸ್ಪಷ್ಟವು. ಆದ್ದರಿಂದ ಇಲ್ಲಿ ಸ್ಪಷ್ಟವಾಗಿ ವ್ಯಾಖ್ಯಾನ ಮಾಡುತ್ತಾರೆ –

..... ದೃಷ್ಟಿರಪಿ ಯೋಗ್ಯಾನುಸಾರತಃ ॥ ೨೦೨ ॥

ದರ್ಶನವೂ ಕೂಡ ಯೋಗ್ಯತಾನುಸಾರ ಅನೇಕ ವಿಧವು ಎಂದು ತಾತ್ಪರ್ಯ.

ಪ್ರದಾನಾಧಿಕರಣಮ್

ಓಂ ಪ್ರದಾನವದೇವ ತದುಕ್ತಮ್ ಓಂ

ಲಿಂಗಭೂಯಸ್ತ್ವಾಧಿಕರಣಮ್

ಓಂ ಲಿಂಗಭೂಯಸ್ತ್ವಾತ್ತದ್ಧಿ ಬಲೀಯಸ್ತದಪಿ ಓಂ

ಇಲ್ಲಿ ಪ್ರದಾನವೆಂದರೆ ಪ್ರಕೃಷ್ಟವಾದ ದಾನ. ಪ್ರ ಶಬ್ದವು ಭಾಷ್ಯದಲ್ಲಿ ಸ್ಪಷ್ಟವಾಗಿ ವ್ಯಾಖ್ಯಾತವಾಗಿಲ್ಲ. ಆದಕಾರಣ ಸೂತ್ರಾರ್ಥವನ್ನು ಹೇಳುತ್ತಾರೆ –

ಸಮ್ಯಗ್ಗುರುಪ್ರಸಾದಶ್ಚ ಮುಖ್ಯತೋ ದೃಷ್ಟಿಕಾರಣಮ್ ।

ಕೇವಲ ಶ್ರವಣಾದಿಗಳಲ್ಲ, ಚೆನ್ನಾಗಿ ಗುರುಪ್ರಸಾದವೂ ಕೂಡ ಮುಖ್ಯವಾಗಿ ಭಗವದ್ದರ್ಶನಕ್ಕೆ ಕಾರಣ. ಸಮ್ಯಕ್ ಅನುಗ್ರಹಪೂರ್ವಕವಾಗಿ ಗುರುಗಳಿಂದ ಯಾವ ವಿದ್ಯಾದಾನವಾಗುವುದೋ ಅದೂ ಕೂಡ ಭಗವದ್ದರ್ಶನಕ್ಕೆ ಕಾರಣವು ಎಂದರ್ಥ.

ಲಿಂಗಭೂಯಸ್ತ್ವಾಧಿಕರಣದಲ್ಲಿ ಗುರುಪ್ರಸಾದಕ್ಕೆ ಶ್ರವಣಾದಿಗಳಿಂದ ಪ್ರಾಬಲ್ಯವು ಉಕ್ತವಾಗಿದೆ. ಅದು ಅಯುಕ್ತವು. ಪ್ರದಾನ ಶಬ್ದಾರ್ಥದಲ್ಲಿಯೇ ಅದೂ ಕೂಡ

ಸೇರಿದೆ. ತನ್ನ ದೆಶೆಯಿಂದಲೇ ತಾನು ಬಲಿಷ್ಠವೆನ್ನುವದು ಅಸಂಭವವು. ಹೀಗೆ ಆಶಂಕಿಸಿದರೆ, ಅದಕ್ಕೆ ಸಮ್ಯಕ್ ಎನ್ನುವುದರಿಂದಲೇ ಉತ್ತರಿಸುತ್ತಾರೆ. ಚೆನ್ನಾಗಿ ಗುರುಪ್ರಸಾದವೂ ಕೂಡ ಶ್ರವಣಾದಿಗಳಿಗಿಂತ ಅತಿಶಯವಾಗಿ ಕಾರಣವು ಎಂದರ್ಥ.

ಲಿಂಗಗಳುಳ್ಳ ಆಖ್ಯಾಯಿಕೆಗಳಲ್ಲಿ ಗುರುಪ್ರಸಾದದಿಂದಲೇ ಜ್ಞಾನಪ್ರಾಪ್ತಿಯು ಶ್ರುತವಾಗಿರುವ ಪ್ರಯುಕ್ತ ಶ್ರವಣಾದಿಗಳನ್ನು ಮಾಡಬೇಕಿಲ್ಲ ಎಂಬ ಶಂಕೆ ಬಂದರೆ, ಅದನ್ನು ನಿವಾರಣೆ ಮಾಡುವುದಕ್ಕಾಗಿ ತದಪಿ ಎಂದು ಸೂತ್ರದಲ್ಲಿ ಹೇಳಿರುವರು. ಅದನ್ನು ವ್ಯಾಖ್ಯಾನ ಮಾಡುತ್ತಾರೆ ಶ್ರವಣಾದಿ ಚ ಎಂದು –

ಶ್ರವಣಾದಿ ಚ ಕರ್ತವ್ಯಂ ನಾನ್ಯಥಾ ದರ್ಶನಂ ಕ್ವಚಿತ್ ।। ೨೦೩ ।।

ಶ್ರವಣಾದಿಗಳನ್ನೂ ಕೂಡ ಮಾಡತಕ್ಕದ್ದು. ಏಕೆಂದರೆ ಶ್ರವಣಾದಿಗಳಿಲ್ಲದೆ ಎಲ್ಲಿಯೂ ದರ್ಶನವಾಗಲಾರದು.

ಪೂರ್ವವಿಕಲ್ಪಾಧಿಕರಣಮ್

ಓಂ ಪೂರ್ವವಿಕಲ್ಪಃ ಪ್ರಕರಣಾತ್ಸ್ಯಾತ್ ಕ್ರಿಯಾಮಾನಸವತ್ ಓಂ

ಪ್ರಥಮ ಪ್ರಾಪ್ತನಾದ ಗುರುವನ್ನೇ ಎಂದಿಗೂ ಬಿಡದೆ ಇರತಕ್ಕುದೋ ಅಥವಾ ಆ ಗುರುವನ್ನು ತ್ಯಜಿಸಿ ಮತ್ತೊಬ್ಬನನ್ನೂ ಕೂಡ ಗುರುವಾಗಿ ಸ್ವೀಕರಿಸಬಹುದೋ ಎಂಬ ಶಂಕೆಯು ಬಂದರೆ, 'ಗುರುಮಂತ್ರಪರಿತ್ಯಾಗೀ ರೌರವಂ ನರಕಂ ವ್ರಜೇತ್' (ಗುರುಗಳನ್ನೂ ಅವರಿಂದ ಉಪದೇಶ ಪಡೆದ ಮಂತ್ರವನ್ನೂ ಬಿಟ್ಟವನು ರೌರವ ನರಕವನ್ನು ಹೊಂದುತ್ತಾನೆ) ಎಂದು ಗುರುಪರಿತ್ಯಾಗಕ್ಕೆ ದೋಷವು ಹೇಳಲ್ಪಟ್ಟಿರುವ ಪ್ರಯುಕ್ತ, ಪ್ರಥಮಪ್ರಾಪ್ತ ಗುರುವೇ ಆಗಬೇಕು ಎಂದು ಹೇಳಿದರೆ ಅದಕ್ಕೆ ವಿಕಲ್ಪವು ಹೇಳಲ್ಪಡುತ್ತದೆ. ಹೀನರೂ, ಸಮರೂ, ಉತ್ತಮರೂ ಆದ ಗುರುಗಳಲ್ಲಿ ಯಾರ ಪರಿತ್ಯಾಗದಿಂದ ದೋಷವು ಅಥವಾ ಮೇಲಿನ ಪ್ರಮಾಣ ವಾಕ್ಯವು ಯಾವ ಗುರುವನ್ನು ಕುರಿತು ಹೊರಟಿದೆ ಎಂದರೆ, ಅದನ್ನು ಸ್ಪಷ್ಟಪಡಿಸಲು 'ಗುಣಾಧಿಕಂ' ಇತ್ಯಾದಿ ವಚನದಿಂದ ವ್ಯಾಖ್ಯಾನ ಮಾಡುತ್ತಾರೆ –

ಗುಣಾಧಿಕಂ ಗುರುಂ ಪ್ರಾಪ್ಯ ತದ್ಧೀನಂ ನಾಪ್ನುಯಾತ್ ಕ್ವಚಿತ್ ।

ಗುಣಗಳಿಂದ ಉತ್ತಮನಾದ ಗುರುವು ಪ್ರಾಪ್ತವಾದ ಮೇಲೆ ಅವನಿಗಿಂತ ಗುಣದಲ್ಲಿ ಹೀನನಾದ ಗುರುವನ್ನು ಯಾವುದೇ ಪ್ರಯೋಜನಕ್ಕೂ ಹೊಂದಬಾರದು. ಉತ್ತಮನನ್ನು ಬಿಟ್ಟು ಹೀನನಾದ ಗುರುವನ್ನು ಗ್ರಹಿಸಿದರೆ ದೋಷವು ಎಂದು ಭಾವ.

ವಿಪರ್ಯಯಸ್ತು ಕರ್ತವ್ಯಃ ಸರ್ವಥಾ ಶುಭಮಿಚ್ಛತಾ ।। ೨೦೪।।

ಎಲ್ಲ ರೀತಿಯಿಂದಲೂ ಮಂಗಲವನ್ನು ಇಚ್ಛಿಸುವವನು ಅಧಮ ಗುರುವನ್ನು ಪರಿತ್ಯಜಿಸಿ ಉತ್ತಮ ಗುರುವನ್ನು ಸ್ವೀಕಾರ ಮಾಡುವುದು ಕರ್ತವ್ಯ. ಇಲ್ಲದಿದ್ದರೆ ಮೊದಲು ಪ್ರಾಪ್ತನಾದ ಅಲ್ಪಗುರುವಿನಿಂದ ಸಂಶಯ ವಿಪರ್ಯಯಗಳ ನಿವೃತ್ತಿಯು ಆಗದೇ ಹೋಗುವುದು.

ಹಾಗಾದರೆ ಪ್ರಥಮ ಪ್ರಾಪ್ತ ಗುರುವು ಉತ್ತಮನೇ ಆಗಿದ್ದರೂ ಅವನಿಂದ ಶಿಷ್ಯನಿಗೆ ಸರಿಯಾಗಿ ಉಪದೇಶವಾಗದೆ ಸಂಶಯ ವಿಪರ್ಯಯಗಳು ನಿವೃತ್ತವಾಗದಿದ್ದರೆ ಅವನನ್ನು ಬಿಟ್ಟು ಅಧಮಗುರುವಿನ ಸ್ವೀಕಾರವು ಕರ್ತವ್ಯವಲ್ಲವೇ ಎಂದರೆ, ಸತ್ಯವೇ. 'ಗುರುಮಂತ್ರ ಪರಿತ್ಯಾಗೇ' ಎಂಬ ವಚನದಿಂದ, ವಿಶೇಷಲಾಭಕ್ಕಾಗಿ ಮತ್ತೊಬ್ಬನನ್ನು ಹೊಂದಬೇಕು ಎನ್ನುವ ನ್ಯಾಯವನ್ನು ಅಧಮ ಗುರುವಿನ ವಿಷಯದಲ್ಲಿ ಬಿಡಬೇಕು. ಹಾಗಾದರೆ ಸೂತ್ರದಲ್ಲಿರುವ ವಿಕಲ್ಪಕ್ಕೆ ಏನು ವಿಷಯವು ಎಂದರೆ –

ಸಮೇ ವಿಕಲ್ಪ ಏವ ಸ್ಯಾತ್ಪೂರ್ವಾನುಜ್ಞಾ ಚ ಸರ್ವಥಾ ।

ತದುತ್ತಮಗುರುಪ್ರಾಪ್ತ್ಯೈ ಪೂರ್ವಾನುಜ್ಞಾ ನ ಮೃಗ್ಯತೇ ॥ ೨೦೫ ॥

ಪೂರ್ವಪ್ರಾಪ್ತನಾದ ಗುರುವಿಗೆ ಸಮನಾದ ಮತ್ತೊಬ್ಬನ ಗುರುವು ತಾನಾಗಿಯೇ ಲಭಿಸಿದಾಗ ಸ್ವೀಕಾರಕ್ಕೆ ವಿಕಲ್ಪವೇ ಬರುವುದು. ಅಂದರೆ ನಿಯಮವಿಲ್ಲ. ಆದರೆ ಸಮಾನಿಕನಾದ ಬೇರೆ ಗುರುವನ್ನು ಸ್ವೀಕಾರ ಮಾಡುವುದಕ್ಕೂ ಪೂರ್ವಗುರುವಿನ ಅನುಜ್ಞೆಯು ಸರ್ವಥಾ ಅವಶ್ಯಕವು. ಅನುಜ್ಞೆಯನ್ನು ಪಡೆಯದೆ ಸಮಾನಿಕನಾದ ಪೂರ್ವಗುರುವನ್ನು ಪರಿತ್ಯಾಗ ಮಾಡುವುದು ದೋಷಕ್ಕೆ ಕಾರಣವು. ಆದರೆ ಉತ್ತಮ ಗುರುಗಳ ಪ್ರಾಪ್ತಿಗೋಸ್ಕರ ಪೂರ್ವಗುರುವಿನ ಅನುಜ್ಞೆಯು ಅವಶ್ಯಕವಿಲ್ಲ.

ಗುರುಪ್ರಸಾದವನ್ನು ಸರ್ವಥಾ ಹೊಂದತಕ್ಕುದು ಎಂದು ಸೂತ್ರಕಾರರು ಹೇಳಿದರು. ಆಯಾಯ ವಿದ್ಯಾ ಹಾಗೂ ದೇವತೆಯ ಪ್ರಸಾದವು ಉಪಲಕ್ಷಣವು ಎನ್ನುವ ವಿವಕ್ಷೆಯಿಂದ ಗುರು, ವಿದ್ಯಾ ದೇವತೆಯ ಸ್ವರೂಪವನ್ನು ಹೇಳುತ್ತಾರೆ –

ಗುರುರ್ಬ್ರಹ್ಮಾಖಿಲಾನಾಂ ಚ ವಿದ್ಯಾ ಚೈವ ಸರಸ್ವತೀ ।

ದೇವತಾ ಭಗವಾನ್ವಿಷ್ಣುಃ ಸರ್ವೇಷಾಮವಿಶೇಷತಃ ॥ ೨೦೬ ॥

ತತ್ಪ್ರಸಾದೇನ ಮುಕ್ತಿಃಸ್ಯಾನ್ನಾನ್ಯಥಾ ತು ಕಥಂಚನ ।

ಎಲ್ಲರಿಗೂ ಕೂಡ ಚತುರ್ಮುಖ ಬ್ರಹ್ಮನೇ ಗುರುವು. ವಿದ್ಯಾಭಿಮಾನಿಯೂ ಸರಸ್ವತಿಯೇ. ಅವರಿಗೆ ಇವರಿಗೆ ಎನ್ನದೆ ಅವಿಶೇಷವಾಗಿ ಎಲ್ಲರಿಗೂ ಭಗವಾನ್ ವಿಷ್ಣುವೇ ದೇವತೆ. ಗುರು, ವಿದ್ಯಾ ದೇವತೆ ಇವರೆಲ್ಲರ ಪ್ರಸಾದದಿಂದಲೇ ಜ್ಞಾನ ಹಾಗೂ ಮುಕ್ತಿಯು. ಬೇರೆ ಯಾವ ರೀತಿಯಿಂದಲೂ ಆಗಲಾರದು.

ಸಾಧಾರಣ ಗುರುಗಳನ್ನು ಹೇಳಿ ಅಸಾಧಾರಣ ಗುರುಗಳನ್ನು ಹೇಳುತ್ತಾರೆ –

ಸ್ವೋತ್ತಮಾಸ್ತು ಕ್ರಮೇಣೈವ ಸರ್ವೇಷಾಂ ಗುರವಃ ಸ್ಮೃತಾಃ ॥ ೨೦೭ ॥

ತಮ್ಮಿಂದ ಉತ್ತಮರಾದವರೆಲ್ಲರೂ ಕ್ರಮದಿಂದಲೇ ಎಲ್ಲರಿಗೂ ಗುರುಗಳು ಎಂದು ಸ್ಮೃತರಾಗಿದ್ದಾರೆ. ಕ್ರಮೇಣ ಎಂದರೆ ತನಗಿಂತ ಸಾಕ್ಷಾತ್ ಉತ್ತಮನು ಗುರುವು, ಆ ಗುರುವಿಗಿಂತ ಉತ್ತಮನಾದವನು ಗುರುತರನು ಹೀಗೆ ತಿಳಿಯಬೇಕು. ಹೀಗೆ ವಿದ್ಯಾವಿಶೇಷವಿದ್ದರೆ ಆಯಾ ದೇವತಾ ವಿಶೇಷವನ್ನೂ ತಿಳಿಯಬೇಕು.

ಎಲ್ಲರಿಗೂ ಬ್ರಹ್ಮನಿಂದ ವಿದ್ಯೋಪದೇಶವಿರುವುದಿಲ್ಲ. ಆದಕಾರಣ ಎಲ್ಲರಿಗೂ ಬ್ರಹ್ಮನೇ ಗುರು ಎನ್ನುವುದು ಹೇಗೆ ಎಂದರೆ –

ಉಪದೇಶೋ ಬ್ರಹ್ಮಣಸ್ತು ಸರ್ವೇಷಾಮೇವ ಮುಕ್ತಯೇ ।

ಎಲ್ಲರಿಗೂ ಮುಕ್ತಿಗೋಸ್ಕರ ಬ್ರಹ್ಮನಿಂದ ಉಪದೇಶವು ಆಗಲೇಬೇಕು. ಈ ಜನ್ಮದಲ್ಲಾಗಲೀ, ಜನ್ಮಾಂತರದಲ್ಲಾಗಲೀ ಬ್ರಹ್ಮನ ಉಪದೇಶವಿಲ್ಲದೆ ಯಾರಿಗೂ ಮುಕ್ತಿಯಾಗಲಾರದು. ಆದಕಾರಣ ಬ್ರಹ್ಮನಿಗೆ ಸರ್ವಗುರುತ್ವವು ಯುಕ್ತವೇ ಆಗಿದೆ.

ಪರೇಣಾಧಿಕರಣಮ್

ಓಂ ಪರೇಣ ಚ ಶಬ್ದಸ್ಯ ತಾದ್ವಿಧ್ಯಂ ಭೂಯಸ್ತ್ವಾತ್ತ್ವನುಬಂಧಃ ಓಂ

'ಭಕ್ತಿರೇವ ಏನಂ ನಯತಿ' ಭಕ್ತಿಯೇ ಇವನನ್ನು ಮೋಕ್ಷಕ್ಕೆ ಒಯ್ಯುತ್ತದೆ, ಇತ್ಯಾದಿ ಶ್ರುತಿಗಳಿಂದ ಭಕ್ತಿಯೇ ಮುಕ್ತಿಗೆ ಸಾಧನ, ಪರಮಾತ್ಮನಲ್ಲ. ಏಕಲವ್ಯನಿಗೆ ಗುರಭಕ್ತಿಯೇ ವಿದ್ಯಾಪ್ರಾಪ್ತಿಗೆ ಸಾಧನವಾಯಿತು, ಗುರುವಲ್ಲವೆಂದರೆ – 'ಪ್ರಧಾನ ಸಾಧನತ್ವಾದ್ಭಕ್ತಿಃ ಕರಣತ್ವೇನೋಚ್ಯತೇ' ಎಂದು ಭಾಷ್ಯವು. ಅದರಲ್ಲಿ ಭಗವಂತನನ್ನು ಅಪೇಕ್ಷಿಸಿಯೇ ಭಕ್ತಿಗೆ ಪ್ರಾಧಾನ್ಯವು ಎಂದು ಭಾಸವಾಗುವುದು. ಅದನ್ನು ನಿವಾರಿಸುವುದಕ್ಕಾಗಿ ಹೇಳುತ್ತಾರೆ –

ಸಾಧನೇಭ್ಯೋಽಧಿಕಾ ಭಕ್ತಿರ್ನೈವಾನ್ಯತ್ತಾದೃಶಂ ಕ್ವಚಿತ್ ॥ ೨೦೮ ॥

ಭಕ್ತಿಶ್ಚೈವ ಹರಾವೇವ ಮುಖ್ಯಾನ್ಯತ್ರ ಯಥಾಕ್ರಮಮ್ ।

ಸ್ವಾಧಿಕತ್ವೇನ ಸರ್ವತ್ರ ಸ್ವೋತ್ತಮೇಷು ಕ್ರಮೇಣ ಚ ॥ ೨೦೯ ॥

ಮೋಕ್ಷಸಾಧನವಾದ ಜ್ಞಾನಾದಿಗಳಿಗಿಂತಲೂ ಭಕ್ತಿಯು ಶ್ರೇಷ್ಠವು. ಎಲ್ಲಿಯೂ ಮುಕ್ತಿಯಲ್ಲಾಗಲೀ ಭಕ್ತಿಗೆ ಸಮನಾದುದು ಬೇರೆ ಯಾವುದೂ ಇಲ್ಲ. ಶ್ರೀಹರಿಯಲ್ಲಿಯೇ ಸರ್ವಾಧಿಕವಾದ ಭಕ್ತಿಯನ್ನು ಮಾಡಬೇಕು. ಸ್ವೋತ್ತಮರಲ್ಲಿಯೂ ಯಥಾಕ್ರಮವಾಗಿ ತಾರತಮ್ಯಾನುಸಾರವಾಗಿಯೇ ಮಾಡತಕ್ಕದ್ದು ಸಮನಾಗಿ ಅಲ್ಲ.

ಅನುವರ್ತತೇ ಚ ಸಾ ಭಕ್ತಿರ್ಮುಕ್ತಾವಾನಂದರೂಪಿಣೀ ।

ತತ್ಪೂರ್ವಿಕೋಪಾಸನೈವಂ ಕರ್ತವ್ಯಾ ಮುಕ್ತಯೇ ಗುಣೈಃ ॥ ೨೧೦ ॥

ಆ ಭಕ್ತಿಯು ಮುಕ್ತಿಯಲ್ಲಿಯೂ ಆನಂದಸ್ವರೂಪಿಣಿಯಾಗಿ ಅನುವರ್ತಿಸುತ್ತದೆ. ಹೀಗೆ ಯೋಗ್ಯತಾನುಸಾರ ಭಕ್ತಿಪೂರ್ವಕವಾದ ಉಪಾಸನೆಯನ್ನು ಮೋಕ್ಷಕ್ಕಾಗಿ ಗುಣಪೂರ್ಣನಾದ ಶ್ರೀಹರಿಯಲ್ಲಿ ಮಾಡಬೇಕಾದ್ದು ಅವಶ್ಯಕವು.

॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ

ಶ್ರೀಮದನುವ್ಯಾಖ್ಯಾನೇ ತೃತೀಯಾಧ್ಯಾಯಸ್ಯ ತೃತೀಯಃ ಪಾದಃ ॥

॥ ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ಮೂರನೆಯ ಅಧ್ಯಾಯ ಮೂರನೆಯ ಪಾದದ

ಶ್ರೀಮನ್ನ್ಯಾಯಸುಧಾನುಸಾರಿ ವಿವರಣೆ ಸಹಿತ ಕನ್ನಡಾನುವಾದವು ಮುಕ್ತಾಯವಾಯಿತು ॥

ಮೂರನೆಯ ಅಧ್ಯಾಯ ನಾಲ್ಕನೆಯ ಪಾದ

ಜ್ಞಾನಸಾಮರ್ಥ್ಯವು ಈ ಪಾದದಲ್ಲಿ ಹೇಳಲ್ಪಡುತ್ತದೆ ಎಂದು ಭಾಷ್ಯದಲ್ಲಿ ಹೇಳಿರುತ್ತಾರೆ. ಹಾಗಾದರೆ ಜ್ಞಾನಕ್ಕೆ ಸ್ವತಂತ್ರವಾಗಿ ಮೋಕ್ಷಸಾಧನತ್ವ ಸಾಮರ್ಥ್ಯವು ಇರುವುದೆಂದು ಮೂರನೆಯ ಪಾದದಲ್ಲಿ 'ವಿದ್ಯೈವ ತು' ಎನ್ನುವಲ್ಲಿ ಉಕ್ತವಾಗಿದೆ. ಇನ್ನು ಪ್ರತಿಪಾದಿಸುವುದು ಏನು ಉಳಿದಿದೆ ? ಮತ್ತೆ ಯಾವುದಕ್ಕಾಗಿ ಈ ಪಾದದ ಆರಂಭವು ? ಎಂದರೆ – ಹೌದು, ನೀವು ಹೇಳುವಂತೆ ಜ್ಞಾನವು ಸ್ವತಂತ್ರವಾಗಿ ಮೋಕ್ಷಸಾಧನವು ಎಂದು ಹಿಂದೆಯೇ ಸಿದ್ಧವಾಗಿದೆ. ಬೇರೆ ವಿಷಯದಲ್ಲಿಯೂ ಸಾಮರ್ಥ್ಯವು ಇಲ್ಲಿ ಸಮರ್ಥಿಸಲ್ಪಡುತ್ತದೆ. ಸಾಧಕನು ಮೋಕ್ಷಕ್ಕೆಂದೇ ಜ್ಞಾನವನ್ನು ಸಾಧಿಸಿದರೂ, ಅದಕ್ಕೆ ಸ್ವಭಾವತಃ ಇತರ ಪುರುಷಾರ್ಥಗಳನ್ನು ಹೊಂದಿಸುವ ಸಾಮರ್ಥ್ಯವೂ ಇರುವುದು. ಸುಡಲಿಕ್ಕಾಗಿ ಹತ್ತಿಸಿದ ಬೆಂಕಿಯು ಸ್ವಭಾವದಿಂದಲೇ ಹೇಗೆ ಬೆಳಕನ್ನೂ ಕೊಡುವುದೋ ಹಾಗೆ.

ಪುರುಷಾರ್ಥಾಧಿಕರಣಮ್

ಓಂ ಪುರುಷಾರ್ಥೋಽತಃ ಶಬ್ದಾದಿತಿ ಬಾದರಾಯಣಃ ಓಂ

ಕರ್ಮದ ಸಹಾಯದಿಂದ ಜ್ಞಾನವು ಮೋಕ್ಷಕ್ಕೆ ಸಾಧನವೋ ಅಥವಾ ಸ್ವತಂತ್ರವಾಗಿಯೋ ಎಂದು ಸಂಶಯ ಬಂದರೆ, ಸ್ವತಂತ್ರವಾಗಿಯೇ ಜ್ಞಾನವು ಮೋಕ್ಷಕ್ಕೆ ಸಾಧನವೆಂದು ಈ ಅಧಿಕರಣದಲ್ಲಿ ಹೇಳಲ್ಪಡುತ್ತದೆ ಎಂದು ಕೆಲವರು ಹೇಳುತ್ತಾರೆ. ಅದು ಸರಿಯಲ್ಲ. ಏಕೆಂದರೆ ಈ ಅರ್ಥವು 'ವಿದ್ಯೈವ ತು ನಿರ್ಧಾರಣಾತ್' ಎನ್ನುವುದರಿಂದ ಸಮರ್ಥಿಸಲ್ಪಟ್ಟಿದೆ. ಹಾಗಾದರೆ ಜ್ಞಾನಿಗಳಿಗೆ ಮೋಕ್ಷ ಬಿಟ್ಟು ಬೇರೆ ಪುರುಷಾರ್ಥದಲ್ಲಿ ಆಸಕ್ತಿಯಿರುವುದಿಲ್ಲ. ಆದಕಾರಣ ಜ್ಞಾನವು ಮೋಕ್ಷಕ್ಕೇನೆ ಸಾಧಕವು ಎಂದು ಪ್ರಾಪ್ತವಾದರೆ, ಸ್ಪಷ್ಟನೆಗಾಗಿ ಈ ಅಧಿಕರಣವು ಪ್ರವೃತ್ತವಾಗಿದೆ ಎಂಬ ಆಶಯದಿಂದ 'ಪುರಷಾರ್ಥೋತಃ' ಎನ್ನುವುದನ್ನು ವ್ಯಾಖ್ಯಾನಿಸುತ್ತಾರೆ –

ಏವಮುತ್ಪನ್ನನಿರ್ದೋಷಭಗವದ್ದರ್ಶನಾತ್ಸದಾ ।

ಅಪೇಕ್ಷಿತಫಲಪ್ರಾಪ್ತಿರಾರಬ್ಧಸ್ಯಾನತಿಕ್ರಮಾತ್ ॥ ೧ ॥

ಹಿಂದಿನ ಪಾದದಲ್ಲಿ ಉಪಾಸನೆಯೇ ಮೋಕ್ಷಸಾಧನವಾಗಿ ಪ್ರಧಾನವಾಗಿ ಹೇಳಲ್ಪಟ್ಟಿದೆ. ಹಿಂದೆ ಹೇಳಿದ ಪ್ರಕಾರ ಉಪಾಸನೆಯಿಂದ ಹುಟ್ಟಿದ ನಿರ್ದೋಷವಾದ ಭಗವದ್ದರ್ಶನದಿಂದ, ಜ್ಞಾನೋದಯ ಕ್ಷಣದಿಂದ ಆರಂಭಿಸಿ ಅಪೇಕ್ಷಿತ ಫಲದ ಪ್ರಾಪ್ತಿಯು ಆಗುವುದು. ಪ್ರಾರಬ್ಧಕರ್ಮದ ಅತಿಕ್ರಮ ಮಾಡದೇ ಅಪೇಕ್ಷಿತ ಫಲದ ಪ್ರಾಪ್ತಿಯಾಗುವುದು. ಪ್ರಾರಬ್ಧಕರ್ಮದ ಪ್ರತಿಬಂಧವಿರುವ ತನಕ ಜ್ಞಾನವು

ಮೋಕ್ಷಕ್ಕೆ ಕಾರಣವಾಗದಿದ್ದರೂ, ಇತರ ಇಷ್ಟಾರ್ಥವನ್ನು ನೀಡುವುದು ಎಂದರ್ಥ.

ಜ್ಞಾನಕ್ಕೆ ಪುರುಷಾರ್ಥ ಕಾರಣತ್ವದಲ್ಲಿಯೂ ವಿಶೇಷವಿದೆ ಎನ್ನುತ್ತಾರೆ –

ದೇವರ್ಷಿಮಾನುಷಾದೀನಾಂ ತತ್ತಜ್ಜಾತ್ಯನುಸಾರತಃ ।

ದೇವತೆಗಳು, ಋಷಿಗಳು, ಮನುಷ್ಯರೇ ಮೊದಲಾದವರಿಗೆ ಅವರವರ ಯೋಗ್ಯತಾನುಸಾರವಾಗಿ ಅಪೇಕ್ಷಿತ ಫಲಪ್ರಾಪ್ತಿಯು ಆಗುವುದು.

ಜೈಮಿನ್ಯುಕ್ತಂ ಮಾನುಷಾಣಾಂ ತದ್ವಿಶೇಷಾಶ್ಚ ಕೇಚನ ॥ ೨ ॥

ಜ್ಞಾನಶೇಷವಾದ ಕರ್ಮಕ್ಕೇ ಸ್ವರ್ಗಾದಿ ಸಾಧನತ್ವವು ಎಂದು ಜೈಮಿನಿಗಳು ಹೇಳಿರುವುದು ಮಾನುಷ ಜ್ಞಾನಿ ವಿಷಯಕವಾದುದು. ಹೀಗೆ ಜೈಮಿನಿಯು ಹೇಳಿದರೆ, ಮತ್ತೆ ಕೆಲವರು ಸ್ವರ್ಗಾದಿಗಳು ಕರ್ಮದಿಂದಲೇ, ಅನ್ಯಥಾ ಇಲ್ಲವೆಂದು ಹೇಳುತ್ತಾರೆ. ಮನುಷ್ಯರಲ್ಲಿಯೂ ಉತ್ತಮ ಮಧ್ಯಮ ಅಧಮ ಎಂಬ ಭೇದವಿದೆ. ಜೈಮಿನಿಗಳು ಹೇಳಿದ್ದು ಉತ್ತಮ ಮನುಷ್ಯರ ವಿಷಯಕವು ಎಂದೂ ಹೇಳುತ್ತಾರೆ.

ಹಾಗಾದರೆ ಸೂತ್ರಕಾರರ ಮತವೇನು ಎಂದರೆ –

ಸಾಮಾನ್ಯಂ ಭಗವತ್ಪ್ರೋಕ್ತಂ ದೇವಾದೀನಾಂ ವಿಶೇಷತಃ ।
ಬಲವದ್ವಿರೋಧಿಸದ್ಭಾವೇ ಜೈಮಿನ್ಯಾದ್ಯುಕ್ತಿರಿಷ್ಯತೇ ॥ ೩ ॥

ಜ್ಞಾನವು ಸಕಲ ಪುರುಷಾರ್ಥಗಳಿಗೆ ಸಾಧನವೆಂದು ಸಾಮಾನ್ಯಾಕಾರವಾಗಿಯೇ ಸೂತ್ರಕಾರರಾದ ಭಗವಾನ್ ವೇದವ್ಯಾಸರಿಂದ ಹೇಳಲ್ಪಟ್ಟಿದೆ. ಸಾಮಾನ್ಯದಲ್ಲಿಯೂ ವಿಶೇಷವಿದೆ. ಅದೇನೆಂದರೆ ದೇವತೆಗಳ ವಿಷಯದಲ್ಲಿ ವೇದವ್ಯಾಸರ ಮತವು ಅಪವಾದವಿಲ್ಲದೇ ಇರುವುದು. ಪ್ರಬಲವಾದ ಪ್ರತಿಬಂಧಕವಿದ್ದರೆ ಜೈಮಿನ್ಯಾದಿಗಳ ಮತವು ಗ್ರಾಹ್ಯವು. ಅಂದರೆ ಸಾಮಾನ್ಯ ವಿಶೇಷ ಎಂಬ ಭೇದವಿರುವ ಪ್ರಯುಕ್ತ ವೇದವ್ಯಾಸರ ಮತಕ್ಕೂ ಜೈಮಿನಿಯ ಮತಕ್ಕೂ ವಿರೋಧವಿಲ್ಲ.

ಸ್ತುತ್ಯಧಿಕರಣಮ್

(ಕಾಮಚಾರಾಧಿಕರಣಮ್)

ಓಂ ಸ್ತುತಯೇಽನುಮತಿರ್ವಾ ಓಂ

ಭಾಷ್ಯದಲ್ಲಿಯೇ ಈ ಅಧಿಕರಣಾರ್ಥವು ಸ್ಪಷ್ಟವಾಗಿರುವ ಕಾರಣ ಇಲ್ಲಿ ಪುನಃ ಅದನ್ನೇ ಹೇಳುವುದರಲ್ಲಿ ಸಂಗತಿಯೇನು ಎಂದರೆ, ಭಾಷ್ಯದಲ್ಲಿನ ಅರ್ಥವನ್ನು ಅನುವಾದ ಮಾಡುತ್ತ ಸುಧಾಕಾರರು ಅಲ್ಲಿ ಬರುವ ಆಶಂಕೆಯನ್ನು ತೋರಿಸುತ್ತಾರೆ. ಹೇಗೆಂದರೆ – ಈ ಅಧಿಕರಣದಲ್ಲಿ ಜ್ಞಾನಿಗೆ ಸತ್ ಮತ್ತು ಅಸತ್ ವೃತ್ತಿಗಳಿಂದ ವಿಶೇಷತೆಯು ಸಮರ್ಥಿಸಲ್ಪಡುತ್ತದೆ. ಹಾಗಾದರೆ ಅಜ್ಞಾನಿಸಾಮಾನ್ಯ ಸಮರ್ಥನೆಯ

ಅರ್ಥವುಳ್ಳ ಈ ಅಧಿಕರಣಕ್ಕೆ ಜ್ಞಾನಸಾಮರ್ಥ್ಯ ಪ್ರತಿಪಾದಿಸುವ ಅರ್ಥದಲ್ಲಿ ಅಂತರ್ಭಾವವು ಕೂಡುವುದಿಲ್ಲ ಎಂಬ ಶಂಕೆ ಬರುವುದು. ಆ ಶಂಕಾ ನಿವಾರಣೆಗಾಗಿ 'ವಿಕರ್ಮ' ಇತ್ಯಾದಿ ವಚನದಿಂದ ಅಧಿಕರಣದ ತಾತ್ಪರ್ಯವನ್ನು ಹೇಳುತ್ತಾರೆ –

ವಿಕರ್ಮಲೇಪೋ ನೈವಾಸ್ತಿ ಸಮ್ಯಗ್ದೃಷ್ಟಿಮತಾಂ ಕ್ವಚಿತ್ ।

ಇಲ್ಲಿ ಜ್ಞಾನಿಗಳಿಗೆ ಸದಸತ್ ಪ್ರವೃತ್ತಿಗಳಲ್ಲಿ ವಿಶೇಷವಿದೆ ಎಂದು ಶಬ್ದತಃ ಪ್ರತಿಪಾದನೆ ಮಾಡಲ್ಪಡುವುದು. ಹಾಗಿದ್ದರೂ ಅಪರೋಕ್ಷಜ್ಞಾನಿಗಳಿಗೆ ಎಲ್ಲಿಯೂ ಮೋಕ್ಷಕ್ಕೆ ಪ್ರತಿಬಂಧಕವಾದ ವಿಕರ್ಮ ಲೇಪವೇ ಇರುವುದಿಲ್ಲ. ಆದಕಾರಣ ಈ ಅಧಿಕರಣದಲ್ಲಿ ಜ್ಞಾನಸಾಮರ್ಥ್ಯ ಪ್ರತಿಪಾದಕವಾದ ಅರ್ಥದಲ್ಲಿ ಅಂತರ್ಭಾವವು ಯುಕ್ತವೇ ಆಗಿದೆ. ಅಜ್ಞಾನಿಗಳಿಗೆ ವಿಕರ್ಮ ಲೇಪವು ಇದ್ದೇ ಇರುವುದೆಂದು ಭಾವ.

ಹಾಗಾದರೆ ಎಲ್ಲ ಜ್ಞಾನಿಗಳಿಗೂ ವಿಕರ್ಮವೂ, ಗುಣಹಾನಿಯೂ ಉಂಟೋ ಎಂದರೆ –

ಗುಣಹಾನಿಶ್ಚ ನೈವಾಸ್ತಿ ಬ್ರಹ್ಮಣಸ್ತ್ವವಿಕರ್ಮತಃ ॥ ೪ ॥

ದೇವಾನಾಮಪಿ ನ ಪ್ರಾಯಃ ಕ್ಲೃಪ್ತಸ್ಯ ತು ಕಥಂಚನ ।

ಚತುರ್ಮುಖ ಬ್ರಹ್ಮನಿಗಾದರೂ ವಿಕರ್ಮವು ಸರ್ವಥಾ ಇರುವುದಿಲ್ಲವಾದ ಪ್ರಯುಕ್ತ ತನ್ನಿಮಿತ್ತಕ ಆನಂದಾದಿ ಗುಣಗಳ ಹಾನಿಯೂ ಇರುವುದೇ ಇಲ್ಲ. 'ನ ಭಾರತೀ ಮೇಂऽಗ ಮೃಷೋಪಲಕ್ಷ್ಯತೇ ನ ಕರ್ಹಿಚಿನ್ಮೇ ಮನಸೋ ಮೃಷಾ ಗತಿಃ । ನ ಮೇ ಹೃಷೀಕಾಣಿ ಪತಂತ್ಯಸತ್ಪಥೇ ಯನ್ಮೇ ಹೃದೌತ್ಕಂಠ್ಯವತಾ ಧೃತೌ ಹರಿಃ' ಇತ್ಯಾದಿ ವಚನವು ಇದಕ್ಕೆ ಪ್ರಮಾಣ. ಇತರ ದೇವತೆಗಳಿಗೂ ಕೂಡ ಪ್ರಾಯಶಃ ವಿಕರ್ಮಗುಣಹಾನಿಗಳು ಇರುವುದಿಲ್ಲ. ಅಂದರೆ ಅವರಿಗೆ ಸ್ವಲ್ಪ ವಿಕರ್ಮವೂ, ತನ್ನಿಮಿತ್ತಕ ಗುಣಹಾನಿಯೂ ಇರುವುದು ಎಂದು ಭಾವ. ಈ ದೇವತೆಗೆ ಇಷ್ಟು ಎಂದು ಯೋಗ್ಯತಾನುಸಾರ ನಿಯಮಿತವಾಗಿರುವ ಗುಣವೇ ಕ್ಲೃಪ್ತಗುಣವು. ಅದಕ್ಕೆ ಯಾವುದೇ ವಿಕರ್ಮದಿಂದಲೂ ಹಾನಿಯಿಲ್ಲ.

ಹಾಗಾದರೆ ದೇವತೆಗಳಿಗೆ ವಿಕರ್ಮದಿಂದ ಸ್ವಲ್ಪಮಟ್ಟಿಗೆ ಗುಣಹಾನಿಯುಂಟು ಎನ್ನುವುದಕ್ಕೆ ಏನು ಅರ್ಥ ಎಂದರೆ –

ಪ್ರಾಪ್ತಹ್ರಾಸೋ ಭವೇತ್ ಕ್ವಾಪಿ ಮಹತಾ ವಿಕರ್ಮಣಾ ॥ ೫ ॥

ತಥಾಪಿ ತತ್ಕ್ಲೃಪ್ತಮೇವ ತಸ್ಮಾನ್ನ ನಿಯಮೋಜ್ಝಿತಃ ।

ಈಶ್ವರೇಚ್ಛೆಯಿಂದ ಹೇಗೋ ಪ್ರಸಕ್ತವಾದ ಮಹಾ ವಿಕರ್ಮದ ನಿಮಿತ್ತದಿಂದ ಪ್ರಾಪ್ತವಾದ ಗುಣಕ್ಕೇನೆ ಹ್ರಾಸವಾಗುವುದು. ಅಂದರೆ ಸ್ವಯೋಗ್ಯವಾದ ಗುಣಗಳ ಪೂರ್ತಿಗಾಗಿ ಅವಶ್ಯವಾದುದಕ್ಕಿಂತ ಹೆಚ್ಚಿನ ಸಾಧನಾನುಷ್ಠಾನದಿಂದ ಪ್ರಸಕ್ತವಾದ ಹೆಚ್ಚಿನ ಗುಣಗಳಿಗೆ ಮಾತ್ರ ಹ್ರಾಸವು. ಆದ್ದರಿಂದ ಕ್ಲೃಪ್ತಗುಣಗಳಿಗೆ ಹಾನಿಯಿಲ್ಲವೆಂಬ

ನಿಯಮಕ್ಕೆ ಭಂಗವಿಲ್ಲ. ಕ್ಲೃಪ್ತಹಾನಿಯ ಅಭಾವವಿರುವುದರಿಂದಲೂ, ಯೋಗ್ಯತೆಗೆ ಮೀರಿದ ಅನುಷ್ಠಾನದಿಂದ ವಿಕರ್ಮವು ಬಂದೇ ಬರುವುದೆಂಬ ನಿಯಮದಿಂದಲೂ, ಶ್ರೌತ ತಾರತಮ್ಯ ನಿಯಮಕ್ಕೆ ಭಂಗವಿಲ್ಲ ಎಂದರ್ಥ.

ಮೇಲೆ ಹೇಳಿದ ಅರ್ಥವನ್ನು ಉದಾಹರಣೆ ಮೂಲಕ ಸ್ಪಷ್ಟಪಡಿಸುತ್ತಾರೆ –

ಚಂದ್ರಸುಗ್ರೀವಯೋಶ್ಚೈವ ಸ್ವೋಚ್ಚದಾರಪರಿಗ್ರಹಾತ್ ॥ ೬ ॥

ಪ್ರಾಪ್ತಹಾನಿರಭೂನ್ನೈವ ಕ್ಲೃಪ್ತಹಾನಿಃ ಕಥಂಚನ ॥

ಚಂದ್ರ ಸುಗ್ರೀವರಿಗೆ ಸ್ವೋತ್ತಮರ ಹೆಂಡತಿಯರನ್ನು ಸ್ವೀಕರಿಸಿದ್ದರಿಂದ ಪ್ರಾಪ್ತಕ್ಕೆ ಹಾನಿಯೇ ಆಯಿತು. ಯಾವ ವಿಧದಿಂದಲೂ ಕ್ಲೃಪ್ತ ಹಾನಿಯು ಆಗಲೇ ಇಲ್ಲ.

ದೇವತೆಗಳಿಂದ ಇತರರಿಗೆ ಹೇಗೆ ಎಂದರೆ –

ಹ್ರಾಸೋಪಿ ಮಾನುಷಾದೀನಾಮಾನಂದಸ್ಯ ವಿಕರ್ಮಣಾ ॥ ೭ ॥

ಭವೇನ್ಮುಕ್ತೌ ವಿಶೇಷೇಣ ಸ್ವೋಚ್ಚಾನಾಮಪರಾಧತಃ ।

ಮನುಷ್ಯರೇ ಮೊದಲಾದವರಿಗೆ ವಿಕರ್ಮದಿಂದ ಮೋಕ್ಷದಲ್ಲಿ ಕ್ಲೃಪ್ತವಾದ ಆನಂದಕ್ಕೂ ಹ್ರಾಸವಾಗುವುದು. ಹ್ರಾಸ ಎಂದರೆ ಅನಭಿವ್ಯಕ್ತಿ. ಅದೂ ಕೂಡ ಈಶ್ವರನ ಇಚ್ಛಾಧೀನ. ಅದರಲ್ಲೂ ಸ್ವೋತ್ತಮರಿಗೆ ಸಂಬಂಧಿಸಿದ ಅಪರಾಧದಿಂದ ವಿಶೇಷವಾಗಿ ಅಂದರೆ ಅಧಿಕವಾಗಿ ಹ್ರಾಸವಾಗುವುದು.

ಹಾಗಾದರೆ ಈ ಅಧಿಕರಣದಲ್ಲಿ 'ಕಾಮಕಾರೇಣ ಚೈಕೇ' ಎನ್ನುವ ಸೂತ್ರದಿಂದ ಅಪರೋಕ್ಷಜ್ಞಾನಾನಂತರ ಮಾಡಿದ ವಿಕರ್ಮದಿಂದ ಜ್ಞಾನಿಗೆ ಕರ್ಮಲೇಪವು ಇಲ್ಲವೆಂದು ಹೇಳಲ್ಪಡುತ್ತದೆ. ಹಾಗೆಯೇ 'ಉಪಮರ್ದಂ ಚ' ಎನ್ನುವ ಸೂತ್ರದಿಂದ ಜ್ಞಾನಪ್ರಾಪ್ತವಾಗುವ ಮುಂಚಿನ ಕರ್ಮಗಳಿಗೆ ಜ್ಞಾನದಿಂದ ವಿನಾಶವು ಎಂದು ಹೇಳಲ್ಪಡುತ್ತದೆ. ಇವೆರಡೂ ಕೂಡ ನಾಲ್ಕನೆಯ ಅಧ್ಯಾಯದಲ್ಲಿ 'ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ' ಎನ್ನುವ ಸೂತ್ರದಿಂದ ಹೇಳಲ್ಪಡುತ್ತದೆ. ಆದಕಾರಣ ಪುನರುಕ್ತಿ ದೋಷವು ಬರುವುದಿಲ್ಲವೇ ಎಂದರೆ, 'ಕಾಮಕಾರೇಣ ಚೈಕೇ' ಎನ್ನುವುದಕ್ಕೆ ಪುನರುಕ್ತಿದೋಷವನ್ನು ಪರಿಹರಿಸುತ್ತಾರೆ –

ಜ್ಞಾನೋತ್ತರಸ್ಯ ಪಾಪಸ್ಯ ಚತುರ್ಥೇಽಲೇಪ ಉಚ್ಯತೇ ॥ ೮ ॥

ಅಶುಚಿತ್ವಾದಿಕಂ ಚಾಸ್ಯ ನ ಭವೇದಿತಿ ತತ್ಫಲಮ್ ।

ಅತ್ರ ಜ್ಞಾನಫಲಸ್ಯೈವ ಮುಕ್ತೇರ್ನಿಯತತೋಚ್ಯತೇ ॥ ೯ ॥

ಜ್ಞಾನೋತ್ತರ ಕಾಲದಲ್ಲಿ ಮಾಡಿದ ಪಾಪಕ್ಕೆ ಲೇಪವಿಲ್ಲ, ಅಂದರೆ ಪಾಪದ ಫಲವಾದ ನರಕಾದಿಗಳ ಪ್ರಾಪ್ತಿಯಿಲ್ಲವೆಂದು ನಾಲ್ಕನೇ ಅಧ್ಯಾಯದಲ್ಲಿ ಹೇಳಿದೆ.

ಜ್ಞಾನಿಗೆ ಜ್ಞಾನೋತ್ತರ ಪಾಪದ ಫಲವಾದ ಅಶುಚಿತ್ವ, ಅಸಂಭಾಷ್ಯತ್ವ ಇತ್ಯಾದಿಗಳೂ ಆಗುವುದಿಲ್ಲವೆಂದು 'ಉತ್ತರಾಘಸ್ಯಾಶ್ಲೇಷವಿನಾಶಃ' ಎನ್ನುವುದರಿಂದ ಹೇಳಲ್ಪಡುತ್ತದೆ. ಈ ಮೂರನೆಯ ಅಧ್ಯಾಯದಲ್ಲಿ 'ಕಾಮಕಾರೇಣ ಚೈಕೇ' ಎನ್ನುವುದರಿಂದ ಜ್ಞಾನದ ಫಲವಾದ ಮೋಕ್ಷಕ್ಕೆ ನಿಯತತ್ವವು ಹೇಳಲ್ಪಡುತ್ತದೆ. ಹೀಗೆ ಅರ್ಥಬೇಧವಿರುವ ಪ್ರಯುಕ್ತ ಪುನರುಕ್ತಿ ದೋಷವಿಲ್ಲ.

ಎರಡನೆಯ ಪುನರುಕ್ತಿಯನ್ನು ಪರಿಹರಿಸುವುದಕ್ಕೆ 'ಉಪಮರ್ದ೦ ಚ' ಎನ್ನುವ ಸೂತ್ರದರಿಂದ ಪ್ರತಿಪಾದ್ಯವಾದ ಅರ್ಥವನ್ನು ಹೇಳುತ್ತಾರೆ –

ಪ್ರಾರಬ್ಧಕರ್ಮಜಸ್ಯೈವ ವಿಷಭಕ್ಷಾನ್ಮೃತೇರಿವ ।

ಪ್ರಾಪ್ತಸ್ಯಾಪ್ಯನಿವರ್ತ್ಯಸ್ಯ ಕಿಂಚಿದ್ಭುಕ್ತಸ್ಯ ಸಂವಿದಾ ॥ ೧೦ ॥

ಉಪಮರ್ದ ಇಹ ಪ್ರೋಕ್ತಃ ।

ನಾಲ್ಕನೆಯ ಅಧ್ಯಾಯದಲ್ಲಿ 'ಪೂರ್ವಾಘಸ್ಯ ವಿನಾಶಃ' ಎನ್ನುವುದರಿಂದ ಜ್ಞಾನ ಪೂರ್ವ ಅಪ್ರಾರಬ್ಧರೂಪ ಪಾಪಕ್ಕೆ ಸ್ವರೂಪತಃ ವಿನಾಶವು ಹೇಳಲ್ಪಡುತ್ತದೆ. ಇಲ್ಲಿ 'ಉಪಮರ್ದ೦ ಚ' ಎನ್ನುವ ಸೂತ್ರದಿಂದ ಪ್ರಾರಬ್ಧಕರ್ಮದಿಂದ ಹುಟ್ಟಿದ ಫಲಕ್ಕೇ ಹ್ರಾಸವು ಹೇಳಲ್ಪಡುತ್ತದೆ. ವಿಷಭಕ್ಷಣದಿಂದ ಪ್ರಾಪ್ತವಾದ ಮರಣವು ಸರ್ವ ಪ್ರಕಾರದಿಂದಲೂ ಅಪರಿಹಾರ್ಯವೇ ಆದರೂ, ಸ್ವಲ್ಪವೇ ಭೋಗಿಸಿದ್ದರೆ ವಿಷ ಪರಿಹರಾಕ ಮಂತ್ರಾದಿಗಳಿಂದ ಹೇಗೆ ಪರಿಹರಿಸುವುದು ಸಾಧ್ಯವೋ ಹಾಗೆ, ಪ್ರಾರಬ್ಧ ಕರ್ಮದಿಂದ ಪ್ರಾಪ್ತವಾದ ಸರ್ವಾತ್ಮನಾ ಭೋಗಿಸದೇ ನಾಶವಾಗದಿರುವ ಪುಣ್ಯ ಪಾಪಗಳಿಗೆ, ಸ್ವಲ್ಪ ಭುಕ್ತವಾದುದಕ್ಕೆ ಬ್ರಹ್ಮಜ್ಞಾನದಿಂದ ಫಲಹ್ರಾಸವು ಈ ಮೂರನೆ ಅಧ್ಯಾಯದಲ್ಲಿ ಹೇಳಲ್ಪಡುತ್ತದೆ.

ಹಾಗಾದರೆ ಎಲ್ಲ ಜ್ಞಾನಿಗಳಿಗೂ ಪ್ರಾರಬ್ಧಕರ್ಮಫಲದ ಉಪಮರ್ದವು ಒಂದೇ ವಿಧವೋ ಅಥವಾ ಅನೇಕ ವಿಧವೋ ಎಂದು ಕೇಳಿದರೆ –

ದೇವಾದೀನಾಂ ಯಥಾಕ್ರಮಮ್ ।

ದೇವತೆಗಳೇ ಮೊದಲಾದವರಿಗೆ ಯಥಾ ಯೋಗ್ಯವಾಗಿ, ಅಂದರೆ ಯಾರಿಗೆ ಹೆಚ್ಚಿನ ಜ್ಞಾನವೋ ಅವರಿಗೆ ಹೆಚ್ಚಿನ ಉಪಮರ್ದವು ಎಂದು ಹೇಳುತ್ತಾರೆ.

ಪ್ರಾರಬ್ಧ ಕರ್ಮಗಳಿಗೆ ಭೋಗದ ಹೊರತು ನಾಶವಿಲ್ಲ. ಮತ್ತೆ ಬ್ರಹ್ಮಜ್ಞಾನದಿಂದ ಫಲಹ್ರಾಸವೆಂದು ಹೇಳಲ್ಪಟ್ಟಿದೆ. ಅದು ಅಯುಕ್ತವು ಎಂದರೆ –

ಸರ್ವಾತ್ಮನಾ ತ್ವಭೋಗೋ ಹಿ ಪ್ರಾರಬ್ಧಸ್ಯೈವ ಕರ್ಮಣಃ ॥ ೧೧ ॥

ನ ಬ್ರಹ್ಮದರ್ಶಿನೋಽಪಿ ಸ್ಯಾತ್ಫಲಹ್ರಾಸಸ್ತು ವಿದ್ಯತೇ ।

ಅಪರೋಕ್ಷಜ್ಞಾನಿಗೂ ಕೂಡ ಪ್ರಾರಬ್ಧಕರ್ಮಕ್ಕೆ ಸರ್ವವಿಧದಿಂದಲೂ ಭೋಗ

ಅಭಾವವಿಲ್ಲವೆನ್ನುವುದು ಸಿದ್ಧವಾಗಿದೆ. ಫಲವನ್ನು ಭೋಗಿಸದೆ ಬ್ರಹ್ಮ ಜ್ಞಾನದಿಂದಲೇ ಪ್ರಾರಬ್ಧಕರ್ಮಗಳೂ ನಾಶವಾಗುತ್ತವೆ ಎನ್ನುವುದು ಯುಕ್ತವಲ್ಲ. ಹಾಗೆ ಒಪ್ಪಿದರೆ, ಬ್ರಹ್ಮಾಪರೋಕ್ಷಿಗಳಾದ ಶುಕ ವಾಮದೇವಾದಿಗಳಿಗೆ ಸಂಸಾರದಲ್ಲಿ ಅವಸ್ಥಿತಿಯು ಕೂಡುವುದಿಲ್ಲ. ಅಪರೋಕ್ಷಜ್ಞಾನಿಯ ಪ್ರಾರಬ್ಧಕರ್ಮಕ್ಕಾದರೂ ಫಲಹ್ರಾಸವು ಇರುತ್ತದೆ.

ಹೀಗೆ ಏಕೆ ಅಂಗೀಕರಿಸಬೇಕು ಎಂದರೆ –

ಸರ್ವಾತ್ಮನಾ ಫಲಹ್ರಾಸೋ ಯದಿ ನಾರಬ್ಧಕರ್ಮಣಃ ।। ೧೨ ।।

ಸ್ಯಾತ್ಕಾಮ್ಯವಿಧಿವೈಯರ್ಥ್ಯಮಿತ್ಯುಕ್ತನಿಯಮೋ ಭವೇತ್ ।

ಏಕೆಂದರೆ ಸರ್ವಪ್ರಕಾರದಿಂದಲೂ ಸ್ವಲ್ಪವೂ ಕೂಡ ಫಲ ಹ್ರಾಸವು ಆಗದಿದ್ದರೆ, ಕಾಮ್ಯವಿಧಿಗೆ ವೈಯರ್ಥ್ಯವು ಬರುವುದು. ಆದಕಾರಣ ಪ್ರಾರಬ್ಧಕರ್ಮಗಳಿಗೆ ಭೋಗದಿಂದಲೇ ವಿನಾಶವಾದರೂ, ಫಲಹ್ರಾಸವೂ ಉಂಟು ಎಂಬ ನಿಯಮವು ಯುಕ್ತವೇ ಆಗಿದೆ.

'ಏವಮುತ್ಪನ್ನ ನಿರ್ದೋಷ' ಇತ್ಯಾದಿಯಾಗಿ ಈ ಪಾದದ ಆರಂಭದಲ್ಲಿ ಹೇಳಿದ ವಿಷಯದಲ್ಲಿ ಸ್ಮೃತಿಸಮ್ಮತಿಯನ್ನು ಹೇಳುತ್ತಾರೆ –

ಏವಮಾದ್ಯಪಿ ಸಂಪ್ರೋಕ್ತಂ ತಂತ್ರಭಾಗವತೇ ಸ್ಫುಟಮ್ ।। ೧೩ ।।

ಇಲ್ಲಿ ಹೇಳಿದ ಎಲ್ಲವೂ ಹಾಗೂ ಇದಕ್ಕೆ ಉಪಯುಕ್ತವಾದ ಭಾಷ್ಯಾದಿಗಳಲ್ಲಿ ಉದಾಹರಿಸಿದ ವಚನಗಳೂ ತಂತ್ರಭಾಗವತದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುರುಷಾರ್ಥ ಹಾಗೂ ಸ್ತುತ್ಯಧಿಕರಣಗಳಲ್ಲಿ ಜ್ಞಾನಫಲಕ್ಕೆ ತಾರತಮ್ಯವು ಅಭಿಪ್ರೇತವಾಗಿದೆ. ಅದು ಸಾಂಸಾರಿಕ ಫಲಕ್ಕೆ ವಿರೋಧವಾಗುವುದಿಲ್ಲ. ಆದ್ದರಿಂದ ಮೋಕ್ಷದಲ್ಲಿನ ಫಲತಾರತಮ್ಯವನ್ನು ಸಾಧಿಸುವುದಕ್ಕಾಗಿ ಉತ್ತರಗ್ರಂಥವು. ಯಾರು ಮೋಕ್ಷದಲ್ಲಿ ಭೇದವನ್ನೇ ಅಂಗೀಕರಿಸುವುದಿಲ್ಲವೋ, ಭೇದವನ್ನು ಅಂಗೀಕರಿಸಿದರೂ ಆನಂದಾದಿಗಳನ್ನು ಅಂಗೀಕರಿಸುವುದಿಲ್ಲವೋ, ಅವರನ್ನು ಕುರಿತು ತಾರತಮ್ಯವನ್ನು ಸಾಧಿಸಲಿಕ್ಕೆ ಅವಕಾಶವಿಲ್ಲ. ಮತ್ತೆ ಭೇದಾದಿ ಸಾಧನವೇ ಮಾಡತಕ್ಕುದು. ಅದನ್ನು ನಾಲ್ಕನೆಯ ಅಧ್ಯಾಯದಲ್ಲಿ ಮಾಡಲಾಗುತ್ತದೆ. ಯಾರು ಭೇದ ಆನಂದಾದಿಗಳನ್ನು ಅಂಗೀಕರಿಸಿಯೂ ತಾರತಮ್ಯವನ್ನು ಒಪ್ಪುವುದಿಲ್ಲವೋ ಅವರನ್ನು ಉದ್ದೇಶಿಸಿ ತಾರತಮ್ಯವನ್ನು ಸಾಧಿಸಲು ಪ್ರಯತ್ನ ಮಾಡಲ್ಪಡುತ್ತದೆ.

ಅದರಲ್ಲಿ ಪ್ರಕೃತದಲ್ಲಿ ಶ್ರುತಿಯಿಂದ ಮೋಕ್ಷದಲ್ಲಿ ಆನಂದತಾರತಮ್ಯವನ್ನು ಉಪಪಾದಿಸುತ್ತಾರೆ –

ತಾರತಮ್ಯಂ ಫಲೇ ನೋ ಚೇದ್ಬ್ರಹ್ಮಾದೀನಾಂ ಕಥಂ ಶ್ರುತಿಃ ।

ಅವೃಜಿನೋಽಕಾಮಹತ ಇತಿ ಮುಕ್ತಿಂ ನಿಗದ್ಯ ಚ ।। ೧೪ ।।

ಆನಂದತಾರತಮ್ಯಂ ಚ ತೇಷಾಂ ಬ್ರೂಯಾತ್ಪೃಥಕ್ಪೃಥಕ್ ।

ಬ್ರಹ್ಮಾದಿಗಳಿಗೆ ಜ್ಞಾನಫಲದಲ್ಲಿ ಅಂದರೆ ಮೋಕ್ಷಗಾಮಿಯಾದ ಆನಂದದಲ್ಲಿ ತಾರತಮ್ಯವು ಇಲ್ಲದೆ ಇದ್ದರೆ 'ಸ ಯೋ ಹವೈ ಮನುಷ್ಯಾಣಾಂ ರಾದ್ಧ' ಇತ್ಯಾದಿ ವಾಜಸನೇಯಿ ಶ್ರುತಿಯೂ, 'ಸೈಷಾಽಽನಂದಸ್ಯ ಮೀಮಾಂಸಾ ಭವತಿ' ಇತ್ಯಾದಿ ತೈತ್ತಿರೀಯ ಶ್ರುತಿಯೂ, ಬ್ರಹ್ಮಾದಿಗಳ ಆನಂದದ ವಿಷಯದಲ್ಲಿ ತಾರತಮ್ಯವನ್ನು ಹೇಗೆ ತಾನೆ ಹೇಳೀತು? ಎಲ್ಲರೂ ಉತ್ತರೋತ್ತರ ಶತಗುಣ ಆನಂದವುಳ್ಳವರು ಎಂದಷ್ಟೇ ಹೇಳದೆ ಪ್ರತ್ಯೇಕ ಪ್ರತ್ಯೇಕವಾಗಿಯೇ ಹೇಳುತ್ತದೆ. ಬ್ರಹ್ಮಾದಿಗಳ ಆನಂದಕ್ಕೆ ತಾರತಮ್ಯವನ್ನು ಶ್ರುತಿಯು ಹೇಳುತ್ತದೆ ಎನ್ನುವುದಕ್ಕೆ ಜ್ಞಾಪಕವು ಏನಿದೆ ಎಂದರೆ – ಯಶ್ಚ ಶ್ರೋತ್ರಿಯೋಽವೃಜಿನೋಽಕಾಮಹತ ಇತ್ಯಾದಿ ಶ್ರುತಿಯು ಮುಕ್ತಿಯನ್ನು ಹೇಳಿಯೂ, ಆ ಮುಕ್ತರಿಗೆ ಆನಂದತಾರತಮ್ಯವನ್ನೂ ಹೇಳುತ್ತದೆ.

ಸಂಸಾರ ಏವ ಚೇದೇತತ್ತಾರತಮ್ಯಂ ನ ಮುಖ್ಯತಃ ॥ ೧೫ ॥

ಅಕಾಮಹತಶಬ್ದಾರ್ಥೋಽವೃಜಿನತ್ವಂ ಚ ನೋ ಭವೇತ್ ।

ಈ ತಾರತಮ್ಯವು ಸಂಸಾರದಲ್ಲಿಯೇ ಹೊರತು ಮುಖ್ಯ ಪುರುಷಾರ್ಥವಾದ ಮೋಕ್ಷದಲ್ಲಿ ಅಲ್ಲ ಎಂದು ಹೇಳಿದರೆ, ಆಗ ಶ್ರುತಿಯಲ್ಲಿ ಉಕ್ತವಾಗಿರುವ ಅಕಾಮಹತತ್ವವೂ, ಪಾಪರಾಹಿತ್ಯವೂ ಯುಕ್ತವಾಗಲಾರದು.

ಹಾಗಾದರೆ ಸಂಸಾರಿಗಳಲ್ಲಿಯೂ ಅಕಾಮಹತತ್ವಾದಿಗಳು ಹೇಗಾದರೂ ಸಂಭವಿಸುವುದು ಎಂದರೆ, ಸತ್ಯವೇ. ಆದರೆ ಮುಖ್ಯಾರ್ಥದಲ್ಲಿ ಕೂಡುವುದಿಲ್ಲ ಎಂದು ಹೇಳುತ್ತೇವೆ. ಮುಖ್ಯಾರ್ಥಕ್ಕೆ ಬಾಧಕವಿಲ್ಲದಾಗ ಅಮುಖ್ಯಾರ್ಥವನ್ನು ಅಂಗೀಕರಿಸುವುದು ಯುಕ್ತವಲ್ಲ. ಸಂಸಾರಿಗಳಲ್ಲಿ ಅಕಾಮಹತತ್ವಾದಿಗಳು ಹೇಗೆ ಕೂಡುವುದಿಲ್ಲ ಎನ್ನುವುದನ್ನು ಉಪಪಾದಿಸುತ್ತಾರೆ –

ಕಾಮಸ್ಯ ಯತ್ರಾಪ್ತಾಃ ಕಾಮಾಸ್ತತ್ರ ಮಾಮಮೃತಂ ಕೃಧಿ ॥ ೧೬ ॥

ಇತಿ ಯಲ್ಲಕ್ಷಣಂ ಮುಕ್ತೇಃ ಶ್ರುತಿರಾಹ ಬಲೀಯಸೀ ।

ಕಾಮಾಹತಿಃ ಕುತೋಽನ್ಯತ್ರ ಪ್ರಾಪ್ತಕಾಮಸ್ಯ ಸಾ ಭವೇತ್ ॥ ೧೭ ॥

ಯಾವ ಲೋಕದಲ್ಲಿ ಇಚ್ಛೆಯ ವಿಷಯಗಳು ಪೂರ್ಣವಾಗಿವೆಯೋ ಆ ಲೋಕದಲ್ಲಿ ನನ್ನನ್ನು ಮುಕ್ತನನ್ನಾಗಿ ಮಾಡು (ಹೀಗೆ ವಾಯುದೇವರಲ್ಲಿ ಪ್ರಾರ್ಥನೆ). ಹೀಗೆ ಬಲಿಷ್ಠವಾದ ಶ್ರುತಿಯು ಆಪ್ತಕಾಮತ್ವವನ್ನು ಮುಕ್ತಿಯ ಲಕ್ಷಣವನ್ನಾಗಿ ಹೇಳುತ್ತದೆ. ಆದರೆ ಇಲ್ಲಿ ಮುಕ್ತನಿಗೆ ಸರ್ವಕಾಮಗಳ ಪ್ರಾಪ್ತಿಯೇ ತೋರುವುದು, ಅಕಾಮಹತತ್ವವು ತೋರುವುದಿಲ್ಲ ಎಂದರೆ – ಅಕಾಮಹತತ್ವವು ಮುಕ್ತಿಯಲ್ಲಿ ಸಂಭವಿಸದಿದ್ದರೆ ಸಂಸಾರದಲ್ಲಿ ತಾನೇ ಹೇಗೆ ಸಂಭವಿಸುವುದು? ಅಕಾಮಹತತ್ವವು ಪ್ರಾಪ್ತಕಾಮನಿಗೇ ಆಗುವುದು. ಅಕಾಮಹತತ್ವಕ್ಕೆ ಕಾಮಪ್ರಾಪ್ತಿಯೇ ಹೇತುವು.

ಆಪ್ತಕಾಮನಿಗೆ ಅಕಾಮಹತತ್ವವು ಹೇಗೆ ಎನ್ನುವುದನ್ನು ವಿವರಿಸುತ್ತಾರೆ –

ಅಪ್ರಯತ್ನೇನ ಕಾಮಾನಾಮವಾಪ್ತಿಃ ಸಾ ಯದಾ ಭವೇತ್ ।

ತದೈವ ಕಾಮಹತತಾ ಕುತ ಏವಾನ್ಯಥಾ ಭವೇತ್ ॥ ೧೮ ॥

ಯಾವಾಗ ಅಪ್ರಯತ್ನವಾಗಿ ಕಾಮಿತಾರ್ಥಗಳ ಪ್ರಾಪ್ತಿಯು ಆಗುವುದೋ, ಆವಾಗಲೇ ಅಕಾಮಹತತ್ವವು ಆಗುವುದು. ಹಾಗೆ ಕಾಮಗಳ ಪ್ರಾಪ್ತಿಯಾಗದಿದ್ದರೆ ಹೇಗೆ ತಾನೆ ಅಕಾಮಹತಿಯು ಆಗುವುದು?

ಕಾಮದಿಂದ ಉಪದ್ರವವೇ ಕಾಮಹತತ್ವ. ಅದರ ಅಭಾವವೇ ಅಕಾಮಹತತ್ವ. ಅಥವಾ ಯಾವನು ಕಾಮಿತವಾದುದನ್ನು ನಿಯಮವಾಗಿ ಹೊಂದುತ್ತಾನೋ ಅವನು ಅಕಾಮಹತನು. ಆತನು ಮುಕ್ತನಾಗುವುದಕ್ಕೆ ಅರ್ಹನು. ಆದ್ದರಿಂದ ಮುಕ್ತನಿಗೇ ಅಕಾಮಹತತ್ವವು ಎಂದು ತಾತ್ಪರ್ಯ.

ಹಾಗಾದರೆ ಆಪ್ತಕಾಮನಿಗೇ ಕಾಮನಿಮಿತ್ತವಾದ ಉಪದ್ರವಾಭಾವವು ಎನ್ನುವ ನಿಯಮವಿಲ್ಲ. ಕಾಮವಿಲ್ಲದಿದ್ದರೂ ಕಾಮೋಪದ್ರವ ಅಭಾವವು ಕೂಡುವುದು. ಹೀಗೆ ಆಶಂಕಿಸಿದರೆ ಚೇತನರಲ್ಲಿ ಕಾಮನಾಭಾವವೇ ಕೂಡುವುದಿಲ್ಲ ಎನ್ನುತ್ತಾರೆ –

ಚೇತನಸ್ಯ ತ್ವಸುಪ್ತಸ್ಯ ಕುತ್ರ ದೃಷ್ಟಾ ಹ್ಯಕಾಮತಾ ।

ಅವ್ಯಕ್ತಿರೇವ ಕಾಮಾನಾಂ ನ ನಾಶೋ ಮೋಹಸುಪ್ತಯೋಃ ॥ ೧೯ ॥

ಸುಷುಪ್ತಿ ಮೋಹಗಳನ್ನು ಹೊಂದದೇ ಇರುವ ಚೇತನನಿಗೆ ಕಾಮನಾಭಾವವು ಎಲ್ಲಿಯೂ ಕಂಡಿಲ್ಲ. ಮೋಹ ಮತ್ತು ಸುಷುಪ್ತಿಗಳಲ್ಲಿಯೂ ಕಾಮನೆಗಳು ಅವ್ಯಕ್ತವೇ ಆಗಿರುತ್ತವೆ ಹೊರತು ಪೂರ್ತಿಯಾಗಿ ನಾಶವಾಗಿರುವುದಿಲ್ಲ.

ಸುಪ್ತ್ಯಾದಿಗಳಲ್ಲಿ ಕಾಮವಿರುವುದು ಎನ್ನುವುದೇ ಸಿದ್ಧವಾಗಿಲ್ಲ. ಹಾಗಿರುವಾಗ ಕಾಮದ ಅವ್ಯಕ್ತಿ ಎನ್ನುವ ಕಲ್ಪನೆಯೇ ಕೂಡುವುದಿಲ್ಲ ಎಂದರೆ –

ಯತ್ಕಾಮಃ ಸ್ವಾಪಮಾಪ್ನೋತಿ ತದೇವೋತ್ಥಾಪಿತಃ ಪುನಃ ।

ಅವಶೋಽಪಿ ವ್ಯಾಹರತಿ ಕುತಃ ಸುಪ್ತಾವಕಾಮತಾ ॥ ೨೦ ॥

ಭೋಜನಾದಿ ಇಚ್ಛೆಯಿಂದ ಯುಕ್ತನಾಗಿ ಸುಪ್ತಿಯನ್ನು ಹೊಂದಿದ ಪುರುಷನು, ಎದ್ದಕೂಡಲೇ ಕೆಲವುವೇಳೆ ಪರವಶನಾಗಿದ್ದರೂ ತಾನು ಸುಪ್ತಿಯನ್ನು ಹೊಂದುವ ಮುಂಚೆ ಬಯಸಿದ್ದನ್ನೇ ಪುನಃ ಕೇಳುವುದು ಕಂಡಿದೆ. ಆದಕಾರಣ ಸುಪ್ತಿಯಲ್ಲಿ ಕಾಮನಾಭಾವವು ಹೇಗೆ ಸಿದ್ಧಿಸುತ್ತದೆ? ಆದಕಾರಣ ಸ್ವಾಪಕಾಲದಲ್ಲಿಯೂ ಕಾಮವು ಇರುವುದು ಎಂದು ಸಿದ್ಧಿಸುವುದು.

ಹಿಂದೆ ಹೇಳಿದ ಕೇವಲ ಅನುಮಾನದಿಂದ ಮಾತ್ರವಲ್ಲ, 'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ' ಇತ್ಯಾದಿ ಶ್ರುತಿಗಳಿಂದಲೂ

ಮುಕ್ತನಿಗೆ ಸಕಾಮತ್ವವು ಸಿದ್ಧಿಸುತ್ತದೆ ಎಂದು ಹೇಳುತ್ತಾರೆ –

ಸರ್ವಕಾಮಾನವಾಪ್ನೋತಿ ಬ್ರಹ್ಮಣಾ ಸಹ ಮುಕ್ತಿಗಃ ।

ಪರ್ಯೇತಿ ತತ್ರ ಜಕ್ಷಂಶ್ಚ ಕ್ರೀಡನ್ ರತಿಮವಾಪ್ನುಯಾತ್ ॥ ೨೧ ॥

ಕಾಮಾನ್ನೀ ಕಾಮರೂಪೀ ಸನ್ನಿಮಾನ್ ಲೋಕಾಂಶ್ಚ ಸಂಚರನ್ ।

ಆಸ್ತೇ ಗಾಯನ್ಸಾಮ ಮುಕ್ತ ಇತ್ಯಾದಿ ಶ್ರುತಿಸದ್ಬಲಾತ್ ॥ ೨೨ ॥

ಅಕಾಮಃ ಸ್ಯಾತ್ಕಥಂ ಮುಕ್ತಃ ।

ಮುಕ್ತಿಯಲ್ಲಿರುವವನು ಪರಬ್ರಹ್ಮನೊಂದಿಗೆ ಕೂಡಿಕೊಂಡು ಎಲ್ಲ ಇಚ್ಛೆಗಳನ್ನು ಹೊಂದುತ್ತಾನೆ. ಅಲ್ಲಿ ಭಕ್ಷಿಸುತ್ತ, ಕ್ರೀಡಿಸುತ್ತ, ರಮಣವನ್ನು ಹೊಂದಿದವನಾಗಿ ಅಡ್ಡಾಡುತ್ತಿರುತ್ತಾನೆ. ಮುಕ್ತನು ಇಷ್ಟಪಟ್ಟ ಅನ್ನವನ್ನು ಹೊಂದಿದವನಾಗಿ, ಇಷ್ಟವಾದ ರೂಪವುಳ್ಳವನಾಗಿ, ಈ ಲೋಕಗಳನ್ನು ಸಂಚರಿಸುತ್ತ ಸಾಮವೇದವನ್ನು ಗಾಯನ ಮಾಡುತ್ತ ಇರುತ್ತಾನೆ. ಇತ್ಯಾದಿ ಶ್ರುತಿಯ ಬಲದಿಂದ ಮುಕ್ತನಿಗೆ ಕಾಮವಿದೆ ಎಂದು ತಿಳಿದುಬರುವುದು. ಆದಕಾರಣ ಮುಕ್ತನು ಅಕಾಮನು ಹೇಗೆ ಆದಾನು?

ಹಾಗಾದರೆ ಮುಕ್ತನಿಗೆ ಕಾಮವಿಲ್ಲವೆನ್ನುವ ವಿಷಯದಲ್ಲಿಯೂ 'ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿಸ್ಥಿತಾಃ । ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತೇ' ಇತ್ಯಾದಿ ಶ್ರುತಿಯಿದೆ. ಆದಕಾರಣ ಮುಕ್ತನಿಗೆ ಕಾಮವಿದೆ ಎನ್ನುವ ನಿಶ್ಚಯವು ಹೇಗೆ ಎಂದರೆ –

ಕಾಮಾ ಯೇಽಸ್ಯ ಹೃದಿ ಶ್ರಿತಾಃ ।

ಇತ್ಯಂತಃಕರಣಸ್ಥಾನಾಂ ಕಾಮಾನಾಂ ಮೋಕ್ಷಮೇವ ಹಿ ॥ ೨೩ ॥

ಆಹ ಶ್ರುತಿರ್ಹ್ಯದೀತ್ಯೇವ ನ ಚೇದ್ವ್ಯರ್ಥಂ ವಿಶೇಷಣಮ್ ।

'ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿಸ್ಥಿತಾಃ' ಇತ್ಯಾದಿ ಶ್ರುತಿಯು ಯಾವಾಗ ಜೀವನ ಅಂತಃಕರಣದಲ್ಲಿಯೇ ಇರುವ ಎಲ್ಲ ಕಾಮಗಳಿಗೆ ಬಿಡುಗಡೆಯಾಗುವುದೋ ಆಗ ಅವನು ಮುಕ್ತನಾಗುತ್ತಾನೆ ಎಂದು ಹೇಳುವುದು. ಇಲ್ಲಿ ಪ್ರಾಕೃತ ಕಾಮರಾಹಿತ್ಯವನ್ನು ಮಾತ್ರ ಶ್ರುತಿಯು ಪ್ರತಿಪಾದಿಸುತ್ತದೆ, ಸರ್ವಥಾ ಕಾಮಾಭಾವವನ್ನಲ್ಲ. ಈ ಶ್ರುತಿಯು ಅಂತಃಕರಣದ ಪರಿಣಾಮಗಳಾದ ಕಾಮಗಳಿಗೆ ನಿವೃತ್ತಿಯನ್ನು ಹೇಳುತ್ತದೆ. ಜೀವಸ್ವರೂಪದಲ್ಲಿರುವ ಕಾಮಗಳಿಗೆ ಅಲ್ಲ. ಇಲ್ಲದಿದ್ದರೆ 'ಹೃದಿ ಶ್ರಿತಾಃ' ಎನ್ನುವ ವಿಶೇಷಣವು ವ್ಯರ್ಥವೇ ಆಗುವುದು.

'ಹೃದಿ ಶ್ರಿತಾಃ' ಎನ್ನುವುದು ವಿಶೇಷಣವಲ್ಲ. ಎಲ್ಲ ಕಾಮಗಳು ಅಂತಃಕರಣದ ಪರಿಣಾಮಗಳೇ. ಆತ್ಮಧರ್ಮವಾದ ಕಾಮವೆಂಬುದಿಲ್ಲ. ಆದಕಾರಣ ಹೃದಿ ಶ್ರಿತಾಃ ಎನ್ನುವುದು ಸ್ವರೂಪಕಥನಮಾತ್ರವು ಎಂದು ಆಶಂಕಿಸಿಕೊಂಡು, ನಿಷೇಧಿಸುತ್ತಾರೆ –

ಹೃದ್ಯೇವ ತೇಷಾಂ ಶ್ರಯಣಮಿತಿ ಪಕ್ಷೋ ನ ಭಾಸತೇ ।। ೨೪ ।।

ಮುಕ್ತಾನಾಂ ಕಾಮಿತಾಮಾಹ ಪೃಥಕ್ ಶಾಖಾಸು ಯಚ್ಛ್ರುತಿಃ ।

ಅತೋಽಕಾಮಹತತ್ವಂ ತು ಮುಕ್ತಾನಾಮೇವ ಮುಖ್ಯತಃ ।। ೨೫ ।।

ಮುಖ್ಯಾರ್ಥಸ್ಯ ವೃಥಾ ತ್ಯಾಗೋ ಮಾಯಿನಾಮೇವ ಭೂಷಣಮ್ ।

ಅಂತಃಕರಣದಲ್ಲಿಯೇ ಕಾಮಗಳಿಗೆ ಆಶ್ರಯವು ಎನ್ನುವ ಪಕ್ಷವು ಇಲ್ಲಿ ಪ್ರಕಾಶಿಸುವುದಿಲ್ಲ. ಏಕೆಂದರೆ ಶ್ರುತಿಯು ಪ್ರತ್ಯೇಕವಾಗಿ ಶಾಖೆಗಳಲ್ಲಿ ಮುಕ್ತರಿಗೆ ಕಾಮವನ್ನು ಹೇಳುತ್ತದೆ. ಆದುದರಿಂದ ಮುಖ್ಯವಾಗಿ ಅಕಾಮಹತತ್ವವು ಮುಕ್ತರಿಗೇ ಎಂದು ಸಿದ್ಧವಾಗುವುದು. ಕಾರಣವಿಲ್ಲದೆ ವೃಥಾ ಮುಖ್ಯವಾದ ಅರ್ಥವನ್ನು ಬಿಡುವುದು ಮಾಯಿಗಳಿಗೆ ಮಾತ್ರ ಭೂಷಣವು.

ಮುಕ್ತರಲ್ಲಿ ಅಕಾಮಹತತ್ವವು ಕೂಡುವುದಿಲ್ಲವೆಂದು ಪ್ರತಿಪಾದಿಸಲಾಯಿತು. ಹಾಗೆಯೇ ಅವೃಜಿನತ್ವವೂ ಕೂಡುವುದಿಲ್ಲವೆಂದು ಹೇಳುತ್ತ, ಅದನ್ನು ವಿವರಿಸುತ್ತಾರೆ.

ಅಪಾಪತ್ವಮದುಃಖತ್ವಂ ಚಾವೃಜಿನತ್ವಮಿಹೋದಿತಮ್ ।। ೨೬ ।।

ಅಪ್ರಿಯಂ ವೃಜಿನಂ ದುಃಖಮಕಂ ತೋದ ಇತೀರ್ಯತೇ ।

ತತ್ಕಾರಣತ್ವಾತ್ಪಾಪಂ ವಾ ವೃಜಿನಂ ನಾಮ ಕಥ್ಯತೇ ।। ೨೭ ।।

ಇತ್ಯುಕ್ತಃ ಸ್ವಯಮೀಶೇನ ನಾಮಾರ್ಥಃ ಶಬ್ದನಿರ್ಣಯೇ ।

ಅಪಾಪತ್ವ, ಅದುಃಖತ್ವಗಳೇ ಇಲ್ಲಿ ಅವೃಜಿನತ್ವವೆಂಬುದಾಗಿ ಹೇಳಲ್ಪಟ್ಟಿವೆ. ದುಃಖವು ಅಪ್ರಿಯಂ, ವೃಜಿನಂ, ಅಕಂ ತೋದಃ ಇತ್ಯಾದಿಗಳಿಂದ ಹೇಳಲ್ಪಡುತ್ತದೆ. ದುಃಖಕ್ಕೆ ಕಾರಣವಾದ್ದರಿಂದ ಪಾಪವೂ ವೃಜಿನವೆಂದು ಹೇಳಲ್ಪಡುತ್ತದೆ. ಹೀಗೆ ಶಬ್ದನಿರ್ಣಯದಲ್ಲಿ ಸ್ವಯಂ ಶ್ರೀಹರಿಯಿಂದಲೇ ವೃಜಿನ ಶಬ್ದಾರ್ಥವು ಹೇಳಲ್ಪಟ್ಟಿದೆ.

ಅಪಾಪತ್ವಂ ಚ ನೈವಾಸ್ತಿ ಯಾವತ್ಸಂಸಾರಮಸ್ಯ ಹಿ ।। ೨೮ ।।

ಆರಬ್ಧಪಾಪಮಸ್ತ್ಯೇವ ದುಃಖಂ ಚ ಜ್ಞಾನಿನೋಽಪಿ ಹಿ ।

ತಸ್ಮಾತ್ತಸ್ಮಾದಕಾಮತ್ವಮಿತಿ ಚಾಶ್ರುತಕಲ್ಪನಾ ।। ೨೯ ।।

ಅಕಾಮಹತ ಇತ್ಯುಕ್ತೇಃ ಶ್ರುತಹಾನಿರಪಿ ಸ್ಫುಟಾ ।

ಈ ಜೀವನಿಗೆ ಸಂಸಾರವಿರುವ ತನಕ ಅಪಾಪತ್ವವೂ ಕೂಡ ಇರುವುದೇ ಇಲ್ಲ. ಜ್ಞಾನಿಗೂ ಕೂಡ ಪ್ರಾರಬ್ಧವಾದ ಪಾಪವೂ ದುಃಖವೂ ಕೂಡ ಇದ್ದೇ ಇರುವುದು. ಪೂರ್ವಪೂರ್ವದಲ್ಲಿ ನಿರ್ದಿಷ್ಟರಾದವರಿಂದ ಅತಿಶಯವಾಗಿ ಉತ್ತರೋತ್ತರದವರಿಗೆ ಕಾಮರಾಹಿತ್ಯವನ್ನು ಹೇಳುವುದರಿಂದ ಅಶ್ರುತಕಲ್ಪನಾ ಎಂಬ ದೋಷ ಬರುವುದು. ಶ್ರುತಿಯಲ್ಲಿದ್ದ ಅಕಾಮಹತಃ ಎನ್ನುವ ಹೇಳಿಕೆಗೆ ಪರಕೀಯರು ಅಕಾಮಃ ಎಂದು ವ್ಯಾಖ್ಯಾನಮಾಡಿರುತ್ತಾರೆ. ಇದರಿಂದ ಶ್ರುತಿಯಲ್ಲಿನ ಹತ ಶಬ್ದಕ್ಕೆ ಯಾವುದೇ

ಪ್ರಯೋಜನವೂ ಇಲ್ಲದಂತಾಗುವುದು. ಹೀಗೆ ಶ್ರುತಹಾನಿಯೂ ಕೂಡ ಸ್ಪಷ್ಟವೇ.

ಅಧಿಕವಾದ ದೋಷವನ್ನೂ ಹೇಳುತ್ತಾರೆ –

ಕುತ್ರಚಿತ್ಕಾಮಿನಃ ಪುಂಸಃ ಕಾಮಾಭಾವಾತ್ ಕ್ವಚಿತ್ಕ್ವಚಿತ್ ॥ ೩೦ ॥

ಇಂದ್ರಾದಿಸುಖಭೋಗೋऽಸ್ತೀತ್ಯನುಭೂತಿರ್ಹಿ ಕುಪ್ಯತಿ ।

ಇಂದ್ರಾದಿ ಪದವಿಗಳಿಗೆ ವ್ಯತಿರಿಕ್ತವಾದ ಯಾವುದಾದರೊಂದು ಪದವಿಯಲ್ಲಿ ಕಾಮನೆಯುಳ್ಳ ಪುರುಷನಿಗೆ, ಇಂದ್ರಾದಿ ಪದವಿಗಳಲ್ಲಿ ಕಾಮನೆಯಿಲ್ಲದಿದ್ದರೂ, ಇಂದ್ರಾದಿಗಳಿಗೆ ಸಮವಾದ ಸುಖಭೋಗವು ಎಂದು ವ್ಯಾಖ್ಯಾನಮಾಡಿದರೆ, ಅದು ಅನುಭವಕ್ಕೆ ವಿರುದ್ಧವಾಗುವುದು. ರಾಜ್ಯವನ್ನು ಇಚ್ಛಿಸದೆ ಇದ್ದವನಿಗೆ ರಾಜಸಮಾನ ಸುಖಭೋಗವು ಅನುಭವಬಾಧಿತವು ಎನ್ನುವುದು ಲೋಕದಲ್ಲಿ ಸ್ಪಷ್ಟವೇ ಆಗಿದೆ.

ಹಾಗಾದರೆ ಶ್ರುತಿಯ ಅರ್ಥವು ಯಾವುದೆಂದರೆ –

ತಸ್ಮಾದಮುಕ್ತಸುಖಗಂ ತಾರತಮ್ಯಂ ಪೃಥಕ್ಪೃಥಕ್ ॥ ೩೧ ॥

ಉಕ್ತ್ವಾ ಯಶ್ಚೇತಿ ಮುಕ್ತಾನಾಂ ತಾರತಮ್ಯಂ ಸುಖೇ ಶ್ರುತಿಃ ।

ಆಹೇತಿ ಪೇಶಲಂ ತಚ್ಚ ಚ ಶಬ್ದಾದೇವ ಗಮ್ಯತೇ ॥ ೩೨ ॥

ಹೀಗೆ ಶ್ರುತಿಗೆ ಅರ್ಥಾಂತರವು ನಿರಸ್ತವಾಯಿತು. ಹಾಗಾದರೆ ಶ್ರುತಿಯು ಏನು ಹೇಳುವುದು ಎಂದರೆ – ಅಮುಕ್ತರಾದ ಮನುಷ್ಯಾದಿಗಳ ಸುಖಕ್ಕೆ ಸಂಬಂಧಿಸಿದ ತಾರತಮ್ಯವನ್ನು 'ತೇ ಯೇ ಶತಂ' ಇತ್ಯಾದಿ ವಾಕ್ಯಗಳಿಂದ ಬೇರೆಬೇರೆಯಾಗಿ ಹೇಳಿ, 'ಯಶ್ಚ ಶ್ರೋತ್ರಿಯಸ್ಯ ಚ' ಎನ್ನುವ ವಾಕ್ಯದಿಂದ ಮುಕ್ತರಾದ ಮನುಷ್ಯಾದಿಗಳ ಸುಖದಲ್ಲಿ ತಾರತಮ್ಯವನ್ನು ಶ್ರುತಿಯು ಅತಿದೇಶದಿಂದ ಹೇಳುತ್ತದೆ. ಹೀಗೆ ವ್ಯಾಖ್ಯಾನ ಮಾಡಿದರೆ ದೋಷವಿಲ್ಲ. ಹೀಗಾದರೆ ವಾಕ್ಯಭೇದವೆಂಬ ದೋಷವು ಬರುವುದು ಎಂದರೆ, ಜ್ಞಾಪಕವಿರುವ ಪ್ರಯುಕ್ತ ದೋಷವಿಲ್ಲ ಎನ್ನುತ್ತಾರೆ. 'ಯಶ್ಚ' ಎನ್ನುವ ವಾಕ್ಯಕ್ಕೆ ಪ್ರಕೃತವಾದ ಅರ್ಥದ ದೆಶೆಯಿಂದ ಬೇರೆ ವಿಷಯವಿದೆ ಎನ್ನುವುದು 'ಚ' ಶಬ್ದದಿಂದಲೇ ತಿಳಿಯುತ್ತದೆ.

ಮನುಷ್ಯರಿಂದ ಆರಂಭಿಸಿ ಹಿರಣ್ಯಗರ್ಭನವರೆಗೆ ಅಮುಕ್ತರಿಗೂ ಮುಕ್ತರಿಗೂ ಉತ್ತರೋತ್ತರ ಶತ ಗುಣ ಆನಂದಾಧಿಕ್ಯವಿದೆ ಎಂದು ಎರಡು ಶ್ರುತಿಗಳು ಹೇಳುತ್ತವೆ ಎನ್ನುವುದು ಅಯುಕ್ತವು. ಮನುಷ್ಯರ ಆನಂದವನ್ನು ಹೇಳುವಲ್ಲಿ ಮುಕ್ತಜ್ಞಾಪಕವು ಇಲ್ಲ. ಅಲ್ಲಿ ಅಕಾಮಹತತ್ವ ಇತ್ಯಾದಿಗಳೂ ಶ್ರುತವಾಗಿಲ್ಲ ಎಂಬ ಆಶಂಕೆಯನ್ನು ನಿರಾಕರಿಸುತ್ತ, ರಾದ್ಧಃ ಇತ್ಯಾದಿ ವಾಕ್ಯದಿಂದ ಆರಂಭಿಸಿ ಅಭಿವೀಕ್ಷತಃ ಎನ್ನುವ ತನಕ ಶ್ರುತ್ಯರ್ಥವನ್ನು ವಿವರಿಸುತ್ತಾರೆ –

ಅದರಲ್ಲಿ ರಾದ್ಧಃ ಎನ್ನುವುದರಿಂದ ಬೃಹದಾರಣ್ಯಕದಲ್ಲಿ ಮನುಷ್ಯಮುಕ್ತನ ಜ್ಞಾಪಕವನ್ನು ತೋರಿಸುತ್ತಾರೆ –

ರಾದ್ಧಃ ಸಂಸಿದ್ಧ ಇತ್ಯೇವ ಮುಕ್ತ ಏವಾವಗಮ್ಯತೇ ।

'ಸ ಯೋ ಮನುಷ್ಯಾಣಾಂ ರಾದ್ಧಃ ಸಮೃದ್ಧೋ ಭವತಿ' ಎನ್ನುವ ಉಪಕ್ರಮ ವಾಕ್ಯದಲ್ಲಿರುವ ರಾದ್ಧಃ ಎಂಬ ಪದದಿಂದ ಸಂಸಿದ್ಧಃ ಎಂಬ ಅರ್ಥದಲ್ಲಿ (ರಾಧ ಸಾಧ ಸಂಸಿದ್ಧೌ) ಮುಕ್ತನೇ ಹೇಳಲ್ಪಟ್ಟಿದ್ದಾನೆ. ಇನ್ನೂ ಮುಕ್ತಿಯಾಗದೇ ಇದ್ದಾಗ ಸಮೃದ್ಧಿ ಇರುವುದಿಲ್ಲ ಮುಕ್ತನಾದಾಗಲೇ ಸಮೃದ್ಧಿಯು. ಆದಕಾರಣ ಸಮೃದ್ಧ ಶಬ್ದವೂ ಮುಕ್ತ ವಾಚಕವು. ಹೀಗೆ ರಾದ್ಧ ಶಬ್ದವು ಶಕ್ತಿವೃತ್ತಿಯಿಂದಲೇ ಮುಕ್ತನನ್ನು ಹೇಳುತ್ತದೆ.

ತೈತ್ತಿರೀಯ ಶ್ರುತಿಯಲ್ಲಿನ ಮುಕ್ತಮನುಷ್ಯ ಜ್ಞಾಪಕವನ್ನು ತೋರಿಸುತ್ತ 'ಯುವಾ ಸ್ಯಾತ್' ಇತ್ಯಾದಿ ಪದಗಳನ್ನು 'ಸಾಧುನಾ' ಇತ್ಯಾದಿ ವ್ಯಾಖ್ಯಾನ ಮಾಡುತ್ತಾರೆ –

ಸಾಧುನಾ ವಿಷ್ಣುನಾ ಯುಕ್ತೋ ಮುಕ್ತಃ ಸಾಧುಯುವಾ ಮತಃ ॥ ೩೩ ॥

ಯೌವನಂ ನಿತ್ಯಮೇತಸ್ಯ ಮುಕ್ತಸ್ಯೇತಿ ಯುವಾ ಸ ಚ ।

ಫಲಮಧ್ಯಯನಸ್ಯಾಪ್ತಂ ತೇನಾಧ್ಯಾಯಕ ಈರಿತಃ ॥ ೩೪ ॥

ನಿರ್ಹ್ರಾಸಾನಂದಸಂಪ್ರಾಪ್ತ್ಯಾ ಚಾಶಿಷ್ಠ ಇತಿ ಗೀಯತೇ ।

ಸ್ಥಿತಸ್ಯಾನನ್ಯಥಾಪ್ರಾಪ್ತೇರ್ದೃಢಿಷ್ಠ ಇತಿ ಚೋದಿತಃ ॥ ೩೫ ॥

ಬಲಿಷ್ಠಶ್ಚ ಸ್ವಭಾವೇನ ಮುಕ್ತೋ ಭವತಿ ಕೇವಲಮ್ ।

ನಿರ್ದೋಷನೇ ಸಾಧು ಎಂದು ಕರೆಯಲ್ಪಡುತ್ತಾನೆ. ವಿಷ್ಣುವಿನಿಂದ ಇತರರು ಯಾರೂ ನಿರ್ದೋಷರಲ್ಲ. ಆದ್ದರಿಂದ ಸಾಧುನಾ ವಿಷ್ಣುನಾ ಎಂದು ಇಲ್ಲಿ ಹೇಳಿದೆ. ನಿರ್ದೋಷನಾದ ವಿಷ್ಣುವಿನಿಂದ ಕೂಡಿದ ಮುಕ್ತನು (ಭಗವತ್ ಸಾಮೀಪ್ಯ ರೂಪವಾದ ಮೋಕ್ಷವುಳ್ಳವನು) ಸಾಧು ಯುವಾ ಎಂದು ಮತವು. ಯುವ ಶಬ್ದಕ್ಕೆ ನಿತ್ಯವಾದ ಯೌವನವೆಂದೇ ಮುಖ್ಯಾರ್ಥವು. ಆದ್ದರಿಂದ ನಿತ್ಯವಾದ ಯೌವನವು ಮುಕ್ತನಾದ ಈ ಮನುಷ್ಯನಿಗೇ ಕೂಡುತ್ತದೆ, ಹೊರತು ಸಂಸಾರಿಗಲ್ಲ. ಈ ಕಾರಣದಿಂದ ಯುವಶಬ್ದವಾಚ್ಯನು ಮುಕ್ತನೇ. ಅಧ್ಯಯನದ ಫಲವಾದ ಮುಕ್ತಿಯು ಮುಕ್ತನಿಂದಲೇ ಹೊಂದಲ್ಪಟ್ಟಿದೆ. ಆ ಕಾರಣದಿಂದ ಮುಕ್ತನೇ ಆಧ್ಯಾಯಕನೆಂದು ಹೇಳಿಸಿಕೊಳ್ಳುತ್ತಾನೆ. ಹ್ರಾಸವಿಲ್ಲದ ಅಂದರೆ ಯೋಗ್ಯತಾನುಸಾರವಾಗಿ ಪೂರ್ಣವಾದ ಆನಂದದ ಸಂಪ್ರಾಪ್ತಿಯಿಂದ ಮುಕ್ತನೇ ಆಶಿಷ್ಠ ಎಂದು ಹೇಳಿಸಿಕೊಳ್ಳುತ್ತಾನೆ. 'ಆ ಸಮ್ಯಕ್ ಸಮಂತಾಚ್ಚ ಶಂ ಅಸ್ಯ ಇತಿ ಆಶಃ' ಅಂದರೆ ಚೆನ್ನಾಗಿ ಸುಖವುಳ್ಳವನು ಆಶನು. 'ಅತಿಶಯೇನ ಆಶಃ ಆಶಿಷ್ಠಃ' ಹ್ರಾಸವಿಲ್ಲದ ಅತಿಶಯವಾದ ಸುಖವುಳ್ಳವನು ಆಶಿಷ್ಠನು. ದೃಢನೆಂದರೆ ಅವಿಕಾರನು. ಅತಿಶಯವಾಗಿ ಅವಿಕಾರನು ದೃಢಿಷ್ಠನು. ಮುಕ್ತಿಯಲ್ಲಿ ಸ್ಥಿತನಾದವನಿಗೆ ಅನ್ಯಥಾ ಪ್ರಾಪ್ತಿಯು (ಅತಿಶಯವಾದ ವಿಕಾರವು) ಆಗದಿರುವ ಕಾರಣ ಮುಕ್ತನು ದೃಢಿಷ್ಠನೆಂದು ಹೇಳಿಸಿಕೊಳ್ಳುತ್ತಾನೆ. 'ಬಲಮಸ್ಯ ಅಸ್ತೀತಿ ಬಲೀ' 'ಅತಿಶಯೇನ ಬಲೀ ಬಲಿಷ್ಠಃ'. ಅತಿಶಯವಂದರೆ ಸ್ವಾಭಾವಿಕತ್ವವು.

ಸ್ವಭಾವದಿಂದ ಬಲಿಷ್ಠನಾದವನು ಮುಕ್ತನೇ ಹೊರತು ಅಮುಕ್ತನಲ್ಲ. ಆದ್ದರಿಂದ ಮುಕ್ತನೇ ಬಲಿಷ್ಠನೆಂದು ಹೇಳಿಸಿಕೊಳ್ಳುತ್ತಾನೆ.

ಹಾಗಾದರೆ ಮುಕ್ತನಿಗೆ 'ತಸ್ಯೇವಂ ಪೃಥಿವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್' ಎಂದು ವಿತ್ತಪರಿಪೂರ್ಣತ್ವ ಪೃಥಿವೀಪತಿತ್ವಗಳನ್ನು ಹೇಳುವುದು ಹೇಗೆ ಕೂಡುತ್ತದೆ ಎಂದರೆ –

ತಸ್ಯೇಯಂ ಪೃಥಿವೀತ್ಯಾದಿ ಪೂರ್ವಭಾವವ್ಯಪೇಕ್ಷಯಾ ॥ ೩೬ ॥

ತಸ್ಯೇಯಂ ಪೃಥಿವೀ ಇತ್ಯಾದಿ ವಾಕ್ಯವು ಮುಕ್ತಿಗೆ ಪೂರ್ವಭಾವ ಅಂದರೆ ಅಮುಕ್ತತ್ವ ವಿವಕ್ಷೆಯಿಂದ ಹೇಳಿದ್ದು. ಮುಕ್ತ ಹಾಗೂ ಅಮುಕ್ತರ ವಿವಕ್ಷೆಯಿಂದ ಯುವಾ ಸ್ಯಾತ್ ಇತ್ಯಾದಿ ವಾಕ್ಯವು ಪ್ರವೃತ್ತವಾಗಿದೆ. ಆದರಲ್ಲಿ ಯುವಾ ಸ್ಯಾತ್ ಇತ್ಯಾದಿಗಳಿಂದ ಮುಕ್ತರನ್ನೂ, ತಸ್ಯೇಯಂ ಇತ್ಯಾದಿಗಳಿಂದ ಅಮುಕ್ತರನ್ನೂ ವಿವಕ್ಷೆ ಮಾಡಿಕೊಂಡು ಹೇಳಲಾಗಿದೆ. ಹಾಗಾದರೆ ಯುವಾ ಸ್ಯಾತ್ ಇತ್ಯಾದಿಗಳಿಗೆ ಮುಕ್ತಾಮುಕ್ತ ವಿಷಯತ್ವವನ್ನು ಅಂಗೀಕರಿಸಿದರೆ ಏಕವಿಷಯತ್ವ ಪ್ರತೀತಿಗೆ ವಿರೋಧವು ಎಂಬ ಆಶಂಕೆ ನಿವಾರಣೆಗಾಗಿ ಅಮುಕ್ತಃ ಎನ್ನುವ ಬದಲು ಪೂರ್ವಾಭಾವವೆಂದು ಹೇಳಿದರು. ಒಬ್ಬನೇ ಚೇತನನು ಅವಸ್ಥಾಭೇದದಿಂದ ಯುವಾ ಇತ್ಯಾದಿ ಶಬ್ದಗಳಿಂದ ಪ್ರತಿಪಾದಿಸಲ್ಪಡುತ್ತಾನೆ. ಆದ್ದರಿಂದ ಏಕವಿಷಯತ್ವಪ್ರತೀತಿಯು ಅಯುಕ್ತವಲ್ಲ.

ಹೀಗೆಯೇ ವಾಜಸನೇಯ ಶ್ರುತಿಯಲ್ಲಿ 'ಸ ಯೋ ಹ ವೈ ಮನುಷ್ಯಾಣಾಂ' ಎನ್ನುವುದರಿಂದ ಆರಂಭಿಸಿ 'ಸಂಪನ್ನತಮಃ' ಎನ್ನುವ ತನಕ, ತೈತ್ತಿರೀಯ ಶ್ರುತಿಯಲ್ಲಿ 'ಯುವಾ ಸ್ಯಾತ್' ಎನ್ನುವುದರಿಂದ ಆರಂಭಿಸಿ 'ಪೂರ್ಣಾ ಸ್ಯಾತ್' ಎನ್ನುವ ತನಕ ಮುಕ್ತಾಮುಕ್ತ ಪರವಾಗಿ ವರ್ಣಿಸಲಾಗಿದೆ. ಇದರಿಂದ 'ಸ ಮನುಷ್ಯಾಣಾಂ ಪರಮ ಆನಂದೋऽಥ ಯೇ ಶತಂ ಮನುಷ್ಯಾಣಾಮಾನಂದಾಃ' ಎನ್ನುವ ವಾಕ್ಯವೂ ಹಾಗೂ 'ಏಕೋ ಮಾನುಷ ಆನಂದಸ್ತೇ ಯೇ ಶತಂ ಮಾನುಷಾ ಆನಂದಾಃ' ಎನ್ನುವ ವಾಕ್ಯವೂ ಕೂಡ ಮುಕ್ತಾಮುಕ್ತ ವಿಷಯಕವು ಎಂದು ಸಿದ್ಧವಾಗುವುದು. ಈಗ ತೈತ್ತಿರೀಯ ಶ್ರುತಿಯಲ್ಲಿರತಕ್ಕ 'ಸ ಏಕೋ ಮನುಷ್ಯಗಂಧರ್ವಾಣಾಮಾನಂದಃ ಶ್ರೋತ್ರಿಯಸ್ಯ ಚಾಕಾಮಹತಸ್ಯ' ಎನ್ನುವವರೆಗೆ ವ್ಯಾಖ್ಯಾನ ಮಾಡುತ್ತಾರೆ –

ಸ ಏಕ ಇತಿ ಸಂಸಾರಗತಮುಕ್ತ್ಯಾ ಸುಖಂ ಪುನಃ ।

ಶ್ರೋತ್ರಿಯಸ್ಯೇತಿ ವದತಿ ಮುಕ್ತಾಚ್ಛತಗುಣಾತ್ಮತಾಮ್ ॥ ೩೭ ॥

ತೈತ್ತಿರೀಯ ಶ್ರುತಿಯು 'ಸ ಏಕಃ' ಎನ್ನುವ ವಾಕ್ಯದಿಂದ ಸಂಸಾರಿಗಳಾದ ಮನುಷ್ಯರ ಸುಖಕ್ಕಿಂತ ನೂರು ಗುಣಗಳಷ್ಟು ಹೆಚ್ಚಿನ ಸುಖವನ್ನು ಸಂಸಾರಿಗಳಾದ ಮನುಷ್ಯಗಂಧರ್ವರಿಗೆ ಹೇಳಿ, ಪುನಃ ಶ್ರೋತ್ರಿಯಸ್ಯ ಎನ್ನುವ ವಾಕ್ಯದಿಂದ ಮುಕ್ತ ಮನುಷ್ಯನ ದೆಶೆಯಿಂದ ಮುಕ್ತ ಮನುಷ್ಯಗಂಧರ್ವನಿಗೆ ನೂರು ಗುಣಗಳಷ್ಟು ಹೆಚ್ಚಿನ ಸುಖವತ್ವವನ್ನು ಹೇಳುತ್ತದೆ.

ಇದೇ ನ್ಯಾಯದಿಂದ 'ತೇ ಯೇ ಶತಂ ಮನುಷ್ಯಗಂಧರ್ವಾಣಾಮಾನಂದಾಃ' ಇತ್ಯಾದಿ ವಾಕ್ಯವನ್ನೂ ವ್ಯಾಖ್ಯಾನ ಮಾಡಬೇಕು ಎಂಬ ಅಭಿಪ್ರಾಯದಿಂದ 'ಸಂಸಾರ ಗಾತ್' ಇತ್ಯಾದಿಯಾಗಿ ಹೇಳುತ್ತಾರೆ –

ಸಂಸಾರಗಾಚ್ಚ ಸಂಸಾರಗತಸ್ಯೈವ ಶತಾಧಿಕಮ್ ।

ಮುಕ್ತಾನ್ಮುಕ್ತಸ್ಯ ಯುಕ್ತಂ ಸ್ಯಾಚ್ಛ್ರುತ್ಯುಕ್ತಮಭಿವೀಕ್ಷತಃ ॥ ೩೮ ॥

ಸಂಸಾರಿಗಳಾದ ಮನುಷ್ಯಗಂಧರ್ವಾದಿಗಳ ಸುಖದ ದೆಶೆಯಿಂದ ಸಂಸಾರಗತ ದೇವಗಂಧರ್ವಾದಿಗಳಿಗೆ ನೂರು ಗುಣಗಳಷ್ಟು ಹೆಚ್ಚಿನ ಸುಖವನ್ನು ಹೇಳಿ, ಮುಕ್ತ ಮನುಷ್ಯಗಂಧರ್ವಾದಿಗಳ ಸುಖದ ದೆಶೆಯಿಂದ ನೂರು ಗುಣ ಹೆಚ್ಚಿನ ಸುಖವನ್ನು ಮುಕ್ತ ದೇವಗಂಧರ್ವಾದಿಗಳಿಗೆ ಹೇಳುತ್ತದೆ. ಶ್ರುತ್ಯುಕ್ತವಾದುದನ್ನು ಚೆನ್ನಾಗಿ ವಿಚಾರ ಮಾಡತಕ್ಕವರಿಗೆ ಈ ವ್ಯಾಖ್ಯಾನವು ಯುಕ್ತವೇ ಆಗುವುದು.

ಹೀಗೆ ಶ್ರುತಿಯಿಂದ ಮುಕ್ತಿಯಲ್ಲಿನ ತಾರತಮ್ಯವನ್ನು ಉಪಪಾದಿಸಿ ಈಗ ಯುಕ್ತಿಯಿಂದಲೂ ಸಮರ್ಥಿಸುತ್ತಾರೆ –

ಯುಕ್ತಂ ಚ ಸಾಧನಾಧಿಕ್ಯಾತ್ಸಾಧ್ಯಾಧಿಕ್ಯಂ ಸುರಾದಿಷು ।

ನಾಧಿಕ್ಯಂ ಯದಿ ಸಾಧ್ಯೇ ಸ್ಯಾತ್ಪ್ರಯತ್ನಃ ಸಾಧನೇ ಕುತಃ ॥ ೩೯ ॥

ದೇವಾದಿಗಳಲ್ಲಿ ಮನುಷ್ಯಾದಿಗಳ ದೆಶೆಯಿಂದ ಸಾಧನಾಧಿಕ್ಯದ ಕಾರಣದಿಂದ ಮುಕ್ತಿಯಲ್ಲಿನ ಫಲಾಧಿಕ್ಯವು ಅನುಮಿತವಾಗುವುದು. ದೇವಾದಿಗಳಿಗೆ ಸಾಧ್ಯವಾದ ಫಲದಲ್ಲಿ ಮನುಷ್ಯಾದಿಗಳ ದೆಶೆಯಿಂದ ಆಧಿಕ್ಯವು ಆಗದೇ ಹೋದರೆ, ಅಧಿಕವಾದ ಸಾಧನೆಯಲ್ಲಿ ಪ್ರಯತ್ನವು ಹೇಗೆ ಆಗುವುದು? ಅಧಿಕವಲ್ಲದ ಫಲಕ್ಕಾಗಿ ಅಧಿಕವಾದ ಪ್ರಯತ್ನ ಮಾಡುವವರು ಪ್ರೇಕ್ಷಾವಂತರೇ ಆಗುವುದಿಲ್ಲ. ಅಧಿಕವಾದ ಫಲವಿದ್ದರೆ ಮಾತ್ರ ಅದನ್ನು ಹೊಂದಲಿಕ್ಕಾಗಿ ಅಧಿಕವಾದ ಸಾಧನೆಯು ಯುಕ್ತವಾಗುವುದು ಎಂದು ತಾತ್ಪರ್ಯ.

ಪ್ರಮಾಣವಿಲ್ಲದಿರುವ ಪ್ರಯುಕ್ತ ಸ್ವರೂಪಾಸಿದ್ಧಿಯಾಗಲಿ ಎಂದರೆ –

ಯತ್ನಶ್ಚ ದೃಶ್ಯತೇ ತೇಷಾಂ ಮಹಾನೇವ ಮಹಾತ್ಮನಾಮ್ ।

ಮಹಾಫಲಕ್ಕೆ ಭಾಗಿಗಳಾದ ಮಹಾತ್ಮರಾದ ಆ ದೇವಾದಿಗಳಿಗೆ ಮನುಷ್ಯರಿಗಿಂತ ಮಹತ್ತರವಾದ ಪ್ರಯತ್ನವು ಅಂದರೆ ಮೋಕ್ಷಸಾಧಾನಾನುಷ್ಠಾನವು ಎನ್ನುವುದು ಪ್ರಮಾಣಗಳಿಂದ ಕಂಡುಬರುತ್ತದೆ.

ಈ ವಿಷಯದಲ್ಲಿ ವ್ಯಾಪ್ತಿಯನ್ನು ಉಪಪಾದಿಸುತ್ತಾರೆ –

ಯತ್ರ ಸಾಧನಬಾಹುಲ್ಯಂ ಸಾಧ್ಯಬಾಹುಲ್ಯಮತ್ರ ಚ ॥ ೪೦ ॥

ದೃಷ್ಟಂ ನಿಯಮತೋ ನೋ ಚೇನ್ನ ಯತ್ನಂ ಕುರ್ಯುರಾಜಸಾ ।

ಯಾವ ಪುರುಷನಲ್ಲಿ ಬೇರೆಯವರಿಗಿಂತ ಸಾಧನಾಧಿಕ್ಯವು ಕಂಡುಬರುವುದೋ ಅವನಲ್ಲಿ ಬೇರೆಯವರಿಗಿಂತ ಸಾಧ್ಯಫಲಾಧಿಕ್ಯವೂ ನಿಯಮವಾಗಿ ದೃಷ್ಟವಾಗಿದೆ. ಹಾಗೆ ಇಲ್ಲದೇ ಹೋದರೆ ಆಗ ಯಾರೂ ಕೂಡ ಚೆನ್ನಾಗಿ ಸಾಧನಾನುಷ್ಠಾನವನ್ನು ಮಾಡಲಾರರು.

ಉಪಾಸಾನಾದಿ ತಾರತಮ್ಯವಿದ್ದರೂ ಫಲದಲ್ಲಿ ತಾರತಮ್ಯವಿಲ್ಲದಿರುವುದರಿಂದ ತರ್ಕಸಹಿತಗಳಾದ ಅನುಮಾನಗಳು ಅಯುಕ್ತವೇ. ಸಾಧ್ಯವೇ ಇಲ್ಲವಾದ್ದರಿಂದ ಮುಕ್ತರಿಂದ ಅನುಷ್ಠಿತವಾದುದು ಸಾಧನವೇ ಆಗದು. ಅಮುಕ್ತರ ಅನುಷ್ಠಾನಕ್ಕೂ ಅದೇ ಗತಿಯೇ. ಹೀಗೆ ಆಶಂಕಿಸಿದರೆ –

ಕೃಚ್ಛ್ರೇಣ ಸಾಧನಾದೇವ ನ ಮುಕ್ತವದುದೀರ್ಯತೇ ॥ ೪೧ ॥

ಮುಮುಕ್ಷುಗಳು (ಅಮುಕ್ತರು) ಕಷ್ಟದಿಂದಲೇ ಸಾಧನೆ ಮಾಡುವರು. ಅವರ ಅನುಷ್ಠಾನವು ಮುಕ್ತರು ಮಾಡುವಂತೆ ಲೀಲಾರೂಪವಾದುದಲ್ಲ.

ಈ ವಿಷಯವನ್ನು ಆಗಮಗಳಿಂದ ಸಮರ್ಥಿಸುತ್ತಾರೆ –

ದಶಕಲ್ಪಂ ತಪಶ್ಚೀರ್ಣಂ ರುದ್ರೇಣ ಲವಣಾರ್ಣವೇ ।

ತ್ಯಕ್ತ್ವಾ ಸುಖಾನಿ ಸರ್ವಾಣಿ ಕ್ಲಿಷ್ಟೇನ ಲವಣಾಂಭಸಾ ॥ ೪೨ ॥

ರುದ್ರದೇವರು ಹತ್ತು ಕಲ್ಪಗಳಷ್ಟು ಕಾಲ (ದೈನಂದಿನ ಕಲ್ಪ – ಒಂದು ಕಲ್ಪ ಎಂದರೆ ಬ್ರಹ್ಮನ ಒಂದು ದಿವಸ) ಎಲ್ಲ ಸುಖಗಳನ್ನೂ ಬಿಟ್ಟು ಕಷ್ಟಸಾಧ್ಯವಾದ ತಪಸ್ಸನ್ನು ಲವಣಸಮುದ್ರದಲ್ಲಿ ಉಪ್ಪು ನೀರನ್ನು ಸೇವಿಸುತ್ತ ಮಾಡಿದರು.

ಶಕ್ರೇಣ ವರ್ಷಕೋಟೀಶ್ಚ ಧೂಮಃ ಪೀತೋಽತಿದುಃಖತಃ ।

ವರ್ಷಾಯುತಂ ಚ ಸೂರ್ಯೇಣ ತಪೋಽವಾಕ್ಶಿರಸಾ ಕೃತಮ್ ॥ ೪೩ ॥

ದೇವೇಂದ್ರನು ಕೋಟಿ ವರ್ಷಗಳಲ್ಲಿ ಅತಿದುಃಖದಿಂದ ಹೋಮಧೂಮವನ್ನು ಕುಡಿದು ಸಾಧನೆ ಮಾಡಿದನು. ಸೂರ್ಯನು ಸಾವಿರ ವರ್ಷಗಳಷ್ಟು ಕಾಲ ತಲೆ ಕೆಳಗಾಗಿ ನಿಂತು ತಪಸ್ಸು ಮಾಡಿದನು.

ಸುದುಃಖೇನ ಸುಖಂ ತ್ಯಕ್ತ್ವಾ ಧರ್ಮೇಣಾಕಾಶಶಾಯಿನಾ ।

ಪೀತಾ ಮರೀಚಯೋ ವರ್ಷಸಾಹಸ್ರಮತಿಸಾದರಮ್ ॥ ೪೪ ॥

ಯಮಧರ್ಮನು ಆಕಾಶಶಾಯಿಯಾಗಿ, ಅತಿದುಃಖದಿಂದ ಸುಖವನ್ನು ಬಿಟ್ಟು, ಸಾವಿರ ವರ್ಷ ಪರ್ಯಂತ ಬಹಳ ಆದರದಿಂದ ಕಿರಣಗಳನ್ನು ಕುಡಿದನು.

ಅತಿಕೃಚ್ಛ್ರೇಣ ಕುರ್ವಂತಿ ಯತ್ನಂ ಬ್ರಹ್ಮವಿದೋಽಪಿ ಚ ।

ಇತ್ಯೇತದಖಿಲಂ ಮೋಕ್ಷವಿಶೇಷಾಭಾವತಃ ಕಥಮ್ ॥ ೪೫ ॥

ಬ್ರಹ್ಮಜ್ಞಾನಿಗಳೂ ಕೂಡ ಅತಿಕಷ್ಟದಿಂದ ಪ್ರಯತ್ನವನ್ನು ಮಾಡುತ್ತಾರೆ. ಹೀಗೆ ಆಗಮಗಳಲ್ಲಿ ಹೇಳಲ್ಪಟ್ಟಿದೆ. ಇವೆಲ್ಲ ಬಹಳ ಕಷ್ಟವಾದ ಮೋಕ್ಷಸಾಧನಾನುಷ್ಠಾನವು, ಮೋಕ್ಷದಲ್ಲಿ ಫಲವಿಶೇಷವಿಲ್ಲದಿದ್ದರೆ, ಹೇಗೆ ಯುಕ್ತವಾಗುವುದು? ಇದರಿಂದ ಮೋಕ್ಷದಲ್ಲಿ ವಿಶೇಷವು ಸಿದ್ಧವಾಗುವುದು.

ಹಾಗಿದ್ದರೂ ಮುಕ್ತಿಯಲ್ಲಿ ತಾರತಮ್ಯ ಪ್ರತಿಪಾದಕ ಅನುಮಾನವು 'ಪರಮಂ ಸಾಮ್ಯ ಮುಪೈತಿ' ಇತ್ಯಾದಿ ಶ್ರುತಿಗಳಿಗೆ ವಿರುದ್ಧವಾದ ಪ್ರಯುಕ್ತ ಕಾಲಾತ್ಯಯ ಎಂಬ ದೋಷವು ಎಂದರೆ ಹಾಗೆ ಹೇಳಕೂಡದು. ಏಕೆಂದರೆ ಮುಕ್ತಿಯಲ್ಲಿ ಸಾಮ್ಯವೆಂಬ ಅರ್ಥವನ್ನು ಈ ಶ್ರುತಿಗೆ ಹೇಳಿದರೆ ತಾರತಮ್ಯವನ್ನು ಪ್ರತಿಪಾದಿಸುವ ಇತರ ಶ್ರುತಿ ಸ್ಮೃತಿಗಳಿಂದ ಬಾಧಕವು ಬರುವುದು. ಹಾಗಾದರೆ ಮುಕ್ತಿಯಲ್ಲಿ ತಾರತಮ್ಯವನ್ನು ಹೇಳುವ ಶ್ರುತಿಸ್ಮೃತಿಗಳು ಯಾವುವೆಂದರೆ ಅವನ್ನು ಪಠಿಸುತ್ತಾರೆ –

ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ ।

ಇತಿ ಮೋಕ್ಷವಿಶೇಷಶ್ಚ ಸ್ವಯಂ ಭಗವತೋದಿತಃ ।। ೪೬ ।।

'ಸಂಪದ್ಯೋಗ್ಯತಾ। ವಿಮೋಕ್ಷೋ ವಿಶಿಷ್ಟಮೋಕ್ಷಃ। ನಿಬಂಧೋ ನೀಚ ಸ್ಥಾನೇ ಅಂಧೇ ತಮಸಿ ಬಂಧಃ।' ದೇವತೆಗಳಿಗೆ ಸಂಬಂಧಿಸಿದ ಯೋಗ್ಯತೆಯು ವಿಶಿಷ್ಟವಾದ ಮೋಕ್ಷಕ್ಕಾಗಿಯೂ, ಅಸುರರಿಗೆ ಸಂಬಂಧಿಸಿದ ಯೋಗ್ಯತೆಯು ಅಂಧಂತಮಸ್ಸಿನಲ್ಲಿ ಬಂಧಕ್ಕಾಗಿಯೂ ಎಂಬುದಾಗಿ ಮತವು. ಹೀಗೆ ಮೋಕ್ಷವಿಶೇಷವಾದರೂ ಸ್ವಯಂ ಭಗವಂತನಿಂದ (ಭಗವದ್ಗೀತೆಯಲ್ಲಿ) ಹೇಳಲ್ಪಟ್ಟಿದೆ. ಮೋಕ್ಷದಲ್ಲಿ ತಾರತಮ್ಯ ವಿಶೇಷವು ಇಲ್ಲದಿದ್ದರೆ ಮೋಕ್ಷಕ್ಕೆ ವಿ ಎನ್ನುವ ಉಪಸರ್ಗವು ವ್ಯರ್ಥವೇ.

ತಮೇವ ಯೂಯಂ ಭಜತಾತ್ಮವೃತ್ತಿಭಿಃ

ಮನೋವಚಃ ಕಾಯಗುಣೈಃ ಸ್ವಕರ್ಮಭಿಃ ।

ಅಮಾಯಿನಃ ಕಾಮಾದುಷ್ಟಾಂಘ್ರಿಪಂಕಜಂ

ಯಥಾಧಿಕಾರಾವಸಿತಾರ್ಥಸಿದ್ಧಯೇ ।। ೪೭ ।।

ಇದು ಭಾಗವತದ ವಾಕ್ಯ. ಮುನಿಗಳನ್ನು ಕುರಿತು ಪೃಥುವಿನ ವಚನ. ಹೇ ಮುನಿಗಳೇ, ನೀವು ಕಪಟ ರಹಿತರಾಗಿ, ಕೃಷ್ಣಾರ್ಪಣ ಬುದ್ಧಿಯಿಂದ, ಅಂದರೆ ಶ್ರೀಹರಿಯಲ್ಲಿಯೇ ನೆಲೆಸಿರತಕ್ಕ ಮನಸ್ಸು, ವಚನ ಹಾಗೂ ಶರೀರದಿಂದ ಮಾಡಿದ ತಮ್ಮ ತಮ್ಮ ಕರ್ಮಗಳಿಂದ, ಯೋಗ್ಯತಾನುಸಾರ ನಿಶ್ಚಿತವಾದ ಮೋಕ್ಷರೂಪ ಪುರುಷಾರ್ಥದ ಸಿದ್ಧಿಗಾಗಿ, ಇಷ್ಟಾರ್ಥಗಳನ್ನು ನೀಡತಕ್ಕ ಪಾದಪದ್ಮವುಳ್ಳ ಆ ವಿಷ್ಣುವನ್ನೇ ಸೇವಿಸಿರಿ. ಯಥಾಧಿಕಾರಾವಸಿತಾರ್ಥ ಎನ್ನುವುದರಿಂದ ಮೋಕ್ಷದಲ್ಲಿ ತಾರತಮ್ಯವನ್ನೇ ಹೇಳಲಾಗಿದೆ.

ಅಕ್ಷಣ್ವಂತಃ ಕರ್ಣವಂತಃ ಸಖಾಯೋ

ಮನೋಜವೇಷ್ವಸಮಾ ಬಭೂವುಃ ।

ಆದಘ್ನಾಸ ಉಪಕಕ್ಷಾಸ ಉ ತ್ವೇ

ಹೃದಾ ಇವ ಸ್ನಾತ್ವಾ ಉ ತ್ವೇ ದದೃಶ್ರೇ ॥ ೪೮ ॥

ಇದು ಶ್ರುತಿವಾಕ್ಯ. ನಿರ್ದುಷ್ಟವಾದ ಕಣ್ಣುಗಳನ್ನೂ, ಕಿವಿಗಳನ್ನೂ ಹೊಂದಿರತಕ್ಕ (ಅಂದರೆ ಸಮಸ್ತ ಇಂದ್ರಿಯಫಲಗಳನ್ನೂ ಹೊಂದಿರತಕ್ಕ) ಪರಸ್ಪರ ಸಖರಾದ ಮುಕ್ತರು ಜ್ಞಾನಾದಿ ಗುಣಗಳಲ್ಲಿ ಅಸಮರು ಆದರು (ಇಲ್ಲಿ ಅಸಮ ಎನ್ನುವುದರಿಂದ ತಾರತಮ್ಯವು ಹೇಳಲ್ಪಟ್ಟಿದೆ). ಅದರಲ್ಲಿಯೂ ಕೆಲವರು ಮುಖದವರೆಗೆ ಸುಧಾ ಸಮುದ್ರದಲ್ಲಿ ಮುಳುಗಿ ಕ್ರೀಡಿಸುತ್ತ ಇರುವವರು ಆದರು. ಕ್ರೀಡೆ ಎನ್ನುವುದರಿಂದ ಒಂದೇ ಕಡೆಯಲ್ಲಿದ್ದರೂ ದೂರತ್ವವು ಹೇಳಿದಂತಾಯಿತು. ಮತ್ತೆ ಕೆಲವರು ಶ್ವೇತದ್ವೀಪದಲ್ಲಿರತಕ್ಕ ವನದಲ್ಲಿ ಕ್ರೀಡೆಯಲ್ಲಿ ಆಸಕ್ತರಾದವರೇ ಆದರು. ಇದರಿಂದ ಮಧ್ಯಮತ್ವವು ಹೇಳಲ್ಪಟ್ಟಿತು. ಕೆಲವರು ಪರಮಾತ್ಮನನ್ನು ಸ್ನಾನ ಮಾಡಲಿಕ್ಕೆ ಅರ್ಹವಾದ ಹ್ರದಗಳಂತೆ ಗಂಭೀರವಾಗಿ ನೋಡಿದರು. ಇದರಿಂದ ಅತಿಸಾಮೀಪ್ಯವು ಹೇಳಲ್ಪಟ್ಟಿದೆ.

ಇತ್ಯಾದೀನಿ ಚ ವಾಕ್ಯಾನಿ ತಾರತಮ್ಯಂ ವಿಮುಕ್ತಿಗಮ್ ।

ವ್ಯಕ್ತಂ ವದಂತಿ ತತ್ಕೇನ ಸಾಮ್ಯಂ ಮುಕ್ತೇಷು ಗಮ್ಯತೇ ॥ ೪೯ ॥

ಇತ್ಯಾದಿ ವಾಕ್ಯಗಳು ಮೋಕ್ಷದಲ್ಲಿರತಕ್ಕ ತಾರತಮ್ಯವನ್ನು ನಿರವಕಾಶವಾಗಿ ಹೇಳುತ್ತವೆ. ಆದಕಾರಣ ನಿರವಕಾಶ ಶ್ರುತಿ ಸ್ಮೃತಿಗಳಿಂದ ಬಾಧಿತವಾದುದರಿಂದ ಮುಕ್ತರಲ್ಲಿ ಸಾಮ್ಯವು ಯಾವುದರಿಂದಲೂ ತಿಳಿಯಲ್ಪಡುವುದಿಲ್ಲ. ಅಂದರೆ ಇಲ್ಲಿ ಉದಾಹರಿಸಲ್ಪಟ್ಟ ಪರಮಂ ಸಾಮ್ಯಮುಪೈತಿ ಎನ್ನುವ ವಾಕ್ಯವು ಸಾಮ್ಯ ಪ್ರತಿಪಾದಕವಲ್ಲವೆಂದು ತಾತ್ಪರ್ಯ.

ಹಾಗಾದರೆ ಆ ಶ್ರುತಿವಾಕ್ಯದ ಅರ್ಥವಾದರೂ ಏನು ಎಂದರೆ –

ದುಃಖಾದ್ಯಭಾವಸಾಮ್ಯಂ ಚ ಸಾಮ್ಯವಾಕ್ಯಾರ್ಥ ಈಯತೇ ।

ದುಃಖಾದಿಗಳ ಅಭಾವದಿಂದ ಸಾಮ್ಯವೂ, ಪರಮಾನಂದದಿಂದ ಸಾಮ್ಯವೂ ಸಾಮ್ಯ ವಾಕ್ಯಾರ್ಥವೆಂದು ಹೇಳಲ್ಪಡುತ್ತದೆ. 'ದುಃಖಾಭಾವಃ ಪರಾನಂದೋ ಲಿಂಗಭೇದಃ ಸಮಾ ಮತಾ' ಎಂಬುದಾಗಿ ಗೀತಾಭಾಷ್ಯದ ದ್ವಿತೀಯ ಅಧ್ಯಾಯದಲ್ಲಿ ಉಕ್ತವಾಗಿದೆ.

ಮತ್ತೆ ಈ ಅನುಮಾನವಾದರೂ ಉತ್ಪ್ರೇಕ್ಷಿತವಲ್ಲ. ಆಗಮದಿಂದ ಸಿದ್ಧವಾಗಿದೆ. ಅಲ್ಲಿ ಸಾಮ್ಯಶ್ರುತಿ ಬಾಧಿತತ್ವವೂ ಇರುವುದಿಲ್ಲ ಎಂದು ಹೇಳುತ್ತಾರೆ –

ಭಕ್ತ್ಯಾದಿಗುಣಸದ್ಭಾವೇ ಹ್ಯತುಲ್ಯತ್ವಂ ಚ ಭಾರತೇ ॥ ೫೦ ॥

ಉಕ್ತಂ ಸಾಧನವೈಚಿತ್ರ್ಯಮಪಿ ಸರ್ವತ್ರ ಕಥ್ಯತೇ ।

ತಾರತಮ್ಯದಿಂದ ಭಕ್ತಿ ಮೊದಲಾದ ಗುಣಗಳು ಇದ್ದಾಗಲೇ ಮೋಕ್ಷಫಲದಲ್ಲಿ ಅಸಾಮ್ಯವೆಂದು ಕೇವಲ ನಮ್ಮಿಂದ ಮಾತ್ರವಲ್ಲ, ಭಾರತದಲ್ಲಿಯೂ ಹೇಳಲ್ಪಟ್ಟಿದೆ. ಇದು ಪ್ರಸಿದ್ಧವು ಎಂದು ತಿಳಿಸಲಿಕ್ಕಾಗಿ ಹಿ ಶಬ್ದವು. 'ಸತಿ ಹಿ ಗುಣೇ ಪ್ರವದಂತ್ಯ ತುಲ್ಯತಾಂ' ಎಂದು ಶಾಂತಿಪರ್ವದಲ್ಲಿ ಉಕ್ತವಾಗಿರುವ ವಾಕ್ಯವನ್ನು ಇಲ್ಲಿ ಯೋಜಿಸಿ ಕೊಳ್ಳಬೇಕು. ಮತ್ತೆ ಸಾಧಕರಿಗೆ ಸಾಧನಗಳಲ್ಲಿ ವೈಲಕ್ಷಣ್ಯವು ಎಲ್ಲ ಗ್ರಂಥಗಳಲ್ಲಿಯೂ ಉಕ್ತವಾಗಿದೆ ಎನ್ನುತ್ತಾರೆ. ಸಾಧನತಾರತಮ್ಯ ವಿಷಯದಲ್ಲಿ ದುರ್ಜ್ಞೇಯಂ ಇತ್ಯಾದಿ ಪ್ರಮಾಣಗಳನ್ನು ಉದಾಹರಿಸುತ್ತಾರೆ.

ದುರ್ಜ್ಞೇಯಂ ಘೋರರೂಪಸ್ಯ ತ್ರೈಲೋಕ್ಯಧ್ವಂಸಿನಃ ಪ್ರಭೋಃ ॥ ೫೧ ॥

ದೈವತೈರ್ಮುನಿಭಿಃ ಸಿದ್ಧೈರ್ಮಹಾಯೋಗಿಭಿರೇವ ಚ ।

ಸರ್ವಸ್ವಾಮಿಯಾದ ನರಸಿಂಹದೇವರ ಧ್ಯಾನಚಕ್ರವು ಮಹಾಯೋಗಿಗಳಾದ ದೇವತೆಗಳು, ಮುನಿಗಳು, ಸಿದ್ಧರೇ ಮೊದಲಾದವರಿಂದಲೂ ಕೂಡ ತಿಳಿಯಲಿಕ್ಕೆ ಅಶಕ್ಯವು. ಏಕೆಂದರೆ ಆ ನರಸಿಂಹದೇವರ ರೂಪವು ಭಯಂಕರವೂ ಮೂರು ಲೋಕಗಳನ್ನು ನಾಶಮಾಡತಕ್ಕ ಸ್ವಭಾವವುಳ್ಳದ್ದೂ ಆಗಿರುವುದು.

ಮಹಾಯೋಗಿಗಳು ಎನ್ನುವುದನ್ನೇ ಅರ್ಥತಃ ವಿವರಿಸುತ್ತಾರೆ –

ನಿತ್ಯಯುಕ್ತೈರ್ಮಹಾಭಾಗೈರ್ವಿಮೋಹಕ್ಲೇಶಸಾಧ್ವಸೈಃ ॥ ೫೨ ॥

ಮಹೋತ್ಸಾಹೈರ್ಮಹಾಧೈರ್ಯೈಃ ಸತ್ವಸ್ಥೈರ್ವ್ಯವಸಾಯಿಭಿಃ ।

ಅತೀತಾನಾಗತಜ್ಞಾನಪ್ರಭಾವಾವ್ಯಯವೇದಿಭಿಃ ॥ ೫೩ ॥

ಶೌಚಸ್ವಾಧ್ಯಾಯಸಂತೋಷತಪಃ ಸತ್ವದಯಾನ್ವಿತೈಃ ।

ಸರ್ವದಾ ಧ್ಯಾನಾದಿಗಳಲ್ಲಿಯೇ ತೊಡಗಿರುವ, ಇಂದ್ರಿಯ ಜಯ ಮೊದಲಾದ ಮಹಾ ಭಾಗ್ಯವುಳ್ಳ, ಮಿಥ್ಯಾಜ್ಞಾನ ಅವಿದ್ಯಾದಿಗಳು ಹಾಗೂ ವಿಘ್ನಾದಿ ಭಯಗಳನ್ನು ಕಳೆದುಕೊಂಡಿರುವ, ಮಹಾಪ್ರಯತ್ನವುಳ್ಳ, ಮಹಾಧೈರ್ಯವುಳ್ಳ, ಯಾವಾಗಲೂ ಸತ್ವಗುಣಪ್ರಚುರರಾದ, ನಿಶ್ಚಯಬುದ್ಧಿಯುಳ್ಳ, ಭೂತಭವಿಷ್ಯತ್ಕಾಲಗಳ ಜ್ಞಾನವುಳ್ಳ ಹಾಗೂ ಭೂತಭವಿಷ್ಯತ್ಕಾಲೀನ ವಸ್ತುಗಳ ಸೃಷ್ಟಿ ಸಂಹಾರಗಳನ್ನು ತಿಳಿಯತಕ್ಕ ಸ್ವಭಾವವುಳ್ಳ, ಶೌಚ ಸ್ವಾಧ್ಯಾಯ ಸಂತೋಷ ತಪಸ್ಸು ಸತ್ಯ ದಯಾ ಇವುಗಳಿಂದ ಯುಕ್ತರಾದ ಮಹಾಭಾಗರು ದೇವತಾದಿಗಳು. ಆ ನರಸಿಂಹದೇವರ ಧ್ಯಾನಚಕ್ರವು ಇಂಥವರಿಂದಲೇ ತಿಳಿಯಲಿಕ್ಕೆ ಅಶಕ್ಯವೆಂದರೆ, ಇನ್ನು ಮನುಷ್ಯರಿಂದ ದುರ್ಜ್ಞೇವು ಎಂದು ಹೇಳಬೇಕೇನು?

ಕಿಮು ಮರ್ತ್ಯೈರ್ಭಯಭ್ರಾಂತಿಧ್ವಂಸಮೋಹರುಜಾನ್ವಿತೈಃ ॥ ೫೪ ॥

ಅಲ್ಪಾಯುರ್ವೀರ್ಯಧೀಸತ್ವವ್ಯವಸಾಯಶ್ರುತಿವ್ರತೈಃ ।

ಮನುಷ್ಯರು ಭಯ, ಭ್ರಾಂತಿ, ಧ್ವಂಸ ಅಂದರೆ ಮನೋವಿಶರಣ (ಮನಸ್ಸಿನಲ್ಲಿ ಕಳವಳ), ಅಜ್ಞಾನ, ರೋಗ ಇವುಗಳಿಂದ ಕೂಡಿರುವರು. ಅವರ ಆಯಷ್ಯ, ವೀರ್ಯ, ಬುದ್ಧಿ, ಬಲ, ನಿಶ್ಚಯಜ್ಞಾನ, ಶ್ರವಣ, ನಿಯಮ ಇವೆಲ್ಲವೂ ಅಲ್ಪವೇ ಆಗಿರುತ್ತವೆ. ಹೀಗೆ ಮನುಷ್ಯರಿಗೆ ದೇವಾದಿಗಳಿಗಿಂತ ಅಲ್ಪವಾದ ಸಾಧನವು ಎಂದು ವೈಹಾಯಸ ಸಂಹಿತಾ ವಾಕ್ಯದಿಂದ ಸ್ಪಷ್ಟವಾಗಿ ತಿಳಿದುಬರುವುದು.

ಕಸ್ತಂ ಮದಾಮದಂ ದೇವಂ ಮದನ್ಯೋ ಜ್ಞಾತುಮರ್ಹತಿ ॥ ೫೫ ॥

ಬ್ರಹ್ಮೈವ ಕಿಂಚಿಜ್ಜಾನಾತಿ ನ ತದನ್ಯೋ ಹಿ ಕಶ್ಚನ ।

ಕಸ್ತಂ ಎನ್ನುವುದು ಕಠೋಪನಿಷತ್ತಿನಲ್ಲಿನ ಯಮನ ವಾಕ್ಯ. ದೇವತೆಗಳಿಗೆ ಸುಖಕ್ಕೂ, ಅಸುರರಿಗೆ ದುಃಖಕ್ಕೂ ಕಾರಣನಾದುದರಿಂದ ಮದಾಮದ ಎಂದು ಹೇಳಿಸಿಕೊಳ್ಳುವ ಆ ಶ್ರೀಹರಿಯನ್ನು ಬ್ರಹ್ಮಾದಿಗಳನ್ನು ಹೊರತು ನನ್ನಿಂದ ಅನ್ಯನು ಯಾವನು ತಾನೆ ತಿಳಿಯಲಿಕ್ಕೆ ಅರ್ಹನಾಗುವನು. ಚತುರ್ಮುಖನೊಬ್ಬನೇ ಸ್ವಲ್ಪ ತಿಳಿಯುತ್ತಾನೆ. ಬ್ರಹ್ಮನಿಂದ ಇತರರಾದ ಯಾರೂ ತಿಳಿಯುವುದಿಲ್ಲ. ಆದುದರಿಂದ ಮದನ್ಯೋ ಎನ್ನುವುದಕ್ಕೆ ಬ್ರಹ್ಮಾದಿಗಳನ್ನು ಹೊರತು ಯಮನಿಂದ ಅನ್ಯನು ಎಂದು ವ್ಯಾಖ್ಯಾನ ಮಾಡಿದ್ದು.

ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ ॥ ೫೬ ॥

ಸುದುರ್ಲಭಃ ಪ್ರಶಾಂತಾತ್ಮಾ ಕೋಟಿಷ್ವಪಿ ಮಹಾಮತೇ ।

ಇದು ಮೋಕ್ಷದಲ್ಲಿಯೂ ತಾರತಮ್ಯವಿದೆ ಎಂದು ಪ್ರತಿಪಾದಿಸುವ ಭಾಗವತದ ವಾಕ್ಯ. ಮಹಾಜ್ಞಾನಿಯೇ, ಶರೀರಾದಿ ಅಭಿಮಾನ ರಹಿತರಾದ ಕೋಟಿ ಸಂಖ್ಯೆಯ ಜ್ಞಾನಿಗಳಲ್ಲಿಯೂ ನಾರಾಯಣನೊಬ್ಬನೇ ರಕ್ಷಕನೆಂಬುದಾಗಿ ಅನನ್ಯ ಭಕ್ತಿಯಿಂದ ನಾರಾಯಣನಲ್ಲಿಯೇ ನಿಶ್ಚಲವಾಗಿ ಮನಸ್ಸಿಟ್ಟವನು ಯಾವನೂ ಕೂಡ ಸಿಗುವುದಿಲ್ಲ. ನಾರಾಯಣಪರಾಯಣಃ ಮತ್ತು ಪ್ರಶಾಂತಾತ್ಮಾ ಎಂಬ ಎರಡು ವಿಶೇಷಣಗಳಿಂದ ವೈರಾಗ್ಯ ಭಕ್ತಿಗಳು ಹೇಳಲ್ಪಟ್ಟವು.

ಇಯಂ ವಿಸೃಷ್ಟಿರ್ಯತ ಆ ಬಭೂವ

ಯದಿ ವಾ ದಧೇ ಯದಿ ವಾ ನ ।

ಯೋ ಅಸ್ಯಾಧ್ಯಕ್ಷಃ ಪರಮೇ ವ್ಯೋಮನ್

ಸೋ ಅಂಗ ವೇದ ಯದಿ ವಾ ನ ವೇದ ॥ ೫೭ ॥

ಇದು ಋಗ್ವೇದದ ಮಂತ್ರ. ಪ್ರತ್ಯಕ್ಷಾದಿ ಸಿದ್ಧವಾದ ವಿವಿಧವಾದ ಈ ಸೃಷ್ಟಿಯು ಯಾವ ಹಿರಣ್ಯಗರ್ಭನಿಂದ ಚೆನ್ನಾಗಿ ಉಂಟಾಯಿತೋ ಅವನೇ ಈ ಪ್ರಪಂಚಕ್ಕೆ

ಅಧಿಪತಿ. ಅವನೂ ಕೂಡ ಪರಮಾತ್ಮನನ್ನು ಹೃದಯಾಕಾಶದಲ್ಲಿ ಧರಿಸುತ್ತಾನೋ ಅಥವಾ ಇಲ್ಲವೋ (ಅಂದರೆ ಧ್ಯಾನಮಾಡುತ್ತಾನೋ ಇಲ್ಲವೋ), ತಿಳಿಯುತ್ತಾನೋ ಅಥವಾ ಇಲ್ಲವೋ ಎಂದು ಶ್ರುತಿಯು ಹೇಳುತ್ತದೆ. ಇಡೀ ಪ್ರಪಂಚವನ್ನೇ ಸೃಷ್ಟಿ ಮಾಡಿ ಧರಿಸುವ ಚತುರ್ಮುಖಬ್ರಹ್ಮನು ಇತರರ ಅಪೇಕ್ಷೆಯಿಂದ ಪರಮಾತ್ಮನನ್ನು ಹೆಚ್ಚಾಗಿಯೇ ಧ್ಯಾನಿಸುವನು ಹಾಗೂ ತಿಳಿಯುವನು. ಹಾಗಿದ್ದರೂ ಪೂರ್ಣವಾಗಿ ಧ್ಯಾನಿಸಲಾರನು ಹಾಗು ತಿಳಿಯಲಾರನು. ಇದರಿಂದ ಪರಮಾತ್ಮನ ಶ್ರೇಷ್ಠತ್ವ ಜ್ಯೇಷ್ಠತ್ವಗಳು ತಿಳಿಯುವುದು. ಇಲ್ಲಿ ಅಂಗ ಎನ್ನುವುದು ಸಂಬೋಧನೆಯು.

ಯಃ ಸ್ವಾತ್ಮಮಾಯಾವಿಭವಂ ಸ್ವಯಂ ಗತೋ

ನಾಹಂ ನಭಸ್ವಾಂಸ್ತಥಾಪರೇ ಕುತಃ ।

ಬ್ರಹ್ಮಾಪಿ ಯಂ ವೇತ್ತಿ ನ ಚೇಹ ಸಮ್ಯಕ್

ಅನ್ಯೇ ಕುತೋ ದೇವಮುನೀಂದ್ರಮರ್ತ್ಯಾಃ ॥ ೫೮ ॥

ಯಃ ಸ್ವಾತ್ಮಮಾಯಾ ಇತ್ಯಾದಿ ಭಾಗವತವಾಕ್ಯಗಳಲ್ಲಿ ಕೈಮುತ್ಯನ್ಯಾಯದಿಂದ ಜ್ಞಾನತಾರತಮ್ಯವು ತಿಳಿಯಲ್ಪಡುತ್ತದೆ. ಶ್ರೀಹರಿಯು ತನ್ನ ಸ್ವರೂಪಮಹಿಮೆಯ ವಿಸ್ತಾರವನ್ನು ತಾನು ಮಾತ್ರ ತಿಳಿದಿರುವನು. ನಾನಾಗಲೀ ವಾಯುದೇವರಾಗಲೀ ಚೆನ್ನಾಗಿ ತಿಳಿದಿರುವುದಿಲ್ಲ. ಅಂದಮೇಲೆ ಇತರರು ಆ ಶ್ರೀಹರಿಯ ಅಗಾಧ ಮಹಿಮೆಯನ್ನು ತಿಳಿಯಲಾರರು ಎಂದು ಹೇಳಬೇಕೇನು? ಜೀವಕೋಟಿಯಲ್ಲಿ ಚತುರ್ಮುಖನೂ ಕೂಡ ಯಾರನ್ನು ತಿಳಿಯುತ್ತಾನೋ, ಚೆನ್ನಾಗಿ ತಿಳಿಯುವುದೇ ಇಲ್ಲವೋ, ಅವನಿಗಿಂತ ಜ್ಞಾನಾದಿ ಯೋಗ್ಯತೆಯಲ್ಲಿ ನ್ಯೂನರಾದ ದೇವತೆಗಳೂ, ಮುನಿಶ್ರೇಷ್ಠರೂ, ಮನುಷ್ಯರೂ ತಿಳಿಯುವುದಿಲ್ಲವೆಂದು ಏನು ಹೇಳಬೇಕು?

ನಮಸ್ತೇಽಮಿತತತ್ವಾಯ ಬ್ರಹ್ಮಾದೀನಾಂ ಚ ಸೂತಯೇ ।

ನಿರ್ಗುಣಾಯ ಚ ಸತ್ಯಾಷ್ಠಾಂ ನಾಹಂ ವೇದಾಪರೇ ಕುತಃ ॥ ೫೯ ॥

ಇದು ಬ್ರಹ್ಮದೇವರ ವಾಕ್ಯ. ಅಪರಿಮಿತ ಸ್ವರೂಪವುಳ್ಳ, ಬ್ರಹ್ಮಾದಿಗಳಿಗೆ ಕಾರಣನಾದ, ಸತ್ವಾದಿ ಪ್ರಾಕೃತಗುಣರಹಿತನಾದ ನಿನಗೆ ನಮಸ್ಕಾರವು. ಶ್ರೀಹರಿಯ ಅಗಾಧವಾದ ಮಹಿಮೆಯ ಏಕದೇಶವನ್ನು ನಾನು ತಿಳಿಯಲಾರೆನು. ಇತರರು ತಿಳಿಯುವುದಿಲ್ಲವೆಂದು ಹೇಳಬೇಕೇನು?

ನಾಹಂ ಪರಾಯುರ್ಋಷಯೋ ನ ಮರೀಚಿಮುಖ್ಯಾಃ

ಜಾನಂತಿ ಯದ್ವಿರಚಿತಂ ಖಲು ಸತ್ವಸಂಪ್ಲವಾಃ ।

ಯನ್ಮಾಯಯಾ ಮುಷಿತಚೇತಸ ಈಶದೈತ್ಯ-

ಮರ್ತ್ಯಾದಯಃ ಕಿಮುತ ಶಶ್ವದಭದ್ರವೃತ್ತಾಃ ॥ ೬೦ ॥

ಇದು ರುದ್ರದೇವರ ವಾಕ್ಯ. ಹೇ ಸ್ವಾಮಿಯೇ, ನಾನಾಗಲೀ, ಬ್ರಹ್ಮನಾಗಲೀ, ಮರೀಚಿಯೇ ಪ್ರಧಾನವಾಗಿವುಳ್ಳ ವಿಶೇಷವಾಗಿ ಸಾತ್ವಿಕರಾದ ಋಷಿಗಳಾಗಲೀ ಯಾರ ಚರಿತ್ರೆಯನ್ನು ತಿಳಿಯುವುದಿಲ್ಲವೋ, ಅಂಥ ಶ್ರೀಹರಿಯ ಮಾಯೆಯಿಂದ ಮೋಹಿತವಾದ ಮನುಸ್ಸುಳ್ಳ, ಯಾವಾಗಲೂ ಅಮಂಗಲ ಪ್ರವೃತ್ತಿವುಳ್ಳ ದೈತ್ಯರು ಮನುಷ್ಯರೇ ಮೊದಲಾದ ಚೇತನ ಸಮೂಹಗಳು ತಿಳಿಯುವುದಿಲ್ಲವೆಂದು ಹೇಳಬೇಕೇನು?

ಅಹಂ ಮಹೇಂದ್ರೋ ನಿರ್ಋತಿಃ ಪ್ರಚೇತಾಃ

ಸೋಮೋಽಗ್ನಿರೀಶಃ ಪವನೋಽರ್ಕೋ ವಿರಿಂಚಃ ।

ಆದಿತ್ಯವಿಶ್ವೇ ವಸವೋಽಥ ಸಾಧ್ಯಾಃ

ಮರುದ್ಗಣಾ ರುದ್ರಗಣಾಃ ಸಸಿದ್ಧಾಃ ॥ ೬೧ ॥

ಅನ್ಯೇ ಚ ಯೇ ವಿಶ್ವಸೃಜೋಽಮರೇಶಾಃ

ಭೃಗ್ವಾದಯೋಽಸ್ಪೃಷ್ಟರಜಸ್ತಮಸ್ಕಾಃ ।

ಯಸ್ಯೇಹಿತಂ ನ ವಿದುಃ ಸ್ಪೃಷ್ಟಮಾಯಾಃ

ಸತ್ವಪ್ರಧಾನಾ ಅಪಿ ಕಿಂ ತತೋಽನ್ಯೇ ॥ ೬೨ ॥

ಇದು ಯಮದೇವರ ವಚನ. ನಾನು, ದೇವೇಂದ್ರ, ನಿರ್ಋತಿ, ವರುಣ, ಕುಬೇರ, ಅಗ್ನಿ, ರುದ್ರ, ವಾಯು, ಸೂರ್ಯ, ಚತುರ್ಮುಖ, ಆದಿತ್ಯ ವಿಶ್ವೇದೇವತೆಗಳು, ಅಷ್ಟವಸುಗಳು, ಹಾಗೆಯೇ ಸಾಧ್ಯರು, ಮರುದ್ಗಣಗಳು, ರುದ್ರ ಗಣಗಳು, ಸಿದ್ಧರು, ಹಾಗೂ ಜಗತ್ಸೃಷ್ಟಿಮಾಡುವ ಇತರ ದೇವತೆಗಳ ಅಧಿಪತಿಗಳು, ಶುದ್ಧಸತ್ವರಾದ ಭೃಗ್ವಾದಿಗಳೂ ಶ್ರೀಹರಿಯ ಚೇಷ್ಟೆಯನ್ನು ತಿಳಿಯಲಾರರು ಎಂದ ಮೇಲೆ ಸತ್ವಗುಣವನ್ನೇ ಪ್ರಧಾನವಾಗಿ ಹೊಂದಿದ್ದರೂ ಮಾಯೆಯ ಸಂಪರ್ಕದಿಂದ ಅವರರಾದ ಇತರರು ತಿಳಿಯುವುದಿಲ್ಲವೆಂದು ಹೇಳಬೇಕೇನು?

ಸರ್ವಸ್ಯಾದೌ ಸ್ಮೃತೋ ಬ್ರಹ್ಮಾ ತಸ್ಮಾದ್ದೇವಾದನಂತರಃ ।

ಜಾನಾತಿ ದೇವಪ್ರವರಂ ಭೂಯಶ್ಚಾತೋಽಧಿಕಂ ನೃಪ ॥ ೬೩ ॥

ಇದು ಮೋಕ್ಷಧರ್ಮದ ವಚನ. ಹೇ ರಾಜನೇ, ಚತುರ್ಮುಖ ಬ್ರಹ್ಮನು ಸಮಸ್ತ ಪ್ರಪಂಚಕ್ಕೆ ಆದಿಪುರುಷನೆಂದು ಸ್ಮೃತನಾಗಿರುವನು. ಆದಪ್ರಯುಕ್ತ ತಾರತಮ್ಯದಲ್ಲಿ ಶ್ರೀಲಕ್ಷ್ಮೀನಾರಾಯಣರ ಅನಂತರ ಪ್ರಥಮ ಸ್ಥಾನದಲ್ಲಿರುವ ಚತುರ್ಮುಖನು, ದೇವಶ್ರೇಷ್ಠನಾದ ಶ್ರೀಹರಿಯನ್ನು ಸಮಸ್ತ ಜ್ಞಾನಿಸಮೂಹದ ದೆಶೆಯಿಂದ ಅತಿಶಯವಾಗಿ ಅಧಿಕನನ್ನಾಗಿ ತಿಳಿಯುತ್ತಾನೆ.

ನ ತ್ವಾಮತಿಶಯಿಷ್ಯಂತಿ ಮುಕ್ತಾವಪಿ ಕಥಂಚನ ।

ಮದ್ಭಕ್ತಿಯೋಗಾಜ್ಜ್ಞಾನಾಚ್ಚ ಸರ್ವಾನತಿಶಯಿಷ್ಯಸಿ ॥ ೬೪ ॥

ಇದು ಬ್ರಹ್ಮನ್ನು ಕುರಿತು ಭಗವಂತನ ವಚನ. ಮುಕ್ತಿಯಲ್ಲಿಯೂ ಯಾರೂ ಯಾವ ರೀತಿಯಿಂದಲೂ ನಿನ್ನನ್ನು ಅತಿಕ್ರಮಿಸುವುದಿಲ್ಲ. ನಿನಗೆ ನನ್ನಲ್ಲಿರುವ ಭಕ್ತಿಯೋಗದಿಂದಲೂ, ಜ್ಞಾನದಿದಂಲೂ, ನೀನು ಎಲ್ಲರನ್ನೂ ಅತಿಕ್ರಮಿಸಿರುವಿ.

ಯಥಾ ಭಕ್ತಿವಿಶೇಷೋಽತ್ರ ದೃಶ್ಯತೇ ಪುರುಷೋತ್ತಮೇ ।

ತಥಾ ಮುಕ್ತಿವಿಶೇಷೋಽಪಿ ಜ್ಞಾನಿನಾಂ ಲಿಂಗಭೇದನೇ ॥ ೬೫ ॥

ಈ ಸಂಸಾರದಲ್ಲಿ ಹೇಗೆ ಪುರುಷೋತ್ತಮನಾದ ಶ್ರೀಹರಿಯಲ್ಲಿ ಭಕ್ತಿವಿಶೇಷವು ಕಂಡುಬರುವುದೋ ಹಾಗೆಯೇ ಜ್ಞಾನಿಗಳಿಗೆ ಲಿಂಗದೇಹವು ಭಂಗವಾಗುತ್ತಿರಲು ಮುಕ್ತಿವಿಶೇಷವೂ ಕೂಡ ಕಂಡುಬರುವುದು.

ಸಾಯುಜ್ಯಂ ಸಮನುಪ್ರಾಪ್ತಾ ಅಪಿ ದೇವಾದಯೋಽಖಿಲಾಃ ।

ತಾರತಮ್ಯಾದ್ಧಿ ತಿಷ್ಠಂತಿ ತಾರತಮ್ಯಂ ಹಿ ಸಾಧನೇ ॥ ೬೬ ॥

ದೇವತೆಗಳೇ ಮೊದಲಾದವರೆಲ್ಲರೂ ಶ್ರೀಹರಿಯ ಸಾಯುಜ್ಯವನ್ನು ಚೆನ್ನಾಗಿ ಹೊಂದಿದರೂ ಕೂಡ ತಾರತಮ್ಯದಿಂದಲೇ ಇರುತ್ತಾರೆ. ಸಾಧನದಲ್ಲಿ ತಾರತಮ್ಯ ಎನ್ನುವುದು ಪ್ರಮಾಣಸಿದ್ಧವು.

ಈ ತಾರತಮ್ಯದ ವಿಷಯದಲ್ಲಿ ಭಗವದ್ಗೀತೆಯ 'ಮನುಷ್ಯಾಣಾಂ' ಇತ್ಯಾದಿ ವಾಕ್ಯಗಳನ್ನು ಪ್ರಮಾಣವನ್ನಾಗಿ ಉದಾಹರಿಸುತ್ತಾರೆ –

ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ ।

ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ ॥ ೬೭ ॥

ಸಹಸ್ರಾರು ಮನುಷ್ಯರ ಮಧ್ಯದಲ್ಲಿ ಎಲ್ಲೋ ಕೆಲವು ಮುಕ್ತಿಯೋಗ್ಯರು ಮಾತ್ರ ಜ್ಞಾನಕ್ಕಾಗಿ ಪ್ರಯತ್ನಿಸುತ್ತಾರೆ. ಹೀಗೆ ಪ್ರಯತ್ನ ಮಾಡುವವರಲ್ಲಿಯೂ ಕೆಲವರು ಮಾತ್ರ ಸಿದ್ಧಿಯನ್ನು ಹೊಂದುತ್ತಾರೆ. ಸಿದ್ಧಿ ಹೊಂದಿದವರಲ್ಲಿಯೂ ಕೆಲವರು ಮಾತ್ರ (ಬ್ರಹ್ಮರುದ್ರಾದಿಗಳು) ಪ್ರಾಚುರ್ಯದಿಂದ ಯಥಾರ್ಥವಾಗಿ ನನ್ನನ್ನು ತಿಳಿಯುತ್ತಾರೆ.

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।

ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ॥ ೬೮ ॥

ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।

ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತರೋ ಭುವಿ ॥ ೬೯ ॥

ಬಹಳ ಗೋಪ್ಯವಾದ ಈ ಗೀತಾಶಾಸ್ತ್ರವನ್ನು ಯಾವನು ನನ್ನ ಭಕ್ತರಲ್ಲಿ ಉಪದೇಶ ಮಾಡುವನೋ ಅವನು ನನ್ನಲ್ಲಿ ಶ್ರೇಷ್ಠವಾದ ಭಕ್ತಿಯನ್ನು ಮಾಡಿ ನನ್ನನ್ನೇ ಹೊಂದುತ್ತಾನೆ. ಇದರಲ್ಲಿ ಸಂದೇಹವಿಲ್ಲ. ಮನುಷ್ಯರಲ್ಲಿ ಹೀಗೆ ಉಪದೇಶ ಮಾಡುವ ಜ್ಞಾನಿಗಿಂತ ನನಗೆ ಅತ್ಯಂತ ಹೆಚ್ಚಿನ ಪ್ರಿಯತಮನು ಮತ್ತೊಬ್ಬನಿಲ್ಲ. ನನಗೆ ಅವನಿಗಿಂತ ಪ್ರಿಯತಮನಾದ ಮತ್ತೊಬ್ಬನು ಈ ಭೂಲೋಕದಲ್ಲಿ ಎಂದಿಗೂ ಆಗಲಾರನು.

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ ।

ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ॥ ೭೦ ॥

ಯಾರು ನಮ್ಮಿಬ್ಬರ ನಡುವಿನ ಸಂವಾದರೂಪವಾದ ಧರ್ಮಸಾಧನವಾದ ಈ ಗೀತಾಶಾಸ್ತ್ರವನ್ನು ಅಧ್ಯಯನ ಮಾಡುವನೋ, ಆತನಿಂದ ಜ್ಞಾನಾಖ್ಯ ಯಜ್ಞದಿಂದ ನಾನು ಪೂಜಿಸಿಕೊಳ್ಳಲ್ಪಡುತ್ತೇನೆ. ಇದೇ ನನ್ನ ಮತ.

ಶ್ರದ್ಧಾವಾನನಸೂಯಶ್ಚ ಶ್ರುಣುಯಾದಪಿ ಯೋ ನರಃ ।

ಸೋಽಪಿ ಮುಕ್ತಃ ಶುಭಾನ್ಲೋಕಾನ್ ಪ್ರಾಪ್ನುಯಾತ್ಪುಣ್ಯಕರ್ಮಣಾಂ ॥೭೧॥

ಆಸ್ತಿಕ್ಯಬುದ್ಧಿಯುಳ್ಳ ಹಾಗೂ ಅಸೂಯಾದಿ ದೋಷರಹಿತನಾದ ಯಾವ ಮನುಷ್ಯನು ಈ ಗೀತಾಶಾಸ್ತ್ರವನ್ನು ಕೇವಲ ಶ್ರವಣವನ್ನು ಮಾಡುತ್ತಾನೋ ಅವನೂ ಕೂಡ ಮುಕ್ತನಾಗಿ, ಪುಣ್ಯಕರ್ಮಗಳಿಂದ ಉತ್ತಮ ಲೋಕಗಳನ್ನು ಹೊಂದುವನು.

ಧ್ಯಾನೇನಾತ್ಮನಿ ಪಶ್ಯಂತಿ ಕೇಚಿದಾತ್ಮಾನಮಾತ್ಮನಾ ।

ಅನ್ಯೇ ಸಾಂಖ್ಯೇನ ಯೋಗೇನ ಕರ್ಮಯೋಗೇನ ಚಾಪರೇ ॥ ೭೨ ॥

ಅನ್ಯೇ ತ್ವೇವಮಜಾನಂತಃ ಶ್ರುತ್ವಾನ್ಯೇಭ್ಯ ಉಪಾಸತೇ ।

ತೇಽಪಿ ಚಾತಿತರಂತ್ಯೇವ ಮೃತ್ಯುಂ ಶ್ರುತಿಪರಾಯಣಾಃ ॥ ೭೩ ॥

ಕೆಲವರು(ಶ್ರವಣಾದಿಗಳನ್ನು ಹೊಂದಿದವರು) ಪರಮಾತ್ಮನನ್ನು ಧ್ಯಾನದಿಂದಲೇ ಮನಸ್ಸಿನಿಂದ ತಮ್ಮ ಹೃದಯದಲ್ಲಿ ನೋಡುತ್ತಾರೆ. ಇನ್ನೂ ಕೆಲವರು ಅಪರೋಕ್ಷ ಜ್ಞಾನರೂಪವಾದ ಯೋಗದಿಂದಲೂ, ಧ್ಯಾನದಿದಂಲೂ ನೋಡುತ್ತಾರೆ. ಶ್ರವಣಾದಿ ಗಳಿಲ್ಲದ ರಾಜಾದಿಗಳು ಕರ್ಮಯೋಗದಿಂದ, ಅಂದರೆ ಯಜ್ಞಾದಿ ಕರ್ಮಗಳ ಅನುಷ್ಠಾನದ ಮೂಲಕ ಭಗವದನುಗ್ರಹದಿಂದ, ಪಡೆದ ಧ್ಯಾನದಿಂದ ನೋಡುತ್ತಾರೆ. ಇತರರಾದ ಮನುಷ್ಯೋತ್ತಮರು, ಸ್ವಪ್ರತಿಭೆಯಿಂದ ಶ್ರೀಹರಿಯನ್ನು ತಿಳಿಯಲಿಕ್ಕೆ ಆಗದವರು, ಸ್ವೋತ್ತಮರಿಂದ ಶ್ರವಣ ಮಾಡಿ ಉಪಾಸನೆ ಮಾಡುತ್ತಾರೆ ಹಾಗೂ ಶ್ರೀಹರಿಯನ್ನು ನೋಡುತ್ತಾರೆ. ಅತ್ಯಲ್ಪವಾದ ಪ್ರತಿಭೆಯನ್ನು ಉಳ್ಳವರೂ ಕೂಡ ಬಹು ಶ್ರವಣದಿಂದ ಸಂಸಾರವನ್ನು ಅತಿಕ್ರಮಿಸಿಯೇ ತೀರುತ್ತಾರೆ. ಎಲ್ಲರಿಗೂ

ಶ್ರವಣವು ಅವಶ್ಯಕ. ಆದರಲ್ಲೂ ಅಲ್ಪಪ್ರತಿಭೆಯುಳ್ಳ ಮನುಷ್ಯರಿಗೆ ಅತಿ ಹೆಚ್ಚಿನ ಶ್ರವಣವು ಅತ್ಯವಶ್ಯಕವು. ಪ್ರತಿಭೆ ಅಥವಾ ಯೋಗ್ಯತೆಯ ತಾರತಮ್ಯಕ್ಕೆ ತಕ್ಕಂತೆ ಶ್ರವಣ ಮನನ ಧ್ಯಾನಗಳಲ್ಲಿ ತಾರತಮ್ಯ. ಅದಕ್ಕೆ ತಕ್ಕಂತೆ ದರ್ಶನದಲ್ಲಿ ತಾರತಮ್ಯ. ಹೀಗೆ ಸಾಧನ ತಾರತಮ್ಯಕ್ಕೆ ಅನುಗುಣವಾಗಿ ಸಾಧ್ಯದಲ್ಲಿ ತಾರತಮ್ಯ ಎನ್ನುವುದು ಮೇಲಿನ ಗೀತಾಶ್ಲೋಕಗಳ ಅಭಿಪ್ರಾಯ.

ಸುಸೂಕ್ಷ್ಮೈಃ ಇತ್ಯಾದಿ ವಚನದಿಂದ ಮುಕ್ತಿತಾರತಮ್ಯಕ್ಕೆ ಕಾರಣವಾದ ದರ್ಶನ ತಾರತಮ್ಯವನ್ನು ಹೇಳುತ್ತಾರೆ –

ಸುಸೂಕ್ಷ್ಮೈರಪ್ಯಶೇಷೈಶ್ಚ ವಿಶೇಷೈಃ ಸಹ ಪಶ್ಯತಿ ।

ಸ್ವಾತ್ಮಾನಂ ಭಗವಾನ್ವಿಷ್ಣುಃ ಸರ್ವರೂಪೋಽಪಿ ಸರ್ವದಾ ॥ ೭೪ ॥

ಸರ್ವತ್ರ ಚಾನ್ಯದಪ್ಯೇವಂ ತೇನಾದೃಷ್ಟಂ ನ ಹಿ ಕ್ವಚಿತ್ ।

ಭಗವಂತನಾದ ವಿಷ್ಣುವು ಯಾವಾಗಲೂ ಪೂರ್ಣಸ್ವರೂಪನಾಗಿದ್ದರೂ ಅತ್ಯಂತ ಸೂಕ್ಷ್ಮವಾದ ಎಲ್ಲ ವಿಶೇಷಗಳಿಂದ ಯುಕ್ತವಾಗಿ ತನ್ನ ಸ್ವರೂಪವನ್ನು ನೋಡುತ್ತಾನೆ. ಶ್ರೀಹರಿಯು ಎಲ್ಲ ಕಡೆಗಳಲ್ಲಿಯೂ ತನ್ನಿಂದ ಭಿನ್ನವಾದ ಇತರ ಜಗತ್ತನ್ನೂ ಹೀಗೇ ನೋಡುತ್ತಾನೆ. ಅವನಿಂದ ನೋಡಲ್ಪಡದೇ ಇದ್ದುದು ಎಲ್ಲಿಯೂ ಇಲ್ಲವೇ ಇಲ್ಲ.

ಸರ್ವತ್ರ ಸರ್ವದೈವೇಶಂ ಪಶ್ಯತ್ಯೇವ ರಮಾಪಿ ತು ॥ ೭೫ ॥

ನ ತು ಸರ್ವೈರ್ವಿಶೇಷೈಸ್ತಂ ಪಶ್ಯಂತ್ಯನ್ಯತೋಽಧಿಕಮ್ ।

ಸ್ವಾತ್ಮಾನಮನ್ಯಚ್ಚಾಶೇಷಂ ಪಶ್ಯತ್ಯೇವ ಹಿ ಸರ್ವದಾ ॥ ೭೬ ॥

ರಮಾದೇವಿಯು ಎಲ್ಲ ಕಡೆಗಳಲ್ಲಿಯೂ ಯಾವಾಗಲೂ ಪರಮಾತ್ಮನನ್ನು ನೋಡುತ್ತಾಳೆ. ಬ್ರಹ್ಮರುದ್ರಾದಿ ಜ್ಞಾನಿವರ್ಗದಿಂದ ಕಾಣಲ್ಪಡದೇ ಇರುವ ಹೆಚ್ಚಿನ ವಿಶೇಷಗಳಿಂದ ನೋಡುವುಳಾದರೂ, ಪರಮಾತ್ಮನು ತನ್ನನ್ನು ತಾನು ನೋಡುವಂತೆ ಎಲ್ಲ ವಿಶೇಷಗಳಿಂದ ನೋಡುವುದೇ ಇಲ್ಲ. ವಿಷ್ಣುವಿನಿಂದಲೂ ತನ್ನಿಂದಲೂ ಇತರವಾದ ಎಲ್ಲ ಜಗತ್ತನ್ನೂ ಯಾವಾಗಲೂ ನೋಡಿಯೇ ನೋಡುವಳು.

ಬ್ರಹ್ಮಾ ತು ಸರ್ವಗಂ ಪಶ್ಯೇದ್ಗುಣಾನಪ್ಯನ್ಯತೋಽಧಿಕಮ್ ।

ನ ತು ಸರ್ವೇಷು ಕಾಲೇಷು ತಥಾ ಪಶ್ಯತ್ಯಮುಕ್ತಿಗಃ ॥ ೭೭ ॥

ಬ್ರಹ್ಮನಾದರೂ ಸರ್ವತ್ರ ಇರತಕ್ಕ ಶ್ರೀಹರಿಯನ್ನು ನೋಡುವನು. ತನ್ನಿಂದ ಇತರರಾದ ಸರಸ್ವತಿ ಮೊದಲಾದವರು ಕಾಣುವುದಕ್ಕಿಂತ ಅಧಿಕವಾಗಿ ಶ್ರೀಹರಿಯ ಗುಣಗಳನ್ನು ಕಾಣುವನು. ಅಮುಕ್ತ ಬ್ರಹ್ಮನು ಎಲ್ಲ ಕಾಲಗಳಲ್ಲಿ ಮುಕ್ತಬ್ರಹ್ಮನಿಂದ ನೋಡಲ್ಪಡುವಂತೆ ನೋಡುವುದಿಲ್ಲ.

ಮುಕ್ತಸ್ತು ಸರ್ವದಾ ಪಶ್ಯೇತ್ಸರ್ವಗತ್ವೇನ ಚಾಪಿ ತು ।

ನ ರಮಾವದ್ವಿಶೇಷಾಣಾಂ ದರ್ಶನಂ ಶಕ್ನುಯಾತ್ಕ್ವಚಿತ್ ।। ೭೮ ।।

ಮುಕ್ತ ಬ್ರಹ್ಮನಾದರೂ ಯಾವಾಗಲೂ ಸರಸ್ವತ್ಯಾದಿಗಳಿಗೆ ಕಾಣುವುದಕ್ಕಿಂತ ಅಧಿಕವಾದ ವ್ಯಾಪ್ತತ್ವದಿಂದಲೂ ಗುಣಗಳಿಂದಲೂ ಶ್ರೀಹರಿಯನ್ನು ನೋಡುವನು. ಆದರೆ ರಮಾದೇವಿಯು ಕಾಣುವಷ್ಟು ಅಧಿಕವಾದ ವಿಶೇಷಗಳಿಂದ ಶ್ರೀಹರಿಯನ್ನು ನೋಡಲು ಬ್ರಹ್ಮನಿಗೆ ಎಂದಿಗೂ ಶಕ್ಯವಾಗದು.

ಸ್ವಾತ್ಮಾನಮನ್ಯಚ್ಚ ಸದಾ ವಿಶೇಷೈರಖಿಲೈರಪಿ ।

ಪಶ್ಯತ್ಯಂಜಸ್ತಥಾ ವಾಣೀ ವಿಶೇಷಾಂಸ್ತಾವತೋ ನ ತು ।। ೭೯ ।।

ತ್ರೈಗುಣ್ಯಾತ್ಪರತಃ ಪಶ್ಯೇದ್ವ್ಯಾಪ್ತಂ ಶತಗುಣಂ ಹರಿಮ್ ।

ಹಾಗೆಯೇ ಸರಸ್ವತಿಯು ಎಲ್ಲ ವಿಶೇಷಗಳಿಂದಲೂ ಯಾವಾಗಲೂ ಚೆನ್ನಾಗಿ ಶ್ರೀಹರಿಯ ಸ್ವರೂಪವನ್ನು, ಅವನಿಂದ ಇತರವಾದುದನ್ನೂ ನೋಡುತ್ತಾಳೆ. ಆದರೆ ಲಕ್ಷ್ಮಿಯಿಂದ ಕಾಣಲ್ಪಡುವಷ್ಟು ವಿಶೇಷಗಳನ್ನು ಬ್ರಹ್ಮನು ಹೇಗೆ ಕಾಣಲಾರನೋ ಹಾಗೆಯೇ ಬ್ರಹ್ಮನಿಂದ ದೃಷ್ಟವಾದಷ್ಟು ವಿಶೇಷಗಳನ್ನು ಸರಸ್ವತಿಯು ಕಾಣಲಾರಳು. ಬ್ರಹ್ಮಾಂಡ ಪರಿಮಿತ ದೇಶದಿಂದ ಆರಂಭಿಸಿ ಮಹದಾದಿ ಆವರಣ ರೂಪವಾದ ತ್ರೈಗುಣ್ಯದ ಮೇಲೆ ಶತಗುಣ ಪರ್ಯಂತ ದೇಶದಲ್ಲಿ ವ್ಯಾಪ್ತನಾದ ಶ್ರೀಹರಿಯನ್ನು ನೋಡುವಳು.

ಗಿರಿಶೋ ಗರುಡಶ್ಚೈವ ತಮೋಮಾತ್ರಗಂ ಹರಿಮ್ ।। ೮೦ ।।

ಪಶ್ಯೇದ್ವಿಶೇಷಾನಪಿ ಹಿ ವಾಣೀದೃಷ್ಟಾನ್ನ ಪಶ್ಯತಿ ।

ರುದ್ರನೂ ಗರುಡನೂ ಕೂಡ ತಮೋಗುಣದಿಂದ ಪರಿಮಿತವಾದ ದೇಶ ಪರ್ಯಂತ ವ್ಯಾಪ್ತನಾದ ಶ್ರೀಹರಿಯನ್ನು ನೋಡುವರು. ಆದರೆ ಸರಸ್ವತಿಯಿಂದ ಕಾಣಲ್ಪಡುವಷ್ಟು ವಿಶೇಷಗಳನ್ನು ನೋಡಲಾರರು.

ಉಮಾ ಸುಪರ್ಣೀ ಚ ಮಹತ್ತತ್ತ್ವಂ ಯಾವತ್ಪ್ರಪಶ್ಯತಿ ।। ೮೧ ।।

ರುದ್ರದೃಷ್ಟಾನ್ ವಿಶೇಷಾಂಶ್ಚ ನೈವ ಪಶ್ಯೇತ್ಕದಾಚನ ।

ಪಾರ್ವತಿಯೂ ಸುಪರ್ಣಿಯೂ ಕೂಡ ಮಹತ್ತತ್ತ್ವದವರೆಗೆ ವ್ಯಾಪ್ತನಾದ ಶ್ರೀಹರಿಯನ್ನು ನೋಡುತ್ತಾರಾದರೂ, ರುದ್ರನು ನೋಡುವಷ್ಟು ವಿಶೇಷಾಂಶಗಳನ್ನು ಎಂದಿಗೂ ನೋಡುವುದೇ ಇಲ್ಲ.

ಸ್ವರೂಪಮನ್ಯರೂಪಂ ಚ ಮುಕ್ತಾ ದೇವಾಃ ಸಮಸ್ತಶಃ ।। ೮೨ ।।

ಜಾನಂತೀಂದ್ರಶ್ಚ ಕಾಮಶ್ಚ ಬ್ರಹ್ಮ ಯಾವದಹಂಕೃತಿಃ ।

ಪಶ್ಯಂತೋ ಮನುದಕ್ಷಾದ್ಯಾ ಬುದ್ಧಿತತ್ತ್ವಸ್ಥಿತಂ ಹರಿಮ್ ।। ೮೩ ।।

ಮುಕ್ತರಾದ ದೇವತೆಗಳು ತಮ್ಮ ಸ್ವರೂಪವನ್ನೂ ತಮಗಿಂತ ಅಧಮರಾದವರ ಸ್ವರೂಪವನ್ನೂ ತಿಳಿಯುತ್ತಾರೆ. ಇಂದ್ರನೂ ಕಾಮನೂ ಕೂಡ ಅಹಂಕಾರ ತತ್ವದ ಪರ್ಯಂತ ಪರಬ್ರಹ್ಮನನ್ನು ನೋಡುತ್ತಾರೆ. ಮನು, ದಕ್ಷಪ್ರಜಾಪತಿ ಮುಂತಾದವರು ಬುದ್ಧಿತತ್ವದ ವರೆಗೆ ವ್ಯಾಪಿಸಿರುವ ಶ್ರೀಹರಿಯನ್ನು ನೋಡುತ್ತಾರೆ.

ಪಶ್ಯಂತಿ ಸೋಮಸೂರ್ಯೌ ತು ಮನಃಸ್ಥಂ ಪರಮೇಶ್ವರಮ್ ।

ಅನ್ಯೇ ಭೂತಸ್ಥಿತಂ ವಿಷ್ಣುಂ ದೇವಾಃ ಪಶ್ಯಂತಿ ಸರ್ವದಾ ॥ ೮೪ ॥

ಬಹುಸಾಹಸ್ರವರ್ಷೇಣ ಮಹತ್ತತ್ವೇ ಕ್ವಚಿತ್ ಕ್ವಚಿತ್ ।

ಚಂದ್ರಸೂರ್ಯರಾದರೂ ಮನಸ್ತತ್ವ ಪರ್ಯಂತ ವ್ಯಾಪಿಸಿರುವ ಶ್ರೀಹರಿಯನ್ನು ನೋಡುತ್ತಾರೆ. ಇತರ ದೇವತೆಗಳು ಯಾವಾಗಲೂ ಪಂಚಭೂತ ಪರಿಮಿತವಾದ ದೇಶದಲ್ಲಿರತಕ್ಕ ವಿಷ್ಣುವನ್ನು ನೋಡುತ್ತಾರೆ. ಅನೇಕ ಸಾವಿರ ವರ್ಷಗಳ ಸಾಧನಾ ವಿಶೇಷದಿಂದ ಕೆಲವು ಕಾಲಗಳಲ್ಲಿ ಮಹತ್ತತ್ವದವರೆಗೂ ವ್ಯಾಪಿಸಿರತಕ್ಕ ವಿಷ್ಣುವನ್ನು ನೋಡುತ್ತಾರೆ.

ಅನ್ಯೇ ಚೈವ ಯಥಾಯೋಗಮಂಡಾಂತರ್ವರ್ತಿನಂ ಹರಿಮ್ ॥ ೮೫ ॥

ಶ್ವೇತದ್ವೀಪಪತಿ ಚೈವ ಹೃದ್ಯೇವಾನ್ಯೇ ತು ಕೇಚನ ।

ಕದಾಚಿದೇವ ತತ್ರಾಪಿ ಕೇಚಿತ್ಪಶ್ಯಂತಿ ಕೇಶವಮ್ ॥ ೮೬ ॥

ಇನ್ನೂ ಕೆಲವರು ಯೋಗ್ಯತಾನುಸಾರವಾಗಿ ಬ್ರಹ್ಮಾಂಡದೊಳಗೆ ಇರತಕ್ಕ ಶ್ರೀಹರಿಯನ್ನು ನೋಡುತ್ತಾರೆ. ಮತ್ತೆ ಕೆಲವರು ಶ್ವೇತದ್ವೀಪಪತಿ ಶ್ರೀಹರಿಯನ್ನು ಹೃದಯದಲ್ಲಿಯೇ ನೋಡುತ್ತಾರೆ. ಹೃದಯದಲ್ಲಿಯೂ ಕೂಡ ಕೆಲವರು ಒಮ್ಮೊಮ್ಮೆ ಮಾತ್ರ ಕೇಶವನನ್ನು ನೋಡುತ್ತಾರೆ.

ಉಮಾ ಯಾವದನಂತಾಂಶಾನ್ ಪೂರ್ವದೃಷ್ಟೇಭ್ಯ ಏವ ತು ।

ವಿಶೇಷಾನ್ವಾಸುದೇವಸ್ಯ ಪಶ್ಚಾದುಕ್ತಾನ್ವಿಚಕ್ಷತೇ ॥ ೮೭ ॥

ಶಕ್ರಕಾಮಾದಯಶ್ಚೈವ ವಿಶೇಷಾನ್ ಬ್ರಹ್ಮಣಿ ಸ್ಥಿತಾನ್ ।

ಉಮಾದಿಭಿಃ ಪ್ರಬುದ್ಧೇಭ್ಯಃ ಶತಾಂಶಾನೇವ ಚಕ್ಷತೇ ॥ ೮೮ ॥

ಇತ್ಯಾದಿವೇದಸ್ಮೃತಿಗವಚನೇಭ್ಯೋ ಯಥಾರ್ಥತಃ ।

ತಾರತಮ್ಯಂ ಚ ಮುಕ್ತಾನಾಂ ಸಾಧನಾನಾಂ ಚ ದೃಶ್ಯತೇ ॥ ೮೯ ॥

ಸಾಧ್ಯಸಾಧನವೈರೂಪ್ಯಮದೃಷ್ಟಂ ಕೇನ ಕಲ್ಪ್ಯತೇ ।

ಪಾರ್ವತಿಗಿಂತ ಹಿಂದೆ ಹಿಂದೆ ಹೇಳಲ್ಪಟ್ಟವರು ತಮ್ಮ ಹಿಂದಿನವರಿಂದ

ಕಾಣಲ್ಪಟ್ಟ ವಾಸುದೇವನ ಗುಣಗಳಲ್ಲಿ ಅನಂತಾಂಶದಷ್ಟು ವಿಶೇಷವನ್ನು ಮಾತ್ರ ಕಾಣುತ್ತಾರೆ. ಇಂದ್ರಕಾಮಾದಿಗಳಾದರೂ ಪಾರ್ವತಿ ಮೊದಲಾದವರಿಂದ ಚೆನ್ನಾಗಿ ತಿಳಿಯಲ್ಪಟ್ಟ ಶ್ರೀಹರಿಯ ಗುಣಗಳಲ್ಲಿ ನೂರು ಅಂಶದಷ್ಟನ್ನೇ ಕಾಣುತ್ತಾರೆ.

ಇಲ್ಲಿ ಉದಾಹರಿಸಲಾದ ವೇದ ಹಾಗೂ ಸ್ಮೃತಿಗಳಲ್ಲಿರತಕ್ಕ ವಚನಗಳಿಂದ ಯಥಾರ್ಥವಾಗಿಯೇ ಮುಕ್ತರಿಗೂ ಸಾಧನಗಳಿಗೂ ತಾರತಮ್ಯವು ಕಂಡು ಬರುತ್ತದೆ. ಹೀಗಿರುವಾಗ ಎಲ್ಲಿಯೂ ಕಂಡುಬರದ ಸಾಧ್ಯಸಾಧನಗಳ ವೈರೂಪ್ಯವು ಯಾವ ಕಾರಣದಿಂದ ಶಂಕಿಸಲ್ಪಡುತ್ತದೆ? ಸಾಧನದಲ್ಲಿ ವೈಚಿತ್ರ್ಯವಿದ್ದರೆ ಸಾಧ್ಯದಲ್ಲಿಯೂ ವೈಚಿತ್ರ್ಯವಿರುವುದಾಗಿ ಲೋಕದಲ್ಲಿ ಕಂಡಿದೆ. ಸಾಧನದಲ್ಲಿ ವೈಚಿತ್ರ್ಯವಿದ್ದರೂ ಸಾಧ್ಯದಲ್ಲಿ ವೈಚಿತ್ರ್ಯವಿರುವುದಿಲ್ಲ ಎಂದು ಹೇಳುವುದು ಅಪ್ರಾಮಾಣಿಕ ಎಂದು ಭಾವ.

ವೈಷಮ್ಯಂ ನಿರ್ಘೃಣತ್ವಂ ಚ ತೇನ ಸ್ಯಾತಾಂ ಪರಸ್ಯ ಚ ॥ ೯೦ ॥

ಸಾಪೇಕ್ಷತ್ವಾದಿತಿ ಚ ತೌ ವಿದ್ಯಾಧೀಶೇನ ವಾರಿತೌ ।

ಸಾಧ್ಯಸಾಧನವೈರೂಪ್ಯದಿಂದ ಈಶ್ವರನಿಗೆ ವೈಷಮ್ಯವೂ, ದಯಾರಾಹಿತ್ಯವೂ ಬರಬೇಕಾಗುವುದು. ಆದ್ದರಿಂದ ವಿದ್ಯಾಧೀಶರಾದ ವೇದವ್ಯಾಸರಿಂದ ಸಾಪೇಕ್ಷತ್ವಾತ್ ಎನ್ನುವ ಸೂತ್ರದಿಂದ, ಕರ್ಮಸಾಪೇಕ್ಷತ್ವವನ್ನು ಹೇಳುವ ಮೂಲಕ, ಆ ವೈಷಮ್ಯ ನೈರ್ಘೃಣ್ಯಗಳು ನಿವಾರಿಸಲ್ಪಟ್ಟವು.

ತಾರತಮ್ಯಾತ್ಸಾಧನಾನಾಂ ಸಾಧ್ಯತಾದೃಕ್ತ್ವಮೀಶತಃ ॥ ೯೧ ॥

ಅವೈಷಮ್ಯಾದಿಹೇತುಃ ಸ್ಯಾತ್ಸದೈವ ಪರಮೇಶ್ವರೇ ।

ಶ್ರೀಹರಿಯು ನಿಯಮೇನ ಸಾಧನಗಳ ತಾರತಮ್ಯಕ್ಕೆ ಅನುಗುಣವಾಗಿ ಸಾಧ್ಯದಲ್ಲಿಯೂ ತಾರತಮ್ಯವನ್ನು ಉಂಟುಮಾಡುವುದರಿಂದ, ಅದು ಅವನಲ್ಲಿ ವೈಷಮ್ಯಾದಿ ದೋಷಗಳ ಅಭಾವಕ್ಕೆ ಕಾರಣವಾಗುವುದು.

ಸಾಧನಭೂತ ಸಂಸ್ಕಾರರೂಪವಾದ ಪೂರ್ವಕರ್ಮಗಳ ಅಪೇಕ್ಷೆಯಿಂದ ಸೂತ್ರಕಾರರು ಶ್ರೀಹರಿಯಲ್ಲಿ ವೈಷಮ್ಯಾದಿಗಳ ನಿರಾಕರಣೆ ಮಾಡಿದ್ದು ವ್ಯರ್ಥವೇ. ಫಲದಲ್ಲಿ ವೈಷಮ್ಯಾದಿಗಳು ಪರಿಹೃತವಾದರೂ, ಸಾಧನಾದಿಗಳಲ್ಲಿ ಪರಹರಿಸಲಿಕ್ಕೆ ಅಶಕ್ಯವಾಗಿದೆ. ಹೇಗೆಂದರೆ – ಸಾಧನಾದಿಗಳಲ್ಲಿ ಪರಮೇಶ್ವರನಿಗೆ ಪ್ರೇರಕತ್ವವು ಇದೆಯೋ, ಇಲ್ಲವೋ? ಇಲ್ಲವೆನ್ನುವ ಪಕ್ಷದಲ್ಲಿ ಪರಮೇಶ್ವರತ್ವಕ್ಕೆ ಹಾನಿಯು. ಇದೆ ಎನ್ನುವ ಪಕ್ಷದಲ್ಲಿ, ನಿಷ್ಕಾರಣವಾಗಿ ವಿಚಿತ್ರ ಸಾಧನೆಗಳನ್ನು ಮಾಡಿಸುವುದರಿಂದ ವೈಷಮ್ಯಾದಿಗಳ ನಿವಾರಣೆ ಹೇಗೆ ಸಾಧ್ಯವಾಗುವುದು? ಎಂದು ಆಶಂಕಿಸಿದರೆ, ಅದನ್ನು ಸೂತ್ರಕಾರರೇ ಪರಿಹರಿಸುತ್ತಾರೆ ಎಂದು ಹೇಳುತ್ತಾರೆ –

ಸ್ವಾತಂತ್ರ್ಯೇ ವಿದ್ಯಮಾನೇಪಿ ಸಾಧನಾದೌ ಪರೇಶಿತುಃ ॥ ೯೨ ॥

ಅಪೇಕ್ಷ್ಯನಾದಿವೈಚಿತ್ರ್ಯಂ ನ ದೋಷ ಇತಿ ತದ್ವಚಃ ।

ಪರಮೇಶ್ವರನಿಗೆ ಸಾಧನಾದಿಗಳ ಪ್ರೇರಕತ್ವದಲ್ಲಿ ಸ್ವಾತಂತ್ರ್ಯವಿದ್ದರೂ ಕೂಡ, ಸಾಧನೆಗಳಲ್ಲಿರುವ ಅನಾದಿಯಾದ ವೈಚಿತ್ರ್ಯವನ್ನು ಅಪೇಕ್ಷಿಸಿಕೊಂಡು ಪ್ರೇರಣೆ ಮಾಡುವುದರಿಂದ, ಅವನಿಗೆ ವೈಷಮ್ಯಾದಿ ದೋಷವು ಬರುವುದಿಲ್ಲ ಎಂಬುದಾಗಿ ಸೂತ್ರಕಾರರ ವಚನವು ಇದೆ.

ಹಾಗಾದರೆ ಹೀಗೆ ಎಲ್ಲ ಕಡೆಯಲ್ಲಿಯೂ ಕರ್ಮಸಾಪೇಕ್ಷವಾಗಿ ಫಲವನ್ನು ನೀಡುವುದರಿಂದ ಶ್ರೀಹರಿಗೆ ಸ್ವಾತಂತ್ರಹಾನಿಯು ಬರಬೇಕಾಗುವುದು ಎಂದರೆ, ಸ್ವಾತಂತ್ರ್ಯ ಎನ್ನುವ ವಚನದಿಂದಲೇ ಆ ಶಂಕೆಯನ್ನೂ ಪರಿಹರಿಸುತ್ತಾರೆ. ಶ್ರೀಹರಿಗೆ ಸಾಧನಾದಿಗಳಲ್ಲಿ ಸ್ವಾತಂತ್ರ್ಯವಿದ್ದರೂ ಕೂಡ ತನ್ನ ಇಚ್ಛೆಯಿಂದಲೇ ಅನಾದಿಯಾದ ಸಾಧನವೈಚಿತ್ರ್ಯವನ್ನು ಅಪೇಕ್ಷಿಸಿಕೊಂಡು ಪ್ರೇರಕತ್ವವು ಎನ್ನುವ ಅರ್ಥವನ್ನು ಪ್ರತಿಪಾದಿಸುವ ಸೂತ್ರಕಾರರ ವಚನವಿದೆ ಎಂದು ಹೇಳುತ್ತ, ಕ್ರಮವಾಗಿ ಎರಡು ಸೂತ್ರಗಳನ್ನು ಪಠಿಸುತ್ತಾರೆ –

ನಾನಾದಿತ್ವಾದಿತಿ ಹ್ಯುಕ್ತಮುಪಪದ್ಯತ ಇತ್ಯಪಿ ॥ ೯೩ ॥

ಅದರಲ್ಲಿ ಮೊದಲನೆಯ ದೋಷವನ್ನು ಪರಿಹರಿಸುವುದಕ್ಕಾಗಿ 'ನ ಕರ್ಮ ವಿಭಾಗಾದಿತಿ ಚೇನ್ನಾನಾದಿತ್ವಾತ್' ಎನ್ನುವ ಸೂತ್ರವು. ಎರಡನೆಯ ದೋಷ ಪರಿಹಾರಕ್ಕಾಗಿ 'ಉಪಪದ್ಯತೇ ಚಾಪ್ಯುಪಲಭ್ಯತೇ ಚ' ಎನ್ನುವ ಸೂತ್ರವು.

ಹೀಗೆ ಅನುಮಾನಕ್ಕೆ ಅನ್ಯಥಾಸಿದ್ಧಿಯನ್ನು ನಿರಾಕರಿಸಿ, ಬಾಧಕಪ್ರತಿರೋಧವನ್ನು ನಿರಾಕರಿಸುತ್ತಾರೆ –

ಅಪೇಕ್ಷ್ಯೋಪಾಯವೈಷಮ್ಯಮುಪೇಯಸ್ಯ ತಥಾ ಸ್ಥಿತಿಃ ।
ಮಯಾ ಕಯಾ ವಿರುದ್ಧಾ ಸ್ಯಾದ್ರಾಜಾದಾವಪಿ ದೃಶ್ಯತೇ ॥ ೯೪ ॥

ಸಾಧನವೈಷಮ್ಯವನ್ನು ಅಪೇಕ್ಷಿಸಿಕೊಂಡು ಸಾಧ್ಯವೈಷಮ್ಯವು ಈಶ್ವರನಿಂದ ಮಾಡಲ್ಪಡುತ್ತದೆ ಎನ್ನುವುದು ಯಾವ ಪ್ರಮಾಣದಿಂದ ವಿರುದ್ಧವಾಗುವುದು? ಯಾವ ಪ್ರಮಾಣದಿಂದಲೂ ವಿರೋಧವಿಲ್ಲ ಎಂದು ತಾತ್ಪರ್ಯ. ಪರಮಂ ಸಾಮ್ಯಂ ಇತ್ಯಾದಿ ಶ್ರುತಿಯೂ ಮೇಲೆ ಹೇಳಿದ ಸಿದ್ಧಾಂತಕ್ಕೆ ವಿರುದ್ಧವಾಗಿಲ್ಲ ಎನ್ನುವುದು ಹಿಂದಿನ ವ್ಯಾಖ್ಯಾನದಿಂದಲೇ ಸಿದ್ಧವಾಗಿದೆ. ಅನುಮಾನಾದಿಗಳಿಗೆ ವ್ಯಾಪ್ತಿಜ್ಞಾನಕ್ಕಾಗಿ ದೃಷ್ಟಾಂತವನ್ನು ಹೇಳುತ್ತಾರೆ – ವಿವೇಕವುಳ್ಳ ರಾಜಾದಿಗಳು ಸೇವೆಗೆ ತಕ್ಕಂತೆ ಫಲವನ್ನು ಕೊಡುವುದೂ, ವಿವೇಕವಿಲ್ಲದಿದ್ದರೆ ಸೇವೆಗೆ ಅನುಗುಣವಾದ ಫಲವನ್ನು ಕೊಡದಿರುವ ವೈಷಮ್ಯವೂ ಲೋಕದಲ್ಲಿ ಕಂಡುಬರುವುದು.

ಸಾಧ್ಯಸಾಧನಗಳಲ್ಲಿ ವೈರೂಪ್ಯ ಕಲ್ಪಿಸಿದರೆ ಬಾಧಕಾಂತರವನ್ನು ಹೇಳುತ್ತಾರೆ –

ತ್ಯಾಗೋ ದೃಷ್ಟಸ್ಯ ಚಾದೃಷ್ಟಕಲ್ಪನೇತಿ ಸುದುಷ್ಕರೌ ।
ಮಾಯಿಭ್ಯೋಽನ್ಯೇನ ಕೇನಾಪಿ ತತ್ಕಿಮನ್ಯೈಶ್ಚ ವಾದಿಭಿಃ ॥ ೯೫ ॥

ಮಾಯಿನೋಽತ್ರಾನುಗಮ್ಯಂತೇ ಶ್ರುತಹಾನ್ಯಶ್ರುತಗ್ರಹೌ ।

ಅಪ್ಯತ್ರ ಮಾಯಿನಾಂ ಲಿಂಗೇ ತತ್ಕೇ ದೋಷಾಸ್ತತೋಽಧಿಕಾಃ ॥ ೯೬ ॥

ಸಾಧ್ಯಸಾಧನಗಳಲ್ಲಿ ವೈರೂಪ್ಯ ಕಲ್ಪಿಸುವುದರಿಂದ ಪ್ರಮಾಣದೃಷ್ಟವಾದುದನ್ನು ಪರಿತ್ಯಾಗ ಮಾಡುವುದೂ ಅದೃಷ್ಟವಾದುದನ್ನು ಕಲ್ಪಿಸುವುದೂ ಹೀಗೆ ಎರಡು ರೀತಿಯ ದೋಷಗಳು ಬರುತ್ತವೆ. ಮಾಯಾವಾದಿಗಳಲ್ಲದೆ ಬೇರೆ ಯಾರಿಂದಲೂ ಈ ದೋಷಗಳು ಅಂಗೀಕರಿಸಲಿಕ್ಕೆ ಅಸಾಧ್ಯವು. ಮಾಯಾವಾದಿಗಳು ದೃಷ್ಟವಾದ ಪ್ರಪಂಚಕ್ಕೆ ಸತ್ಯತ್ವಾದಿಗಳನ್ನು ತ್ಯಾಗ ಮಾಡಿ, ಅದೃಷ್ಟವಾದ ಅನಿರ್ವಾಚ್ಯತ್ವಾದಿಗಳನ್ನು ಕಲ್ಪಿಸುತ್ತಾರೆ. ಆದಕಾರಣ ಅವರಿಗೆ ದೃಷ್ಟತ್ಯಾಗ, ಅದೃಷ್ಟಕಲ್ಪನಾದಿ ದೋಷಗಳು ಬರುತ್ತವೆ. ಈ ವಿಷಯದಲ್ಲಿ ಮಾಯಾವಾದಿಗಳು ಇತರ ವಾದಿಗಳಿಂದ ಅನುಸರಿಸಲ್ಪಡುತ್ತಾರೋ ಏನು? ದೃಷ್ಟತ್ಯಾಗಾದಿಗಳನ್ನು ದೂಷಿಸತಕ್ಕ ಇತರ ವಾದಿಗಳೂ ಈ ವಿಷಯದಲ್ಲಿ ದೃಷ್ಟತ್ಯಾಗಾದಿಗಳನ್ನು ಮಾಡುವುದಾದರೆ ಸ್ವವಚನ ವಿರೋಧವು ಬರುವುದು. ಸಾಧ್ಯಸಾಧನಗಳಿಗೆ ಸಾರೂಪ್ಯವು ಶ್ರುತವಾದುದರಿಂದ, ಅದರಲ್ಲಿ ವೈರೂಪ್ಯವನ್ನು ಅಂಗೀಕರಿಸಿದರೆ, ಮಾಯಿಗಳಿಗೆ ಜ್ಞಾಪಕಗಳಾದ ಶ್ರುತಾರ್ಥಪರಿತ್ಯಾಗ, ಅಶ್ರುತಾರ್ಥಸ್ವೀಕಾರ ಎಂಬ ದೋಷಗಳೂ ಕೂಡ ಬರುತ್ತವೆ. ಮಾಯಾವಾದಿಗಳು ಶ್ರುತನಾದ ಸರ್ವಜ್ಞತ್ವಾದಿ ಯುಕ್ತನಾದ ಬ್ರಹ್ಮನನ್ನು ತ್ಯಜಿಸಿ ಅಶ್ರುತನಾದ ನಿರ್ಗುಣ ಬ್ರಹ್ಮನನ್ನು ಅಂಗೀಕರಿಸುತ್ತಾರೆ. ದೃಷ್ಟತ್ಯಾಗಾದಿಗಳಿಗಿಂತ ಅಧಿಕವಾದ ದೋಷಗಳು ಯಾವುದೂ ಇಲ್ಲ.

ಹಾಗಾದರೆ ಮುಕ್ತರು ತಾರತಮ್ಯ ಯುಕ್ತರಾಗಿದ್ದರೆ ಆಗ ಪರಸ್ಪರ ದ್ವೇಷವಂತರು ಆಗಬೇಕಾಗುವುದು ಎಂಬ ಪ್ರತಿಕೂಲ ತರ್ಕವನ್ನು ನಿರಾಕರಿಸುತ್ತಾರೆ –

ನಿಃಶೇಷಗತದೋಷಾಣಾಂ ಬಹುಭಿರ್ಜನ್ಮಭಿಃ ಪುನಃ ।

ಸ್ಯಾದಾಪರೋಕ್ಷ್ಯಂ ಹಿ ಹರೇರ್ದ್ವೇಷೇರ್ಷ್ಯಾದಿಸ್ತತಃ ಕುತಃ ॥ ೯೭ ॥

ಬಹುಜನ್ಮಗಳ ಸಾಧನೆಯಿಂದ ಎಲ್ಲ ದೋಷಗಳನ್ನು ಕಳೆದುಕೊಂಡು ಪುನಃ ಶ್ರವಣಾದಿಗಳುಳ್ಳ ಜ್ಞಾನಿಗಳಿಗೆ ಶ್ರೀಹರಿಯ ಅಪರೋಕ್ಷವು ಆಗುವುದು. ಆದ್ದರಿಂದ, ಅಜ್ಞಾನಾದಿ ದೋಷಗಳು ಇಲ್ಲದಿರುವುದರಿಂದ, ಮುಕ್ತರಲ್ಲಿ ತಾರತಮ್ಯವಿದ್ದರೂ ದ್ವೇಷ ಅಸೂಯ ಇತ್ಯಾದಿಗಳು ಉಂಟಾಗಲು ಸಾಧ್ಯವಿಲ್ಲ. ಲೌಕಿಕರಲ್ಲಿ ದ್ವೇಷ ಅಸೂಯ ಮುಂತಾದವು ಕಂಡುಬರಲು ಅವರಲ್ಲಿರುವ ಅಜ್ಞಾನಾದಿ ದೋಷಗಳೇ ಕಾರಣವೇ ಹೊರತು ತಾರತಮ್ಯವಲ್ಲವೆಂದು ತಿಳಿಯಬೇಕು. ಎಲ್ಲೆಲ್ಲಿ ದೋಷಿತ್ವವೋ ಅಲ್ಲಲ್ಲಿ ದ್ವೇಷಾದಿಮತ್ವವು ಎಂಬ ವ್ಯಾಪ್ತಿಯಿದೆ. ಮುಕ್ತರಲ್ಲಿ ದೋಷವಿಲ್ಲವಾದ್ದರಿಂದ ದ್ವೇಷಾದಿಗಳು ಇಲ್ಲವೆಂದು ಅಭಿಪ್ರಾಯ.

ದೋಷಾದಿಗಳಿಗೇ ದ್ವೇಷಾದಿಗಳಲ್ಲಿ ಪ್ರಯೋಜಕತ್ವವು ಎಂಬ ಅರ್ಥವನ್ನು ಪರರಿಂದಲೂ ಸ್ವೀಕಾರ ಮಾಡಿಸುವುದಕ್ಕಾಗಿ ಪ್ರತಿಬಂಧಿಯನ್ನು ಹೇಳುತ್ತಾರೆ –

ಭವೇಯುರ್ಯದಿ ಚೇರ್ಷ್ಯಾದ್ಯಾಃ ಸಮೇಷ್ವಪಿ ಕುತೋ ನ ತೇ ।

ತಪ್ಯಮಾನಾಃ ಸಮಾನ್ ದೃಷ್ಟ್ವಾ ದ್ವೇಷೇರ್ಷ್ಯಾದಿಯುತಾ ಅಪಿ ॥ ೯೮ ॥

ದೃಶ್ಯಂತೇ ಬಹವೋ ಲೋಕೇ ದೋಷಾ ಏವಾತ್ರ ಕಾರಣಮ್ ।

ಮುಕ್ತರಲ್ಲಿ ತಾರತಮ್ಯವನ್ನು ಅಂಗೀಕರಿಸುವುದರಿಂದ ಅಸೂಯಾದಿಗಳು ಉಂಟಾಗುತ್ತವೆ ಎಂದು ಆಪಾದಿಸುವುದಾದರೆ, ಸಾಮ್ಯವನ್ನು ಅಂಗೀಕರಿಸಿದರೂ ಆ ದೋಷಗಳು ಏಕೆ ಬರಲಾರವು ? ಏಕೆಂದರೆ ಲೋಕದಲ್ಲಿ ಸಮಾನಿಕರನ್ನು ನೋಡಿ ದುಃಖಪಡತಕ್ಕವರು, ದ್ವೇಷ ಅಸೂಯೆ ಮುಂತಾದ ದೋಷಗಳಿಂದ ಕೂಡಿದವರೂ ಕೂಡ ಲೋಕದಲ್ಲಿ ಬಹುಮಂದಿ ಕಾಣಲ್ಪಡುತ್ತಾರೆ. ಆದ್ದರಿಂದ ದ್ವೇಷಾದಿಗಳಿಗೆ ದೋಷಗಳೇ ಕಾರಣವೆಂದು ತೀರ್ಮಾನವಾಯಿತು.

ಯದಿ ನಿರ್ದೋಷತಾ ತತ್ರ ಕಿಮಾಧಿಕ್ಯೇನ ದೂಷ್ಯತೇ ॥ ೯೯ ॥

ಯದ್ಯನ್ಯದರ್ಶನಾಭಾವಾದೀರ್ಷ್ಯಾದಿರ್ವಿನಿವಾರ್ಯತೇ ।

ಹೀಗೆ ದೋಷಾದಿಗಳಿಗೆ ದ್ವೇಷಾದಿ ಕಾರಣತ್ವವಿರುವುದರಿಂದ, ಮುಕ್ತರಲ್ಲಿ ದೋಷಗಳೇ ಇಲ್ಲವಾದ್ದರಿಂದ, ನೀಚೋಚ್ಚಭಾವವನ್ನು ಒಪ್ಪಿದರೂ ಯಾವುದೇ ದೂಷಣವೂ ಇರುವುದಿಲ್ಲ. ಸಾಮ್ಯ ನಿಮಿತ್ತಕ ದ್ವೇಷಾದಿಗಳನ್ನು ನಿರ್ದೋಷತ್ವದಿಂದ ನಿವಾರಣೆ ಮಾಡಿದ್ದರೆ ಹಿಂದೆ ಹೇಳಿದ್ದು ಯುಕ್ತವಾಗುತ್ತಿತ್ತು ಎಂದು ಆಶಂಕಿಸಿದರೆ, ಮುಕ್ತನಿಗೆ ಮುಕ್ತಿಯಲ್ಲಿ ತನಗೆ ಸಮಾನಿಕರಾದ ಅನ್ಯ ಮುಕ್ತರ ದರ್ಶನವೇ ಇರುವುದಿಲ್ಲ. ಆದ್ದರಿಂದ ಮುಕ್ತಿಯಲ್ಲಿ ಸಮಾನಿಕರ ದರ್ಶನದಿಂದ ದ್ವೇಷಾದಿಗಳು ಉಂಟಾಗುವ ಪ್ರಸಕ್ತಿಯೇ ಇರುವುದಿಲ್ಲ.

ಹೀಗೆ ದರ್ಶನವೇ ದ್ವೇಷಾದಿಗಳಿಗೆ ಕಾರಣವೆಂದು ಅಂಗೀಕರಿಸಿದರೆ, ಕೇವಲ ತಾರತಮ್ಯವಿರುವುದೇ ದ್ವೇಷಾದಿಗಳಿಗೆ ಕಾರಣವಲ್ಲ. ಮತ್ತೆ ತನಗಿಂತ ಅಧಿಕರನ್ನು ನೋಡೋಣವೇ ದ್ವೇಷಾದಿಗಳಿಗೆ ಕಾರಣವು ಎಂದಾಗುವುದು. ಮುಕ್ತನು ತನಗಿಂತ ಅಧಿಕರಾದ ಅನ್ಯ ಮುಕ್ತರನ್ನು ನೋಡುವುದಿಲ್ಲವಾದ್ದರಿಂದ ದ್ವೇಷಾದಿಗಳ ಪ್ರಸಕ್ತಿಯು ಇಲ್ಲವೆಂದು ಏಕೆ ಹೇಳಬಾರದು ಎಂದರೆ –

ಅದರ್ಶನಾದರತ್ಯಾದಿಃ ಕಥಂ ತೇನ ನಿವಾರ್ಯತೇ ॥ ೧೦೦ ॥

ಬ್ರಹ್ಮಣೋಽಪ್ಯರತಿರ್ದೃಷ್ಟಾ ಪೂರ್ವಮೇಕಾಕಿನಃ ಶ್ರುತೌ ।

ಹೀಗೆ ಅನ್ಯದರ್ಶನಾಭಾವದಿಂದ ದ್ವೇಷಾದಿಗಳನ್ನು ನಿವಾರಣೆ ಮಾಡುವುದಾದರೆ ದರ್ಶನಾಭಾವದಿಂದ ಪ್ರಸಕ್ತವಾಗುವ ಸುಖಾಭಾವ, ಆಲಸ್ಯ ಭಯ ಮುಂತಾದವು ಹೇಗ ನಿವಾರಿಸಲ್ಪಡುತ್ತವೆ ? ಏಕೆಂದರೆ ಆದಿಕಾಲದಲ್ಲಿ ಏಕಾಕಿಯಾದ ಬ್ರಹ್ಮನಿಗೂ ಸುಖಾಭಾವ, ಭಯಾದಿಗಳ ಪ್ರಸಕ್ತಿಯು ಶ್ರುತಿಗಳಲ್ಲಿ ದೃಷ್ಟವಾಗಿದೆ.

'ಸ ವೈ ನೈವ ರೇಮೇ ತಸ್ಮಾದೇಕಾಕೀ ನ ರಮತೇ ಸ ದ್ವಿತೀಯಮೈಚ್ಛತ್' ಇತ್ಯಾದಿ ಶ್ರುತಿಯನ್ನು ಉದಾಹರಿಸುತ್ತಾರೆ –

ನೈವ ರೇಮೇ ಸ ಚೈಕಾಕೀ ತಸ್ಮಾನ್ನ ರಮತೇ ಕ್ವಚಿತ್ ॥ ೧೦೧ ॥

ದ್ವಿತೀಯಮೈಚ್ಛತ್ತೇನಾಸಾವಿತಿ ಶ್ರುತಯ ಊದಿರೇ ।

ಏಕಾಕಿಯಾದ ಬ್ರಹ್ಮನು ಕ್ರೀಡಿಸಲಿಲ್ಲ. ಆದ್ದರಿಂದ ಏಕಾಕಿಯಾದರೆ ಈಗಲೂ ಎಲ್ಲಿಯೂ ಯಾವನೊಬ್ಬನೂ ಸುಖ ಪಡುವುದೇ ಇಲ್ಲ. ಆದಕಾರಣ ಬ್ರಹ್ಮನು ಎರಡನೆಯ ವಸ್ತುವನ್ನು ಇಚ್ಛಿಸಿದನು. ಹೀಗೆ ಶ್ರುತಿಗಳು ಹೇಳಿದವು.

ಕೇವಲ ಎರಡನೆಯ ವಸ್ತುವಿನ ಅದರ್ಶನವೇ ಅರತ್ಯಾದಿಗಳಿಗೆ ಕಾರಣವೆಂದು ಹೇಳುವುದು ಯುಕ್ತವಲ್ಲ. ಏಕೆಂದರೆ ಲೋಕದಲ್ಲಿ ಅನ್ಯದರ್ಶನದಲ್ಲಿ ಇಚ್ಛೆಯಿದ್ದಾಗ ಹಾಗೆ ದರ್ಶನವಾಗದಿದ್ದರೆ ದುಃಖಾದಿಗಳ ಪ್ರಸಕ್ತಿಯು ಕಂಡಿದೆ. ಆದರೆ ಮುಕ್ತನಿಗೆ ಅನ್ಯದರ್ಶನದಲ್ಲಿ ಇಚ್ಛೆಯೇ ಇಲ್ಲ. ಆದ್ದರಿಂದ ಮುಕ್ತನಿಗೆ ದುಃಖಾದಿಗಳ ಅಭಾವವು ಎಂದರೆ –

ಯದೀಚ್ಛಾ ನೈವ ತತ್ರಾಸ್ತೀತ್ಯೇವ ತತ್ಕಲ್ಪ್ಯತೇ ಮೃಷಾ ॥ ೧೦೨ ॥

ಶ್ರುತ್ಯುಕ್ತ ನಿರ್ದೋಷತೈವಂ ಕಿಂ ನಾಂಗೀಕ್ರಿಯತೇ ಸ್ವಯಮ್ ।

ಮುಕ್ತಿಯಲ್ಲಿ ಅನ್ಯದರ್ಶನ ವಿಷಯದಲ್ಲಿ ಇಚ್ಛೆಯು ಇರುವುದೇ ಇಲ್ಲ ಎಂದು ಪ್ರಮಾಣವಿಲ್ಲದೆಯೇ ಕಲ್ಪಿಸುವುದಾದರೆ, ಇದೇರೀತಿ 'ಭಿದ್ಯತೇ ಹೃದಯಗ್ರಂಥಿಃ' ಇತ್ಯಾದಿ ಶ್ರುತಿಗಳಲ್ಲಿ ಸಾಕ್ಷಾತ್ತಾಗಿ ಹೇಳಲ್ಪಟ್ಟ ದೋಷಾದಿಗಳ ಅಭಾವವನ್ನು ಏಕೆ ಅಂಗೀಕರಿಸುವುದಿಲ್ಲ ?

ಇಲ್ಲಿನ ಅಭಿಪ್ರಾಯವು ಹೀಗಿದೆ – ಮುಕ್ತರಿಗೆ ಸಾಮ್ಯವನ್ನು ಅಂಗೀಕರಿಸಿ, ಅನ್ಯದರ್ಶನಾಭಾವದಿಂದ ದ್ವೇಷಾದಿಗಳನ್ನೂ ಹಾಗೂ ಅನ್ಯದರ್ಶನ ಇಚ್ಛಾಭಾವದಿಂದ ದುಃಖಾದಿಗಳನ್ನೂ ಪರಿಹರಿಸುವುದಾದರೆ, ಅಪ್ರಾಮಾಣಿಕವಾದ ಅನೇಕ ವಸ್ತುಗಳ ಕಲ್ಪನೆಯೂ ಪ್ರಾಮಾಣಿಕಪರಿತ್ಯಾಗವೂ ಆಗುವುದು. ಸಾಮ್ಯ, ಅನ್ಯದರ್ಶನಾಭಾವ ಹಾಗೂ ತದಿಚ್ಛಾಭಾವವು ಅಪ್ರಾಮಾಣಿಕವು. ತಾರತಮ್ಯಾದಿಗಳು ಪ್ರಾಮಾಣಿಕವು. ಆದಕಾರಣ ಅಪ್ರಾಮಾಣಿಕವಾದ ಅನೇಕ ವಸ್ತುಗಳ ಕಲ್ಪನೆ ಮಾಡುವುದಕ್ಕಿಂತ ಪ್ರಾಮಾಣಿಕವಾದ ತಾರತಮ್ಯವನ್ನು ಅಂಗೀಕರಿಸಿ, ದ್ವೇಷಾದಿಗಳ ನಿರಾಕರಣೆಗಾಗಿ ಶ್ರುತ್ಯುಕ್ತ ನಿರ್ದೋಷತ್ವವನ್ನು ಸ್ವೀಕರಿಸುವುದೇ ಉತ್ತಮ.

ತಾರತಮ್ಯಂ ಚ ಕಾಮಂ ಚ ಶ್ರುತಮೇವಾತಿಹಾಯ ತು ॥ ೧೦೩ ॥

ಅಶ್ರುತಾ ಸಮತಾ ಕೇನ ಕಲ್ಪ್ಯತೇ ಯುಕ್ತಿಮಾನಿನಾ ।

'ಸ ಯೋ ಮನುಷ್ಯಾಣಾಂ ರಾದ್ಧಃ ಕಾಮಸ್ಯ ಯತ್ರಾಪ್ತಾಃ ಕಾಮಾಃ ಅಕ್ಷಣ್ವಂತಃ

ಕರ್ಣವಂತಃ ಸಖಾಯ' ಇತ್ಯಾದಿ ಶ್ರುತ್ಯುಕ್ತವಾದ ತಾರತಮ್ಯವನ್ನೂ, ಇಚ್ಛೆಯನ್ನೂ, ಅನ್ಯದರ್ಶನವನ್ನೂ ಕೂಡ ಪರಿತ್ಯಜಿಸಿ, ಅಶ್ರುತವಾದ ಸಾಮ್ಯ, ಅನ್ಯದರ್ಶನಾಭಾವ, ಇಚ್ಛಾಭಾವಗಳನ್ನು ಯುಕ್ತಿಯನ್ನು ಗೌರವಿಸುವ ಯಾವನು ತಾನೇ ಕಲ್ಪಿಸುತ್ತಾನೆ ?

ಸಾಮ್ಯವು ಅಶ್ರುತವಾಗಿದ್ದರೂ ಅಪ್ರಮಾಣವಲ್ಲ. ಸಾಮ್ಯದ ವಿಷಯದಲ್ಲಿ ಶ್ರುತಿಯೇ ಪ್ರಮಾಣವಲ್ಲ ಎಂದರೆ –

ಕಿಂ ತನ್ಮಾನಂ ಸಮತ್ವೇ ತೇ ಮುಕ್ತಾನಾಮುಪಲಭ್ಯತೇ ॥ ೧೦೪ ॥

ವೃಥಾऽಯಮಾಗ್ರಹಃ ಕೇನ ಶ್ರುತಹಾನ್ಯಶ್ರುತಗ್ರಹೇ ।

ಹಾಗಾದರೆ ಸಾಮ್ಯದ ವಿಷಯದಲ್ಲಿ ನಿನಗೆ ಶ್ರುತಿಗಿಂತ ಇತರವಾದ ಯಾವ ಪ್ರಮಾಣವು ಉಪಲಭ್ಯವಿದೆ ಎಂದು ಕೇಳುತ್ತೇವೆ. ಆದ್ದರಿಂದ ಶ್ರುತಾರ್ಥಪರಿತ್ಯಾಗ ಹಾಗೂ ಅಶ್ರುತಾರ್ಥಪರಿಗ್ರಹ ಇವುಗಳಲ್ಲಿ ವ್ಯರ್ಥವಾದ ಆಗ್ರಹವು ಕೂಡದು.

ಮುಕ್ತರಿಗೆ ತಾರತಮ್ಯ ವಿಷಯದಲ್ಲಿ ಅನುಮಾನಾಂತರವನ್ನು ಹೇಳುತ್ತಾರೆ –

ಮೋಕ್ಷೇऽಪಿ ತಾರತಮ್ಯೇತಶ್ಚೇತನತ್ವಾದ್ಯಥಾ ಪುರಾ ॥ ೧೦೫ ॥

ಇತ್ಯುಕ್ತ ಉತ್ತರಂ ಕಿಂ ತೇ ಕಲ್ಪನಾಮಾತ್ರವಾದಿನಃ ।

ಸಂಸಾರದಲ್ಲಿದ್ದಂತೆ ಮುಕ್ತಿಯಲ್ಲಿಯೂ ಕೂಡ ಚೇತನತ್ವವಿರುವ ಪ್ರಯುಕ್ತ ಮುಕ್ತನು ತಾರತಮ್ಯದಿಂದ ಯುಕ್ತನು ಎಂದು ಅನುಮಾನವು ಪ್ರಯುಕ್ತವಾಗಿರಲು, ಕೇವಲ ಕಲ್ಪನೆಯಿಂದ ವಾದಮಾಡುವ ನಿನಗೆ ಏನು ಉತ್ತರವನ್ನು ಹೇಳಲು ಸಾಧ್ಯ? ವ್ಯಾಪ್ತಿ, ಪಕ್ಷ ಧರ್ಮತ್ವಗಳು ಪ್ರಮಿತವಾಗಿರುವುದರಿಂದ ನಿನ್ನಿಂದ ಯಾವ ಉತ್ತರವೂ ಸಾಧ್ಯವಿಲ್ಲ ಎಂದು ಅಭಿಪ್ರಾಯ.

ಹಾಗಾದರೆ ಮುಕ್ತರು ದುಃಖಾದಿಗಳಿಂದ ಕೂಡಿದವರು ಚೇತನತ್ವದ ಪ್ರಯುಕ್ತ ಸಂಸಾರಿಗಳಂತೆ ಎಂದು ಅನುಮೇಯಿಸುತ್ತೇನೆ ಎಂದರೆ –

ನ ಚ ದುಃಖಾದಿಕಂ ಕಲ್ಪ್ಯಂ ನಿರ್ದುಃಖತ್ವಶ್ರುತೇರ್ಬಲಾತ್ ॥ ೧೦೬ ॥

ಶ್ರುತಿಗಳು ನಿರ್ದುಃಖತ್ವವನ್ನು ಪ್ರತಿಪಾದಿಸುತ್ತವೆ. ಕೇವಲ ಅನುಮಾನಕ್ಕಿಂತ ಶ್ರುತಿಯು ಪ್ರಬಲವು. ಆದ್ದರಿಂದ ಮುಕ್ತನಿಗೆ ಅನುಮಾನದಿಂದ ದುಃಖಾದಿಗಳನ್ನು ಕಲ್ಪನೆ ಮಾಡುವುದು ಕೂಡುವುದಿಲ್ಲ.

ಮುಕ್ತನಿಗೆ ನಿರ್ದುಃಖತ್ವಾದಿಗಳನ್ನು ಪ್ರತಿಪಾದಿಸುವ ಶ್ರುತಿಗಳನ್ನು ಪಠಿಸುತ್ತ, ಅವುಗಳ ತಾತ್ಪರ್ಯವನ್ನು ಹೇಳುತ್ತಾರೆ –

ಶೋಕಂ ತರತ್ಯಾತ್ಮವೇತ್ತಾ ತೀರ್ಣಃ ಸರ್ವಾನದುಃಖಾಕ್ ।

ಯೇನಾನಂದ್ಯೇವ ಭವತಿ ನ ಶೋಚತಿ ಕದಾಚನ ॥ ೧೦೭ ॥

ಕಿಲ್ಬಿಷಸ್ಪೃತ್ಪಿತುಷಣಿರರಂ ಹಿತ ಇಹೇಶ್ವರಃ ।

ಯಂ ಯಮಂತಮಭಿಪ್ರೇಪ್ಸುಃ ಸ ಸಂಕಲ್ಪಾದ್ಭವೇದಿಹ ॥ ೧೦೮ ॥

ಇತ್ಯಾದಿಶ್ರುತಯೋ ಮಾನಂ ನಿರ್ದುಃಖತ್ವಾದಿಸಂಪದಿ ।

ಆತ್ಮಜ್ಞಾನಿಯು ಶೋಕವನ್ನು ದಾಟುತ್ತಾನೆ (ತರತಿ ಶೋಕಮಾತ್ಮವಿತ್), ಎಲ್ಲ ಶೋಕಗಳನ್ನು ದಾಟಿದವನಾಗುವನು (ತೀರ್ಣೋ ಹಿ ತದಾ ಸರ್ವಾನ್ ಶೋಕಾನ್), ದುಃಖವನ್ನು ಹೊಂದುವುದಿಲ್ಲ (ನಾನಾನಂದಂ ಕಂಚಿದುಪಸ್ಪೃಶತಿ), ಯಾವುದರಿಂದ ಆನಂದವುಳ್ಳವನೇ ಆಗುವನೋ, ಯಾವಾಗಲೂ ದುಃಖಪಡುವುದಿಲ್ಲವೋ(ತದ್ವೈ ಜೈವಂ ಮನೋ ಯೇನಾನಂದ್ಯೇವ ಭವತೀತ್ಯಥೋ ನ ಶೋಚತಿ), ಮುಕ್ತರ ದುಃಖವನ್ನು ಸಹಿಸುವುದಿಲ್ಲ (ಕಿಲ್ಬಿಷಸ್ಪೃತ್), ಮುಕ್ತರಿಗೆ ಅನ್ನನೀಡುವನು (ಪಿತುಷಣಿ) ಇಂದ್ರಿಯಗಳಿಗೆ ಅತ್ಯಂತ ಹಿತಕರನಾಗುವನು (ಅರಂ ಹಿತ), ಮುಕ್ತರ ವಿಷಯದಲ್ಲಿ ಶ್ರೀಹರಿಯೇ ನಿಯಾಮಕನು (ಇಹೇಶ್ವರಃ). ಕಿಲ್ಬಿಷ ಎನ್ನುವುದರಿಂದ 'ಸರ್ವೇ ನಂದಂತಿ ಯಶಸಾऽऽಗತೇನ ಸಭಾಸಾಹೇನ ಸಖ್ಯಾ ಸಖಾಯಃ ಕಿಲ್ವಿಷऽ ಸ್ಪೃತ್ಪಿತುऽಷಣಿರ್ಹ್ಯೇಷಾಮರಂ ಹಿತೋ ಭವತಿ ವಾಜಿನಾಯ' ಎಂಬ ಋಗ್ವೇದ ಮಂತ್ರವನ್ನು ಗ್ರಹಿಸಬೇಕು. ಯಾವ ಯಾವ ಸ್ಥಾನವನ್ನು ಇಚ್ಛಿಸುತ್ತಾನೋ ಅದು ಮುಕ್ತಿಯಲ್ಲಿ ಸಂಕಲ್ಪದಿಂದಲೇ ಆಗುವುದು (ಯಂ ಯಮಂತಮಭಿಕಾಮೋ ಭವತಿ ಸೋऽಸ್ಯ ಸಂಕಲ್ಪಾದೇವ ಭವತಿ). ಇವೇ ಮೊದಲಾದ ಶ್ರುತಿಗಳು ನಿರ್ದುಃಖತ್ವಾದಿ ಸಂಪತ್ತಿನಲ್ಲಿ ಪ್ರಮಾಣವು.

ಅತೋ ದುಃಖಾದ್ಯನುಮಯಾ ನಾವಕಾಶೋऽತ್ರ ಲಭ್ಯತೇ ॥ ೧೦೯ ॥

ತಾರತಮ್ಯಾನುಮಾ ತಸ್ಮಾದ್ಭವೇನ್ನಾತಿಪ್ರಸಂಗಿನೀ ।

ಶ್ರುತಿಯುಕ್ತಿಬಲಾದೇವ ತಾರತಮ್ಯಂ ವಿಭಾವ್ಯತೇ ॥ ೧೧೦ ॥

ಮುಕ್ತಾವಪಿ ತತಃ ಕೇऽತ್ರ ವಿರೋಧಂ ಕರ್ತುಮೀಶತೇ ।

ಆದ್ದರಿಂದ (ಅಂದರೆ ಶ್ರುತಿಬಾಧಿತವಾದ್ದರಿಂದ) ದುಃಖಾದಿಗಳನ್ನು ಸಾಧಿಸುವ ಅನುಮಾನದಿಂದಲೂ 'ಮುಕ್ತಾಃ ದುಃಖಾದ್ಯುಪೇತಾಃ' ಎನ್ನುವ ಪ್ರತಿಜ್ಞೆಗೆ ಮುಕ್ತರ ವಿಷಯದಲ್ಲಿ ಅವಕಾಶವು ಲಭಿಸುವುದಿಲ್ಲ. ಅಂದರೆ ಸ್ವವ್ಯಾಹತವಾದ್ದರಿಂದ ಈ ಪ್ರತಿಜ್ಞೆಯು ಯುಕ್ತವಾಗುವುದಿಲ್ಲ. ಆದ್ದರಿಂದ ದುಃಖಸಾಧಕವಾದ ಚೇತನತ್ವಾನುಮಾನದಿಂದ ತಾರತಮ್ಯಾನುಮಾನವು ಅತಿಪ್ರಸಂಗವುಳ್ಳದ್ದು ಆಗುವುದಿಲ್ಲ. ಶ್ರುತಿ ಯುಕ್ತಿಗಳ ಬಲದಿಂದಲೇ ತಾರತಮ್ಯವು ಚೆನ್ನಾಗಿ ಅನುಭವಸಿದ್ಧವು. ಆದಕಾರಣ ಮುಕ್ತಿಯಲ್ಲಿಯೂ ಮುಕ್ತರ ತಾರತಮ್ಯ ವಿಷಯದಲ್ಲಿ ಯಾವ ವಾದಿಗಳು ತಾನೆ ವಿರೋಧವನ್ನು ಮಾಡಲು ಶಕ್ಯರಾಗುತ್ತಾರೆ ?

ಉಭಯಲಿಂಗಾಧಿಕರಣಮ್

ಓಂ ಸರ್ವಥಾಽಪಿ ತು ತ ಏವೋಭಯಲಿಂಗಾತ್ ಓಂ

ಆಧಿಕಾರಿಕಾಧಿಕರಣಮ್

ಓಂ ನ ಚಾಧಿಕಾರಿಕಮಪಿ ಪತನಾನುಮಾನಾತ್ತದ್ಯೋಗಾತ್ ಓಂ

ಇಲ್ಲಿ ಪ್ರಥಮಾಧಿಕರಣದಲ್ಲಿ ಅನಾದಿಯಾದ ಜ್ಞಾನಯೋಗ್ಯತೆವುಳ್ಳವರಿಗೇ ಜ್ಞಾನಪ್ರಾಪ್ತಿಯು, ಇತರರಿಗೆ ಇಲ್ಲ ಎಂದು ಹೇಳಲ್ಪಟ್ಟಿದೆ. ದ್ವಿತೀಯಾಧಿಕರಣದಲ್ಲಿ ಅನಾದಿಯಾದ ಪದಪ್ರಾಪ್ತಿಯೋಗ್ಯತೆವುಳ್ಳವರಿಗೆ ಮಾತ್ರ ದೇವತಾಪದಪ್ರಾಪ್ತಿಯೇ ಹೊರತು ಅನ್ಯರಿಗಲ್ಲ ಎಂದು ಉಕ್ತವಾಗಿದೆ. ಪ್ರಸಿದ್ಧವಾದ ಪ್ರಯತ್ನ ಮುಂತಾದ ಕಾರಣಗಳಿಂದಲೇ ಆಯಾ ಜೀವರಿಗೆ ಉತ್ಕರ್ಷಅಪಕರ್ಷ ಪ್ರಾಪ್ತಿಯೆಂದು ಹೇಳುವ ವಾದಿಗಳು ಜೀವರುಗಳ ನಾನವಿಧವಾದ ಅನಾದಿಯೋಗ್ಯತೆಯನ್ನು ಒಪ್ಪುವುದಿಲ್ಲ. ಆದ್ದರಿಂದ ಅದನ್ನು ಸಾಧಿಸಲಿಕ್ಕಾಗಿ 'ಅನಾದಿ' ಇತ್ಯಾದಿ ವಚನವನ್ನು ಹೇಳುತ್ತಾರೆ –

ಅನಾದಿಯೋಗ್ಯತಾಂ ಚೈವ ಕಲಿವಾಣೇಶ್ವರಾವಧಿಮ್ ।। ೧೧೧ ।।

ಕೋ ನಿವಾರಯಿತುಂ ಶಕ್ತೋ ಯುಕ್ತ್ಯಾಗಮಬಲೋದ್ಧತಾಮ್ ।

ಕಲಿ ಹಾಗೂ ಬ್ರಹ್ಮ ಇವರುಗಳೇ ಅವಧಿಯಾಗಿರುವ(ಯೋಗ್ಯತಾ ಅಪಕರ್ಷಕ್ಕೆ ಕಲಿಯೂ ಉತ್ಕರ್ಷಕ್ಕೆ ಬ್ರಹ್ಮನೂ ಅವಧಿಯು), ಯುಕ್ತಿ ಮತ್ತು ಆಗಮಗಳ ಬಲದಿಂದ ಅಪ್ರತಿಹತವಾದ ಮುಕ್ತರ ತಾರತಮ್ಯವನ್ನೂ ಅನಾದಿಯೋಗ್ಯತೆಯನ್ನೂ ಕೂಡ ಯಾವನು ತಾನೆ ನಿವಾರಿಸಲು ಸಮರ್ಥನಾದಾನು?

ಯುಕ್ತಿಯನ್ನು ಆದರಿಸುವ ವಾದಿಯನ್ನು ಉದ್ದೇಶಿಸಿ ಮೊದಲು 'ಬ್ರಹ್ಮಣೋ' ಇತ್ಯಾದಿ ವಚನದಿಂದ ಯುಕ್ತಿಯನ್ನು ಹೇಳುತ್ತಾರೆ –

ಬ್ರಹ್ಮಣೋಽನ್ಯತ ಆಧಿಕ್ಯಯುಕ್ತಃ ಕಾಲೋ ವಿವಾದವಾನ್ ।। ೧೧೨ ।।

ಕಾಲೋ ಹ್ಯಯಂ ಯಥೇತ್ಯಾದಿ ಮಾನುಮಾಮಾನಿನೋ ಭವೇತ್ ।

ವರ್ತಮಾನ ಕಾಲದಲ್ಲಿ ಬ್ರಹ್ಮನು ಸರ್ವಾಧಿಕನೆನ್ನುವುದು ಸಂಪ್ರತಿಪನ್ನವಾಗಿದೆ. ಆದಕಾರಣ ಕಾಲವು ವಿವಾದ ವಿಷಯವೆಂದು ಹೇಳಿದೆ. ಈಗಿನ ಮಹಾಕಲ್ಪಕ್ಕೆ ವ್ಯತಿರಿಕ್ತವಾದ ಅತೀತ ಹಾಗೂ ಭವಿಷತ್ಕಾಲಗಳಲ್ಲಿಯೂ ಈ ಬ್ರಹ್ಮನಿಗೆ ಇತರರಿಂದ ಆಧಿಕ್ಯವು ಯುಕ್ತವಾಗಿದೆ, ಕಾಲತ್ವವಿರುವ ಪ್ರಯುಕ್ತ, ಈ ವರ್ತಮಾನಕಾಲದಂತೆ ಎಂಬ ಅನುಮಾನದಿಂದ ಬ್ರಹ್ಮನಿಗೆ ಇತರರಿಂದ ಸರ್ವೋತ್ಕರ್ಷ ಸಿದ್ಧವಾಗುವುದು. ಪದವಿ ಮೊದಲಾದವು ಇಲ್ಲದ ಕಾಲದಲ್ಲಿಯೂ ಸರ್ವೋತ್ಕರ್ಷವಿರುವುದರಿಂದ ಬ್ರಹ್ಮನ ಯೋಗ್ಯತೆಯೂ ಕೂಡ ಅನಾದಿನಿತ್ಯವೂ ಸರ್ವೋತ್ಕೃಷ್ಟವೂ ಎಂದು ಸಿದ್ಧವಾಗುವುದು.

ಈ ಪ್ರತಿಜ್ಞೆಯು ಪ್ರಮಾಣಬಾಧಿತವು. ದೃಷ್ಟಾಂತವಾದರೂ ಸಾಧ್ಯವೈಕಲ್ಯ ಯುಕ್ತವು. ಅನ್ಯ ಶಬ್ದವು ಬ್ರಹ್ಮ ವ್ಯತಿರಿಕ್ತವಾದ ಎಲ್ಲವನ್ನೂ ಹೇಳುತ್ತದೆ. ಅದರಲ್ಲಿ ಬ್ರಹ್ಮನಿಗೆ ಕಾಲತ್ರಯದಲ್ಲಿಯೂ ಶ್ರೀಹರಿಯಿಂದಲೂ, ಮಹಾಲಕ್ಷ್ಮಿಯಿಂದಲೂ ಹಾಗೂ ಋಜುಗಳಿಂದಲೂ ಅಧಿಕ್ಯವು ಇಲ್ಲ. ಶ್ರೀಹರಿಯೂ ಮಹಾಲಕ್ಷ್ಮಿಯೂ ಬ್ರಹ್ಮನಿಗಿಂತ ಅಧಿಕರೆಂದೂ, ಋಜುಗಳು ಸಮರೆಂದೂ ಪ್ರಮಿತರಾಗಿದ್ದಾರೆ. ಹೀಗೆ ಆಶಂಕಿಸಿದರೆ –

ಅನ್ಯಶಬ್ದೋ ಹರಿಶ್ರೀಸ್ವಸಮೇಭ್ಯೋಽನ್ಯವಿವಕ್ಷಯಾ ।। ೧೧೩ ।।

ಪ್ರಯುಕ್ತೋ ನೈವ ದೋಷಾಯ ರುದ್ರಾದಿಷು ಚ ಯುಕ್ತಿತಃ ।

ಇಲ್ಲಿ ಪ್ರಸಕ್ತವಾಗಿರುವ ಅನ್ಯ ಶಬ್ದವು ಬ್ರಹ್ಮನಿಂದ ಅಧಿಕರಾದ ಲಕ್ಷ್ಮೀ ನಾರಾಯಣರನ್ನೂ, ಸಮರಾದ ಋಜುಗಳನ್ನೂ ಬಿಟ್ಟು ಇತರರ ವಿವಕ್ಷೆಯಿಂದ ಪ್ರಯೋಗಿಸಲ್ಪಟ್ಟಿದೆ. ಆದ್ದರಿಂದ ಬಾಧಾದಿ ದೋಷಕ್ಕೆ ಕಾರಣವಾಗುವುದೇ ಇಲ್ಲ. ಇದೇಪ್ರಕಾರವಾಗಿ ರುದ್ರಾದಿಗಳಲ್ಲಿಯೂ ಯುಕ್ತಿಯಿಂದ ಅನಾದಿ ಯೋಗ್ಯತೆಯನ್ನು ಸಾಧಿಸಬೇಕು.

ಹಾಗಾದರೆ ಮುಕ್ತರೆಲ್ಲರೂ ಬ್ರಹ್ಮನಿಗಿಂತ ಅಧಿಕರು, ಅವರಿಗೆ ಮುಕ್ತತ್ವವೂ ಬ್ರಹ್ಮನಿಗೆ ಸಂಸಾರಿತ್ವವೂ ಇರುವ ಪ್ರಯುಕ್ತ. ಆದ್ದರಿಂದ ಅನ್ಯ ಶಬ್ದ ವ್ಯಾಖ್ಯಾನದಲ್ಲಿ ಮುಕ್ತರನ್ನು ಏಕೆ ಗ್ರಹಿಸಲಿಲ್ಲ ಎಂದರೆ –

ಉತ್ತಮತ್ವಂ ತು ಮುಕ್ತಾನಾಮಪಿ ನ ಬ್ರಹ್ಮಣೋ ಭವೇತ್ ।। ೧೧೪ ।।

ವ್ಯಕ್ತಿಃ ಸುಖಸ್ಯ ತು ಭವೇನ್ನ ತ್ವಾಧಿಕ್ಯಂ ಸುಖಸ್ಯ ಚ ।

ಬಲಜ್ಞಾನಾಧಿಕತ್ವಂ ತು ತೇಭ್ಯೋಃ ಹಿ ಬ್ರಹ್ಮಣಃ ಸದಾ ।। ೧೧೫ ।।

ಆಧಿಕ್ಯಸ್ಯ ತ್ವನಿತ್ಯತ್ವೇ ನ ಕಿಂಚಿನ್ಮಾನಮೀಯತೇ ।। ೧೧೬ ।।

. ಮುಕ್ತರಾದವರಿಗೆ ಚತುರ್ಮುಖ ಬ್ರಹ್ಮನಿಂದ ಉತ್ತಮತ್ವವು ಬರಲಾರದು. ಆದಕಾರಣ ಹಿಂದಿನ ವ್ಯಾಖ್ಯಾನದಲ್ಲಿ ಅನ್ಯ ಶಬ್ದ ಅವರನ್ನು ತೆಗೆದುಕೊಳ್ಳದಿದ್ದರೂ ದೋಷವಿಲ್ಲ. ಏಕೆಂದರೆ, ಮುಕ್ತಿಗೆ ಪೂರ್ವದಲ್ಲಿ ಇರತಕ್ಕ ಸ್ವರೂಪ ಸುಖಾದಿಗಳಿಗೆ ಮುಕ್ತಿಯಲ್ಲಿ ಅಭಿವ್ಯಕ್ತಿಯು ಮಾತ್ರ. ಸ್ವರೂಪದಲ್ಲಿರತಕ್ಕ ಸುಖಾದಿಗಳಿಗೆ ಮುಕ್ತಿಯಲ್ಲಿ ಆಧಿಕ್ಯವು ಉಂಟಾಗುವುದಿಲ್ಲ. ಬ್ರಹ್ಮನಿಂದ ಇತರರಿಗೆ ಸ್ವರೂಪಾಧಿಕ್ಯವಿಲ್ಲ. ಬ್ರಹ್ಮನಿಗೆ ಸಂಸಾರದಲ್ಲಿಯೂ ಮುಕ್ತಿಯಲ್ಲಿಯೂ ಆ ಮುಕ್ತರ ದೆಶೆಯಿಂದ ಬಲಜ್ಞಾನಾದಿ ಎಲ್ಲ ಗುಣಗಳಿಂದಲೂ ಆಧಿಕ್ಯವಿರುವುದು. ಬ್ರಹ್ಮನ ಆಧಿಕ್ಯವು ಅನಿತ್ಯವೂ ಹಾಗೂ ಸಾದಿಯೂ ಎಂಬುದಾಗಿ ಯಾವುದೇ ಪ್ರಮಾಣದಿಂದ ತಿಳಿದುಬರುವುದಿಲ್ಲ.

ಹೀಗೆ ಬ್ರಹ್ಮಾದಿ ಜೀವರಲ್ಲಿ ಅನಾದಿನಿತ್ಯವಾದ ನಾನವಿಧವಾದ ಯೋಗ್ಯತೆಯನ್ನು ಸಾಧಿಸಿ, ಈಗ ಆಗಮದಿಂದಲೂ ಸಾಧಿಸುತ್ತ ಮೊದಲು ಶ್ರುತಿಗಳನ್ನು ಪಠಿಸುತ್ತಾರೆ –

ಶೃಣ್ವೇ ವೀರ ಉಗ್ರಮುಗ್ರಂ ದಮಾಯನ್

ಅನ್ಯಮನ್ಯಮತಿನೇನೀಯಮಾನಃ ।

ಏಧಮಾನದ್ವಿಳುಭಯಸ್ಯ ರಾಜಾ

ಚೋಷ್ಕೂಯತೇ ವಿಶ ಇಂದ್ರೋ ಮನುಷ್ಯಾನ್ ॥ ೧೧೭ ॥

ಆರಂಭಿಸಿದ್ದನ್ನು ಪೂರ್ತಿಗೊಳಿಸುವ (ವೀರ), ಪರಮೇಶ್ವರನು (ಇಂದ್ರ) ಎಲ್ಲ ದುಷ್ಟ ಪ್ರಕೃತಿವುಳ್ಳವರನ್ನು (ಉಗ್ರಮುಗ್ರಂ) ದಮನಮಾಡಿ ಅಂದರೆ ನಿತ್ಯನರಕವನ್ನು ಹೊಂದಿಸಿ, ದುಷ್ಟರಾದ ಅಸುರರಿಂದ ಅನ್ಯರಾದ ಎಲ್ಲ ಸಾಧು ಸ್ವಭಾವದವರನ್ನು ಸಂಸಾರವನ್ನು ಚೆನ್ನಾಗಿ ಅತಿಕ್ರಮಿಸುವಂತೆ ಮಾಡಿ ಸ್ವಕೀಯವಾದ ಪದವಿಯನ್ನು ಹೊಂದಿಸುವನು ಎಂಬುದಾಗಿ ಶ್ರುತನಾಗಿದ್ದಾನೆ. ಸ್ವಯೋಗ್ಯತೆಯನ್ನು ಅತಿಕ್ರಮಿಸಿ ಅಭಿವೃದ್ಧಿಗೆ ಬರಲು ಪ್ರಯತ್ನಿಸುವವರನ್ನು (ಅಸುರರನ್ನು) ದ್ವೇಷಿಸುತ್ತಾನೆ. ಏಕೆಂದರೆ ಅವನು ದೇವತಾ ಹಾಗೂ ಅಸುರ ವರ್ಗಗಳೆರಡಕ್ಕೂ ರಾಜನು. ರಾಜಸ ಸ್ವಭಾವದ ಮಧ್ಯಮ ಮನುಷ್ಯರನ್ನು ನಿತ್ಯದಲ್ಲಿಯೂ ಸಂಸಾರದಲ್ಲಿಯೇ ತಿರುಗಿಸುತ್ತಾನೆ.

ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ

ವಿತರ್ತುರಾಣೋ ಅಪರೇಭಿರೇತಿ ।

ಅನಾನುಭೂತೀರವಧೂನ್ವಾನಃ

ಪೂರ್ವೀರಿಂದ್ರಃ ಶರದಸ್ತರ್ತರೀತಿ ॥ ೧೧೮ ॥

ಆ ಶ್ರೀಹರಿಯೇ ಹಿಂದಿನ ಮಂತ್ರದಲ್ಲಿ ಉಗ್ರ ಶಬ್ದದಿಂದ ನಿರ್ದಿಷ್ಟರಾದ ಅಸುರರ ಮೈತ್ರ್ಯಗಳನ್ನು ಪರಿತ್ಯಜಿಸುತ್ತಾನೆ. ಇತರರಾದ ದೇವಪ್ರಕೃತಿವುಳ್ಳವರ ಮೈತ್ರ್ಯಗಳನ್ನು ವೇಗದಿಂದ ಹೊರಿದುತ್ತಾನೆ. ಸಮ್ಯಕ್ ಅನುಭವಶೂನ್ಯರಾದ ನಿತ್ಯ ಸಂಸಾರಿ ಜೀವರನ್ನು ಸಂಸಾರದಲ್ಲಿಯೇ ತಿರುಗುವಂತೆ ಮಾಡುವ ಶ್ರೀಹರಿಯು ಅತೀತವಾದ ಸಂವತ್ಸರಗಳನ್ನು ದಾಟಿದವನಾಗಿ, ಈಗಿನ ಹಾಗೂ ಮುಂದಿನ ಸಂವತ್ಸರಗಳನ್ನೂ ದಾಟುತ್ತಾನೆ.

ದಿವೇ ದಿವೇ ಸದೃಶೀರನ್ಯಮರ್ಧಂ

ಕೃಷ್ಣಾ ಅಸೇಧದಪ ಸದ್ಮನೋಜಾಃ ।

ಅಹಂ ದಾಸಾ ವೃಷಭೋ ವಸ್ನಯಂತೋ–

ದವ್ರಜೇ ವರ್ಚಿನಂ ಶಂಬರಂ ಚ ॥ ೧೧೯ ॥

ಅಭೀಷ್ಟವನ್ನು ವರ್ಷಿಸುವ ಪ್ರಯುಕ್ತ ವೃಷಭನೆಂದು ಹೆಸರುಳ್ಳ ಶ್ರೀಹರಿಯು ಪ್ರತಿದಿವಸವೂ, ಚೇತನತ್ವ ಮಾತ್ರದಿಂದ ಸದೃಶರಾದ ದೇವತೆಗಳಿಂದ ಇತರರಾದ ಕೇವಲ ತಮೋಗುಣಪ್ರಚುರರಾದ, ಅಸುರರನ್ನು ಸ್ವಕೀಯವಾದ ಶಾಶ್ವತವಾದ ಲೋಕದಿಂದ ನಿವಾರಣೆ ಮಾಡಿದನು. ಅಂದರೆ ಶ್ರೀಹರಿಯ ಯಾವಾಗಲೂ ಅಸುರರನ್ನು ತನ್ನ ಲೋಕಕ್ಕೆ ಸ್ವೀಕರಿಸುವುದಿಲ್ಲ. ಜಗತ್ತನ್ನೇ ಆಚ್ಛಾದನೆ ಮಾಡತಕ್ಕ ಆ ಮಹಾ ಕಳ್ಳರಾದ ವರ್ಚಿನ ಹಾಗೂ ಶಂಬರ ಎಂಬ ಅಸುರರನ್ನು ಸಮುದ್ರದಲ್ಲಿ ಸಂಹರಿಸಿದನು. ಅಂದರೆ ಅಂಧಂತಮಸ್ಸಿಗೇ ತಳ್ಳಿದನು ಎಂದರ್ಥ. ದೈತ್ಯರಿಗೆ ಯಾವಕಾಲಕ್ಕೂ ಮೋಕ್ಷವಿಲ್ಲವೆಂದು ಅಭಿಪ್ರಾಯ.

ತಂ ಭೂತಿರಿತಿ ದೇವಾ ಉಪಾಸಾಂಚಕ್ರಿರೇ

ತೇ ಬಭೂವುಸ್ತಸ್ಮಾದ್ಧಾಪ್ಯೇತರ್ಹಿ ।

ಭೂರ್ಭೂರಿತ್ಯೇವ ಪ್ರಶ್ವಸಿತ್ಯಭೂತಿ–

ರಿತ್ಯಸುರಾಸ್ತೇ ಹ ಪರಾವಬಭೂವುಃ ॥ ೧೨೦ ॥

ಆ ಪರಮೇಶ್ವರನನ್ನು ಐಶ್ವರ್ಯರೂಪಿಯೆಂದು, ಐಶ್ವರ್ಯದಾಯಕನೆಂದು ವಾಯು ಮೊದಲಾದ ದೇವತೆಗಳು ಉಪಾಸನೆ ಮಾಡಿದರು. ಆದರಿಂದ ಅವರು ಮುಕ್ತರಾದರು. ಆದ್ದರಿಂದ ಈಗಲೂ ಕೂಡ ಸುಪ್ತರಲ್ಲಿರತಕ್ಕ ವಾಯುದೇವರು ಭೂಃ ಭೂಃ ಎಂದೇ ಶ್ವಾಸ ರೂಪ ಜಪ ಮಾಡುತ್ತಾ ಪರಮಾತ್ಮನನ್ನು ಭೂತಿ ಎಂದು ಉಪಾಸನೆ ಮಾಡುತ್ತಾರೆ. ಅಸುರರು ಅಭೂತಿ ಎಂದು ಉಪಾಸನೆ ಮಾಡುತ್ತಾರೆ. ಅದರಿಂದ ನಿತ್ಯನರಕವನ್ನು ಹೊಂದುತ್ತಾರೆ. ಸಮ್ಯಗುಪಾಸನೆಯಿಂದ ಮೋಕ್ಷವೂ ವಿಪರೀತ ಉಪಾಸನೆಯಿಂದ ತಮಸ್ಸೂ ಇಲ್ಲಿ ಶ್ರುತವಾಗಿದೆ. ಇದರಿಂದ ದೇವತ್ವ ಹಾಗೂ ಅಸುರತ್ವಗಳು ಸಹಜವೆಂದು ತಿಳಿದುಬರುತ್ತದೆ.

ತದ್ಯಥಾ ಪೇಶಸ್ಕಾರೀ ಪೇಶಸೋ ಮಾತ್ರಾಮುಪಾದಾಯನ್ಯನ್ನ–

ವತರಂ ಕಲ್ಯಾಣತರಂ ರೂಪಂ ತನುತೇ ಏವಮೇವಾಯಮಾತ್ಮೇದಂ ।

ಶರೀರಂ ನಿಹತ್ಯಾವಿದ್ಯಾಂ ಗಮಯಿತ್ವಾನ್ಯನ್ನವತರಂ ಕಲ್ಯಾಣತರಂ

ರೂಪಂ ಕುರುತೇ ಪಿತ್ರ್ಯಂ ವಾ ಗಾಂಧರ್ವಂ ವಾ ದೇವಂ ವಾ ।

ಪ್ರಾಜಾಪತ್ಯಂ ವಾ ಬ್ರಾಹ್ಮಂ ವಾನ್ಯೇಷಾಂ ಭೂತಾನಾಮ್ ॥ ೧೨೧ ॥

ಇದಕ್ಕೆ ದೃಷ್ಟಾಂತವು ಹೇಗೆಂದರೆ – ಸ್ವರ್ಣಕಾರನು ಸುವರ್ಣದ ಅಂಶವನ್ನು ತೆಗೆದುಕೊಂಡು ಅದನ್ನು ಮತ್ತೊಂದು ನೂತನವಾದ ನಿಷ್ಕಲವಾದ ಶೋಭನವಾದ ಕಂಠಭೂಷಣಾದಿಗಳನ್ನಾಗಿ ಮಾಡುತ್ತಾನೆ. ಇದೇ ಪ್ರಕಾರವಾಗಿ ಪರಮಾತ್ಮನು ಈ

ಶರೀರವನ್ನು ನಾಶಮಾಡಿ ಅಂದರೆ ಆಯಾ ಭೂತಗಳಲ್ಲಿ ಸೇರಿಸಿ, ಅವಿದ್ಯೆಯನ್ನು ಹೋಗಲಾಡಿಸಿ, ಮತ್ತೊಂದು ನೂತನವಾದ ಪರಮಶೋಭನಕರವಾದ ರೂಪವನ್ನು ಉಂಟು ಮಾಡುತ್ತಾನೆ. ಆಯಾ ಪಿತೃ ಜೀವರಿಗೆ ಪಿತೃ ಸಂಬಂಧಿಯಾದ ಶರೀರವನ್ನೂ, ಅದರಂತೆಯೇ ಯೋಗ್ಯತೆಗೆ ಅನುರೂಪವಾಗಿ ಗಂಧರ್ವ, ದೇವತೆ, ಶಿವ, ಚತುರ್ಮುಖ ಇತ್ಯಾದಿಗಳಿಗೆ ಸಂಬಂಧಿಸಿದ ಶರೀರವನ್ನು ಮಾಡುತ್ತಾನೆ. ಹಾಗೆಯೇ ಇತರರಾದ ಮನುಷ್ಯೋತ್ತಮರಿಗೆ ಅದಕ್ಕನುರೂಪವಾದ ಶರೀರವನ್ನು ಮಾಡುತ್ತಾನೆ. ಹೇಗೆ ಸುವರ್ಣದಿಂದಲೇ ಕಂಠಭೂಷಣಾದಿಗಳು ಆಗುತ್ತವೋ, ಅನ್ಯ ದ್ರವ್ಯದಿಂದಲ್ಲವೋ, ಹಾಗೆಯೇ ಈಶ್ವರನಿಂದ ಮುಕ್ತಿಯೋಗ್ಯರಿಗೇನೆ ಮುಕ್ತತ್ವವು ಉಂಟಾಗುತ್ತದೆ, ಅನ್ಯರಿಗಲ್ಲವೆಂದು ಈ ಶ್ರುತಿಯ ತಾತ್ಪರ್ಯ.

ಪ್ರಯಾಂತಿ ಪರಮಾಂ ಸಿದ್ಧಿಮೈಹಿಕಾಮುಷ್ಮಿಕೀಂ ದ್ರುತಮ್ ।

ಯಾ ನ ಪ್ರಾಪ್ಯಾಸುರೈಃ ಸರ್ವೈರಕ್ಷಯ್ಯಾ ಕ್ಲೇಶವರ್ಜಿತಾ ॥ ೧೨೨ ॥

ನ ತಾಂ ಗತಿಂ ಪ್ರಪದ್ಯಂತೇ ವಿನಾ ಭಾಗವತಾನ್ನರಾನ್ ।

ಇದು ಪದ್ಮ ಪುರಾಣದ ವಚನ. 'ಪುರಾ ಸತ್ಯೇಯುಗೇ 'ದೇವಾ ವಿಶುದ್ಧ ಮತಯೋ೨ಖಿಲಾಃ। ಯಜಂತಿ ವಿಷ್ಣುಮೇವೈಕಂ ಜ್ಞಾತ್ವಾ ಸರ್ವೇಶ್ವರೇಶ್ವರಮ್' ಅಂದರೆ ಪೂರ್ವದಲ್ಲಿ ಸತ್ಯಯುಗದಲ್ಲಿ ವಿಶುದ್ಧವಾದ ಸ್ವಭಾವವುಳ್ಳ ದೇವತೆಗಳೆಲ್ಲರೂ ಶ್ರೀಹರಿಯನ್ನೇ ಸರ್ವೋತ್ತಮನೆಂದು ತಿಳಿದು ಪೂಜಿಸುತ್ತಾರೆ.(ಅಲ್ಲಿಂದ ಮುಂದಿನ ಭಾಗ ಪ್ರಯಾಂತಿ ಇತ್ಯಾದಿ). ಅಂಥವರು ಕ್ಷಿಪ್ರವೇ ಐಹಿಕ ಆಮುಷ್ಮಿಕ ರೂಪವಾದ ಉತ್ಕೃಷ್ಟವಾದ ಸಿದ್ಧಿಯನ್ನು (ಮೋಕ್ಷಾದಿ ಫಲಪ್ರಾಪ್ತಿ) ಚೆನ್ನಾಗಿ ಹೊಂದುತ್ತಾರೆ. ಎಲ್ಲ ಅಸುರರಿಂದಲೂ ಅಕ್ಷಯವೂ ಕ್ಲೇಶರಹಿತವೂ ಆದ ಯಾವ ಉತ್ತಮಗತಿಯು ಹೊಂದಲು ಸಾಧ್ಯವಿಲ್ಲವೋ, ಅಂಥಹ ಗತಿಯನ್ನು ಭಗವದ್ಭಕ್ತರಾದ ಮನುಷ್ಯರನ್ನು ಹೊರತು ಅನ್ಯರು ಹೊಂದುವುದಿಲ್ಲ.

ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಮ್ ॥ ೧೨೩ ॥

ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ।

ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ॥ ೧೨೪ ॥

ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ।

ಅವಜಾನಂತಿ ಇತ್ಯಾದಿ ಭಗವದ್ಗೀತಾ ವಚನದಿಂದ ಭಗವಂತನ ಅವಜ್ಞಾದಿ ರೂಪ ರಾಕ್ಷಸಾದಿ ಸ್ವಭಾವವುಳ್ಳವರಿಗೆ ಯಾವಕಾಲಕ್ಕೂ ಪುರಷಾರ್ಥ ಪ್ರಾಪ್ತಿಯು ಆಗುವುದಿಲ್ಲ ಎಂದು ಹೇಳುತ್ತಾರೆ. ಮಾನುಷ ಶರೀರಕ್ಕೆ ಸದೃಶವಾದ ಶರೀರವನ್ನು ಆಶ್ರಯಿಸಿರತಕ್ಕ ನನ್ನನ್ನು ತಾಮಸರು ತಪ್ಪಾಗಿ ತಿಳಿಯುತ್ತಾರೆ. ಸದಾಕಾಲದಲ್ಲಿಯೂ ಇರತಕ್ಕ ಶ್ರೇಷ್ಠವಾದ ಗುಣಪರಿಪೂರ್ಣವಾದ ನನ್ನ ಯಥಾರ್ಥವಾದ ಸ್ವರೂಪವನ್ನು

ಅವರು ತಿಳಿಯುವುದಿಲ್ಲ. ಆ ಕಾರಣದಿಂದ ಅವರ ಎಲ್ಲ ಬಯಕೆಗಳೂ, ಯಜ್ಞಾದಿ ಕರ್ಮಗಳೂ, ತತ್ವಜ್ಞಾನವೂ ವ್ಯರ್ಥವಾಗುತ್ತವೆ. ವಿಕೃತವಾದ ಹಾಗೂ ವಿರುದ್ಧವಾದ ಮನಸ್ಸುಳ್ಳ ಅವರು ಬುದ್ಧಿಭ್ರಂಶಕ್ಕೆ ಕಾರಣವಾಗುವ ರಾಕ್ಷಸರ ಹಾಗೂ ಅಸುರರ ಸಂಬಂಧಿಯಾದ ಸ್ವಭಾವವನ್ನು ಆಶ್ರಯಿಸಿರುತ್ತಾರೆ. ತಮೋಯೋಗ್ಯರಾದ ಅವರು ನನ್ನನ್ನು ಅಧಮನೆಂದು ತಿಳಿಯುತ್ತಾರೆ.

ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ॥ ೧೩೫ ॥

ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಮ್ ।

ಮಹಾತ್ಮಾನಃ ಎನ್ನುವಲ್ಲಿ ಭಗವಂತನ ಭಜನಾದಿ ರೂಪವಾದ ದೇವತ್ವವು ಅವರ ಸ್ವಭಾವವೆಂದು ತಿಳಿಯಲ್ಪಡುತ್ತದೆ. ಹೇ ಅರ್ಜುನನೇ, ದೇವತ್ವ ಸ್ವಭಾವವನ್ನು ಆಶ್ರಯಿಸಿರುವ ಮಹಾತ್ಮರು ಭೂತಗಳಿಗೆ ಕಾರಣನೂ ಚತುರ್ವಿಧ ನಾಶರಹಿತನೂ ಎಂಬುದಾಗಿ ಯಥಾರ್ಥವಾಗಿ ತಿಳಿದು ಅನ್ಯವಿಷಯಗಳಲ್ಲಿ ಮನಸ್ಸನ್ನಿಡದೆ ನನ್ನನ್ನು ಉಪಾಸನೆ ಮಾಡುತ್ತಾರೆ.

ಅಭಯಂ ಸತ್ವಸಂಶುದ್ಧಿರ್ಜ್ಞಾನಯೋಗವ್ಯವಸ್ಥಿತಿಃ ॥ ೧೩೬ ॥

ದಾನಂ ದಮಶ್ಚ ಯಜ್ಞಶ್ಚ ಸ್ವಾಧ್ಯಾಯಸ್ತಪ ಆರ್ಜವಮ್ ।

ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಮ್ ॥ ೧೩೭ ॥

ದಯಾ ಭೂತೇಷ್ವಲೋಲುತ್ವಂ ಮಾರ್ದವಂ ಹ್ರೀರಚಾಪಲಮ್ ।

ತೇಜಃ ಕ್ಷಮಾ ಧೃತಿಃ ಶೌಚಮದ್ರೋಹೋ ನಾತಿಮಾನಿತಾ ॥ ೧೩೮ ॥

ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ।

ಅಭಯಂ ಇತ್ಯಾದಿ ವಚನದಿಂದ ಅಭಯಾದಿ ರೂಪವಾದುದು ದೇವತ್ವ ಸ್ವಭಾವವೆಂದೂ, ದಂಭಾದಿ ರೂಪವಾದುದು ಅಸುರತ್ವ ಸ್ವಭಾವವೆಂದೂ ಹೇಳಿದೆ. ತನಗೂ ತನ್ನಿಂದ ಇತರರಿಗೂ ಭಯವಿಲ್ಲದಿರುವಿಕೆ, ಚಿತ್ತಪ್ರಸಾದ, ಜ್ಞಾನೋಪಾಯದಲ್ಲಿ ಆಸಕ್ತಿ, ಸತ್ಪಾತ್ರರಲ್ಲಿ ದ್ರವ್ಯಾದಿ ದಾನ, ಇಂದ್ರಿಯನಿಗ್ರಹ, ಯಜ್ಞ, ವೇದಾಧ್ಯಯನ, ಬ್ರಹ್ಮಚರ್ಯಾದಿ ತಪಸ್ಸು, ನಡೆ ನುಡಿಗಳಲ್ಲಿ ಏಕರೂಪತ್ವ, ಅಹಿಂಸೆ, ಸತ್ಯ, ಕ್ರೋಧರಾಹಿತ್ಯ ಅಂದರೆ ಚಿತ್ತವಿಕಾರಾಭಾವ, ತ್ಯಾಗ, ಭಗವಂತನಲ್ಲಿ ಆಸಕ್ತವಾದ ಬುದ್ಧಿ, ಪರರ ಉಪದ್ರವಕ್ಕೆ ಕಾರಣವಾಗುವ ದೋಷಾದಿಗಳನ್ನು ಹೇಳದಿರುವುದು, ಪ್ರಾಣಿಗಳಲ್ಲಿ ದಯೆ ಅಥವಾ ಪರರಿಗೆ ಹಿತವನ್ನು ಮಾಡುವ ಮನಸ್ಸು, ವಿಷಯಗಳಲ್ಲಿ ರಾಗವಿಲ್ಲದಿರುವಿಕೆ, ತನಗೆ ಹಿಂಸೆ ಮಾಡುವವರಲ್ಲಿಯೂ ಕ್ರೋಧವಿಲ್ಲದಿರುವುದು, ಅಧರ್ಮವನ್ನು ಮಾಡಲು ನಾಚಿಕೆ, ಸ್ಥಿರತ್ವ, ತೇಜಸ್ಸು, ಕ್ಷಮೆ ಅಂದರೆ ತನಗೆ ಅಪಕಾರ ಮಾಡಿದವನಿಗೂ ಅಪಕಾರ ಮಾಡದಿರುವುದು, ಆತಂಕರಾಹಿತ್ಯ, ಬಾಹ್ಯ ಮತ್ತು ಆಂತರಿಕ ಶುಚಿತ್ವ, ಪರರಿಗೆ ದ್ರೋಹ

ಮಾಡದಿರುವಿಕೆ, ಅಹಂಕಾರರಾಹಿತ್ಯ ಇವೆಲ್ಲ ಗುಣಗಳೂ ದೇವತ್ವ ಸಂಬಂಧಿಯಾದ ಸಂಪತ್ತನ್ನು ಹೊಂದಿದವರಿಗೆ ಆಗುತ್ತವೆ.

ದಂಭೋ ದರ್ಪೋ೨ಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ ।। ೧೨೯ ।।

ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್ ।

ತಾನು ಅಲ್ಪನೆಂದು ತಿಳಿದಿದ್ದರೂ ಮಹಾತ್ಮನೆಂದು ತೋರಿಸುವುದು, ಭಯಕ್ಕೆ ಕಾರಣವಿದ್ದರೂ ಮದದಿಂದ ಅದು ಇಲ್ಲವೆಂದು ತೋರಿಸುವುದು, ಪ್ರಮಾಣಗಳನ್ನು ಅತಿಕ್ರಮಿಸಿ ನಡೆಯುವುದು, ಕ್ರೋಧ, ನಿಷ್ಠುರತೆ, ಅಜ್ಞಾನವೂ ಕೂಡ ಆಸುರೀ ಸಂಪತ್ತುಳ್ಳವರಿಗೆ ಆಗುತ್ತವೆ.

ಮಾಮಾತ್ಮಪರದೇಹೇಷು ಪ್ರದ್ವಿಷಂತೋ೨ಭ್ಯಸೂಯಕಾಃ ।। ೧೩೦ ।।

ತಾನಹಂ ದ್ವಿಷತಃ ಕ್ರೂರಾನ್. ಸಂಸಾರೇಷು ನರಾಧಮಾನ್ ।

ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ।। ೧೩೧ ।।

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।

ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಮ್ ।।೧೩೨।।

ಮಾಮಾತ್ಮ ಇತ್ಯಾದಿ ವಚನದಿಂದ ಆಸುರೀ ಸ್ವಭಾವದವರಿಗೆ ಅಂಧಂತಮಸ್ಸಿನ ಪ್ರಾಪ್ತಿಯಿಂದಲೇ ಅವಸಾನವೆಂದು ತಿಳಿಸುತ್ತಾರೆ. ಆಸುರರು ತನ್ನ ಶರೀರದಲ್ಲಿಯೂ ಪರರ ಶರೀರದಲ್ಲಿಯೂ ನಿಯಾಮಕನಾದ ನನ್ನನ್ನು ವಿಶೇಷವಾಗಿ ದ್ವೇಷಿಸುತ್ತ ನಿರ್ದೋಷನಾದ ನನ್ನಲ್ಲಿ ದೋಷಗಳನ್ನು ಆರೋಪ ಮಾಡುತ್ತ ಯಾಗಾದಿಗಳನ್ನು ಮಾಡುವರು. ನನ್ನನ್ನು ದ್ವೇಷಿಸುವ ಕ್ರೂರರಾದ ಅಮಂಗಲರಾದ ನರಾಧಮರಾದ ಆ ಆಸುರರನ್ನು ಸಂಸಾರಗಳಲ್ಲಿಯೇ ಆಸುರೀ ಯೋನಿಗಳಲ್ಲಿಯೇ ನಿರಂತರವಾಗಿ ಸ್ಥಾಪಿಸುತ್ತೇನೆ. ಅದರಿಂದ ತಾಮಸ ಸ್ವಭಾವದ ಅವರು ಅನೇಕ ಜನ್ಮಗಳಲ್ಲಿ ಆಸುರೀ ಯೋನಿಯನ್ನು ಹೊಂದಿದವರಾಗಿ, ನನ್ನನ್ನು ಎಂದಿಗೂ ಹೊಂದದೇ ನಿತ್ಯನರಕ ರೂಪವಾದ ಅಧಮವಾದ ಗತಿಯನ್ನು ಹೊಂದುತ್ತಾರೆ.

ದ್ವಿವಿಧೋ ಇತ್ಯಾದಿ ಸ್ಮೃತಿಗಳನ್ನು ಉದಾಹರಿಸುವ ಮೂಲಕ ದೇವತ್ವ ಆಸುರತ್ವಗಳ ಸ್ವಭಾವತ್ವವನ್ನು ಸ್ಪಷ್ಟಪಡಿಸುತ್ತಾರೆ –

ದ್ವಿವಿಧೋ ಭೂತಸರ್ಗೋ೨ತ್ರ ದೈವ ಆಸುರ ಏವ ಚ ।

ವಿಷ್ಣುಭಕ್ತಿಪರೋ ದೈವೋ ವಿಪರೀತಸ್ತಥಾಸುರಃ ।। ೧೩೩ ।।

ಎಲೈ ರಾಜನೇ, ವಿಷ್ಣುಭಕ್ತಿಯಲ್ಲಿಯೇ ಆಸಕ್ತಿಯುಳ್ಳ ದೇವ ಸ್ವಭಾವದವರು ಮತ್ತು ಅದಕ್ಕೆ ವಿಪರೀತವಾದ ಆಸುರ ಸ್ವಭಾವದವರು ಎಂದು ಇಲ್ಲಿ ಸೃಷ್ಟಿಯು ಎರಡೇ ವಿಧವು.

ದೇವಾನಾಂ ಪರಮೋ ಧರ್ಮಃ ಸದಾ ಯಜ್ಞಾದಿಕಾಃ ಕ್ರಿಯಾಃ ।

ಸ್ವಾಧ್ಯಾಯಸ್ತತ್ತ್ವವೇದಿತ್ವಂ ವಿಷ್ಣುಪೂಜಾರತಿಃ ಸ್ಮೃತಿಃ ॥ ೧೩೪ ॥

ಯಾವಾಗಲೂ ಭಗವದರ್ಪಣ ಬುದ್ಧಿಯಿಂದ ಯಜ್ಞಾದಿಗಳನ್ನು ಮಾಡುವುದು, ವೇದಾಧ್ಯಯನ, ಯಥಾರ್ಥವಾದ ತತ್ವವನ್ನು ಅರಿಯುವುದು, ವಿಷ್ಣುಪೂಜೆಯಲ್ಲಿ ಆಸಕ್ತಿ ಹಾಗೂ ವಿಷ್ಣುಸ್ಮರಣೆ ಇವುಗಳೇ ದೇವತೆಗಳ ಪರಮಧರ್ಮ.

ದೈತ್ಯಾನಾಂ ಬಾಹುಶಾಲಿತ್ವಂ ಮಾತ್ಸರ್ಯಂ ಯುದ್ಧಸತ್ಕ್ರಿಯಾ ।

ನೀತಿಶಾಸ್ತ್ರಪ್ರವೇದಿತ್ವಂ ಶಿವಪೂಜಾ ರತಿಃ ಸ್ಮೃತಿಃ ॥ ೧೩೫ ॥

ನಿರರ್ಥಕವಾದ ಭುಜಪರಾಕ್ರಮ, ಸಜ್ಜನರಲ್ಲಿ ಮಾತ್ಸರ್ಯ, ಯುದ್ಧಕೌಶಲ, ನೀತಿಶಾಸ್ತ್ರಗಳ ಜ್ಞಾನ, ರುದ್ರನ ಪೂಜೆಯಲ್ಲಿ ಆಸಕ್ತಿ ಹಾಗೂ ರುದ್ರನ ಸ್ಮರಣೆ ಇವುಗಳು ದೈತ್ಯರ ಧರ್ಮ.

ವರ್ಣಾಶ್ರಮಾಚಾರವತ್ವಂ ಸ್ವಾಧ್ಯಾಯೋ ಭಕ್ತಿರಚ್ಯುತೇ ।

ಶಿವೇ ಸೂರ್ಯೇ ತಥಾ ದೇವ್ಯಾಂ ಸ್ವಭಾವೋ ಮಾನುಷಃ ಸ್ಮೃತಃ ॥೧೩೬॥

ವರ್ಣಾಶ್ರಮ ಧರ್ಮಗಳ ಅನುಷ್ಠಾನ, ವೇದಾಧ್ಯಯನ, ಶ್ರೀಹರಿ, ರುದ್ರ ಸೂರ್ಯ ಹಾಗೂ ಲಕ್ಷ್ಮೀದೇವಿ ಎಲ್ಲರಲ್ಲಿಯೂ ಸಮನಾದ ಭಕ್ತಿ, ಇವುಗಳು ಮಾನುಷ ಸ್ವಭಾವವೆಂದು ಹೇಳಲ್ಪಟ್ಟಿದೆ.

ಅನಾದಿವೈಷ್ಣವಾ ಏವ ದೇವತಾಸ್ತು ಸ್ವಭಾವತಃ ।

ವಿಪರೀತಾಃ ಸ್ಮೃತಾ ದೈತ್ಯಾಃ ಸದೈವಾನಾದಿಕಾಲತಃ ॥ ೧೩೭ ॥

ಮಾನುಷಾ ಮಿಶ್ರಮತಯೋ ವಿಮಿಶ್ರಗತಯೋಪಿ ಚ ।

ಇತ್ಯಾದಿವಾಕ್ಯ ಸಂದರ್ಭೈರ್ಜ್ಞಾಯತೇऽನಾದಿಯೋಗ್ಯತಾ ॥ ೧೩೮ ॥

ಸ್ವಾಭಾವಿಕವಾಗಿ ದೇವತೆಗಳು ಅನಾದಿ ಕಾಲದಿಂದ ವಿಷ್ಣುಭಕ್ತರೇ ಆಗಿರುವರು. ದೈತ್ಯರು ಅನಾದಿ ಕಾಲದಿಂದಲೂ ಸರ್ವದಾ ಮಿಥ್ಯಾಜ್ಞಾನಿಗಳೂ ವಿಷ್ಣುದ್ವೇಷಿಗಳೂ ಎಂದೇ ಹೇಳಲ್ಪಟ್ಟಿದ್ದಾರೆ. ಮನುಷ್ಯರು ಅನಾದಿ ಕಾಲದಿಂದಲೂ ಯಥಾರ್ಥ ಮತ್ತು ಅಯಥಾರ್ಥಜ್ಞಾನದಿಂದ ಮಿಶ್ರಬುದ್ಧಿಯುಳ್ಳವರು ಹಾಗೂ ಸುಖದುಃಖಗಳಿಂದ ಮಿಶ್ರವಾದ ಫಲವುಳ್ಳವರು (ನಿತ್ಯಸಂಸಾರಿಗಳು), ಇವೇ ಮೊದಲಾದ ವಾಕ್ಯಗಳ ಸಂದರ್ಭಗಳಿಂದ ತ್ರಿವಿಧ ಜೀವರ ಅನಾದಿ ಯೋಗ್ಯತೆಯು ತಿಳಿಯಲ್ಪಡುತ್ತದೆ. ಈ ಪ್ರಕಾರವಾಗಿ ದೇವತ್ವಾದಿಗಳು ಸ್ವಭಾವವೆಂದು ಸ್ಪಷ್ಟಮಾಡಲ್ಪಟ್ಟಿತು.

ಮೇಲೆ ಹೇಳಿದ ಅನುಮಾನಗಳಿಗೆ ವ್ಯಾಪ್ತಿಯನ್ನು ನಿರ್ಧರಿಸುವುದಕ್ಕೂ ಹಾಗೂ ಆಗಮಗಳಿಗೆ ಅನ್ಯಾರ್ಥವ್ಯಾಖ್ಯಾನವನ್ನು ನಿರಾಕರಿಸುವುದಕ್ಕೂ ಅನುಗ್ರಾಹಕವಾದ ತರ್ಕವನ್ನು ಹೇಳುತ್ತಾರೆ –

ಯದ್ಯನಾದಿವಿಶೇಷೋ ನ ಸಾಂಪ್ರತಂ ಕಥಮೇವ ಸಃ ।

ಚತುರ್ಮುಖನಿಗೆ ಅನಾದಿಯಾದ ಸರ್ವೋತ್ಕೃಷ್ಟವಾದ ಯೋಗ್ಯತಾರೂಪ ವಿಶೇಷವು ಇಲ್ಲವೆಂದರೆ, ಈಗ ಕಾಣುತ್ತಿರುವ ಸರ್ವೋತ್ಕೃಷ್ಟತ್ವವು ಹೇಗೆ ತಾನೆ ಕೂಡುವುದು? ಸರ್ವೋತ್ಕೃಷ್ಟತ್ವಕ್ಕೆ ಅನಾದಿಯಾದ ಯೋಗ್ಯತೆಯೇ ಕಾರಣ. ಕಾರಣವಿಲ್ಲದಿದ್ದರೆ ಕಾರ್ಯವೂ ಆಗಲಾರದು. ಹಾಗೆ ನಿಯಮವಿಲ್ಲದೇ ಇದ್ದರೆ ಎಲ್ಲರಿಗೂ ಸರ್ವೋತ್ಕೃಷ್ಟತ್ವವು ಬರಬೇಕಾಗುವುದು.

ಹಾಗಾದರೆ ಬ್ರಹ್ಮಾದಿಗಳಿಗೆ ಯೋಗ್ಯತಾರೂಪವಾದ ಅನಾದಿಯಾದ ವಿಶೇಷವು ಇಲ್ಲದಿದ್ದರೂ ಸಾದಿಯಾದ ವಿಶಿಷ್ಟವಾದ ಅದೃಷ್ಟದಿಂದಲೇ ಸರ್ವೋತ್ಕೃಷ್ಟಾದಿಗಳು ಸಂಭವಿಸುತ್ತವೆ. ಏಕೆಂದರೆ 'ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾನ್ವಿರಿಂಚಿತಾಮೇತಿ' ಎಂದು ಸ್ಮೃತಿಯಿದೆ ಎಂದರೆ, ಆಗ ವಿರಿಂಚನ ಸರ್ವೋತ್ಕರ್ಷತ್ವಕ್ಕೆ ಬೀಜವಾದ ವಿಶಿಷ್ಟವಾದ ಅದೃಷ್ಟವು ಹಿಂದಿನ ಅದೃಷ್ಟದ ಅಪೇಕ್ಷೆಯಿಲ್ಲದೆ ಹುಟ್ಟುವುದೋ ಅಥವಾ ಅಪೇಕ್ಷೆಯಿಂದಲೋ? ಎಂದು ಪ್ರಶ್ನೆ ಮಾಡಬೇಕಾಗುವುದು. ಅದರಲ್ಲಿ ಮೊದಲನೆಯದನ್ನು ಅದೃಷ್ಟಾದೇವ ಇತ್ಯಾದಿ ವಚನದಿಂದಲೂ, ಎರಡನೆಯದನ್ನು ಅದೃಷ್ಟಾಚ್ಚೇತ್ ಇತ್ಯಾದಿ ವಚನದದಿಂದಲೂ ದೂಷಿಸುತ್ತಾರೆ –

ಅದೃಷ್ಟಾದೇವ ಚಾದೃಷ್ಟಂ ಸ್ವೀಕೃತಂ ಸರ್ವವಾದಿಭಿಃ ॥ ೧೫೯ ॥

ಆಕಸ್ಮಿಕೋ ವಿಶೇಷಶ್ಚೇದದೃಷ್ಟೇ ಕ್ವಚಿದಿಷ್ಯತೇ ।

ಸರ್ವತ್ರಾಕಸ್ಮಿಕತ್ವಂ ಸ್ಯಾನ್ನಾದೃಷ್ಟಾಪೇಕ್ಷತಾ ಭವೇತ್ ॥ ೧೬೦ ॥

ಅದೃಷ್ಟಾಚ್ಚೇದ್ವಿಶೇಷೋऽಯಮಾನದಿತ್ವಂ ಕುತೋ ನ ತತ್ ।

ಉತ್ತರೋತ್ತರ ಅದೃಷ್ಟವು ಪೂರ್ವಾಪೂರ್ವ ಅದೃಷ್ಟದಿಂದಲೇ ಉಂಟಾಗುತ್ತದೆ ಎಂದು ಚಾರ್ವಾಕನನ್ನು ಬಿಟ್ಟು ಉಳಿದ ಎಲ್ಲ ವಾದಿಗಳೂ ಸ್ವೀಕರಿಸಿರುತ್ತಾರೆ. ಆದಕಾರಣ ಸರ್ವೋತ್ಕರ್ಷತ್ವಕ್ಕೆ ಕಾರಣವಾದ ಅದೃಷ್ಟವು ಹಿಂದಿನ ಅದೃಷ್ಟದ ಅಪೇಕ್ಷೆಯಿಲ್ಲದೆ ಹುಟ್ಟುತ್ತದೆ ಎಂದು ಹೇಳಿದರೆ ಅಪಸಿದ್ಧಾಂತವು. ವಿರಿಂಚನ ಉತ್ಕರ್ಷಕ್ಕೆ ಕಾರಣವಾದ ಯಾವುದೋ ಒಂದು ಅದೃಷ್ಟದಲ್ಲಿ ಅತಿಶಯವು ಆಕಸ್ಮಿಕವಾಗಿಯೇ (ಅದೃಷ್ಟದ ಅಪೇಕ್ಷೆಯಿಲ್ಲದೇ) ಆಗುವುದಾದರೆ, ಫಲಾದಿಗಳೂ ಕೂಡ ಆಕಸ್ಮಿಕವಾಗಿಯೇ ಆಗುವುದೆಂದು ಅಂಗೀಕರಿಸಬೇಕಾಗುವುದು. ಹಾಗಾದರೆ ಅದೃಷ್ಟವನ್ನು ಅಪೇಕ್ಷಿಸಿಯೇ ಹುಟ್ಟಲಿ ಎಂದರೆ – ವಿರಿಂಚನ ಸರ್ವೋತ್ಕರ್ಷಕ್ಕೆ ಕಾರಣವಾದ ಅದೃಷ್ಟವು ಹಿಂದಿನ ಅದೃಷ್ಟದಿಂದ ಹುಟ್ಟುವುದೆಂದು ಒಪ್ಪಿದರೆ ಅಂಥಹ ಅದೃಷ್ಟ ಪರಂಪರೆಗೆ ಅನಾದಿತ್ವವನ್ನು ಒಪ್ಪಬೇಕಾಗುವುದು.

ಭಗವಂತನು ನಿರ್ದೋಷನೆಂದು ಹಿಂದೆ ಈ ಪಾದದ ಉಪಕ್ರಮದಲ್ಲಿ ಏನು ಹೇಳಲ್ಪಟ್ಟಿತೋ, ಅದನ್ನು ಸಮರ್ಥಿಸಲಿಕ್ಕಾಗಿ ಉತ್ತರ ಗ್ರಂಥವು. ಇದನ್ನು ನ

ಸ್ತಾನತೋಪಿ ಇತ್ಯಾದಿಗಳಿಂದಲೇ ಸಮರ್ಥನೆ ಮಾಡಲಾಗಿದೆ ಎಂದರೆ, ಸತ್ಯವೇ. ಅಲ್ಲಿ ಯುಕ್ತ್ಯಾದಿಗಳಿಂದ ಪ್ರಾಪ್ತವಾದ ಸದೋಷತ್ವವನ್ನು ನಿರಾಕರಿಸಲಾಗಿದೆ. ಇರ್ಲಾದರೂ ಪ್ರತ್ಯಕ್ಷಪ್ರಾಪ್ತವಾದ ದೋಷತ್ವವನ್ನು ನಿಕಾರಿಸಲಾಗುವುದು. ಹೀಗೆ ಪ್ರಕರಣ ಭೇದವಿದೆ.

ಇಲ್ಲಿ ಹೀಗೆ ಶಂಕಿಸಲ್ಪಡುತ್ತದೆ – ಭಗವದವತಾರಗಳಾದ ರಾಮಕೃಷ್ಣಾದಿ ರೂಪಗಳು ಭಗವಂತನಿಂದ ಅತ್ಯಂತಾಭಿನ್ನಗಳೆಂದು ಸಮರ್ಥಿಸಲಾಗಿದೆ. ರಾಮ ಕೃಷ್ಣಾದಿ ರೂಪಗಳಲ್ಲಿ ಪರಸ್ಪರ ಭೇದವೂ, ವೇಧಾದಿಗಳೂ ಆ ಕಾಲದ ಜನರಿಂದ ಪ್ರತ್ಯಕ್ಷವಾಗಿ ಕಂಡಿವೆ. ಆದಕಾರಣ ಭಗವಂತನಲ್ಲಿ ನಿರ್ದೋಷತ್ವವಿಲ್ಲ ಎಂದರೆ –

ನ ಚಾನ್ಯಭೇದವದ್ವಿಷ್ಣೌ ಭೇದಸ್ತದ್ದರ್ಶಿನಾಮಪಿ ।। ೧೪೧ ।।

ದೃಶ್ಯತೇ ಪ್ರತ್ಯಭಿಜ್ಞೈವ ಬಹುರೂಪೇಷು ದೃಶ್ಯತೇ ।

ಬಹುತ್ವಂ ಚ ವಿಶೇಷೇಣ ನ ಭೇದೇನ ಕಥಂಚನ ।। ೧೪೨ ।।

ಭಗವದಿತರವಾದ ಘಟಾದಿಗಳಲ್ಲಿ ಅನೇಕತ್ವದಿಂದ ಅತಿರಿಕ್ತವಾದ ಅನ್ಯೋನ್ಯಾ ಭಾವರೂಪವಾದ ಭೇದವು ಹೇಗೆ ಕಾಣಲ್ಪಡುವುದೋ ಹಾಗೆ ವಿಷ್ಣುವಿನ ರಾಮ ಕೃಷ್ಣಾದಿ ರೂಪಗಳಲ್ಲಿ ಭೇದವು ಕಾಣಲ್ಪಡುವುದಿಲ್ಲ. ಸ್ವಭಾವದಿಂದ ಜೀವರಲ್ಲಿ ದೇವ ದಾನವ ಮಾನವ ಎಂದು ಮೂರು ವಿಧ. ಅದರಲ್ಲಿ ದೇವತೆಗಳ ಪ್ರತ್ಯಕ್ಷಕ್ಕೆ ಭಗವಂತನ ಅವತಾರಗಳಲ್ಲಿ ಭೇದವು ತೋರುವುದಿಲ್ಲ. ಉತ್ತಮರಾದ ಪುರುಷರಿಗೆ ಭಗವಂತನ ಅನೇಕ ರೂಪಗಳಲ್ಲಿ ಪ್ರತ್ಯಭಿಜ್ಞೆಯಿಂದ ಅಭೇದವೇ ಕಂಡುಬರುವುದು. ಅಂದರೆ ಆ ರಾಮನೇ ಈ ಕೃಷ್ಣನು ಎಂದು ಜಾಂಬವಂತ ಕಂಡಂತೆ. ಭಗವಂತನ ರೂಪಗಳಿಗೆ ಬಹುತ್ವವಾದರೂ, ಅಭೇದವಿದ್ದಾಗಲೂ ಭೇದವನ್ನು ನಿರ್ವಹಿಸುವ ವಿಶೇಷದಿಂದಲೇ ಕೂಡುವುದು. ಭಗವಂತನ ರೂಪಗಳಲ್ಲಿ ಭೇದವಿದೆ ಎನ್ನುವಲ್ಲಿ ನಿರವಕಾಶವಾದ ಯಾವುದೇ ಪ್ರಮಾಣವಿಲ್ಲದ ಕಾರಣ, ಯಾವ ರೀತಿಯಿಂದಲೂ ಭಗವಂತನ ರೂಪರೂಪಗಳಲ್ಲಿ ಭೇದವು ಕೂಡುವುದಿಲ್ಲ.

ಹಾಗಾದರೆ ಪರಮಾತ್ಮನ ರೂಪಗಳಲ್ಲಿ ಅಭೇದವನ್ನು ಕಾಣುವ ಪ್ರತ್ಯಭಿಜ್ಞೆಯ ಅಭಾವದಿಂದ ಮಧ್ಯಮ ಪುರುಷರ ದೃಷ್ಟಿಯಿಂದ ಅಭೇದ ಕೂಡುವುದಿಲ್ಲವೆಂದರೆ–

ಪ್ರತ್ಯಭಿಜ್ಞಾ ಚ ಯೇಷಾಂ ನ ತೇಽಪಿ ತನ್ಮೃಷ್ಟದೃಷ್ಟಯಃ ।

ಭೇದಂ ನೈವ ಪ್ರಪಶ್ಯಂತಿ ಭೇದಮನ್ಯೇಭ್ಯ ಏವ ಚ ।। ೧೪೩ ।।

ಪಶ್ಯಂತ್ಯೇವಂ ಹರಿಸ್ತೇಷಾಂ ಸಂದರ್ಶಯತಿ ನಾನ್ಯಥಾ ।

ಏವಂ ಬೃಹತ್ಸಂಹಿತಾಯಾಂ ಪಚನಂ.....।।

ಭಗವದ್ರೂಪಗಳಲ್ಲಿ ಪ್ರತ್ಯಭಿಜ್ಞೆಯಿಲ್ಲದಿರುವ ಮಧ್ಯಮ ಜನರೂ ಕೂಡ ಆ

ಹರಿಯಲ್ಲಿ ಭೇದವನ್ನು ಕಾಣುವುದೇ ಇಲ್ಲ. ಭಗವಂತನಿಂದಲೇ ಅಪಹೃತವಾದ ದೃಷ್ಟಿಯುಳ್ಳವರೇ ಮುಷ್ಟದುಷ್ಟಿಗಳು. ಅದೇ ಅವರ ಪ್ರತ್ಯಭಿಜ್ಞಾಭಾವಕ್ಕೆ ಕಾರಣವು. ಅವರು ಭಗವದ್ರೂಪಗಳಿಗೆ ಭಗವದಿತರ ವಸ್ತುಗಳಿಂದ ಭೇದವನ್ನೂ ನೋಡಿಯೇ ನೋಡುತ್ತಾರೆ. ಭೇದಾಭೇದಗಳ ವಿಷಯದಲ್ಲಿ ಉದಾಸೀನರಾಗಿರುವ ಮಧ್ಯಮರಿಗೆ ಈ ರೀತಿಯ ಪ್ರತೀತಿಯು ಹೇಗೆ ಎಂದರೆ, ಆ ಮಧ್ಯಮ ಜನರಿಗೆ, ಅವರ ಯೋಗ್ಯತೆಯಿಂದ, ಶ್ರೀಹರಿಯು ಅನ್ಯಥಾ ತನ್ನ ರೂಪವನ್ನು ತೋರಿಸುವುದಿಲ್ಲ. ಹೀಗೆ ಬೃಹತ್ಸಂಹಿತೆಯ ವಚನವು.

ಭಗವದ್ರೂಪಗಳಲ್ಲಿ ಭೇದವು ಪತ್ಯಕ್ಷ ಅನುಮಾನಗಳಿಂದ ಸಿದ್ಧವಾಗದಿದ್ದರೆ ಬೇಡ. ಏಕೆಂದರೆ ಆಗಮದಿಂದ ಆ ಭೇದವು ಸಿದ್ಧವಾಗುವುದು. ಪುರಾಣಗಳಲ್ಲಿ ಅಲ್ಲಲ್ಲಿ ಭೇದ ಹೇಳುವ ವಚನಗಳು ಶ್ರುತವಾಗಿವೆ ಎಂದರೆ, ನೇಹ ನಾನಾಸ್ತಿ ಕಿಂಚನ ಇತ್ಯಾದಿ ಶ್ರುತಿಗಳಿಗೆ ವಿರುದ್ಧವಾದ್ದರಿಂದ ಭೇದ ಹೇಳುವಂತೆ ತೋರುವ ಪುರಾಣಗಳ ವಾಕ್ಯಗಳಿಗೆ ಬೇರೆ ಅರ್ಥವನ್ನು ಮಾಡಬೇಕು ಎಂದು ಹೇಳುತ್ತಾರೆ –

.....ನ ಪುರಾಣಗಮ್ ।। ೧೪೪ ।।

ಲೋಕದರ್ಶನವಾದ್ಯೇವ ವೇದರೋಧಾಯ ಶಕ್ನುಯಾತ್ ।

ಪುರಾಣದಲ್ಲಿರತಕ್ಕ ಭೇದಪ್ರತಿಪಾದಕವಾದ ವಚನವು ಜನರಿಗೆ ಭಗವದ್ ರೂಪಗಳಲ್ಲಿ ಯಾವ ಭೇದದರ್ಶನವಾಗುವುದೋ ಅದರ ಅನುವಾದವೇ ಹೊರತು ವಾಸ್ತವವಾಗಿ ಅದಕ್ಕೆ ಭೇದವನ್ನು ಹೇಳುವುದರಲ್ಲಿ ತಾತ್ಪರ್ಯವಿರುವುದಿಲ್ಲ. ಉಪಕ್ರಮಾದಿ ಲಿಂಗಗಳಿಂದ ಹಾಗೆ ನಿಶ್ಚಿತವಾಗುತ್ತದೆ. ಆದ್ದರಿಂದ ಭಗವದ್ರೂಪ ಗಳಲ್ಲಿ ಅಭೇದವನ್ನು ಪ್ರತಿಪಾದಿಸುವ ನೇಹ ನಾನಾಸ್ತಿ ಇತ್ಯಾದಿ ವೇದ ವಾಕ್ಯಗಳನ್ನು ಬಾಧಿಸುವುದಕ್ಕೆ ಪುರಾಣ ವಾಕ್ಯಗಳು ಶಕ್ತವಾಗುವುದಿಲ್ಲ.

ಹಾಗಾದರೆ ಮೊದಲು ಭಗವದ್ರೂಪ ಭೇದ ವಿಷಯದಲ್ಲಿ ಪ್ರತ್ಯಕ್ಷವಿಲ್ಲವೆಂದು ಹೇಳಿ, ಈಗ ಆ ಪ್ರತ್ಯಕ್ಷವುಂಟು ಎಂದು ಹೇಳಿದರೆ ವ್ಯಾಹತವಾಗುವುದು. ಉತ್ತಮ ಮಧ್ಯಮರಿಗೆ ಭೇದ ಪ್ರತ್ಯಕ್ಷವಿಲ್ಲವೆಂದು ಹೇಳಲ್ಪಟ್ಟಿದೆ. ಅಧಮರಿಗೆ ಭೇದಪ್ರತ್ಯಕ್ಷವು ಇದೆ ಎಂದು ಈಗ ಅಂಗೀಕರಿಸಲ್ಪಡುತ್ತದೆ. ಆದ್ದರಿಂದ ಅಧಮರ ಭೇದ ಪ್ರತ್ಯಕ್ಷವೇ ಅಭೇದ ದರ್ಶನಕ್ಕೆ ಬಾಧಕವು ಏಕೆ ಆಗಲಾರದು ಎಂದರೆ –

ಅಪರೀಕ್ಷಿತದೃಷ್ಟಿಶ್ಚ ಪರೀಕ್ಷಾಪೂರ್ವದರ್ಶನಮ್ ।। ೧೪೫ ।।

ನಿಷೇದ್ಧುಂ ಶಕ್ನುಯಾತ್ ಕ್ವಾಪಿ ದೇವದತ್ತಾದಿದೃಷ್ಟಿವತ್ ।

ಪರೀಕ್ಷೆಯಿಂದ ಪ್ರಮಾಣವೆಂದು ನಿಶ್ಚಿತವಾಗದ ಜ್ಞಾನವು ಪರೀಕ್ಷಾಪೂರ್ವಕ ಪ್ರಾಮಾಣ್ಯನಿಶ್ಚಯವುಳ್ಳ ಪ್ರತ್ಯಕ್ಷವನ್ನು ಎಲ್ಲಿಯೂ ನಿಷೇಧಿಸಲಿಕ್ಕೆ ಶಕ್ಯವಾಗದು. ಹೇಗೆ ಯಜ್ಞದತ್ತಾದಿಗಳಲ್ಲಿ ಅನಿಶ್ಚಿತ ಪ್ರಾಮಾಣ್ಯವುಳ್ಳ ದೇವದತ್ತಾದಿಗಳ ದೃಷ್ಟಿಯು

ನಿಶ್ಚಿತ ಪ್ರಾಮಾಣ್ಯವುಳ್ಳ ಯಜ್ಞದತ್ತಾದಿಗಳ ದೃಷ್ಟಿಯನ್ನು ಬಾಧಿಸುವುದಿಲ್ಲವೋ ಹಾಗೆ. ಭೇದದೃಷ್ಟಿಯು ಅನಿಶ್ಚಿತ ಪ್ರಾಮಾಣ್ಯವುಳ್ಳದ್ದು. ಆದರೆ ಅಭೇದ ದೃಷ್ಟಿಯು ನಿಶ್ಚಿತ ಪ್ರಾಮಾಣ್ಯವುಳ್ಳದ್ದು. ಆದ್ದರಿಂದ ಅಭೇದದರ್ಶನಕ್ಕೆ ಬಾಧವಿಲ್ಲವೆಂದು ಭಾವ.

ಭೇದದರ್ಶನವು ಅನಿಶ್ಚಿತ ಪ್ರಾಮಾಣ್ಯವುಳ್ಳದ್ದು ಹೇಗೆ ಎಂದರೆ –

ನ ಚ ನಿಶ್ಚಿತಭೇದಸ್ಯ ದರ್ಶನೇಽಸ್ತಿ ಪುರಾಣಗಮ್ ।। ೧೪೬ ।।

ವಾಕ್ಯಂ ಕ್ವಚಿದ್ಧಿ ಸಂಮುಗ್ಧಂ ದರ್ಶನಂ ತತ್ರ ಗಮ್ಯತೇ ।

ಪರಮೇಶ್ವರನ ರೂಪಗಳಿಗೆ ಭೇದ ವಿಷಯಕವಾದ ಪ್ರತ್ಯಕ್ಷವು ನಮಗೆ ಪುರಾಣ ವಾಕ್ಯಗಳಿಂದಲೇ ಸಿದ್ಧವಾಗಿದೆ. ಪುರಾಣವಾಕ್ಯವಾದರೂ ಕೆಲವರು ಭೇದವನ್ನು ನೋಡುತ್ತಾರೆಂದು ಅನುವಾದ ರೂಪದಿಂದ ಪ್ರತಿಪಾದಿಸುತ್ತದೆ. ಆದರ ಪ್ರಾಮಾಣ್ಯ ನಿಶ್ಚಯಕ್ಕೆ ನಾವು ಪುರಾಣಾಂತರಗಳನ್ನು ನೋಡಬೇಕು. ಆದರೆ ಭೇದದರ್ಶನವನ್ನು ನಿಶ್ಚಿತವಾಗಿ ಪ್ರತಿಪಾದಿಸುವ ಯಾವುದೇ ಪೂರಾಣವಾಕ್ಯವೂ ಕಂಡುಬರುವುದಿಲ್ಲ. ಹೀಗೆ ಪ್ರಮಾಣಾಭಾವದ ಕಾರಣದಿಂದ ಭೇದದರ್ಶನಕ್ಕೆ ಪ್ರಾಮಾಣ್ಯ ನಿಶ್ಚಯವಿಲ್ಲ. ಪುರಾಣವಾಕ್ಯದಿಂದ ಭೇದವೋ ಅಭೇದವೋ ಎಂಬ ಸಂಶಯದಿಂದ ಕೂಡಿದ ಭೇದದರ್ಶನವು ಮಾತ್ರ ತಿಳಿಯಲ್ಪಡುತ್ತದೆ.

ಹಾಗಾದರೆ ಭಗವದ್ರೂಪಗಳಲ್ಲಿ ವೇಧಾದಿಗಳನ್ನು ನೋಡಿದವರ ಪ್ರತ್ಯಕ್ಷವೇ ಭೇದದರ್ಶನಕ್ಕೆ ಪ್ರಮಾಣವು ಎಂದು ಹೇಳಕೂಡದು. ಏಕೆಂದರೆ ವೇಧಾದಿಗಳ ಅಭಾವವನ್ನು ಗ್ರಹಿಸತಕ್ಕ ಮಹಾತ್ಮರ ಪ್ರತ್ಯಕ್ಷದಿಂದ ಅದು ಬಾಧಿತವು. ಮಹಾತ್ಮರ ಪ್ರತ್ಯಕ್ಷಕ್ಕೆ ಬಾಧಕವಿಲ್ಲವಾದ್ದರಿಂದ ಅದಕ್ಕೇ ಪ್ರಾಮಾಣ್ಯವು ಎನ್ನುತ್ತಾರೆ –

ಅಪರೀಕ್ಷಿತಮೇವಾತ್ರ ವೇಧಾದಿಕಮಧೀಶಿತುಃ ।। ೧೪೭ ।।

ಪರೀಕ್ಷಾದರ್ಶನೇನೈವ ದೃಶ್ಯತೇ ಕೇನಚಿತ್ಕ್ವಚಿತ್ ।

ಪರಮಾತ್ಮನ ಅವತಾರಗಳಲ್ಲಿ ಅಪರೀಕ್ಷಿತವಾದ ದೃಷ್ಟಿಯುಳ್ಳವರಿಗೆ ಮಾತ್ರ ವೇಧಾದಿ ದೋಷಗಳು ಕಾಣುತ್ತವೆ. ಪರೀಕ್ಷಾಪೂರ್ವಕ ದರ್ಶನದಲ್ಲಿ ವೇಧಾದಿಗಳು ಯಾರಿಗೂ ಎಲ್ಲಿಯೂ ಕಂಡುಬರುವುದಿಲ್ಲ. ದೋಷದರ್ಶನವು ಅಪರೀಕ್ಷಿತವಾದರೆ ನಿರ್ದೋಷದರ್ಶನವು ಪರೀಕ್ಷಿತವು ಎಂದು ಭಾವ.

ಹಾಗಾದರೆ ಮಹಾತ್ಮರ ಪ್ರತ್ಯಕ್ಷವೇ ನಿರ್ದುಷ್ಟವಾದುದು ಎಂದು ಹೇಗೆ ತಿಳಿದು ಬರುತ್ತದೆ ಎಂದರೆ ಅದಕ್ಕೆ ಪ್ರಮಾಣವಾಗಿ ಬರ್ಕಶ್ರುತಿಯನ್ನು ಉದಾಹರಿಸುತ್ತಾರೆ –

ನಿರ್ದೋಷಮೇವ ತಂ ಬ್ರಹ್ಮಾ ದದರ್ಶಾಶೇಷರೂಪಿಣಮ್ ।। ೧೪೮ ।।

ನಿರ್ದೋಷಮೇವ ರುದ್ರೋಽದ್ರಾಜ್ಞಿರ್ದೋಷಂ ತಂ ಪುರಂದರಃ ।

ನಿರ್ದೋಷಾಣ್ಯಸ್ಯ ರೂಪಾಣಿ ದೃಷ್ಟಾನ್ಯೇವಂ ಸುರೋತ್ತಮೈಃ ।। ೧೪೯ ।।

ಅನ್ಯೇ ಸ ದೋಷಾಃ ಸರ್ವೇಽಪಿ ನಿರ್ದೋಷೋ ಹರಿರೇಕಲಃ ।

ಇತಿ ಬರ್ಕಶ್ರುತೇಶ್ಚೈವ ಸದೋಷಂ ನಾಸ್ಯ ದರ್ಶನಮ್ ॥ ೧೫೦ ॥

ಚತುರ್ಮುಖ ಬ್ರಹ್ಮನು ನಿರ್ದೋಷನೇ ಆದ ಅನಂತಾನಂತ ರೂಪವುಳ್ಳ ಆ ಶ್ರೀಹರಿಯನ್ನು ನೋಡಿದನು. ರುದ್ರನೂ ನಿರ್ದೋಷನೇ ಆದ ಶ್ರೀಹರಿಯನ್ನು ನೋಡಿದನು. ಇಂದ್ರನೂ ಅವನನ್ನು ದೋಷರಹಿತನೆಂದೇ ನೋಡಿದನು. ಹೀಗೆಯೇ ದೇವಶ್ರೇಷ್ಠರಿಂದ ಶ್ರೀಹರಿಯ ನಿರ್ದೋಷವಾದ ರೂಪಗಳೇ ಕಾಣಲ್ಪಟ್ಟಿವೆ. ಶ್ರೀಹರಿಯಿಂದ ಇತರರಾದ ಎಲ್ಲರೂ ದೋಷಸಹಿತರೇ. ಹರಿಯೊಬ್ಬನೇ ದೋಷ ರಹಿತನು. ಹೀಗೆ ಬರ್ಕಶ್ರುತಿಯ ವಚನವಿದೆ. ಆದಕಾರಣ ಪರಮೇಶ್ವರನ ವಿಷಯದಲ್ಲಿ ಮಹಾತ್ಮರ ದರ್ಶನವು ಸದೋಷವಲ್ಲವೇ ಅಲ್ಲ.

ದೋಷದರ್ಶನವು ಅಪರೀಕ್ಷಿತವೂ, ನಿರ್ದೋಷದರ್ಶನವು ಪರೀಕ್ಷಿತವೂ ಎನ್ನುವುದು ಯಾವಕಾರಣದಿಂದ ಎಂದರೆ –

ಅವಿದ್ಧೋ ವಿದ್ಧವದ್ವಿಷ್ಣುರಜಾತೋ ಜಾತವನ್ಮೃಷಾ ।

ಅಬದ್ಧೋ ಬದ್ಧವಚ್ಚೈವ ದರ್ಶಯತ್ಯಮಿತದ್ಯುತಿಃ ॥ ೧೫೧ ॥

ಇತಿ ಪೈಂಗಿಶ್ರುತಿಶ್ಚೈವ ಪ್ರಾಹ ನಿರ್ದೋಷತಾಂ ಹರೇಃ ।

ಅಪರಿಮಿತ ಕಾಂತಿಯುಳ್ಳ ವಿಷ್ಣುವು ಶಸ್ತ್ರಗಳಿಂದ ಹಿಂಸೆಗೊಳಗಾಗದಿದ್ದರೂ ಹಿಂಸೆ ಪಟ್ಟಂತೆಯೂ, ಜನ್ಮವಿಲ್ಲವಾದರೂ ಹುಟ್ಟಿದವನಂತೆಯೂ, ಬದ್ಧನಾಗದೇ ಇದ್ದರೂ ಬದ್ಧನಾದಂತೆಯೂ ಮಿಥ್ಯೆಯಾಗಿಯೇ ತನ್ನನ್ನು ತೋರಿಸುತ್ತಾನೆ. ಹೀಗೆ ಪೈಂಗಿಶ್ರುತಿಯೂ ಕೂಡ ಶ್ರೀಹರಿಗೆ ನಿರ್ದೋಷತ್ವವನ್ನೇ ಹೇಳುತ್ತದೆ.

ಅಪರೀಕ್ಷಿತ ದೃಷ್ಟ್ಯೈವ ಸದೋಷೋ ದೃಶ್ಯತೇ ಹರಿಃ ॥ ೧೫೨ ॥

ಪರೀಕ್ಷಾದರ್ಶನೇ ನೈವ ದೋಷೋ ದೃಶ್ಯೋ ಹರೇಃ ಕ್ವಚಿತ್ ।

ಇತಿ ಪೈಂಗಿಶ್ರುತಿಶ್ಚಾಹ ಪ್ರಮಾಣಂ ಹಿ ಪರೀಕ್ಷಿತಮ್ ॥ ೧೫೩ ॥

ಅಪರೀಕ್ಷಿತ ದೃಷ್ಟಿಯಿಂದ ಶ್ರೀಹರಿಯು ದೋಷವುಳ್ಳವನಾಗಿ ಕಾಣಲ್ಪಡುತ್ತಾನೆ. ಪರೀಕ್ಷಿತ ದರ್ಶನದಲ್ಲಿ ಶ್ರೀಹರಿಗೆ ಎಲ್ಲಿಯೂ ಸ್ವಲ್ಪವೂ ದೋಷವು ಕಂಡುಬರದು. ಹೀಗೆ ಪೈಂಗಿಶ್ರುತಿಯೂ ಕೂಡ ಹೇಳುತ್ತದೆ. ಇದರಿಂದ ಪರೀಕ್ಷಿತವಾದುದಕ್ಕೇ ಪ್ರಾಮಾಣ್ಯ ನಿಶ್ಚಯವು ಎಂದು ಸಿದ್ಧವಾಗುವುದು.

ಈ ವಿಷಯದಲ್ಲಿ ಕೆಲವರು (ಪ್ರಾಭಾಕರರು) ಹೇಳುವಂತೆ ಜ್ಞಾನಗಳ ಪ್ರಾಮಾಣ್ಯವು ಪರೀಕ್ಷಾಧೀನವಲ್ಲ, ಅದು ಸ್ವತಃಸಿದ್ಧವಾದುದು. ಎಲ್ಲ ಜ್ಞಾನವೂ ಕೂಡ ಸ್ವಪ್ರಕಾಶ ಹಾಗೂ ಯಥಾರ್ಥವಾದುದು ಆದ್ದರಿಂದ ಜ್ಞಾನದ ಪ್ರಾಮಾಣ್ಯ ನಿಶ್ಚಯಕ್ಕೆ ಪರೀಕ್ಷೆ ಬೇಕಾಗಿಲ್ಲ. ಇನ್ನೂ ಕೆಲವರು (ಭಾಟ್ಟರು) ಹೇಳುವಂತೆ ಜ್ಞಾನ

ಮತ್ತು ಅದರ ಪ್ರಾಮಾಣ್ಯವೂ ಕೂಡ ಅನುಮಾನದಿಂದಲೇ ಗ್ರಹಿಸಲ್ಪಡುತ್ತದೆ. ಮತ್ತೆ ಕೆಲವರು (ಸಿದ್ಧಾಂತಿಗಳು) ಹೇಳುವ ಪ್ರಕಾರ ಜ್ಞಾನವೂ, ಅದರ ಪ್ರಾಮಾಣ್ಯವೂ ಸಾಕ್ಷಿಯಿಂದಲೇ ತಿಳಿಯಲ್ಪಡುತ್ತದೆ. ಪ್ರಾಮಾಣ್ಯನಿಶ್ಚಯವು ಪರೀಕ್ಷಾಧೀನವೆಂದು ಒಪ್ಪಿದರೆ ಅನವಸ್ಥೆ ಬರುತ್ತದೆ ಎಂದು ಆಶಂಕಿಸಿದರೆ ಅದನ್ನು ಪರಿಹರಿಸುತ್ತಾರೆ –

ನ ಪರೀಕ್ಷಾನವಸ್ಥಾ ಸ್ಯಾತ್ಸಾಕ್ಷಿಸಿದ್ಧೇ ತ್ವಸಂಶಯಾತ್ ।

ಮಾನಸೇ ದರ್ಶನೇ ದೋಷಾಃ ಸ್ಯುರ್ನ ವೈ ಸಾಕ್ಷಿದರ್ಶನೇ ॥ ೧೫೪ ॥

ಪ್ರಾಮಾಣ್ಯ ಸ್ವೀಕಾರದಲ್ಲಿ ಪರೀಕ್ಷಾಧೀನತ್ವವನ್ನು ಅಂಗೀಕರಿಸಿದರೂ ಅನವಸ್ಥೆ ಬರುವುದಿಲ್ಲ. ಏಕೆಂದರೆ ಸಾಕ್ಷಿಸಿದ್ಧವಾದ ಸುಖದುಃಖಾದಿಗಳಲ್ಲಿ ಸಂದೇಹವು ಇರುವುದಿಲ್ಲ. ಜ್ಞಾನವು ಎರಡು ವಿಧ. ಅಂತಃಕರಣ ಪರಿಣಾಮರೂಪವಾದುದು ಮತ್ತು ಸಾಕ್ಷಿರೂಪವಾದುದು ಎಂದು. ಸಂಶಯವಾದರೂ ಮನೋವೃತ್ತಿಗೆ ಸಂಬಂಧಿಸಿದ ವಿಷಯವಾದ ಪಾನೀಯಾದಿಗಳಲ್ಲಿ ಬರುವುದು. ಆಗ ಪ್ರಾಮಾಣ್ಯ ಗ್ರಹಣಕ್ಕೆ ಪರೀಕ್ಷೆಯು ಬೇಕಾಗುವುದು. ಆದರೆ ಸಾಕ್ಷಿಸಿದ್ಧವಾದ ಸುಖಾದಿಗಳಲ್ಲಿ ಸಂಶಯ ಬರುವುದಿಲ್ಲ. ಅಲ್ಲಿ ಪುನಃ ಪರೀಕ್ಷಾದಿಗಳು ಬೇಕಾಗಿಲ್ಲ. ಮನಃಪರಿಣತಿ ರೂಪವಾದ ದರ್ಶನದಲ್ಲಿ ದೋಷಗಳು ಸಂಭವನೀಯವೇ ಆಗಿವೆ. ಆದರೆ ಸಾಕ್ಷಿ ದರ್ಶನದಲ್ಲಿ ದೋಷಗಳೇ ಇಲ್ಲ.

ಮಾನಸಿಕ ದರ್ಶನದಲ್ಲಿ ದೋಷಗಳು ಸಂಭಾವಿತವು ಎನ್ನುವುದು ಸ್ಪಷ್ಟವೇ ಆಗಿದೆ. ಸಾಕ್ಷಿದರ್ಶನದಲ್ಲಿ ದೋಷಗಳ ಸಂಭವವಿಲ್ಲವೆನ್ನುವುದು ಹೇಗೆ ಎಂದರೆ –

ಸುದೃಢೋ ನಿರ್ಣಯೋ ಯತ್ರ ಜ್ಞೇಯಂ ತತ್ಸಾಕ್ಷಿದರ್ಶನಮ್ ।

ಇಚ್ಛಾ ಜ್ಞಾನಂ ಸುಖಂ ದುಃಖಂ ಭಯಾಭಯಕೃಪಾದಯಃ ॥ ೧೫೫ ॥

ಸಾಕ್ಷಿಸಿದ್ಧಾಃ ನ ಕಶ್ಚಿದ್ಧಿ ತತ್ರ ಸಂಶಯವಾನ್ ಕ್ವಚಿತ್ ।

ಯತ್ಕ್ವಚಿದ್ವ್ಯಭಿಚಾರಿ ಸ್ಯಾದ್ದರ್ಶನಂ ಮಾನಸಂ ಹಿ ತತ್ ॥ ೧೫೬ ॥

ಯಾವುದು ಯಾವಾಗಲೂ ಸುದೃಢವಾದ ಅಂದರೆ ಬಾಧರಹಿತವಾದ ನಿಶ್ಚಯಾತ್ಮಕ ಜ್ಞಾನವೋ ಅದು ಸಾಕ್ಷಿದರ್ಶನವೆಂದು ತಿಳಿಯತಕ್ಕದ್ದು. ಇಚ್ಛೆ, ಜ್ಞಾನ, ಸುಖ, ದುಃಖ, ಭಯ, ಅಭಯ, ಅನುಕಂಪ ಇತ್ಯಾದಿಗಳು ಸಾಕ್ಷಿಸಿದ್ಧವು. ಅವುಗಳ ವಿಷಯದಲ್ಲಿ ಯಾವನೂ ಎಲ್ಲಿಯೂ ಸಂಶಯವನ್ನು ಹೊಂದುವುದಿಲ್ಲ. ಯಾವ ದರ್ಶನವು ಶುಕ್ತಿರಜತಾದಿ ವಿಷಯದಲ್ಲಿ ಬಾಧಿತವಾಗುವುದೋ ಅದು ಮನಃ ಪರಿಣಾಮ ರೂಪವಾದ ವೃತ್ತಿಜ್ಞಾನವೇ. ಮಾನಸದರ್ಶನಕ್ಕೆ ಬಾಧ್ಯತ್ವವನ್ನು ಹೇಳಿದರೆ ಅನಿಷ್ಟವಿಲ್ಲ. ಸಾಕ್ಷಿಗಾದರೂ ಬಾಧ್ಯತ್ವವನ್ನು ಅಂಗೀಕರಿಸಿದರೆ ಎಲ್ಲ ವ್ಯವಹಾರಗಳಿಗೂ ಲೋಪ ಬರುವುದರಿಂದ ಅನಿಷ್ಟವು.

ಮಾನಸದರ್ಶನಕ್ಕೆ ದೋಷಬಾಧವು ಸಂಭವಿಸುವುದಾದರೆ ಎಂಥಹ ದರ್ಶನಕ್ಕೆ

ರಾಯದುರ್ಗದ ಮಠದ ಗ್ರಂಥ

ಪ್ರಾಮಾಣ್ಯವು ಎಂದರೆ –

ಮನಶ್ಚಕ್ಷುರ್ದರ್ಶನಾದೇರಪಿ ಯತ್ರೈವ ಸಾಕ್ಷಿಣಾ ।

ಪ್ರಾಮಾಣ್ಯ ಸುಗೃಹೀತಂ ಸ್ಯಾತ್ತತ್ಪರೀಕ್ಷಿತದರ್ಶನಮ್ ॥ ೧೫೭ ॥

ಮನಸ್ಸು, ಕಣ್ಣು, ಕಿವಿ ಇತ್ಯಾದಿ ಇಂದ್ರಿಯಗಳಿಂದ ಉಂಟಾಗತಕ್ಕ ಸಾಕ್ಷಾತ್ಕಾರ ಮುಂತಾದ ಪ್ರತ್ಯಕ್ಷ ಅನುಮಾನ ಹಾಗೂ ಆಗಮ ಜನ್ಯ ಜ್ಞಾನಗಳ ಮಧ್ಯದಲ್ಲಿ ಯಾವುದರಲ್ಲಿ ಸಾಕ್ಷಿಯಿಂದ ಪ್ರಾಮಾಣ್ಯವು ಪರೀಕ್ಷೆಯಿಂದ ನಿಶ್ಚಿತವಾಗಿದೆಯೋ ಆ ಜ್ಞಾನವೇ ಪರೀಕ್ಷಿತವಾದ ಸಾಕ್ಷಾತ್ಕಾರವು ಅಂದರೆ ಪ್ರಮಾಣವು.

ನ ಜ್ಞಾನದೃಷ್ಟಿಮಾತ್ರೇಣ ಪ್ರಾಮಾಣ್ಯಂ ತಸ್ಯ ದೃಶ್ಯತೇ ।

ನಿಯಮೇನ ಸುಖಾದ್ಯೇಷು ಪ್ರಾಮಾಣ್ಯಂ ಸಾಕ್ಷಿಗೋಚರಮ್ ॥ ೧೫೮ ॥

ಜ್ಞಾನದ ಸಾಕ್ಷಾತ್ಕಾರ ಮಾತ್ರದಿಂದ ಆ ಜ್ಞಾನಕ್ಕೆ ಪ್ರಾಮಾಣ್ಯವು ಕಂಡು ಬರುದಿಲ್ಲ. ಸಾಕ್ಷಿಯಿಂದ ಗೃಹೀತವಾದರೆ ಮಾತ್ರ ಅದಕ್ಕೆ ಪ್ರಾಮಾಣ್ಯವು. ಸುಖಾದಿ ವಿಷಯದಲ್ಲಿ ಸಾಕ್ಷಿಗೋಚರವಾದ ಪ್ರಾಮಾಣ್ಯವು ನಿಯಮೇನ ಕಾಣಲ್ಪಡುತ್ತದೆ.

ಪ್ರತ್ಯಕ್ಷಾದಿ ಜ್ಞಾನದ ಪ್ರಾಮಾಣ್ಯದ ವಿಷಯದಲ್ಲಿ ಪರೀಕ್ಷಾಪೇಕ್ಷೆಯಿರುವಂತೆ ಸಾಕ್ಷಿಗೃಹೀತವಾದ ಪ್ರಾಮಾಣ್ಯಕ್ಕೂ ಪರೀಕ್ಷಾಪೇಕ್ಷೆಯಿದ್ದರೆ ಅನವಸ್ಥೆಯಾಗುವುದು ಎಂದು ಆಶಂಕಿಸಿದರೆ –

ಸ್ವಪ್ರಾಮಾಣ್ಯಂ ಸದಾ ಸಾಕ್ಷೀ ಪಶ್ಯತ್ಯೇವ ಸುನಿಶ್ಚಯಾತ್ ।

ಜ್ಞಾನಸ್ಯ ಗ್ರಾಹಕೇಣೈವ ಸಾಕ್ಷಿಣಾ ಮಾನತಾಮಿತೇಃ ॥ ೧೫೯ ॥

ದೋಷಾಭಾವೇ ಪ್ರಮಾಣತ್ವಂ ದೋಷಾಭಾವಸ್ಯ ಸಾಕ್ಷಿಣಾ ।

ನಿಶ್ಚಿತತ್ವಂ ಕ್ವಚಿಚ್ಚೈವ ಸ್ವತಃ ಪ್ರಾಮಾಣ್ಯಮಿಷ್ಯತೇ ॥ ೧೬೦ ॥

ಅತೋ ನ ಸರ್ವಮಾನಾನಾಂ ಪ್ರಾಮಾಣ್ಯಂ ನಿಶ್ಚಿತಂ ಭವೇತ್ ।

ಸಾಕ್ಷಿಣಾ ನಿಶ್ಚಿತಂ ಯತ್ರ ತತ್ಪ್ರಾಮಾಣ್ಯಂ ಸ್ವಲಕ್ಷಣಮ್ ॥ ೧೬೧ ॥

ಸಾಕ್ಷಿಯು ತನ್ನ ಪ್ರಾಮಾಣ್ಯವನ್ನು ಯಾವಾಗಲೂ ಸುನಿಶ್ಚಿತವಾಗಿಯೇ ಅಂದರೆ ಪರೀಕ್ಷಾನಪೇಕ್ಷವಾಗಿಯೇ ವಿಷಯೀಕರಿಸುತ್ತದೆ. ಜ್ಞಾನಗ್ರಾಹಕವಾದ ಸಾಕ್ಷಿಯೇ ಆ ಜ್ಞಾನದ ಪ್ರಾಮಾಣ್ಯವನ್ನೂ ಗ್ರಹಿಸುತ್ತದೆ. ಜ್ಞಾನದಂತೆಯೇ ಜ್ಞಾನಪ್ರಾಮಾಣ್ಯವೂ ಸಾಕ್ಷಿವೇದ್ಯವೇ ಆಗಿದೆಯೆಂದು ತಾತ್ಪರ್ಯ. ಮತ್ತೆ ಸಾಕ್ಷಿಗೆ ಪರೀಕ್ಷಾಪೇಕ್ಷೆಯನ್ನು ಏಕೆ ಅಂಗೀಕರಿಸಿದ್ದು ಎಂದರೆ, ಜ್ಞಾನದಲ್ಲಿ ಕರಣದೋಷಗಳು ಇಲ್ಲವೆಂದು ನಿಶ್ಚಯಿಸಲು ಸಾಕ್ಷಿಗೆ ಪರೀಕ್ಷಾಪೇಕ್ಷತ್ವವು. ಪರೀಕ್ಷೆಯಿಂದ ದೋಷಾಭಾವವು

ನಿಶ್ಚಯವಾದಾಗ ಸಾಕ್ಷಿಯು ಆ ಜ್ಞಾನವನ್ನು ಪ್ರಮಾಣವೆಂದು ಸ್ವೀಕರಿಸುತ್ತದೆ. ದೋಷಾಭಾವದ ನಿಶ್ಚಯಕ್ಕಾಗಿ ಪರೀಕ್ಷೆಯೇ ಹೊರತು ಪ್ರಾಮಾಣ್ಯ ಗ್ರಹಣಕ್ಕಾಗಿ ಅಲ್ಲ. ಸಾಕ್ಷಿಯಿಂದ ಸ್ವತಃ ಪ್ರಾಮಾಣ್ಯವು ಅಂಗೀಕರಿಸಲ್ಪಡುತ್ತದೆ. ಆದ್ದರಿಂದ ಎಲ್ಲ ಜ್ಞಾನಗಳಿಗೆ ಮೊದಲಿಗೇ ಪ್ರಾಮಾಣ್ಯ ನಿಶ್ಚಯವು ಆಗುವುದಿಲ್ಲ. ಯಾವಾಗ ಪರೀಕ್ಷಾ ಸಹಕೃತವಾದ ಸಾಕ್ಷಿಯಿಂದ ಪ್ರಾಮಾಣ್ಯವು ನಿಶ್ಚಿತವಾಗುವುದೋ ಆವಾಗಲೇ ಪ್ರಾಮಾಣ್ಯದ ಸ್ವರೂಪವು ಸಿದ್ಧವಾಗುತ್ತದೆ.

ಮೇಲೆ ಹೇಳಿದ ಅರ್ಥವನ್ನು ಬುದ್ಧ್ಯಾರೋಢಕ್ಕಾಗಿ ಸಂಗ್ರಹವಾಗಿ ಹೇಳುತ್ತಾರೆ–

ನ ಹಿ ಕಶ್ಚಿತ್ಸುಖಾದ್ಯೇಷು ಸಂಶಯಂ ಕುರುತೇ ಜನಃ ।

ನ ಚೈವಾಖಿಲಮಾನಾನಿ ನಿಶ್ಚಿನೋತ್ಯಖಿಲೋ ಜನಃ ॥ ೧೬೨ ॥

ತಸ್ಮಾದನುಭವಾರೂಢಂ ಕಿಮರ್ಥಮಪಲಪ್ಯತೇ ।

ಸುಖಾದಿಗಳಲ್ಲಿ ಯಾವ ಜನರೂ ಸಂದೇಹವನ್ನು ಮಾಡುವುದಿಲ್ಲ. ಎಲ್ಲ ಜನರೂ ಎಲ್ಲ ವೃತ್ತಿಜ್ಞಾನಗಳನ್ನೂ ದರ್ಶನದಿಂದಲೇ ಪ್ರಮಾಣವೆಂದು ನಿಶ್ಚಯ ಮಾಡುತ್ತಾರೆ. ಆದಕಾರಣ ಸಾಕ್ಷಿಪ್ರಮಾಣ್ಯವು ಪರೀಕ್ಷಾನಪೇಕ್ಷಿತ ಸಾಕ್ಷಿಯಿಂದಲೇ ಗ್ರಹಿಸಲ್ಪಡುತ್ತದೆ. ವೃತ್ತಿಜ್ಞಾನಗಳ ಪ್ರಾಮಾಣ್ಯವಾದರೂ ಪರೀಕ್ಷಾಪೇಕ್ಷಿತವಾದ ಸಾಕ್ಷಿಯಿಂದ ಎಂದು ಅನುಭವಾರೂಢವಾದ ಪ್ರಮೇಯವು ಯಾವಕಾರಣಕ್ಕಾಗಿ ಅಪಲಾಪ ಮಾಡಲ್ಪಡುತ್ತದೆ. ನಿರ್ನಿಮಿತ್ತವಾಗಿ ಅಪಲಾಪ ಮಾಡುವುದಕ್ಕೆ ಅಶಕ್ಯವು.

ನ ಪರೀಕ್ಷಾನವಸ್ಥಾ ಸ್ಯಾತ್ ಎಂದು ಹೇಳಿದ್ದನ್ನು ಉಪಸಂಹಾರ ಮಾಡುತ್ತಾರೆ.

ದೋಷಾಭಾವಾದಿಕಂ ಚೈವ ಸಾಕ್ಷೀ ಸಮ್ಯಕ್ ಪ್ರಪಶ್ಯತಿ ॥ ೧೬೩ ॥

ತತ್ಪರೀಕ್ಷಿತಮಾನೇನ ನ ದೋಷೋ ವಿಷ್ಣವಿ ಕ್ವಚಿತ್ ।

ಅಪರೀಕ್ಷಿತದೃಷ್ಟಿಸ್ತು ಕಸ್ಮಿನ್ನರ್ಥೇ ನ ವಿದ್ಯತೇ ॥ ೧೬೪ ॥

ತನಗೂ ಪರೀಕ್ಷೆಗೂ ಕೂಡ ದೋಷಾಭಾವವನ್ನೂ ಪ್ರಾಮಾಣ್ಯವನ್ನೂ ಕೂಡ ಸ್ವಯಂ ಸಾಕ್ಷಿಯೇ ಪರೀಕ್ಷಾಪೇಕ್ಷೆಯಿಲ್ಲದೇನೆ ಚೆನ್ನಾಗಿ ನೋಡುತ್ತದೆ. ಆದಕಾರಣ ಪರೀಕ್ಷಿತವೇ ಆದ ಪ್ರಮಾಣದಿಂದ ಭಗವಂತನಲ್ಲಿ ಎಲ್ಲಿಯೂ ಕೂಡ ದೋಷವು ಇಲ್ಲವೆಂದು ಸಿದ್ಧವಾಗುತ್ತದೆ. ಅಪರೀಕ್ಷಿತದೃಷ್ಟಿಯಾದರೂ ಯಾವ ಅರ್ಥದಲ್ಲಿಯೂ ಇರುವುದಿಲ್ಲ. ಅಪರೀಕ್ಷಿತವಾದುದು ದೋಷದರ್ಶನವಾದ್ದರಿಂದ ಅಪ್ರಮಾಣವು.

ಈ ಹಿಂದೆ ಅಂದರೆ ಪೃಥಗಧಿಕರಣದಲ್ಲಿ, ಅನುಭೂತಿವಿರೋಧೇನ ಕಥಮೇಕತ್ವ ಮುಚ್ಯತೇ ಇತ್ಯಾದಿ ವಚನದಿಂದ, ಪ್ರತ್ಯಕ್ಷಕ್ಕೆ ವಿರುದ್ಧವಾದುದರಿಂದ ತತ್ತ್ವಮಸಿ ಇತ್ಯಾದಿ ಆಗಮಕ್ಕೆ ಅಪಾತವಾಗಿ ತೋರುವ ಏಕತ್ವಾರ್ಥದಲ್ಲಿ ಪ್ರಮಾಣವಿಲ್ಲವೆಂದು

ಹೇಳಲ್ಪಟ್ಟಿದೆ. ಅದಕ್ಕೆ ವಿಪರೀತವಾಗಿ ಅಂದರೆ ಪ್ರತ್ಯಕ್ಷಕ್ಕೆ ಆಗಮ ವಿರೋಧದಿಂದ ಅಪ್ರಾಮಾಣ್ಯವು ಹೇಗೆ ಹೇಳಲ್ಪಡುತ್ತದೆ ಎಂಬ ಆಶಂಕೆಯನ್ನು ಪರಿಹರಿಸುತ್ತಾರೆ –

ತತ್ಪ್ರತ್ಯಕ್ಷವಿರುದ್ಧಾರ್ಥೇ ನಾಗಮಸ್ಯಾಪಿ ಮಾನತಾ ।

ಉಪಜೀವ್ಯಮಕ್ಷಜಂ ಯತ್ರ ತದನ್ಯತ್ರ ವಿಪರ್ಯಯಃ ॥ ೧೬೫ ॥

ಜೀವಬ್ರಹ್ಮರಿಗೆ ಅಭೇದವಿಲ್ಲವೆನ್ನುವುದು ಪ್ರತ್ಯಕ್ಷಕ್ಕೆ ಗೋಚರವಾದ ವಿಷಯವು. ತತ್ತ್ವಮಸಿ ಇತ್ಯಾದಿ ಜೀವಬ್ರಹ್ಮರಿಗೆ ಏಕ್ಯವನ್ನು ಹೇಳುವಂತೆ ತೋರುವ ಆಗಮವು ಉಪಜೀವ್ಯವಾದ ಪ್ರತ್ಯಕ್ಷಕ್ಕೆ ವಿರುದ್ಧವಾದ್ದರಿಂದ ಪ್ರಮಾಣವಾಗುವುದಿಲ್ಲ. ಇದಕ್ಕೆ ವಿರುದ್ಧವಾಗಿ ಯಾವಾಗ ಆಗಮವು ಪ್ರತ್ಯಕ್ಷಕ್ಕೆ ಉಪಜೀವ್ಯವಾಗಿರುವುದೋ ಆಗ ಆಗಮಕ್ಕೆ ವಿರುದ್ಧಾರ್ಥದಲ್ಲಿ ಪ್ರತ್ಯಕ್ಷಕ್ಕೆ ಪ್ರಾಮಾಣ್ಯವಿರುವುದಿಲ್ಲ.

ಲೌಕಿಕೇ ವ್ಯವಹಾರೇಽತ್ರ ಪ್ರತ್ಯಕ್ಷಸ್ಯೋಪಜೀವ್ಯತಾ ।

ಅವತಾರಾದಿದೃಷ್ಟೌ ಸ್ಯಾದಾಗಮಸ್ಯೋಪಜೀವ್ಯತಾ ॥ ೧೬೬ ॥

ಲೌಕಿಕ ವ್ಯವಹಾರದಲ್ಲಿ ಅಂದರೆ ಪ್ರತ್ಯಕ್ಷಸಿದ್ಧವಾದ ಜೀವರ ವಿಷಯದಲ್ಲಿ, ಪ್ರತ್ಯಕ್ಷಕ್ಕೆ ಉಪಜೀವ್ಯತ್ವವಿರುವುದರಿಂದ, ಜೀವಬ್ರಹ್ಮೈಕ್ಯವನ್ನು ಬೋಧಿಸುವಂತೆ ತೋರುವ ತತ್ತ್ವಮಸಿ ಇತ್ಯಾದಿ ಆಗಮವು ಪ್ರತ್ಯಕ್ಷಕ್ಕೆ ವಿರುದ್ಧವಾದ ಪ್ರಯುಕ್ತ ಅಪ್ರಮಾಣವಾಗುವುದು. ಅಲೌಕಿಕವಾದ ವಿಷ್ಣುವಿನ ಅವತಾರಗಳಿಗೆ ಸಂಬಂಧಿಸಿದ ವ್ಯವಹಾರದಲ್ಲಿ, ಪ್ರತ್ಯಕ್ಷದಿಂದ ದೋಷವು ಕಂಡುಬಂದರೂ ಕೂಡ, ಅದು ಪ್ರಮಾಣವಾಗಲಾರದು. ಏಕೆಂದರೆ ಆ ಪ್ರತ್ಯಕ್ಷಾದಿಗಳನ್ನು ಕುರಿತು ಆಗಮಕ್ಕೆ ಉಪಜೀವ್ಯತ್ವವಿದೆ. ಉಪಜೀವ್ಯವು ಉಪಜೀವಕಕ್ಕಿಂತ ಪ್ರಬಲವು. ವಿಷ್ಣುವಿನ ಅವತಾರಾದಿ ವಿಷಯದಲ್ಲಿ ಆಗಮವೇ ಉಪಜೀವ್ಯವಾದ್ದರಿಂದ, ಪ್ರತ್ಯಕ್ಷಕ್ಕೆ ವಿರುದ್ಧವಾದ ಆಗಮವೇ ಅಪ್ರಮಾಣ ಎಂದು ಹೇಳುವುದು ಮೂರ್ಖರ ವಾದವು.

ಪ್ರತ್ಯಕ್ಷವನ್ನು ಕುರಿತು ಆಗಮಕ್ಕೆ ಹೇಗೆ ಉಪಜೀವ್ಯತ್ವವು ಎಂದರೆ –

ಆಗಮೇನ ಹಿ ವಿಷ್ಣುತ್ವಂ ಜ್ಞಾತ್ವಾ ದೋಷೋಽತ್ರ ಕಲ್ಪ್ಯತೇ ।

ನ ಚೇತ್ಸ್ಯಾದ್ದೋಷವಾನನ್ಯಃ ಶಾಸ್ತ್ರಸಿದ್ಧಂ ಹಿ ಲಕ್ಷಣಮ್ ॥ ೧೬೭ ॥

ಆಗಮದಿಂದಲೇ ರಾಮಕೃಷ್ಣಾದಿ ಅವತಾರಗಳಿಗೆ ವಿಷ್ಣುತತ್ವವನ್ನು ತಿಳಿದು ಆ ವಿಷ್ಣುವಿನಲ್ಲಿ ಪ್ರತ್ಯಕ್ಷದಿಂದ ದೋಷವು ಕಲ್ಪಿಸಲ್ಪಡುತ್ತದೆ. ವಿಷ್ಣುವಿನಲ್ಲಿ ದೋಷತ್ವವು ಕೇವಲ ಕಲ್ಪನೆಯೇ ಹೊರತು ಯಥಾರ್ಥವಾದ ಜ್ಞಾನವಲ್ಲ ಎಂದು ತಿಳಿಸಲು ಇಲ್ಲಿ ಕಲ್ಪ್ಯತೇ ಎಂಬ ಶಬ್ದ ಪ್ರಯೋಗಮಾಡಲಾಗಿದೆ. ಆಗಮಕ್ಕೆ ಉಪಜೀವ್ಯತ್ವವನ್ನು ಒಪ್ಪದಿದ್ದ ಪಕ್ಷದಲ್ಲಿ, ಆಗ ರಾಮಕೃಷ್ಣಾದಿಗಳು ವಿಷ್ಣುವಿನ ಅವತಾರ ರೂಪಗಳೆಂದು ತಿಳಿಯಲ್ಪಡುವುದಿಲ್ಲ. ಆಗ ರಾಮಕೃಷ್ಣಾದಿಗಳಲ್ಲಿ ದೋಷವಿದೆಯೆಂದು ಪ್ರತ್ಯಕ್ಷದಿಂದ ಜ್ಞಾತವಾದಲ್ಲಿ, ವಿಷ್ಣುವಿನಿಂದ ಇತರರು ದೋಷವುಳ್ಳವರೆಂದು ಸಿದ್ಧವಾಗುವುದು.

ವಿಷ್ಣುವು ದೋಷವುಳ್ಳವನೆಂದು ಜ್ಞಾತವಾಗುವುದಿಲ್ಲ. ಹಾಗಿದ್ದರೂ ಕೂಡ ಆಗಮಕ್ಕೆ ಉಪಜೀವ್ಯತ್ವವಿಲ್ಲ. ಏಕೆಂದರೆ ಶ್ರೀವತ್ಸ ಕೌಸ್ತುಭಾದಿ ಲಕ್ಷಣದಿಂದ ರಾಮಕೃಷ್ಣಾದಿ ರೂಪಗಳಲ್ಲಿ ವಿಷ್ಣುತ್ವವನ್ನು ಅನುಮೇಯಿಸಿಕೊಂಡು ವಿಷ್ಣುವು ದೋಷವುಳ್ಳವನೆಂದು ಪ್ರತ್ಯಕ್ಷದಿಂದ ತಿಳಿಯಲ್ಪಡುತ್ತದೆ ಎಂದರೆ, ಶ್ರೀವತ್ಸಾದಿ ಲಕ್ಷಣವು ವಿಷ್ಣುತ್ವದಿಂದ ವ್ಯಾಪ್ತವಾಗಿದೆ ಎನ್ನುವುದೂ ಕೂಡ ಶಾಸ್ತ್ರದಿಂದಲೇ ಸಿದ್ಧವಾಗಿದೆ. ಆದ್ದರಿಂದ ವಿಷ್ಣುತ್ವಾದಿ ಅಲೌಕಿಕ ವಿಷಯದಲ್ಲಿ ಆಗಮಕ್ಕೇ ಉಪಜೀವ್ಯತ್ವವೆಂದು ತೀರ್ಮಾನ.

ಹಾಗಾದರೆ ರಾಮಕೃಷ್ಣಾದಿಗಳಲ್ಲಿ ವಿಷ್ಣುತ್ವವು ಪ್ರತ್ಯಕ್ಷದಿಂದ ಜ್ಞಾತವಾಗದಿದ್ದರೆ, ವಿಷ್ಣುವಿನಿಂದ ಅನ್ಯನು ದೋಷವುಳ್ಳವನು ಎಂಬುದಾದರೂ ಪ್ರತ್ಯಕ್ಷದಿಂದ ಹೇಗೆ ಸಿದ್ಧಿಸುತ್ತದೆ? ಏಕೆಂದರೆ ವಿಷ್ಣುತ್ವದಂತೆ ವಿಷ್ಣುವಿನಿಂದ ಅನ್ಯತ್ವವೂ ಕೂಡ ರಾಮಕೃಷ್ಣ ಇತ್ಯಾದಿಗಳಲ್ಲಿ ಅಜ್ಞಾತವು ಎಂದರೆ –

ಕಸ್ಯಚಿದ್ದೋಷವತ್ತ್ವಂ ಸ್ಯಾದಿತಿ ಮಾತ್ರೇಽಕ್ಷಜಂ ಭವೇತ್ ।

ನ ವಿಷ್ಣೋರ್ದೋಷವತ್ತ್ವೇ ಹಿ ಪ್ರತ್ಯಕ್ಷಂ ವರ್ತತೇ ಸ್ವತಃ ॥ ೧೬೮ ॥

ಯಾವುದೋ ಒಬ್ಬನಿಗೆ ದೋಷವತ್ವವು ಆಗುವುದು ಎಂದು ಇಷ್ಟು ಮಾತ್ರ ವಿಷಯದಲ್ಲಿ ಪ್ರತ್ಯಕ್ಷವು ಆಗುವುದು. ವಿಷ್ಣುವು ದೋಷವುಳ್ಳವನು ಎಂಬ ಜ್ಞಾನವು ಹುಟ್ಟುವುದೇ ಇಲ್ಲ ಎಂದು ತಾತ್ಪರ್ಯ. ವಿಷ್ಣುವು ದೋಷವುಳ್ಳವನು ಎಂಬ ವಿಷಯದಲ್ಲಿ ಸ್ವಯಂ (ಅಂದರೆ ಇನ್ನೊಂದನ್ನು ಉಪಜೀವಿಸದಿರುವ) ಪ್ರತ್ಯಕ್ಷವು ಇರುವುದಿಲ್ಲ.

ಕಾರಣಾಂತರದಿಂದಲೂ ದೋಷಗ್ರಾಹಕ ಪ್ರತ್ಯಕ್ಷವು ಅಪ್ರಮಾಣವೆಂದು ತೋರಿಸುತ್ತಾರೆ –

ಕೇಚಿತ್ಪಶ್ಯಂತಿ ದೋಷಾನಿತ್ಯತ್ರಾಪಿ ಸ್ಯಾನ್ನ ಅಕ್ಷಜಮ್ ।

ಪೌರಾಣಂ ವಾಕ್ಯಮೇವಾತ್ರ ತಚ್ಚ್ರುತ್ಯೈವ ವಿರುದ್ಧ್ಯತೇ ॥ ೧೬೯ ॥

ಕೆಲವರು ಭಗವದ್ರೂಪಗಳಲ್ಲಿ ದೋಷಗಳನ್ನು ನೋಡುತ್ತಾರೆ ಎನ್ನುವಲ್ಲಿಯೂ ಪ್ರತ್ಯಕ್ಷವಾಗಲೀ ಅನುಮಾನವಾಗಲೀ ಪ್ರಮಾಣವಾಗಲಾರದು. ಅಪೌರುಷೇಯ ಆಗಮವೂ ಇರುವುದಿಲ್ಲ. ಆದ್ದರಿಂದ ಭಗವಂತನ ರೂಪಗಳಲ್ಲಿ ದೋಷಪ್ರತೀತಿ ಸಮರ್ಥನೆಗೆ ಪೌರುಷೇಯವಾದ ಪುರಾಣವಾಕ್ಯವನ್ನೇ ಹೇಳಬೇಕು. ಅಂಥಹ ಪುರಾಣವಾಕ್ಯವು ಶ್ರುತಿಯಿಂದಲೇ ವಿರೋಧಿಸಲ್ಪಡುತ್ತದೆ.

ಪುರಾಣವಾಕ್ಯಕ್ಕೆ ಶ್ರುತಿವಿರುದ್ಧತ್ವವಿದ್ದರೆ ದೋಷವೇನು ಎಂದರೆ –

ಪುರಾಣಸ್ಯೋಪಜೀವ್ಯಶ್ಚ ವೇದ ಏವ ನ ಚಾಪರಃ ।

ತದ್ವಿರೋಧೇ ಕಥಂ ಮಾನಂ ತತ್ತತ್ರ ಚ ಭವಿಷ್ಯತಿ ॥ ೧೭೦ ॥

ಪುರಾಣಕ್ಕೆ ಉಪಜೀವ್ಯವು ವೇದವೇ. ಅಂದರೆ ಪುರಾಣವಾಕ್ಯಕ್ಕೆ ವೇದವೇ ಮೂಲವು. ಪೌರುಷೇಯ ಗ್ರಂಥವಲ್ಲ. ಪ್ರತ್ಯಕ್ಷಾದಿಗಳೂ ಅಲ್ಲ. ಪೌರುಷೇಯ ಆಗಮವು ಪುರಾಣಕ್ಕೆ ಮೂಲವೆಂದು ಹೇಳಿದರೆ, ಅದಕ್ಕೂ ಕೂಡ ಮತ್ತೊಂದು ಪೌರುಷೇಯ ಮೂಲವನ್ನು ಅಪೇಕ್ಷಿಸಿದರೆ ಅದು ಅಂಧಪರಂಪರೆಯಾಗುವುದು. ಪ್ರತ್ಯಕ್ಷ ಅನುಮಾನಗಳು ಧರ್ಮಾದಿ ಅತೀಂದ್ರಿಯ ವಸ್ತುಗಳನ್ನು ವಿಷಯೀಕರಿಸಲು ಅಸಮರ್ಥವು. ಆದ್ದರಿಂದ ಪರಿಶೇಷದಿಂದ ವೇದವೇ ಪುರಾಣಕ್ಕೆ ಉಪಜೀವ್ಯವೆಂದು ಸಿದ್ಧವಾಗುವುದು. ಉಪಜೀವ್ಯಕ್ಕೆ ವಿರುದ್ಧವಾದ ಉಪಜೀವಕವು ಯಾವಾಗಲೂ ಅಪ್ರಮಾಣವೇ ಆಗುವುದು. ಆದಕಾರಣ ಉಪಜೀವ್ಯವಾದ ವೇದಕ್ಕೆ ವಿರುದ್ಧವಾದ ಪುರಾಣವಾಕ್ಯವು ಭಗವಂತನಲ್ಲಿ ದೋಷವತ್ವವನ್ನು ಹೇಳಿದ ಪಕ್ಷದಲ್ಲಿ ಅದು ಹೇಗೆ ತಾನೆ ಪ್ರಮಾಣವಾದೀತು?

ಅಪರೀಕ್ಷಿತವಾದ ಪ್ರತೀತಿಮಾತ್ರದಿಂದ ಪ್ರತ್ಯಕ್ಷತ್ವವನ್ನು ಪುರಾಣವಾಕ್ಯವು ತಿಳಿಸುತ್ತದೆ ಎನ್ನುವ ಪಕ್ಷವನ್ನು ದೂಷಿಸುತ್ತಾರೆ –

ಅಪರೀಕ್ಷಿತದೃಷ್ಟಿಶ್ಚ ಕಥಮೇವಾಕ್ಷಜಂ ಭವೇತ್ ।

ಯದ್ಯೇವಂ ದೇವದತ್ತಾದಿಭ್ರಮಃ ಕಿಂ ನಾಕ್ಷಜಂ ಭವೇತ್ ॥ ೧೭೧ ॥

ಅಪರೀಕ್ಷಿತ ದೃಷ್ಟಿಯಾದರೂ ಪ್ರತ್ಯಕ್ಷವು ಹೇಗೆ ತಾನೆ ಆಗುವುದು? ಅಂದರೆ ಅಂಥಹ ದೃಷ್ಟಿಯಿಂದ ಪ್ರತ್ಯಕ್ಷವನ್ನು ಪ್ರಮಾಣವಾಗಿ ಗ್ರಹಿಸಲು ಶಕ್ಯವಾಗದು. ಅಪರೀಕ್ಷಿತ ದೃಷ್ಟಿಯನ್ನು ಪ್ರತ್ಯಕ್ಷಪ್ರಮಾಣವೆಂದು ಹೇಳುವುದಾದರೆ, ಯಜ್ಞದತ್ತ ಶುಕ್ತ್ಯಾದಿಗಳಲ್ಲಿ ದೇವದತ್ತ ರಜತಾದಿಗಳ ಭ್ರಮೆಯೂ ಪ್ರತ್ಯಕ್ಷಮೂಲವಾದ ಪ್ರಮಾಣವೆಂದು ಏಕೆ ಆಗಬಾರದು? ಅಂಥಹ ಪ್ರತ್ಯಕ್ಷಕ್ಕೆ ಬಾಧವಿರುವ ಪ್ರಯುಕ್ತ ಅದು ಪ್ರಮಾಣವಾಗಲಾರದು. ಭಗವಂತನಿಗೆ ಸದೋಷತ್ವವನ್ನು ಹೇಳುವ ಪುರಾಣ ವಾಕ್ಯಕ್ಕೆ 'ನಿರನಿಷ್ಟೋ ನಿರವದ್ಯಃ' ಇತ್ಯಾದಿ ವೇದವಾಕ್ಯದಿಂದ ಬಾಧವಿರುವ ಪ್ರಯುಕ್ತ ಅದು ಅಪ್ರಮಾಣವು.

ಹಾಗಾದರೆ ಉಪಜೀವ್ಯವಾದ ವೇದಕ್ಕೆ ವಿರುದ್ಧವಾದ್ದರಿಂದ ಉಪಜೀವಕಗಳಾದ ಪ್ರತ್ಯಕ್ಷ ಹಾಗೂ ಪುರಾಣವಾಕ್ಯಗಳು ಅಪ್ರಮಾಣವೆಂದು ಏನು ಹೇಳಲ್ಪಟ್ಟಿತೋ ಅದು ಸರಿಯಲ್ಲ. ಏಕೆಂದರೆ ಉಪಜೀವಕವು ಉಪಜೀವ್ಯವಿರೋಧದಿಂದ ಬಾಧಿತವು ಎಂಬ ನಿಯಮವಿಲ್ಲವೆಂದು ಹೇಳಿದರೆ –

ಯಾವಚ್ಛಕ್ತಿಪರೀಕ್ಷಾಯಾಮುಪಜೀವ್ಯಸ್ಯಬಾಧನೇ ।

ದೋಷೋ ನಾಶೋಧಿತೇ ದೋಷ ಉಪಜೀವ್ಯತ್ವಮಸ್ಖಲಮ್ ॥ ೧೭೨ ॥

ಶಕ್ತ್ಯನುಸಾರವಾಗಿ ಪರೀಕ್ಷೆಯಿಂದ ಪ್ರಮಾಣವೆಂದು ಪ್ರತೀತವಾಗುತ್ತಿರಲು, ಉಪಜೀವ್ಯಕ್ಕೆ ಉಪಜೀವಕದಿಂದ ಬಾಧವು ಮಾಡಲ್ಪಟ್ಟರೆ, ಆಗ ನಿಯಮಭಂಗ

ದೋಷವು ಬರುವುದೆಂಬುದು ನಮಗೂ ಅಭಿಮತವೇ. ಅಂದರೆ ಪರೀಕ್ಷೆಯಿಂದ ಅಪ್ರಮಾಣವೆಂದು ನಿಶ್ಚಿತವಾದುದಕ್ಕೆ ಉಪಜೀವಕದಿಂದ ಬೌಧ ಬಂದರೆ ಅದು ದೋಷವಲ್ಲ. ಪೂರ್ವೋತ್ತರಜ್ಞಾನಗಳಿಗೆ ಉಪಜೀವ್ಯತ್ವವೂ ಉಪಜೀವಕತ್ವವೂ ನಿಶ್ಚಯವಾಗಿದ್ದರೂ, ಪರೀಕ್ಷೆಯಿಂದ ಪ್ರಮಾಣವೆಂದು ನಿಶ್ಚಿತವಾದ ಉಪಜೀವ್ಯದ ವಿರೋಧದಿಂದ ಉಪಜೀವಕವು ಬಾಧಿತವಾಗುವುದೆಂಬ ನಿಯಮಕ್ಕೆ ಭಂಗವಿಲ್ಲ.

ಭ್ರಮೇಽಪ್ಯಭ್ರಮಭಾಗೋಽಸ್ತಿ ತನ್ಮಾತ್ರಮುಪಜೀವ್ಯ ಹಿ ।

ಬಾಧಕಜ್ಞಾನವೃತ್ತಿಸ್ಸ್ಯಾತ್..... ॥

ಭ್ರಮೆಯಲ್ಲಿಯೂ ಕೂಡ ಅಭ್ರಮ ಭಾಗವು ಇರುವುದು. ಉದಾಹರಣೆಗೆ ಇದಂ ರಜತಂ ಎನ್ನುವುದು ಒಂದೇ ಜ್ಞಾನವಾದರೂ, ಅದರಲ್ಲಿ ವಿಷಯರೂಪವಾದ ಉಪಾಧಿಯ ನಿಮಿತ್ತದಿಂದ ಎರಡು ಭಾಗವು. ಪ್ರಕಾರಾಂಶದಲ್ಲಿ ಭ್ರಮತ್ವವಿದ್ದರೂ ಸ್ವರೂಪ ಅಥವಾ ಧರ್ಮ್ಯಂಶದಲ್ಲಿ ಅಭ್ರಮತ್ವವೇ. ಧರ್ಮ್ಯಂಶದಲ್ಲಿ ಯಾವತ್ತೂ ಬಾಧವಿರುವುದಿಲ್ಲ. ಕೇವಲ ಅಭ್ರಮ ಭಾಗವನ್ನು ಉಪಜೀವಿಸಿಕೊಂಡು ಬಾಧಕ ಜ್ಞಾನದ ವೃತ್ತಿಯು ಆಗುವುದು. ಶುಕ್ತಿಯಲ್ಲಿ ರಜತತ್ವ ಭ್ರಮೆಯನ್ನು ಹುಟ್ಟಿಸುವ ರಜತಾಕಾರಕ್ಕೆ ಬಾಧವಿರುವುದರಿಂದ ಅದಕ್ಕೆ ಧರ್ಮಿತ್ವವಿಲ್ಲವೆನ್ನುವುದು ಪ್ರಸಿದ್ಧವು ಎಂಬುದಾಗಿ ಹಿ ಶಬ್ದದ ಅರ್ಥವು. ಅಂದರೆ ಯಾವುದು ಉಪಜೀವ್ಯವಾದ ಧರ್ಮ್ಯಂಶವೋ ಅದಕ್ಕೆ ಉಪಜೀವಕದಿಂದ ಬಾಧವಿಲ್ಲ. ಯಾವುದಕ್ಕೆ ಬಾಧವು ಕಂಡುಬರುವುದೋ ಅದು ಉಪಜೀವ್ಯವಲ್ಲ. ಆದ್ದರಿಂದ ಉಪಜೀವ್ಯ–ಉಪಜೀವಕಗಳಲ್ಲಿ ಬಾಧ್ಯ–ಬಾಧಕ ವ್ಯವಸ್ಥೆಗೆ ಸಂಬಂಧಿಸಿದಂತೆ ನಮ್ಮ ನಿಯಮಕ್ಕೆ ನೇದಂ ರಜತಂ ಎಂಬ ಉದಾಹರಣೆಯಿಂದ ಭಂಗವಿಲ್ಲವೆಂದು ಅಭಿಪ್ರಾಯ.

..... ನ ಚೈವಂ ಸುಪರೀಕ್ಷಿತೇ ॥ ೧೭೩ ॥

ಪ್ರಥಮ ಪ್ರಮಾಣವು ಚೆನ್ನಾಗಿ ಪರೀಕ್ಷಿತವಾಗಿರಲು ಹೀಗೆ ಇಲ್ಲ. ಅಂದರೆ ಸುಪರೀಕ್ಷಿತವಾದ ಉಪಜೀವ್ಯಕ್ಕೆ ಉಪಜೀವಕದಿಂದ ಬಾಧವಿಲ್ಲ ಎಂದರ್ಥ. ಇದೇ ರೀತಿಯಲ್ಲಿ 'ಯಃ ಸರ್ವಜ್ಞಃ' ಇತ್ಯಾದಿ ಶ್ರುತಿಗಳೂ 'ಅಹಂ ದುಃಖೀ' ಇತ್ಯಾದಿ ಅನುಭವವೂ ಚೆನ್ನಾಗಿ ಪರೀಕ್ಷಿತವೇ ಆಗಿರುವುದರಿಂದ ಬಾಧಿತವಾಗುವುದಿಲ್ಲ.

ಸರ್ವಂ ತದುಪಜೀವ್ಯೈವ ಪ್ರಮಾಣಂ ವರ್ತತೇ ಯತಃ ।

ಆ ಸರ್ವಜ್ಞತ್ವಾದಿಗಳೆಲ್ಲವನ್ನೂ ಉಪಜೀವಿಸಿಕೊಂಡೇ ತತ್ತ್ವಮಸಿ ಇತ್ಯಾದಿ ಪ್ರಮಾಣಗಳು ಪ್ರವೃತ್ತವಾಗಿರುವ ಕಾರಣ ಆ ವಾಕ್ಯಗಳಿಗೆ ಉಪಜೀವ್ಯಕ್ಕೆ ವಿರುದ್ಧವಾದ ಅರ್ಥದಲ್ಲಿ ಪ್ರಾಮಾಣ್ಯವಿಲ್ಲ.

ಹಾಗಾದರೆ ತತ್ತ್ವಮಸಿ ಇತ್ಯಾದಿ ವಾಕ್ಯವೂ ಕೂಡ ಸ್ವರೂಪಮಾತ್ರವನ್ನು ಉಪಜೀವಿಸಿಕೊಂಡು ಪ್ರವೃತ್ತವಾಗುವುದೆಂದರೆ ಆಗ ಯಾವ ದೋಷವು ಎಂದರೆ –

ಕಥಂ ಬ್ರಹ್ಮೇತಿ ತಜ್ಜ್ಞೇಯಂ ಸರ್ವಜ್ಞತ್ವಾದಿಲಕ್ಷಣಮ್ ॥ ೧೭೪ ॥

ವಿಹಾಯ ಯಸ್ಮಾತ್ಕಸ್ಮಾಚ್ಚಿತ್ಸ್ವರೂಪಸ್ಯೈವ ಚೇದ್ಯದಿ ।

ಉಪಜೀವ್ಯತ್ವಮೇತಸ್ಮಾದ್ವ್ಯಾವೃತ್ತಂ ಯಾವತಾ ಭವೇತ್ ॥ ೧೭೫ ॥

ತಾವತೈವೋಪಜೀವ್ಯತ್ವಂ ಸ್ವರೂಪಸ್ಯೈವ ನ ಕ್ವಚಿತ್ ।

ಸರ್ವಜ್ಞತ್ವಾದಿ ಧರ್ಮಗಳನ್ನು ಬಿಟ್ಟು ಸ್ವರೂಪಮಾತ್ರಕ್ಕೆ ಉಪಜೀವ್ಯತ್ವವಿದೆ ಎಂದರೆ, ತತ್ತ್ವಮಸಿ ಎನ್ನುವುದರಿಂದ ಏನು ಬೋಧಿಸಲ್ಪಡುತ್ತದೆ ಎನ್ನುವುದು ಹೇಗೆ ಜ್ಞಾತವಾಗುತ್ತದೆ? ಹಾಗಾದರೆ ಸ್ವರೂಪಮಾತ್ರಕ್ಕೆ ಉಪಜೀವ್ಯತ್ವವನ್ನು ಹೇಳುವುದಿಲ್ಲ, ಮತ್ತೆ ಭೇದಕಗಳಾದ ಸರ್ವಜ್ಞತ್ವಾದಿ ಧರ್ಮಗಳನ್ನು ಬಿಟ್ಟು ತತ್ತ್ವಾದಿ ಧರ್ಮಗಳಿಂದ ವಿಶಿಷ್ಟನಿಗೆ ಉಪಜೀವ್ಯತ್ವವು ಎಂದು ಹೇಳುತ್ತೇವೆ. ಆದಕಾರಣ ದೋಷವಿಲ್ಲವೆಂದರೆ, ತತ್ತ್ವಾದಿ ಧರ್ಮವಿಶಿಷ್ಟನಿಗೆ ಉಪಜೀವ್ಯತ್ವವಿದ್ದರೆ ಆಗ ಸರ್ವಜ್ಞತ್ವಾದಿಗಳನ್ನು ಬಿಟ್ಟು ಯಾವುದಾದರೊಂದು ತತ್ವಾದಿ ಧರ್ಮದ ದೆಶೆಯಿಂದ ಅವನು ಬ್ರಹ್ಮನೆಂದು ಹೇಗೆ ತಿಳಿಯಲು ಸಾಧ್ಯ? ಆದಕಾರಣ ಯಾವ ಧರ್ಮದಿಂದ ವ್ಯಾವೃತ್ತವು ಆಗುವುದೋ ಆ ಧರ್ಮದಿಂದ ಯುಕ್ತನಾದವನಿಗೆ ಮಾತ್ರ ಉಪಜೀವ್ಯತ್ವವು. ಸ್ವರೂಪಮಾತ್ರಕ್ಕೆ ಎಲ್ಲಿಯೂ ಉಪಜೀವ್ಯತ್ವವು ಇರುವುದಿಲ್ಲ.

ಹಾಗಾದರೆ ತತ್ತ್ವಮಸಿ ಎನ್ನುವಲ್ಲಿ ತತ್ ಶಬ್ದವು ಯಃ ಸರ್ವಜ್ಞಃ ಎನ್ನುವುದನ್ನು ಉಪಜೀವಿಸಿಕೊಂಡು ಬ್ರಹ್ಮನು ಸರ್ವಜ್ಞನೆಂದು ಬೋಧಿಸಬೇಕಿಲ್ಲ. ತತ್ ಶಬ್ದವೇ ಸರ್ವಜ್ಞತ್ವ ವಿಶಿಷ್ಟವಾದ ವಸ್ತುವನ್ನು ತಿಳಿಸಿಕೊಡುತ್ತದೆ ಎಂದರೆ –

ಸರ್ವಲಕ್ಷಣಯುಕ್ತಂ ಚ ಸ್ವರೂಪಂ ಯದಿ ಭಣ್ಯತೇ ॥ ೧೭೬ ॥

ಅಸ್ತು ನೋ ನೈವ ಹಾನಿಃ ಸ್ಯಾತ್ಸ್ವಪಕ್ಷಶ್ಚಾಯಮಂಜಸಾ ।

ಯಸ್ಮಾದನ್ವಿತ ಏವಾರ್ಥಃ ಶಬ್ದಾನಾಮಪಿ ಸರ್ವಶಃ ॥ ೧೭೭ ॥

ವಿಶೇಷಸಾಮಾನ್ಯತಯಾ ಸ್ವರೂಪಮಖಿಲಂ ಭವೇತ್ ।

ಎಲ್ಲ ಲಕ್ಷಣಗಳಿಂದ ಕೂಡಿದ ಸ್ವರೂಪವೇ ತತ್ ಶಬ್ದದಿಂದ ಹೇಳಲ್ಪಡುತ್ತದೆ ಎಂದು ಹೇಳುವುದಾದರೆ, ಸರಿ ಹಾಗೆಯೇ ಆಗಲಿ. ಹೀಗೆ ಅಂಗೀಕರಿಸುವುದರಿಂದ ನಮಗೆ ಹಾನಿಯೇನೂ ಆಗುವುದಿಲ್ಲ. ಇದು ಚೆನ್ನಾಗಿ ನಮ್ಮ ಪಕ್ಷವೇ ಆಗಿದೆ. ಏಕೆಂದರೆ ಎಲ್ಲ ಶಬ್ದಗಳಿಗೂ ಯೋಗ್ಯವಾದ ಇತರ ಶಬ್ದಗಳಿಂದ ಯುಕ್ತವೇ ಆದ ಅರ್ಥವು (ಅನ್ವಿತಾಭಿಧಾನವು) ನಮ್ಮಿಂದ ಅಂಗೀಕೃತವಾಗಿದೆ. ಭಕ್ತಿಪಾದದಲ್ಲಿನ ಉಭಯವ್ಯಪದೇಶಾತ್ ಎಂಬ ಸೂತ್ರಸಾಮರ್ಥ್ಯದಿಂದ ಈ ಪ್ರಮೇಯವು 'ತಚ್ಚ ನಾಭಿಹಿತಾನ್ವಯಃ' ಇತ್ಯಾದಿ ವ್ಯಾಖ್ಯಾನದಲ್ಲಿ ಉಪಪಾದಿತವಾಗಿದೆ. ಯೋಗ್ಯವಾದ ಇತರರಿಂದ ಅನ್ವಿತವಾದ ಸ್ವರೂಪವು ವಿಶೇಷಸಾಮಾನ್ಯರೂಪದಿಂದ ಶಬ್ದದಿಂದ ಬೋಧ್ಯವಾಗುವುದು.

ವ್ಯಾವರ್ತಕಧರ್ಮಗಳಿಂದ ವ್ಯಾವೃತ್ತಕ್ಕೇನೆ ಉಪಜೀವ್ಯತ್ವವು ಎಂದು ಹೇಳಿದ್ದು ಸರಿಯಲ್ಲ. ಬಾಧಕ ಜ್ಞಾನಗಳಲ್ಲಿ ಹಾಗಿರುವುದಿಲ್ಲ. ಪೂರ್ವದಲ್ಲಿದ್ದ ಭ್ರಮಜ್ಞಾನದಲ್ಲಿ ವ್ಯಾವೃತ್ತತ್ವವೇ ಅಸಿದ್ಧವಾದುದರಿಂದ ಅಲ್ಲಿ ಕೂಡ ವ್ಯಾವೃತ್ತಕ್ಕೇ ಉಪಜೀವ್ಯತ್ವವು, ಸ್ವರೂಪಮಾತ್ರಕ್ಕಲ್ಲವೆಂದು ಹೇಳಕೂಡದು. ಭ್ರಮತ್ವಕ್ಕೆ ಅನುಪತ್ತಿಯು ಸಿದ್ಧವೂ ಆಗಿದೆ. 'ತನ್ಮಾತ್ರಮುಪಜೀವ್ಯ ಹಿ' ಎಂದು ವಿರೋಧೋಕ್ತಿಯೂ ಇದೆ ಎಂದರೆ –

ಪುರೋವರ್ತಿತ್ವಪೂರ್ವಾಣಿ ದೇವದತ್ತಾದಿಕಭ್ರಮೇ ॥ ೧೭೮ ॥

ವ್ಯಾವರ್ತಯಂತಿ ತದ್ರೂಪಂ ಚೈತ್ರಮಾತ್ರಾದ್ವಿನೈವ ತು ।

ಬ್ರಹ್ಮಕೋ ನಿರ್ವಿಶೇಷತ್ವಾದ್ವ್ಯಾವರ್ತಯತಿ ಕಿಂ ಪುನಃ ॥ ೧೭೯ ॥

ದೇವದತ್ತಾದಿಗಳ ವಿಷಯದಲ್ಲಿ ಯಾವ ಚೈತ್ರಾದಿ ಭ್ರಮೆಯಿದೆಯೋ ಅದರಲ್ಲಿ ಪುರೋವರ್ತಿತ್ವಾದಿ ವಿಶೇಷಣಗಳು ದೇವದತ್ತಾದಿ ಸ್ವರೂಪವನ್ನು ಕೇವಲ ಚೈತ್ರನ ದೆಶೆಯಿಂದ ಹೊರತು ಪಡಿಸಿಯೇ ವ್ಯಾವರ್ತಿಸುತ್ತವೆ. ಆದಕಾರಣ ಬಾಧಕಜ್ಞಾನವು ವ್ಯಾವೃತ್ತವನ್ನೇ ಉಪಜೀವಿಸುತ್ತದೆ ಎನ್ನುವ ನಿಯಮವು ಅಯುಕ್ತವಲ್ಲ. ಆರೋಪ್ಯ ವ್ಯಾವೃತ್ತಿಗಳು ಅನಂಗೀಕೃತವಾದ್ದರಿಂದ ಭ್ರಮೆಯ ಅನುಪತ್ತಿಯೂ ಇಲ್ಲ. ಮತ್ತೆ ಬ್ರಹ್ಮನಿಗೆ ವಿಶೇಷವಿಲ್ಲದಿರುವುದರಿಂದ ಬ್ರಹ್ಮನನ್ನು ಯಾವುದು ವ್ಯಾವರ್ತಿಸುತ್ತದೆ? ಯಾವುದೂ ವ್ಯಾವರ್ತಿಸುವುದಿಲ್ಲ ಎಂದ ಭಾವ.

ತತ್ವಾದಿಗಳನ್ನು ಅಂಗೀಕರಿಸಿದರೂ ದೋಷವನ್ನು ಹೇಳುತ್ತಾರೆ –

ಯಸ್ಮಾತ್ಕಸ್ಮಾಚ್ಚಿದಪ್ಯರ್ಥಾತ್ತಾವಚ್ಚೇತ್ಸಿದ್ಧಸಾಧನಮ್ ।

ತತ್ವಾದಿ ವಿಶೇಷಣದಿಂದ ತತ್ವಾದಿರಹಿತವಾದ ಯಾವುದಾದರೊಂದು ಅರ್ಥದಿಂದ ವ್ಯಾವೃತ್ತವಾದುದನ್ನು ಉಪಜೀವಿಸಿಕೊಂಡು ತ್ವಮಸಿ ಎಂದು ಜೀವಾಭೇದವನ್ನು ಬೋಧಿಸಿದರೆ, ಅದಕ್ಕೆ ಸಿದ್ಧಸಾಧನವೆಂಬ ದೋಷವು. ಏಕೆಂದರೆ ಈ ಅರ್ಥವು ಬೋಧನಾ ಪೂರ್ವದಲ್ಲಿಯೇ ತಿಳಿದಿರುವುದು. ಆದ್ದರಿಂದ ಅಶಾಸ್ತ್ರವು.

ಹಾಗಾದರೆ ತತ್ವಾದಿಗಳಿಂದ ವ್ಯಾವೃತ್ತನಾದ ಬ್ರಹ್ಮನು ಉಪಜೀವ್ಯನಾಗುವುದು ಬೇಡ. 'ವಿಜ್ಞಾನಮಾನಂದಂ ಬ್ರಹ್ಮ' ಇತ್ಯಾದಿ ಶ್ರುತಿಯಿಂದ ಬ್ರಹ್ಮನಿಗೆ ಲಕ್ಷಣವೆಂದು ಹೇಳಲ್ಪಟ್ಟ ಚಿನ್ಮಾತ್ರತ್ವಾದಿ ಧರ್ಮಗಳಿಂದ ವ್ಯಾವೃತ್ತನಾದ ಬ್ರಹ್ಮನು ಉಪಜೀವ್ಯನಾಗುವನು ಎಂದರೆ –

ಚಿನ್ಮಾತ್ರತ್ವಂ ಚ ನೈವೇಷ್ಟಮವಿಶೇಷತ್ವವಾದಿನಃ ॥ ೧೮೦ ॥

ಬ್ರಹ್ಮನು ನಿರ್ವಿಶೇಷನೆಂದು ಹೇಳುವರಿಗೆ ಚಿನ್ಮಾತ್ರಸ್ವರೂಪತ್ವವು ಇಷ್ಟವೇ ಇಲ್ಲ.

ಹಾಗಾದರೆ ಚಿನ್ಮಾತ್ರತ್ವಾದಿಗಳನ್ನು ಬ್ರಹ್ಮಾಭಿನ್ನವೆಂದು ಅಂಗೀಕರಿಸುತ್ತೇವೆ. ಆದ

ಕಾರಣ ಬ್ರಹ್ಮನ ನಿರ್ವಿಶೇಷತ್ವಕ್ಕೆ ವಿರೋಧವಿಲ್ಲವೆಂದರೆ –

ತಾವನ್ಮಾತ್ರಂ ಯದೀಷ್ಟಂ ಸ್ಯಾತ್ಸರ್ವಜ್ಞತ್ವಂ ಕುತೋ ನ ತತ್ ।

ಚಿನ್ಮಾತ್ರಾಭೇದಸಾಧ್ಯೇಽಪಿ ಸಿದ್ಧಂ ತತ್ಪ್ರತಿವಾದಿನಃ ।। ೧೪೧ ।।

ಸ್ವಾಭೇದಾಂಗೀಕೃತೇರೇವ ಚಿತ್ತಂ ಸ್ವಸ್ಯಾಪಿ ಯನ್ಮತಮ್ ।

ಅಷ್ಟು ಮಾತ್ರವು ನಿಮಗೆ ಇಷ್ಟವಾಗುವುದಾದರೆ ಸರ್ವಜ್ಞತ್ವಾದಿ ಧರ್ಮಗಳನ್ನು, ಅವೂ ಕೂಡ ಶ್ರುತವೂ ಅಭಿನ್ನವೂ ಆದುದರಿಂದ, ಏಕೆ ಅಂಗೀಕರಿಸಬಾರದು? ತತ್ತ್ವಮಸಿ ಇತ್ಯಾದಿ ವಾಕ್ಯವು ಚಿನ್ಮಾತ್ರದಿಂದ ಅಭೇದವನ್ನೇ ಪ್ರತಿಪಾದಿಸುವುದೆಂದು ಅಂಗೀಕರಿಸಿದರೂ ಸಿದ್ಧಸಾಧನವೇ ಆಗುವುದು. ಅದು ಹೇಗೆಂದರೆ – ಬೋಧ್ಯನಾದ ಪ್ರತಿವಾದಿಯು ತನ್ನಿಂದ ತನಗೆ ಅಭೇದವನ್ನು ಅಂಗೀಕರಿಸಿರುವುದರಿಂದ, ಅವನಿಗೆ ಚಿದೈಕ್ಯವು ಸಿದ್ಧವಾಗಿದೆ. ಅದು ಹೇಗೆಂದರೆ – ಬೋಧ್ಯನಾದವನಿಗೂ ಕೂಡ ಚೇತನತ್ವವು ಸಮ್ಮತವು. ಆದಕಾರಣ ಚಿದಭೇದವು ಸಿದ್ಧವಾಗಿದೆ.

ಬ್ರಹ್ಮನಿಗೆ ಚಿದಾನಂದಾದಿ ಸ್ವರೂಪತ್ವವನ್ನು ಅಂಗೀಕರಿಸುವಂತೆಯೇ ಸರ್ವಜ್ಞತ್ವ ಮುಂತಾದವುಗಳಿಗೂ ಏಕೆ ಬ್ರಹ್ಮಸ್ವರೂಪತ್ವವನ್ನು ಅಂಗೀಕರಿಸುವುದಿಲ್ಲ ಎಂದರೆ –

ಸರ್ವಾಪೇಕ್ಷತಯಾ ಸರ್ವಜ್ಞತ್ವಮಿತ್ಯೇವ ತನ್ನಹಿ ।। ೧೪೨ ।।

ಇತಿ ಚೇಚ್ಚೇತನತ್ವಂ ಚ ಜ್ಞತ್ವಂ ನ ಜ್ಞೇಯವರ್ಜಿತಮ್ ।

ಸರ್ವಜ್ಞತ್ವವು ಮಿಥ್ಯಾಭೂತಗಳಾದ ಆಕಾಶಾದಿ ಎಲ್ಲ ಪದಾರ್ಥಗಳನ್ನು ಅಪೇಕ್ಷಿಸಿಕೊಂಡೇ ಇರುವುದು. ಆದಕಾರಣ ಆ ಸರ್ವಜ್ಞತ್ವವೂ ಮಿಥ್ಯೆಯೇ ಆಗುವುದು. ಹೀಗೆ ಹೇಳಿದರೆ, ಅಂದರೆ ಯಾವುದು ಪರಸಾಪೇಕ್ಷಿತವೋ ಅದು ಸತ್ತಲ್ಲ ಎಂದು ಅಂಗೀಕರಿಸಿದರೆ ಬ್ರಹ್ಮನಿಗೆ ಚೇತನತ್ವವೂ ಕೂಡ ಇಲ್ಲದೇ ಹೋಗುವುದು. ಏಕೆಂದರೆ ಚೇತನತ್ವವು ಜ್ಞಾನಿತ್ವರೂಪವು. ಆ ಜ್ಞಾನಿತ್ವವಾದರೂ ಜ್ಞೇಯದಿಂದ ವಿರಹಿತವಲ್ಲ, ಮತ್ತೆ ಜ್ಞೇಯಸಾಪೇಕ್ಷವೇ ಆಗಿದೆ. ಜ್ಞಾನಕ್ರಿಯೆಯನ್ನು ಕುರಿತು ಕರ್ತೃತ್ವವೇ ಜ್ಞತ್ವವು. ಆದ್ದರಿಂದ ಕರ್ಮಾಪೇಕ್ಷಿತವಾದ ಕ್ರಿಯಾಕರ್ತೃತ್ವವೂ ಕೂಡ ಪರಸಾಪೇಕ್ಷಿತವೇ ಆಗಿದೆ.

ಹಾಗಿದ್ದರೂ ಚೇತನತ್ವವು ಏಕೆ ಕೂಡಲಾರದು ಎಂದರೆ – ಜ್ಞಾನಿಯಾದ ಬ್ರಹ್ಮನಿಗೆ ಸ್ವಯಂ ತಾನೇ ಜ್ಞೇಯವೋ ಅಥವಾ ಮತ್ತೊಂದು ಆಗುವುದೋ? ಮೊದಲನೆಯ ಪಕ್ಷವನ್ನು 'ಸ್ವಜ್ಞೇಯತ್ವಂ' ಇತ್ಯಾದಿ ವಚನದಿಂದ ನಿರಾಕರಿಸುತ್ತಾರೆ–

ಸ್ವಜ್ಞೇಯತ್ವಂ ಚ ನೈವಾಸೌ ಮನ್ಯತೇ ಸವಿಶೇಷತಃ ।। ೧೪೩ ।।

ಸ್ವಶಬ್ದೋಽಪಿ ಪರಾಪೇಕ್ಷಸ್ತಸ್ಮಾದ್ವ್ಯಾವೃತ್ತಿರೇವ ಹಿ ।

ಸ್ವಶಬ್ದಾರ್ಥ ಇತಿ ಪ್ರೋಕ್ತಃ ಸ್ವರೂಪಂ ನಾಮ ಕಿಂ ನ ಚೇತ್ ।। ೧೪೪ ।।

ನ ಸ್ವರೂಪಾಭಿಧಾಯಿ ಸ್ಯಾದ್ವೈಯರ್ಥ್ಯಂ ಸ್ವಪದಸ್ಯ ಯತ್ ।

ರೂಪಶಬ್ದೇನ ಪೂರ್ಣತ್ವಾತ್ತಚ್ಚ ಸಾಮಾನ್ಯತಾವಚಃ ॥ ೧೮೫ ॥

ಸ್ವಜ್ಞೇಯತ್ವವನ್ನು ಒಪ್ಪಿದರೆ ಸವಿಶೇಷತ್ವವು ಬರಬೇಕಾಗುವುದು. ಆದಕಾರಣ ಮಾಯಾವಾದಿಯು ಅದನ್ನು ಒಪ್ಪುವುದೇ ಇಲ್ಲ.

ಹೇಗೆಂದರೆ, ಒಂದೇ ಕ್ರಿಯೆಯಲ್ಲಿ ಒಬ್ಬನಿಗೇ ಕರ್ತೃಕರ್ಮಭಾವವು ಕೂಡುವುದಿಲ್ಲ. ಹಾಗೆ ಕೂಡಿಸಬೇಕಾದರೆ ಭೇದ ಪ್ರತಿನಿಧಿಯಾದ ವಿಶೇಷವನ್ನು ಅಂಗೀಕರಿಸಬೇಕು. ಬ್ರಹ್ಮನಲ್ಲಿ ಜ್ಞಾತೃ-ಜ್ಞೇಯತ್ವಗಳನ್ನು ಒಪ್ಪಿದರೆ ವಿಶೇಷವನ್ನೂ ಒಪ್ಪಬೇಕಾಗುವುದು. ಬ್ರಹ್ಮ ನಿರ್ವಿಶೇಷನೆಂದು ಅಂಗೀಕರಿಸುವ ಮಾಯಾವಾದಿಯು ಸ್ವಜ್ಞೇಯತ್ವವನ್ನು ಒಪ್ಪುವುದಿಲ್ಲ. ಆದ್ದರಿಂದ ಪರವೇ ಜ್ಞೇಯವೆಂದು ಹೇಳಬೇಕು. ಬ್ರಹ್ಮನಿಂದ ಇತರವಾದುದೆಲ್ಲ ಮಿಥ್ಯೆಯೇ. ಆದ್ದರಿಂದ ಅದನ್ನು ಅಪೇಕ್ಷಿಸತಕ್ಕ ಚೇತನತ್ವವು ಹೇಗೆ ಸತ್ತಾಗುವುದು?

ಸ್ವಶಬ್ದವೂ ಪರಾಪೇಕ್ಷಿತವಾದ ಅರ್ಥವನ್ನು ಪ್ರತಿಪಾದಿಸುವುದು. ಹೇಗೆಂದರೆ ಪರರಿಂದ ವ್ಯಾವೃತ್ತಿಯೇ ಸ್ವಶಬ್ದದ ಪ್ರವೃತ್ತಿನಿಮಿತ್ತವು. ಹೀಗೆಂದು ಶಬ್ದಶಕ್ತಿಯನ್ನು ಬಲ್ಲವರಿಂದ ಹೇಳಲ್ಪಟ್ಟಿದೆ. ನಮಗೆ ಅಭಿಮತವಾದ ವ್ಯಾಖ್ಯಾನವನ್ನು ಒಪ್ಪದಿದ್ದರೆ ಸ್ವರೂಪವೆನ್ನುವುದು ಇಲ್ಲದೇ ಹೋಗಬೇಕಾಗುವುದು. ಅಂದರೆ ಸ್ವರೂಪ ಶಬ್ದವು ನಿರರ್ಥಕವಾಗುವುದು. ಸ್ವರೂಪ ಮತ್ತು ರೂಪ ಶಬ್ದಗಳು ಸಮಾನಾರ್ಥಕವೆಂದು ಹೇಳುತ್ತೇವೆ ಎಂದರೆ – 'ಸ್ವಂ ಚ ತತ್ ರೂಪಂ ಚ' ಎಂಬ ವ್ಯುತ್ಪತ್ತಿಯಿಂದ ಹೀಗೆ ಹೇಳುವಿರೋ? ಅಥವಾ ಅಖಂಡವಾದ ಸ್ವರೂಪಶಬ್ದವು ರೂಪಶಬ್ದಕ್ಕೆ ಸಮಾನಾರ್ಥಕವೆಂದು ಹೇಳುವಿರೋ? ಎಂದು ಕೇಳುತ್ತೇವೆ. ಮೊದಲನೆ ಪಕ್ಷದಲ್ಲಿ ಸ್ವಶಬ್ದಕ್ಕೆ ವೈಯರ್ಥ್ಯ ಬರುವುದರಿಂದ ಸ್ವರೂಪವೆಂದರೆ ಯಾವುದೂ ಇಲ್ಲ. ವೈಯರ್ಥ್ಯವು ಹೇಗೆಂದರೆ ಸ್ವರೂಪಶಬ್ದದಲ್ಲಿರತಕ್ಕ ರೂಪಶಬ್ದದಿಂದಲೇ ರೂಪ ಶಬ್ದಾರ್ಥಕ್ಕೆ ಪೂರ್ಣತ್ವವು ಬರುವುದರಿಂದ, ಸ್ವರೂಪ ಶಬ್ದದಿಂದ ಕರೆಸಿಕೊಳ್ಳುವ ವಸ್ತುವು ಯಾವುದೂ ಇರುವುದಿಲ್ಲ. ಎರಡನೆ ಪಕ್ಷವೂ ಕೂಡುವುದಿಲ್ಲ. ಏಕೆಂದರೆ ರೂಪಶಬ್ದವು ಸಾಮಾನ್ಯಾಕಾರವನ್ನು ಹೇಳುವುದರಿಂದ ಅದು ಸ್ವರೂಪವನ್ನು ಪ್ರತಿಪಾದಿಸಲಾರದು.

ಹಾಗಾದರೆ ಬ್ರಹ್ಮನಿಗೆ ಚೇತನತ್ವವು ಬರಲಾರದು ಎಂದು ಯಾವುದು ಹೇಳಲ್ಪಟ್ಟಿದೆಯೋ ಅದು ಇಷ್ಟಾಪಾದನವು. ನಾವು ಬ್ರಹ್ಮನಿಗೆ ಚೇತನತ್ವವನ್ನು ಅಂಗೀಕರಿಸುವುದಿಲ್ಲ, ಮತ್ತೆ ಚೈತನ್ಯವೇ ಬ್ರಹ್ಮ ಎಂದು ಹೇಳುತ್ತೇವೆ ಎಂದರೆ, ಅದೂ ಕೂಡ ಪರರಿಂದ ಅಂಗೀಕರಿಸಲಿಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ –

ಚೇತನಸ್ಯ ಸ್ವಭಾವೋ ಹಿ ಚೈತನ್ಯಮಿತಿ ಗೀಯತೇ ।

ತಸ್ಮಾದ್ವಿಶೇಷಬಾಹುಲ್ಯಂ ಚೈತನ್ಯಸ್ಯ ವಿಶೇಷತಃ ॥ ೧೮೬ ॥

ಚೇತನದ ಧರ್ಮವೇ ಚೈತನ್ಯವೆಂದು ಹೇಳಲ್ಪಡುತ್ತದೆ. ಚಿತೀಸಂಜ್ಞಾನೇ ಎಂಬ ಧಾತುವಿನಿಂದ ಚೇತನಶಬ್ದಪ್ರವೃತ್ತಿ ನಿಮಿತ್ತವಾದುದು ಜ್ಞಾನವೆಂದು ತಿಳಿದುಬರುತ್ತದೆ. ಅಂದರೆ ಜ್ಞಾನವು ಬ್ರಹ್ಮನೆಂದು ಹೇಳಿದಂತಾಯಿತು. ಈ ಕಾರಣದಿಂದ ಬ್ರಹ್ಮನಿಗೆ ಅತಿಶಯದಿಂದ ಧರ್ಮಬಾಹುಲ್ಯವು ಪ್ರಸಕ್ತವಾಗುತ್ತದೆ. ಅಂದರೆ ಬ್ರಹ್ಮನಿಗೆ ಜ್ಞಾನ ರೂಪತ್ವವನ್ನು ಒಪ್ಪಿದರೆ ಸವಿಶೇಷತ್ವವು ಬರಬೇಕಾಗುವುದು.

ನ ಜ್ಞೇಯಜ್ಞಾತೃಹೀನಂ ಹಿ ಜ್ಞಾನಂ ನಾಮ ಕ್ವಚಿದ್ಭವೇತ್ ।

ಜ್ಞೇಯಜ್ಞಾನವಿಹೀನಶ್ಚ ಜ್ಞ ಇತ್ಯತ್ರ ನ ಚ ಪ್ರಮಾ ॥ ೧೪೭ ॥

ಜ್ಞೇಯ–ಜ್ಞಾತೃರಹಿತವಾದ ಜ್ಞಾನವೆಂಬುದು ಎಲ್ಲಿಯೂ ಇಲ್ಲ. ಜ್ಞೇಯಜ್ಞಾನ ವಿರಹಿತನಾದ ಜ್ಞಾನಾಶ್ರಯನು ಇದ್ದಾನೆ ಎಂಬ ವಿಷಯದಲ್ಲಿ ಪ್ರಮಾಣವಿಲ್ಲ. ಅಂತೂ ಬ್ರಹ್ಮನಿಗೆ ಅಸ್ತಿತ್ವವೇ ಇಲ್ಲದಂತಾಗುವುದು. ಆದಕಾರಣ ಪರರು ಚೈತನ್ಯನೇ ಬ್ರಹ್ಮ ಎಂದು ಅಂಗೀಕರಿಸಲಿಕ್ಕೆ ಆಗುವುದಿಲ್ಲವೆಂದು ಅಭಿಪ್ರಾಯ.

ಹಾಗಾದರೆ ಪ್ರಸಿದ್ಧವಾದ ಘಟಾದಿ ಜ್ಞಾನವು ಜ್ಞೇಯಾದಿಗಳಿಂದ ಯುಕ್ತವು ಎಂದು ಒಪ್ಪಿದರೂ, ಈ ಬ್ರಹ್ಮಸ್ವರೂಪವಾದ ಜ್ಞಾನವು ಜ್ಞೇಯಾದಿ ರಹಿತವೆಂದು ಆಗಲಿ. ಅದರಿಂದ ಬಾಧಕವೇನು ಎಂದರೆ –

ಜ್ಞಾತೃಜ್ಞೇಯವಿಹೀನಂ ಚ ಜ್ಞಾನಂ ಚೇದ್ಭೋಕ್ತೃಭೋಗ್ಯತಃ ।

ಹೀನಂ ಭೋಜನಮೇವ ಸ್ಯಾತ್ತಾಡನಂ ಕರ್ತೃತಾಡ್ಯತಃ ॥ ೧೪೮ ॥

ಜ್ಞಾನವು ಜ್ಞಾತೃಜ್ಞೇಯಗಳಿಂದ ವಿರಹಿತವೆಂದರೆ, ಭೋಕ್ತೃವೂ ಭೋಜ್ಯವಾದ ಪದಾರ್ಥಗಳೂ ಇವುಗಳಿಲ್ಲದೇ ಭೋಜನವೂ ಕೂಡ ಆಗಬೇಕಾಗುವುದು. ಅದೇ ರೀತಿ ಹೊಡೆಯುವವನೂ ಹೊಡೆಸಿಕೊಳ್ಳುವವನೂ ಇಲ್ಲದಿದ್ದರೂ ಹೊಡೆತವು ಆಗಬೇಕಾಗುವುದು. ಹೀಗೆ ಅತಿಪ್ರಸಂಗವು.

ಭೋಜನಾದಿಗಳು ಅನಿತ್ಯವು, ಜ್ಞಾನವಾದರೋ ನಿತ್ಯವು. ಆದ್ದರಿಂದ ಜ್ಞಾನಕ್ಕೆ ಕರ್ತೃಕರ್ಮಗಳ ಅಪೇಕ್ಷೆಯು ಬೇಕಿಲ್ಲ ಎಂದರೆ –

ನಿತ್ಯತ್ವಾತ್ತಾದೃಶಂ ಚ ಸ್ಯಾದಿತಿ ಚೇನ್ನಿತ್ಯವಾಗಪಿ ।

ವಾಚ್ಯವಕ್ತೃವಿಹೀನಾ ಸ್ಯಾನ್ನ ಹಿ ಸಾ ಚೈವ ತಾದೃಶೀ ॥ ೧೪೯ ॥

ಈಶ್ವರಜ್ಞಾನವು ನಿತ್ಯವಾದುದರಿಂದ(ಅಕಾರ್ಯವೂ ಆದುದರಿಂದ) ಜ್ಞಾತ್ರಾದಿ ರಹಿತವಾದುದು ಆಗುವುದು ಎಂದು ಹೇಳಿದರೆ, ಅಕಾರ್ಯವೂ ನಿತ್ಯವೂ ಆದ ವೇದವಚನವೂ ಕೂಡ ವಾಚ್ಯವಕ್ತೃಗಳಿಂದ ವಿರಹಿತವಾಗಬೇಕಾಗುವುದು. ಆದರೆ ಹಾಗಿಲ್ಲ. ಅಂದರೆ ವೇದವಚನವು ನಿತ್ಯವಾಗಿದ್ದರೂ ಎಂದಿಗೂ ವಾಚ್ಯವಕ್ತೃಗಳಿಂದ ವಿಹೀನವಾದುದು ಆಗುವುದೇ ಇಲ್ಲ.

ವೇದವಚನವು ಏಕೆ ವಕ್ತ್ರಾದಿ ವಿಹೀನವಾಗುವುದಿಲ್ಲವೆಂದರೆ –

ದ್ರಷ್ಟಾರೋ ವೇದವಾಚೋ ಹಿ ಸಂತಿ ವಾಚ್ಯಾನಿ ಚಾಂಜಸಾ ।

ನಿತ್ಯೋ ದ್ರಷ್ಟಾ ಚ ವಾಚ್ಯಶ್ಚ ಭಗವಾನೇವ ಚ ಸ್ವಯಮ್ ।। ೧೯೦ ।।

ನ ಹಿ ವಕ್ತೃವಿಹೀನಾ ಚ ವಾಚ್ಯಹೀನಾಽಪಿ ವಾಕ್ ಕ್ವಚಿತ್ ।

ವೇದವಚನಗಳಿಗೆ ದ್ರಷ್ಟಾರರೂ ಇರುತ್ತಾರೆ, ಚೆನ್ನಾಗಿ ವಾಚ್ಯವಾದ ಅರ್ಥಗಳೂ ಇರುತ್ತವೆ. ಸ್ಥಿತಿ.ಕಾಲದಲ್ಲಿ ವೇದವಚನಗಳ ದ್ರಷ್ಟಾರರು ಇರಲಿ, ಆದರೆ ಮಹಾ ಪ್ರಲಯದಲ್ಲಿ ವಾಚ್ಯವಕ್ತೃಗಳು ಇರುವುದಿಲ್ಲ ಎಂದರೆ ಹಾಗೆ ಹೇಳಕೂಡದು. ಏಕೆಂದರೆ ನಿತ್ಯನಾದ ದ್ರಷ್ಟಾರನೂ ವಾಚ್ಯನೂ ಕೂಡ ಸಾಕ್ಷಾತ್ ಭಗವಂತನೇ ಆದುದರಿಂದ ವೇದ ವಚನವು ಪ್ರಲಯಕಾಲದಲ್ಲಿಯೂ ಕೂಡ ವಕ್ತೃ–ವಾಚ್ಯಗಳಿಂದ ವಿರಹಿತವಾದುದು ಆಗುವುದೇ ಇಲ್ಲ.

ಆದ್ದರಿಂದ ನಿತ್ಯವಾದ ವೇದವಚನದಂತೆ ನಿತ್ಯವಾದ ಜ್ಞಾನವೂ ಕೂಡ ಜ್ಞೇಯಾದಿಗಳಿಂದ ಯುಕ್ತವೇ ಆಗಿದೆ ಎಂದು ಅಂಗೀಕರಿಸಬೇಕೆಂದು ಉಪಸಂಹಾರ ಮಾಡುತ್ತಾರೆ –

ಜ್ಞಾತೃಜ್ಞೇಯವಿಹೀನಂ ಚ ಜ್ಞಾನಮೇವ ನ ತದ್ಭವೇತ್ ।। ೧೯೧ ।।

ನ ಹಿ ನಿತ್ಯೋಽಪಿ ವಕ್ತಾಽಸ್ತಿ ವಾಕ್ಯವಾಚ್ಯವಿವರ್ಜಿತಃ ।

ಜ್ಞಾನಜ್ಞೇಯವಿಹೀನಶ್ಚ ಜ್ಞೋಽಪ್ಯೇವಂ ನೈವ ವಿದ್ಯತೇ ।। ೧೯೨ ।।

ಜ್ಞಾತೃ–ಜ್ಞೇಯವಿರಹಿತವಾದುದು ಜ್ಞಾನವೇ ಆಗುವುದಿಲ್ಲ. ನಿತ್ಯನಾಗಿದ್ದರೂ ವಾಕ್ಯವಾಚ್ಯಗಳಿಂದ ವಿರಹಿತನಾದ ವಕ್ತಾರನೂ, ಜ್ಞಾನಜ್ಞೇಯಗಳಿಂದ ವಿರಹಿತನಾದ ಜ್ಞಾನಾಶ್ರಯನೂ ಕೂಡ ಇಲ್ಲವೇ ಇಲ್ಲ.

ಪರವಸ್ತು ಹಾಗೂ ಅದನ್ನು ಅಪೇಕ್ಷಿಸಿಕೊಂಡಿರುವ ಬ್ರಹ್ಮನ ಸರ್ವಜ್ಞತ್ವಕ್ಕೂ ಮಿಥ್ಯಾತ್ವವನ್ನು ಹೇಳುವುದರಿಂದ ಚೇತನತ್ವಾದಿಗಳೇ ಇಲ್ಲವೆಂದಾಗುವವು ಎಂದು ಹೇಳಲಾಯಿತು. ಈಗ ಪ್ರಪಂಚಮಿಥ್ಯಾತ್ವವೂ ಕೂಡ ಅಪ್ರಾಮಾಣಿಕವೆಂದು ಹೇಳುತ್ತಾರೆ –

ಕಿಂಚ ಸರ್ವವಿಲೋಪಶ್ಚ ಕೇನ ಮಾನೇನ ಗಮ್ಯತೇ ।

ಸರ್ವೇಣ ಸಹ ತದ್ವಾಕ್ಯಮರ್ಥಶ್ಚ ಯದಿ ಗೃಹ್ಯತೇ ।। ೧೯೩ ।।

ತದಭಾವೇನ ಸರ್ವಸ್ಯ ನಾಪಲಾಪೋ ಭವೇತ್ತದಾ ।

ನ ಗೃಹ್ಯತೇ ಚೇತ್ತನ್ನ್ಯಾಯಾದಪಲಾಪೋ ನ ಹಿ ಕ್ವಚಿತ್ ।। ೧೯೪ ।।

ಸರ್ವಕ್ಕೂ ಮಿಥ್ಯಾತ್ವವೂ ಕೂಡ ಯಾವ ಪ್ರಮಾಣದಿಂದ ತಿಳಿಯಲ್ಪಡುತ್ತದೆ? ಅಂದರೆ ಪ್ರತ್ಯಕ್ಷದಿಂದಲೂ ಆಗಮದಿಂದಲೂ ಅನುಮಾನದಿಂದಲೂ ಪ್ರಪಂಚಕ್ಕೆ ಮಿಥ್ಯಾತ್ವವು ತಿಳಿಯಲ್ಪಡುವುದಿಲ್ಲ ಎಂದರ್ಥ.

ಹಾಗಾದರೆ 'ನೇಹ ನಾನಸ್ತಿ ಕಿಂಚನ' ಇತ್ಯಾದಿ ಪ್ರಪಂಚಮಿಥ್ಯಾತ್ವ ಸಾಧಕ ಆಗಮವಾಕ್ಯವು ಇದೆಯಲ್ಲ ಎಂದರೆ –

ಸರ್ವದಿಂದ ಕೂಡಿಕೊಂಡು ಆ ವಾಕ್ಯವೂ ಅದರ ಅರ್ಥವೂ ಸ್ವೀಕರಿಸಲ್ಪಡುವ ಪಕ್ಷದಲ್ಲಿ ಆ ವಾಕ್ಯ ಮತ್ತು ವಾಕ್ಯಾರ್ಥಕ್ಕೂ ಮಿಥ್ಯಾತ್ವವು ಬರಬೇಕಾಗುವುದು. ಆಗ ಮಿಥ್ಯಾತ್ವ ಪ್ರತಿಪಾದಕ ವಾಕ್ಯಾಭಾವದ ಕಾರಣ ಸರ್ವಮಿಥ್ಯಾತ್ವವೂ ಕೂಡುವುದಿಲ್ಲ. ಸರ್ವಾಂತರ್ಗತವಾಗಿ ಈ ವಾಕ್ಯವನ್ನೂ ವಾಕ್ಯಾರ್ಥವನ್ನೂ ಸ್ವೀಕರಿಸದೇ ಇದ್ದರೆ, ಆ ನ್ಯಾಯದಿಂದಲೇ ಆಕಾಶ ಇತ್ಯಾದಿ ವಿಷಯದಲ್ಲಿಯೂ ನಿಷೇಧವು ಕೂಡುವುದಿಲ್ಲ.

ಹಾಗಾದರೆ ಅಭಿಮತವಾದ ಅರ್ಥದ ಸಿದ್ಧಿಗಾಗಿ ವಾಕ್ಯವನ್ನು ಪ್ರಮಾಣವೆಂದು ಉದಾಹರಿಸಿದಾಗ, ಇಂಥಹ ವಾಕ್ಯವು ಇಲ್ಲವೆಂದೋ, ಈ ಪದಗಳಿಗೆ ಅರ್ಥಶಕ್ತಿ ಇಲ್ಲವೆಂದೋ ಅಥವಾ ಈ ವಾಕ್ಯಕ್ಕೆ ಅಲ್ಲಿ ತಾತ್ಪರ್ಯವಿಲ್ಲವೆಂದೋ ದೋಷವನ್ನು ಹೇಳಬೇಕು. ಹಿಂದೆ ಹೇಳಿದ ಪ್ರಕಾರ ವಿಕಲ್ಪಮಾಡಿಕೊಂಡು ನಿರಾಕರಣೆಯನ್ನು ಮಾಡಿದ್ದರಿಂದ ದೋಷ ಹೇಳಿದಂತೆ ಆಗಲಿಲ್ಲ ಎಂದರೆ –

ಉಪಪತ್ತಿವಿಹೀನಸ್ಯ ವಾಕ್ಯಸ್ಯಾರ್ಥೋ ನ ಗಮ್ಯತೇ ।

ಉಪಕ್ರಮಾದಿ ಲಿಂಗಾನಾಂ ಬಲೀಯೋ ಹ್ಯುತ್ತರೋತ್ತರಮ್ ॥ ೧೯೫ ॥

ಶ್ರುತ್ಯಾದೌ ಪೂರ್ವಪೂರ್ವಂ ಚ ಬ್ರಹ್ಮತರ್ಕ ವಿನಿರ್ಣಯಾತ್ ।

ಯುಕ್ತಿಯಿಂದ ವಿರುದ್ಧವಾದ ವಾಕ್ಯಕ್ಕೆ ತಾತ್ಪರ್ಯವು ತಿಳಿಯಲ್ಪಡುವುದಿಲ್ಲ. ಉಪಕ್ರಮಾದಿ ಲಿಂಗಗಳಲ್ಲಿ ಉತ್ತರೋತ್ತರ ಪ್ರಾಬಲ್ಯವು ಎಂದು ಪ್ರಸಿದ್ಧ. ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ, ಅರ್ಥವಾದ ಹಾಗೂ ಉಪಪತ್ತಿ ಇವು ತಾತ್ಪರ್ಯನಿರ್ಣಾಯಕ ಲಿಂಗಗಳು. ಅದರಲ್ಲಿ ಕೊನೆಯದಾದ ಉಪಪತ್ತಿಯೇ ಪ್ರಬಲ. ಶ್ರುತಿ ಮೊದಲಾದ ಲಿಂಗಗಳಲ್ಲಿ (ಶ್ರುತಿ, ಲಿಂಗ, ವಾಕ್ಯ, ಪ್ರಕರಣ, ಸ್ಥಾನ ಹಾಗೂ ಸಮಾಖ್ಯೆ) ಪೂರ್ವಪೂರ್ವ ಪ್ರಬಲವು. ಆದ್ದರಿಂದ ಅವುಗಳಲ್ಲಿ ಶ್ರುತಿಯೇ ಎಲ್ಲಕ್ಕಿಂತ ಪ್ರಬಲವು. ಹೀಗೆ ಬ್ರಹ್ಮತರ್ಕದಲ್ಲಿ ನಿರ್ಣಯಿಸಲಾಗಿದೆ.

ಪ್ರತ್ಯಕ್ಷಮುಪಪತ್ತಿಶ್ಚ ಬಹವಶ್ಚಾಗಮಾ ಯದಾ ॥ ೧೯೬ ॥

ವಿರುದ್ಧ್ಯಂತೇ ನ ಚಾರ್ಥೋಽಸ್ತಿ ಯತ್ರ ಲಿಂಗವಿರೋಧಿತಾ ।

ಸ ಏವಾರ್ಥಃ ಕಥಂ ಗ್ರಾಹ್ಯಃ ಉಪಪನ್ನೇಽವಿರೋಧಿನಿ ॥ ೧೯೭ ॥

ವಿಶ್ವಮಿಥ್ಯಾತ್ವವನ್ನು ಅಂಗೀಕರಿಸಿದರೆ, ಈ ಗಗನವು ಸತ್ಯ ಎಂಬ ಪ್ರತ್ಯಕ್ಷವೂ

(ಇದು ಸಾಕ್ಷಿರೂಪವಾದ್ದರಿಂದ ಬಲಿಷ್ಠವು), ಅರ್ಥಕ್ರಿಯಾಕಾರಿತ್ವಾದಿ ರೂಪವಾದ ಯುಕ್ತಿಯೂ(ವ್ಯಾಪ್ತ್ಯಾದಿ ವಿಶಿಷ್ಟವಾದ್ದರಿಂದ ಪ್ರಬಲ), ವಿಶ್ವಂ ಸತ್ಯಂ ಇತ್ಯಾದಿ ಅನೇಕ ಆಗಮಗಳೂ(ನಿರವಕಾಶತ್ವವಾದ್ದರಿಂದ ಪ್ರಬಲ) ಅದಕ್ಕೆ ವಿರುದ್ಧವಾಗುತ್ತವೆ. ಆದಕಾರಣ ಯಾವ ಅರ್ಥವನ್ನು ಅಂಗೀಕರಿಸಿದರೆ ಪ್ರತ್ಯಕ್ಷಾದಿ ಪ್ರಮಾಣಗಳಿಗೂ ಉಪಕ್ರಮಾದಿ ಲಿಂಗಗಳಿಗೂ ವಿರೋಧವಾಗುವುದಿಲ್ಲವೋ ಆ ಅರ್ಥವನ್ನೇ ಗ್ರಹಿಸಬೇಕು. ನೇಹ ನಾನಾಸ್ತಿ ಕಿಂಚನ ಎನ್ನುವ ವಾಕ್ಯಕ್ಕೆ ಸ್ವಗತಭೇದಾಭಾವ ಎಂಬ ಅರ್ಥವು ಪ್ರಮಾಣಾನುಕೂಲ್ಯದಿಂದ ಕೂಡುತ್ತಿರಲು ಆ ಅರ್ಥವನ್ನೇ ಗ್ರಹಿಸಬೇಕು, ಹೊರತು ಪ್ರಪಂಚಮಿಥ್ಯಾತ್ವ ಪ್ರತಿಪಾದಕಾರ್ಥವನ್ನು ಸ್ವೀಕರಿಸಬಾರದು.

ಮುಖ್ಯಾರ್ಥೇ ವಿದ್ಯಮಾನೇ ತು ಕ್ವ ಸಾರ್ವಜ್ಞಂ ನಿಷಿಧ್ಯತೇ ।

ಅತಃ ಸರ್ವಗುಣೈರ್ಯುಕ್ತಂ ಬ್ರಹ್ಮಾಂಗೀಕಾರ್ಯಮೇವ ಹಿ ॥ ೧೯೮ ॥

ಅಪಲಾಪೋಽಪಿ ಸರ್ವಸ್ಯ ನ ಕಥಂಚನ ಯುಜ್ಯತೇ ।

ಈ ವಾಕ್ಯಕ್ಕೆ ಪ್ರಪಂಚಮಿಥ್ಯಾತ್ವ ಪ್ರತಿಪಾದಕ ಅರ್ಥವು ಕೂಡದಿರಲು ಹಾಗೂ ಪರಮಾತ್ಮನಲ್ಲಿ ಸ್ವಗುಣಕ್ರಿಯಾದಿಗಳಿಂದ ಭೇದವಿಲ್ಲವೆಂಬುದಾಗಿ ಮುಖ್ಯಾರ್ಥವು ಕೂಡುತ್ತಿರಲು, ಭಗವಂತನ ಸರ್ವಜ್ಞತ್ವವನ್ನು ಈ ವಾಕ್ಯವು ಹೇಗೆ ನಿಷೇಧಿಸೀತು? ಆದ್ದರಿಂದ ಸರ್ವಗುಣಗಳಿಂದ ಯುಕ್ತನಾದ ಬ್ರಹ್ಮನನ್ನು ಅಂಗೀಕರಿಸಲೇಬೇಕು. ಸರ್ವವನ್ನೂ ಮಿಥ್ಯೆಯೆಂದು ಅಪಲಾಪ ಮಾಡುವುದು ಯಾವ ರೀತಿಯಿಂದಲೂ ಕೂಡುವುದಿಲ್ಲ. ಆದಕಾರಣ ಸರ್ವಜ್ಞತ್ವಾದಿ ಧರ್ಮಗಳು ಶ್ರೀಹರಿಯಲ್ಲಿ ಸತ್ಯವೇ ಆಗಿರುವುದರಿಂದ, ವಿರುದ್ಧ ಧರ್ಮಗಳಿಂದ ಯುಕ್ತರಾದ ಜೀವ–ಬ್ರಹ್ಮರಿಗೆ ತತ್ತ್ವಮಸಿ ಇತ್ಯಾದಿ ವಾಕ್ಯದ ಆಧಾರದಿಂದ ಐಕ್ಯವನ್ನು ಹೇಳುವುದು ಸರ್ವಥಾ ಕೂಡುವುದಿಲ್ಲ.

ಈ ವಿಷಯದಲ್ಲಿ ದೋಷಾಂತರವನ್ನೂ ಹೇಳುತ್ತಾರೆ –

ಅನಾದಿಯೋಗ್ಯತಾ ಚೋಕ್ತಾ ತೇನ ಗ್ರಾಹ್ಯೈವ ಸರ್ವಥಾ ॥ ೧೯೯ ॥

ಜೀವರಿಗೆ ಅನಾದಿಯೋಗ್ಯತೆಯು ಪ್ರಮಾಣಗಳಿಂದ ಉಪಪಾದಿಸಲ್ಪಟ್ಟಿದೆ. ಆ ಕಾರಣದಿಂದ ಅನಾದಿಯೋಗ್ಯತೆಯು ಸರ್ವಪ್ರಕಾರದಿಂದಲೂ ಗ್ರಾಹ್ಯವೇ ಆಗಿದೆ. ಆದಕಾರಣ ಜೀವರಲ್ಲಿ ದೇವ ಮಾನವ ದಾನವ ರೂಪವಾದ ಹಾಗೂ ಅವುಗಳ ಅವಾಂತರ ಭೇದರೂಪವಾದ ಅನಾದಿ ನಿತ್ಯವಾದ ಯೋಗ್ಯತೆಯು ಪ್ರಮಾಣಗಳಿಂದ ಸಿದ್ಧವಾಗಿರಲು ಜೀವಬ್ರಹ್ಮರಿಗೆ ಐಕ್ಯವು ಅಸಂಭಾವಿತವೆಂದು ಅಭಿಪ್ರಾಯ.

ಈ ವಿಷಯದಲ್ಲಿ ಮತ್ತೊಂದು ಹೇತುವನ್ನೂ ಹೇಳುತ್ತಾರೆ –

ಮುಕ್ತಾನಾಂ ತಾರತಮ್ಯಂ ಚ ಮಾನೈರುಕ್ತೈರ್ನ ಚಾಲ್ಯತೇ ।

ಮುಕ್ತರಲ್ಲಿರತಕ್ಕ ತಾರತಮ್ಯವು ಪೂರ್ವೋಕ್ತ ಪ್ರಮಾಣಗಳಿಂದ ಸಿದ್ಧವಾಗಿರುವ ಕಾರಣ ಅದನ್ನು ಅನ್ಯಥಾ ಮಾಡಲಿಕ್ಕೆ ಶಕ್ಯವಾಗುವುದಿಲ್ಲ.

ಹೀಗೆ ಮುಕ್ತರಲ್ಲಿಯೂ ತಾರತಮ್ಯವು ಪ್ರಮಿತವಾಗಿರಲು ಜೀವಬ್ರಹ್ಮೈಕ್ಯವು ಸರ್ವಥಾ ಅಯುಕ್ತವು. ಆಗ ತತ್ತ್ವಮಸಿ ಇತ್ಯಾದಿ ವಾಕ್ಯಗಳಿಗೆ ಐಕ್ಯಪರತ್ವವೂ ಕೂಡುವುದಿಲ್ಲ. ಗುಣಗಳಿಗೆ ಮಿಥ್ಯಾತ್ವ ಕಲ್ಪನೆಯೂ ಸರ್ವಥಾ ಅಯುಕ್ತವಾಗುವುದು ಎಂದು ಅಭಿಪ್ರಾಯ.

ಮುಕ್ತರ ತಾರತಮ್ಯ ವಿಷಯದಲ್ಲಿ ಪ್ರಮಾಣಾಂತರವನ್ನು ಹೇಳುತ್ತಾರೆ –

ಜ್ಞಾನಿನೋಽಪಿ ಯತೋ ನಿತ್ಯಂ ಕುರ್ವಂತಿ ಶುಭಮೇವ ಹಿ ॥ ೨೦೦ ॥

ತಾರತಮ್ಯಂ ತು ಮುಕ್ತೌ ಚ ತೇನೈವಾಧ್ಯವಸೀಯತೇ ।

ತಾರತಮ್ಯಂ ನ ಚೇನ್ಮುಕ್ತೌ ಕುತಃ ಕುರ್ಯುಃ ಶುಭಂ ಪುನ ೨೦೧ ॥

ಜ್ಞಾನಿಗಳೂ ಕೂಡ ನಿತ್ಯದಲ್ಲಿಯೂ ಶುಭಕರ್ಮವನ್ನೇ ಮಾಡುತ್ತಾರೆ ಹಾಗೂ ಪಾಪವನ್ನು ಪರಿಹರಿಸಿಕೊಳ್ಳುತ್ತಾರೆ. ಆದಕಾರಣ ಶುಭಕರ್ಮಕರಣ ಹಾಗೂ ಶುಭ ಕರ್ಮಪರಿತ್ಯಾಗಗಳಲ್ಲಿ ತಾರತಮ್ಯವು ಇದೆ. ಅದು 'ದಶಕಲ್ಪಂ ತಪಶ್ಚೀರ್ಣಂ' ಇತ್ಯಾದಿ ಪ್ರಮಾಣಗಳಿಂದ ಸಿದ್ಧವು. ಈ ನಿರವಕಾಶ ಪ್ರಮಾಣದಿಂದಲೇ ಮೋಕ್ಷ ಪೂರ್ವ ಸಾಧನೆಗಳಲ್ಲಿ ತಾರತಮ್ಯವು ಸಿದ್ಧವಾಗುವುದರಿಂದ, ಮುಕ್ತಿಯಲ್ಲಿ ತಾರತಮ್ಯವಿದೆ ಎಂಬುದು ನಿಶ್ಚಯವಾಗುವುದು. ಬ್ರಹ್ಮಾದಿಗಳು ಮುಕ್ತಿಯಲ್ಲಿ ತಾರತಮ್ಯವುಳ್ಳವರು ಆಗಿಲ್ಲದ ಪಕ್ಷದಲ್ಲಿ, ಆಗ ಕೇವಲ ಜ್ಞಾನದಿಂದಲೇ ಮುಕ್ತಿಯು ಪ್ರಾಪ್ತವಾಗುವಾಗ, ಪುನಃ ಅಂದರೆ ಅಪರೋಕ್ಷಜ್ಞಾನವು ಹುಟ್ಟಿದಮೇಲೂ ಶುಭ ಕರ್ಮವನ್ನು ಮಾಡುತ್ತಿರಲಿಲ್ಲ.

ಇದನ್ನೇ ವಿಪರ್ಯಯದಿಂದ ಪ್ರತಿಪಾದಿಸುತ್ತಾರೆ –

ಕೃಚ್ಛ್ರೇಣಾಪಿ ತಪೋ ಜ್ಞಾನಂ ಕರ್ಮಾಪ್ಯೇತೇ ಚರಂತಿ ಹಿ ।

ಬಿಭ್ಯತಿ ಸ್ಮಾಶುಭಾನ್ನಿತ್ಯಂ ಸಕಾಮಾಶ್ಚ ಶುಭೇ ಸದಾ ॥ ೨೦೨ ॥

ಈ ಜ್ಞಾನಿಗಳು ಕಷ್ಟದಿಂದಲೂ ತಪಸ್ಸು, ಜ್ಞಾನಪ್ರಾಪಕ ಶ್ರವಣಾದಿಗಳು ಹಾಗೂ ಯಜ್ಞಾದಿ ಕರ್ಮಗಳನ್ನೂ ಮಾಡುತ್ತಾರೆ. ಯಾವಾಗಲೂ ಶುಭವನ್ನೇ ಇಚ್ಛಿಸುವ ಅವರು ನಿತ್ಯದಲ್ಲಿಯೂ ಅಶುಭ ಕರ್ಮದಿಂದಾಗುವ ಅನರ್ಥವನ್ನು ಕುರಿತು ಭಯ ಪಡುತ್ತಾ ಇರುವರು.

ನ ಚ ಸ್ವಭಾವ ಏವಾಯಂ ಭಯಪೂರ್ವಪ್ರವೃತ್ತಿತಃ ।

ಕೃಚ್ಛ್ರೇಣಾಚರಣಾಚ್ಚೈವ ಶುಭಸ್ಯೈವ ಪುನಃ ಪುನಃ ॥ ೨೦೩ ॥

ಜ್ಞಾನಿಗಳ ಶುಭಾಚರಣರೂಪವಾದ ಈ ಪ್ರವೃತ್ತಿಯು ಅವರ ಸ್ವಭಾವವೇ ಅಲ್ಲ. ಏಕೆಂದರೆ ಶುಭಕರ್ಮವನ್ನು ಮಾಡದಿದ್ದರೆ ಪ್ರತ್ಯವಾಯ ಬರುವುದೆಂಬ ಭಯದಿಂದ ಅವರು ಕಷ್ಟದಿಂದ ಮತ್ತೆ ಮತ್ತೆ ಶುಭಕರ್ಮವನ್ನು ಆಚರಿಸುತ್ತಾರೆ.

ಹಾಗಾದರೆ ಜ್ಞಾನಿಗಳು ಕರ್ಮಮಾಡುವುದಕ್ಕೆ ಮೊದಲೇ ಭಯದಿಂದ ಹಾಗೂ ಕಷ್ಟದಿಂದ ಅಶುಭಕರ್ಮವನ್ನು ಪರಿತ್ಯಾಗಮಾಡಿ ಶುಭಕರ್ಮವನ್ನು ಅನುಷ್ಠಾನ ಮಾಡುತ್ತಾರೆ. ಆದ್ದರಿಂದ ಸ್ವಭಾವದಿಂದಲೇ ಅವರು ಹಾಗೆ ಮಾಡುತ್ತಾರೆ ಎಂದು ಅಂಗೀಕರಿಸಿದರೆ ದೋಷವೇನು ಎಂದರೆ –

ತಾದೃಶೇಪಿ ಸ್ವಭಾವಶ್ಚೇದಜ್ಞಸ್ಯಾಪಿ ಭವೇತ್ತಥಾ ।

ಫಲವತ್ತ್ವೇ ಪ್ರಮಾಣಂ ಚೇತ್ತತ್ರ ಜ್ಞಸ್ಯ ಸಮಂ ಹಿ ತತ್ ॥ ೨೦೪ ॥

ಭಯಪೂರ್ವ ಪ್ರವೃತ್ತಿಯೂ ಕೂಡ ಜ್ಞಾನಿಯ ಸ್ವಭಾವವೆಂದಾದರೆ ಅಜ್ಞನಿಗೂ ಹಾಗೆಯೇ ಆಗುವುದು. ಆಗ ಜ್ಞಾನಿಗಳಿಗೆ ಕರ್ಮಾನುಷ್ಠಾನದಲ್ಲಿ ಅಜ್ಞರಿಗಿಂತ ವಿಶೇಷವಿಲ್ಲ ಎಂದು ಹೇಳಬೇಕಾಗುತ್ತದೆ. ಫಲವತ್ವದಲ್ಲಿ ಸಾಮ್ಯವಿರುವುದಾದರೆ ಹಾಗೆ ಒಪ್ಪಬಹುದಿತ್ತು. ಅಜ್ಞಾನಿಗಳು ಮಾಡಿದ ಕರ್ಮಗಳಿಗೆ ಫಲವಿದೆ ಎನ್ನುವಲ್ಲಿ ಪ್ರಮಾಣವಿದೆ ಎನ್ನುವುದಾದರೆ, ಜ್ಞಾನಿಗೂ ಈ ವಿಷಯದಲ್ಲಿ ಸಾಮ್ಯವಿದೆ. ಅಂದರೆ ಜ್ಞಾನಿಗೆ ಕರ್ಮಕ್ಕೆ ಫಲವಿದೆ ಎನ್ನುವ ವಿಷಯದಲ್ಲಿ ಪ್ರಮಾಣ, ಅಧಿಕಾರ ಮೊದಲಾದವು ಇದ್ದೇ ಇರುವುದು.

ಆ ಪ್ರಮಾಣವು ಯಾವುದೆಂದರೆ ಅದನ್ನು ತೋರಿಸುತ್ತಾರೆ –

ನಿಷ್ಕಾಮಂ ಜ್ಞಾನಪೂರ್ವಂ ಚ ನಿವೃತ್ತಮಿಹ ಚೋಚ್ಯತೇ ।

ನಿವೃತ್ತಂ ಸೇವಮಾನಸ್ತು ಬ್ರಹ್ಮಾಭ್ಯೇತಿ ಸನಾತನಮ್ ॥ ೨೦೫ ॥

ಪ್ರವೃತ್ತ ನಿವೃತ್ತ ಕರ್ಮಗಳ ಮಧ್ಯದಲ್ಲಿ ಕಾಮನಾರಹಿತವೂ ಜ್ಞಾನಪೂರ್ವಕವೂ ಆದ ಕರ್ಮವು ನಿಷ್ಕಾಮಕರ್ಮವೆಂದು ಹೇಳಲ್ಪಡುತ್ತದೆ. ನಿವೃತ್ತಕರ್ಮವನ್ನು ಸೇವಿಸುವವನು ನಿತ್ಯನೂತನನಾದ ಪರಬ್ರಹ್ಮನನ್ನು ಅತಿಶಯವಾಗಿ ಹೊಂದುತ್ತಾನೆ. ಅಂದರೆ ಆನಂದೋದ್ರೇಕಸಹಿತನಾಗಿ ಮುಕ್ತನಾಗುತ್ತಾನೆ ಎಂದರ್ಥ.

ಇಲ್ಲಿ ಹೇಳಿದ ಸ್ಮೃತಿಯ ವಾಕ್ಯಾರ್ಥ ವಿವರಣೆಗಾಗಿ ಮತ್ತೊಂದು ಸ್ಮೃತಿಯನ್ನು ಪಠಿಸುತ್ತಾರೆ –

ಶುಭೇನಾನಂದವೃದ್ಧಿಃ ಸ್ಯಾದ್ ಹ್ರಾಸಶ್ಚೈವಾಶುಭೇನ ಹಿ ।

ಜ್ಞಾನಿನೋಽಪಿ ಯತಸ್ತೇನ ಕರ್ತವ್ಯಂ ಶುಭಮೇವ ತೈಃ ॥ ೨೦೬ ॥

ಶುಭಕರ್ಮದಿಂದ ಆನಂದವೃದ್ಧಿಯೂ ಅಶುಭಕರ್ಮದಿಂದ ಆನಂದಹ್ರಾಸವೂ ಆಗುವುದು. ಜ್ಞಾನಿಗೂ ಕೂಡ ಅಶುಭಕರ್ಮದಿಂದ ಆನಂದಹ್ರಾಸವಿರುವ ಕಾರಣ ಜ್ಞಾನಿಗಳಿಂದ ಶುಭಕರ್ಮವೇ ಮಾಡತಕ್ಕದು, ಅಶುಭಕರ್ಮವು ಬಿಡತಕ್ಕದ್ದೇ.

ಈ ವಿಷಯದಲ್ಲಿ ಶ್ರುತಿಯನ್ನು ಹೇಳುತ್ತಾರೆ –

ಉಪಾಸ್ತೇ ಸ ಯ ಆತ್ಮಾನಂ ಕ್ಷೀಯತೇ ನಾಸ್ಯ ಕರ್ಮ ಹಿ ।

ಅಸ್ಮಾದ್ಧ್ಯೇವಾತ್ಮನೋ ಯದ್ಯತ್ಕಾಮಯೇತ್ಸೃಜತೇ ಚ ತತ್ ॥ ೨೦೭ ॥

ಜ್ಞಾನಿಯಾದ ಯಾವನು ಪರಮಾತ್ಮನನ್ನು ಉಪಾಸನೆ ಮಾಡುತ್ತಾನೋ ಅವನ ಕರ್ಮವು ಕ್ಷಯಿಸುವುದಿಲ್ಲ. ಆ ಜ್ಞಾನಿಯು ಯಾವಯಾವುದನ್ನು ಇಚ್ಛಿಸುವನೋ ಆವಾವುದನ್ನು ಪರಮಾತ್ಮನ ಪ್ರಸಾದದಿಂದಲೇ ಸೃಷ್ಟಿ ಮಾಡುತ್ತಾನೆ. ಇಲ್ಲಿ 'ಸ ಯ ಆತ್ಮಾನಮೇವ ಲೋಕಮುಪಾಸ್ತೇ ನ ಹಾಸ್ಯ ಕರ್ಮ ಕ್ಷೀಯತೇ೨ಸ್ಮಾದ್ಧ್ಯೇವಾತ್ಮನೋ ಯದ್ಯತ್ಕಾಮಯತೇ ತತ್ತತ್ಸೃಜತೇ' ಎಂಬ ಶ್ರುತಿಯನ್ನು ಸ್ಮರಿಸುತ್ತಾರೆ.

ಅವಿದ್ವಾನ್ಬಹುಕರ್ಮಾಪಿ ಹ್ಯಂತವತ್ಫಲಮಾಪ್ನುಯಾತ್ ।

ಯದೇವ ವಿದ್ಯಯಾ ಕುರ್ಯಾತ್ತದೇವ ಹ್ಯತಿವೀರ್ಯವತ್ ॥ ೨೦೮ ॥

ಜ್ಞಾನಿಯಲ್ಲದವನು ಬಹುಕರ್ಮವಂತನಾದರೂ ಕೂಡ ನಾಶವುಳ್ಳ ಫಲವನ್ನು ಹೊಂದುತ್ತಾನೆ. ಯಾವುದನ್ನೇ ವಿದ್ಯೆಯಿಂದ, ಅಂದರೆ ತನಗೆ ಯೋಗ್ಯವಾದ ಉಪನಿಷತ್ತಿನಿಂದ, ಮಾಡುವನೋ ಅದುವೇ ಅತ್ಯಂತ ವೀರ್ಯವುಳ್ಳದ್ದು. ಇಲ್ಲಿ ಅವಿದ್ವಾನ್ ಎನ್ನುವುದರಿಂದ 'ಯದ್ಯಪ್ಯನೇವಂವಿತ್ ಮಹತ್ಪುಣ್ಯಂ ಕರ್ಮ ಕರೋತಿ ತದ್ಧಾಸ್ಯಾತಂತಃ ಕ್ಷೀಯತ ಏವ' ಎಂಬ ಶ್ರುತಿಯನ್ನೂ, ಯದೇವ ಎನ್ನುವುದರಿಂದ 'ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ ತದೇವ ವೀರ್ಯವತ್ತರಂ ಭವತಿ' ಎಂಬ ಶ್ರುತಿಯನ್ನೂ ಸ್ಮರಿಸುತ್ತಾರೆ.

ಇತ್ಯಾದಿ ವಾಕ್ಯಸಾಮರ್ಥ್ಯಾತ್ತಾರತಮ್ಯಂ ವಿಮುಕ್ತಿಗಮ್ ।

ಇದೇ ಮೊದಲಾದ ವಾಕ್ಯಗಳ ಸಾಮರ್ಥ್ಯದಿಂದ ಮೋಕ್ಷದಲ್ಲಿನ ತಾರತಮ್ಯವು ಸಿದ್ಧವಾಗುವುದು.

ಈ ವಾಕ್ಯಗಳು ಜ್ಞಾನಿಯ ಕರ್ಮಗಳಿಗೆ ಸಫಲತ್ವವನ್ನು ಪ್ರತಿಪಾದಿಸುವುದಿಲ್ಲ. 'ಸ ಯ ಆತ್ಮಾನಂ' ಎನ್ನುವಲ್ಲಿ ಉಪಾಸಕನ ಕರ್ಮಗಳಿಗೆ ಅಕ್ಷಯಫಲತ್ವವು ಶ್ರುತವಾಗಿದೆ. ಇತರೆಡೆಗಳಲ್ಲಿ ಜ್ಞಾನ ವಿದ್ಯಾ ಶಬ್ದಗಳಿಂದ ಪರೋಕ್ಷಜ್ಞಾನಾರ್ಥತ್ವವೂ ಕೂಡುವುದೆಂಬ ಆಶಂಕೆಯನ್ನು 'ನ ಚ' ಇತ್ಯಾದಿ ವಚನದಿಂದ ಪರಿಹರಿಸುತ್ತಾರೆ –

ನ ಚಾತ್ರೋಪಸಾಕಸ್ಯೈವ ಫಲಮಕ್ಷಯಮುಚ್ಯತೇ ॥ ೨೦೯ ॥

ನ ಹಿ ಜ್ಞಾನಂ ವಿನಾ ಕ್ವಾಪಿ ಫಲಸ್ಯಾಕ್ಷಯತಾ ಭವೇತ್ ।

ಈ ವಾಕ್ಯಗಳಲ್ಲಿ ಉಪಾಸಕನ ಕರ್ಮಗಳಿಗೇ ಅಕ್ಷಯ ಫಲವು ಹೇಳಲ್ಪಟ್ಟಿಲ್ಲ. ಏಕೆಂದರೆ ಬ್ರಹ್ಮಸಾಕ್ಷಾತ್ಕಾರವನ್ನು ಹೊರತು ಎಲ್ಲಿಯೂ ಮೋಕ್ಷದಲ್ಲಿಯೂ ಕರ್ಮಗಳ ಫಲಕ್ಕೆ ಅಕ್ಷಯತ್ವವು ಆಗಲಾರದು.

ಹಾಗಾದರೆ ಅಜ್ಞಾನಿಯ ಪಕ್ಷದಲ್ಲಿಯೂ ಅನುಪಪತ್ತಿಯಿಲ್ಲ. ಕರ್ಮಣಾ ಜ್ಞಾನಮಾತನೋತಿ ಎನ್ನುವ ಶ್ರುತಿಯಿಂದ ಉಪಾಸಕನಿಂದ ಮಾಡಲ್ಪಟ್ಟ ಅಸಂಕಲ್ಪಿತ ಫಲವುಳ್ಳ ಕರ್ಮಗಳು ಜ್ಞಾನವನ್ನು ಹುಟ್ಟಿಸುತ್ತವೆ. ಜ್ಞಾನದಿಂದ

ಮೋಕ್ಷವು ಆಗುವುದು. ಹೀಗೆ ಅಜ್ಞಾನಿಯು ಮಾಡಿದ ಕರ್ಮಗಳಿಗೂ ಕೂಡ ಜ್ಞಾನ ದ್ವಾರಾ ಅಕ್ಷಯಫಲತ್ವವು ಕೂಡುವುದು ಎಂದು ಆಶಂಕಿಸಿದರೆ –

ಜ್ಞಾನದ್ವಾರೇಣ ಚೇತ್ತಸ್ಯ ನಾಸ್ಮತ್ಪಕ್ಷಪ್ರತೀಪತಾ ॥ ೨೧೦ ॥

ಕರ್ಮಫಲಕ್ಕೆ ಅಕ್ಷಯತ್ವವು ಜ್ಞಾನದ್ವಾರಾ ಎಂಬ ಪರರ ವ್ಯಾಖ್ಯಾನಕ್ಕೆ ಮುಕ್ತಿಯಲ್ಲೂ ತಾರತಮ್ಯವನ್ನು ಹೇಳುವ ನಮ್ಮ ಪಕ್ಷದಿಂದ ವಿರೋಧವು ಇಲ್ಲ.

ಜ್ಞಾನದ್ವಾರದಿಂದ ಕರ್ಮಫಲಕ್ಕೆ ಅಕ್ಷಯತ್ವವನ್ನು ಹೇಳುವ ಅನ್ಯಥಾ ವ್ಯಾಖ್ಯಾನವು ಯುಕ್ತವೇ ಆಗಿದೆ ಎಂದು ಒಪ್ಪಿದರೂ, ಆ ವಾಕ್ಯಗಳಿಗೆ ಪ್ರಕೃತದಲ್ಲಿ ಸಾಧಕತ್ವವಿಲ್ಲ. ಜ್ಞಾನೋತ್ತರಕರ್ಮಕ್ಕೆ ಮೋಕ್ಷಾಂತರ್ಗತ ಫಲಹೇತುತ್ವವು ಅನ್ಯ ಪ್ರಮಾಣದಿಂದಲೇ ಸಿದ್ಧವಾಗುವುದು. ಆದ್ದರಿಂದ ಮುಕ್ತರ ತಾರತಮ್ಯವನ್ನು ಬಿಡಲು ಅಶಕ್ಯವು ಎಂದು ಅಂಗೀಕರಿಸಿಕೊಂಡು (ಅಭ್ಯುಪಗಮವಾದದಿಂದ) ಹೇಳುತ್ತಾರೆ –

ಜ್ಞಾನೋತ್ತರಸ್ಯೈವಮಪಿ ಹ್ಯಕ್ಷಯತ್ವಂ ನ ಚಾನ್ಯಥಾ ।

ಬ್ರಹ್ಮಸಾಕ್ಷಾತ್ಕಾರವಾದಮೇಲೆ ಇರತಕ್ಕ ಕರ್ಮಕ್ಕೇನೆ ಮೋಕ್ಷದಲ್ಲಿ ಅಕ್ಷಯ ಫಲವತ್ವವು, ಬೇರೆ ಪ್ರಕಾರವಿಲ್ಲ. ಅಂದರೆ ಪರಿಶೇಷಪ್ರಮಾಣದಿಂದ ಎಂದರ್ಥ.

ಪರಿಶೇಷಪ್ರಮಾಣವನ್ನು ತೋರಿಸುತ್ತಾರೆ –

ಪೂರ್ವಭಾವಿಶುಭಾನಾಂ ಹಿ ಜ್ಞಾನೇನೈವ ಕೃತಾರ್ಥತಾ ॥ ೨೧೧ ॥

ಪ್ರಾರಬ್ಧಾನಾಂ ತು ಭೋಗೇನ ತಜ್ಜ್ಞಾನೋತ್ತರಕರ್ಮಣಾಂ ।

ಮುಕ್ತಾವನುಪ್ರವೇಶಃ ಸ್ಯಾದನ್ಯಥಾ ತತ್ಕೃತಿರ್ನ ಹಿ ॥ ೨೧೨ ॥

ಜ್ಞಾನಿಕೃತ ಕರ್ಮಗಳಲ್ಲಿ ಜ್ಞಾನಾರ್ಥತ್ವ, ಭೋಗಾರ್ಥತ್ವ ಅಥವಾ ವ್ಯರ್ಥತ್ವ ಹೀಗೆ ಮೂರು ವಿಧಗಳು ಸಂಭವನೀಯವು. ಇವುಗಳಲ್ಲಿ ಜ್ಞಾನಿಕೃತ ಕರ್ಮಗಳಿಗೆ ಜ್ಞಾನಾರ್ಥತ್ವವು ಕೂಡುವುದಿಲ್ಲ. ಏಕೆಂದರೆ – ಜ್ಞಾನಬರುವುದಕ್ಕೆ ಪೂರ್ವದಲ್ಲಿ ಇರತಕ್ಕ ಶುಭಕರ್ಮಗಳಿಗೆ ಜ್ಞಾನಹುಟ್ಟಿಸುವುದರಿಂದಲೇ ಕೃತಾರ್ಥತೆಯು. ಆ ಕರ್ಮಗಳಿಗೆ ಬೇರೆ ಕಾರ್ಯವಿಲ್ಲ. ಭೋಗಾರ್ಥತ್ವವೂ ಕೂಡಲಾರದು. ಪ್ರಾಚೀನ ಪ್ರಾರಬ್ಧಕರ್ಮಗಳಿಂದಲೇ ಭೋಗ ಹುಟ್ಟುವುದು. ಹೇಗೆಂದರೆ ಪ್ರಾರಬ್ಧಕರ್ಮಗಳಿಗೆ ಭೋಗದಿಂದಲೇ ಕೃತಾರ್ಥತೆಯು. ಜ್ಞಾನಿಗಳ ಕರ್ಮಗಳಿಗೆ ವೈಯರ್ಥ್ಯವಿದ್ದರೆ ಆ ಕರ್ಮಗಳ ಅನುಷ್ಠಾನವು ಕೂಡುವುದಿಲ್ಲ. ಏಕೆಂದರೆ ಪ್ರೇಕ್ಷಾವಂತರು ಎಂದಿಗೂ ವ್ಯರ್ಥವಾದ ಕರ್ಮವನ್ನು ಮಾಡವುದಿಲ್ಲವಷ್ಟೆ. ಆದ್ದರಿಂದ ಜ್ಞಾನೋತ್ತರದಲ್ಲಿ ಮಾಡಿದ ಕರ್ಮಾನುಷ್ಠಾನವು ಮುಕ್ತಿಯಲ್ಲಿ ಆನಂದವೃದ್ಧಿಗೋಸ್ಕರವೇ ಆಗುವುದು.

ಪೂರ್ವಭಾವಿ ಶುಭಕರ್ಮಗಳು ಜ್ಞಾನಾರ್ಥಕ್ಕಾಗಿ ಎಂದು ಹೇಳಲಾಯಿತು. ಎಲ್ಲಕ್ಕೂ ಜ್ಞಾನಾರ್ಥತ್ವವಿದ್ದರೂ ಅದರಲ್ಲಿ ವಿಶೇಷವನ್ನು ಹೇಳುತ್ತಾರೆ –

ಜ್ಞಾನಾತ್ಪೂರ್ವಾಣಿ ಕರ್ಮಾಣಿ ಶುಭಾನಿ ಜ್ಞಾನಸಿದ್ಧಯೇ ।

ಅಕಾಮ್ಯಾನಿ ನಿಷಿದ್ಧಾನಿ ಜ್ಞಾನರೋಧಾಯ ಭುಕ್ತಯೇ ॥ ೨೧೩ ॥

ಜ್ಞಾನಕ್ಕೆ ಪೂರ್ವದಲ್ಲಿ ಮಾಡಿದ ಅಕಾಮ್ಯಗಳೇ ಆದ ಶುಭಕರ್ಮಗಳು ಜ್ಞಾನ ಸಿದ್ಧಿಗೋಸ್ಕರವೇ ಆಗುತ್ತವೆ. ಆದರೆ ಕಾಮ್ಯಕರ್ಮಗಳಲ್ಲ. ನಿಷಿದ್ಧ ಕರ್ಮಗಳಾದರೂ ಜ್ಞಾನ ಹುಟ್ಟದಂತೆ ಮಾಡುವುದಕ್ಕೂ ಅಥವಾ ಹುಟ್ಟಿದ ಜ್ಞಾನದ ನಾಶಕ್ಕಾಗಿಯೂ ಕಾರಣವಾಗುವುದಲ್ಲದೆ ದುಃಖದ ಅನುಭವಕ್ಕಾಗಿಯೂ ಆಗುತ್ತವೆ.

ಕಾಮ್ಯಾನಿ ಶುಭಾನಿ ಎಂಬಂತೆಯೇ ನಿತ್ಯ ನೈಮಿತ್ತಿಕ ವ್ಯತಿರಿಕ್ತಾನಿ ಎಂದೂ ವಿಶೇಷಣವನ್ನು ತೆಗೆದುಕೊಳ್ಳಬೇಕು. ಏಕೆಂದರೆ, ನಿತ್ಯಾದಿಗಳೂ ಕೂಡ ಪ್ರತ್ಯವಾಯ ಪರಿಹಾರಕಗಳು, ಜ್ಞಾನಕ್ಕೆ ಕ್ಷಾರಣಗಳಲ್ಲ ಎಂದರೆ –

ಯೋಗ್ಯತಾಯಾ ಬಲಾದ್ಯಾಶ್ಚ ಶುಭಬಾಹುಲ್ಯಮಾದಿತಃ ।

ಜ್ಞಾನಬಾಹುಲ್ಯಮೇವೈತತ್ಕುರ್ಯಾನ್ನಾನ್ಯಸ್ಯ ಕಾರಣಮ್ ॥ ೨೧೪ ॥

ಬ್ರಾಹ್ಮಣತ್ವಾದಿರೂಪವಾದ ಅಥವಾ ಪಿತೃಮರಣಾದಿರೂಪವಾದ ಯೋಗ್ಯತಾ ಬಲದಿಂದ ಜ್ಞಾನಪೂರ್ವದಲ್ಲಿ ಮಾಡುವ ಶುಭಕರ್ಮಗಳ ಬಾಹುಲ್ಯವು ಜ್ಞಾನಕ್ಕೆ ಬಾಹುಲ್ಯವನ್ನೇ ಮಾಡುವುದು. ಪ್ರತ್ಯವಾಯ ಮಾತ್ರ ಪರಿಹಾರಕ್ಕೆ ಕಾರಣವಲ್ಲ. ಈ ಶಾಸ್ತ್ರದಲ್ಲಿ ಎಲ್ಲೆಲ್ಲಿ ಜ್ಞಾನಕ್ಕೆ ಮೋಕ್ಷಸಾಧನತ್ವವು ಹೇಳಲ್ಪಡುತ್ತದೋ ಅಲ್ಲಲ್ಲಿ ಜ್ಞಾನವೆನ್ನುವ ಪದದಿಂದ ಭಕ್ತಿಯು ಲಕ್ಷಿತವಾಗುತ್ತದೆ.

ಜ್ಞಾನಸ್ಯ ಭಕ್ತಿಭಾಗತ್ವಾದ್ಭಕ್ತಿರ್ಜ್ಞಾನಮಿತೀರ್ಯತೇ ।

ಜ್ಞಾನಸ್ಯೈವ ವಿಶೇಷೋ ಯದ್ಭಕ್ತಿರಿತ್ಯಭಿಧೀಯತೇ ॥ ೨೧೫ ॥

ಪರೋಕ್ಷತ್ವಾಪರೋಕ್ಷತ್ವೇ ವಿಶೇಷೌ ಜ್ಞಾನಗೌ ಯಥಾ ।

ಸ್ನೇಹಯೋಗೋಪಿ ತದ್ವತ್ಸ್ಯಾದ್ವಿಶೇಷೋ ಜ್ಞಾನಗೋಽಪರಃ ॥ ೨೧೬ ॥

ಜ್ಞಾನಕ್ಕೆ ಭಕ್ತಿಯ ಏಕದೇಶತ್ವವಿದೆ. ಹೇಗೆಂದರೆ ಮಾಹಾತ್ಮ್ಯ ಜ್ಞಾನ ಸ್ನೇಹ ಸಮುದಾಯವೇ ಭಕ್ತಿಯು ಎಂದು ಹೇಳಲ್ಪಟ್ಟಿದೆ. ಸ್ನೇಹವೆಂಬ ವಿಶೇಷದಿಂದ ಯುಕ್ತವಾದ ಜ್ಞಾನಕ್ಕೇನೆ ಭಕ್ತಿಯೆಂದು ಹೆಸರು. ಹೇಗೆ ಪರೋಕ್ಷತ್ವ ಅಪರೋಕ್ಷತ್ವ ರೂಪಗಳಾದ ವಿಶೇಷಗಳು ಜ್ಞಾನಗತವಾದ ಧರ್ಮಗಳೋ ಅದರಂತೆಯೇ ಜ್ಞಾನಗತವಾದ ಇತರವಾದ ಸ್ನೇಹ ಸಂಬಂಧಿಯಾದ ವಿಶೇಷವು ಆಗುವುದು. ಏಕದೇಶದಿಂದ ಏಕದೇಶಾಂತರ ಲಕ್ಷಣವೂ ಆಗುವುದು.

ಲಾಕ್ಷಣಿಕ ಪ್ರಯೋಗದಲ್ಲಿ ಸೂತ್ರಕಾರರಿಗೆ ಏನು ಪ್ರಯೋಜನವೆಂದರೆ –

ಇತ್ಯಭಿಪ್ರಾಯತಃ ಪ್ರಾಯೋ ಜ್ಞಾನಮೇವ ವಿಮುಕ್ತಯೇ ।

ವದಂತಿ ಶ್ರುತಯಃ ಸೋಽಯಂ..... ॥

ಜ್ಞಾನಕ್ಕೆ ದ್ವಿವಿಧ ಲಕ್ಷಣವೆಂಬ ಅಭಿಪ್ರಾಯದಿಂದ ತರತಿ ಶೋಕಮಾತ್ಮವಿತ್ ಇತ್ಯಾದಿ ಶ್ರುತಿಗಳು ಪ್ರಾಯಶಃ ಮೋಕ್ಷಕ್ಕಾಗಿ ಜ್ಞಾನವನ್ನೇ ಹೇಳುತ್ತವೆ.

ಹಾಗಾದರೆ ಜ್ಞಾನಪದಕ್ಕೆ ಎರಡು ಅರ್ಥವಿದ್ದರೆ ಭಕ್ತಿಗ್ರಹಣಕ್ಕೆ ವೈಯರ್ಥ್ಯ ಬರುವುದು ಎಂದರೆ –

..... ವಿಶೇಷೋಽಪಿ ಹ್ಯುದೀರ್ಯತೇ ।। ೨೧೭ ।।

ಭಕ್ತಿರ್ಜ್ಞಾನಮಿತಿ ಕ್ವಾಪಿ ..... ।

ಎಲ್ಲಿಯಾದರೂ ಭಕ್ತಿ ಜ್ಞಾನ ಎಂಬ ಪದಗಳಿಂದ ಈ ಸ್ನೇಹರೂಪವಾದ ಮತ್ತು ಬೋಧರೂಪವಾದ ವಿಶೇಷವೂ ಹೇಳಲ್ಪಡುತ್ತದೆ. ಆದುದರಿಂದ ಅನುಪಪತ್ತಿಯಿಲ್ಲ.

ಹಾಗಾದರೆ ಸ್ನೇಹವಿಲ್ಲದೆ ಜ್ಞಾನಮಾತ್ರದಿಂದ ಮುಕ್ತಿಯು ಕೂಡುವುದಿಲ್ಲವೆಂದರೆ ಆಗ ಜ್ಞಾನಪದಕ್ಕೆ ಲಕ್ಷಕತ್ವವನ್ನು ಆಶ್ರಯಿಸಬೇಕು. ಹೀಗೆ ಇಲ್ಲ. ಪುರುಷಾರ್ಥವು ಕೇವಲ ಭಕ್ತಿಯಿಂದಲೇ ಸಾಧ್ಯವು ಎನ್ನುವುದಕ್ಕೆ ಪ್ರಮಾಣವಿಲ್ಲ. ದ್ವೇಷಿಗಳಾದ ಶಿಶುಪಾಲಾದಿಗಳಿಗೂ ಮೋಕ್ಷವು ಕಂಡಿದೆ ಎಂದರೆ –

..... ನ ಹಿ ದ್ವೇಷಯುತಾ ದೃಶಿಃ ।

ಪುರುಷಾರ್ಥಾಯ ಭವತಿ ಸರ್ವಶ್ರುತಿವಿರೋಧತಃ ।। ೨೧೮ ।।

ದ್ವೇಷಯುಕ್ತವಾದ ಜ್ಞಾನವು ಮೋಕ್ಷಕ್ಕಾಗಿ ಆಗುವುದಿಲ್ಲ. ಹಾಗೆ ಹೇಳಿದರೆ ಎಲ್ಲ ಶ್ರುತಿಗಳಿಂದಲೂ ವಿರೋಧ ಬರುವುದು.

ಮಾಹಾತ್ಮ್ಯ ಜ್ಞಾನವೂ ಕೂಡ ದ್ವೇಷಸಹಿತವಿದ್ದರೆ ಮುಕ್ತಿಗೆ ಕಾರಣವಾಗದು. ಇನ್ನು ಕೇವಲ ದ್ವೇಷವು ಮುಕ್ತಿಗೆ ಕಾರಣವಲ್ಲವೆಂದು ಹೇಳಬೇಕೇನು? 'ನೈಷ್ಕರ್ಮ್ಯ ಮಪ್ಯಚ್ಯುತಭಾವವರ್ಜಿತಂ ನ ಶೋಭತೇ ಜ್ಞಾನಮಲಂ ನಿರಂಜನಮ್' ಎಂದು ಭಾಗವತದ ವಚನ. ಕಾಮಾದಿ ದೋಷರಹಿತವಾದ ಜ್ಞಾನವೂ ಭಕ್ತಿರಹಿತವಾಗಿದ್ದರೆ, ಅಂದರೆ ದ್ವೇಷಯುಕ್ತವಾಗಿದ್ದರೆ, ಮೋಕ್ಷಹೇತುವಲ್ಲ ಎಂದು ಈ ವಾಕ್ಯದ ಅರ್ಥ.

ದ್ವೇಷಕ್ಕೆ ಮುಕ್ತಿಸಾಧನತ್ವವನ್ನು ಅಂಗೀಕರಿಸಿದರೆ ಸರ್ವಶ್ರುತಿಗಳ ವಿರೋಧವು ಹೇಗೆ ಎಂದರೆ ಅದರ ಸಮರ್ಥನೆಗಾಗಿ ಒಂದು ಶ್ರುತಿಯನ್ನು ಪಠಿಸುತ್ತಾರೆ –

ಚೇತನಸ್ಯ ದ್ವಯಂ ಭೋಗ್ಯಂ ಸಂಸಾರೋ ಮುಕ್ತಿರೇವ ಚ ।

ಸಂಸಾರಿಸ್ತ್ರಿವಿಧಸ್ತತ್ರ ಸ್ವರ್ಗೋ ಮಧ್ಯಮಧಸ್ತಥಾ ।। ೨೧೯ ।।

ಮುಕ್ತಿಶ್ಚ ದ್ವಿವಿಧಾ ತತ್ರ ಸುಖಂ ನಿತ್ಯಂ ತಥಾಪರಮ್ ।

ನಿತ್ಯದುಃಖಮಿತಿ ಜ್ಞೇಯಂ ಸಾಧನಂ ಸಂಸೃತಾವಪಿ ।। ೨೨೦ ।।

ಕಾಮ್ಯಂ ಕರ್ಮ ನಿಷಿದ್ಧಂ ಚ ಸಾಜ್ಞಾನಮಿತಿ ನಿಶ್ಚಯಃ ।

ದ್ವೇಷೋ ಭಕ್ತಿಶ್ಚ ಮುಕ್ತೌ ತು ಮುಕ್ತಿದ್ವಯವಿಧಾಯಕಮ್ ॥ ೨೨೧ ॥

ಇತಿ ಪೈಂಗಿಶ್ರುತೇರ್ದ್ವೇಷೋ ನೈವ ಸನ್ಮುಕ್ತಿಕಾರಣಮ್ ।

ಅಸನ್ಮುಕ್ತೇಃ ಕಾರಣಂ ಚ ..... ॥

ಜೀವಜಾತಕ್ಕೆ ಸಂಸಾರ ಹಾಗೂ ಮುಕ್ತಿ ಎಂಬುದಾಗಿ ಎರಡೇ ಭೋಗಿಸಲಿಕ್ಕೆ ಯೋಗ್ಯವು. ಮುಕ್ತಿಸಂಸಾರಗಳ ಮಧ್ಯೆ, ಸಂಸಾರವು ಸ್ವರ್ಗ, ಮಾನುಷತ್ವ ಹಾಗೂ ನರಕಾದಿಗಳು ಎಂದು ಮೂರು ವಿಧ. ಹಾಗೆಯೇ ಮುಕ್ತಿಯೂ ಎರಡು ವಿಧ. ಅದರಲ್ಲಿ ಒಂದು ನಿತ್ಯಸುಖರೂಪವಾಗಿದ್ದರೆ, ಮತ್ತೊಂದು ನಿತ್ಯದುಃಖರೂಪವೆಂದು ತಿಳಿಯತಕ್ಕದ್ದು. ಸಂಸಾರವಿಷಯದಲ್ಲಿ ಅಜ್ಞಾನಸಹಿತವಾದ ಕಾಮ್ಯಕರ್ಮವೂ ನಿಷಿದ್ಧಕರ್ಮವೂ ಸಾಧನವೆಂದು ನಿಶ್ಚಯ. ಮುಕ್ತಿಯ ವಿಷಯದಲ್ಲಾದರೂ ಯಥಾಯೋಗ್ಯವಾಗಿ ದ್ವೇಷವೂ ಭಕ್ತಿಯೂ ಎರಡು ವಿಧವಾದ ಮುಕ್ತಿಗೆ ಕಾರಕವು ಎಂದು ತಿಳಿಯತಕ್ಕದ್ದು. ಹೀಗೆ ಪೈಂಗಿಶ್ರುತಿಯಿಂದ ದ್ವೇಷವು ನಿತ್ಯಸುಖರೂಪವಾದ ಸನ್ ಮುಕ್ತಿಗೆ ಕಾರಣವೇ ಅಲ್ಲ, ಮತ್ತೆ ನಿತ್ಯದುಃಖರೂಪವಾದ ಅಸನ್ಮುಕ್ತಿಗೆ ಕಾರಣವೆಂದು ಹೇಳಲ್ಪಟ್ಟಿದೆ. ಹಾಗಾದರೆ ಈ ಶ್ರುತಿಯಲ್ಲಿ ಮುಕ್ತಿವಿಷಯಕಗಳಾದ ಭಕ್ತಿದ್ವೇಷಗಳು ಸದಸನ್ಮುಕ್ತಿಗಳಿಗೆ ಕಾರಣಗಳೆಂದು ಹೇಳಲ್ಪಟ್ಟಿವೆ. ವಿಷ್ಣುವಿಷಯಕಗಳಾದ ಭಕ್ತಿದ್ವೇಷಗಳು ಇಲ್ಲಿ ಪ್ರಕೃತವು. ಆದ್ದರಿಂದ ಈ ಶ್ರುತಿಯು ಹೇಗೆ ಸಂಗತವು ಎಂದರೆ –

..... ಮುಕ್ತಾವಿತ್ಯತ್ರ ಕೇಶವಃ ॥ ೨೨೨ ॥

ಮುಕ್ತಿಶಬ್ದೋದಿತೋ ಮೋಕ್ಷಂ ಸ್ವಭಕ್ತಾನಾಂ ಕರೋತಿ ಯತ್ ।

ತನ್ನ ಭಕ್ತರಿಗೆ ಮುಕ್ತಿಯನ್ನು ಉಂಟುಮಾಡುತ್ತಾನೆ ಎಂಬ ಕಾರಣದಿಂದ ಶ್ರೀಹರಿಯು ಇಲ್ಲಿ ಮುಕ್ತೌ ಎನ್ನುವ ಸಪ್ತಮ್ಯಂತ ಪದದಲ್ಲಿ ಮುಕ್ತಿ ಎನ್ನುವ ಪದದಿಂದ ಪ್ರತಿಪಾದ್ಯನು.

ದ್ವೇಷವು ಮುಕ್ತಿಗೆ ಸಾಧನವೆಂದು ಅಂಗೀಕರಿಸಿದರೆ ಯುಕ್ತಿವಿರೋಧವೂ ಇದೆ ಎಂದು ಹೇಳುತ್ತಾರೆ –

ದ್ವೇಷತೋಽಪಿ ವಿಮುಕ್ತಿಶ್ಚೇನ್ಮಹಾತಾತ್ಪರ್ಯರೋಧನಮ್ ॥ ೨೨೩ ॥

ಭಕ್ತ್ಯಾ ಪ್ರಸನ್ನತೋ ದೇವಾನ್ಮುಕ್ತಿರಿತ್ಯೇವ ತದ್ಗುಣಾನ್ ।

ವದಂತಿ ಶ್ರುತಯಃ ಸರ್ವಾಃ ಪುರಾಣಾನ್ಯಾಗಮಾ ಅಪಿ ॥ ೨೨೪ ॥

ಕೇವಲ ಭಕ್ತಿಯಿಂದಷ್ಟೇ ಅಲ್ಲ ದ್ವೇಷದಿಂದಲೂ ಸುಖವಿಶಿಷ್ಟವಾದ ಮುಕ್ತಿಯು ಎಂದು ಅಂಗೀಕರಿಸಿದರೆ, ಆಗ ಎಲ್ಲ ಶ್ರುತಿಗಳಿಗೂ ಭಗವದ್ಗುಣೋತ್ಕರ್ಷದಲ್ಲಿಯೇ ಯಾವ ಮಹಾತಾತ್ಪರ್ಯವಿದೆಯೋ ಅದಕ್ಕೆ ವಿರೋಧವು. ಅದು ಹೇಗೆಂದರೆ – ಭಕ್ತಿಯಿಂದ ಸಂತುಷ್ಟನಾದ ದೇವದೇವನಾದ ಶ್ರೀಹರಿಯಿಂದಲೇ ಮುಕ್ತಿಯೆಂದು

ಎಲ್ಲ ಶ್ರುತಿಗಳೂ, ಪುರಾಣಗಳೂ, ಬೇರೆ ಆಗಮಗಳೂ ಕೂಡ ಶ್ರೀಹರಿಯ ಗುಣಗಳನ್ನೇ ಹೇಳುತ್ತವೆ.

ಭಕ್ತಿಗೆ ಮೋಕ್ಷಸಾಧನತ್ವವು ಇದರಿಂದ ತಿಳಿಯಲ್ಪಡುತ್ತದೆ. ನಾವು ಅದನ್ನು ಅಪಲಾಪ ಮಾಡುವುದಿಲ್ಲ. ಮತ್ತೆ ಭಕ್ತಿಯಂತೆಯೇ ದ್ವೇಷವೂ ಕೂಡ ಮುಕ್ತಿಗೆ ಕಾರಣವು ಎಂದು ಹೇಳುತ್ತೇವೆ ಎಂದರೆ –

ಯದಿ ದ್ವೇಷೇಣ ಮುಕ್ತಿಃ ಸ್ಯಾದ್ವಕ್ತವ್ಯೋ ದೋಷಸಂಚಯಃ ।

ದ್ವೇಷದಿಂದಲೂ ಮೋಕ್ಷವಾಗುವುದು ಎಂದು ಶ್ರುತಿಗಳ ತಾತ್ಪರ್ಯವಾಗಿದ್ದರೆ, ಆಗ ದ್ವೇಷೋತ್ಪತ್ತಿಗಾಗಿ ಶ್ರೀಹರಿಯಲ್ಲಿ ದೋಷ ಸಂಚಯವನ್ನು ಶ್ರುತಿಗಳು ಹೇಳಬೇಕಿತ್ತು. ಆದರೆ ಶ್ರುತಿಗಳು ಗುಣಗಳನ್ನು ಮಾತ್ರ ಪ್ರತಿಪಾದಿಸಿವೆ. ಆದಕಾರಣ ಮೋಕ್ಷಕ್ಕಾಗಿ ಪ್ರವೃತ್ತವಾದ ವೇದಾದಿಗಳು ಗುಣಗಳನ್ನೇ ಪ್ರತಿಪಾದಿಸುತ್ತ ಮೋಕ್ಷಕ್ಕೆ ಭಕ್ತಿಮಾತ್ರ ಸಾಧ್ಯತ್ವದಲ್ಲಿ ತಾತ್ಪರ್ಯವೆಂದು ತಿಳಿಸುತ್ತವೆ.

ಹಾಗಾದರೆ ದ್ವೇಷಕ್ಕೂ ಕೂಡ ಮೋಕ್ಷಸಾಧನತ್ವವನ್ನು ಪ್ರತಿಪಾದಿಸುವ 'ದ್ವೇಷಾಚ್ಚೈದ್ಯಾದಯೋ ನೃಪಾಃ' ಇತ್ಯಾದಿ ವಾಕ್ಯಗಳು ಇವೆ. ಆದಕಾರಣ ದ್ವೇಷಕ್ಕೆ ಮೋಕ್ಷ ಸಾಧನತ್ವವಿಲ್ಲವೆನ್ನುವುದು ಹೇಗೆ ಎಂದರೆ –

ಸ್ಮರ್ತವ್ಯೋ ಭಗವಾನ್ನಿತ್ಯಮಿತ್ಯರ್ಥೇನೈವ ಹಿ ಕ್ವಚಿತ್ ॥ ೨೨೫ ॥

ದ್ವೇಷಾದಿವ ಗುಣಾನಾಹ ಪುರಾಣೇ ಕ್ರುದ್ಧವಾಕ್ಯವತ್ ।

ಪುರಾಣದಲ್ಲಿ ಕೆಲವು ಕಡೆಗಳಲ್ಲಿ ಶ್ರೀಹರಿಯನ್ನು ನಿತ್ಯದಲ್ಲಿಯೂ ಸ್ಮರಿಸಬೇಕು ಎಂಬ ಅಭಿಪ್ರಾಯದಿಂದಲೇ ದ್ವೇಷದಿಂದ ಮುಕ್ತಿಯನ್ನು ಹೇಳಿದಂತೆ ಕಾಣುತ್ತದೆ. ಆದುದರಿಂದ ಹಿಂದೆ ಹೇಳಿದ್ದಕ್ಕೆ ವಿರೋಧವಿಲ್ಲ. ಚೈದ್ಯಾದಿಗಳಿಗೆ ದ್ವೇಷದಿಂದ ಮುಕ್ತಿಯೆಂದು ಪ್ರತಿಪಾದಿಸುವ ವಾಕ್ಯವು ಶ್ರೀಹರಿಗೆ ಕೃಪಾಲುತ್ವಾದಿ ಗುಣಗಳನ್ನು ಹೇಳುತ್ತದೆ. ಹೇಗೆ ಕ್ರುದ್ಧನ ಮಾತಿಗೆ ಮೇಲ್ನೋಟಕ್ಕೆ ಕಾಣುವ ಅರ್ಥದಲ್ಲಿಯೇ ತಾತ್ಪರ್ಯವಿಲ್ಲವೋ ಹಾಗೆ ಈ ಪುರಾಣವಾಕ್ಯಗಳನ್ನೂ ತಿಳಿಯಬೇಕು.

ಶಾಪಾದಿಗಳಿಂದ ದ್ವೇಷಿಗಳಾಗಿದ್ದರೂ ತಾತ್ಕಾಲಿಕದ್ವೇಷವನ್ನು ಗಮನಿಸದೆ ಪೂರ್ವದಲ್ಲಿದ್ದ ಭಕ್ತಿಯನ್ನೇ ಅಪೇಕ್ಷಿಸಿ ಚೈದ್ಯಾದಿಗಳನ್ನು ಮೋಚನಗೊಳಿಸಿದನು. ಶ್ರೀಹರಿಯ ಕೃಪಾಲುತ್ವ, ನಿರ್ವಿಕಾರತ್ವ, ಸತ್ಯಸಂಕಲ್ಪತ್ವಾದಿಗಳನ್ನು ತಿಳಿಸುವುದೇ ಇಂಥಹ ವಾಕ್ಯಗಳ ತಾತ್ಪರ್ಯ.

ಪುರಾಣವಾಕ್ಯಗಳಲ್ಲಿ ಎರಡು ವಿಧ. 'ವೈರೇಣ ಯನ್ನೃಪತಯಃ' ಇತ್ಯಾದಿ ವಾಕ್ಯಗಳು ಸ್ಮರಣಪ್ರಧಾನಗಳು. ಅವುಗಳಿಗೆ ಪ್ರಾಥಮಿಕ ಗತಿಯು. 'ದ್ವೇಷಾಚ್ಚೈದ್ಯಾದಯಃ' ಇತ್ಯಾದಿ ವಾಕ್ಯಗಳು ದ್ವೇಷಸಾಧಕಗಳು. ಅವುಗಳಿಗೆ ಎರಡನೆಯ ಗತಿಯು ಎಂದು ಅಭಿಪ್ರಾಯ.

ಮೇಲೆ ಹೇಳಿದ್ದನ್ನೇ ವಿವರಿಸುತ್ತಾರೆ –

ಯಥಾ ಕೃದ್ಧಃ ಪಿತಾ ಪುತ್ರಂ ಮರೇತ್ಯಾಕ್ಷೇಪಪೂರ್ವಕಮ್ ॥ ೨೨೬ ॥

ಪ್ರೋಕ್ತಸ್ಯಾನ್ಯಸ್ಯ ಕೃತ್ಯರ್ಥಂ ವದತ್ಯೇವಂ ಪುರಾಣಗಮ್ ।

ವಾಕ್ಯಂ ಶ್ರುತಿವಿರೋಧೇನ ಸ್ವವಿರೋಧೇನ ಚಾಂಜಸಾ ॥ ೨೨೭ ॥

ಬಹ್ವಾಗಮವಿರೋಧಾಚ್ಚ ನ ದ್ವೇಷಾನ್ಮುಕ್ತಿವಾಚಕಮ್ ।

ಕೋಪಗೊಂಡ ತಂದೆಯು ಮಗನನ್ನು ಕುರಿತು ಮೃತನಾಗು ಎಂದು ನಿಂದಾ ಪೂರ್ವಕವಾಗಿ ಹೇಳಿದರೂ, ಬೇರೆ ಕಾರ್ಯವನ್ನು ಮಾಡುವುದಕ್ಕಾಗಿಯೇ ಹಾಗೆ ಹೇಳಿರುತ್ತಾನೆಂದು ಅರ್ಥಮಾಡುತ್ತೇವೆ. ಹಾಗೆಯೇ ಪುರಾಣಗತ ವಾಕ್ಯವೂ ಎಲ್ಲಿ ದ್ವೇಷಕ್ಕೆ ಮುಕ್ತಿಸಾಧನತ್ವವನ್ನು ಹೇಳಿರುವುದೋ, ಶ್ರುತಿವಿರೋಧದಿಂದಾಗಿ ಅಲ್ಲಿಯೇ ಅದಕ್ಕೆ ವಿರುದ್ಧವಾದುದನ್ನೂ ಮುಖ್ಯವಾದ ವೃತ್ತಿಯಿಂದಲೇ ಹೇಳಿರುತ್ತದೆ. ಬಹು ಆಗಮಗಳ ವಿರೋಧವಿರುವುದರಿಂದ ಪುರಾಣವಾಕ್ಯವು ದ್ವೇಷದಿಂದ ಮುಕ್ತಿಯೆಂದು ಹೇಳತಕ್ಕದ್ದು ಆಗುವುದಿಲ್ಲ.

ಆಗಮವಿರೋಧವನ್ನು ತೋರಿಸುತ್ತಾರೆ –

ತಮೋ ದ್ವೇಷೇಣ ಸಂಯಾಂತಿ ಭಕ್ತ್ಯಾ ಮುಕ್ತಿಂ ತಥೈವ ಚ ॥ ೨೨೮ ॥

ವಿಷ್ಣೌ ವಿಷ್ಣುಪ್ರಸಾದೇನ ವಿಲೋಮತತ್ವೇನ ಚಾಂಜಸಾ ।

ಇತಿ ಷಾಡ್ಗುಣ್ಯವಚನಮಪ್ಯುಕ್ತಾರ್ಥನಿಯಾಮಕಮ್ ॥ ೨೨೯ ॥

ವಿಷ್ಣುವಿನಲ್ಲಿ ಮಾಡತಕ್ಕ ಭಕ್ತಿಯಿಂದ ಉಂಟಾಗುವ ವಿಷ್ಣುಪ್ರಸಾದದಿಂದ ಮೋಕ್ಷವನ್ನು ಹೊಂದುತ್ತಾರೆ. ಹಾಗೆಯೇ ವಿಷ್ಣುವಿನಲ್ಲಿ ಮಾಡತಕ್ಕ ದ್ವೇಷದಿಂದ ಉಂಟಾಗುವ ವಿಷ್ಣುವಿನ ಕೋಪದಿಂದ ಮುಖ್ಯವಾದ ತಮಸ್ಸನ್ನು ಹೊಂದುತ್ತಾರೆ. ಹೀಗೆ ಷಾಡ್ಗುಣ್ಯ ವಚನವೂ ಕೂಡ, ಭಕ್ತಿಯಿಂದಲೇ ಮೋಕ್ಷ ದ್ವೇಷದಿಂದಲ್ಲವೆಂದು, ಹಿಂದೆ ಹೇಳಿದ ಅರ್ಥಕ್ಕೆ ನಿಯಾಮಕವಾಗಿದೆ. ಈ ವಾಕ್ಯದ ಸಮಾಖ್ಯೆಯಿಂದಲೂ ಚೇತನಸ್ಯ ಎನ್ನುವ ಶ್ರುತಿಯಲ್ಲಿ ಮುಕ್ತೌ ಎನ್ನುವ ಶಬ್ದವು ವಿಷ್ಣುವಿಗೆ ವಾಚಕವೆಂದು ಸಿದ್ಧಿಸುತ್ತದೆ.

ಮಹಾತಾತ್ಪರ್ಯರೋಧೇನ ಕಥಂ ವಾಕ್ಯಂ ಪ್ರಮಾಣತಾಂ ।

ಯಾತಿ ಸರ್ವಾರ್ಥರೂಪಂ ಹಿ ಮಹಾತಾತ್ಪರ್ಯಮಿಷ್ಯತೇ ॥ ೨೩೦ ॥

ಮೋಕ್ಷಪ್ರಯೋಜನವುಳ್ಳ ಎಲ್ಲ ಆಗಮಗಳಿಗೆ ಭಗವದ್ಗುಣೋತ್ಕರ್ಷದಲ್ಲಿಯೇ ಮಹಾತಾತ್ಪರ್ಯ. ಗುಣೋತ್ಕರ್ಷಜ್ಞಾನದಿಂದಲೇ ಭಕ್ತಿ. ಆ ಭಕ್ತಿಯಿಂದಲೇ ಮುಕ್ತಿ. ಆದಕಾರಣ ಎಲ್ಲ ಶ್ರುತಿಗಳ ಮಹಾತಾತ್ಪರ್ಯಕ್ಕೆ ವಿರೋಧವಾಗಿ ದ್ವೇಷದಿಂದ

ಮುಕ್ತಿ ಎಂದು ಹೇಳುವ ವಾಕ್ಯವು ಹೇಗೆ ತಾನೆ ಪ್ರಮಾಣತ್ವವನ್ನು ಹೊಂದೀತು? ಎಲ್ಲ ಶಾಸ್ತ್ರಗಳಿಗೆ ಮುಖ್ಯವಾಗಿ ಯಾವುದು ಏಕಾರ್ಥತ್ವವನ್ನು ಪ್ರತಿಪಾದಿಸುವುದೋ ಅದೇ ಮಹಾತಾತ್ಪರ್ಯವೆಂದು ಅಂಗೀಕರಿಸಲ್ಪಡುತ್ತದೆ.

ಇದು ಮಹಾತಾತ್ಪರ್ಯ ಶಬ್ದಾರ್ಥವು ಹೇಗೆ ಎಂದರೆ –

ವಾಚಕತ್ವಂ ಹಿ ತಾತ್ಪರ್ಯಂ ಯದರ್ಥಾ ಅಖಿಲಾ ರವಾಃ ।

ಸೋಽರ್ಥಃ ಕಥಂ ಪರಿತ್ಯಾಜ್ಯಃ ಏಕಶಬ್ದಸ್ಯ ಸಂಶಯೇ ॥ ೨೩೧ ॥

ತತ್ ಪರಂ ಪ್ರತಿಪಾದ್ಯಂ ಯಸ್ಯ ತತ್ ತತ್ಪರಂ ತಸ್ಯ ಭಾವಃ ತಾತ್ಪರ್ಯಮ್ (ಅದೇ ಪ್ರತಿಪಾದ್ಯವಾಗಿವುಳ್ಳದ್ದು ಯಾವುದೋ ಅದು ತತ್ಪರವು. ಅದರ ಭಾವವೇ ತಾತ್ಪರ್ಯ) ಎನ್ನುವ ವ್ಯುತ್ಪತ್ತಿಯಿಂದ ಪ್ರತಿಪಾದಕತ್ವವೇ ತಾತ್ಪರ್ಯವೆಂದು ಹೇಳಲ್ಪಡುತ್ತದೆ. ಅದಕ್ಕೆ ಮಹತ್ ಶಬ್ದದಿಂದ ವಿಶೇಷಣವಿದ್ದರೆ ಯೋಗ್ಯತೆಯಿಂದ ಇದೇ ಅರ್ಥವು ಮಹಾತಾತ್ಪರ್ಯ ಶಬ್ದಕ್ಕೆ ಆಗುವುದು. ಅದು ಹೇಗೆಂದರೆ – ಎಲ್ಲ ಆಗಮಗಳೂ ಯಾವುದನ್ನು (ವಿಷ್ಣುಗುಣೋತ್ಕರ್ಷವನ್ನು) ಮುಖ್ಯಾರ್ಥವನ್ನಾಗಿ ಹೊಂದಿವೆಯೋ ಅದಕ್ಕೆ ವಿರುದ್ಧಾರ್ಥಸಂಬಂಧವುಳ್ಳ ಒಂದು ವಾಕ್ಯದಿಂದ ಸಂಶಯ ಬರಲು, ಸಂಶಯಕ್ಕೆ ಕಾರಣವಾದ ಆ ವಾಕ್ಯದ ದೆಶೆಯಿಂದ, ಅಸಂದಿಗ್ಧವಾದ ಮುಖ್ಯಾರ್ಥವು ಹೇಗೆ ಪರಿತ್ಯಾಗಕ್ಕೆ ಅರ್ಹವಾಗುತ್ತದೆ?

ದ್ವೇಷಕ್ಕೆ ಮುಕ್ತಿಸಾಧನತ್ವ ನಿರಾಕರಣವನ್ನು ಉಪಸಂಹಾರ ಮಾಡುತ್ತಾರೆ –

ಅತೋ ವಿಜ್ಞಾನಭಕ್ತಿಭ್ಯಾಂ ಪುರುಷಾರ್ಥಃ ಪರೋ ಭವೇತ್ ।

ಆದಕಾರಣ ಮಾಹಾತ್ಮ್ಯ ಜ್ಞಾನ, ಸ್ನೇಹಗಳಿಂದಲೇ (ಅಂದರೆ ಭಕ್ತಿಯಿಂದಲೇ) ಪರಮಪುರುಷಾರ್ಥವಾದ ಮೋಕ್ಷವು ಆಗುವುದು, ದ್ವೇಷದಿಂದಲ್ಲ.

ಹೀಗೆ ದ್ವೇಷಕ್ಕೆ ಮುಕ್ತಿಸಾಧನತ್ವವನ್ನು ನಿರಾಕರಿಸಿ, ಈಗ ಭಕ್ತಿಯು ಪರಮ ಪುರುಷಾರ್ಥವಾದ ಮೋಕ್ಷಕ್ಕೆ ಸಾಧಕವು ಎಂಬ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಹೇಳುವುದನ್ನು ನಿರಾಕರಿಸುವುದಕ್ಕಾಗಿ ಪ್ರಮಾಣಗಳನ್ನು ಹೇಳುತ್ತಾರೆ –

ಯಸ್ಯ ದೇವೇ ಪರಾಭಕ್ತಿರ್ಯಥಾ ದೇವೇ ತಥಾ ಗುರೌ ॥ ೨೩೨ ॥

ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ।

ಯಾವನಿಗೆ ಶ್ರೀಹರಿಯಲ್ಲಿ ಶ್ರೇಷ್ಠವಾದ ಭಕ್ತಿಯೂ, ಅದೇರೀತಿ ದೇವತೆಗಳಲ್ಲಿ ಹಾಗೂ ಗುರುಗಳಲ್ಲಿ ಅವರವರ ಯೋಗ್ಯತಾನುಸಾರವಾಗಿ ಭಕ್ತಿಯೂ ಇರುವುದೋ ಅಂಥ ಮಹಾತ್ಮನಿಗೆ ಇದುವರೆಗೆ ಹೇಳಿದ ವಿಷಯಗಳೆಲ್ಲ ಪ್ರಕಾಶಿಸುತ್ತವೆ. ಇದರಿಂದ ಜ್ಞಾನಕ್ಕೆ ಭಕ್ತಿಸಾಧನತ್ವವು ಹೇಳಲ್ಪಟ್ಟಿದೆ.

ಭಕ್ತ್ಯಾ ಜ್ಞಾನಂ ತತೋ ಭಕ್ತಿಸ್ತತೋ ದೃಷ್ಟಿಸ್ತತಶ್ಚ ಸಾ ॥ ೨೩೩ ॥

ತತೋ ಮುಕ್ತಿಸ್ತತೋ ಭಕ್ತಿಃ ಸೈವ ಸ್ಯಾತ್ಸುಖರೂಪಿಣೀ ।

ಭಕ್ತಿಯಿಂದ ಪರೋಕ್ಷನಿಶ್ಚಯವು ಆಗುವುದು. ಅದರಿಂದ ಪಕ್ವವಾದ ಭಕ್ತಿ. ಅದರಿಂದ ಸಾಕ್ಷಾತ್ಕಾರ. ಅದರಿಂದ ಪರಿಪಕ್ವವಾದ ಭಕ್ತಿ. ಆಮೇಲೆ ಮೋಕ್ಷ. ಮೋಕ್ಷಾನಂತರವೂ ಇನ್ನೂ ವಿಶೇಷವಾದ ಭಕ್ತಿಯು ಇರುವುದು. ಆ ಭಕ್ತಿಯು ಸುಖರೂಪಿಯಾಗಿಯೇ ಇರುವುದು, ಫಲವುಳ್ಳದ್ದಾಗುವುದಿಲ್ಲ.

ಭಕ್ತ್ಯಾ ಪ್ರಸನ್ನೋ ಭಗವಾನ್ ದದ್ಯಾಜ್ಜ್ಞಾನಮನಾಕುಲಮ್ ॥ ೨೩೪ ॥

ತಯೈವ ದರ್ಶನಂ ಯಾತಃ ಪ್ರದದ್ಯಾನ್ಮುಕ್ತಿಮೇತಯಾ ।

ಭಕ್ತಿಯಿಂದ ಸಂತುಷ್ಟನಾದ ಶ್ರೀಹರಿಯು ವ್ಯತ್ಯಾಸವಿಲ್ಲದ ಜ್ಞಾನವನ್ನು ಅಂದರೆ ಪಕ್ವವಾದ ಬುದ್ಧಿಯನ್ನು ಕೊಡುವನು. ಆ ಪಕ್ವವಾದ ಬುದ್ಧಿಯಿಂದಲೇ ಅಪರೋಕ್ಷ ಜ್ಞಾನ ಅಂದರೆ ಪರಿಪಕ್ವವಾದ ಬುದ್ಧಿಯು ಲಭಿಸುವುದು. ಈ ಪರಿಪಕ್ವ ಬುದ್ಧಿಯಿಂದ ಸಂತುಷ್ಟನಾದ ಶ್ರೀಹರಿಯು ಮೋಕ್ಷವನ್ನು ವಿಶೇಷವಾಗಿ ಕೊಡುವನು. ಜ್ಞಾನದಿಂದ ಭಕ್ತಿ, ಭಕ್ತಿಯಿಂದ ಮುಕ್ತಿ ಎನ್ನುವುದೇ ಇಲ್ಲಿಯೂ ಪ್ರತಿಪಾದಿತವಾಗಿದೆ.

ನಾಹಂ ವೈದೈರ್ನ ತಪಸಾ ನ ದಾನೇನ ನ ಚೇಜ್ಯಯಾ ॥ ೨೩೫ ॥

ಶಕ್ಯ ಏವಂವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ।

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ ॥ ೨೩೬ ॥

ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ।

ಇತ್ಯಾದಿವಾಕ್ಯತಶ್ಚೈವ ಸೋಽಯಮುಕ್ತಾರ್ಥ ಈಯತೇ ॥ ೨೩೭ ॥

ನನ್ನನ್ನು ಈಗ ಹೇಗೆ ನೋಡುತ್ತಿರುವೆಯೋ, ಇದೇ ರೀತಿಯಲ್ಲಿ ನಾನು ಭಕ್ತಿ ರಹಿತ ವೇದಗಳಿಂದ ಶ್ರವಣಾದಿಗಳಿಂದ ನೋಡಲಿಕ್ಕೆ ಶಕ್ಯನಲ್ಲ. ತಪಸ್ಸಿನಿಂದಲೂ, ದಾನದಿಂದಲೂ, ಯಾಗಾದಿಗಳಿಂದಲೂ ನಾನು ನೋಡಲಿಕ್ಕೆ ಶಕ್ಯನಲ್ಲ. ಹೇ ಅರ್ಜುನನೇ, ಅನನ್ಯವಾದ ಭಕ್ತಿಯಿಂದಲೇ ಈ ವಿಧವಾಗಿ ನನ್ನನ್ನು ತಿಳಿಯಲಿಕ್ಕೆ ಶಕ್ಯವು. ಅನನ್ಯವಾದ ಭಕ್ತಿಯಿಂದಲೇ ನನ್ನನ್ನು ಯಥಾರ್ಥದಿಂದ ತಿಳಿಯಲಿಕ್ಕೆ, ಕಾಣಲಿಕ್ಕೆ ಹಾಗೂ ಹೊಂದುವುದಕ್ಕೆ ಶಕ್ಯವು. ಇತ್ಯಾದಿ ವಾಕ್ಯಗಳಿಂದಲೇ ಹಿಂದೆ ಹೇಳಿದ ಅರ್ಥವು ತಿಳಿಯಲ್ಪಡುತ್ತದೆ. 'ಯಾದೃಶೀ ತತ್ರ ಭಕ್ತಿಃ ಸ್ಯಾತ್ತಾದೃಶ್ಯನ್ಯತ್ರ ನೈವ ಚೇತ್। ಅನನ್ಯಭಕ್ತಿಃ ಸಾ ಜ್ಞೇಯಾ ವಿಷ್ಣಾವೇವ ಚ ಸಾ ಭವೇತ್' ಎಂಬ ಸ್ಮೃತಿಯು ಅನನ್ಯಭಕ್ತಿಯ ಲಕ್ಷಣವನ್ನು ಹೇಳಿದೆ. ಅಂದರೆ, ಯಾವುದರಲ್ಲಿ ಎಂಥಹ ಉತ್ತಮ ರೀತಿಯಲ್ಲಿರುವುದೋ ಅದೇ ರೀತಿಯಲ್ಲಿ ಬೇರೆ ಕಡೆಯಲ್ಲಿ ಇಲ್ಲದಿರುವ ಭಕ್ತಿಯನ್ನೇ ಅನನ್ಯ ಭಕ್ತಿಯೆಂದು ತಿಳಿಯತಕ್ಕದ್ದು. ಅದಾದರೂ ವಿಷ್ಣುವಿನಲ್ಲಿಯೇ ಆಗುವುದು.

ನ ಚ ಪ್ರಸಾದಮಾಪ್ನೋತಿ ದ್ವೇಷಾದ್ಭಕ್ತ್ಯಾ ತಮಾಪ್ನುಯಾತ್ ।

ಇತಿ ದೃಷ್ಟಾನುಸಾರಿತ್ವಮಪ್ಯಸ್ಮಿನ್ನರ್ಥ ಈಯತೇ ॥ ೨೬೮ ॥

ಭಗವದ್ದ್ವೇಷದಿಂದ ಭಗವತ್ಪ್ರಸಾದವನ್ನು ಹೊಂದುವುದೇ ಇಲ್ಲ. ಭಗವತ್ ಭಕ್ತಿಯಿಂದಲೇ ಭಗವತ್ಪ್ರಸಾದವನ್ನು ಹೊಂದತಕ್ಕುದು. ಈ ರೀತಿ ಈ ಅರ್ಥದಲ್ಲಿ ಪ್ರತ್ಯಕ್ಷದೃಷ್ಟವ್ಯಾಪ್ತಿಯುಳ್ಳ ಅನುಮಾನದ ಅನುಸಾರಿತ್ವವೂ ತಿಳಿಯಲ್ಪಡುತ್ತದೆ. ಭಗವತ್ಪ್ರಸಾದದಿಂದಲೇ ಮೋಕ್ಷವು ಎಂಬುದಾಗಿ ಜಿಜ್ಞಾಸಾ ಸೂತ್ರ ವ್ಯಾಖ್ಯಾನದ ಸಂದರ್ಭದಲ್ಲಿ ನಿರ್ಣೀತವಾಗಿದೆ. ಅದನ್ನು ಇಲ್ಲಿ ಸ್ಮರಿಸಬಹುದು.

ಲೋಕವಿಲಕ್ಷಣನಾದ ಶ್ರೀಹರಿಯಲ್ಲಿ ಲೋಕದೃಷ್ಟಾನುಸಾರಿ ಅನುಮಾನವು ಕೂಡುವುದಿಲ್ಲ. ಶ್ರೀಹರಿಯು ಲೋಕವಿಲಕ್ಷಣನಾದುದರಿಂದ ದ್ವೇಷದಿಂದಲೂ ಪ್ರಸನನ್ನಾಗುತ್ತಾನೆ ಎಂದು ಅಂಗೀಕರಿಸಿದರೆ ಬಾಧಕವಿಲ್ಲ ಎಂಬ ಆಶಂಕೆಯನ್ನು ಆಗಮವಾಕ್ಯದಿಂದ ಪರಿಹರಿಸುತ್ತಾರೆ –

ಯೇ ಪೃಥಗ್ನಿಹಿತಾ ವಿಷ್ಣೋರ್ಗುಣಾ ವೇದೇನ ಸಾದರಮ್ ।

ತ ಏವ ದೃಷ್ಟವೈಲೋಮ್ಯಾದಂಗೀಕಾರ್ಯಾ ನ ಚಾಪರಮ್ ॥ ೨೬೯ ॥

ಅನ್ಯದೃಷ್ಟಾನುಸಾರೇಣ ವಾಸುದೇವೇಽಪಿ ಗೃಹ್ಯತೇ ।

ಶ್ರೀಹರಿಯ ಯಾವ ಗುಣಗಳು ವೇದದಿಂದ ಲೋಕವೈಲಕ್ಷಣ್ಯದಿಂದ ತಾತ್ಪರ್ಯರೂಪವಾಗಿ ಉಕ್ತವಾಗಿವೆಯೋ, ಅವುಗಳೇ ದೃಷ್ಟವೈಷಮ್ಯವನ್ನು ಆದರಿಸದೆ ಅಂಗೀಕಾರ್ಯಕ್ಕೆ ಅರ್ಹವು. ವೇದಗಳಲ್ಲಿ ಅನುಕ್ತವಾದ ಲೋಕವಿಲಕ್ಷಣ ಗುಣ ಸಮುದಾಯವು ಅಂಗೀಕಾರ್ಯಕ್ಕೆ ಅರ್ಹವಲ್ಲ. ಆದರೆ ವೇದದಲ್ಲಿ ಹೇಳಲ್ಪಟ್ಟ ಲೋಕವಿಲಕ್ಷಣದಿಂದ ಇತರವಾದ ಗುಣಸಮುದಾಯವು ಪ್ರತ್ಯಕ್ಷಕ್ಕೆ ಅನುಸಾರವಾಗಿ ಶ್ರೀಹರಿಯಲ್ಲಿ ಸ್ವೀಕರಿಸಲ್ಪಡುತ್ತದೆ.

ದೋಷಾಭಾವಾಶ್ಚ ಯೇ ವೇದೈರುದಿತಾ ಅವಿಹಾಯ ತಾನ್ ॥ ೨೭೦ ॥

ಅನುಕ್ತಾ ಅಪಿ ಚ ಗ್ರಾಹ್ಯಾ ಮಹಾತಾತ್ಪರ್ಯಶಕ್ತಿತಃ ।

ಏವಂ ಬೃಹತ್ಸಂಹಿತಾವಾಕ್ ಸಿದ್ಧಾಂತೋ ಹಿ ತದೀರಿತಃ ॥ ೨೭೧ ॥

ಸರ್ವಪ್ರಕಾರದಿಂದಲೂ ಶ್ರೀಹರಿಯಲ್ಲಿ ದೋಷವಿಲ್ಲವೆಂದು ಸರ್ವ ಶಾಸ್ತ್ರಗಳ ಮಹಾತಾತ್ಪರ್ಯದಿಂದ ನಿರ್ಣಯವಾಗಿರುವ ಪ್ರಯುಕ್ತ, ವೇದೋಕ್ತವಾದ ಲೋಕ ವಿಲಕ್ಷಣವೂ ಹಾಗೂ ಅವಿಲಕ್ಷಣವೂ ಆಗಿರುವ ದೋಷಾಭಾವಗಳನ್ನು ಬಿಡದೆ, ಅನುಕ್ತವಾದ ಗುಣಗಳನ್ನೂ ಶ್ರೀಹರಿಯಲ್ಲಿ ಅಂಗೀಕರಿಸಬೇಕು. ಹೀಗೆ ಬೃಹತ್ಸಂಹಿತಾ ವಚನವಿರುವ ಪ್ರಯುಕ್ತ ನಾವು ಹಿಂದೆ ಹೇಳಿದ ಅರ್ಥವೇ ಪ್ರಾಮಾಣಿಕವು.

ಹೀಗೆ ಭಕ್ತಿಯೇ ಮೋಕ್ಷಸಾಧನತ್ವವೆಂದು ಉಪಪಾದಿಸಲಾಯಿತು. ಕೇವಲ

ಭಗವದ್ವಿಷಯದಲ್ಲಿ ಮಾತ್ರ ಭಕ್ತಿ ಎಂಬ ಪ್ರತೀತಿಯನ್ನು ತಾರತಮ್ಯೇನ ಎನ್ನುವ ವಚನದಿಂದ ನಿರಾಕರಿಸುತ್ತಾರೆ –

ತಾರತಮ್ಯೇನ ತದ್ಭಕ್ತೇಷ್ವಪಿ ಭಕ್ತಿರ್ವಿನಿಶ್ಚಯಾತ್ ।

ಕರ್ತವ್ಯೈಷಾಪಿ ತದ್ಭಕ್ತಿರ್ಲೋಕವೇದಾನುಸಾರತಃ ॥ ೨೪೨ ॥

ವಿಷ್ಣುವಿನಲ್ಲಿ ಮಾತ್ರವಲ್ಲ, ವಿಷ್ಣುಭಕ್ತರಾದ ರಮಾದಿಗಳಲ್ಲಿಯೂ ಭಕ್ತಿಯನ್ನು ತಾರತಮ್ಯಾನುಸಾರವಾಗಿ ಸರ್ವಥಾ ಮಾಡತಕ್ಕದ್ದು. ಹಾಗೆ ವಿಷ್ಣುಭಕ್ತರಲ್ಲಿ ಮಾಡುವ ಭಕ್ತಿಯೂ ವಿಷ್ಣುಭಕ್ತಿಯೇ ಆಗುವುದು. ಇದು ಲೋಕಸಿದ್ಧವ್ಯಾಪ್ತಿಯುಳ್ಳ ಅನುಮಾನ ಹಾಗೂ ಆಗಮಗಳಿಗೆ ಅನುಸಾರವಾಗಿಯೇ ಇದೆ.

ಲೋಕಾನುಸಾರಿತ್ವವನ್ನು ತೋರಿಸುತ್ತಾರೆ –

ಯೋ ಹಿ ಭಕ್ತಃ ಪ್ರಧಾನೇ ಸ್ಯಾತ್ತದೀಯೇಷ್ವಪಿ ಭಕ್ತಿಮಾನ್ ।

ದೃಶ್ಯತೇಽಸೌ ನಿಯಮತೋ ವಿಪರೀತೋ ವಿಪರ್ಯಯೇ ॥ ೨೪೩ ॥

ಯಾವನು ರಾಜಾದಿಗಳಲ್ಲಿ ಭಕ್ತಿಯನ್ನು ಮಾಡುವನೋ ಅವನು ರಾಜನ ಸಂಬಂಧಿಕರಲ್ಲಿಯೂ ಭಕ್ತಿಯುಳ್ಳವನಾಗಿ ನಿಯಮದಿಂದ ಕಂಡುಬರುತ್ತಾನೆ. ರಾಜನ ಸಂಬಂಧಿಗಳಲ್ಲಿ ಭಕ್ತಿಯಿಲ್ಲದಿದ್ದರೆ ನಿಯಮೇನ ರಾಜನಲ್ಲಿಯೂ ಭಕ್ತಿರಹಿತನಾಗಿ ಕಂಡುಬರುತ್ತಾನೆ.

ಹಾಗಾದರೆ ದೈತ್ಯಾದಿಗಳು ಬ್ರಹ್ಮಾದಿಗಳಲ್ಲಿ ಭಕ್ತಿಯನ್ನು ಹೊಂದಿದ್ದರೂ ಅವರ ಭಕ್ತರಾದ ಇಂದ್ರಾದಿಗಳಲ್ಲಿ ಭಕ್ತಿರಹಿತರಾಗಿ ಕಂಡುಬರುವುದರಿಂದ ಈ ನಿಯಮಕ್ಕೆ ವ್ಯಭಿಚಾರವು ಎಂದರೆ –

ವ್ಯಭಿಚಾರೋ ಯದಿ ಕ್ವಾಪಿ ಭಕ್ತಿಹ್ರಾಸೋಽತ್ರ ಕಲ್ಪ್ಯತೇ ।

ಭಕ್ತಿದೋಷೋ ಹ್ಯಸೌ ಯನ್ನ ತದ್ಭಕ್ತೇಷ್ವಪಿ ಭಕ್ತಿಮಾನ್ ॥ ೨೪೪ ॥

ಎಲ್ಲಿಯಾದರೂ ಈ ನಿಯಮದಲ್ಲಿ ಪರರಿಂದ ವ್ಯಭಿಚಾರವು ಕಲ್ಪಿಸಲ್ಪಟ್ಟರೆ ಆಗ ಆ ಪುರುಷನಲ್ಲಿ ಭಕ್ತಿಹ್ರಾಸವು ನಮ್ಮಿಂದಲೂ ಕಲ್ಪಿಸಲ್ಪಡುತ್ತದೆ. ಅಂದರೆ ವಿಫಲ ಭಕ್ತಿತ್ವವು ಹೇಳಲ್ಪಡುತ್ತದೆ. ವಿಷ್ಣುಭಕ್ತರಲ್ಲಿಯೂ ಭಕ್ತಿಯುಳ್ಳವನಲ್ಲವೆಂದರೆ ಅದು ಪ್ರಧಾನಭಕ್ತಿಯದ್ದೇ ದೋಷವು, ಅಂಥಹ ಭಕ್ತಿಗೆ ಫಲವಿಲ್ಲವೆಂದು ತಾತ್ಪರ್ಯ.

ವಿಷ್ಣುಭಕ್ತರಲ್ಲಿ ತಾರತಮ್ಯಾನುಸಾರವೇ ಭಕ್ತಿಯನ್ನು ಮಾಡಬೇಕಾದ್ದು ಕರ್ತವ್ಯ ಎಂದು ಹೇಳುತ್ತಾರೆ –

ತಾರತಮ್ಯೇನ ತೇಷ್ವದ್ಧಾ ಭಕ್ತಿರ್ಯಷ್ಟ್ಯಾನುಸಾರತಃ ।

ವಿಷ್ಣುಪ್ರಸಾದಾನುಸಾರಾತ್ಕಾರ್ಯಾ ದೋಷಸ್ತದನ್ಯಥಾ ॥ ೨೪೫ ॥

ಸ್ವಪ್ರೀತ್ಯನುಸೃತೌ ಪ್ರೀತಿರ್ಲೋಕೇಪ್ಯದ್ಧೈವ ದೃಶ್ಯತೇ ।

ತಾರತಮ್ಯಪರಿಜ್ಞಾನಮಪ್ಯೇತೇನೈವ ಸಾಧನಮ್ ।। ೨೪೬ ।।

ವಿಷ್ಣುಭಕ್ತರಲ್ಲಿ ತಾರತಮ್ಯಕ್ಕೆ ಅನುಸಾರವಾಗಿಯೇ ಸರ್ವಪ್ರಕಾರದಿಂದಲೂ ಭಕ್ತಿಯನ್ನು ಮಾಡಬೇಕು. ಅಂಥಹ ಭಕ್ತಿಯು ವಿಷ್ಣುವಿನ ಅನುಗ್ರಹಕ್ಕಾಗಿಯೂ ಲೋಕದೃಷ್ಟಿಗೆ ಅನುಸಾರವಾಗಿಯೂ ಮಾಡತತಕ್ಕದ್ದು. ಹಾಗಲ್ಲದೆ ಬೇರೆ ರೀತಿಯಿಂದ ಅಂದರೆ ಸಾಮ್ಯದಿಂದ ಅಥವಾ ವೈಪರೀತ್ಯದಿಂದ ಮಾಡಿದರೆ ಅದು ಅನರ್ಥಕ್ಕೆ ಕಾರಣವಾಗುವುದು. ಹೇಗೆಂದರೆ, ರಾಜನ ಪ್ರೀತಿಯನ್ನು ಅನುಸರಿಸಿದರೆ, ಅಂದರೆ ರಾಜನಿಗೆ ಯಾರಲ್ಲಿ ಹೆಚ್ಚು ಪ್ರೀತಿಯಿದೆಯೋ ಅವರಲ್ಲಿ ಹೆಚ್ಚು ಭಕ್ತಿಯನ್ನು ಮಾಡಿದರೆ, ಅಂಥ ಭಕ್ತನಲ್ಲಿ ರಾಜನಿಗೂ ಪ್ರೀತಿಯಿರುವುದೆಂಬುದು ಲೋಕದಲ್ಲಿ ನಿಯಮದಿಂದಲೇ ಕಂಡುಬರುವುದು. ಇದರಿಂದ ಭಗವದ್ಭಕ್ತರಾದ ರಮಾದಿಗಳಲ್ಲಿ ತಾರತಮ್ಯ ಪರಿಜ್ಞಾನದಿಂದಲೇ ಭಕ್ತಿಯನ್ನು ಮಾಡಬೇಕೆಂದೂ ಹಾಗೂ ಅದೂ ಕೂಡ ಮೋಕ್ಷಕ್ಕೆ ಸಾಧನವೆಂದೂ ಸಿದ್ಧವಾಯಿತು.

ಭಗವತ್ಪ್ರಸಾದ ತಾರತಮ್ಯಾನುಸಾರವಾಗಿಯೇ ಭಗವದ್ಭಕ್ತರಲ್ಲಿ ಭಕ್ತಿಯನ್ನು ಮಾಡಬೇಕು ಎನ್ನುವಲ್ಲಿ ಆಗಮವನ್ನು ಹೇಳುತ್ತಾರೆ –

ಲಕ್ಷ್ಮೀವಿರಿಂಚವಾಣೀಶಗಿರಿಜೇಂದ್ರಾ ಗಿರಾಂ ಪತಿಃ ।

ಸೂರ್ಯಾದಯಶ್ಚ ಕ್ರಮಶೋ ಭಗವತ್ಪ್ರೀತಿಗೋಚರಾಃ ।। ೨೪೭ ।।

ತೇಷು ಭಕ್ತಿಃ ಕ್ರಮೇಣೈವ ಕಾರ್ಯಾ ನಿತ್ಯಂ ಮುಮುಕ್ಷುಭಿಃ ।

ಲಕ್ಷ್ಮೀದೇವಿ, ಬ್ರಹ್ಮ, ಸರಸ್ವತಿ, ರುದ್ರ, ಪಾರ್ವತಿ, ಇಂದ್ರ, ಬೃಹಸ್ಪತಿ, ಸೂರ್ಯಾದಿಗಳು ಕ್ರಮವಾಗಿ ಶ್ರೀಹರಿಯ ಪ್ರೀತಿಗೆ ವಿಷಯರಾದವರು. ಅವರಲ್ಲಿ ಅದೇ ಕ್ರಮದಲ್ಲಿಯೇ ಮುಮುಕ್ಷುಗಳಿಂದ ನಿತ್ಯವೂ ಭಕ್ತಿಯು ಮಾಡತಕ್ಕದ್ದು.

ಸರ್ವೇಽಪಿ ಗುರವಶ್ಚೈತೇ ಪುರುಷಸ್ಯ ಸದೈವ ಹಿ ।। ೨೪೮ ।।

ತಸ್ಮಾತ್ಪೂಜ್ಯಾಶ್ಚ ನಮ್ಯಾಶ್ಚ ಧ್ಯೇಯಾಶ್ಚ ಪರಿತೋ ಹರಿಮ್ ।

ಇತಿ ಷಾಡ್ಗುಣ್ಯವಚನಾದಪ್ಯೇಷೋಽರ್ಥೋಽವಸೀಯತೇ ।। ೨೪೯ ।।

ಪುರುಷನಿಗೆ ಯಾವಾಗಲೂ ಇವರೆಲ್ಲರೂ ಗುರುಗಳೇ ಎಂದು ಪ್ರಸಿದ್ಧವು. ಆದ ಕಾರಣ ಇವರೆಲ್ಲರೂ ಶ್ರೀಹರಿಯ ಪರಿವಾರವೆಂದು ಪೂಜ್ಯರು, ನಮ್ಯರು ಹಾಗೂ ಧ್ಯಾನಿಸಲ್ಪಡತಕ್ಕವರು. ಹೀಗೆ ಷಾಡ್ಗುಣ್ಯವಚನದಿಂದಲೂ ಕೂಡ ಇದೇ ಅರ್ಥವೇ ನಿಶ್ಚಯಿಸಲ್ಪಡುತ್ತದೆ.

ಹರಿಭಕ್ತಿಃ ಕ್ರಮೇಣೈವ ತದೀಯೇಷು ಹರಿಸ್ಮೃತಿಃ ।

ಹರಿಸ್ತುತಿಸ್ತತ್ಸ್ಮೃತಿಶ್ಚ ತತ್ಸ್ತುತಿರ್ಹರಿಪೂಜನಮ್ ।। ೨೫೦ ।।

ತತ್ಪೂಜಾ ವಿಹಿತಾತ್ಯಾಗ ಇತಿ ಮುಕ್ತೇಃ ಕ್ರಮೇಣ ಹಿ ।

ನಿಯಮಾತ್ಸಾಧನಾನ್ಯೇವ ನಿತ್ಯಸಾಧ್ಯಾನಿ ಚಾಖಿಲೈಃ ॥ ೨೫೧ ॥

ಇತಿ ಪ್ರವೃತ್ತವಚನಂ ಸಾಧನಸ್ಯ ವಿನಿರ್ಣಯೇ ।

ಶ್ರೀಹರಿಯಲ್ಲಿ ನಿರತಿಶಯವಾದ ಭಕ್ತಿ, ಹರಿಭಕ್ತರಲ್ಲಿ ಕ್ರಮದಿಂದಲೇ ಭಕ್ತಿ, ಹರಿ ಸ್ಮರಣೆ, ಹರಿಸ್ತುತಿ, ಹರಿಭಕ್ತರ ಸ್ಮರಣೆ ಹಾಗೂ ಸ್ತುತಿ, ಹರಿಪೂಜೆ, ತದ್ಭಕ್ತರ ಪೂಜೆ, ವಿಹಿತವಾದ್ದನ್ನು ಬಿಡದಿರುವುದು – ಇವುಗಳೆಲ್ಲವೂ ಕ್ರಮದಿಂದಲೇ ನಿಯಮದಿಂದ ಮುಕ್ತಿಗೆ ಸಾಧನಗಳೇ. ಎಲ್ಲ ಮುಮುಕ್ಷುಗಳಿಂದ ನಿತ್ಯವೂ ಸಾಧ್ಯಗಳೇ ಆಗಿವೆ. ಹೀಗೆ ಪ್ರವೃತ್ತ ವಚನವು ಸಾಧನ ನಿರ್ಣಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಇದೆ.

ಪ್ರವೃತ್ತೇ ಪಂಚರಾತ್ರೇ ಹಿ ಸಾಧನಸ್ಯ ವಿನಿರ್ಣಯಃ ॥ ೨೫೨ ॥

ಪಂಚರಾತ್ರದಲ್ಲಿ ಪ್ರವೃತ್ತವೆಂಬ ಅವಾಂತರ ಗ್ರಂಥದಲ್ಲಿ ಸಾಧನ ವಿನಿರ್ಣಯ ಎಂಬ ಪ್ರಕರಣವಿದೆ.

ಮೇಲೆ ಹೇಳಿದ ಅರ್ಥದಲ್ಲಿ ಅನುಮಾನಾಂತರವನ್ನು ಹೇಳುತ್ತಾರೆ –

ಹರಿದ್ವೇಷೋ ನ ಶುಭದಃ ಸದ್ದ್ವೇಷತ್ವಾದ್ಯಥಾ ಗುರೋಃ ।

ಕ್ರಮಾದ್ಭಕ್ತಿರ್ಹರಿಪ್ರೀತಿಕಾರಣಂ ತತ್ಪ್ರಿಯೋಪಗಾ ॥ ೨೫೩ ॥

ಉತ್ತಮಪುರುಷರ ದ್ವೇಷವಾದುದರಿಂದ ಶ್ರೀಹರಿಯಲ್ಲಿ ಮಾಡುವ ದ್ವೇಷವು ಶುಭವನ್ನು ಕೊಡತಕ್ಕುದು ಅಲ್ಲ. ಗುರುಗಳ ದ್ವೇಷವು ಹೇಗೋ ಹಾಗೆ. ಕ್ರಮದಿಂದ ರಮಾದಿಗಳಲ್ಲಿ ಮಾಡುವ ಭಕ್ತಿಯು ಶ್ರೀಹರಿಯ ಪ್ರೀತಿಗೆ ಕಾರಣವಾದುದು. ಯಾವ ಭಕ್ತಿಯು ಶ್ರೀಹರಿಯ ಭಕ್ತರ ವಿಷಯಕವೋ ಅದು ಆ ಶ್ರೀಹರಿಯ ಪ್ರೀತಿಗೆ ಕಾರಣವಾದುದು.

ಭಕ್ತಿರ್ಯತೋ ಯಥಾ ಸ್ವಸ್ಮಿನ್ನಿತ್ಯಾದ್ಯಾ ಯುಕ್ತಿರತ್ರ ಚ ।

ಪ್ರಾಧಾನ್ಯತಾರತಮ್ಯಾನುಸಾರಿಣೀ ಭಕ್ತಿರುತ್ತಮಾ ॥ ೨೫೪ ॥

ಪ್ರೀತಿರ್ದೈವ ಹರೇರ್ಯಸ್ಮಾದ್ಭಕ್ತಿಃ ಸಾ ಸ್ವೋಪಗಾ ಯಥಾ ।

ಇತಿ ವಾ ..... ॥

ಹೇಗೆ ರಾಜನಿಗೆ ಪ್ರಿಯನಾದ ವ್ಯಕ್ತಿಯಲ್ಲಿ ಮಾಡುವ ಭಕ್ತಿಯು ರಾಜನ ಪ್ರೀತಿಗೆ ಕಾರಣವೋ, ಇತ್ಯಾದಿಯಾಗಿ ಹಿಂದೆ ಹೇಳಿದ ಯುಕ್ತಿಯೂ ಕೂಡ, ರಮಾದಿ ಉತ್ತಮತ್ವ ತಾರತಮ್ಯವನ್ನು ಅನುಸರಿಸಿಕೊಂಡು ಇರುವ ಭಕ್ತಿಯು ಶ್ರೀಹರಿಗೆ ಪ್ರೀತಿಯನ್ನುಂಟುಮಾಡುವುದು. ಆದ್ದರಿಂದ ಅದು ವಿಷ್ಣುವಿಷಯಕವಾದ ಭಕ್ತಿಯು ಹೇಗೋ ಹಾಗೆ ಉತ್ತಮವಾದ ಭಕ್ತಿಯು. ಹೀಗೆಯೇ ತಿಳಿಯತಕ್ಕದ್ದು.

ಫಲಶ್ರುತ್ಯಧಿಕರಣಮ್

ಓಂ ಸ್ವಾಮಿನಃ ಫಲಶ್ರುತೇರಿತ್ಯಾತ್ರೇಯಃ ಓಂ

ಜ್ಞಾನವು ಮಹಾಫಲಕ್ಕೆ ಕಾರಣವೆಂದು ಪುರುಷಾರ್ಥಾಧಿಕರಣದಲ್ಲಿಯೂ, ಜ್ಞಾನೋತ್ತರದಲ್ಲಿ ಅನುಷ್ಠಿತವಾದ ವರ್ಣಾಶ್ರಮಕರ್ಮ ಶಮದಮಾದಿಗಳೂ ಕೂಡ ಆನಂದಾತಿಶಯಕ್ಕೆ ಕಾರಣವೆಂದು ಸ್ತುತ್ಯಧಿಕರಣದಲ್ಲಿಯೂ ಪ್ರತಿಪಾದಿತವಾಗಿದೆ. ಜ್ಞಾನಕರ್ಮಾದಿಗಳ ಫಲವು ಪ್ರೇರಕರಾದ ದೇವತೆಗಳಿಗೋ ಅಥವಾ ಕರ್ತೃವಾದ ಪುರುಷನಿಗೋ ಎಂದು ಸಂಶಯವು. ಅದಕ್ಕೆ ಪ್ರಥಮ ಸೂತ್ರದಿಂದ ದೇವತೆಗಳಿಗೇ ಫಲವೆಂದು ಆತ್ರೇಯಮತವನ್ನು ಪೂರ್ವಪಕ್ಷ ಮಾಡಿಕೊಂಡು, ಆರ್ತ್ವಿಜ್ಯಮಿತ್ಯೌಡ ಲೋಮಿಃ ಎಂದು ಏಕದೇಶಿಗಳ ಮತದಿಂದ ಸಿದ್ಧಾಂತವನ್ನು ಹೇಳಿದರು. ಅನಂತರ ಸಹಕಾರ್ಯಂತರ ವಿಧಿಃ ಪಕ್ಷೇಣ ತೃತೀಯಂ ತದ್ವತೋ ವಿಧ್ಯಾದಿವತ್ ಎಂದು ಪರಮಸಿದ್ಧಾಂತವನ್ನು ಹೇಳಿದರು. ಅದರಲ್ಲಿ ದೇವತೆಗಳಿಗೆ ಜ್ಞಾನಾದಿ ಫಲವು ಎಂಬ ಪೂರ್ವಪಕ್ಷಾಂಶವನ್ನು ಗ್ರಹಿಸಬೇಕು, ನಿಶ್ಚಯಾಂಶವನ್ನಷ್ಟೇ ಬಿಡಬೇಕು. ಆದ್ದರಿಂದ ಪೂರ್ವಪಕ್ಷ ಸೂತ್ರಾರ್ಥವನ್ನು ವಿವರಿಸುತ್ತಾರೆ –

..... ಜ್ಞಾನಕರ್ಮಾದಿ ಫಲಂ ಚೈಷು ಕ್ರಮೋಪಗಮ್ ।। ೨೫೫ ।।

ಸ್ವಾತಂತ್ರ್ಯತಾರತಮ್ಯೇನ ಫಲಂ ಹಿ ಫಲಿನಾಂ ಭವೇತ್ ।

ಜ್ಞಾನಕರ್ಮಾದಿಗಳ ಫಲವೂ ದೇವತೆಗಳಿಗೆ ಆಗುವುದು. ಈ ದೇವತೆಗಳಲ್ಲಿ ಉಂಟಾಗುವ ಫಲವು ಕ್ರಮದಿಂದಲೇ ಆಗುವುದು. ದೇವದತ್ತಾದಿಗಳಿಂದ ಅನುಷ್ಠಿತವಾದ ಜ್ಞಾನಾಕರ್ಮಾದಿಗಳಿಗೆ ಫಲಭಾಗಿಗಳಾದ ದೇವತೆಗಳಿಗೆ ಫಲವು ಸ್ವಾಮಿತ್ವ ತಾರತಮ್ಯದಿಂದಲೇ ಆಗುವುದು.

ಹಾಗಾದರೆ ದೇವದತ್ತಾದಿಗಳು ಮಾಡುವ ಮಿಥ್ಯಾಜ್ಞಾನಾದಿಗಳ ಅನರ್ಥ ಫಲವೂ ದೇವತೆಗಳಿಗೆ ಆಗಬೇಕಾಗುವುದು ಎಂದರೆ –

ಅಶುಭಂ ತ್ವಶುಭೇಽಪ್ಯೇಷಾಂ ಸ್ವಾತಂತ್ರ್ಯಾತ್ಪ್ರೀತಿತೋ ಹರೇಃ ।। ೨೫೬ ।।

ಆಜ್ಞಯಾ ಚಾನ್ಯಗಂ ನೈವ ಭೋಗಾಯ ಭವತಿ ಕ್ವಚಿತ್ ।

ಅನ್ಯರಲ್ಲಿರತಕ್ಕ ಅಶುಭವಾದರೂ ಈ ದೇವತೆಗಳಿಗೆ ಎಲ್ಲಿಯೂ ಭೋಗಕ್ಕಾಗಿ ಆಗುವುದಿಲ್ಲ. ಏಕೆಂದರೆ ದೇವತೆಗಳಿಗೆ ಅಶುಭವನ್ನು ಹೊಂದಬಾರದು ಎನ್ನುವಲ್ಲಿ ಶ್ರೀಹರಿಯ ಅನುಗ್ರಹದಿಂದ ಸ್ವಾತಂತ್ರ್ಯವಿರುವ ಪ್ರಯುಕ್ತ ಅಶುಭವನ್ನು ಅವರು ನಿವಾರಣೆ ಮಾಡಿಕೊಳ್ಳುತ್ತಾರೆ.

ಈ ವಿಷಯದಲ್ಲಿ ಶ್ರುತಿಯೂ ಇದೆ ಎನ್ನುತ್ತಾರೆ –

ಪುಣ್ಯಮೇವಾಮುಮಾಪ್ನೋತಿ ನ ದೇವಾನ್ ಪಾಪಮಾಪ್ನುಯಾತ್ ।।೨೫೭।।

ಇತ್ಯಾದಿಶ್ರುತಯೋ ಮಾನಮುಕ್ತೇಽರ್ಥೇ ಯುಕ್ತಯೋಽಪರಾಃ ।

ಪುಣ್ಯಮೇವಾಮುಂ ಗಚ್ಛತಿ ನ ಹ ವೈ ದೇವಾನ್ಪಾಪಂ ಗಚ್ಛತಿ ಎಂಬ ಶ್ರುತಿಯನ್ನು ಉದಾಹರಿಸುತ್ತಾರೆ. ಸಪ್ತಾನ್ನ ವಿದ್ಯೋಪಾಸನೆಯಿಂದ ಪ್ರೇರಕರಾಗಿ ಪರರ ಶರೀರವನ್ನು ಪ್ರವೇಶ ಮಾಡಿದವರನ್ನು ಪರಕೃತ ಪುಣ್ಯವೇ ಹೊಂದುತ್ತದೆ, ಪಾಪವಲ್ಲ. ದೇವತೆಗಳನ್ನು ಪಾಪವು ಹೊಂದಲಾರದು. ಏಕೆಂದರೆ ಅವರು ದೇವತೆಗಳಾಗಿಯೇ ಹುಟ್ಟಿರುತ್ತಾರೆ. ಇತ್ಯಾದಿ ಶ್ರುತಿಗಳು, ದೇವತೆಗಳು ಶುಭವನ್ನೇ ಹೊಂದುತ್ತಾರೆ, ಅಶುಭವನ್ನಲ್ಲ ಎಂದು ಹಿಂದೆ ಹೇಳಿದ ಅರ್ಥದಲ್ಲಿ ಪ್ರಮಾಣವು. ಇತರವಾದ ಯುಕ್ತಿಗಳೂ ಈ ವಿಷಯದಲ್ಲಿ ಪ್ರಮಾಣವಾಗಿವೆ.

ಆ ಯುಕ್ತಿಗಳು ಯಾವುವು ಎಂದರೆ, ಅವುಗಳನ್ನು ತೋರಿಸಲು ಆಗಮ ವಾಕ್ಯವನ್ನು ಪಠಿಸುತ್ತಾರೆ –

ಉಪಾಸನಾಧರ್ಮಫಲಂ ಯತೋ ದೇಹಾಂತರೇ ಸ್ಥಿತಿಃ ॥ ೨೫೮ ॥

ವಾಸುದೇವಾಜ್ಞಯಾ ಚೈವ ಪೂರ್ವಕರ್ಮಾನುಸಾರತಃ ।

ಪ್ರೇರಯಂತಿ ಹಿ ತೇ ಜೀವಾನ್ಪುಣ್ಯಪಾಪೇಷು ನಿತ್ಯಶಃ ॥ ೨೫೯ ॥

ಅರಾಗದ್ವೇಷತಶ್ಚೈವ ಕಥಂ ದೋಷಾನವಾಪ್ನುಯುಃ ।

ಹರ್ಯಾಜ್ಞಾಕರಣಾದೇವ ಪುಣ್ಯಮೇಭಿರವಾಪ್ಯತೇ ॥ ೨೬೦ ॥

ಬೇರೆ ದೇಹದಲ್ಲಿದ್ದರೂ ದೇವತೆಗಳಿಗೆ ಶ್ರೀಹರಿಯ ಉಪಾಸನೆಯ ರೂಪವಾದ ಧರ್ಮದ ಫಲವೇ ಆಗುವುದು. ಅವರು ಶ್ರೀಹರಿಯ ಆಜ್ಞಾನುಸಾರವಾಗಿಯೇ ರಾಗದ್ವೇಷರಹಿತರಾಗಿಯೇ ನಿತ್ಯವೂ ಜೀವರನ್ನು ಅವರವರ ಪೂರ್ವಕರ್ಮಕ್ಕೆ ಅನುಗುಣವಾಗಿ ಪುಣ್ಯಪಾಪಗಳಲ್ಲಿ ಪ್ರೇರಿಸುತ್ತಾರೆ. ಆದಕಾರಣ ದೇವತೆಗಳ ಪ್ರೇರಣೆಯಿಂದಲೇ ಜೀವರು ಪಾಪಕರ್ಮಗಳನ್ನು ಮಾಡಿದರೂ ತನ್ನಿಮಿತ್ತಕವಾದ ದೋಷಗಳನ್ನು ದೇವತೆಗಳು ಹೊಂದುವುದಿಲ್ಲ. ಮತ್ತೆ ಶ್ರೀಹರಿಯ ಆಜ್ಞೆಯನ್ನೇ ಅವರು ಮಾಡುವುದರಿಂದ ಪುಣ್ಯವನ್ನೇ ಹೊಂದುತ್ತಾರೆ.

ಹರಿಪೂಜೇತಿ ಚೋದ್ದೇಶಾತ್ಕಥಂ ನ ಶುಭಮಾಪ್ನುಯುಃ ।

ಅತೋ ಯಥಾಕ್ರಮಂ ಧರ್ಮಜ್ಞಾನಯೋಃ ಫಲಮಂಜಸಾ ॥ ೨೬೧ ॥

ಸರ್ವಪ್ರಾಣಿಗತಂ ದೇವಾಃ ಪ್ರಾಪ್ನುವಂತ್ಯಾ ವಿರಿಂಚತಃ ।

ಶ್ರೀಹರಿಯ ಪೂಜೆ ಎನ್ನುವ ಉದ್ದೇಶದಿಂದಲೇ ಜೀವರನ್ನು ಅವರವರಿಗೆ ವಿಹಿತವಾದ ಕರ್ಮದಲ್ಲಿ ಪ್ರೇರಿಸುವುದರಿಂದ ದೇವತೆಗಳು ಹೇಗೆ ಶುಭವನ್ನು ಹೊಂದಲಾರರು? ಆದುದರಿಂದ ದೇವತೆಗಳು ಎಲ್ಲ ಪ್ರಾಣಿಗಳಲ್ಲಿರತಕ್ಕ ಧರ್ಮ

ಜ್ಞಾನಗಳ ಫಲವನ್ನು ಚೆನ್ನಾಗಿ ಬ್ರಹ್ಮದೇವರ ಪರ್ಯಂತವಾಗಿ ಯಥಾಕ್ರಮದಲ್ಲಿ ಹೊಂದುತ್ತಾರೆ.

ಅನ್ಯರಲ್ಲಿರತಕ್ಕ ಜ್ಞಾನಾದಿ ಫಲವನ್ನು ದೇವತೆಗಳು ಹೊಂದುವರು ಎಂಬುದು ಸರಿಯೇ. ಆದರೆ ದೇವತೆಗಳಲ್ಲಿರತಕ್ಕ ಫಲವನ್ನು ಹೇಗೆ ಎಂದು ಆಕ್ಷೇಪಿಸಿದರೆ –

ದೇವಾ ಏವ ಹಿ ದೇವಾನಾಂ ವಿಶಿಷ್ಟಾ ವಿನಿಯಾಮಕಾಃ ॥ ೨೬೨ ॥

ಬ್ರಹ್ಮಾ ತ್ವಖಿಲದೇವಾನಾಂ ನರಾಣಾಂ ಚ ನಿಯಾಮಕಃ ।

ಅತಃ ಸರ್ವಗುಣಾನೇಷ ಪ್ರಾಪ್ನೋತ್ಯಧಿಕಮನ್ಯತಃ ॥ ೨೬೩ ॥

ಅಧಮ ದೇವತೆಗಳಿಗೆ ಉತ್ತಮ ದೇವತೆಗಳೇ ನಿಯಾಮಕರು. ಆದುದರಿಂದ ಅಧಮ ದೇವತೆಗಳ ಜ್ಞಾನಾದಿಗಳ ಫಲವು ಉತ್ತಮರಿಗೆ ಆಗುತ್ತವೆ. ಬ್ರಹ್ಮನಾದರೂ ಎಲ್ಲ ದೇವತೆಗಳಿಗೂ ಹಾಗೆಯೇ ಮನುಷ್ಯರಿಗೂ ಕೂಡ ನಿಯಾಮಕರು. ಆದ್ದರಿಂದ ಈ ಚತುರ್ಮುಖ ಬ್ರಹ್ಮನೇ ಇತರ ದೇವತೆಗಳಿಗಿಂತ ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಎಲ್ಲ ಗುಣಗಳನ್ನು ಹೊಂದುತ್ತಾನೆ.

ದೇವತೆಗಳಿಗೆ ಅನ್ಯಗತವಾದ ಜ್ಞಾನಾದಿ ಫಲಪ್ರಾಪ್ತಿಯಿರಲಿ. ಅದರಲ್ಲಿಯೂ ತಾರತಮ್ಯ ಎನ್ನುವಲ್ಲಿ ಹೇತುವೇನು ಎಂದರೆ –

ದ್ರವ್ಯಸ್ವಾತಂತ್ರ್ಯವಿಜ್ಞಾನಪ್ರಯತ್ನೈರಧಿಕಂ ಫಲಮ್ ।

ದೇವಾನಾಮನ್ಯಗಂ ಚಾಪಿ ತೇಷು ಹಿ ಬ್ರಹ್ಮಣೋऽಧಿಕಮ್ ॥ ೨೬೪ ॥

ಬೃಹತ್ತಂತ್ರೋದಿತಂ ವಾಕ್ಯಂ ಹರಿಣಾ ಫಲನಿರ್ಣಯೇ ।

ಲೋಕೇಪ್ಯೇತಾದೃಶಗುಣೈಃ ಫಲಾಧಿಕ್ಯಂ ಹಿ ದೃಶ್ಯತೇ ॥ ೨೬೫ ॥

ಧರ್ಮಾದಿಗಳನ್ನು ಹುಟ್ಟಿಸುವ ವಿಷಯದಲ್ಲಿ ದೇವತೆಗಳಿಗೆ ಇಂದ್ರಿಯಾದಿ ದ್ರವ್ಯಗಳಲ್ಲಿ ಸ್ವಾತಂತ್ರ್ಯ, ವಿಜ್ಞಾನ ಹಾಗೂ ಪ್ರಯತ್ನಗಳಿಂದ ಆಧಿಕ್ಯವಿರುವ ಪ್ರಯುಕ್ತ ಅವರಿಗೆ ಇತರರಲ್ಲಿ ಇರುವುದಕ್ಕಿಂತ ಹೆಚ್ಚಿನ ಫಲವು ಆಗುತ್ತದೆ. ಇತರ ಎಲ್ಲರಿಗಿಂತ ನಿರವಧಿಕವಾದ ದ್ರವ್ಯಸ್ವಾತಂತ್ರ್ಯಾದಿಗಳಿರುವ ಪ್ರಯುಕ್ತ ಬ್ರಹ್ಮನಿಗೆ ಅತ್ಯಧಿಕವಾದ ಫಲವು. ಹೀಗೆ ಬೃಹತ್ತಂತ್ರದಲ್ಲಿ ಫಲನಿರ್ಣಯ ಪ್ರಕರಣದಲ್ಲಿ ಶ್ರೀಹರಿಯಿಂದ ಹೇಳಲ್ಪಟ್ಟ ವಾಕ್ಯವಿದೆ. ಲೋಕದಲ್ಲಿಯೂ ಕೂಡ ಇಂಥಹ ಗುಣಗಳ ಆಧಿಕ್ಯದಿಂದ ಫಲಾಧಿಕ್ಯವು ಕಂಡುಬರುವುದು. ಇದು ಪ್ರಸಿದ್ಧವು.

ಏವಂ ಚ ಕಲಿಪೂರ್ವಾಣಾಮಸುರಾಣಾಂ ಮಹತ್ಫಲಮ್ ।

ಅಶುಭೇಷು ಸದೈವ ಸ್ಯಾನ್ಮಿಥ್ಯಾಜ್ಞಾನಾದಿಕೇಷು ಹಿ ॥ ೨೬೬ ॥

ಹೀಗೆ ಮಹಾಪ್ರೇರಕರಾದ ಕಲಿಯೇ ಮೊದಲಾದ ಅಸುರರಿಗೆ ಯಾವಾಗಲೂ ಮಿಥ್ಯಾಜ್ಞಾನಾದಿಗಳಿಗೆ ಕಾರಣವಾಗುವ ಅಶುಭಕರ್ಮ ನಿಮಿತ್ತಕವಾದ ಮಹತ್ತಾದ ಫಲವೇ ಆಗುವುದು.

ಮೇಲೆ ಹೇಳಿದ ವಿಷಯದಲ್ಲಿ ಪ್ರಮಾಣಾಂತರವನ್ನು ಹೇಳುತ್ತಾರೆ –

ಶುಭಾಶುಭಫಲಂ ದೇವಾ ಅಸುರಾಶ್ಚ ಸಮಾಪ್ನುಯುಃ ।

ಕ್ರಮೇಣೈವ ಯಥಾಶಕ್ತಿ ಯಥಾ ಯೇ ಯೇ ಪ್ರಯೋಜಕಾಃ ॥ ೨೬೭ ॥

ಪ್ರೇರಕಾ ಅಪಿ ಪಾಪಾನಾಂ ನ ದೇವಾಃ ಪಾಪಮಾಪ್ನುಯುಃ ।

ಇತಿ ಪ್ರಕಾಶಿಕಾಯಾಂ ಹಿ ಪ್ರೋವಾಚ ಹರಿರಂಜಸಾ ॥ ೨೬೮ ॥

ಯಾರು 'ಯಾರು ಯಥಾಶಕ್ತಿ ಹೇಗೆ ಹೇಗೆ ಪುಣ್ಯಪಾಪಗಳಿಗೆ ಪ್ರೇರಕರೋ ಅದೇ ಕ್ರಮದಿಂದಲೇ ದೇವತೆಗಳೂ ಹಾಗೂ ಅಸುರರೂ ಶುಭ ಹಾಗೂ ಅಶುಭ ಫಲಗಳನ್ನು ಹೊಂದುತ್ತಾರೆ. ಆದರೆ ದೇವತೆಗಳು ಪಾಪಕರ್ಮಗಳಿಗೆ ಪ್ರೇರಕರೇ ಆದರೂ ಕೂಡ ಪಾಪವನ್ನು ಹೊಂದುವುದಿಲ್ಲ. ಹೀಗೆ ಪ್ರಕಾಶಿಕಾ ಎಂಬ ಗ್ರಂಥದಲ್ಲಿ ಶ್ರೀವೇದವ್ಯಾಸರು ಚೆನ್ನಾಗಿ ಹೇಳಿರುವರು.

ಹೀಗೆ ವಿಸ್ತಾರದಿಂದ ಪೂರ್ವಪಕ್ಷವನ್ನು ಹೇಳಿ ಸಿದ್ಧಾಂತಸೂತ್ರದ ತಾತ್ಪರ್ಯವನ್ನು ಆಗಮವಾಕ್ಯದಿಂದ ಹೇಳುತ್ತಾರೆ –

ಯದ್ಯಪ್ಯೇವಂ ಸುರಾಣಾಂ ಚ ದೈತ್ಯಾನಾಂ ಚ ಮಹತ್ಫಲಮ್ ।

ಶುಭಾಶುಭೇಭ್ಯ ಏವಂ ಚ ಕರ್ತುಶ್ಚ ಸ್ಯಾದ್ಯಥೋದಿತಮ್ ॥ ೨೬೯ ॥

ಹೀಗೆ ಹಿಂದೆ ಹೇಳಿದ ಪ್ರಕಾರ ಶುಭಾಶುಭ ಜ್ಞಾನಾದಿಗಳಿಂದ ಉಂಟಾಗತಕ್ಕ ಮಹತ್ತಾದ ಫಲವು ದೇವತೆಗಳಿಗೂ ದೈತ್ಯರಿಗೂ ಕೂಡ ಆಗುವುದಾದರೂ, ಕರ್ತೃವಾದ ಜೀವನಿಗೂ ಶ್ರುತಿಸ್ಮೃತಿಗಳಲ್ಲಿ ಉಕ್ತವಾಗಿರುವಂತೆ ಶುಭಾಶುಭ ಫಲವು ಆಗಿಯೇ ಆಗುವುದು.

ಈ ವಿಷಯದಲ್ಲಿ ಯುಕ್ತಿಯನ್ನೂ ಹೇಳುತ್ತಾರೆ –

ತಸ್ಮಾನ್ನಿರಯಮಾನುಷ್ಯಸ್ವರ್ಗಮುಕ್ತ್ಯಪಭೋಗಿನಃ ।

ಮಾನುಷೋತ್ತಮಮಾರಭ್ಯ ದೇವಾಸ್ತು ನಿರಯಂ ವಿನಾ ॥ ೨೭೦ ॥

ಅಸುರಾಸ್ತು ವಿನಾ ಮುಕ್ತಿಂ ತಮೋಂಽಧಮಪಿ ಚಾಪ್ನುಯುಃ ।

ಇತಿ ತತ್ತ್ವವಿವೇಕೋಕ್ತಂ ಸ್ವಯಂ ಭಗವತೋ ವಚಃ ॥ ೨೭೧ ॥

ಕರ್ತೃವಿಗೆ ಶುಭಾಶುಭ ಫಲವು ಇರುವುದರಿಂದಲೇ ಮಾನುಷೋತ್ತಮರಿಂದ ಆರಂಭಿಸಿ ಕ್ರಮವಾಗಿ ದೇವತೆಗಳ ಪರ್ಯಂತ ಹಾಗೂ ಅಸುರರ ಪರ್ಯಂತ ಯೋಗ್ಯತಾನುಸಾರನಾಗಿ ನರಕ, ಮನುಷ್ಯಲೋಕ, ಸ್ವರ್ಗ ಹಾಗೂ ಮುಕ್ತಿಗಳನ್ನು ಭೋಗಿಸುವರು. ದೇವತೆಗಳು ನರಕವನ್ನು ಬಿಟ್ಟು ಇತರ ಫಲವನ್ನು ಹೊಂದುವರು. ಅಸುರರು ಮುಕ್ತಿಯನ್ನು ಹೊರತು ಅಂಧಂತಮಸ್ಸನ್ನೂ ಹೊಂದುವರು. ಹೀಗೆ ತತ್ವವಿವೇಕ ಎಂಬ ಗ್ರಂಥದಲ್ಲಿ ಸಾಕ್ಷಾತ್ತಾಗಿ ಶ್ರೀಹರಿಯಿಂದ ಹೇಳಿದ ವಚನವಿದೆ.

ಅನಾವಿಷ್ಕಾರಾಧಿಕರಣಮ್

ಓಂ ಅನಾವಿಷ್ಕುರ್ವನ್ನನ್ವಯಾತ್ ಓಂ

ಗುರುಗಳು ಸಭಾ ಚತ್ವರಾದಿಗಳಲ್ಲಿ ಆವಿಷ್ಕಾರ ಮಾಡಿಕೊಂಡು ಜ್ಞಾನವನ್ನು ಉಪದೇಶ ಮಾಡಬೇಕೋ ಅಥವಾ ಆವಿಷ್ಕರಿಸದೆ ಮಾಡಬೇಕೋ ಎಂಬ ಸಂಶಯವು ಬಂದರೆ, ಪೂರ್ವಪಕ್ಷವು ಅತ್ಯಂತ ಹೇಯವಲ್ಲವಾದ್ದರಿಂದ ಅದನ್ನು ವಿಸ್ತರಿಸುತ್ತ, ಸಿದ್ಧಾಂತವನ್ನು ಹೇಳುತ್ತಾರೆ –

ಜ್ಞಾನದಾ ಅಪಿ ಚಾಚಾರ್ಯಾ ವಿಶೇಷಾತ್ಫಲಮಾಪ್ನುಯುಃ ।

ಶಿಷ್ಯರು ಮಾತ್ರವಲ್ಲ ಜ್ಞಾನವನ್ನು ನೀಡಿದ ಗುರುಗಳೂ ಕೂಡ ಶಿಷ್ಯರಿಗಿಂತ ಅತಿಶಯವಾಗಿ ಫಲವನ್ನು ಹೊಂದುವರು.

ಮುಕ್ತಾವಷ್ಟಗುಣಂ ಶಿಷ್ಯಾದ್ಗುರುರಾಪ್ನೋತಿ ಶೋಭನಮ್ ।। ೨೭೨ ।।

ತದ್ಗುರುರ್ದ್ವಿಗುಣಂ ತಸ್ಮಾತ್ತಾರ್ಧ್ಯಂ ತಾವತ್ತತೋऽಪರೇ ।

ದೇವಾಃ ಸಹಸ್ರಗುಣಿತಂ ಕ್ರಮಾತ್ತಸ್ಮಾದ್ಯಥೋತ್ತರಮ್ ।। ೨೭೩ ।।

ಬ್ರಹ್ಮಾ ಮಹೌಘಗುಣಿತಮೇವಂ ಫಲವಿನಿರ್ಣಯಃ ।

ಇತ್ಯಾಹ ಭಗವಾಂಶ್ಚಾಸ್ತ್ರೇ ಗುರುವೃತ್ತಾಭಿಧೇ ಸ್ವಯಮ್ ।। ೨೭೪ ।।

ಶಿಷ್ಯರಿಗೆ ಶ್ರವಣದಿಂದ ಬರುವ ಶೋಭನವಾದ ಫಲಕ್ಕಿಂತ ಎಂಟು ಪಾಲು ಹೆಚ್ಚು ಮಂಗಲವನ್ನು ಮುಕ್ತಿಯಲ್ಲಿ ಗುರುವು ಹೊಂದುತ್ತಾನೆ. ಆ ಗುರುಗಳ ಗುರುವಿಗೆ (ಅಂದರೆ ಪರಮಗುರುವಿಗೆ) ಆ ಗುರುವಿಗಿಂತ ಎರಡು ಪಟ್ಟು ಫಲವು. ಪರಮ ಗುರುವಿನಿಂದ ಮೇಲಿನವರು ತಮ್ಮ ಶಿಷ್ಯನ ಫಲಕ್ಕಿಂತ ಅರ್ಧದಷ್ಟು ಹೆಚ್ಚಿನ ಫಲವನ್ನು ಕ್ರಮದಿಂದ ಹೊಂದುತ್ತಾರೆ. ಇದೇ ಕ್ರಮದಿಂದ ದೇವತೆಗಳು ಜ್ಞಾನಪ್ರವರ್ತಕರಾದ ಕಾರಣ ಸಹಸ್ರ ಪಾಲು ಅಧಿಕ ಫಲವನ್ನು ಹೊಂದುತ್ತಾರೆ. ಆ ಕ್ರಮದಿಂದಲೇ ಬ್ರಹ್ಮನು ಮಹೌಘದಿಂದ ಗುಣಿತವಾದ ಫಲವನ್ನು ಹೊಂದುತ್ತಾನೆ.

ಹೀಗೆ ಫಲನಿರ್ಣಯವು ಎಂಬುದಾಗಿ ಭಗವಾನ್ ವೇದವ್ಯಾಸರು ಗುರುವೃತ್ತವೆಂಬ ಶಾಸ್ತ್ರಗ್ರಂಥದಲ್ಲಿ ಸಾಕ್ಷಾತ್ತಾಗಿ ಹೇಳಿದ್ದಾರೆ.

ಆಗಮಸಿದ್ಧವಾದ ಈ ಅರ್ಥದಲ್ಲಿ ಯುಕ್ತಿಯೂ ಇದೆ ಎಂದು ಹೇಳುತ್ತಾರೆ –

ಯುಕ್ತಂ ಚ ತನ್ನ ಗೋದಾತಾ ಗೋಮಾತ್ರಫಲಮಾಪ್ನುಯಾತ್ ।

ಜ್ಞಾನವನ್ನು ಪಡೆಯುವ ಶಿಷ್ಯನು ಗಳಿಸುವ ಫಲಕ್ಕಿಂತ ಗುರುವಿಗೆ ಲಭಿಸುವ ಫಲವು ಅಧಿಕವು ಎನ್ನುವುದು ಯುಕ್ತಿಸಿದ್ಧವೂ ಆಗಿದೆ. ಹೇಗೆಂದರೆ, ಗೋದಾನ ಮಾಡಿದವನು, ಕೇವಲ ಗೋವನ್ನು ಸ್ವೀಕರಿಸಿದವನಿಗೆ ಬಂದಷ್ಟೇ ಫಲವಲ್ಲದೆ ಮತ್ತೆ ಮಹಾಫಲವಾದ ಸ್ವರ್ಗಾದಿಗಳನ್ನು ಹೊಂದುತ್ತಾನೆ. ಆದರೆ ಗೋವನ್ನು ದಾನವಾಗಿ ಪಡೆದವನಿಗೆ ಗೊವನ್ನು ಪಡೆದಿದ್ದೇ ಫಲವು. ಹಾಗೆಯೇ ಇಲ್ಲಿಯೂ ತಿಳಿಯತಕ್ಕದ್ದು.

ಜ್ಞಾನಫಲಕ್ಕಿಂತಲೂ ಆಚಾರ್ಯರಿಗೆ ಜ್ಞಾನದಾನ ಫಲವು ಅಧಿಕವೆಂಬುದಕ್ಕೆ ಸಂವಾದವಾಗಿ ಭಗವದ್ಗೀತೆಯ ವಾಕ್ಯವನ್ನು ಪಠಿಸುತ್ತಾರೆ –

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।। ೬೭ ।।

ಭಕ್ತಿಂ ಮಯಿ ಪರಾಂ ಕೃತ್ವಾ ಮಾಮೇವೈಷ್ಯತ್ಯಸಂಶಯಃ ।

ನ ಚ ತಸ್ಮಾನ್ಮನುಷ್ಯೇಷು ಕಶ್ಚಿನ್ಮೇ ಪ್ರಿಯಕೃತ್ತಮಃ ।। ೬೮ ।।

ಭವಿತಾ ನ ಚ ಮೇ ತಸ್ಮಾದನ್ಯಃ ಪ್ರಿಯತಮೋ ಭುವಿ ।

ಇತ್ಯಾಹ ಭಗವಾನೇವಮಪಿ ಪಾತ್ರಮಪೇಕ್ಷ್ಯತೇ ।। ೬೯ ।।

ಯಾವ ಅಧಿಕಾರಿಯು ಅತ್ಯಂತ ಗೋಪ್ಯವಾದ ಈ ಗೀತಾಶಾಸ್ತ್ರವನ್ನು ನನ್ನ ಭಕ್ತರಲ್ಲಿ ಉಪದೇಶಿಸುವನೋ ಅವನು ನನ್ನಲ್ಲಿ ಉತ್ಕೃಷ್ಟವಾದ ಭಕ್ತಿಯನ್ನು ಮಾಡಿ ನನ್ನನ್ನೇ ಹೊಂದುವನು. ನನಗೆ ಅತಿಶಯವಾಗಿ ಪ್ರಿಯವನ್ನು ಮಾಡುವುದರಲ್ಲಿ ಆ ಗೀತೋಪದೇಶಕನಿಗಿಂತ ಬೇರೆ ಯಾವನೂ ಕೂಡ ಮನುಷ್ಯರಲ್ಲಿ ಇಲ್ಲವೇ ಇಲ್ಲ. ನನಗೆ ಅವನಿಗಿಂತ ಪ್ರಿಯತಮನಾದ ಮತ್ತೊಬ್ಬನು ಈ ಭೂಮಿಯಲ್ಲಿ ಮುಂದೆಯೂ ಆಗಲಾರನು. ಹೀಗೆ ಭಗವಂತನು ಹೇಳಿದನು. ಹೀಗಿದ್ದರೂ ದಾನ ಫಲವು ಸತ್ಪಾತ್ರದಾನವನ್ನು ಅಪೇಕ್ಷಿಸುತ್ತದೆ. ಶಿಶುವಾಗಿದ್ದ ಮಧ್ವಾಚಾರ್ಯರಿಗೆ ಗೋದಾನ ಮಾಡಿದವನಿಗೆ ಅದರ ಪುಣ್ಯದಿಂದ ಅಪರೋಕ್ಷಜ್ಞಾನದ್ವಾರಾ ಕ್ರಮೇಣ ಮೋಕ್ಷವು ಲಭಿಸಿತೆಂಬುದನ್ನು ಇಲ್ಲಿ ಸ್ಮರಿಸಬಹುದು. ಶ್ರೀಮದಾಚಾರ್ಯರಿಗಿಂತ ಮಹಾಪಾತ್ರರು ದಾನಕ್ಕೆ ಬೇರೆ ಯಾರು ಲಭಿಸಿಯಾರು?

ಐಹಿಕಾಧಿಕರಣಮ್

ಓಂ ಐಹಿಕಮಪ್ರಸ್ತುತಪ್ರತಿಬಂಧೇ ತದ್ದರ್ಶನಾತ್ ಓಂ

ಮುಕ್ತಿಫಲಾಧಿಕರಣಮ್

ಓಂ ಏವಂ ಮುಕ್ತಿಫಲಾನಿಯಮಸ್ತದವಸ್ಥಾವಧೃತೇಸ್ತದವಸ್ಥಾವಧೃತೇಃ ಓಂ

ಏವಮವಿರೋಧೇನ ಪ್ರಾರಬ್ಧಸ್ಯೈವ ಕರ್ಮಣಃ ।

ಜ್ಞಾನಂ ದೃಷ್ಟಫಲಂ ಪ್ರೋಕ್ತಂ ಮುಕ್ತಿಶ್ಚೈವೇಹ ಲಭ್ಯತೇ ।। ೨೭೮ ।।

ಪ್ರಾರಬ್ಧಕರ್ಮಕ್ಕೆ ಅವಿರೋಧದಿಂದಲೇ ಜ್ಞಾನಕ್ಕೆ ದೃಷ್ಟಫಲವೆಂದು ಹೇಳಿದೆ. ಪ್ರಾರಬ್ಧಕರ್ಮದ ಪ್ರತಿಬಂಧವಿಲ್ಲದಿದ್ದರೆ ಶ್ರವಣಾದಿಗಳು ಪೂರ್ತಿಯಾದ ಮೇಲೆಯೇ ಜ್ಞಾನವು ಹುಟ್ಟುತ್ತದೆ. ಪ್ರತಿಬಂಧವಿದ್ದರೆ ಅದು ಕಳೆದ ಮೇಲೇ ಜ್ಞಾನದ ಉತ್ಪತ್ತಿ. ಹೀಗೆಯೇ ಮುಕ್ತಿಯೂ ಕೂಡ ಇಲ್ಲಿಯೇ ಹೊಂದಲ್ಪಡುತ್ತದೆ. ಅಂದರೆ ಯಾವ ದೇಹದಲ್ಲಿ ಜ್ಞಾನ ಹುಟ್ಟುವುದೋ ಆ ದೇಹಪಾತವಾದ ತಕ್ಷಣವೇ ಮುಕ್ತಿಯು.

।। ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ

ಶ್ರೀಮದನುವ್ಯಾಖ್ಯಾನೇ ತೃತೀಯಾಧ್ಯಾಯಸ್ಯ ಚತುರ್ಥಃ ಪಾದಃ ।।

।। ಇತಿ ತೃತೀಯಾಧ್ಯಾಯಃ ಸಮಾಪ್ತಃ ।।

।।ಇಲ್ಲಿಗೆ ಶ್ರೀಮದನುವ್ಯಾಖ್ಯಾನದ ಮೂರನೆಯ ಅಧ್ಯಾಯ ನಾಲ್ಕನೆಯ ಪಾದದ

ಶ್ರೀಮನ್ನ್ಯಾಯಸುಧಾನುಸಾರಿ ವಿವರಣೆ ಸಹಿತ ಕನ್ನಡಾನುವಾದವು ಮುಕ್ತಾಯವಾಯಿತು।।

।। ಇಲ್ಲಿಗೆ ನಾಲ್ಕನೆಯ ಅಧ್ಯಾಯವು ಸಮಾಪ್ತವಾಯಿತು ।।

।। ಶ್ರೀಕೃಷ್ಣಾರ್ಪಣಮಸ್ತು ।।

* * *

ಮಿಥ್ಯಾಸಿದ್ಧಾಂತದುರ್ಧ್ವಾಂತ ವಿಧ್ವಂಸನ ವಿಚಕ್ಷಣಃ।
ಜಯತೀರ್ಥಾಖ್ಯ ತರಣಿರ್ಭಾಸತಾಂ ನೋ ಹೃದಂಬರೇ ॥



ಶ್ರೀ ಜಯತೀರ್ಥರು

ಪ್ರಕಾಶಕರು :

ಪವನಜ ಪ್ರಕಾಶನ

ನಂ. 1625, 5ನೇ 'ಬಿ' ಕ್ರಾಸ್, ಎರಡನೆಯ ಬ್ಲಾಕ್
ಬನಶಂಕರಿ 1ನೇ ಸ್ಟೇಜ್, ಬೆಂಗಳೂರು-560 050
ದೂರವಾಣಿ : 6600932